ಮೈಸೂರು ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ

(೧೮೮೧ ರಿಂದ ೧೯೪೭)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ
ಎಸ್. ತಿಪ್ಪೇಸ್ವಾಮಿ

ಮಾರ್ಗದರ್ಶಕರು
ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೯

ಮೈಸೂರು ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು
ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ

(೧೮೮೧ ರಿಂದ ೧೯೪೭)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಎನ್. ತಿಪ್ಪೇಸ್ವಾಮಿ

ಮಾರ್ಗದರ್ಶಕರು

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೯

ಸಂಶೋಧಕರ ದೃಢೀಕರಣ ಪತ್ರ

ಮೈಸೂರು ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು : ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ (೧೮೮೧ ರಿಂದ ೧೯೪೭) ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ **ಚರಿತ್ರೆ ವಿಭಾಗದ** ಪ್ರಾಧ್ಯಾಪಕರಾದ **ಡಾ. ಎನ್. ಚಿನ್ನಸ್ವಾಮಿ ಸೋಸಲೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 8-7-2019
ಸ್ಥಳ : ವಿದ್ಯಾರಣ್ಯ

8/7/2019
ಎನ್. ತಿಪ್ಪೇಸ್ವಾಮಿ
ಸಂಶೋಧಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಎನ್. ತಿಪ್ಪೇಸ್ವಾಮಿ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ **ಮೈಸೂರು ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು : ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ** (೧೮೮೧ ರಿಂದ ೧೯೪೭) ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಚರಿತ್ರೆ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿ ಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 8/7/19
ಸ್ಥಳ : ವಿದ್ಯಾರಣ್ಯ

ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ ಎನ್ ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪರಿವಿಡಿ

ಅಧ್ಯಾಯ: ಒಂದು

ಪ್ರಸ್ತಾವನೆ

೧.೧.ಅಧ್ಯಯನದ ಮಹತ್ವ ಮತ್ತು ಉದ್ದೇಶ
೧.೨.ಅಧ್ಯಯನ ಸ್ವರೂಪ ಮತ್ತು ವ್ಯಾಪ್ತಿ
೧.೩.ಅಧ್ಯಯನದ ವಿಧಾನ
೧.೪.ಅಧ್ಯಯನ ಸಮೀಕ್ಷೆ

ಅಧ್ಯಾಯ: ಒಂದು

ಪ್ರಸ್ತಾವನೆ

ಭಾರತದ ಚರಿತ್ರೆಯಲ್ಲಿ ಮೈಸೂರು ಸಂಸ್ಥಾನವು ದಲಿತರು, ಶೋಷಿತರು. ಕೆಳವರ್ಗದವರು, ಮಹಿಳೆಯರಿಗೆ ಪ್ರಥಮಬಾರಿಗೆ ಸಾಮಾಜಿಕ ನ್ಯಾಯವನ್ನು ಕಲ್ಪಿಸುವುದರೊಂದಿಗೆ ಬ್ರಿಟಿಷ್ ಆಡಳಿತ ನಿಯಂತ್ರಣದ ಸಂದರ್ಭದಲ್ಲೂ ಮಾದರಿ ಸಂಸ್ಥಾನ ಎಂಬ ವಿಶಿಷ್ಟ ಸ್ಥಾನ ಹೊಂದಿದೆ. ಮೈಸೂರಿನ ಚರಿತ್ರೆಯನ್ನು ೧೮೩೦ ರಿಂದ ೧೮೮೧ ರವರೆಗಿನ ವಸಾಹತು ಕಾಲಘಟ್ಟ ಮತ್ತು ೧೮೮೧ ರಿಂದ ೧೯೪೭ ರವರೆಗಿನ ರಾಜ-ದಿವಾನ-ರೆಸಿಡೆಂಟರ ಆಳ್ವಿಕೆಯ ಕಾಲಘಟ್ಟವನ್ನಾಗಿ ನೋಡಲಾಗಿದೆ. ಗ್ರಾಮಾಡಳಿತವು ರಾಜಾಡಳಿತ ಕೇಂದ್ರೀಕೃತ ವ್ಯವಸ್ಥೆಯಾಗಿ ಮತ್ತು ಸಮಾಜದಲ್ಲಿನ ಅಸ್ಪೃಶ್ಯರನ್ನು ದಲಿತರೆಂದು ಪರಿಗಣಿಸಿಕೊಂಡು ಅಧ್ಯಯನದ ವಸ್ತು ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸಂಸ್ಥಾನದ ಅವಧಿಯ ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತನಾ ನಿರ್ಣಯಗಳು ದೇಶ-ವಿದೇಶದ ಚರಿತ್ರೆಕಾರರನ್ನು, ವಿಚಾರವಂತ ವಿದ್ವಾಂಸ-ಚಿಂತಕರನ್ನು ಮುಖಾಮುಖಿಗೊಳಿಸಿದ ಕಾಲವಾಗಿದೆ. ಮದ್ರಾಸ್, ಮಹಾರಾಷ್ಟ್ರಗಳಲ್ಲಾದ ಬ್ರಾಹ್ಮಣೇತರ ಚಳುವಳಿಗಳ ವಿಷಯ ಸಂಸ್ಥಾನದ ವ್ಯಾಪ್ತಿಯಲ್ಲಿ ಆದ ದಂಗೆಗಳು ಸಾಹು ಮಹಾರಾಜ, ಜ್ಯೋತಿಬಾ ಫುಲೆ, ರಾಜಾರಾಮ ಮೋಹನರಾಯ್ ಆರ್. ಗೋಪಾಲಸ್ವಾಮಿ ಅಯ್ಯರ್, ಸ್ವಾಮಿ ವಿವೇಕಾನಂದ, ಗಾಂಧಿ-ಅಂಬೇಡ್ಕರ್ ಅವರ ಚಿಂತನ ಪ್ರಭಾವಗಳು ಸಂಸ್ಥಾನದಲ್ಲಿ ನೊಂದ ಕೆಳಸ್ತರದ ದಲಿತರ ಪ್ರಗತಿಗೆ ಪೂರಕವಾದ ವಾತಾವರಣ ಕಲ್ಪಿಸುವಂತೆ ಮಾಡಿತು, ಕ್ರೈಸ್ತ ಮಿಷನರಿಗಳ ಶಿಕ್ಷಣ ಜಾಗೃತಿ, ಬ್ರಿಟಿಷರ ಆಂಗ್ಲಶಿಕ್ಷಣವು ದೇಶವನ್ನು ಅರಿಯುವುದಕ್ಕೆ ಸಾಧನವಾಯಿತು. ಮೈಸೂರು ಸಂಸ್ಥಾನವು ಭೌಗೋಳಿಕವಾಗಿ ಒಂಬತ್ತು ಜಿಲ್ಲೆಗಳನ್ನು ಒಳಗೊಂಡಿದ್ದು ಜೀವನದಿಗಳಿಂದ ಕೂಡಿದ ಪ್ರದೇಶ, ಅರಣ್ಯಗಳಿಂದ

ಕೂಡಿದ ಪ್ರದೇಶ, ಬಯಲು ಸೀಮೆ ಪ್ರದೇಶದ ವಾತಾವರಣವು ಅಲ್ಲಿನ ಜನರ ದೈನಂದಿನ ಬದುಕಿನ ಮೇಲೆ ತನ್ನದೇ ಆದ ಬದಲಾವಣೆಯನ್ನು ರೂಪಿಸಿದೆ. ಪ್ರಸ್ತುತ ಅಧ್ಯಯನದಲ್ಲಿ ಗ್ರಾಮಾಡಳಿತದಲ್ಲಿನ ಅಧಿಕಾರದ ಏಣಿಶ್ರೇಣಿ, ಆಡಳಿತ ನಿಯಂತ್ರಣ, ನಿರ್ವಹಣೆ, ದಲಿತರ ಭೂಮಿ, ಶಿಕ್ಷಣ, ನ್ಯಾಯ ಮತ್ತು ಬದುಕಿನ ಪ್ರಶ್ನೆಗಳು, ವಿವಿಧ ಪಂಥಗಳಲ್ಲಿನ ದಲಿತರ ಆಚರಣೆಗಳು, ದಲಿತರ ಅಮಾನವೀಯ ಅನಿಷ್ಟಾಚರಣೆಗಳು, ದಲಿತರಲ್ಲಿನ ಆರ್ಥಿಕತೆಯ ವಿಚಾರಗಳನ್ನು ನೋಡಬೇಕಾದ ಅನಿವಾರ್ಯತೆ ಇಂದು ಇದೆ.

ಮೈಸೂರು ಸಂಸ್ಥಾನದ ಕಂದಾಯ ಆಡಳಿತ, ನೋಂದಣಿ, ಅಬಕಾರಿ, ಪೊಲೀಸ್, ಮುಜರಾಯಿ, ಖಜಾನೆ ಕೃಷಿ, ತೋಟಗಾರಿಕೆ, ಶಿಕ್ಷಣ ಕ್ಷೇತ್ರಗಳಲ್ಲಿ ರಾಜಾಡಳಿತದಿಂದ ಅಂದು ಹೊರಡಿಸಿದ ಕಾಯಿದೆ, ಶಾಸನ, ಆಜ್ಞೆ, ಸುತ್ತೋಲೆಗಳ ವಿವರವನ್ನು ಅಂಕಿ-ಸಂಖ್ಯೆಗಳೊಂದಿಗೆ ವಿವರಿಸಿದ ಇತಿಹಾಸ ರಚನೆಯಾಗಿರುತ್ತದೆ. ಗ್ರಾಮಾಡಳಿತದ ಸಂದರ್ಭದಲ್ಲಿ ತಳಸಮುದಾಯ ದಲಿತರಿಗೆ ಇದ್ದ ಅವಕಾಶಗಳ ಕುರಿತು ವಿಶೇಷ ಅಧ್ಯಯನಗಳಾಗಿಲ್ಲ, ಮಾದರಿ ಸಂಸ್ಥಾನದಲ್ಲಿ ದಲಿತರಿಗಿದ್ದ ಭೂಮಿಯ ಪ್ರಶ್ನೆ, ಮೂಲಸೌಲಭ್ಯಗಳಾದ ನೀರು, ವಸತಿ, ಶಿಕ್ಷಣದ ಅವಕಾಶಗಳು, ಅಂದಿದ್ದ ಸಾಮಾಜಿಕ, ಸಾಂಸ್ಕೃತಿಕ ಅಮಾನವೀಯ ಆಚರಣೆಗಳ ಕುರಿತು ಕ್ಷೇತ್ರಕಾರ್ಯ, ಪ್ರಾಥಮಿಕ, ಅನುಷಂಗಿಕ ಪ್ರಕಟಿತ, ಅಪ್ರಕಟಿತ ಗ್ರಂಥಗಳ ಮೂಲಕ ದಲಿತಪರ ಚಿಂತನೆ, ಸಬಾಲ್ಟರ್ನ್ ನೆಲೆಯಲ್ಲಿ ಅಧ್ಯಯನ ಮಾಡುವುದು, ಶತಮಾನಗಳಿಂದ ಅವಮಾನ, ಶೋಷಣೆ, ದೌರ್ಜನ್ಯಕ್ಕೆ ಒಳಗಾಗಿದ್ದ ಜನರಿಗೆ ಸಂಸ್ಥಾನವು ಕೊಡಮಾಡಿದ ಶಾಸನಬದ್ಧ ಪರಿಹಾರ ಸೌಲಭ್ಯಗಳ ಒತ್ತಾಸೆ, ಅವುಗಳು ಕ್ಷೇತ್ರದಲ್ಲಿ ತಲುಪುವಾಗ ಇದ್ದಂತಹ ಪಟ್ಟಭದ್ರ ಹಿತಾಸಕ್ತಿಯ ಬೌದ್ಧಿಕ ಅಡೆತಡೆಗಳ ವಿಚಾರದ ಸೂಕ್ಷ್ಮತೆಯನ್ನು ಅರಿಯಲು ಇಂತಹ ಅಧ್ಯಯನಗಳ ಅವಶ್ಯಕತೆ ಹೆಚ್ಚಾಗಿದೆ. ಮೈಸೂರು ಸಂಸ್ಥಾನದ ಆಡಳಿತಾವಧಿಯಲ್ಲಿದ್ದ ಭೂಮಿಯ ಸರ್ವೆ ವರ್ಗೀಕರಣ ಹಂಚಿಕೆ, ವಿವಿಧ ಇನಾಂ ಜಮೀನುಗಳ ನಿರ್ವಹಣೆ, ಭೂಹಿಡುವಳಿದಾರ-ಗೇಣಿದಾರನ ಸಂಬಂಧ, ಖಾಯಂಗುತ್ತಾ ಗ್ರಾಮಗಳು, ಜೋಡಿದಾರರ ಜಮೀನ್ದಾರಿಕೆ, ಕ್ರೈಸ್ತ ಮಿಷನರಿಗಳ ಪ್ರವೇಶ, ದಲಿತರಿಗೆ ಶಿಕ್ಷಣ, ವಂಶಪಾರಂಪರ್ಯ ಮತ್ತು ಭೂಮಿಗೆ ಸೀಮಿತವಾದ ಜೀತಪದ್ಧತಿ, ಅರಣ್ಯನೀತಿ, ಬುಡಕಟ್ಟುವಾಸಿಗಳು, ನೀರಿನ ಹಂಚಿಕೆ, ಬಳಕೆ, ನ್ಯಾಯವ್ಯವಸ್ಥೆ, ಸಾಮಾಜಿಕ ಒತ್ತಡ ಗುಂಪುಗಳು, ವಿದೇಶಿ ಆಡಳಿತದ ನಿಯಂತ್ರಣ, ಪ್ರಜೆಗಳಿಂದ ಆಡಳಿತದ ಪರಿಕಲ್ಪನೆ, ಸಭೆಯ ಪ್ರಾತಿನಿಧಿಕ ನಿರ್ಣಯಗಳು, ಅವುಗಳ ಅನುಷ್ಠಾನ ದಲಿತರಿಗೆ ಶಿಕ್ಷಣಕ್ಕಿದ್ದ ಅವಕಾಶ, ಬ್ರಿಟಿಷ್ ಆರ್ಥಿಕ ನೀತಿ, ಬಂಡವಾಳಶಾಹಿ ವಸಾಹತು ನೀತಿಯು ದಲಿತರ ಆರ್ಥಿಕ ವಿಮೋಚನೆಗೆ ಪೂರಕವಾಗಿತ್ತು, ಉತ್ಪಾದನೆಯಲ್ಲಿ ಉತ್ಪಾದಕರ ಪಾಲು, ಬ್ರಾಹ್ಮಣ, ಬ್ರಾಹ್ಮಣೇತರ ಸವರ್ಣೀಯರ ನಡುವಣ ದಲಿತರ ಬದುಕಿನ ಸ್ಥಿತಿ, ದೇಶವ್ಯಾಪಿ ರಾಷ್ಟ್ರೀಯ ಹೋರಾಟ, ಸಂಸ್ಥಾನದಲ್ಲಿ ಆದಂತಹ ಪ್ರತಿಭಟನೆ, ದಂಗೆಗಳ ಮೂಲ ಉದ್ದೇಶ,

ಅವುಗಳ ಹಿಂದೆ ಇದ್ದಂತಹ ಪಟ್ಟಭದ್ರ ಒತ್ತಾಸೆಗಳು, ಮಿಲ್ಲರ್ ಸಮಿತಿ ವರದಿಯ ಅನುಷ್ಠಾನ, ಸಂಸ್ಥಾನವು ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ವಿಚಾರದಲ್ಲಿ ಕೈಗೊಂಡ ಜನಪರ ನಿರ್ಣಯಗಳ ಕುರಿತ ಅಧ್ಯಯನ ಮಾಡಬೇಕಾದ ಜರೂರು ಇದೆ.

೩೮ ವರ್ಷಗಳ ಆಳ್ವಿಕೆಯ ಅವಧಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಅಭಿವೃದ್ಧಿ ಕಾಳಜಿಯ ಕೆಲಸ ಕಾರ್ಯಗಳು ರಾಷ್ಟ್ರದಲ್ಲಿಯೇ ಮಾದರಿಯ ನಿರ್ಣಯಗಳಾಗಿದ್ದವು. ಹದಗೆಟ್ಟ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ನಾಲ್ವಡಿಯವರು ದಲಿತರನ್ನು ಆಧುನಿಕತೆಯ ಮುಖ್ಯವಾಹಿನಿಗೆ ತರುವ ಆಶಯವನ್ನು ಹೊಂದಿದ್ದ ಬದ್ಧತೆಯನ್ನು, ಶೋಷಣೆಗೆ ಮೂಲವಾದ ಎಲ್ಲಾ ಶಕ್ತಿಗಳ ದಮನ ಮಾಡುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿ ಹೋರಾಡಿದರು. ಮೈಸೂರು ಸಂಸ್ಥಾನದಲ್ಲಿರುವ ದಲಿತರಲ್ಲಿನ ಬಡತನ, ಅಜ್ಞಾನ, ಮೂಢನಂಬಿಕೆ, ಅನಿಷ್ಟ ಸಂಪ್ರದಾಯಗಳು, ಹೆಚ್ಚಾಗಿದ್ದವು. ಮತ ಧರ್ಮಗಳೇ ಮನುಷ್ಯರ ನಡುವೆ ಅಡ್ಡಗೋಡೆಗಳಾಗಿದ್ದವು. ಮನುಷ್ಯ ತನ್ನನ್ನು ತಾನರಿತರೆ. ಸಮಾಜ ವ್ಯವಸ್ಥೆಯಲ್ಲಿ ತನ್ನನ್ನು ತಾನು ಮನುಷ್ಯನಂತೆ ಗುರುತಿಸಿಕೊಂಡರೆ ದಲಿತರ ಮೇಲಿನ ದೈನಂದಿನ ಶೋಷಣೆ, ಅತ್ಯಾಚಾರ, ಕೊಲೆ, ಸುಲಿಗೆ, ಅರಾಜಕತೆಗೆ ಕಾರಣವಾಗಿದ್ದಂತಹ ಸಮಸ್ಯೆಗಳನ್ನು ತಪ್ಪಿಸಬಹುದೆನ್ನು ಸಾಮಾಜಿಕ ಪ್ರಜ್ಞೆಯ ಅಂತಃಸಾಕ್ಷಿಯ ಕೊರತೆಯಿಂದಾಗಿ ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ಸವರ್ಣೀಯ ಹಿಂದುಗಳೆ ಅಸ್ಪೃಶ್ಯತೆಯ ನಿವಾರಣೆಯ ಹಾದಿಯಲ್ಲಿ ದೊಡ್ಡ ಕಾಲ್ತೊಡಕಾಗಿ ಅಂದು ಪರಿಣಮಿಸುತ್ತಾರೆ. ನಾಲ್ವಡಿಯವರು ಕೇವಲ ಸ್ವಾರ್ಥ ಹಾಗೂ ಪ್ರಾದೇಶಿಕ ಸ್ವ ಪ್ರಯೋಜನಾ ಸಾಧನೆಗೆ ಸಿಮೀತವಾಗಲು ಬಿಡದೇ ವಿವಿಧ ಕ್ಷೇತ್ರಗಳಲ್ಲಿ ದಲಿತರು ಪ್ರಗತಿ ಹೊಂದಲು ಹಲವಾರು ಕಾನೂನುಗಳನ್ನು ಜಾರಿಗೊಳಿಸಿರುವುದು ಮೈಸೂರಿನ ರಾಜ ಪ್ರಭುತ್ವದವರು ಅಂದು ದಲಿತರ ಸಮಸ್ಯೆಗಳಿಗೆ ಹೇಗೆ ಸ್ಪಂದಿಸಿದ್ದಾರೆ ಎಂಬುದು ಬಹುಮುಖ್ಯವಾದ ಅಂಶವಾಗಿದೆ. ಪ್ರಾಚೀನ ಮಧ್ಯಕಾಲಿನ ಕರ್ನಾಟಕದಲ್ಲಿ ದಲಿತರ ಸ್ಥಿತಿ ದಲಿತ ಶೋಷಿತ ಶೋಷಕರು ನಡುವಿನ ಹೋರಾಟ ಶೋಷಣಾ ರಹಿತ ಸಮಾಜ ನಿರ್ಮಾಣ ಜಾತಿ ವರ್ಗೀಕರಣ ಮನುಷ್ಯರಿಂದ ಆಗಿದೆಯೇ ಹೊರತು ಮತ್ತ್ಯಾವ ದೇವತೆಗಳಿಂದಲ್ಲ ವರ್ಣಗಳ ಗುಂಪಿಗೆ ಸೇರದೇ ಹೊರಗುಳಿದವರು ದಲಿತರು(ಚಂಡಾಲರು ಅಥವಾ ಅಸ್ಪೃಶ್ಯರು). ಅಸ್ಪೃಶ್ಯರು ಯಾರೆಂಬುದನ್ನು ಅಸ್ಪೃಶ್ಯತೆ ಆಚರಣೆಗೆ ಬಂದ ರೀತಿಯನ್ನು ರಾಜ ವಂಶಗಳ ಯಶಸ್ವಿಗೆ ಕಾರಣರಾದ ಅಂದಿನ ಆಡಳಿತಗಾರರ ಕುರಿತು ರಾಜರ ವೈಭವದ ಚರಿತ್ರೆಯನ್ನು ಸಾಮಾನ್ಯ ಜನರ ಜೀವನಾಧಾರದಿಂದ ನೋಡು ಎಂಬ ತತ್ವ ಪ್ರಜಾಪ್ರಭುತ್ವದ ಅಲಿಖಿತ-ಲಿಖಿತ ಸಂವಿಧಾನದ ವಿವರ ಗ್ರಾಮೀಣ ಅಸ್ಪೃಶ್ಯರ ಮೇಲಾಗುವ ದೌರ್ಜನ್ಯ ದಲಿತ ಜನಾಂಗದವರ ಸಾಂಸ್ಕೃತಿಕ ಪ್ರಗತಿಯ ಕುರಿತು ತಳಸ್ಪರ್ಷಿ ಅಧ್ಯಯನ ನಡೆಸಿರುವ ಮಾಹಿತಿಯು ಮತ್ತು ದಲಿತರ ಚಿಂತನೆಯ ಮಹತ್ವದ ಮಾತುಗಳನ್ನು ಉಲ್ಲೇಖಿಸಿ ಉತ್ತಮವಾದ ಪ್ರಸ್ತಾವನೆಯನ್ನು ಒದಗಿಸುತ್ತದೆ. ದಲಿತರ ಅಭಿವೃದ್ಧಿಗೆ

ಪ್ರೇರಣೆ ಪ್ರಭಾವ ನೀಡಿರುವ ವ್ಯಕ್ತಿಗಳು ಮಿಷನರಿಗಳು ಪ್ರಗತಿಪರ ಕಾನೂನುಗಳ ಬಗ್ಗೆ ಕೃತಿಯ ಎರಡನೆಯ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಮೊದಲ ಬಾರಿಗೆ ಶೋಷಿತರು-ಕೆಳವರ್ಗದವರು-ಮಹಿಳೆಯರು-ಬುಡಕಟ್ಟು ಸಮುದಾಯದವರು ಸಾಮಾಜಿಕ ಬದಲಾವಣೆಯ ಕುರಿತು ಮಾತನಾಡಿದ್ದು, ಬ್ರಾಹ್ಮಣರು ಆಡಳಿತ ಮೇಲೆ ಹೊಂದಿದ್ದ ಏಕಸ್ವಾಮ್ಯವನ್ನು ಪ್ರಶ್ನಿಸಿದ ಕಾಲ. ಸವಲತ್ತಿಗಾಗಿ ಪ್ರಜಾಮಿತ್ರ ಮಂಡಳಿಯನ್ನು ಸ್ಥಾಪಿಸಿ ರಾಜಶಾಹಿಯನ್ನು ವಿರೋಧಿಸಿದ ಕಾಲ ರಾಷ್ಟ್ರೀಯ ಚಳವಳಿಯ ಪ್ರಭಾವದಲ್ಲಿ ಬಲಿಷ್ಠ ಮೈಸೂರು ಕಾಂಗ್ರೆಸ್ ರೂಪಗೊಂಡ ಕಾಲವನ್ನು ನಾಲ್ವಡಿಯವರ ಆಳ್ವಿಕೆ ಅವಧಿಯಲ್ಲಿ ನೋಡುವಂತಾಯಿತು. ಅಸ್ಪೃಶ್ಯ ವರ್ಗದವರ ಅರಮನೆಯ ಪ್ರವೇಶವು ನಾಲ್ವಡಿಯವರು ಸಾಮಾಜಿಕ ಕ್ಷೇತ್ರದಿಂದ ರಾಜಶಕ್ತಿಯನ್ನು ಉಪಯೋಗಿಸಲು ಆರಂಭಿಸಲು ದಲಿತರಿಗೆ ಒದಗಿಸಿದ ಶಿಕ್ಷಣದ ಅವಕಾಶ ಸಾಮಾಜಿಕ ಕ್ರಾಂತಿ ರೂಪವೇ ಆಗಿದೆ.

ಸಂಸ್ಥಾನದಲ್ಲಿ ಕಂಡು ಬಂದ ಬ್ರಾಹ್ಮಣೇತರ ಚಳುವಳಿ ದಲಿತ ಸಂಘಟನೆಗಳ ಉಗಮ ಬೆಳವಣಿಗೆ ನಾಲ್ವಡಿಯವರ ಪ್ರೋತ್ಸಾಹ ಕ್ರೈಸ್ತ ಮಿಷನರಿಗಳಿಂದಾಗಿ ಎಲ್ಲಾ ಸಮುದಾಯದವರಿಗೆ ಶಿಕ್ಷಣ ಲಭಿಸುವಂತಾಗಿರುವ ವಿಚಾರ ಮೈಸೂರು-ಮದ್ರಾಸ್ ಬ್ರಾಹ್ಮಣರ ನಡುವಿನ ಸಂಘರ್ಷಗಳು ಬ್ರಾಹ್ಮಣೇತರು ಹಾಗೂ ದಲಿತರು ಎಚ್ಚರಗೊಂಡ ಬಗ್ಗೆ ದಲಿತರ ಸಹಕಾರ ಪಡೆದು ಬ್ರಾಹ್ಮಣೇತರರು ಬಲಿಷ್ಠರಾದರು. ನಾಲ್ವಡಿಯವರ ಸಹಕಾರದಿಂದ ಶಿಕ್ಷಣವು ಎಲ್ಲಾ ಜಾತಿಯವರಿಗೆ ದೊರಕುವಂತಾಯಿತು, ಇಂಥ ಸಂದರ್ಭದಲ್ಲಿ ಶಿಕ್ಷಣ ಪಡೆದ ದಲಿತರು ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸಿದರು ದಲಿತ ಸಮುದಾಯಕ್ಕೆ ಜಾಗೃತಿಯನ್ನು ಮೂಡಿಸುವ ಮತ್ತು ದಲಿತರ ಹಕ್ಕುಗಳ ಬಗ್ಗೆ, ಜಾಗೃತಿಯನ್ನು ಮೂಡಿಸಿ ದಲಿತರ ಪರವಾಗಿ ಹಲವಾರು ಕಾರ್ಯಗಳನ್ನು ಕೈಗೊಂಡ ಮಹನೀಯರಲ್ಲಿ ಸೋಸಲೆ ಎಸ್, ಸಿದ್ದಪ್ಪ ರಾಚಪ್ಪ, ಭರಣಯ್ಯ, ಡಿ. ಗೋವಿಂದದಾಸ, ಡಿ. ವೆಂಕಟಯ್ಯ, ಎಚ್. ಎಂ. ಗಂಗಾಧರಯ್ಯ, ಬಿ. ರಾಚಯ್ಯ, ಟಿ. ಹನುಮಯ್ಯ, ಎನ್. ರಾಚಯ್ಯ, ಎಚ್. ಆರ್. ತಿಪ್ಪಯ್ಯ, ಮುಂತಾದವರು. ಸಮಾಜದಲ್ಲಿ ದಲಿತರ ಮತ್ತು ಶೋಷಿತರ ಪರವಾಗಿ ಮೈಸೂರು ಮಹಾರಾಜರು ಹಾಗೂ ಬ್ರಾಹ್ಮಣೇತರರು ಅನುಸರಿಸಿಕೊಂಡ ಮಾರ್ಗಗಳನ್ನು ಹಾಗೂ ಆ ಸಂದರ್ಭದಲ್ಲಿ ದಲಿತರ ಸ್ಥಿತಿಗತಿಗಳು ಮತ್ತು ದಲಿತರು ಆಡಳಿತಾತ್ಮಕ ಕೆಲಸಗಳಿಗೆ ನಿಯೋಜನೆಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಜೊತೆಗೆ ಗ್ರಾಮ ಮತ್ತು ಸ್ಥಳೀಯ ಮಟ್ಟದಲ್ಲಿ ದಲಿತರ ಪಾರಂಪರಿಕ ಕೆಲಸ ಕಾರ್ಯಗಳು ಮತ್ತು ಅವರ ಜೀವನ ವಿಧಾನಗಳನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೧. ಅಧ್ಯಯನದ ಮಹತ್ವ ಮತ್ತು ಉದ್ದೇಶ

೧೮೯೪ ರಿಂದ ೧೯೪೦ರವರೆಗೆ ಮೈಸೂರು ಸಂಸ್ಥಾನದ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು "ಹಿಂದು ಸಮಾಜವು ಒಂದು ಅಸಮಾನತೆಯ ತವರು" ಎಂಬುವುದನ್ನು

ಮನಗಂಡಿದ್ದರು, ಹಾಗಾಗಿ ಸಂಸ್ಥಾನದಲ್ಲಿನ ದಲಿತರಿಗೆ ಶಿಕ್ಷಣ ಕಲ್ಪಿಸಿ ಅವರಲ್ಲಿ ವಿಚಾರ ಕ್ರಾಂತಿಯ ಪಾಂಚಜನ್ಯವು ಮೊಳಗುವಂತೆ ಮಾಡಿದರು. ಹೊಸ ಬಗೆಯ ನವ ಸಮಾಜ ನಿರ್ಮಾಣದ ಸಂಘಟನೆ ವಿಚಾರಗಳನ್ನು ಹೊಂದಿದ್ದ ಸೂಕ್ಷ್ಮ ಮನಸಿನ ಧೀಮಂತ ರಾಜರಾಗಿದ್ದರು. ಅವರ ಆಳ್ವಿಕೆಯ ಕಾಲವನ್ನು "ಆಧುನಿಕ ಕಾಲ" ಎಂದು ಗುರುತಿಸುವುದು ಮಹತ್ವದ್ದಾಗಿದೆ.

ಮೊದಲ ಬಾರಿಗೆ ಶೋಷಿತರು-ಕೆಳವರ್ಗದವರು-ಮಹಿಳೆಯರು-ಬುಡಕಟ್ಟು ಸಮುದಾಯದವರು ಸಾಮಾಜಿಕ ಬದಲಾವಣೆಯ ಕುರಿತು ಮಾತನಾಡಿದ್ದು ಬ್ರಾಹ್ಮಣರು ಆಡಳಿತದ ಮೇಲೆ ಹೊಂದಿದ್ದ ಏಕಸ್ವಾಮ್ಯವನ್ನು ಪ್ರಶ್ನಿಸಿದ ಕಾಲ. ಸವಲತ್ತಿಗಾಗಿ ಪ್ರಜಾಮಿತ್ರ ಮಂಡಳಿಯನ್ನು ಸ್ಥಾಪಿಸಿ ರಾಜಶಾಹಿಯನ್ನು ವಿರೋಧಿಸಿದ ಕಾಲ. ರಾಷ್ಟ್ರೀಯ ಚಳುವಳಿಯ ಪ್ರಭಾವದಲ್ಲಿ ಬಲಿಷ್ಠ ಮೈಸೂರು ಕಾಂಗ್ರೆಸ್ ರೂಪಗೊಂಡ ಕಾಲವನ್ನು ನಾಲ್ವಡಿಯವರ ಆಳ್ವಿಕೆ ಅವಧಿಯಲ್ಲಿ ನೋಡುವಂತಾಯಿತು. ಅಸ್ಪೃಶ್ಯ ವರ್ಗದವರ ಅರಮನೆಯ ಪ್ರವೇಶವು ನಾಲ್ವಡಿಯವರು ಸಾಮಾಜಿಕ ಕ್ಷೇತ್ರದಿಂದ ರಾಜಶಕ್ತಿಯನ್ನು ಉಪಯೋಗಿಸಲು ಆರಂಭಿಸಲು ದಲಿತರಿಗೆ ಒದಗಿಸಿದ ಶಿಕ್ಷಣದ ಅವಕಾಶ ಸಾಮಾಜಿಕ ಕ್ರಾಂತಿ ರೂಪವಾಗಿದೆ. ಇದರ ಪೂರ್ವಪರದ ಬಗ್ಗೆ ಅಧ್ಯಯನ ಮಾಡುವ ಮಹತ್ವ ಇಂದು ಇದೆ.

ಭಾರತೀಯ ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದ ಅವಧಿಯಲ್ಲಿನ ಸಮಾಜದ ಸಂರಚನೆಯನ್ನು, ಬ್ರಿಟಿಷರ ಆಡಳಿತವು ಸಾಮಾಜದಲ್ಲಿದ್ದ ಹಲವಾರು ಮೌಢ್ಯ ಕಂದಾಚಾರಗಳನ್ನು ಹತೋಟಿಗೆ ತಂದಿತ್ತು, ಆದರೆ ಜನರಲ್ಲಿದ್ದ ಸಾಂಪ್ರದಾಯಿಕ ನಂಬಿಕೆಗಳು, ಆಚರಣೆಗಳ ವಿರುದ್ದ ಕೈ ಹಾಕಲಿಲ್ಲ, ದೇಶಿಯ ಮೈಸೂರು ಸಂಸ್ಥಾನದ ಆಡಳಿತವು ಆ ಸಂಧರ್ಭದಲ್ಲಿ ತನ್ನ ಆಡಳಿತದ ಆಳ್ವಿಕೆಯನ್ನು ಉಳಿಸಿಕೊಳ್ಳುವ ಸಲುವಾಗಿ ಸಮಾಜದಲ್ಲಿನ ನಿಮ್ನ ವರ್ಗದ ದಲಿತರ ಬದುಕಿನ ಬದಲಾವಣೆಗೆ ಅವಶ್ಯವಿರುವ ಸಾಮಾಜಿಕ ಮತ್ತು ರಾಜಕೀಯ ಶೈಕ್ಷಣಿಕ ಸುಧಾರಣೆಗಳನ್ನು ಕೈಗೊಂಡಿರುವುದು ಅಧ್ಯಯನದ ಮಹತ್ವವಾಗಿರುತ್ತದೆ.

ಅಧ್ಯಯನದ ಉದ್ದೇಶ

ಪಸ್ತುತ ಅಧ್ಯಯನದಲ್ಲಿ ೧೮೮೧ ರಿಂದ ೧೯೪೭ರ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಗ್ರಾಮಾಡಳಿತ ಸಂದರ್ಭದಲ್ಲಿ ದಲಿತರ ಭೂಮಿ, ಶಿಕ್ಷಣ, ನ್ಯಾಯ ಸಾಂಸ್ಕೃತಿಕ ಬದುಕನ್ನು ಕುರಿತ ಪ್ರಶ್ನೆಗಳನ್ನು ಸಮಸ್ಯೆಗಳಾಗಿ ಅಧ್ಯಯನ ಮಾಡುವುದರೊಂದಿಗೆ, ಉತ್ತರ ಕಂಡುಕೊಳ್ಳುವ ಕೆಲಸವನ್ನು ಮಾಡಲಾಗುವುದು. ಜನಗಣತಿಯ ಅಂದಿನ ವರದಿಯಂತೆ ಬಹುಪಾಲು ಗ್ರಾಮೀಣರಲ್ಲಿ ಬದುಕಿಗೆ ನೆಲೆಯಿಲ್ಲದವರಾದ ದಲಿತರನ್ನು ಬಹಳಷ್ಟು ಜನರ ಬಗ್ಗೆ ಈವರೆಗೆ ಬಂದಿರುವ ಅಧ್ಯಯನ ಗ್ರಂಥಗಳಲ್ಲಿ ದಲಿತರನ್ನು ಇತಿಹಾಸ ರಚನೆಯಿಂದ ದೂರವಿಟ್ಟು, ಕಡೆಗಣಿಸಿರುವುದು ಅಶ್ಚರ್ಯಕರ ಸಂಗತಿ, ಭೂಮಿ, ನೀರು, ನೈಸರ್ಗಿಕ ಸವಲತ್ತುಗಳ ಬಗ್ಗೆ ಕೆಳಸ್ತರದ ಕಂಡುಕೊಳ್ಳವುದಕ್ಕೆ ವಿವಿಧ ಆಯಾಮಗಳ ಮೂಲಕ ದಲಿತ ಚಿಂತನೆ, ಸಬಾಲ್ಟರ್ನ್ ಮತ್ತು ಅನ್ವಯಿಕ ನೆಲೆಯಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಈಗಾಗಲೇ ಆಗಿರುವ ಅಧ್ಯಯನಗಳ ಸಮೀಕ್ಷೆ ಮತ್ತು ವಿಮರ್ಶೆಯ ಹಿನ್ನೆಲೆಯಲ್ಲಿ ಕಂಡುಬಂದಿರುವ ಪ್ರಶ್ನೆಗಳನ್ನು ಕೆಳಕಂಡ ಉದ್ದೇಶಗಳನ್ನಾಗಿ ಪರಿವರ್ತಿಸಿಕೊಂಡು ಪ್ರಸ್ತುತ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ.

೧. ದಲಿತರ ಬದುಕಿನ ಬಗ್ಗೆ ಜಾರಿಮಾಡಿದ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸುಧಾರಣೆಗಳ ಹಿಂದೆ ಸಂಸ್ಥಾನದ ಆಡಳಿತದ ಆಂತರಿಕ ಉದ್ದೇಶದ ಬಗ್ಗೆ ಅಧ್ಯಯನ ಮಾಡುವುದು.

೨. ಸಂಸ್ಥಾನದ ಕಾಲದಲ್ಲಾದ ಸಾಮಾಜಿಕ ಅನಿಷ್ಟಗಳ ನಿವಾರಣೆಗೆ ಆಡಳಿತ ವ್ಯವಸ್ಥೆ ಕೈಗೊಂಡ ನಿರ್ಣಯಕ್ಕೆ ಪ್ರೇರೇಪಿಸಿದ ಶಕ್ತಿಗಳು, ಪ್ರಭಾವದ ಕುರಿತು ಪರೀಕ್ಷಿಸುವುದು.

೩. ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಲಿತರ ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಬದುಕಿನ ಬದಲಾವಣೆ ಕುರಿತು ಅದಂತಹ ಚರ್ಚೆಗಳು, ನಿರ್ಣಯಗಳು, ಹೊರಡಿಸಲಾಗಿದ ಕಾಯ್ದೆ ಕಾನೂನುಗಳ ವ್ಯಾಪ್ತಿ. ಮಿತಿ, ಸ್ವರೂಪ, ಜಾರಿಗಿದ್ದ ಅಡೆತಡೆಗಳು, ಅದರಿಂದಾದ ಪರಿಣಾಮಗಳ ಕುರಿತು ಮಾಪನ ಮಾಡುವುದು.

೪. ಸಾಂಸ್ಕೃತಿಕ ಯಜಮಾನಿಕೆಯು ದಲಿತರ ಸಾಮಾಜಿಕ ಸಾಂಸ್ಕೃತಿಕ ಬದುಕಿನಲ್ಲಿ ಹೇರಿದ ದೇವತಾರಾಧನೆ ಮತ್ತು ಇಳೆ–ಮಳೆ ಸಂಬಂಧಿ ಕಡ್ಡಾಯ ಅನಿಷ್ಟ ಅಮಾನವೀಯ ಆಚರಣೆಗಳ ಹಿಂದಿದ್ದ ಪರೋಕ್ಷ ಚಿಂತನೆಯ ಕಾರಣಗಳನ್ನು ವಿಶ್ಲೇಷಿಸುವುದು.

೫. ಸಂಸ್ಥಾನ ದ್ವಿಮುಖ ಸರ್ಕಾರ, ಬ್ರಾಹ್ಮಣರು, ಬ್ರಾಹ್ಮಣೇತರರು ಅಂದಿನ ದಲಿತರ ಅಸ್ಪೃಶ್ಯತೆಯ ನಿವಾರಣೆ, ಶಿಕ್ಷಣ ನೀಡುವಿಕೆ, ಭೂರಹಿತರಿಗೆ ಭೂಮಿ ನೀಡುವಿಕೆ ವಿಚಾರದಲ್ಲಿನ ಸಮಸ್ಯೆಗಳನ್ನು ನೋಡಿದ, ಸ್ಪಂದಿಸಿದ ವಿಧಾನದ ಕುರಿತು ಅಧ್ಯಯನ ಮಾಡುವುದು.

೬. ಗ್ರಾಮಾಡಳಿತ ಸಂದರ್ಭದಲ್ಲಿ ಮೂಲಭೂತ ಅಗತ್ಯಗಳಾದ ನೀರು, ರಸ್ತೆ, ಶಾಲೆ, ದೇಗುಲ, ಸಾರ್ವಜನಿಕ ಪ್ರದೇಶಗಳ ಪ್ರವೇಶಾವಕಾಶ ದಲಿತರಿಗೆ ಮುಕ್ತವಾಗಿತ್ತೆ ಎಂಬುದನ್ನು ಪರೀಕ್ಷಿಸುವುದು.

೭. ಸಂಸ್ಥಾನದ ಆರ್ಥಿಕ ಪರಿಷತ್ತು ನಿರ್ಣಯಗಳು ಗ್ರಾಮೀಣ ದಲಿತರ ಬದುಕನ್ನು ಹಸನುಗೊಳಿಸುವಲ್ಲಿ ಯಶಸ್ವಿಯಾಗಿರುವ ಬಗ್ಗೆ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

೮. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ, ಜನಪರ ಕಾಳಜಿಗೆ ಇದ್ದ ಸಾಹು ಮಹಾರಾಜ, ಸ್ವಾಮಿ ವಿವೇಕಾನಂದರ ಪ್ರಭಾವ, ಪ್ರೇರಣೆಗಳ ಕುರಿತು ಸಮೀಕ್ಷಿಸಿ ವಿಶ್ಲೇಷಿಸುವುದು.

೯. ಸಂಸ್ಥಾನದ ಅವಧಿಯಲ್ಲಿದ್ದ ಸಾಮಾಜಿಕ ಒತ್ತಡ ಗುಂಪುಗಳ ಸಂಘರ್ಷವು ಗ್ರಾಮಾಡಳಿತ ಮತ್ತು ದಲಿತರ ಮೇಲೆ ಆಗಿರುವ ಪರಿಣಾಮಗಳ ಕುರಿತಂತೆ ಮಾಪನ ಮಾಡುವುದು.

೧೦. ವೆಸ್ಲಿ ಮಿಲ್ಲರ್ ಸಮಿತಿ ನೇಮಕ, ಅದರ ನಿರ್ಣಯಗಳು ಒಪ್ಪಿತವಾಗಿ, ಬ್ರಾಹ್ಮಣೇತರ ದಲಿತರಿಗಾಗಿರುವ ಅನುಕೂಲಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸುವುದು.

೧೧. ಮೈಸೂರು ಮಾದರಿ ಸಂಸ್ಥಾನವಾಗಿತ್ತೆ? ಯಾರಿಗೆ, ಹೇಗೆ, ಯಾವ ವಿಷಯದಲ್ಲಿ ಮಾದರಿ ಆಗಿತ್ತು. ಮಾದರಿ ಎಂಬುದು ಮೈಸೂರು ಸಂಸ್ಥಾನಕ್ಕೆ ಮಾತ್ರ ಸೀಮಿತವೇ ಅಥವಾ ದೇಶದಲ್ಲಿನ ಇತರೆ ಸಮಕಾಲೀನ ಸಂಸ್ಥಾನಗಳಿಂದ ಅನುಕರಣೀಯ ಮಾದರಿಯೇ? ಎಂಬ ವಿಷಯದ ಬಗ್ಗೆ ಅಭ್ಯಸಿಸಲು ಉದ್ದೇಶಿಸಲಾಗಿದೆ.

೧.೨. ಅಧ್ಯಯನ ಸ್ವರೂಪ ಮತ್ತು ವ್ಯಾಪ್ತಿ

ಮೈಸೂರು ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು: ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ ಎಂಬ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಒಟ್ಟು ಎಂಟು ಅಧ್ಯಾಯಗಳನ್ನಾಗಿ ಮಾಡಿಕೊಳಳಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ಮಹತ್ವದ ವಿಧಾನಗಳನ್ನು ಪರಿಚಯಿಸುವುದರ ಜೊತೆಗೆ ಚರಿತ್ರೆ ರಚನೆಯ ಆಯಾಮಗಳನ್ನು ಭಾರತ ಚರಿತ್ರೆಯಲ್ಲಿ ದಲಿತರು ಮತ್ತು ಶೋಷಿತ ಸಮುದಾಯಗಳಿಗೆ ಕಾರಣವಾದ ಅಂಶಗಳನ್ನು ಚರ್ಚಿಸಿ ಅಧ್ಯಯನದ ಸ್ವರೂಪ, ವ್ಯಾಪ್ತಿ ಹಾಗೂ ಇಲ್ಲಿಯವರೆಗೂ ಮೈಸೂರು ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು ಕುರಿತು ಕೈಗೊಂಡಿರುವ ಪ್ರಮುಖ ಅಧ್ಯಯನಗಳ ಸಮೀಕ್ಷೆಯನ್ನು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವಲೋಕನ ಮಾಡಲಾಗಿದೆ.

ಎರಡನೇ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು ಎಂಬ ಪ್ರಮುಖ ಉದ್ದೇಶವನ್ನು ಇಟ್ಟುಕೊಂಡು ಮೈಸೂರು ಸಂಸ್ಥಾನದ ಭೂಆಡಳಿತ ವ್ಯವಸ್ಥೆ, ಭೂಸಂಬಂಧಿ ಮಸೂದೆಗಳು, ನ್ಯಾಯಾಡಳಿತ ವ್ಯವಸ್ಥೆಯಲ್ಲಿ ದಲಿತರು, ನೀರಾವರಿ ಆಡಳಿತ ವ್ಯವಸ್ಥೆಯಲ್ಲಿ ದಲಿತರು ಅಸ್ಮಿತೆಯನ್ನು ಗುರುತಿಸುವುದರೊಂದಿಗೆ ಚಿತ್ರದುರ್ಗದ ನಾಯಕರ ಗ್ರಾಮಾಡಳಿತ ನಂತರದಲ್ಲೂ ದಲಿತರ ಭಾಗವಹಿಸುವಿಕೆಯನ್ನು ಚರಿತ್ರೆಯ ಅನೇಕ ಶಿಸ್ತುಗಳ ಹಿನ್ನೆಲೆಯಲ್ಲಿ ಚರ್ಚೆಗೊಳಪಡಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಹಾಗೂ ದಲಿತ ವರ್ಗದವರ ಅಭಿವೃದ್ಧಿ ಕಾರ್ಯಗಳ ವಿಶ್ಲೇಷಣೆ ಎಂಬ ಪ್ರಮುಖ ಅಂಶವನ್ನು ಚರ್ಚಿಸುವುದರೊಂದಿಗೆ ೧೮೦೦ರ ನಂತರ ಮೈಸೂರು ರಾಜ್ಯದ ಸಂಕ್ಷಿಪ್ತ ಚರಿತ್ರೆ, ಪ್ರಜಾಪ್ರತಿನಿಧಿ ಸಭೆ ಮತ್ತು ದಲಿತವರ್ಗಗಳ ಬಗ್ಗೆ ಮಹಾರಾಜರ ನಿಲುವುಗಳು ಹಾಗು ದಲಿತವರ್ಗಗಳ ಅಭಿವೃದ್ಧಿಗೆ ಪ್ರಜಾಪ್ರತಿನಿಧಿ ಸಭೆ ನಿರ್ಣಯಗಳ ಪಾತ್ರವನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದ ನ್ಯಾಯ ವಿಧಾಯಕ ಸಭೆ ಹಾಗೂ ದಲಿತ ಜನಾಂಗದ ಗ್ರಾಮಾಡಳಿತದಲ್ಲಿ ಕಾನೂನುಗಳನ್ನು ವಿಶ್ಲೇಷಿಸುವುದರ ಜೊತೆಗೆ ೧೯೦೦ರ

ನ್ಯಾಯ ವಿಧಾಯಕ ಸಭೆಯಿಂದಾದ ದಲಿತ ಜನಾಂಗದ ಕಲ್ಯಾಣಕ್ಕಾಗಿ ತೆಗೆದುಕೊಂಡ ನಿರ್ಣಯಗಳು, ಜಾರಿಗೊಳಿಸಿದ ಮಸೂದೆಗಳನ್ನು ಕುರಿತು ಚರ್ಚಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದ ಗ್ರಾಮ, ಸ್ಥಳೀಯ ಸಂಸ್ಥೆ ಹಾಗೂ ಪಂಚಾಯಿತಿ ವ್ಯವಸ್ಥೆಯಲ್ಲಿ ಸಾಮಾಜಿಕ ಸಂರಚನೆಯ ವಿಶ್ಲೇಷಣಾತ್ಮಕ ನೋಟ ಎನ್ನುವ ಅಂಶದೊಂದಿಗೆ ಗ್ರಾಮ ನೈರ್ಮಲ್ಯಕ್ಕೆ ತೆಗೆದುಕೊಂಡ ಕ್ರಮಗಳು, ಗ್ರಾಮೀಣ ಆರೋಗ್ಯ ಸುಧಾರಣೆಗೆ ತೆಗೆದುಕೊಂಡ ನಿರ್ಣಯಗಳು, ಸಣ್ಣಕೆರೆಗಳ ಜೀರ್ಣೋದ್ಧಾರ ಮಸೂದೆಗಳು, ಸಸ್ಯರೋಗ ನಿವಾರಣ ಮಸೂದೆಗಳು ಮತ್ತು ಗ್ರಾಮ ನ್ಯಾಯಾಲಯಗಳ ಮಸೂದೆಗಳನ್ನು ಕುರಿತು ವಿವರಿಸುವುದರ ಜೊತೆಗೆ ಚಾರಿತ್ರಿಕ ಹಿನ್ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದ ಹಿಂದುಳಿದ ಮತ್ತು ದಲಿತ ಅಭಿವೃದ್ಧಿಗಾಗಿ ಜಾರಿಗೊಳಿಸಿದ ಆಡಳಿತಾತ್ಮಕ ಕ್ರಮಗಳನ್ನು ಸಾದರಪಡಿಸುವ ನಿಟ್ಟಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಪಂಚಮ ಎಂಬ ಹೆಸರಿನ ಬದಲಾಗಿ ಆದಿಕರ್ನಾಟಕ ಎಂಬ ಆದೇಶ ಮತ್ತು ಸಂಸ್ಥಾನದಲ್ಲಿದ್ದ ಎಡಬಲಗಳ ಸಮಸ್ಯೆಗಳು ಇವುಗಳ ನಡುವೆ ಆದಿಕರ್ನಾಟಕ ಜನಾಂಗಗಳ ಸಹಕಾರ ಸಂಘ ಸ್ಥಾಪನೆಗೆ ಅವಕಾಶ ಮಾಡುವ ಮೂಲಕ ದಲಿತರ ಅಭಿವೃದ್ಧಿಗಾಗಿ ಭೂಸ್ವಾಧೀನ ಪಡಿಸಿಕೊಂಡ ಮಸೂದೆಗಳು, ಸರ್ಕಾರಿ ಮತ್ತು ಸಾರ್ವಜನಿಕ ಸ್ಥಳಗಳಿಗೆ ಮುಕ್ತಪ್ರವೇಶದ ವಿಷಯಗಳನ್ನು ಚರ್ಚಿಸುವುದರೊಂದಿಗೆ ದಲಿತೋದ್ಧಾರಕ್ಕೆ ಶ್ರಮಿಸಿದ ಆರ್.ಗೋಪಾಲಸ್ವಾಮಿ ಅಯ್ಯರ್ ಮತ್ತು ಗೋವಿಂದಾಚಾರ್ಯಸ್ವಾಮಿಯವರ ಕಾರ್ಯವೈಖರಿಯನ್ನು ವಿವರಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಮತ್ತು ದಲಿತ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು ಎಂಬ ಪ್ರಮುಖ ಉದ್ದೇಶವನ್ನಿಟ್ಟುಕೊಂಡು ಹಿಂದುಳಿದ ಹಾಗು ದಲಿತ ವರ್ಗದವರ ವಿದ್ಯಾರ್ಥಿಗಳಿಗೆ ೧೯೨೫ನೇ ವಾರ್ಷಿಕ ಆಯವ್ಯಯದಲ್ಲಿ ವಿದ್ಯಾರ್ಥಿ ವೇತನ, ದಲಿತ ವರ್ಗದವರ ಅಭ್ಯರ್ಥಿಗಳಿಗೆ ನೇರ ನೇಮಕಾತಿಯಲ್ಲಿ ಶಿಕ್ಷಕರ ಹುದ್ದೆ ಹಾಗು ದಲಿತ ವರ್ಗದವರ ಸಾಮಾಜಿಕ ಮತ್ತು ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಸುವಿಸ್ತಾರವಾಗಿ ಚಾರಿತ್ರಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಕೊನೆಯದಾಗಿ ಎಂಟನೇ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ನೀಡುವುದರೊಂದಿಗೆ ಪ್ರಸ್ತುತ ಸಂದರ್ಭದಲ್ಲಿ ದಲಿತರ ಸಮುದಾಯದ ಸ್ಥಿತಿಗತಿಗಳು, ಚರ್ಚೆಗಳು ಮತ್ತು ಅವರ ಮುಂದಿರುವ ಸವಾಲುಗಳು ನನ್ನ ವಿವೇಚನೆಯಲ್ಲಿ ಚರ್ಚಿಸುವುದರೊಂದಿಗೆ ಅನುಬಂಧವನ್ನು ನೀಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಮೈಸೂರು ಸಂಸ್ಥಾನದಲ್ಲಿ ಗ್ರಾಮಾಡಳಿತ ವ್ಯವಸ್ಥೆ ಮತ್ತು ದಲಿತರು-ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕಾಗಿ ಮೈಸೂರು ಸಂಸ್ಥಾನವು ೧೮೮೧ ರಿಂದ ೧೯೪೭ ರ ಅವಧಿಯಲ್ಲಿ

ಭೌಗೋಳಿಕವಾಗಿ ಆಡಳಿತ ವ್ಯಾಪ್ತಿಯನ್ನು ಹೊಂದಿದ್ದ ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಹಾಸನ, ಶಿವಮೊಗ್ಗ, ಕಡೂರು, ಚಿತ್ರದುರ್ಗ ಕೋಲಾರ ಜಿಲ್ಲೆಗಳ ಪ್ರದೇಶದಲ್ಲಿ ಬ್ರಿಟಿಷ್ ಪೆಸಿಡೆನ್ಸಿಯೊಂದಿಗೆ ಮೈಸೂರು ಸಂಸ್ಥಾನದ ಸರ್ಕಾರವು ಹೊಂದಿದ್ದ ಗ್ರಾಮಾಡಳಿತ ವ್ಯವಸ್ಥೆಯ ಸಂದರ್ಭದಲ್ಲಿ ಭೂಮಿ, ಶಿಕ್ಷಣ, ನ್ಯಾಯ, ಸಾಮಾಜಿಕ ಬದುಕಿನ ಪ್ರಶ್ನೆಗಳ ವಿಚಾರದಲ್ಲಿ ವಿವಿಧ ಮತಪಂಥಗಳಲ್ಲಿ ದಲಿತರು, ದಲಿತರ ಅಮಾನವೀಯ ಆಚರಣೆಗಳು, ದಲಿತರ ಗ್ರಾಮೀಣ ಕಸುಬುಗಳ ಕುರಿತಾದ ಮಾಹಿತಿಯನ್ನು ಕುರಿತು ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಸಂಸ್ಥಾನದ ಅವಧಿಯ ಸಮಕಾಲೀನ ಮದ್ರಾಸ್ ಆಧಿಪತ್ಯ, ಬಾಂಬೆ ಪ್ರಾಂತ್ಯ, ಹೈದರಾಬಾದ್ ನಿಜಾಮ ಸಂಸ್ಥಾನ, ಕೊಡಗು ಸಂಸ್ಥಾನ, ಸಂಡೂರು ಸಂಸ್ಥಾನಗಳಲ್ಲಿದ್ದ ಗ್ರಾಮಾಡಳಿತ ವ್ಯವಸ್ಥೆಯ ಸಂಕ್ಷಿಪ್ತ ವಿಚಾರಗಳನ್ನು ಸಂದರ್ಭಾನುಸಾರ ತೌಲನಿಕವಾಗಿ ಸಂಕ್ಷೇಪ ಸೂಚಿಯ ರೂಪದಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

೧.೩. ಅಧ್ಯಯದ ವಿಧಾನ

ಮೈಸೂರು ಸಂಸ್ಥಾನದಲ್ಲಿ ಗ್ರಾಮಾಡಳಿತ ಮತ್ತು ದಲಿತರ ಕುರಿತು ಅಧ್ಯಯನಕ್ಕೆ ಪ್ರಕಟಿತ ಮತ್ತು ಅಪ್ರಕಟಿತ ಪ್ರಾಥಮಿಕ ಹಾಗೂ ಅನುಷಂಗಿಕ ಆಕರ ಗ್ರಂಥಗಳನ್ನು, ಮಿಥಿಕ್ ಸೊಸೈಟಿಯಿಂದ ಪ್ರಕಟವಾಗಿರುವ ಕ್ಯುಜೆಎಂಎಸ್ ಸಂಚಿಕೆಯಲ್ಲಿನ ಇತಿಹಾಸ ಅಕಾಡಮಿಯ ಇತಿಹಾಸ ದರ್ಶನ ಸಂಚಿಕೆಗಳನ್ನು ಬಿಡಿ ಬಿಡಿ ಲೇಖನಗಳನ್ನು ಇವರು ಆರ್ಕೆವ್ಸ್ ರಿಪೋರ್ಟಗಳು, ಸರ್ಕಾರದ ವಿಧಾನಮಂಡಲದ ಗ್ರಂಥಾಲಯದಿಂದ ಪ್ರಕಟಿಸಿರುವ ಪ್ರಜಾಪ್ರತಿನಿಧಿಸಭೆ, ನ್ಯಾಯ ವಿಧಾಯಕ ಪರಿಷತ್ತಿನ ಸಭೆ ನಡವಳಿಗಳ ಪ್ರಕಟಿತ ಗ್ರಂಥಗಳು ಮತ್ತು ಇತರೆ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

ವ್ಯಾಪ್ತಿಯ ಒಂಬತ್ತು ಜಿಲ್ಲೆಗಳಲ್ಲಿ ಆಯ್ದ ಕಂದಾಯ ಇಲಾಖೆಯ ಕಛೇರಿಗಳಿಗೆ, ಮೈಸೂರಿನ ಪತ್ರಾಗಾರ ಮತ್ತು ಪುರಾತತ್ವ ಇಲಾಖೆ ಚೆನ್ನೈನ ಪತ್ರಾಗಾರ ಇಲಾಖೆಗಳಿಗೆ ಮತ್ತು ಸರ್ಕಾರಿ ಹಾಗೂ ಖಾಸಗಿ ಗ್ರಂಥಾಲಯಗಳಿಗೆ ಭೇಟಿ ನೀಡಿ ಅಧ್ಯಯನಕ್ಕೆ ಬೇಕಾದ ಆಕರಗಳ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಅಧ್ಯಯನ ವಿಷಯದ ಬಗ್ಗೆ ಪ್ರಾಥಮಿಕ ಆಕರಗಳು ಮತ್ತು ಅನುಷಂಗಿಕ ಆಕರಗಳು ದೇಶಿಯ, ವಿದೇಶಿಯ ಸಂಶೋಧಕರು ಸಂಗ್ರಹಿಸಿದ ಆಕರಗಳು, ಅವರುಗಳು ಪರಿಶೀಲಿಸಿ ಗ್ರಹಿಸಿದ ರೀತಿ ಅವರ ಸೈದ್ಧಾಂತಿಕ ದೃಷ್ಟಿಕೋನ ಆಕರಗಳು ದೊರೆತ ಆಕರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು. ಆಯ್ಕೆ ಮಾಡಿಕೊಂಡ ವಿಷಯದ ಕುರಿತು ಈವರೆಗೆ ಸಂಗ್ರಹಿಸಲಾದ ಆಕರಗಳನ್ನು ಅಭ್ಯಸಿಸಿ, ಆಕರಗಳ ತುಲನೆ ಮಾಡಿ ವಿಶ್ಲೇಷಣೆಗೆ ಒಳಪಡಿಸಿ ನೈಜಾಂಶಗಳನ್ನು, ದಲಿತರ ವಿಚಾರದಲ್ಲಿ ಕಡೆಗಣಿಸಲ್ಪಟ್ಟ ವಿಷಯಗಳನ್ನು ಕ್ಷೇತ್ರಕಾರ್ಯ ಮುಖೇನ ವಿಮರ್ಶಾತ್ಮಕವಾಗಿ ಅಭ್ಯಸಿಸಲಾಗುವುದು. ಸ್ವಾತಂತ್ರ್ಯೋತ್ತರ ದಿನಮಾನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ

ಕಂಡು ಬರುವ ದಲಿತರ ದಯನೀಯ ಬದುಕಿನೊಂದಿಗೆ ಸ್ವಾತಂತ್ರ್ಯ ಪೂರ್ವ ಅವಧಿಯ ಸ್ಥಿತಿಗತಿಯನ್ನು ಲಭ್ಯವಾಗಿರುವ ಆಕರಗಳ ಆಧಾರದಲ್ಲಿ ಅಧ್ಯಯನ ನಡೆಸಲಾಗುವುದು.

೧.೪. ಅಧ್ಯಯನದ ಸಮೀಕ್ಷೆ

"ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲಗ ಮೈಸೂರು ಸಂಸ್ಥಾನದಲ್ಲಿ ದಲಿತರು" ಎಂಬ ಕೃತಿಯಲ್ಲಿ ದಲಿತ ಜನಾಂಗದವರ ನೋವು, ಬದುಕನ್ನು ಮೈಸೂರು ಸಂಸ್ಥಾನದಲ್ಲಿ ದಲಿತರ ಅಭಿವೃದ್ದಿಗೆ ಕಾರಣವಾದ ಅಂಶಗಳು, ಪ್ರಥಮ ತಲೆಮಾರಿನ ದಲಿತ ಶಿಕ್ಷಣ ಪ್ರತಿಭೆಗಳು, ಅಸ್ಪೃಶ್ಯರ ಅಭಿವೃದ್ದಿಗೆ ಸಂಸ್ಥಾನವು ಜಾರಿ ಮಾಡಿದ ಕಾನೂನುಗಳು, ಪಂಚಮರ ಏಳಿಗೆಗಾಗಿ ಆರ್. ಗೋಪಾಲಸ್ವಾಮಿ ಅಯ್ಯರ್ ಅವರ ಕೊಡುಗೆ ಮುಂತಾದ ವಿಚಾರಗಳಲ್ಲಿ ಅಪಾರ ನಿರಂತರ ಕ್ಷೇತ್ರಾಕಾರ್ಯದ ಮೂಲಕ ವಿವರವಾಗಿ ದಾಖಲೆಗಳ ಮೂಲಕ ಕೃತಿಯಲ್ಲಿ ಚರ್ಚಿಸಲಾಗಿರುತ್ತದೆ,

ಡಾ. ಬಿ. ಆರ್. ಅಂಬೇಡ್ಕರ್ ರವರ ಜನಾಂದೋಲನ ಕುರಿತು ಡಾ. ಮನಜ ಅವರು ನೀಡುವ ಸಂದರ್ಶನದ ಮುಖ್ಯಾಂಶದಂತೆ ಬುದ್ದನ ದಯೆ ಬಸವಣ್ಣನಲ್ಲಿ ಧರ್ಮವಾಗಿ ಪರಿವರ್ತನೆ ಯಾದರೆ, ಬಸವಣ್ಣನ ದಲಿತ ವಿಮೋಚನ ಚಳುವಳಿ ಅಂಬೇಡ್ಕರ್‌ರವರಲ್ಲಿ ಚಿಗುರೊಡೆದು ನಿಲ್ಲುತ್ತದೆ. ಮೈಸೂರು ಸಂಸ್ಥಾನದಲ್ಲಿರುವ ದಲಿತರಲ್ಲಿನ ಬಡತನ, ಅಜ್ಞಾನ್, ಮೂಢನಂಬಿಕೆ, ಅನಿಷ್ಟ ಸಂಪ್ರದಾಯಗಳು, ಹೆಚ್ಚಾಗಿದ್ದವು. ಮತ ಧರ್ಮಗಳೇ ಮನುಷ್ಯರ ನಡುವೆ ಅಡ್ಡಗೋಡೆ ಗಳಾಗಿದ್ದವು. ಮನುಷ್ಯ ತನ್ನನ್ನು ತಾನರಿತರೆ. ಸಮಾಜ ವ್ಯವಸ್ಥೆಯಲ್ಲಿ ತನ್ನನ್ನು ತಾನು ಮನುಷ್ಯನಂತೆ ಗುರುತಿಸಿಕೊಂಡರೆ ದಲಿತರ ಮೇಲಿನ ದೈನಂದಿನ ಶೋಷಣೆ , ಅತ್ಯಾಚಾರ, ಕೊಲೆ, ಸುಲಿಗೆ, ಅರಾಜಕತೆಗೆ ಕಾರಣವಾಗಿದ್ದಂತಹ ಸಮಸ್ಯೆಗಳನ್ನು ತಪ್ಪಿಸಬಹುದೆನ್ನುವ ಸಾಮಾಜಿಕ ಪ್ರಜ್ಞೆಯ ಅಂತಃಸಾಕ್ಷಿಯ ಕೊರತೆಯಿಂದಾಗಿ ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ಸವರ್ಣೀಯ ಹಿಂದುಗಳೆ ಅಸ್ಪೃಶ್ಯತೆಯ ನಿವಾರಣೆಯ ಹಾದಿಯಲ್ಲಿ ದೊಡ್ಡ ಕಾಲ್ತೊಡಕಾಗಿ ಅಂದು ಸಾಧನೆಗೆ ಸಿಮೀತವಾಗಲು ಬಿಡದೇ ವಿವಿಧ ಕ್ಷೇತ್ರಗಳಲ್ಲಿ ದಲಿತರು ಪ್ರಗತಿ ಹೊಂದಲು ಹಲವಾರು ಕಾನೂನುಗಳನ್ನು ಜಾರಿಗೊಳಿಸಿರುವುದು ಮೈಸೂರಿನ ರಾಜ ಪ್ರಭುತ್ವದವರು ಅಂದು ದಲಿತರ ಸಮಸ್ಯೆಗಳಿಗೆ ಹೇಗೆ ಸ್ಪಂದಿಸಿದ್ದಾರೆ. ಪರಿಹಾರಗಳನ್ನು ಕಂಡುಕೊಂಡಿದ್ದಾರೆ, ಎಂಬುದಕ್ಕೆ ಲಭ್ಯವಾದ ಆಧಾರಗಳಿಂದ ಹಾಗೂ ಸಂದರ್ಶನಾಧಾರಿತ ಮಾಹಿತಿಯಿಂದ ಕೃತಿಯಲ್ಲಿ ವಿವರವಾದ ನಿರೂಪಣೆಯನ್ನು ದೊರಕಿಸಲು ಪ್ರಯತ್ನಿಸಲಾಗಿರುತ್ತದೆ

ಡಾ. ಬಿ.ಆರ್. ಅಂಬೇಡ್ಕರ್ ಅವರ ಬರಹ ಮತ್ತು ಚಿಂತನೆಗಳನ್ನು ಆಳವಾಗಿ ಓದಿಕೊಂಡು ದಲಿತರ ನೋವುಗಳಿಗೆ, ಬದುಕಿಗೆ ಧ್ವನಿಯಾಗಿ ತಮ್ಮ ಚಿಂತನಾ ಮೂಸೆಯಿಂದ ಹಲವಾರು ದಲಿತರ/ದಲಿತೇತರ ಬುದ್ಧಿ ಜೀವಿಗಳು, ವಿಚಾರವಂತರು, ಕವಿಗಳು, ವಿಮರ್ಶಕರು, ಲೇಖಕರು ಬರವಣಿಗೆಗಳನ್ನು ಬರೆದಿದ್ದಾರೆ., ಚರ್ಚಿಸಿದ್ದಾರೆ, ಮಾತನಾಡುತ್ತಿದ್ದಾರೆ,. ದೇವನೂರು ಮಹಾದೇವ

ಸಿದ್ದಲಿಂಗಯ್ಯ, ಕೆ.ಬಿ. ಸಿದ್ದಯ್ಯ, ಮನಜ, ಪೋತೆ, ಅರವಿಂದ ಮಾಲಗತ್ತಿ, ಅರ್ಜುನಗೊಳಸಂದಿ, ಮೂಳೂರು ನಾಗರಾಜ ಮುಂತಾದ ದಲಿತ ಚಿಂತಕರ ಸಾಲಿಗೆ ಸೇರುವ ದಲಿತ ಚಿಂತಕರು, ಸಬಾಲ್ಟ್ರನ್ ದಲಿತ ಚಿಂತನೆಯ ನೆಲೆಯಲ್ಲಿ ಚರಿತ್ರೆಯನ್ನು ಕಟ್ಟಿಕೊಡುವ ಚರಿತ್ರೆಕಾರರಲ್ಲಿ ಡಾ॥ ಎನ್. ಚಿನ್ನಸ್ವಾಮಿ ಸೋಸಲೆ ಅವರು, ದೌರ್ಜನ್ಯಕ್ಕೊಳಗಾದ ಹೇಳಲಿಕ್ಕೆ ಬಾಯಿ ಇದ್ದರೂ ಮೌನವನ್ನೇ ಮಾತಾಗಿಸಿಕೊಂಡ ದಲಿತರ ಜೀವನ, ದೈನಂದಿನ, ದೌರ್ಜನ್ಯಕ್ಕೊಳಗಾದವರ ಸ್ಥಿತಿಗತಿಯನ್ನು ಕುರಿತು ಕ್ಷೇತ್ರಕಾರ್ಯದ ಮೂಲಕ ಪ್ರತಿ ದೌರ್ಜನ್ಯದ ಘಟನೆಗಳ ಹಿಂದಿದ್ದ ನೋವು, ಹಿನ್ನೆಲೆ, ಅತ್ಯಾಚಾರಕ್ಕೊಳಗಾದ ಸಂದರ್ಭ, ಮತ್ತಿತರೆ ಅನ್ವಯಿಕ ವಿಷಯಗಳ ಕುರಿತು ಕ್ಷೇತ್ರ ಅಧ್ಯಯನ ಕೈಗೊಂಡು ಹಲವಾರು ಚಾರಿತ್ರಿಕ ಮತ್ತು ಸಂಶೋಧನಾತ್ಮಕ ಕೃತಿಗಳನ್ನು ರಚಿಸಿದ್ದಾರೆ. ಡಾ॥ ಎನ್. ಚಿನ್ನಸ್ವಾಮಿ ಸೋಸಲೆ ಅವರು ರಚಿಸಿ ಹೊರ ತಂದಿರುವ ಅವರ ಕೃತಿಗಳಲ್ಲಿ ದಲಿತಪರ, ಜನಪರ, ಸಮುದಾಯಪರ, ತುಡಿತ, ಕಾಳಜಿಯು ವ್ಯಕ್ತವಾಗುತ್ತದೆ. ಅವರ ದಲಿತ ಪರ ಚಿಂತನೆಯ ಪ್ರಮುಖ ಕೃತಿಗಳಲ್ಲಿ "ದಲಿತರ ಬದುಕು–ಮೆಲುಕು" ಕೃತಿಯು ಗ್ರಾಮೀಣ ಪ್ರದೇಶದ ದಲಿತರ ಸಂವೇದನೆಯ ಕುರಿತಂತೆ ಭಾರತದ ಸಾಮಾಜಿಕ ಆಯಾಮಗಳ ದರ್ಶನವನ್ನು ಕಟ್ಟಿಕೊಡುತ್ತವೆ. ದಲಿತರು: ಅಧ್ಯಯನ ವಿಷಯ ಶೀರ್ಷಿಕೆಯಲ್ಲಿನ "ದಲಿತರು" ಕುರಿತು ಕೆಲವೊಂದು ಅಂಶಗಳನ್ನು ಮನದಟ್ಟು ಮಾಡಿಕೊಳ್ಳಲಾಗಿದೆ. ಹಿಂದುಳಿದವನು, ದಮನಿತ, ಹುಟ್ಟಿನಿಂದ ಜಾತಿಯ ಹೆಸರಿನಿಂದಾಗಿ ಶೋಷಣೆಗೊಳಗಾಗುತ್ತಿರುವ ಅಸ್ಪೃಶ್ಯರೇ ದಲಿತರು, ಫ್ರಾನ್ಸಿಸ್ ಬುಕನಾನ್ ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಹದಿನೆಂಟು ಜಾತಿಗಳನ್ನು ಹೆಸರಿಸುತ್ತಾ, ಎಡಗೈ, ಬಲಗೈ ಜಾತಿಯವರು ಎಂದು ನಮೂದಿಸಿರುವರು, ಜೊತೆಗೆ ವಿವಿಧ ಪ್ರಾಂತ್ಯಗಳಲ್ಲಿ ಅಸ್ಪೃಶ್ಯರಾದ ದಲಿತರನ್ನು ಪಂಚಮ, ಅಂತ್ಯಜ, ಹರಿಜನ, ಮಾದಿಗ, ಹೊಲೆಯ, ಆದಿಕರ್ನಾಟಕ, ಆದಿದ್ರಾವಿಡ ಎಂಬ ನಾನಾ ಹೆಸರಿನಲ್ಲಿ ಕರೆಯುವುದುಂಟು. ದಲಿತರೆಂದರೆ ಪ್ರಸ್ತುತ ಅಧ್ಯಯನದಲ್ಲಿ ಅಸ್ಪೃಶ್ಯರೆಂದೇ ಅರ್ಥೈಸಲಾಗುತ್ತದೆ. ಗಾಂಧೀಜಿಯವರು ಗುರುತಿಸಿದ ಹರಿಜನರೆಲ್ಲರನ್ನು ಒಳಗೊಳ್ಳುತ್ತದೆ. "ದಲಿತ" ಎಂಬ ಪದವನ್ನು ಜಾತಿ ಆಧಾರಿತ ಕೆಳಸ್ತರದ ಅಸ್ಪೃಶ್ಯ ಜನಾಂಗಕ್ಕೆ ಅನ್ವಯವಾಗುಂತೆ ಬಳಸಲಾಗುವುದು. ಆರ್ಥಿಕ, ರಾಜಕೀಯ, ಸಾಮಾಜಿಕ ಶೋಷಣೆಗೆ ಒಳಗಾದವರು ದಲಿತರು (ಮಾರ್ಕ್ಸ್‌ವಾದಿ ವಿಚಾರ.) ಜಾತಿಯನ್ನು ಆಧಾರವಾಗಿಟ್ಟುಕೊಂಡು ಅಸ್ಪೃಶ್ಯರು ಎಂದು ಕರೆಯುವವರೆಲ್ಲ ದಲಿತರು (ಡಾ॥ ಬಿ.ಆರ್. ಅಂಬೇಡ್ಕರ್ ವಾದಿಗಳ ವಿಚಾರ) ಅಸ್ಪೃಶ್ಯರನ್ನು ಒಳಗೊಂಡಂತೆ ಶೋಷಣೆಗೆ ಒಳಪಟ್ಟ ಎಲ್ಲಾ ಜಾತಿಯ ಬಡ ಜನರೆಲ್ಲರೂ ದಲಿತರು, (ಲೋಹಿಯಾವಾದಿಗಳ ವಿಚಾರ) ಜನ ಸಮುದಾಯದಲ್ಲಿ ಶತಮಾನಗಳಿಂದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಶೋಷಣೆಗೆ ಒಳಗಾದವರು, ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರಿನ ಹೊರಗೆ ವಾಸಿಸುತ್ತಾ, ಕೀಳುವೃತ್ತಿಯ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವಂತಹವರು. ಬಹಿಷ್ಕೃತರೆನಿಸಿದವರು ಎಂಬುದಾಗಿ ಅರವಿಂದ ಮಾಲಗತ್ತಿಯವರ ಅನಿಸಿಕೆ, ಮಾರ್ಕ್ಸ್‌ವಾದಿ

ಚಿಂತಕ ಮಹಾರಾಷ್ಟ್ರದ ಪ್ರೊ॥ ರಾವ್ ಸಾಹೇಬ್ ಕಸಬ ಅವರ ಪ್ರಕಾರ "ಯಾರ್‍ಯಾರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಶೋಷಿತರಾಗಿದ್ದಾರೋ ಅವರೆಲ್ಲ ದಲಿತರು" ಶೋಷಣೆ ಎಂಬುವುದಕ್ಕೆ ಜಾತಿ, ಧರ್ಮ ಭೇದವಿಲ್ಲ, ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲಾ ಶೋಷಣೆಗೆ ಒಳಗಾದ ಜನರೂ ಸೇರಿ ದಲಿತರಾಗಿರುತ್ತಾರೆ. ದಲಿತರು ಆಸೆ, ಕನಸು, ಭರವಸೆ, ನೋವು, ಯಾತನೆ, ವೇದನೆ, ಹಿಂಸೆ, ಅಪಮಾನ, ಅಸಹನೆ, ಅಸಮಾಧಾನ, ರೋಷ, ಆಕ್ರೋಶ, ಪ್ರತಿರೋಧಗಳೆಲ್ಲವೂ, ದಲಿತರ ಬೌದ್ಧಿಕ–ಮಾನಸಿಕ ವಿಕಾಸಗಳು, ಸಾಮಾಜಿಕ ಗೌರವದಿಂದ ವಂಚಿತ ಅಸ್ಪೃಶ್ಯರು ಸಾಮಾಜಿಕ ಬಡತನ ಮತ್ತು ಆರ್ಥಿಕ ಬಡತನದಿಂದ ತೊಳಲಾಟದಲ್ಲಿ ಸಿಲುಕಿದ್ದಾರೆ ಜಾತಿಯನ್ನು ಮೀರಿ ದಲಿತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ನೋಡಲಾಗುವುದು. ಪ್ರಭುತ್ವ ಎಷ್ಟೆ ಪ್ರಗತಿಪರವೆನಿಸಿದರೂ ಸಹ ಕ್ರಮಿಸಿದ ಸಾಧನೆಯ ದೃಷ್ಟಿಯಿಂದ, ಆಡಳಿತ ವ್ಯವಸ್ಥೆಯಿಂದ ಸಾಕಷ್ಟು ಅಂತರದಲ್ಲೆ ಇದ್ದಂತಹ ಸ್ಥಿತಿಯನ್ನು "ದಲಿತರ ಬದುಕು–ಮೆಲುಕು" ಕೃತಿಯಲ್ಲಿನ ವರ್ತಮಾನದ ಮುಖ್ಯಾಂಶಗಳಿಂದಲೂ ಗ್ರಹಿಸಬಹುದು. ಇಂದಿನ ದಿನಮಾನದ ಸ್ಥಿತಿಯನ್ನು ಗಮನಿಸಿದಲ್ಲಿ ಪ್ರಭುತ್ವ, ಯಜಮಾನಿಕೆಯು ಪ್ರತಿಷ್ಠಾಪಿಸಿದ ಗತಿಯನ್ನು ತೋರಿಸುತ್ತದೆ. ಕೆಳಸ್ತರದ ಅಸ್ಪೃಶ್ಯ "ದಲಿತ" ಪ್ರಸ್ತುತ ಹಾಲಿಸ್ಥಿತಿ ಹಾಗೂ ಅಂದಿನ ಸ್ಥಿತಿಗೆ ಯಜಮಾನಿಕೆ, ಯಜಮಾನ ಸಂಸ್ಕೃತಿಯೇ ವ್ಯವಸ್ಥೆಯ ಮಾನದಂಡ, ಅಂದರೆ ಸಾಮಾಜಿಕ ಅಸಮಾನತೆ, "ಅಂತರ" ಎಂಬುದು ಶ್ರೇಣಿಕೃತ ಸಮಾಜದ ಸಂಕೇತವಾಗಿದೆ. "ದಲಿತ" ಎಂಬುದು ದಳ, ಗುಂಪು, ಶೋಷಿತ, ಹಿಂದುಳಿದವರು, ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳಮಟ್ಟದವರು ಎಂದು ಶಬ್ದಕೋಶದಲ್ಲಿ ಕಂಡುಬರುವ ವಿವರಣೆ, ಅಸ್ಪೃಶ್ಯತೆಗೆ "ದಲಿತ" ಪದವನ್ನು ಬಳಸಲಾಗಿದೆ. ಡಾ॥ ಬಿ.ಆರ್. ಅಂಬೇಡ್ಕರ್ ಅವರು "ಡಿಪ್ರೆಸ್ಡ್" ಎಂಬ ಪದವನ್ನು ಬಳಸಿದರು, ಲೋಹಿಯಾ ವಾದಿಗಳು ಅಸ್ಪೃಶ್ಯರ ಜೊತೆ ಅನ್ಯಜಾತಿ ಬಡವರನ್ನು ಸೇರಿಸಿ ದಲಿತರೆನ್ನುತ್ತಾರೆ. ಡಾ॥ ಬಿ.ಆರ್. ಅಂಬೇಡ್ಕರ್ ವಾದಿಗಳು ಶ್ರೇಣಿಕೃತ ಸಮಾಜದಲ್ಲಿ ಅತ್ಯಂತ ಕೆಳಗಿನವರೆಂದು ಕರೆಯುವ ಅಸ್ಪೃಶ್ಯರೇ ದಲಿತರು. ರುಜುವಾತ, ಸಂಕ್ರಮಣ, ಸಂವಾದ ಮುಂತಾದ ಪತ್ರಿಕೆ ಬರಹಗಾರರ ಅಭಿಪ್ರಾಯದಂತೆ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆರ್ಥಿಕ, ರಾಜಕೀಯ, ಧಾರ್ಮಿಕವಾಗಿ ಯಾರು ಶೋಷಣೆ ದಮನಕ್ಕೆ ಒಳಗಾಗಿದ್ದರೋ ಅವರೆಲ್ಲರೂ ದಲಿತರು,. ದಲಿತ ಪದವನ್ನು ಎಲ್ಲಾ ಜಾತಿಗೆ ಸೀಮಿತಗೊಳಿಸುವುದು ಚಾರಿತ್ರಿಕ ಅಧ್ಯಯನ ದೃಷ್ಟಿಯಿಂದ ಸೂಕ್ಷ್ಮವೆನಿಸುತ್ತದೆ. ದಲಿತರು ಕೇವಲ ಶೋಷಿತರಷ್ಟೆ ಅಲ್ಲ ಶೋಷಣೆಯ ಜೊತೆಗೆ ಅಮಾನವೀಯವಾದ ಹಿಂಸೆ, ಕ್ರೌರ್ಯ ದೌರ್ಜನ್ಯಕ್ಕೆ ಒಳಗಾದವರು, ಮನುಷ್ಯರಲ್ಲದವಂತೆ ನಡೆಸಿಕೊಳ್ಳುವವರು ಎಂಬ ವ್ಯಾಖ್ಯಾನವನ್ನು ಡಾ॥ ಜಿ.ಎಸ್. ಶಿವರುದ್ರಪ್ಪ ಅವರು ನೀಡುತ್ತಾರೆ. ಈ ಎಲ್ಲ ಪರಿಭಾಷೆಯ ಹಿನ್ನೆಲೆಯಲ್ಲಿ ಸಂಸ್ಥಾನದ ಅವಧಿಯಲ್ಲಿ ದಲಿತರಿದ್ದ ಸ್ಥಿತಿಗತಿಗಳನ್ನು ಪ್ರಭುತ್ವದಡಿಯ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ಅಧ್ಯಯನ ಮಾಡುವಂತಹ ಪುಟ್ಟ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಾಯ: ಎರಡು

ಮೈಸೂರು ಸಂಸ್ಥಾನದಲ್ಲಿ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು

ಅಧ್ಯಾಯ: ಎರಡು

ಮೈಸೂರು ಸಂಸ್ಥಾನದಲ್ಲಿ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು

ಗ್ರಾಮಾಡಳಿತ ವ್ಯವಸ್ಥೆ ಎನ್ನುವುದು ಕೇಂದ್ರ ರಾಜ್ಯಾಡಳಿತದ ಯಥಾ ಮುಖವಾಗಿದ್ದು, ಕೇವಲ ಕಂದಾಯಾಡಳಿತಕ್ಕೆ ಸೀಮಿತವಾಗದೆ ಗ್ರಾಮದ ಸಮಗ್ರ ಜನಜೀವನವನ್ನು ಸುಧಾರಿಸುವಲ್ಲಿ, ಕಾಲಘಟ್ಟದಲ್ಲಿ ಬ್ರಿಟಿಷ್ ಅಧಿಪತ್ಯದಡಿ ಮೈಸೂರು ಸಂಸ್ಥಾನವು ಕಾಯ್ದೆ ಕಾನೂನು, ನಿಯಮ, ಆದೇಶ, ಸುತ್ತೋಲೆಗಳ ಮುಖೇನ ಜಾರಿ ಮಾಡಿದಂತಹ ವಿಚಾರಗಳು ನೇರವಾಗಿ ಜಿಲ್ಲಾಡಳಿತ, ತಾಲ್ಲೂಕು ಆಡಳಿತದ ಮೂಲಕ ಗ್ರಾಮದ ಅರ್ಹರಿಗೆ ತಲುಪಿದ ವಿಷಯದ ಕಡೆಗೆ ಆದ್ಯ ಗಮನ ಹರಿಸಿದೆ. ಗ್ರಾಮಾಡಳಿತದ ಸುಗಮ ನಿರ್ವಹಣೆಯಲ್ಲಿ ಅಂದು ಅಸ್ಪೃಶ್ಯ ನೌಕರರಷ್ಟೇ ಅಲ್ಲದೆ ಅಸ್ಪೃಶ್ಯೇತರ ವರ್ಗ/ಜಾತಿಯವರು ಸಹ ತಮಗೆ ನಿಗದಿಪಡಿಸಿದ ಆಯ ಪ್ರತಿಫಲವನ್ನು ಆಧರಿಸಿ ನಿಗದಿತ ಕೆಲಸಗಳನ್ನು ಮಾಡಬೇಕಾಗಿದ್ದ ಸಂದರ್ಭವನ್ನು ಗಮನಿಸಬಹುದು. ಗ್ರಾಮದ ನ್ಯಾಯ ವ್ಯವಸ್ಥೆಯು ಸಮಗ್ರವಾಗಿದ್ದು ರಾಜನ ಪ್ರತಿನಿಧಿ ಜೊತೆಗೆ ಗ್ರಾಮದ ಗೌಡ, ಪಟೇಲ, ಶ್ಯಾನುಭೋಗರನ್ನು, ಗ್ರಾಮದ ಹಿರಿಯ ಪಂಚರನ್ನು ಒಳಗೊಂಡು ವಿಚಾರಣೆ ಮೂಲಕ ವಿಷಯ ನಿರ್ಣಯ ಜಾರಿಯಾಗುತ್ತಿದ್ದರೂ ಸಹ ಅಸ್ಪೃಶ್ಯ ಜಾತಿಗಳಲ್ಲಿ ಗಡಿಮನೆ ಪದ್ಧತಿ ಏಳು ಊರುಗಳಿಗೆ ಯಜಮಾನ, ಜಾತಿ ಪಂಚಾಯಿತಿಗೆ ಯಜಮಾನ, ಜಾತಿಯೊಳಗೆ, ಕುಲ ಗೋತ್ರಗಳೊಳಗೆ ಆಗುತ್ತಿದ್ದ ವಿವಾದ, ಗೊಂದಲ, ಗಲಾಟೆಗಳಿಗೆ ನಡೆಸುತ್ತಿದ್ದ ವಿಚಾರಣೆ, ತೆಗೆದುಕೊಳ್ಳುತ್ತಿದ್ದ ತೀರ್ಮಾನ ವ್ಯವಸ್ಥೆಯು ಇಂದಿನ ಆಧುನಿಕತೆಯ ಸುದೀರ್ಘ ಅವಧಿಯ ತೀರ್ಪುಗಳಿಗಿಂತ ಭಿನ್ನವಾಗಿದ್ದವು ಎಂಬುದನ್ನು ಕಾಣಬಹುದಾಗಿದೆ. ಗ್ರಾಮಗಳಲ್ಲಿ ಗ್ರಾಮದೇವತೆಯ ಉತ್ಸವ, ಜಾತ್ರೆಗಳ ಸಂದರ್ಭದಲ್ಲಿ ಅಸ್ಪೃಶ್ಯ ಜಾತಿಯವರು ನೆರವೇರಿಸುತ್ತಿದ್ದ ಗ್ರಾಮದ ಸುತ್ತ

ಹಾಕುತ್ತಿದ್ದ ಸರಗಾ, ರಥೋತ್ಸವಕ್ಕೆ ರಥಗಳಿಗೆ ಹಗ್ಗ ಮಿಣಿಗಳನ್ನು ಒದಗಿಸುವುದು. ದೇಗುಲಗಳ ಹೊರಾಂಗಣದಲ್ಲಿ ಜಾತ್ರೆಯ ಅವಧಿಯಲ್ಲಿ ಸ್ವಚ್ಛಗೊಳಿಸುವುದು, ರಥೋತ್ಸವ ಜರುಗುವ ಸಂದರ್ಭದಲ್ಲಿ ಭಕ್ತರು ರಥದ ಗಾಲಿಗಳಿಗೆ ಒಡೆಸುವ ತೆಂಗಿನಕಾಯಿಯ ಚೂರುಗಳನ್ನು ಆರಿಸಿಕೊಂಡು ಗ್ರಾಮದ ಅಸ್ಪೃಶ್ಯ ಜಾತಿಯ ಕಟ್ಟೆಮನೆ, ಕುಲ, ಗೋತ್ರಗಳ ಪಾಲುದಾರ ಮನೆಗಳಿಗೆ ಹಂಚುವ ಪದ್ಧತಿಯ ಬಗ್ಗೆ ಮಾಹಿತಿಯನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕೆರೆಯ ಏರಿ ಮತ್ತು ಕೋಡಿಯಲ್ಲಿ ಬೆಳೆದಿದ್ದ ಮುಳ್ಳುಕಳ್ಳಿಗಿಡಗಳನ್ನು ಕತ್ತರಿಸಿ ಸ್ವಚ್ಛಗೊಳಿಸುವುದು, ಕೆಲ ಸಂದರ್ಭದಲ್ಲಿ ಕೆರೆಯ ನಾಲೆಗಳಲ್ಲಿ ಬೆಳೆದಿದ್ದ ಗಿಡಗಳನ್ನು ತೆರವುಗೊಳಿಸುವ ಕೆಲಸವನ್ನು ಅಸ್ಪೃಶ್ಯಜಾತಿಯವರು ಮಾಡುತ್ತಿದ್ದರು. ಬೆಳೆದ ಫಸಲನ್ನು ಕೊಯ್ಲು ಮಾಡಿದ ನಂತರ ಸುಗ್ಗಿಕಾಲದಲ್ಲಿ ಬೆಳೆಯನ್ನು ಒಕ್ಕಲು ಮಾಡಲು, ಕಣವನ್ನು ಕೆತ್ತುವ, ಸಗಣಿ ನೀರನ್ನು ಹಾಕಿ ಕಣವನ್ನು ಸಿದ್ದಪಡಿಸುವ ಕೆಲಸ ಮಾಡಿ, ದವಸದ ರಾಶಿಯ ಪೂಜೆ ಸಮಯದಲ್ಲಿ ತಾನು ಸಿದ್ದಪಡಿಸಿದ ಕಣಕ್ಕೆ ಪ್ರವೇಶ ನಿರಾಕರಿಸಲ್ಪಟ್ಟು ಅಸ್ಪೃಶ್ಯನಾಗಿ ಕಣದ ಹೊರ ಭಾಗದಲ್ಲಿ ದೂರದಲ್ಲಿ ನಿಂತು, ದವಸದ ರಾಶಿಯಿಂದ ಮಾಲೀಕನು ಬಿದಿರಿನ ಮೊರದಲ್ಲಿ ನೀಡುತ್ತಿದ್ದ ದವಸವನ್ನು ಅಸ್ಪೃಶ್ಯನು ತಾನು ಉಡುತ್ತಿದ್ದ ಪಂಚೆಯನ್ನು ಅಥವಾ ಟವಲ್‌ನ್ನು ಹಿಡಿದು, ಅದರಲ್ಲಿ ಹಾಕಿಸಿಕೊಂಡು ಮನೆಗೆ ಬರುತ್ತಿದ್ದ ವಿಚಾರವನ್ನು ಗ್ರಾಮಗಳ ಕ್ಷೇತ್ರಕಾರ್ಯದಿಂದ ಗುರ್ತಿಸಲಾಗಿದೆ.

೨.೧. ಮೈಸೂರು ಸಂಸ್ಥಾನ ಗ್ರಾಮಾಡಳಿತದ ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತರು

ದೇವಸ್ಥಾನದ ಮುಂಭಾಗದ ಕಂಬದಲ್ಲಿ ಸಿಡಿಯಾಡುವುದು, ಸಿಡಿ ಆಡುವವನು ಕೆಂಪು ಬಣ್ಣದ ಕಚ್ಚೆ ಹಾಕಿ, ಕೆಂಪು ಬಣ್ಣದ ವಸ್ತ್ರವನ್ನು ಸೊಂಟಕ್ಕೆ ಬಿಗಿದು, ತಲೆಗೆ ಪೇಟ ಧರಿಸಿ, ಕೈಯಲ್ಲಿ ಚಾವಟಿ ಮತ್ತು ಬೇವಿನ ಸೊಪ್ಪು ಹಿಡಿದು, ಹಣೆಗೆ ಕುಂಕುಮ ಧರಿಸಿ, ಕಳಶ ಹಿಡಿದ ಹೆಣ್ಣು ಮಕ್ಕಳೊಡನೆ ದೇವಸ್ಥಾನಕ್ಕೆ ಬರುತ್ತಿದ್ದ, ಸಿಡಿಕಂಬವನ್ನು ಪೂಜೆ ಮಾಡಿ, ಮರಿ ಬಲಿ ಕೊಟ್ಟ ನಂತರ, ದೇವರಿಗೆ ಮಂಗಳಾರತಿ ಮಾಡಿ, ಸಿಡಿ ಆಡುವವನಿಗೆ ತೀರ್ಥಕೊಟ್ಟು ಕೊರಳಿಗೆ ಹೂವಿನಹಾರ ಹಾಕುತ್ತಿದ್ದರು. ಹರೆ, ತಮಟೆ, ಓಲಗ, ಕೊಂಬು, ಕಹಳೆ, ಜಾಗಟೆ ವಾದ್ಯಗಳು ಮೊಳಗುತ್ತಿದ್ದವು. ಹಗ್ಗದ ಸಹಾಯದಿಂದ ಸಿಡಿ ಕಂಬವನ್ನು ಕೆಳಗೆ ತಗ್ಗಿಸಿ ಸಿಡಿ ಕಂಬದ ತುದಿಗೆ ಸಿಡಿ ಆಡುವವನನ್ನು ಕೆಳಮುಖ ಮಾಡಿ ಅವನ ಬೆನ್ನಿನ ಮೂಳೆಗೆ ಕಬ್ಬಿಣದ ಕೊಕ್ಕೆಯನ್ನು ಸಿಕ್ಕಿಸಿ, ಅವನ ಬೆನ್ನಿಗೆ ವಸ್ತ್ರದಿಂದ ಬಿಗಿಯುತ್ತಿದ್ದರು. ಮೇಲಕ್ಕೆತ್ತಿ ಮೂರು ಸುತ್ತು ತಿರುಗಿಸುತ್ತಿದ್ದಾಗ ಪ್ರೇಕ್ಷಕರು ಸಿಡಿಕಂಬವು ಸುತ್ತಿದಂತೆ, ಅದರ ಮೇಲೆ ಪುರಿ, ಬಾಳೆಹಣ್ಣನ್ನು ಮೇಲಕ್ಕೆ ಎಸೆಯುತ್ತಿದ್ದರು. ದೇವರಿಗೆ ಮಂಗಳಾರತಿ ಮಾಡಿ, ತೀರ್ಥವನ್ನು ಸಿಡಿ ಆಡಿದವನ ಮೇಲೆ ಪ್ರೋಕ್ಷಣೆ ಮಾಡಿದ ನಂತರ ಸಿಡಿ ಆಚರಣೆಯು ಮುಕ್ತಾಯವಾಗುತ್ತಿತ್ತು. ಗ್ರಾಮ ದೇವತೆಗೆ ಹರಕೆ ಮಾಡಿಕೊಂಡವರು ಬರಿಮೈಯಲ್ಲಿ ದೇವರ ಉತ್ಸವದ ಮುಂದೆ,

ದೇವಸ್ಥಾನದ ಸುತ್ತ ದಿಂಡುರುಳಿ ಹರಕೆ ಸೇವೆ ಸಲ್ಲಿಸುತ್ತಿದ್ದರು. ಗ್ರಾಮದೇವತೆ ಉತ್ಸವದಲ್ಲಿ ಸೋಮನನ್ನು ಹೊತ್ತು ಬರುತ್ತಿದ್ದ ವ್ಯಕ್ತಿಯು, ಗ್ರಾಮದೇವತೆಯ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ವರ್ಷಕ್ಕೊಮ್ಮೆ ಸುಗ್ಗಿಯ ಕಾಲದಲ್ಲಿ ಸಂಚರಿಸಿ ರೈತರಿಂದ ದವಸಧಾನ್ಯವನ್ನು ಸಂಗ್ರಹಿಸುತ್ತಿದ್ದ, ಕಿನ್ನರ ಜೋಗಿಯ ವೇಷವನ್ನು ಧರಿಸಿ, ಚಂದ್ರ, ಬಿಲ್ಲೆ, ಮಣಿಕುಚ್ಚುಗಳಿಂದ ಅಲಂಕೃತವಾದ ಮುಂಡಾಸು, ಕಚ್ಚೆಪಂಚೆ, ಬಿಳಿಅಂಗಿ, ಮೇಲೊಂದು ಕರಿಕೋಟು, ಹಣೆಗೆ ಚಂದ್ರ ನಾಮ, ಎದೆಗೆ ಮಣಿಸರಗಳು, ಕಿನ್ನರಿ–ಗಗ್ಗರಿ–ಚಟಕಿ ವಾದ್ಯಗಳೊಡನೆ ಹಾಡುತ್ತಾ, ನರ್ತಿಸುವ ಕಿಂದರ ಜೋಗಿ ವೇಷ ಹಾಕಿದ್ದ ವ್ಯಕ್ತಿಯನ್ನು ಅರ್ಜುನ ಜೋಗಿ ಎಂದು ಹೇಳಲಾಗುತ್ತಿತ್ತು ಅಂದಿನ ಜನರು ಬಹುತೇಕ ಲಂಗೋಟಿ ಕಟ್ಟಿ ಅದರ ಮೇಲೆ ಕಚ್ಚೆಪಂಚೆ ಉಡುತ್ತಿದ್ದರು. ಮಿಲ್ ಬಟ್ಟೆಗಳು ರಕ್ಷಣಾ ಇಲಾಖೆಗೆ ಸರಬರಾಜು ಆಗುತ್ತಿದ್ದುದರಿಂದ, ಅವು ಜನರಿಗೆ ಸುಲಭವಾಗಿ ದೊರೆಯುತ್ತಿರಲಿಲ್ಲ.[೧] ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಗ್ರಾಮದ ಕಂಚಿಪತಿಗೌಡರು, ಊರಿನ ಗಣ್ಯರಾದ ದೊಡ್ಡಬಸವೇಗೌಡರು ಕೈಮಗ್ಗದ ಬಟ್ಟೆಗಳನ್ನೇ ಉಪಯೋಗಿಸುತ್ತಿದ್ದರು. ತಲೆಯ ಮೇಲೆ ಬಟ್ಟೆ ಇಲ್ಲದವನಿಗೆ ಆ ಕಾಲದಲ್ಲಿ ಮನ್ನಣೆ ಇರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಸರ್ಕಾರಿ ಅಧಿಕಾರಿಗಳು ಸಾಮಾನ್ಯವಾಗಿ ಕೋಟು–ಪ್ಯಾಂಟು ಧರಿಸಿ ಕಛೇರಿಗೆ ಬರುವ ಪದ್ಧತಿಯಿತ್ತು. ಕಿವಿ ಚುಚ್ಚಿಸಿ ಕೊಳ್ಳುವುದು ಹಿಂದೂಗಳ ಷೋಡಶ ಸಂಸ್ಕಾರಗಳಲ್ಲಿ ಒಂದಾಗಿತ್ತು. ಆ ದಿನಗಳಲ್ಲಿ ಮದುವೆಯೆಂದರೆ ಊರಿನವರೆಲ್ಲಾ ಸೇರಿ ವಾರಪೂರ್ತಿ ನಡೆಸುವ ಕಾರ್ಯವಾಗಿತ್ತು, ತೋಟದಲ್ಲಿ ಒಣಗಿದ ಸೌದೆ ಕಡಿದು ಗಾಡಿಯಲ್ಲಿ ಗ್ರಾಮಕ್ಕೆ ಸಾಗಿಸುವುದು. ಕುಂಬಾರನಿಂದ ಬಣ್ಣದ ಚಿತ್ತಾರಗಳನ್ನು ಹೊಂದಿ ಮಣ್ಣಿನ ಪಾತ್ರೆಗಳು, ಮೇದರವನಿಂದ ಹೊಸ ಕುಕ್ಕೆ, ಮೊರ ಹಾಗೂ ಬಳೆ ಮಲಾರಕ್ಕೆ ಪೂಜೆ ಸಲ್ಲಿಸಿದ ಬಳಿಕ ಬಳೆ ತೊಡಿಸುವ ಶಾಸ್ತ್ರ, ವೀಳೆಯ ಶಾಸ್ತ್ರ, ನಿಶ್ಚಿತಾರ್ಥ ನಡೆಸುವುದು ರೂಢಿಯಲ್ಲಿತ್ತು. ಪ್ರೀತಿಸಿ ಮದುವೆಯಾಗುವ ಪ್ರಸಂಗಗಳು ಆಗ ಇರಲಿಲ್ಲ, ಮದುವೆಗೆ ಮುಂಚೆ ಹೆಣ್ಣನ್ನು ಮಾತನಾಡಿಸಲು ಗಂಡಿಗೆ ಅವಕಾಶವಿರಲಿಲ್ಲ. ಊರೊಳಗೆ ಪ್ರತ್ಯೇಕವಾಗಿ ಕಾದಿರಿಸಲಾಗಿದ್ದ ಬಿಡದಿ ಮನೆಗೆ ಮದುವೆಯಾಗಲಿರುವ ಗಂಡು ಮತ್ತು ಅವರ ಕಡೆಯವರನ್ನು ತಂದು ಬಿಡುವುದು, ಸೋಬಾನದ ಹಾಡುಗಳನ್ನು ಹೇಳುವುದು, ಎರಡು ಕಡೆಯವರು ಪರಸ್ಪರರನ್ನು ಜರಿಯುವ ಹಾಡುಗಳನ್ನು, ಒಗಟುಗಳನ್ನು ಹೇಳುವುದು, ವರನನ್ನು ಬಸವನ ಮೇಲೆ ಮೆರವಣಿಗೆ ಮೂಲಕ ವಧುವಿನ ಮನೆಗೆ ಕರೆತರಲಾಗುತ್ತಿತ್ತು. ಗಂಡಿನಿಂದ ಹೆಣ್ಣಿನ ಹೆಸರನ್ನು, ಹೆಣ್ಣಿನಿಂದ ಗಂಡಿನ ಹೆಸರನ್ನು ಹೇಳಿಸುವ ಮೋಜಿನ ಪ್ರಸಂಗ ಮೆರವಣಿಗೆಯಲ್ಲಿ ಕಂಡುಬರುತ್ತಿತ್ತು.[೨]

ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮಗಳು ಸ್ವತಂತ್ರ ಘಟಕಗಳಾಗಿದ್ದವು, ಗ್ರಾಮಾಧಿಕಾರಿಗಳು ಊರ ರಕ್ಷಣೆಗೆ ಸರದಿಯ ಮೇಲೆ ಊರಿನ ಕಾವಲಿಗಾಗಿ ತರುಣ ಯುವಕರನ್ನು ನೇಮಿಸುತ್ತಿದ್ದರು.

ಅವರು ರಾತ್ರಿ ವೇಳೆ ದೊಣ್ಣೆ ಹಿಡಿದು ಲ್ಯಾಟೀನು ದೀಪಗಳನ್ನು ಹಿಡಿದು ಊರಲ್ಲೆಲ್ಲಾ ಸಂಚರಿಸುತ್ತ ಕಳ್ಳಕಾಕರಿಂದ ಮತ್ತು ಪುಂಡರಿಂದ ಜನರನ್ನು ಮತ್ತು ಅವರ ಆಸ್ತಿಪಾಸ್ತಿಗಳನ್ನು ರಕ್ಷಿಸುತ್ತಿದ್ದರು. ಬೇಸಿಗೆಯ ಕಾಲದಲ್ಲಿ ಕೆರೆಯ ಹೂಳನ್ನು ತೆಗೆದು ಹೊರಗೆ ಹಾಕಿ ಕೆರೆಯ ಕಟ್ಟೆಯನ್ನು ಭದ್ರಪಡಿಸುವ ಕೆಲಸವೂ ಗ್ರಾಮಾಧಿಕಾರಿಗಳ ಉಸ್ತುವಾರಿಯಲ್ಲಿ ಊರ ಜನರಿಂದ ನಡೆಯುತ್ತಿತ್ತು. ಇಂತಹ ಕೆಲಸಗಳಿಗೆ ಸರ್ಕಾರ ತನ್ನ ಬೊಕ್ಕಸದಿಂದ ಹಣ ಖರ್ಚು ಮಾಡುತ್ತಿರಲಿಲ್ಲ. ಹಿಂದಿನಿಂದ 'ಬಾರಾಬಾಲೂತಿ' ಪದ್ಧತಿಯು ಗ್ರಾಮಗಳಲ್ಲಿ ಜಾರಿಯಲ್ಲಿತ್ತು, ಪಟೇಲ, ಶಾನುಭೋಗ, ತೋಟಿ, ತಳವಾರ, ನೀರುಗಂಟಿ, ಜೋಯಿಸ, ಕಮ್ಮಾರ, ಬಡಗಿ, ಕುಂಬಾರ, ಅಗಸ, ಹಜಾಮ ಮತ್ತು ಅಕ್ಕಸಾಲಿಗ ಇವರು ಆರ್ಥಿಕ ದೃಷ್ಟಿಯಿಂದ ನೋಡಿದರೆ ಶ್ರಮವಿಭಜನೆ, ಸಹಕಾರ ಸಂಘ ವ್ಯವಸ್ಥೆಯಂತಹ ತತ್ವಗಳು ಅಂದಿನ ಗ್ರಾಮ ಜೀವನದಲ್ಲಿ ಮಿಳಿತವಾಗಿದ್ದುವು, ಅವಶ್ಯಕತೆಗಳು ಕಡಿಮೆಯಿದ್ದ ಆ ಕಾಲದಲ್ಲಿ ಗ್ರಾಮೀಣ ಜನರು ಸ್ವಾವಲಂಬಿಗಳಾಗಿ ಸಂತೃಪ್ತ ಜೀವನ ನಡೆಸುತ್ತಿದ್ದರು.[೩]

ಹೀಗೆ ಈ ಕೃತಿಯಲ್ಲಿ ಆಯಗಾರ ಪದ್ದತಿ, ಶ್ರಮಜೀವನ, ಜಮೀನು ಹೊಂದಿದ್ದವರ ಮನೆಗಳಲ್ಲಿ ಕೂಲಿ ಕಾರ್ಮಿಕರ ಕೆಲಸ, ಸಾಟಿ ಪದ್ಧತಿ, ಬೆಳೆದಂತಹ ವಸ್ತುಗಳ ಸಾಗಾಣಿಕೆ, ಮಾರಾಟ, ಶೈಕ್ಷಣಿಕ ವ್ಯವಸ್ಥೆ, ಗ್ರಾಮದೇವನತೆ ಉತ್ಸವದಲ್ಲಿ ಸಾಂಸ್ಕೃತಿಕ ಆಚರಣೆಗಳ ವಿವರವನ್ನು ಲೇಖಕರು ತಮ್ಮ ನೆನಪಿನಂಗಳದಲ್ಲಿ ಸ್ಮರಣೆಯಿದ್ದಂತೆ ಕೆಲವೊಂದು ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿರುವುದರ ಹಿನ್ನೆಲೆಯಲ್ಲಿ ಗ್ರಾಮ ಜೀವನದ ನಡವಳಿಕೆಗಳನ್ನು ಸೂಕ್ಷ್ಮವಾಗಿ ಗ್ರಹಿಸಲಾಗಿದೆ.

ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ಗ್ರಾಮಗಳಲ್ಲಿದ್ದ ಬಹುಸಂಖ್ಯಾತ ಜನರು ಸ್ಥಳೀಯ ಗ್ರಾಮಾಧಿಕಾರಿಗಳಾದ ಪಟೇಲರು, ಶ್ಯಾನುಭೋಗರು, ಶೇಖದಾರರೊಂದಿಗೆ ನಿರಂತರವಾದ ಸಂಪರ್ಕವನ್ನು ಹೊಂದಿದ್ದರು. ಚಾರಿತ್ರಿಕವಾಗಿ ಸಾಗಿಬಂದಿರುವ ಗ್ರಾಮಾಡಳಿತವನ್ನು ಪುನರ್ ರಚನೆ ಮಾಡುವ ಪ್ರಶ್ನೆಯು ಪ್ರಜಾಪ್ರತಿನಿಧಿ ಸಭೆ ಮತ್ತು ಸಂಸ್ಥಾನದ ಸರ್ಕಾರಕ್ಕೆ ಸವಾಲಿನದಾಗಿತ್ತು. ೧೮೮೧ ರಿಂದ ಆರಂಭವಾದ ಪ್ರಜಾಪ್ರತಿನಿಧಿ ಸಭೆಯ ಪ್ರತಿ ವಾರ್ಷಿಕ ಸಭೆಗಳಲ್ಲಿ ಗ್ರಾಮಾಡಳಿತದ ವಿಚಾರವು ಹಲವಾರು ಪ್ರಶ್ನೆಗಳ ಮೂಲಕ ಚರ್ಚೆಯಾಗಿ ಸದಸ್ಯರಲ್ಲಿ ಪರ-ವಿರೋಧದ ಅಭಿಪ್ರಾಯಗಳು, ಸಲಹೆಗಳು ಹೊರ ಬಂದು, ಸರ್ಕಾರದ ಪರವಾಗಿ ದಿವಾನರು, ಇಲಾಖೆಯ ಮುಖ್ಯಸ್ಥರು ಉತ್ತರಗಳನ್ನು ನೀಡುವುದರೊಂದಿಗೆ ಹಲವಾರು ನಿರ್ಣಯಗಳಾಗಿ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮಾಧಿಕಾರಿಗಳ ಸೇವೆಗಳನ್ನು ಪುನರ್ ರೂಢಿಸುವ ಕೆಲಸಗಳಾಗಿರುವುದು. ಪ್ರಜಾಪ್ರತಿನಿಧಿ ಸಭೆಯ ನಡೆವಳಿಗಳಿಂದ ತಿಳಿದು ಬರುತ್ತದೆ.

ಸಂಸ್ಥಾನದ ಪ್ರಜಾಪ್ರತಿನಿಧಿ ವಾರ್ಷಿಕ ಸಭೆಗಳಲ್ಲಿ ಶ್ಯಾನುಭೋಗರು ಪಟೇಲರುಗಳ ಸಂಬಳಗಳು ಅಥವಾ ಪೋಟ್ಗಿ ಹಾಗೂ ತೋಟಿ ಮತ್ತು ತಳವಾರರುಗಳ ಮೀರಾಸ್‌ಗಳ ವಿಚಾರ,

ಶೇಖದಾರ್, ನೀರಗಂಟಿ ಗ್ರಾಮಸೇವಕ, ಗ್ರಾಮಸಹಾಯಕ ಲೇಖನ ಸಾಮಗ್ರಿ ಭತ್ಯೆ, ಸಾದಿಲ್ವಾರು ಭತ್ಯೆ, ವೇತನಶ್ರೇಣಿ, ಆಯ, ಅನುವಂಶಿಕಹಕ್ಕು ಇನಾಂಭೂಮಿ, ಗ್ರಾಮಾಧಿಕಾರಿಗಳ ವರ್ಗಾವಣೆ, ಆರಕ್ಷಕ ಕೆಲಸ, ಭೂಸಮೀಕ್ಷೆ, ಗ್ರಾಮ ಕಛೇರಿ, ದಂಡ ಮತ್ತು ಅಮಾನತ್ತು, ಕುಳವಾಡಿ ರೈತರು, ರೈತವಾರಿ ಪದ್ಧತಿ ನಿರ್ದಿಷ್ಟ ಪರೀಕ್ಷೆ ಫಿರ್ಕಾಗಳ ಹೊಂದಾಣಿಕೆ, ಜಮಾಬಂದಿ, ಉಪಲಬ್ಧ, ಕರ ಮತ್ತು ಜೋಡಿ ಭೂಕಂದಾಯ, ಕರ ನಿರ್ಧರಣೆ, ಕಾರ್ಯಒತ್ತಡ, ಪ್ರತಿಫಲ, ಮುಂತಾದ ವಿಚಾರಗಳ ಬಗ್ಗೆ, ಸುದೀರ್ಘವಾದ ನಿರಂತರವಾದ ಚರ್ಚೆಗಳಾಗಿ ಸರ್ಕಾರದಿಂದ ನಿರ್ಣಯಗಳಾಗುತ್ತಿದ್ದವು.

ವಿಜಯನಗರ ಸಾಮ್ರಾಜ್ಯವು ಬನಹಟ್ಟಿ, ತಾಳಿಕೋಟೆ, ರಕ್ಕಸತಂಗಡಿ ಕದನದ ತರುವಾಯ ಅವಸಾನದ ಹಾದಿಯನ್ನು ಹಿಡಿದಾಗ, ದಕ್ಷಿಣಭಾರತದಲ್ಲಿ ಶ್ರೀರಂಗಪಟ್ಟಣವನ್ನು ಕೇಂದ್ರಸ್ಥಾನವನ್ನು ಹೊಂದಿದಂತೆ ಮೈಸೂರಿನ ಒಡೆಯಯರು ಪ್ರಬಲರಾಗಲು ಆರಂಭಿಸಿದರು.[೪] ಕ್ರಿಶ. ೧೩೯೯ ರಿಂದ ಕ್ರಿಶ ೧೯೪೭ರ ಅವಧಿಯಲ್ಲಿ ಮೈಸೂರು ಸಂಸ್ಥಾನವು ಒಡೆಯರ ಸಂತತಿಯ ೨೫ ರಾಜಮಹಾರಾಜರಿಂದ ಆಳ್ವಿಕೆಗೆ ಒಳಪಟ್ಟಿದ್ದು, ಆಡಳಿತಾತ್ಮಕ, ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಕೊಡುಗೆಗಳನ್ನು ನೀಡಿ ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಹೊಂದಿದೆ. ಮೈಸೂರು ಸಂಸ್ಥಾನದಲ್ಲಿ ಆಳ್ವಿಕೆ ನಡೆಸಿ ಜನಪರ, ದಲಿತಪರ ಸಮಾಜಪರ ಕಾಳಜಿಯನ್ನು ಹೊಂದಿ "ಮಾದರಿ" ಸಂಸ್ಥಾನವೆನ್ನುವ ಪ್ರಸಿದ್ಧಿಗಾಗಿ ಕಾರಣೀಭೂತರಾದ ನಾಲ್ವಡಿ ಕೃಷ್ಣರಾಜ ಒಡೆಯರು ಅತ್ಯಂತ ಹೆಸರುವಾಸಿಯಾದರು.

ಶ್ಯಾನುಭೋಗರು

ಮೈಸೂರು ಪ್ರಜಾಪ್ರತಿನಿಧಿ ಸಭೆಗಳ ನಡುವಳಿಕೆಗಳಲ್ಲಿ ದಾಖಲಾಗಿರುವಂತೆ ಶ್ಯಾನುಭೋಗರು ಉಚ್ಚತರ ರೀತಿಯ ಜವಾಬ್ದಾರಿಗಳನ್ನು ನಿರ್ವಹಿಸುವ ಅವಶ್ಯಕತೆ ಇರುತ್ತದೆ, ಅವರು ವಿವಿಧ ಸ್ವರೂಪದ ಲೆಕ್ಕಪತ್ರಗಳನ್ನು ನೋಡಿಕೊಳ್ಳಬೇಕು. ತಾಲೂಕು ಸ್ಥಳೀಯ ಅಧಿಕಾರಿಯೊಂದಿಗೆ ಸಂಪರ್ಕ ಇಟ್ಟುಕೊಳ್ಳಬೇಕು, ಅವರ ಕೆಲಸವು ಪೂರ್ಣಕಾಲಿಕವಾಗಿದೆ. ಗ್ರಾಮದ ಅಧಿಕಾರಿಗಳಿಂದ ಹಣದ ದುರುಪಯೋಗ ಮತ್ತು ಲಂಚವನ್ನು ತಡೆಗಟ್ಟಲು ಪೋಟ್ಗಿ ಅಥವಾ ಸಂಬಳಗಳನ್ನು ಹೆಚ್ಚಿಸುವ ಅವಶ್ಯಕತೆಯಿಂದ ಶ್ಯಾನುಭೋಗರಿಗೆ ನೀಡುವ ಪೋಟ್ಗಿಯನ್ನು ಸುಮಾರು ಹನ್ನೆರಡು ರೂಪಾಯಿಗಳಾದರೂ ಏರಿಸಬೇಕೆಂದು ೧೯೦೮ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರು ಕೋರಿಕೆಯನ್ನು ಸಲ್ಲಿಸಿದರು. ಗ್ರಾಮಗಳು ಚಿಕ್ಕದಾಗಿರುವಲ್ಲಿ ಎರಡು ಅಥವಾ ಮೂರು ವಲಯ ಅಥವಾ ಫಿರ್ಕಾಗಳ ಹೊಣೆಗಾರಿಕೆಯನ್ನು ಒರ್ವ ಶ್ಯಾನುಭೋಗನಿಗೆ ವಹಿಸಬಹುದು, ಶ್ಯಾನುಭೋಗರ ಹುದ್ದೆಯ ಅನುವಂಶಿಕ ಸ್ವರೂಪವನ್ನು ಭಂಗ ಮಾಡದೆ ಹಾಗೆಯೇ ಮುಂದುವರಿಸಬೇಕೆಂದು ೧೯೧೭ರ ಉಪ ಸಮಿತಿಯು ವರದಿ ನೀಡಿತು, ಪರೀಕ್ಷೆಗಳನ್ನು ನಿಗಧಿಪಡಿಸಬೇಕು ಮತ್ತು ಶ್ಯಾನುಭೋಗರ ವರ್ಗಾವಣೆ ಆಗಬೇಕು ಗೌರವಾನ್ವಿತ ಜೀವನವನ್ನು

ನಡೆಸಲು ಸಾಧ್ಯವಾಗದಷ್ಟು ಅಲ್ಪವಾದ ವೇತನವನ್ನು ಶ್ಯಾನುಭೋಗರುಗಳಿಗೆ ನೀಡಲಾಗುತ್ತಿದೆ. ಶ್ಯಾನುಭೋಗರ ಕರ್ತವ್ಯಗಳು ಅವರ ಪೂರ್ಣ ಗಮನವನ್ನು ಸೆಳೆಯುವಂತಹದಾಗಿರುತ್ತದೆ. ಒಬ್ಬ ಶ್ಯಾನುಭೋಗನಿಗೆ ಒಂದು ವೃತ್ತಿ ಎಂದು ನಿಗದಿಪಡಿಸಿರುವ ನಿಯಮ ಅವನ ವರಮಾನವನ್ನು ಕಡಿತಗೊಳಿಸಿದೆ. ಒಂದು ವೃತ್ತಿಗೆ ಒಬ್ಬ ಶ್ಯಾನುಭೋಗನನ್ನು ನೇಮಕ ಮಾಡಬೇಕೆಂಬ ವಿಚಾರದಲ್ಲಿನ ನಿಯಮವನ್ನು ಸಡಿಲಿಸುವುದು ಉತ್ತಮ ಎಂಬ ಸಲಹೆಯು ವ್ಯಕ್ತವಾಯಿತು. ಗ್ರಾಮಲೆಕ್ಕ ಪತ್ರಗಳನ್ನು ಸೂಕ್ತ ರೀತಿಯಲ್ಲಿ ತಯಾರು ಮಾಡವುದರಲ್ಲಿ ಶ್ಯಾನುಭೋಗರುಗಳಿಗೆ ತರಬೇತಿ ನೀಡಬೇಕೆಂದು ಮತ್ತು ಭೂಸಮೀಕ್ಷೆ ಕಾರ್ಯದಲ್ಲಿ ತರಬೇತಿಯನ್ನು ಜಿಲ್ಲಾ ಭೂ ಸಮೀಕ್ಷಕರು ಒದಗಿಸುತ್ತಿದ್ದಾರೆ. ಶ್ಯಾನುಭೋಗರುಗಳ ಕೆಲಸ ಪ್ರತಿವರ್ಷವೂ ಹೆಚ್ಚುತ್ತಿದೆ. ರೈತರು ತಮ್ಮ ಸ್ವ ಇಚ್ಛೆಯಂತೆ ಪಾವತಿ ಮಾಡುತ್ತಿದ್ದ ಅಧಿಕ ಉಪಲಬ್ದಗಳನ್ನು ಸರ್ಕಾರವು ಹಿಂತೆಗೆದುಕೊಂಡಿದೆ, ಸರ್ಕಾರದ ಹಣವನ್ನು ದುರುಪಯೋಗ ಮಾಡುವ ಪ್ರಯೋಜನೆಗೆ ಮತ್ತು ಭ್ರಷ್ಟಾಚಾರಕ್ಕೆ ಒಳಗಾಗದೆ. ಅದನ್ನು ಮೆಟ್ಟಿ ನಿಲ್ಲುವಂತಹ ವೇತನ ಶ್ಯಾನುಭೋಗರುಗಳದ್ದಾಗಿರತಕ್ಕದ್ದು ಎಂದು ಸದಸ್ಯರು ಸಲಹೆ ನೀಡಿದರು ಗ್ರಾಮದ ಶಾಲಾ ಮಾಸ್ತರು ಮತ್ತು ಇತರೆ ನೌಕರರಿಗೆ ಹೋಲಿಸಿದರೆ ಶ್ಯಾನುಭೋಗರಿಗೆ ನೀಡುತ್ತಿರುವ ವೇತನ ಬಹಳ ಕಡಿಮೆ ಎಂದು ಚಿತ್ರದುರ್ಗದ ಶ್ರೀ ಶ್ರೀನಿವಾಸರಾಯರು ಸೂಚಿಸಿದರು, ೧೮೬೪ರಲ್ಲಿ ನಿಗದಿಪಡಿಸಿದ ಪೋಟ್ಗಿಯ ಶ್ರೇಣಿಯು ಜಾರಿಯಲ್ಲಿದೆ. ಆದರೆ ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ ಜೀವನ ನಿರ್ವಹಣಾ ವೆಚ್ಚವು ಹೆಚ್ಚಿರುತ್ತದೆ. ಭೂ ಕಂದಾಯವು ಕೂಡಾ ಗಣನೀಯವಾಗಿ ಹೆಚ್ಚಿದೆ. ಈಗ ಪಡೆಯುತಿರುವ ಹಣವನ್ನು ಶೇಕಡ ೧೦ ರಿಂದ ೧೫ ಕ್ಕೆ ಏರಿಸುವ ಆಲೋಚನೆ ಇದೆ ಎಂದು ಸರ್ಕಾರವು ಆಶ್ವಾಸನೆಯನ್ನು ನೀಡಿತು, ಶ್ಯಾನುಭೋಗರ ಅನುವಂಶಿಕ ಹಕ್ಕುಗಳನ್ನು ಕೈಬಿಡಬೇಕೆಂದು ಈ ಹುದ್ದೆಗಳಿಗೆ ಸರ್ಕಾರಿ ನೌಕರರ ನೇಮಕಾತಿ ನಡೆಸುವಂತೆಯೇ ನಡೆಯಬೇಕು ನಿಯಂತ್ರಿಸಬೇಕು ಮತ್ತು ಪೋಟ್ಗಿಯನ್ನು ವೇತನವನ್ನಾಗಿ ಮಾರ್ಪಾಡು ಮಾಡತಕ್ಕದ್ದು. ಪೋಟ್ಗಿಯನ್ನು ವರ್ಷದ ಕೊನೆಯಲ್ಲಿ ಪಾವತಿ ಮಾಡುವುದರಿಂದ ಶ್ಯಾನುಭೋಗರುಗಳು ಕಂದಾಯ ಕರ ವಸೂಲಾತಿಗಳನ್ನು ಬಳಸಿಕೊಳ್ಳುವ ಪ್ರಲೋಬನೆಗೆ ಒಳಗಾಗಬಹುದು, ಹಣದ ಅಕ್ರಮ ವಿನಿಯೋಗದ ಪ್ರಕರಣಗಳು ಸಾಮಾನ್ಯವಾಗಿವೆ. ಶ್ಯಾನುಭೋಗರುಗಳು ಅವರ ವ್ಯಾಪ್ತಿಯ ಗ್ರಾಮಗಳಲ್ಲಿ ಅತಿಯಾದ ಕುಚೇಷ್ಟೆಗಳನ್ನು ಮಾಡುವಂತಾಗಿದೆ. ಅವರನ್ನು ವರ್ಗಾವಣೆ ಸೂತ್ರಕ್ಕೆ ಸಿಲುಕುವಂತೆ ಮಾಡದಿದ್ರೆ ಅವರನ್ನು ನಿಯಂತ್ರಿಸುವುದು, ಸರಿಪಡಿಸುವುದು ಸಾಧ್ಯವಾಗುವುದಿಲ್ಲ ಎಂಬ ಚಿಕ್ಕಮಗಳೂರಿನ ಶ್ರೀ ಸಿ.ರಸೂಲ್‌ಖಾನ್ ಅವರ ಪ್ರಶ್ನೆಗೆ ಈ ಪದ್ಧತಿಯನ್ನು ಬದಲಾಯಿಸಲು ಸಾಧ್ಯವಾಗುವು ದಿಲ್ಲವೆಂದು ಸರ್ಕಾರವು ಸ್ಪಷ್ಟಪಡಿಸಿತು.

೨.೨. ಮೈಸೂರು ಸಂಸ್ಥಾನದಲ್ಲಿ ಭೂಆಡಳಿತ ವ್ಯವಸ್ಥೆಯಲ್ಲಿ ದಲಿತರು

ಗ್ರಾಮ ಅಥವಾ ಹಳ್ಳಿ ಎನ್ನುವುದು ಜೈವಿಕ ಮತ್ತು ಸುವ್ಯವಸ್ಥಿತವಾಗಿ ಬೆಳೆದ ಆರ್ಥಿಕ ರಚನೆಯಿಂದ ಕೂಡಿದ ಸ್ವಾವಲಂಬನೆಯ ಘಟಕ, ಜನತೆಯ ಅಗತ್ಯಗಳನ್ನು ಒದಗಿಸುವ ದೃಷ್ಟಿಯಿಂದ ಸಾಮೂಹಿಕವಾಗಿ ಹಳ್ಳಿಯ ಜನರು ತಂಡದಂತೆ ಕೆಲಸ ನಿರ್ವಹಿಸುವರು. ಬಡಗಿ, ಕಮ್ಮಾರ, ಕುಂಬಾರ, ಚಮ್ಮಾರ, ದೋಬಿ, ಕ್ಷೌರಿಕ, ಗೋವಳಿಗ, ಹಾಲು ಮಾರುವವನು, ನೀರು ಹೊರುವವನು, ಜಲಗಾರ, ಜೋಯಿಸ, ನಾಟಿವೈದ್ಯ, ಸಂಗೀತಗಾರ, ಪುರೋಹಿತ, ಗಾರುಡಿಗ ಮುಂತಾದವರು ಶತಮಾನಗಳಿಂದ ಗ್ರಾಮದ ಕಾರ್ಯಗಳಲ್ಲಿ ತಮ್ಮ ಕೊಡುಗೆಗಳನ್ನು ನೀಡುತ್ತಲೇ ಬಂದಿದ್ದಾರೆ ಪ್ರತಿಯೊಬ್ಬ ರೈತನು ಹೊಂದಿದ್ದ ಭೂಮಿಯ ವಿಸ್ತೀರ್ಣದಲ್ಲಿ ಬಹಳ ವ್ಯತ್ಯಾಸವಿತ್ತು. ರೈತರ ನಂತರ ಬರುವವರೆಂದರೆ ಶ್ರಮಜೀವಿ ದಲಿತರು, ಜಮೀನ್ದಾರರ ಭೂಮಿಯಲ್ಲಿ ಉಳುಮೆ ಮಾಡಲು ಭೂರಹಿತ ವರ್ಗದವರ ನೆರವು ಅವಶ್ಯವಾಗಿತ್ತು. ಭೂರಹಿತವರ್ಗದವರು ಸ್ವಂತ ಭೂಮಿಯನ್ನು ಹೊಂದಿರದೆ ಬೇರೆಯವರ ಭೂಮಿಯಲ್ಲಿ ಕೂಲಿಯಾಳುಗಳಾಗಿ ದುಡಿಯುತ್ತಿದ್ದು ಶೋಷಣೆಗೊಳಗಾದ ಕೆಳವರ್ಗದವರಾಗಿದ್ದರು. ಭೂಮಿಯನ್ನು ತ್ಯಜಿಸಿ ಬೇರೆ ಊರಿಗೆ ಹೋದವರಿಂದ ಭೂಕಂದಾಯವನ್ನು ವಸೂಲಿ ಮಾಡಲು ಸಾಧ್ಯವಿಲ್ಲದೆ ಹಳ್ಳಿಯ ಆದಾಯ ಕಡಿಮೆಯಾಗುತ್ತಿತ್ತು, ಅದೇ ಹಳ್ಳಿಯಲ್ಲಿ ವಾಸಿಸಿದ್ದರೆ ಅಂತಹವರಿಂದ ಅವರು ಹೊಂದಿದ್ದ ಭೂಮಿಯ ಮೇಲಿನ ಕಂದಾಯವನ್ನು ವಸೂಲಿ ಮಾಡಲಾಗುತ್ತಿತ್ತು ಗುಲಾಮಳಾದ ಮನೆ ಕೆಲಸದವಳ ಬೆಲೆ ೫ ರಿಂದ ೧೨ ಟಂಕಗಳು. ವೇಶ್ಯೆಯ ಬೆಲೆ ೨೦ ರಿಂದ ೪೦ ಟಂಕಗಳು ಒಬ್ಬ ಗುಲಾಮನ ಬೆಲೆ ೨೦ ರಿಂದ ೩೦ ಟಂಕಗಳು, ಉತ್ತಮ ದರ್ಜೆಯ ಕೆಲವು ಗುಲಾಮರನ್ನು ೧೦೦ ರಿಂದ ೨೦೦ ಟಂಕಗಳ ಬೆಲೆಗೂ ಮಾರಾಟ ಮಾಡಲಾಗುತ್ತಿತ್ತು ವೇಶ್ಯಾಂಗನೆಯರ ತರಬೇತಿಯು ಆರ್ಥಿಕ ನಿಯೋಜನೆಯ ಪ್ರಮುಖ ಕ್ಷೇತ್ರವಾಗಿತ್ತು, ವೇಶ್ಯಾಂಗನೆಯರನ್ನು ಬಹಳ ಖರ್ಚು ಮಾಡಿ ಅತ್ಯಂತ ಎಚ್ಚರಿಕೆಯಿಂದ ಸಾಕಿ ಬೆಳೆಸುತ್ತಿದ್ದರು. ಬಡವರು ಮಣ್ಣಿನ ಗೋಡೆಗಳ ಮೇಲೆ ಹುಲ್ಲಿನ ಅಥವಾ ಗರಿಗಳ ಹೊದಿಕೆಯಿಂದ ಕೂಡಿದ ಛಾವಣಿಯ ಗುಡಿಸಲುಗಳಲ್ಲಿ ಬಹುಸಂಖ್ಯೆಯಲ್ಲಿ ವಾಸಿಸುತ್ತಿದ್ದರು. ವಸ್ತುವಿನಿಮಯ ಪದ್ಧತಿ ಕುಶಲಕರ್ಮಿಗಳ ಕುಟುಂಬಗಳಿಗೆ ಗ್ರಾಮದ ಬೆಳೆಯಲ್ಲಿ ನಿಗದಿತ ಪ್ರಮಾಣದಲ್ಲಿ ಪಾಲು ಕೊಟ್ಟು ಅದರ ಜೊತೆ ಜೊತೆಗೆ ಹೆಚ್ಚುವರಿ ಕೆಲಸ ಮಾಡಿಸಿಕೊಂಡರೆ ಅವರಿಗೆ ನಗದು ರೂಪದಲ್ಲಿಯೇ ಅಥವ ಉತ್ಪನ್ನಗಳ ರೂಪದಲ್ಲಿಯೇ ಕೊಡುವ ಪದ್ಧತಿಯು ರೂಢಿಗೆ ಬಂತು.[೫] ಕೃಷಿ ಕೆಲಸವನ್ನು ಕೈಬಿಟ್ಟು ನೇಯ್ಗೆ ಮತ್ತಿತರೆ ವೃತ್ತಿಯನ್ನು ಆಯ್ದುಕೊಂಡದ್ದು ಹಾಗೂ ಅದೇ ರೀತಿ ಕುಶಲಕರ್ಮಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿರುವ ನಿದರ್ಶನಗಳು ಬಹಳ ಕಡಿಮೆಯಿದ್ದವು. ವೃತ್ತಿಸಂಘವು ಜಾತಿ ಪದ್ಧತಿಯ ಮೇಲೆ ಆಧಾರಿತವಾದ ವೃತ್ತಿಪರ ಸಂಘಟನೆಯಾಗಿದೆ, ಒಂದು ನಿರ್ದಿಷ್ಟ ವೃತ್ತಿಯನ್ನು ಅನುಸರಿಸುವವರು ಮತ್ತು ಒಂದು ನಿರ್ದಿಷ್ಟ ಸಮುದಾಯಕ್ಕೆ

ಸೇರಿದ ಪ್ರತಿಯೊಂದು ವರ್ಗದ ಕೆಲಸಗಾರರು ತಮ್ಮದೇ ಆದ ಒಂದು ವೃತ್ತಿ ಸಂಘವನ್ನು ರೂಪಿಸಿಕೊಂಡಿದ್ದರು ನೇಕಾರರ, ಕುಂಬಾರರ, ಬಟ್ಟೆಗೆ ರಂಗು ಹಾಕುವವರ, ಗಾಣಿಗರ, ಚರ್ಮ್ಮಾರ ದರ್ಜಿಗಳ, ಮಡಿವಾಳರ, ಕ್ಷೌರಿಕರ, ವೃತ್ತಿ ಸಂಘಗಳು ಪ್ರಮುಖವಾಗಿದ್ದವು, ಕ್ರಿಶ. ೧೯೦೦ರಲ್ಲಿ ಭಾರತದಲ್ಲಿ ವ್ಯವಸಾಯ ಮಾಡುತ್ತಿದ್ದ ಅರ್ಧದಷ್ಟು ಭೂಮಿಯು ಮೊಗಲರ ಕಾಲದಲ್ಲಿ ವ್ಯವಸಾಯಕ್ಕೆ ಒಳಪಟ್ಟಿತ್ತು. ಜಮೀನ್ದಾರರು ಕೆಲವು ಕಡೆ ಭೂಮಿಯ ಮೇಲೆ ಹೆಚ್ಚು ಅಧಿಕಾರವನ್ನು ಹೊಂದಿದ್ದರು. ಜಮೀನ್ದಾರರನು ತಮ್ಮ ಅಧೀನದಲ್ಲಿದ್ದ ಭೂಮಿಯನ್ನು ರೈತರಿಗೆ ಗುತ್ತಿಗೆ ರೂಪದಲ್ಲಿ ಹಂಚುತ್ತಿದ್ದರು, ರೈತನು ಭೂಮಿಯನ್ನು ವ್ಯವಸಾಯ ಮಾಡಿ ಗುತ್ತಿಗೆ ಸಲ್ಲಿಸಬೇಕಾಗಿತ್ತು, ಜಮೀನ್ದಾರನು ತನಗೆ ಇಷ್ಟಬಂದವರಿಗೆ ಜಮೀನನ್ನು ಗುತ್ತಿಗೆ ನೀಡಬಹುದಾಗಿತ್ತು. ಜಮೀನ್ದಾರಿ ಹಕ್ಕನ್ನು ಪಾಲು ಮಾಡುವ, ಮಾರಾಟ ಮಾಡಲು ಅವಕಾಶವಿತ್ತು. ಈ ರೀತಿ ಜಮೀನ್ದಾರಿ ಹಕ್ಕನ್ನು ಕೊಂಡುಕೊಂಡವರು ವಿವಿಧ ಜಾತಿಗೆ ಸೇರಿದವರಾಗಿರುತ್ತಿದ್ದರು. ಕ್ಷಾಮ ಅಥವಾ ಬರಗಾಲದ ಸಂದರ್ಭದಲ್ಲಿ ಉಂಟಾಗುವ ನಿರುದ್ಯೋಗ ಎದ್ದು ಕಾಣುತ್ತಿತ್ತು ಮತ್ತು ಆಹಾರವೇ ಇಲ್ಲದಿರುವ ಪ್ರಶ್ನೆಯಾಗಿತ್ತು. ಕ್ಷಾಮದಿಂದ ಸಂಕಷ್ಟಕ್ಕೊಳಗಾದ ವ್ಯಕ್ತಿಗಳು ಎಷ್ಟೊಂದು ಚರ್ಮ ಮೂಳೆಗಂಟಿಕೊಂಡಂತೆ ಇದ್ದರೆಂದರೆ ಅವರ ಕಡೆ ಯಾರಾದರು ನೋಡುವುದು ಅಪರೂಪವಾಗಿತ್ತು, ಇಡೀ ದೇಶ ಮರಳುಗಾಡಿನಂತಿದ್ದು ನೆಲವನ್ನು ಉಳಲು ಯಾರೂ ಉಳಿದಿರಲಿಲ್ಲ. ಮಳೆಯ ಅಭಾವವೇ ವ್ಯಾಪಕ ಕ್ಷಾಮಗಳಿಗೆ ಮುಖ್ಯವಾದ ಕಾರಣವಾಗಿದ್ದು, ಆಹಾರದ ಅಭಾವ ಉಂಟಾಗಿ ಅನೇಕರು ಹಸಿವಿನಿಂದ ಸತ್ತರು ಜನರು ಒಂದು ರೊಟ್ಟಿಯ ತುಂಡಿಗಾಗಿ ತಮ್ಮ ಜೀವವನ್ನು ತೆರಲು ಸಿದ್ದವಾಗಿದ್ದರೂ ಅವರಿಗೆ ಯಾರೂ ಆ ರೊಟ್ಟಿಯ ತುಂಡನ್ನು ಕೊಡುವವರಿರಲಿಲ್ಲ, ಕೆಲವು ಹೆದ್ದಾರಿಗಳು ಶವಗಳಿಂದ ತುಂಬಿದ್ದು. ಅದು ದುಸ್ಸಾಧ್ಯವಾದ ದುರ್ವಾಸನೆಗೆ ಕಾರಣವಾಗಿತ್ತು. ಮಳೆ ಎಷ್ಟು ಕಡಿಮೆ ಇತ್ತೆಂದರೆ, ಬಿತ್ತಿದ ಬೀಜಗಳು ಮೊಳೆಯಲಿಲ್ಲ, ನೆಲದಲ್ಲಿ ಹುಲ್ಲು ಹುಟ್ಟಲಿಲ್ಲ, ಒಡೆದ ಕುಟುಂಬ ಜೀವನ, ಕೃಷಿ ಬಂಡವಾಳದ ನಷ್ಟ ಗುರಿಯಿಲ್ಲದ ಅಲೆದಾಟ, ಸ್ವಇಚ್ಛೆಯ ಗುಲಾಮಗಿರಿ, ಆತ್ಮಹತ್ಯೆಯಿಂದ ಅಥವಾ ತೀವ್ರ ಹಸಿವಿನಿಂದಾದ ಸಾವುಗಳು ಕ್ರಿಶ. ೧೬೩೦ರ ಕ್ಷಾಮದ ಪರಿಣಾಮಗಳಾಗಿದ್ದವು. ಪಲ್ಲಕ್ಕಿಗೆ ಬಾಡಿಗೆ ತೆರುವ ಸಾಮರ್ಥ್ಯವುಳ್ಳವರು ಪಲ್ಲಕಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ನಾಲ್ಕರಿಂದ ಆರು ಜನರು ಈ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗುತ್ತಿದ್ದರು. ಒಂದು ಪಲ್ಲಕ್ಕಿಯಲ್ಲಿ ಒಬ್ಬನನ್ನು ಕರೆದೊಯ್ಯಬೇಕಾದರೆ ವಿಶ್ರಾಂತಿಯು ಸೇರಿದಂತೆ ಹನ್ನೆರಡು ಮಂದಿ ಅದನ್ನು ಹೊರುವವರು ಬೇಕಾಗುತ್ತಿತ್ತು.[೬] ಪಲ್ಲಕ್ಕಿ ಹೊರುವ ಒಬ್ಬ ವ್ಯಕ್ತಿಗೆ ತಿಂಗಳಿಗೆ ನಾಲ್ಕು ರೂ ನೀಡಬೇಕಾಗಿತ್ತು, ಆದರೆ ಅರವತ್ತು ದಿನಗಳಿಗಿಂತ ಹೆಚ್ಚು ಕಾಲ ಪ್ರಯಾಣ ಮಾಡಬೇಕಾದರೆ ತಿಂಗಳಿಗೆ ತಲಾ ಐದು ರೂಪಾಯಿ ಕೊಡಬೇಕಾಗಿತ್ತು ನದಿ ದಾಟಲು ಮತ್ತು ಕಷ್ಟಕರವಾದ ಇಳಿಜಾರು ಪ್ರದೇಶಗಳಲ್ಲಿ ಸಾರಿಗೆಗಾಗಿ ಎತ್ತಿನ ಗಾಡಿಗಳನ್ನು ಉಪಯೋಗಿಸುತ್ತಿದ್ದರು, ಸಾರಿಗೆ ಸೌಲಭ್ಯಗಳಲ್ಲಿ

ಅಂದು ಎತ್ತಿನ ಗಾಡಿಗೆ ವಿಶೇಷತೆಯಿತ್ತು. ಗೋಲ್ಕೊಂಡದಲ್ಲಿ ೫೦೦ ರಿಂದ ೬೦೦ ಕುದುರೆಗಳು ಚರ್ಮದ ಚೀಲಗಳಲ್ಲಿ ಹೆಂಡವನ್ನು ಹೊತ್ತುಕೊಂಡು ಪ್ರತಿದಿನವೂ ಪಟ್ಟಣವನ್ನು ಪ್ರವೇಶ ಮಾಡುತ್ತಿದ್ದವು ರಾಜ ಮತ್ತು ಅವನ ಪರಿವಾರಕ್ಕೆ ಬೇಕಾಗುತ್ತಿದ್ದ ಪ್ರತಿಯೊಂದು ಬಗೆಯ ಸಾಮಾನುಗಳನ್ನು ಆನೆಗಳ ಮೇಲೆ ಕಳುಹಿಸುವ ವ್ಯವಸ್ಥೆ ಮಾಡಿದ್ದರೂ, ೩೦,೦೦೦ ದಷ್ಟು ಹೊರೆಯಾಳುಗಳನ್ನು ನೇಮಿಸಲಾಗಿತ್ತೆಂದು ಬರ್ನಿಯರ್ ದಾಖಲಿಸುತ್ತಾರೆ. ಹತ್ತು ದಿನಗಳ ಪ್ರಯಾಣಕ್ಕೆ ಒಬ್ಬೊಬ್ಬ ಹೊರೆಯಾಳುಗಳಿಗೆ ಕೂಲಿಯ ದರ ತಲಾ ಎರಡು ರೂಪಾಯಿಗಳಾಗಿತ್ತು. ರೈತರು ಕುಶಲಕರ್ಮಿಗಳು ಮನೆ ಕೆಲಸ ಮಾಡುವವರು ಮುಂತಾದ ಜನಸಾಮಾನ್ಯರು ಅತ್ಯಂತ ದಾರಿದ್ರ್ಯದ ಜೀವನ ನಡೆಸುತ್ತಿದ್ದರೆಂದು ಮಧ್ಯಕಾಲೀನ ಅವಧಿಯಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ವಿವರಿಸುತ್ತಾರೆ. ವ್ಯವಸಾಯಕ್ಕೆ ಯೋಗ್ಯವಾದ ಬಂಜರು ಭೂಮಿ ಯಥೇಚ್ಛವಾಗಿದ್ದರೂ ಜಮೀನು ವಿತರಣೆ, ಒಡೆತನದಲ್ಲಿ ಹೆಚ್ಚು ಅಸಮಾನತೆಯನ್ನು ಕಾಣಬಹುದು, ಭೂರಹಿತ ರೈತರ ಒಂದು ಚಿಕ್ಕವರ್ಗದಲ್ಲಿ ಚರ್ಮ ಹದ ಮಾಡುವವರ, ಕುಂಬಾರರ ಮತ್ತು ಮಡಿವಾಳರಂತಹ ಗ್ರಾಮದ ಸೇವಾ ವರ್ಗಕ್ಕೆ ಸಮಾನರಾದಂತಹವರು, ಅವರು ಅಲ್ಪ ಸ್ವಲ್ಪ ಜಮೀನು ಹೊಂದಿದ್ದವರಾಗಿರಬಹುದು ಅಥವಾ ಇಲ್ಲದೇ ಇದ್ದವರಾಗಿರಬಹುದು, ಅವರು ಇತರರ ಜಮೀನಿನಲ್ಲಿ ಕೆಲಸ ಮಾಡಿದುದಕ್ಕೆ ಬೆಳೆದ ಉತ್ಪನ್ನದಲ್ಲಿ ಒಂದಿಷ್ಟು ಪಾಲನ್ನು ಪಡೆಯುತ್ತಿದ್ದರು. ಕೆಲವೊಮ್ಮೆ ಅವರಿಗೆ ಬೇಸಾಯ ಮಾಡಿದ ಜಮೀನಿನ ಪಕ್ಕದಲ್ಲೇ ಬಂಜರು ಭೂಮಿ ಎಂದು ವರ್ಗೀಕರಿಸಿದ್ದ ಭೂಮಿಯಲ್ಲಿ ಅಲ್ಪ ಸ್ವಲ್ಪ ಜಮೀನನ್ನು ಅವರ ದುಡಿಮೆಗೋಸ್ಕರ ನೀಡಲಾಗುತ್ತಿತ್ತು. ಹಳ್ಳಿಯಲ್ಲಿದ್ದಂತಹ ಜನರ ಆರ್ಥಿಕ ಅಸಮಾನತೆಯು ಹಾಗೂ ಭೂಮಾಲೀಕರ ಮತ್ತು ಭೂರಹಿತ ರೈತರ ಸ್ಥಿತಿಗತಿಗಳು ಮನದಟ್ಟಾಗುತ್ತವೆ. ರೈತರ ಜೀವನ ಬಡತನದಿಂದ ಕೂಡಿತ್ತು. ಅವರ ಅವಶ್ಯಕತೆಗಳು ತುಂಬಾ ಕಡಿಮೆ ಇದ್ದವು, ಅಭಾವ ಮತ್ತು ಕ್ಷಾಮ ಪರಿಸ್ಥಿತಿಗಳ ಸಂದರ್ಭದಲ್ಲಿ ಕಾಡಿನ ಹಣ್ಣು ಹಂಪಲುಗಳನ್ನು ಮತ್ತು ಕೆಲವು ಗಿಡಗಳ ಬೇರನ್ನು ತಿಂದು ಜೀವನ ನಡೆಸುತ್ತಿದ್ದರು. ಹೆಂಡ ಮತ್ತು ಸಾರಾಯಿಯ ಸೇವನೆಯು ಸಾಮಾನ್ಯವಾಗಿ ತೀರ ಪ್ರದೇಶಗಳಲ್ಲಿ ಹೆಚ್ಚಾಗಿತ್ತು. ರೈತರು ಮತ್ತು ಕೆಳವರ್ಗದ ಜನರು ಬರಿಗಾಲಿನಲ್ಲಿ ನಡೆಯುತ್ತಿದ್ದರು. ರೈತರ ದೇಹದ ಬಹುಭಾಗ ನಗ್ನತೆಯಿಂದ ಕೂಡಿತ್ತೆಂದು ಇಂಗ್ಲಿಷ್ ಪ್ರವಾಸಿಗರು ವಿವರಿಸಿದ್ದಾರೆ,[೭] ರೈತರು ಸಾಮಾನ್ಯವಾಗಿ ಹುಲ್ಲಿನಿಂದ ಹೊದಿಸಿದ ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದರು. ಗುಡಿಸಲುಗಳ ಸುತ್ತಲೂ ಮಣ್ಣಿನ ಗೋಡೆಯನ್ನು ಕಟ್ಟಿ ಬೊಂಬುಗಳಿಂದ ಮೇಲ್ಛಾವಣಿಯನ್ನು ಸಿದ್ದಪಡಿಸಿ ಅದರ ಮೇಲೆ ಹುಲ್ಲನ್ನು ಹೊದಿಸಲಾಗುತ್ತಿತ್ತು, ಮಣ್ಣಿನಿಂದ ಮಾಡಿದ ಮಡಿಕೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉಪಯೋಗಿಸುತ್ತಿದ್ದರು. ರೈತರು ಬಡತನದ ಬೇಗೆಯಲ್ಲಿದ್ದು ಕ್ಷಾಮಗಳ ದಿನಗಳಲ್ಲಿ, ಪ್ರವಾಹದ ಸಂದರ್ಭದಲ್ಲಿ ಅನೇಕ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದರು. ಕ್ಷಾಮದ ಅವಧಿಯಲ್ಲಿ ಜನರು ಗ್ರಾಮಗಳನ್ನು ತೊರೆದು ಆಹಾರ ಮತ್ತು

ನೀರನ್ನು ಹುಡುಕಿಕೊಂಡು ವಲಸೆ ಹೋಗುತ್ತಿದ್ದರು. ವಿವಿಧ ರೀತಿಯ ಗೆಡ್ಡೆ ಗೆಣಸು, ಪ್ರಾಣಿಗಳ ಮಾಂಸವನ್ನು ತಿಂದು ಜೀವಿಸುತ್ತಿದ್ದರು. ಗುಜರಾತ್‌ನಲ್ಲಿ ೧೫೬೦ರ ದಶಕದಲ್ಲಿ ಭೀಕರ ಕ್ಷಾಮವಾದಾಗ ಜನರು ತಮ್ಮ ಮಕ್ಕಳನ್ನು ಅಲ್ಪ ಬೆಲೆಗೆ ಮಾರಿದುದರ ಬಗ್ಗೆ ಮಾಹಿತಿ ದೊರಕುತ್ತದೆ. ಇಡೀ ದೇಶವನ್ನು ಕೆಟ್ಟದಾಗಿ ಉಳಲಾಗುತ್ತಿದೆ. ನೀರಾವರಿಯ ಸೌಲಭ್ಯವಿಲ್ಲದೆ ಅದರಲ್ಲಿ ಬಹುಪಾಲು ನಿಷ್ಫಲವಾಗಿದೆ. ಜನರ ಕಷ್ಟನಷ್ಟಗಳನ್ನು ಕುರಿತು ಸರಿಯಾದ ಚಿತ್ರವನ್ನು ಕೊಡಲಾಗುತ್ತಿಲ್ಲ. ದೊಣ್ಣೆ ಮತ್ತು ಚಾವಟಿಗಳು, ಉಳಿದವರ ಹಿತಕ್ಕಾಗಿ ಅವರು ನಿರಂತರವಾಗಿ ದುಡಿಯುವಂತೆ ಬಲಾತ್ಕರಿಸುತ್ತವೆ. ಗವರ್ನರುಗಳ ದಬ್ಬಾಳಿಕೆಯಿಂದ ರೈತರು ಊರುಬಿಟ್ಟು ಓಡಿ ಹೋದ ಇಡೀ ಪ್ರದೇಶಗಳೇ ಮರುಭೂಮಿಗಳ ಹಾಗೆ ಕಾಣುವುದನ್ನು ಭಾರತದಲ್ಲಿ ನೋಡಬಹುದು. ಕ್ರಿಶ. ೧೭೫೦ ರವರೆಗೆ ಮಧ್ಯಕಾಲಿನ ಭಾರತ ಆರ್ಥಿಕತೆಯ ಮುಂದುವರಿದ ಭಾಗವಾಗಿ ಬ್ರಿಟಿಷ್ ಅಧಿಪತ್ಯದ ಮೈಸೂರು ಅರಸರ ಕಾಲದಲ್ಲಿ ಕಂಡುಕೊಂಡ ಬದಲಾವಣೆಗಳನ್ನು ಅಧ್ಯಯನದ ಅವಧಿಯಲ್ಲಿ ಗುರುತಿಸಲು ಹಿನ್ನೆಲೆಯಾಗಿ ಚರ್ಚಿಸಲಾಗಿದೆ.[೮]

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಗ್ರಾಮಗಳಲ್ಲಿ ಬಹುಮಟ್ಟಿನ ಸ್ವಾಯತ್ತತೆ ಇತ್ತು. ಮೌರ್ಯರ ಅಶೋಕ ಮತ್ತು ಶಾತವಾಹನರ ಕಾಲದ ಶಾಸನಗಳಲ್ಲಿ ಅಲ್ಲದಿದ್ದರೂ ಮುಂದಿನ ೬ನೆಯ ಶತಮಾನದ ಗಂಗ ಶಾಸನಗಳಲ್ಲಿ ನಂತರದ ಪಲ್ಲವ, ನೊಳಂಬ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಶಾಸನಗಳಲ್ಲೂ ಪ್ರಜಾಸತ್ತಾತ್ಮಕವಾದ ಗ್ರಾಮಾಡಳಿತ ಸುಸ್ಪಷ್ಟವಾಗಿ ಕಂಡುಬರುತ್ತದೆ. ಕೇಂದ್ರದ ಮಟ್ಟದಲ್ಲಿ ರಾಜನೇ ಪ್ರಭುವಾಗಿದ್ದರೂ, ಗ್ರಾಮದ ಮಟ್ಟದಲ್ಲಿ ಊರು, ಒಕ್ಕಲು ಅಥವಾ ಮಹಾಜನರು ಊರಿನ ಗೌಡ ಅಥವಾ ಅಗ್ರಹಾರದ ಊರೊಡೆಯರ ನೇತೃತ್ವದಲ್ಲಿ ಸಭೆ ಸೇರಿ ನಿರ್ಣಯಗಳನ್ನು ಮಾಡಿಕೊಳ್ಳುತ್ತಿದ್ದರು. ಗ್ರಾಮದ ಸಮಸ್ತರೂ, ಪ್ರಜೆಗಳು ಹಾಗೂ ಹಲವು ಹದಿನೆಂಟು ಜಾತಿಯವರು, ಹಿಟ್ಟಿನವರು ಕೆಲವೊಮ್ಮೆ ಈ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಗಾವುಂಡ ಅಥವಾ ಊರೊಡೆಯನಲ್ಲದೆ ರಾಜಪ್ರತಿನಿಧಿಯಾದ ಸ್ಥಳೀಯ ಅಧಿಕಾರಿಯೂ ಹಾಜರಿರುತ್ತಿದ್ದ. ಗ್ರಾಮಸಭೆಗಳು ಕೆಲವೊಂದು ದಾನ ಅಥವಾ ದತ್ತಿಗಳನ್ನು ಸ್ವೀಕರಿಸಿ. ಸದ್ವಿನಿಯೋಗಕ್ಕೆ ವ್ಯವಸ್ಥೆ ಮಾಡುತ್ತಿದ್ದವು. ವಿವಾದಗಳನ್ನು ಇತ್ಯರ್ಥ ಮಾಡುತ್ತಿದ್ದವು. ಗ್ರಾಮದ ವ್ಯಾಪ್ತಿಯ ದೇವಸ್ಥಾನ, ಕೆರೆ, ಶಾಲೆ, ಅತಿಥಿಗೃಹ, ಅರವಟ್ಟಿಗೆಗಳ ನಿರ್ಮಾಣ ಮತ್ತು ಮೇಲ್ವಿಚಾರಣೆಗಳು ಗ್ರಾಮಾಡಳಿತದ ವ್ಯಾಪ್ತಿಗೆ ಸೇರಿದ್ದವು. ಹಾಗೆಯೇ ಅಸಹಾಯಕರು, ದುರ್ಬಲರು, ಅನಾಥರಿಗೆ ಹಾಗೂ ಸಂಕಟಪೀಡಿತರಿಗೆ ನೆರವನ್ನು ಕೊಡುವುದು ಗ್ರಾಮಾಡಳಿತದ ಕೆಲಸವಾಗಿತ್ತು.

ಗೌಡ, ಗಾಮುಂಡ, ಗಾವುಂಡ, ಪಟೇಲ, ಪಾಟೀಲ ಎಂಬ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಅಧಿಕಾರಿಯು ಗ್ರಾಮಾಡಳಿತದ ಸೂತ್ರಧಾರನಾಗಿರುತ್ತಿದ್ದನು. ಇವನು ರಾಜನಿಂದ ಅಥವಾ ಅವನ ಅಧೀನ ಅಧಿಕಾರಿಗಳಿಂದ ನಿಯುಕ್ತನಿರಬಹುದು ಅಥವಾ ಗ್ರಾಮಸ್ಥರಿಂದ ನೇಮಕಹೊಂದಿ ಪ್ರಭುತ್ವದ ಅನುಮೋದನೆ ಪಡೆದಿರಬಹುದೆಂದು ಕೆಲವು ಶಾಸನಗಳು

ಉಲ್ಲೇಖಿಸುತ್ತವೆ. ಈತ ಗ್ರಾಮಸ್ಥರ ಪ್ರತಿನಿಧಿಯಾಗಿದ್ದು, ಸರ್ಕಾರದ ಪ್ರತಿನಿಧಿಯಾಗಿರುತ್ತಿದ್ದ, ಕಂದಾಯ ವಸೂಲಿ ಮಾಡುವುದು, ಚಿಕ್ಕಪುಟ್ಟ ಕೌಟುಂಬಿಕ ಜಮೀನಿನ ವಿವಾದಗಳನ್ನು ಬಗೆಹರಿಸುವುದೂ ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ನೋಡಿಕೊಳ್ಳುವುದು ಇವನ ಹೊಣೆಯಾಗಿತ್ತು. ಭೂಮಿ ಅಳೆಯುವುದು, ಕಂದಾಯದ ಲೆಕ್ಕಪತ್ರ ಇಡುವುದು ಹಾಗೂ ಭೂದಾಖಲೆಗಳನ್ನು ಇಡುವ ಕೆಲಸವನ್ನು ಸೇನಬೋವ, ಶ್ಯಾನುಭೋಗ, ಕರಣಿಕ, ಗಣಕ, ಮಧ್ಯಸ್ಥ, ಲೇಖಕ, ಕುಲಕರ್ಣಿ ಎಂಬ ಹೆಸರುಗಳಿಂದ ಕರೆಯುತ್ತಿದ್ದ ಇನ್ನೊಬ್ಬ ಗ್ರಾಮಮಟ್ಟದ ಅಧಿಕಾರಿಯ ಕೆಲಸವಾಗಿತ್ತು. ಇವರಿಬ್ಬರೂ ಸರ್ಕಾರದಿಂದ ಇನಾಂ ಭೂಮಿಗಳನ್ನು ಉಚಿತವಾಗಿ ಪಡೆಯುವುದಲ್ಲದೆ ಭೂಕಂದಾಯದ ಒಂದಂಶವನ್ನು ಪಡೆಯುತ್ತಿದ್ದರು. ಸ್ಥಳೀಯ ಪದ್ಧತಿಗಳಿಗೆ ಅನುಸರಿಸಿ ಕೆಲವೊಮ್ಮೆ ಸಂತೆಯ ತಲೆಪಟ್ಟಿಯಲ್ಲಿ, ಜಮೀನು ವಿಕ್ರಯ ಅಥವಾ ಪರಭಾರೆಯ ಸಂದರ್ಭದಲ್ಲಿ ಧಾನ್ಯ ಸಂಗ್ರಹ ಕಾಲದಲ್ಲೂ ಒಂದಿಷ್ಟು ಸಂಭಾವನೆ ಪಡೆಯುತ್ತಿದ್ದರು, ಇವರ ಅಧಿಕಾರ ಪಿತ್ರಾರ್ಜಿತವಾಗಿ ಬರುತ್ತಿತ್ತು. ಈ ಅಧಿಕಾರವನ್ನು ಪರಭಾರೆ ಮಾಡಲು ಪರವಾನಿಗೆ ನೀಡಲಾಗಿತ್ತು. ಗ್ರಾಮಕ್ಕೆ ಪ್ರತ್ಯೇಕವಾದ ನ್ಯಾಯಾಡಳಿತ ವ್ಯವಸ್ಥೆ ಇರಲಿಲ್ಲವೆಂಬುದು ನಿಜವಾದರೂ ಮಹಾಜನರೂ, ಗೌಡ ಅಥವಾ ಊರೊಡೆಯರೂ ಈ ಕೆಲಸ ನಿರ್ವಹಿಸುತ್ತಿದ್ದರು. ಯುಕ್ತ, ಆಯುಕ್ತ ಅಥವಾ ನಿಯುಕ್ತರೆಂಬ ರಾಜಪ್ರತಿನಿಧಿಗಳೂ ಕೆಲವೊಮ್ಮೆ ಸಹಾಯಕ್ಕೆ ಬರುತ್ತಿದ್ದರೆಂದು ಶಾಸನಗಳು ಹೇಳುತ್ತವೆ. ಹೆಚ್ಚಾಗಿ ಪಂಚನಿರ್ಣಯದ ಮೂಲಕ ತೀರ್ಪು ಕೊಡಲಾಗುತ್ತಿತ್ತು. ಜಮೀನಿನ ಗಡಿ, ಕೌಟುಂಬಿಕ ಆಸ್ತಿ ವ್ಯವಹಾರಗಳಲ್ಲಿ ಸ್ಥಳೀಯ ಆಚಾರ ರೂಢಿಗಳಿಗೆ ಅನುಗುಣವಾಗಿ ನ್ಯಾಯ ನಿರ್ಣಯವಾಗುತ್ತಿತ್ತು.[೯]

ಗ್ರಾಮಾಡಳಿತದ ಕೆಳಮಟ್ಟದಲ್ಲಿ ತೋಟಿ, ತಳವಾರ, ಊಳಿಗ, ನೀರ್ಗಂಟಿ, ಓಲೆಕಾರ ಮುಂತಾದ ಹೆಸರಿನ ಸೇವಕರಿದ್ದರು. ಗ್ರಾಮದ ವ್ಯಾಪ್ತಿಯ ಗಡಿಗಳನ್ನು ಕಾಯುವುದು ಹಾಗೂ ಗ್ರಾಮದಲ್ಲಿ ಶಾಂತಿಸುವ್ಯವಸ್ಥೆ ಕಾಪಾಡುವುದು ಇವರ ಕೆಲಸ. ಗೌಡನ ಕೈಕೆಳಗಿದ್ದರೂ ಇವರುಗಳು ಇಡೀ ಗ್ರಾಮದ ನಿರ್ದಿಷ್ಟ ಕೆಲಸ ನಿರ್ವಹಿಸುವ ಸೇವಕರು. ಈ ಹುದ್ದೆಗಳೆಲ್ಲ ವಂಶಪಾರಂಪರ್ಯ ವಾಗಿ ಇರುತ್ತಿದ್ದವು.

೨.೩. ಮೈಸೂರು ಸಂಸ್ಥಾನದ ನೀರಾವರಿ ಆಡಳಿತ ವ್ಯವಸ್ಥೆಯಲ್ಲಿ ದಲಿತರು

ಮೈಸೂರು ಸಂಸ್ಥಾನದಲ್ಲಿ ನೀರಾವರಿ ಕಾಲುವೆಗಳು, ಸಣ್ಣ ಅಣೆಕಟ್ಟುಗಳು, ಅನೇಕ ಬಾರಿ ಸ್ಥಳೀಯ ವ್ಯಾಪಾರಸ್ಥರು, ಊರಿನ ಗೌಡರು ಮೊದಲಾದ ಗಣ್ಯರ ಅಥವಾ ದೇವಾಲಯಗಳ ಶ್ರಮದಿಂದ ಮತ್ತು ಅನೇಕ ಕಡೆ ರಾಜರುಗಳ ನೆರವಿನಿಂದ ಕಟ್ಟಲ್ಪಟ್ಟ ಕೆರೆಗಳ ನಿರ್ಮಾಣ, ಕೆರೆಗಳ ಮಾರಾಟ, ಕೊಡುಗೆಯಾಗಿ ನೀಡಿದ ಪ್ರಕ್ರಿಯೆ, ಜನಸಾಮಾನ್ಯರಿಗೆ ಸಂಬಂಧಿಸದೇ ಕೆಲ ಗಣ್ಯರ ಅಧೀನದಲ್ಲಿ ಕೇಂದ್ರೀಕೃತವಾಗಿರುವ ವಿಚಾರವನ್ನು ಗಮನಿಸಬಹುದು. .ಸಂಸ್ಥಾನದ ವ್ಯಾಪ್ತಿಯಲ್ಲಿ ನದಿಗಳು ಹರಿಯುವ, ಹರಿಯದಿರುವ ಪ್ರದೇಶಗಳಲ್ಲಿ ಕೆರೆಗಳು ಮಳೆಯನ್ನು

ಆಧರಿಸಿ ನಿರ್ಮಾಣಗೊಂಡಿವೆ. ಅನಾವೃಷ್ಟಿ ಸಂದರ್ಭದಲ್ಲಿ ಕೆರೆ ನೀರಿನ ಬಳಕೆ, ಸ್ಥಳೀಯ ಜನಸಮುದಾಯಗಳ ತೊಡಗಿಸಿಕೊಳ್ಳುವಿಕೆಯ ಪಾತ್ರ ಮಹತ್ವದ್ದಾಗಿದೆ. ಪಾರಂಪರಿಕ ನೀರಾವರಿಯ ಚೌಕಟ್ಟಿನ ಅವನತಿಯಾಗಿ ಕೆರೆ, ಕುಂಟೆ, ಬಾವಿಗಳು ಗತಕಾಲದ ಸ್ಮಾರಕಗಳಂತೆ ಕಾಣಬರುತ್ತವೆ. ನದಿಗಳು ಹರಿಯದ ಜೌಗುಪ್ರದೇಶಗಳಲ್ಲಿ ಕೆರೆ ನೀರಾವರಿಯೇ ರೈತರ ಜೀವಾಳವಾಗಿ ಕಂಡುಬರುತ್ತದೆ.

ಚರಿತ್ರೆಕಾರ ಬರ್ಟನ್ ಸ್ಟೈನ್ ಅವರು ದಕ್ಷಿಣ ಭಾರತದ ರಾಜವ್ಯವಸ್ಥೆಯು ಕೇಂದ್ರೀಕೃತ ವಾಗಿದ್ದು, 'ಸೆಗ್‌ಮೆಂಟರಿ' ಸ್ಟೇಟ್ ಎನ್ನುತ್ತಾರೆ. ಕೃಷಿಕಾರರ ಗುಂಪುಗಳು ಸಾಮಾಜಿಕ. ಆರ್ಥಿಕ ಮತ್ತು ಧಾರ್ಮಿಕ ಪ್ರಭಾವ, ಪ್ರೇರಣೆಗಳಿಂದಾಗಿ ಕೆರೆ ನೀರಾವರಿ ವ್ಯವಸ್ಥೆಗೆ ಒತ್ತುಕೊಟ್ಟಿದ್ದವು. ರಾಜರು ಭೂಮಿ, ಹಣ, ತೆರಿಗೆ ವಿನಾಯಿತಿಗಳ ಮೂಲಕ ಕೆರೆ ನೀರಾವರಿ ವ್ಯವಸ್ಥೆಯಲ್ಲಿ ಭಾಗವಹಿಸಿದವರಿಗೆ ಮನ್ನಣೆ ನೀಡಿದರು. ವ್ಯಾಪಕವಾಗಿ ದೇವಾಲಯಗಳು ನೀರಾವರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದವು. ಆಯಗಾರರಲ್ಲಿ ಒಬ್ಬನಾದ ನೀರುಗಂಟಿಯು ಗ್ರಾಮಮಟ್ಟದಲ್ಲಿ ಕೆರೆ ನೀರಾವರಿ ವ್ಯವಸ್ಥೆ ನೋಡಿಕೊಳ್ಳುತ್ತಿದ್ದನು. ಜನರಲ್ಲಿ ನೀರಾವರಿ ಕುರಿತಂತೆ ಇದ್ದ ಪರಂಪರಾನು ಗತವಾಗಿ ಬೆಳೆದು ಬಂದಿದ್ದ ರೀತಿ-ರಿವಾಜುಗಳ ಕುರಿತು ಬುಕನಾನ್ ಅವರು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.[೧೦] ದೊಡ್ಡ ಪ್ರಮಾಣದ ಕೆರೆಗಳನ್ನು ಖಾಸಗಿ ವ್ಯಕ್ತಿಗಳು ನಿರ್ಮಿಸಿದಾಗ ಆ ಕೆರೆಯ ಅಚ್ಚುಕಟ್ಟಿನ ೧/೪ ಭಾಗವನ್ನು ಅವನಿಗೆ ಹಾಗೂ ಅವನ ವಂಶಸ್ಥರಿಗೆ ಕೊಡುಗೆ ರೂಪದಲ್ಲಿ ನೀಡಲಾಗುತ್ತಿತ್ತು. ದೊಡ್ಡಪ್ರಮಾಣದ ಕೆರೆ ಕಟ್ಟುವಲ್ಲಿ ಹಾಗು ನಿರ್ವಹಣೆಯಲ್ಲಿ ಸ್ಥಳೀಯ ರೈತರ ಪಾತ್ರ ಹೆಚ್ಚೇನೂ ಇರಲಿಲ್ಲ. ಕೆರೆಯ ಕಾಲುವೆಗಳ ಮುಖಾಂತರ ರೈತರ ಭೂಮಿಗೆ ನೀರು ಹಾಯಿಸುವ ಜವಾಬ್ದಾರಿ ಗ್ರಾಮದ ಆಯಗಾರನಾದ ನೀರಗಂಟಿಯದ್ದಾಗಿತ್ತು. ಒಬ್ಬ ನೀರುಗಂಟಿ ಸುಮಾರು ೧೦೦ ಎಕರೆ ಭೂಮಿಗೆ ನೀರು ಹಾಯಿಸುವ ಜವಾಬ್ದಾರಿ ನಿರ್ವಹಿಸುತ್ತಿದ್ದನು. ರೈತರು ನೀರುಗಂಟಿಗೆ ಅವನು ನಿರ್ವಹಿಸಿದ ಕಾರ್ಯಕ್ಕೆ ಪ್ರತಿಯಾಗಿ ಕೃಷಿ ಉತ್ಪತ್ತಿಯ ಒಂದು ಪಾಲನ್ನು ನೀಡುತ್ತಿದ್ದರು. ಮೇಜರ್ ವಿಲ್ಕ್ಸ್ ಅವರ ಕೃತಿಯಲ್ಲಿ ಒಡೆದು ಹೋಗಿರುವ ಕೆರೆಗಳು ಮೈಸೂರು ಸಂಸ್ಥಾನದಾದ್ಯಂತ ಕಂಡುಬರುತ್ತವೆ. ಕೆರೆಗಳಲ್ಲಿ ಬಹುಮಟ್ಟಿನವು ಕುರುಚಲು ಗಿಡಗಳು ಬೆಳೆದು ಕಣ್ಮರೆಯಾಗಿವೆ ಎಂದು ಉಲ್ಲೇಖಿಸಿದ್ದಾನೆ.[೧೧]

ನೀರಾವರಿ ಕ್ಷೇತ್ರದಲ್ಲಿ ವೆಚ್ಚ ಮಾಡಲಾದ ಒಟ್ಟು ಹಣ ೩೦,೨೬,೩೩೪ರೂ ಗಳಲ್ಲಿ ೧೯,೯೭,೨೯೦ರೂ ಗಳನ್ನು ಕೆರೆಗಳ ದುರಸ್ತಿಗಾಗಿ ವೆಚ್ಚಮಾಡಲಾಯಿತು ನೀರಾವರಿ ಕಾಮಗಾರಿಗಳ ಕೌಶಲ್ಯ ಪೂರ್ಣ ಉಸ್ತುವಾರಿಗಾಗಿ ಮರಾಮತ್ ಇಲಾಖೆಗೆ ಸೂಪರಿಂಟೆಂಡೆಂಟ್ ಹುದ್ದೆಯನ್ನು ಸೃಷ್ಟಿಸಿತು. ಸರ್ಕಾರಿ ಕೆರೆಗಳ ದುರಸ್ತಿಗೆ ಸ್ಥಳೀಯ ರೈತರೇ ಬಹುಮಟ್ಟಿಗೆ ಕಾರಣ. ಕೆರೆಗಳನ್ನು ಸುಸ್ಥಿತಿಯಲ್ಲಿಡಲು ಅಲ್ಪ ಸಮಯವನ್ನು ವ್ಯಯ ಮಾಡಲು ಕೂಡ ಸಿದ್ದರಿಲ್ಲ. ರೈತರು ಕೆರೆಕಟ್ಟೆಗೆ

ಹೊಂದಿಕೊಂಡಂತೆ ಸಾಗುವಳಿ ಮಾಡುವುದು. ಕಟ್ಟೆಗಳ ಮೇಲೆ ಕಾಲುದಾರಿ ಮಾಡುವುದು, ಗದ್ದೆಗೇಣಸುಗಳಿಗಾಗಿ ಕಟ್ಟೆಗಳನ್ನು ತೋಡುವುದರಿಂದ ಕೆರೆಕಟ್ಟೆಗಳು ಸಡಿಲವಾಗಿ ಹಾಳಾಗಲು ಕಾರಣವಾಗಿವೆ. ಕೆರೆಗಳ ಸಂರಕ್ಷಣೆಯಲ್ಲಿ ಸ್ಥಳೀಯ ರೈತರು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಶಾಸನರೂಪದಲ್ಲಿ ೧೮೬೩ರಲ್ಲಿ ಹೊರಡಿಸಲಾಯಿತು. ಮಳೆ, ಜಾನುವಾರುಗಳು ಮೇಯುವಾಗ ಆಗಿದ್ದ ಕೊರಕುಗಳು ಮುಚ್ಚಿಸುವುದು, ಕಟ್ಟೆ ಮೇಲಿನ ಕುರುಚಲು, ಮುಳ್ಳಿನ ಗಿಡ, ಕಳೆಗಳನ್ನು ತೆಗೆಯುವುದು, ಬೇರುಗಳು, ಪೊದೆಗಳನ್ನು ತೆಗೆಯುವುದು, ತೂಬು ಕಾಲುವೆಗಳಲ್ಲಿನ ಹೂಳು ಸ್ವಚ್ಛಗೊಳಿಸುವುದು ಕಟ್ಟು ಕಾಲುವೆಗಳನ್ನು ಸುಸ್ಥಿಯಲ್ಲಿಡುವುದು, ಅಲೆಗಳಿಂದ ಕೊರೆತ ತಡೆಯಲು ಹುಲ್ಲು ಬೆಳೆಸುವುದು, ಸೋರುವಿಕೆ ತಡೆಯುವುದು, ಕಟ್ಟೆ ಒಡೆಯುವಂತಹ ಅಪಾಯಗಳನ್ನು ತಡೆಯುವುದು, ಸಣ್ಣ ಕೆರೆಗಳ ನಿರ್ವಹಣೆಯನ್ನು ಕಂದಾಯ ಅಧಿಕಾರಿಗಳೇ ಉಳಿಸಿಕೊಂಡರು. ೧-೧೧-೧೮೭೩ರಿಂದ ಜಾರಿಯಾದ ದುರಸ್ತಿ. ನಿರ್ವಹಣೆಗಾಗಿ ಬಂದ ಆದೇಶದಲ್ಲಿ, ಕೆರೆ ಜವಾಬ್ದಾರಿ ಗ್ರಾಮದ ಪಟೇಲನಿಗೆ ವಹಿಲಾಯಿತು. ಕೆರೆ ಲಾಭ ಪಡೆಯುತ್ತಿರುವ ಪ್ರತಿಯೊಬ್ಬರೂ ಕೆರೆಯ ದುರಸ್ತಿ ಕಾರ್ಯಕ್ಕೆ ಜವಾಬ್ದಾರರು. ಪ್ರತಿಯೊಬ್ಬರು ನಿರ್ವಹಿಸಬೇಕಾದ ಕೆಲಸವನ್ನು ಪಟೇಲ, ಶ್ಯಾನುಭೋಗರು ನಿರ್ಧರಿಸುತ್ತಿದ್ದರು, ಟ್ಯಾಂಕ್ ಪುಸ್ತಕದಲ್ಲಿ ದುರಸ್ತಿ ಕಾರ್ಯದ ವಿವರ, ತನಿಖೆ ವಿವರ, ಪರಿಶೀಲನೆ ಷರಾ ಬರೆಯಬೇಕು, ಜಮಾಬಂದಿ ಸಮಯದಲ್ಲಿ ಅಸಿಸ್ಟೆಂಟ್ ಕಮೀಷನರ್ ಪರಾಮರ್ಶೆ ನಡೆಸಬೇಕು ಮೈಸೂರು ಟ್ಯಾಂಕ್ ಕೋಡ್ ಸಂಸ್ಥಾನದಲ್ಲಿ ಕೆರೆಗಳನ್ನು ಸರ್ಕಾರಿ ಹಾಗೂ ಗ್ರಾಮಕೆರೆಗಳು ಅಥವಾ ಖಾಸಗಿ ಕೆರೆಗಳು ಎಂದು ವಿಭಜಿಸಿತು.[೨] ಅಮಾನಿ ಅಥವಾ ಸರ್ಕಾರಿ ನಿರ್ವಹಿತ ಕೆರೆ ಎಂದು ಪರಿಗಣಿಸಲಾಗಿತ್ತು. ಗ್ರಾಮ ಕೆರೆಗಳನ್ನು ಗ್ರಾಮಸ್ಥರು ನಿರ್ವಹಿಸಬೇಕಿತ್ತು. ಪ್ರತಿಯೊಬ್ಬ ವ್ಯಕ್ತಿಯು ದುರಸ್ತಿ ಕಾರ್ಯದಲ್ಲಿ ಪಾಲ್ಗೊಳ್ಳಬೇಕು. ತಪ್ಪಿದಲ್ಲಿ ತನ್ನ ಪರವಾಗಿ ಬೇರೊಬ್ಬ ವ್ಯಕ್ತಿಯನ್ನಾದರೂ ಒದಗಿಸಬೇಕು. ಪಟೇಲರು ಕಟ್ಟೆ, ನೀರಾವರಿ ಕಾಲುವೆ. ಪೂರಕ ಕಾಲುವೆಗಳಿಗೆ ಆಗಬೇಕಾದ ಕಾಮಗಾರಿಗಳಲ್ಲಿ ರೈತರ ಜವಾಬ್ದಾರಿಗಳನ್ನು ಸೂಚಿಸುವ ಪಾಲುಪಟ್ಟಿ ಸಿದ್ದಪಡಿಸುತ್ತಿದ್ದರು. ಪಾಲು ಪಟ್ಟಿಯಂತೆ ಕೆಲಸ ನಿರ್ವಹಿಸುವಲ್ಲಿ ವಿಫಲವಾದರೆ ಕೂಲಿಗಳಿಂದ ನಿರ್ವಹಿಸಿ ವೆಚ್ಚವನ್ನು ವಸೂಲಿ ಮಾಡಬಹುದು. ತೂಬುಗಳನ್ನು ದುರಸ್ತಿ ನಿರ್ವಹಣೆ ಮಾಡುವ ಜವಾಬ್ದಾರಿ ನೀರಗಂಟಿಯದಾಗಿದ್ದಿತ್ತು. ಒಂದು ವೇಳೆ ನೀರುಗಂಟಿ ತನ್ನ ಜವಾಬ್ದಾರಿಯಲ್ಲಿ ವಿಫಲನಾದರೆ, ಪಟೇಲರು ನಿರ್ವಹಿಸಿ, ಅದರ ಖರ್ಚನ್ನು ವಸೂಲಿ ಮಾಡಬೇಕು. ಕೋಡಿ ಕಾಮಗಾರಿಗಳನ್ನು ರೈತರು ದುರಸ್ತಿ ಮಾಡಬೇಕು. ಅಗತ್ಯ ಕೌಶಲ್ಯವುಳ್ಳ ಕೂಲಿಗಳು ಬೇಕಾದಲ್ಲಿ. ಅವರ ಸೇವೆಯನ್ನು ಪಡೆದು, ಸಂಬಂಧಿತ ರೈತರಿಂದ ವಸೂಲಿ ಮಾಡುವುದು. ಕಟ್ಟೆಗೆ ಹೊಸದಾಗಿ ತೂಬು ಕೂಡಿಸುವ, ಕಾಲುವೆಯ ಹರಿವಿನ ಮಾರ್ಗ ಬದಲಿಸುವ. ಅಥವಾ ಹೊಸ ಕಾಲುವೆ ತೋಡುವ, ಕೋಡಿಯ ಕಲ್ಲುಗಳನ್ನು ಕೀಳುವಂತಹ ಕಾರ್ಯಗಳನ್ನು ಮಾಡುವುದರಿಂದ ದೂರ ಇರಬೇಕು. ಇಂತಹ ಚಟುವಟಿಕೆಗಳನ್ನು

ಪಟೇಲನು ತಡೆಯಬೇಕಿತ್ತು. ಸರ್ಕಾರಿ ಕೆರೆಗಳ ಸಾಮಾನ್ಯ ದುರಸ್ತಿಗಳು ಮತ್ತು ಗ್ರಾಮ ಕೆರೆಗಳ ಉಸ್ತುವಾರಿ ಸಿಬ್ಬಂದಿಯ ವೆಚ್ಚಗಳನ್ನು 'ನೀರಾವರಿ ತೆರಿಗೆ ನಿಧಿ' ಯಿಂದ ಭರಿಸಬೇಕು. ಉಳಿದ ಹಣದಲ್ಲಿ ಜಿಲ್ಲಾ ಸ್ಥಳೀಯ ನಿಧಿ ಸಮಿತಿ, ತನ್ನ ವಿವೇಚನಾ ಅಧಿಕಾರ ಬಳಸಿ ಪೂರಕ ನೀರಾವರಿ ಕಾಮಗಾರಿಗಳನ್ನು ನಡೆಸಲು ವಿನಿಯೋಗಿಸಲಾಗುತ್ತಿತ್ತು. ಸ್ವಾಭಾವಿಕ ಸಂದರ್ಭಗಳಲ್ಲಿ ಕಟ್ಟೆ ಒಡೆದು ಅಥವಾ ಬರಗಾಲದ ಸಂದರ್ಭದಲ್ಲಿ ನೀರು ದೊರೆಯದಿದ್ದಾಗ, ನೀರಾವರಿ ಶುಲ್ಕಕ್ಕೆ ವಿನಾಯಿತಿ ನೀಡಲಾಗುತ್ತಿತ್ತು.[೧೩]

೧೮೮೪ರಲ್ಲಿ ಹೊಸ ಕೆರೆ ನೀತಿಯನ್ನು ಶೇಷಾದ್ರಿಆಯ್ಯರ್ ಮಂಡಿಸಿದರು, ರೂ೫೦೦ರ ಮಿತಿ ಆದಾಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಮತ್ತು ಗಾಮಸ್ಥರು ನಿರ್ವಹಿಸಬೇಕಾದ ಕೆರೆಗಳ ವರ್ಗೀಕರಣ ಮಾಡಲಾಯಿತು. ಸಣ್ಣಕೆರೆಗಳ ನಿರ್ವಹಣೆ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸಿದ ಕಾರ್ಯ ಯೋಜನೆಯಲ್ಲಿ ಸ್ವಲ್ಪ ಮಟ್ಟಿನ ಯಶಸ್ಸು ಕಂಡು ಬಂದಿತು. ಗ್ರಾಮ ಮುಖಂಡರ ನೇತೃತ್ವದಲ್ಲಿ ಸಮಿತಿ ರಚಿಸಿ ಕೆರೆಗಳ ದುರಸ್ತಿ ನಿರ್ವಹಣೆ ಮತ್ತು ಅಭಿವೃದ್ಧಿ ಚಟುವಟಿಕೆ ಕೈಗೊಳ್ಳಲಾಯಿತು ರೈತರು ನಿರ್ವಹಿಸಬೇಕಾದ ಮಣ್ಣಿನ ಕೆಲಸ ಹೊರೆಯಾದರೆ ಅಥವಾ ೨:೩ ರ ಅನುಪಾತ ಮೀರಿದರೆ ಕಾಮಗಾರಿಗೆ ಕೆಲವು ರಿಯಾಯಿತಿಗಳನ್ನು ತೋರಲು ಅವಕಾಶ ಕಲ್ಪಿಸಿತು. ಸರ್ಕಾರಿ ಗ್ರಾಮಗಳಿಗೆ ಮಾತ್ರ ಅನ್ವಯಿಸುತ್ತಿದ್ದ ಸಣ್ಣ ಕೆರೆ ಯೋಜನೆಯ ನಿಯಮಾವಳಿ ತಿದ್ದುಪಡಿಯಾಗಿ ಇನಾಂ ಗ್ರಾಮಗಳಿಗೂ ಅನ್ವಯವಾಗುವಂತೆ ಆದೇಶ ಹೊರಡಿಸಲಾಯಿತು. ಕೆರೆಗಳ ಪುನಶ್ಚೇತನಕ್ಕಾಗಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲು, ಅಗತ್ಯ ಮಾಹಿತಿಯನ್ನು ಸಂಗ್ರಹಿಸಲು ವಿಶೇಷ 'ಕೆರೆ ಸಮೀಕ್ಷೆ' ವಿಭಾಗವನ್ನು ೧೯೨೬ರ ಏಪ್ರಿಲ್‌ನಲ್ಲಿ ಆರು ತಿಂಗಳ ಅವಧಿಗೆ ನೇಮಿಸಲಾಯಿತು ಕೆರೆಗಳ ದುರಸ್ತಿ, ಮತ್ತು ನಿರ್ವಹಣೆ ಕಾರ್ಯಗಳಲ್ಲಿ ಜನರ ಪೂರ್ಣ ಸಹಕಾರ ಪಡೆಯಲು ಜನಾಭಿಪ್ರಾಯಕ್ಕೆ ಮನ್ನಣೆ ನೀಡಲು ಸರ್ಕಾರವು ೧೯೧೧ ರಲ್ಲಿ ಟ್ಯಾಂಕ್ ಪಂಚಾಯಿತಿ ಕಾಯಿದೆಯನ್ನು ರೂಪಿಸಿತು. ರೂ ೫೦೦ಕ್ಕಿಂತ ಕಡಿಮೆ ಆದಾಯದ ಎಲ್ಲಾ ಕೆರೆಗಳನ್ನು ಸಣ್ಣಕೆರೆಗಳೆಂದು ಗುರುತಿಸಿತು, ಯಾವ ಗ್ರಾಮಸ್ಥರು ತಮ್ಮ ದುರಸ್ತಿ ಕರ್ತವ್ಯಗಳನ್ನು ತೃಪ್ತಿದಾಯಕವಾಗಿ ನಿರ್ವಹಿಸಿದ್ದಾರೋ ಅಂತಹ ಗ್ರಾಮಗಳಿಗೆ ದುರಸ್ತಿ ಕಾರ್ಯದ ವೆಚ್ಚದಷ್ಟು ಪ್ರಮಾಣ ನೀರಾವರಿ ಶುಲ್ಕವನ್ನು ರಿಯಾಯಿತಿ ನೀಡುವುದು ಕೆರೆಯ ರಿಪೇರಿ, ಹಾಗೂ ನಿರ್ವಹಣೆಯ ಕೆಲಸವನ್ನು ಸ್ಥಳಿಯ ಗ್ರಾಮಸ್ಥರೇ ನಿರ್ವಹಿಸುತ್ತಿದ್ದರು. ಸಣ್ಣ ಕೆರೆಗಳು ನಿರ್ಲಕ್ಷಕ್ಕೆ ಒಳಗಾದವು ಎಂಬುದಾಗಿ ಫ್ರಾನ್ಸಿಸ್ ಬುಖಾನನ್ ಅಭಿಪ್ರಾಯಿಸುತ್ತಾರೆ. ರೈತರು ಉತ್ತಮವಾದ ಹಾಗೂ ಸಮರ್ಪಕ ನೀರಾವರಿ ಅನುಕೂಲಗಳಿದ್ದ ಭೂಮಿಗಳಲ್ಲಿ ಕೃಷಿ ಮಾಡಲು ಕಾತುರವಾಗಿದ್ದು, ಫಲವತ್ತಾಗಿಲ್ಲದ ಅಥವಾ ನೀರಾವರಿ ವ್ಯವಸ್ಥೆ ಅಸಮರ್ಪಕವಾಗಿದ್ದ ಭೂಮಿಗಳನ್ನು ಕಡೆಗಣಿಸಿದರು. ಕೆರೆಗಳ ದುರಸ್ತಿ ಕಾರ್ಯಗಳನ್ನು ಅಮಲ್ದಾರರಿಗೆ ವಹಿಸಲಾಗಿದ್ದು, ಅವರು ಇತರೆ ಕಂದಾಯ ಜವಾಬ್ದಾರಿಗಳ ಒತ್ತಡಕ್ಕೆ ಸಿಲುಕಿದ್ದರಿಂದ ಕೆರೆ ಜವಾಬ್ದಾರಿಯನ್ನು

ಶೇಖ್‌ದಾರರಿಗೆ ವಹಿಸಿದ್ದಾರೆ, ಶೇಖದಾರರು ಪಟೇಲರಿಗೆ ವಹಿಸಿದ್ದಾರೆ, ಹೀಗಾಗಿ ಕೆರೆ ದುರಸ್ತಿ ಕಾರ್ಯಗಳು ನೆನೆಗುದಿಗೆ ಬಿದ್ದಿವೆ ಎಂದು ನಗರ ವಿಭಾಗದ ಸೂಪರಿಂಟೆಂಡೆಂಟ್ ಸ್ಟೊಕ್ಸ್ ಪ್ರಸ್ತಾಪಿಸಿದ್ದಾರೆ ಸಾಮಾನ್ಯ ಕೆರೆಗಳ ವಾರ್ಷಿಕ ನಿರ್ವಹಣೆಗೆ ಜವಾಬ್ದಾರಿಯನ್ನು ಸ್ಥಳೀಯ ವಡ್ಡರೆ ಯಶಸ್ವಿಯಾಗಿ ನಿರ್ವಹಿಸಬಲ್ಲರು ಎಂದು ಅಭಿಪ್ರಾಯಿಸಲಾಗಿದೆ. ಕೆರೆ ದುರಸ್ತಿ ಕಾರ್ಯದಲ್ಲಿ ರೈತರು ಸಕ್ರಿಯವಾಗಿ ಪಾಲ್ಗೊಳ್ಳದಿದ್ದಾಗ ಗ್ರಾಮದ ಹೊರಗಿನ ವ್ಯಕ್ತಿಗೆ ಈ ಹೊಣೆಗಾರಿಕೆಯನ್ನು ವಹಿಸುವ ಪದ್ದತಿ ಸಂಸ್ಥಾನದಲ್ಲಿ ರೂಢಿಯಲ್ಲಿತ್ತು. ಸಣ್ಣ ಕೆರೆಗಳನ್ನು ಗ್ರಾಮಸ್ಥರು ಕೂಡ 'ಗೌಡಗುತ್ತಿಗೆ' ಪದ್ಧತಿ ರೂಢಿಯಲ್ಲಿರುವವರೆಗೆ ಇವುಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು, ಗೌಡಗುತ್ತಿಗೆ ಪದ್ದತಿಯಂತೆ ಇಡೀ ಗ್ರಾಮದ ಭೂಕಂದಾಯ ನಿರ್ದಿಷ್ಟ ಹಣವನ್ನು ಗೌಡ ಸರ್ಕಾರಕ್ಕೆ ಭರಿಸಿ ಕೊಡಬೇಕಾಗಿತ್ತು. ಗೌಡರು ಸರ್ಕಾರ ನಿಗದಿಪಡಿಸಿದ ತೆರಿಗೆ ಮೀರಿ, ಉತ್ಪಾದನೆಯನ್ನು ಹೆಚ್ಚಿಸಲು ಸ್ವಹಿತ ದೃಷ್ಟಿಯಿಂದ ಗ್ರಾಮ ಕೆರೆಗಳಿಗೆ ವಿಶೇಷ ಒತ್ತುಕೊಟ್ಟರು. ಸರ್ಕಾರ ಗ್ರಾಮಸ್ಥರನ್ನು ಕೆರೆ ನೀರಾವರಿ ದುರಸ್ಥಿಕಾರ್ಯದಲ್ಲಿ ತೊಡಗಿಸಿಕೊಳ್ಳಲು ಅನುದಾನದ ರೂಪದಲ್ಲಿ ಅವರಿಗೆ ಹಣಕಾಸಿನ ನೆರವನ್ನು ಒದಗಿಸುತ್ತಿತ್ತು. ಗ್ರಾಮ ಕೆರೆಗಳ ದುರಸ್ತಿ ಹಾಗೂ ನಿರ್ವಹಣೆಯನ್ನು ಆಯಾ ಗ್ರಾಮಸ್ಥರೇ ನಿರ್ವಹಿಸಬೇಕಿತ್ತು. ೧೮೮೮ ರಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನ ಮತ್ತು ದುರಸ್ತಿ ಕಾರ್ಯಗಳಿಗಾಗಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಸಾರ್ವಜನಿಕ ರಿಂದ ವಂತಿಕೆ ಪಡೆಯುವ ಯೋಜನೆ ರೂಪಿಸಲಾಯಿತು. ೧೯೦೭ರಲ್ಲಿ ಕ್ಷಾಮ ತಲೆದೋರಿದಾಗ ಸಣ್ಣಕೆರೆಗಳ ದುರಸ್ತಿಗೆ ರೈತರು ನೀಡುತ್ತಿದ್ದ ವಂತಿಗೆ ಹಣವನ್ನು ಮನ್ನಾ ಮಾಡಲಾಯಿತು. ಜನರ ಅಸಹಕಾರ ಮನೋಭಾವ, ಗ್ರಾಮ ಮುಖಂಡರ ನಿರಾಸಕ್ತಿಯ ಪರಿಣಾಮವಾಗಿ ೧೯೧೧ ರಲ್ಲಿ ಜಾರಿಯಾದ ಟ್ಯಾಂಕ್ ಪಂಚಾಯಿತಿ ಕಾಯ್ದೆಯಡಿ ಟ್ಯಾಂಕ್ ಪಂಚಾಯಿತಿಗಳು ವಿಫಲವಾದವು, ಗ್ರಾಮದ ಸೇವಕರಲ್ಲಿ ಒಬ್ಬನಾದ ಆಯಗಾರನು ಕೆರೆಯ ತೂಬುಗಳ ಮೂಲಕ ರೈತರ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹರಿಸಿ, ಅವನ ಸೇವೆಯ ಪ್ರತಿಫಲವಾಗಿ ಉತ್ಪನ್ನದ ಒಂದು ಪಾಲನ್ನು 'ಧಾನ್ಯ' 'ಆಯ' ರೂಪದಲ್ಲಿ ಪಡೆಯುತ್ತಿದ್ದನು. ನೀರು ಹರಿಸುವುದು, ನೀರು ಪೋಲಾಗದಂತೆ ಜಾಗರೂಕತೆ ವಹಿಸುವುದು, ಕೆರೆ ನೀರು ದುರುಪಯೋಗವಾಗದಂತೆ ತಡೆಯುವುದು. ಕಟ್ಟೆಯ ಸುರಕ್ಷತೆಯನ್ನು ಗಮನಿಸುವುದು, ತೂಬಿನಲ್ಲಿ ಸಂಗ್ರಹಣೆಯಾಗಿರುವ ಹೂಳನ್ನು ತೆಗೆದು ನೀರು ಸರಾಗವಾಗಿ ಹರಿಯುವಂತೆ ಮಾಡುವ ಕಾರ್ಯಗಳನ್ನು ಶ್ಯಾನುಭೋಗ ಪಟೇಲರ ನಿರ್ದೇಶನದಲ್ಲಿ ಆಯಗಾರನು ಮಾಡುತ್ತಿದ್ದನು, ಗ್ರಾಮದ ಐಕ್ಯತೆ ಹಾಗೂ ಸ್ವಾವಲಂಬನೆ ಕಡಿಮೆಯಾಗಿ ಪರಂಪರಾನುಗತವಾಗಿ ಬೆಳೆದು ಬಂದ ಕೆರೆ ನೀರಾವರಿ ವ್ಯವಸ್ಥೆ ಕುಸಿದು ಬಿದ್ದಿತು. ೧೯೧೧ ರಲ್ಲಿ ಸರ್ಕಾರವು ಕೆರೆ ಪಂಚಾಯಿತಿ ಕಾಯ್ದೆಯಡಿ ಕೆರೆಯ ನೀರಿನ ಹಂಚಿಕೆ ಕುರಿತು ನಿಯಮಾವಳಿಗಳನ್ನು ರೂಪಿಸಿತು, ಅಚ್ಚುಕಟ್ಟು ಪ್ರದೇಶದಲ್ಲಿ ಇಡಬೇಕಾದ ಖುಷ್ಕಿ ಅರೆಖುಷ್ಕಿ ಬೆಳೆಗಳ ಪ್ರದೇಶದ ಪ್ರಮಾಣವನ್ನು ನಿಗದಿಪಡಿಸಿ ನೀರನ್ನು ಒದಗಿಸುವುದು.

ತೂಬಿನ ಹತ್ತಿರ ಇರುವ ಭೂಮಿಗೆ ಘಟಕವಾಗಿ ಪರಿಗಣಿಸಿ ಬಾಡಿಗೆ ನಿಗದಿಪಡಿಸುವುದು. ಗ್ರಾಮದ ಕೆರೆಗಳ ನಿರ್ವಹಣೆಯನ್ನು ಪಂಚಾಯಿತಿ ಅಥವಾ ಪಟೇಲನಿಗೆ ನೀಡಲಾಗುತ್ತಿತ್ತು, ಕಾಲುವೆಯ ಕೊನೆಯಲ್ಲಿ ನೀರು ವ್ಯರ್ಥವಾಗದಂತೆ ಕ್ರಮವಹಿಸುವುದು. ಕಾಲುವೆಯ ಕೊನೆಯಲ್ಲಿರುವ ಅಚ್ಚುಕಟ್ಟುದಾರಿಗೂ ಸಹ ಸಮಿತಿಯಲ್ಲಿ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳುವುದು. ಎಲ್ಲಾ ನಾಲೆಗಳಲ್ಲಿ ಹೂಳು, ಹುಲ್ಲು ಮತ್ತಿತರ ವಸ್ತುಗಳನ್ನು ತೆಗೆದು ನೀರು ಪೋಲಾಗದಂತೆ ನೋಡಿಕೊಳ್ಳುವುದು, ಕಾಲುವೆ ಅಪರಾಧಿಗಳನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು ತೂಬುಗಳಿಗೆ ಬೀಗದ ಕೈ ವ್ಯವಸ್ಥೆ ಮಾಡುವುದು. ನೀರಗಂಟಿಗಳಿಗೆ ತರಬೇತಿ ನೀಡುವುದು. ಎರಡು ನಾಲೆಗಳ ಮಟ್ಟ ಸ್ವಲ್ಪ ದೂರದ ಮಟ್ಟಿಗಾದರೂ ಸಮನಾಗಿ ಇರಬೇಕು ಕಾಲುವೆಗಳ ಮೂಲಕ ನೀರನ್ನು ಹರಿಸಿ, ಅತ್ಯಂತ ವ್ಯವಸ್ಥಿತವಾಗಿ ನೀರನ್ನು ಬೆಳೆಗಳಿಗೆ ಒದಗಿಸುವ ಪರಿಸ್ಥಿತಿಯನ್ನು ಅಳವಡಿಸಲಾಯಿತು, "ಮೆಣ್‌ಗಾರ್" ಅಥವಾ "ಚೌಡಿ"ಗಳಿಗೆ ನೀರಿನ ಹಂಚಿಕೆಯ ಕಾರ್ಯವನ್ನು ವಹಿಸಿ ನಿರ್ವಹಿಸಲಾಗುತ್ತಿತ್ತು. ಕೆರೆಯಲ್ಲಿ ಸಂಗ್ರಹಿತ ನೀರನ್ನು ಜಮೀನಿನ ಒಡೆತನಕ್ಕೆ ಅನುಗುಣವಾಗಿ ಹಂಚಿಕೊಳ್ಳುವ ದಾಮೋಸಿ ಪದ್ಧತಿ ಜಾರಿಯಲ್ಲಿತ್ತು, ದಾಮೋಸಿ ಜಾರಿಗೊಳ್ಳುವ ಅಚ್ಚುಕಟ್ಟು ಪ್ರದೇಶದಲ್ಲಿನ ವ್ಯಕ್ತಿ ಹೊಂದಿರುವ ಜಮೀನಿನ ಪ್ರಮಾಣವನ್ನು ಆಧರಿಸಿದೆ. ಕುಟುಂಬಗಳ ಮುಖ್ಯಸ್ಥರನ್ನು ಸಭೆ ಸೇರಿಸಿ, ನೀರಿನ ಹಂಚಿಕೆಗೆ ಅನುಮೋದನೆ ಪಡೆಯುತ್ತಿದ್ದರು, ಕಡಿಮೆ ನೀರಿನ ಲಭ್ಯತೆಯ ಬೆಳೆ ಪಡೆಯುವ ಕಾರ್ಯ ವಿಧಾನದಲ್ಲಿ ನೀರುಗಂಟಿಯ ಮತ್ತು ಅವನ ಕಾರ್ಯದಕ್ಷತೆ ಪ್ರಮುಖವಾಗಿತ್ತು.[೧೪]

ನೀರಿನ ತೆರಿಗೆ ನಿಗದಿ–ವಸೂಲಿ, ಪ್ರಮುಖ ಕೆರೆಗಳು, ಸರಣಿ ಕೆರೆಗಳು, ಜಲಾಯನ ಪ್ರದೇಶಗಳಲ್ಲಿ ನೀರುಗಂಟಿಯ ಕೆಲಸ, ಅವನು ನಿರ್ದಿಷ್ಟವಾಗಿ ಸುಂಕ ಪಡೆಯುತ್ತಿದ್ದನು ವಡ್ಡರು, ಮಣ್ಣ್‌ಕೆಲಸಗಾರರು, ಗಾರೆ ಕೆಲಸದವರು ಗ್ರಾಮದಲ್ಲಿನ ಕೃಷಿ ಕೂಲಿಕಾರ್ಮಿಕರಾದ ದಲಿತವರ್ಗ ದವರನ್ನು ಕೆರೆಗಳ ಕಟ್ಟೆ ನಿರ್ಮಾಣ, ತೂಬು, ನಾಲೆಗಳ ಸ್ವಚ್ಛತೆಗೆ ಬಳಸುತ್ತಿದ್ದರು ಕೆರೆಗಳ, ಕಟ್ಟೆಗಳ ನಿರ್ಮಾಣ, ನಿರ್ವಹಣೆಯಲ್ಲಿ ಕೃಷಿ ಕೂಲಿಕಾರ್ಮಿಕರಾದ ದಲಿತರ ಮಹತ್ವವನ್ನು ಹೊಂದಿತ್ತು ಎಂಬ ವಿಷಯ ಮಹತ್ವ ಪಡೆದಿತ್ತು.

೨.೪. ಮೈಸೂರು ಸಂಸ್ಥಾನದ ಗ್ರಾಮಾಡಳಿತದ ಆರ್ಥಿಕ ವ್ಯವಸ್ಥೆಯಲ್ಲಿ ದಲಿತರು

ಖಾಸಗಿ ಜಮೀನಿನಲ್ಲಿ ಬೆಳೆದ ಗಂಧದ ಮರಗಳ ಲೆಕ್ಕವನ್ನು ಸ್ಥಳೀಯ ಗ್ರಾಮಾಧಿಕಾರಿಗಳು ಇಡುತ್ತಿದ್ದರು. ಖಾಸಗಿಯವರು ಗಂಧದ ಮರಗಳನ್ನು ಕಡಿಯುವುದು ಶಿಕ್ಷಾರ್ಹವಾದ ಅಪರಾಧವಾಗಿತ್ತು. ಜುಲ್ಮಾನೆಯ ಜೊತೆಗೆ ಕೆಲವೊಮ್ಮೆ ಜೈಲುವಾಸವೂ ಆಗುತ್ತಿತ್ತು. ಚಿಕ್ಕನಾಯಕನಹಳ್ಳಿ ಪಟ್ಟಣದ ಮೇದಾರ ಸಂಕಣ್ಣನು ಒಮ್ಮೆ ಮೇಲನಹಳ್ಳಿಯ ತೋಟಗಳಲ್ಲಿ ಬೆಳೆದಿದ್ದ ಬಿದಿರನ್ನು ಹಣ ಕೊಟ್ಟು ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದ, ೧೯೩೮ರ ಒಂದು ದಿನ

ತೋಟವೊಂದರಲ್ಲಿ ಮೇದಾರ ಸಂಕಣ್ಣನು ಕತ್ತರಿಸಿದ ಬಿದಿರು ಹಳ್ಳದ ಪಕ್ಕದಲ್ಲಿ ಬೆಳೆದಿದ್ದ ಗಂಧದ ಮರದ ಮೇಲೆ ಬಿದ್ದು, ಮಳೆಯಿಂದ ನೆನೆದಿದ್ದ ಭೂಮಿಯ ಮೇಲಿನ ಗಂಧದ ಮರವು ಬೇರು ಸಹಿತವಾಗಿ ಹಳ್ಳಕ್ಕೆ ಉರುಳಿತ್ತು, ಸಹಜವಾಗಿ ಉರುಳಿ ಬಿದ್ದ ಗಂಧದ ಮರದ ವಿಚಾರವಾಗಿ ಗ್ರಾಮದ ಮುಖಂಡರ ಎದುರು ಗ್ರಾಮಲೆಕ್ಕಾಧಿಕಾರಿಗಳು ಪಂಚನಾಮೆ ಬರೆಯಿಸಿ, ಆ ಗಂಧದ ಮರವನ್ನು ಗಾಡಿಯಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಛೇರಿಗೆ ತಲುಪಿಸಿ, ಅಲ್ಲಿಂದ ಬಿಡುಗಡೆ ಹೊಂದಲು ಒಂದು ದಿನಪೂರ್ತಿ ಶ್ರಮಿಸಬೇಕಾಯಿತು. ಒಂದು ಬಿದಿರಿನ ಗಳಕ್ಕೆ ಅಂದಿನ ದರ ನಾಲ್ಕಾಣೆಯಿಂದ ಎಂಟಾಣೆಯಾಗಿತ್ತು. ಅಡ್ಡಕೊಂಬೆಗಳನ್ನು ಕತ್ತರಿಸಿ ಒಂದು ಗಳವನ್ನು ಬಿದಿರಿನ ಮೆಳೆಯಿಂದ ಹೊರ ತೆಗೆದು ತುಂಡು ಮಾಡಿ ಚಿಕ್ಕನಾಯಕನಹಳ್ಳಿಯ ಮನೆಗೆ ಸಾಗಿಸಲು ಅವನಿಗೆ ಒಂದು ದಿನ ಪೂರ್ತಿ ಕೆಲಸವಾಗುತ್ತಿತ್ತು. ಆ ಬಿದಿರನ್ನು ಸಣ್ಣಗೆ ಸೀಳಿ, ತಡಿಕೆ, ಚಾಪೆ, ಬುಟ್ಟಿ, ಮೊರ ಮುಂತಾದುವುಗಳನ್ನು ಹೆಣೆದು ಸಿದ್ದಪಡಿಸಿ. ಸಂತೆಯಲ್ಲಿ ಮಾರಾಟ ಮಾಡಿ, ಬಂದಂತಹ ಹಣದಿಂದ ತನ್ನ ಕುಟುಂಬದ ಜೀವನ ನಿರ್ವಹಣೆ ಆಗುತ್ತಿತ್ತು. ವಿದ್ಯುತ್ ಸರಬರಾಜು ಪೂರ್ವದಲ್ಲಿ ಗ್ರಾಮದ ರಾಮೇಗೌಡರ ಮನೆಯ ಪಡಶಾಲೆಯಲ್ಲಿ ಹಣತೆಯನ್ನು ಹೊತ್ತಿಸಿಡುತ್ತಿದ್ದರು, ಗೌಡರ ಮನೆಯ ಸುತ್ತಮುತ್ತಲಿನ ಹತ್ತಾರು ಮನೆಯವರು ಹಣತೆಗಳನ್ನೊ, ಸೀಮೆಎಣ್ಣೆ ಬುಡ್ಡಿಗಳನ್ನು ತಂದು ಹೊತ್ತಿಸಿಕೊಂಡು ಹೋಗುವುದು ದೈನಂದಿನ ರೂಢಿಯಲ್ಲಿತ್ತು, ಬೆಂಕಿಪಟ್ಟಣ ಬಳಕೆಗೆ ಬಂದಿದ್ದರೂ ಸಹ ಹಳೆಯ ಪದ್ದತಿ ಮುಂದುವರಿದಿತ್ತು, ಮಣ್ಣಿನ ಹಣತೆಗಳಿಗೆ ಹಿಪ್ಪೆ, ಹೊಂಗೆ, ಹುಚ್ಚೆಳ್ಳು, ಹರಳೆಣ್ಣೆ ಹಾಕಿ ಉರಿಸುತ್ತಿದ್ದರು. ತೋಟದಲ್ಲಿ ಹಿಪ್ಪೆ ಮರ, ಹೊಂಗೆ ಗಿಡಗಳಿಂದ ತಂದ ಬೀಜಗಳನ್ನು ಗಾಣಿಗನಿಗೆ ಕೊಟ್ಟು ಎಣ್ಣೆ ಪಡೆಯುತ್ತಿದ್ದರು. ಗಾಣ ಆಡಿಸಿ ಬಂದ ಹುಚ್ಚೆಳ್ಳು ಎಣ್ಣೆಯನ್ನು ತುಪ್ಪಕ್ಕೆ ಬದಲಾಗಿ ಊಟಕ್ಕೆ ಬಳಸುತ್ತಿದ್ದರು. ಸೀಮೆಎಣ್ಣೆ ಬಳಕೆಗೆ ಬಂದಂತೆ ಹಣತೆಗಳ ಬಳಕೆ ಕಡಿಮೆಯಾಗಿ ಬುಡ್ಡಿಗಳ ಬಳಕೆ ಹೆಚ್ಚಾಯಿತು. ತುಸು ಕಡಿಮೆ ಬೆಲೆಗೆ ಸಿಗುತ್ತಿದ್ದ ಕೆಂಪು ಎಣ್ಣೆಯನ್ನು ಬುಡ್ಡಿಗೆ ಹಾಕಿ ಹಳೆಯ ಬಟ್ಟೆಯನ್ನು ಬತ್ತಿ ಹೊಸೆದು ಬುಡ್ಡಿಗೆ ಬಳಸುತ್ತಿದ್ದರು. ಬಿಳಿ ಸೀಮೆಎಣ್ಣೆಯನ್ನು ಲಾಟೀನು, ಲ್ಯಾಂಪುಗಳಿಗೆ ಉಪಯೋಗಿಸಲಾಗುತ್ತಿತ್ತು. ಲ್ಯಾಟೀನು, ಲ್ಯಾಂಪುಗಳಿಗೆ ಗಾಜಿನ ಚಿಮುಣಿಯಿದ್ದದರಿಂದ ಹೊಗೆಯಿಲ್ಲದೆ ಉರಿಯುತ್ತಿತ್ತು. ಗೋಡೆಗೆ ಸಿಕ್ಕಿಸಿದ್ದ ಬುಡ್ಡಿಯ ಹೊಗೆಯು ಮನೆಯ ಮೇಲ್ಚಾವಣೆಗೆ ಸೇರಿ ಕಿಟ್ಟಗಟ್ಟಿರುತ್ತಿತ್ತು.[೧೫]

ಚಿಕ್ಕನಾಯಕನಹಳ್ಳಿ ತಾಲ್ಲೂಕು ತೆಂಗಿನ ಬೆಳೆಗೆ ಪ್ರಸಿದ್ದಿಯಾಗಿದ್ದು, ಅಲ್ಲಿನ ತೆಂಗಿನಕಾಯಿ, ಕೊಬ್ಬರಿ ಹೊರದೇಶಗಳಿಗೆ ರಫ್ತಾಗುತ್ತಿತ್ತು. ದೇವಾಂಗದವರು ತಯಾರಿಸಿದ ಉಜ್ಜುಗಂಬಳಿಯನ್ನು ಭಾರತದ ರಕ್ಷಣಾ ಇಲಾಖೆಗೆ ಸರಬರಾಜು ಮಾಡಲಾಗುತ್ತಿತ್ತು. ಪ್ರತಿ ವಾರಕ್ಕೊಮ್ಮೆ ಸೋಮವಾರ ದಂದು ನಡೆಯುತ್ತಿದ್ದ ಚಿಕ್ಕನಾಯಕನಹಳ್ಳಿ ಸಂತೆಗೆ ಸುತ್ತುಮುತ್ತಲಿನ ಗ್ರಾಮಗಳಿಂದ ಬರುತ್ತಿದ್ದ

ವರ್ತಕರು ಅವರ ಎತ್ತಿನ ಗಾಡಿಗಳಲ್ಲಿ ಸರಕು ಸಾಮಾನುಗಳನ್ನು ತಂದು, ಸಂತೆಯ ಮೈದಾನದಲ್ಲಿ ತಾವೇ ಗುಡಾರಗಳನ್ನು ಹಾಕಿ ಮಾರಾಟ ಮಾಡುತ್ತಿದ್ದರು. ಮಾಧ್ಯಮಿಕ ಶಾಲೆಯ ಎರಡನೆಯ ವರ್ಗದಲ್ಲಿ ಸಂಸ್ಕೃತ, ಉರ್ದು, ನೇಯ್ಗೆ, ಆರೋಗ್ಯ ಪಾಠಗಳ ಕಲಿಕೆಯಾಗುತ್ತಿತ್ತು. ನೂಲುವ ಸಲುವಾಗಿ ಚರಕ ಮತ್ತು ಹಿತ್ತಾಳೆಯ ತಕಲಿಗಳನ್ನು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದರು. ಒಂದು ಸೇರು ಪುರಿಗೆ ೧ ದುಡ್ಡು ಅಂದರೆ ಆಗಿನ ನಾಲ್ಕು ಕಾಸು ಜಾತ್ರೆಯಲ್ಲಿ ಆಗುತ್ತಿದ್ದ ವ್ಯಾಪಾರವಾಗಿತ್ತು. ತಿಪಟೂರು ಕೊಬ್ಬರಿಮಂಡಿ ಸಂತೆಗೆ ರಾತ್ರಿ ವೇಳೆ ಹೋಗುವಾಗ ಅರಣ್ಯ ವ್ಯಾಪ್ತಿಯ ಕೋಣನಕಾವಲಿನಲ್ಲಿ ಕಳ್ಳತನವಾಗುತ್ತಿದ್ದನ್ನು ತಡೆಯಲು ಹತ್ತಾರು ಗಾಡಿಗಳು ಒಂದೆಡೆ ರಸ್ತೆ ಬದಿಯಲ್ಲಿ ಸೇರಿ, ಲಾಟೀನು, ದೊಣ್ಣೆಗಳನ್ನು ಹಿಡಿದು ತಿಪಟೂರು ಹತ್ತಿರದ ಕರಡಿ ಗ್ರಾಮದ ಹತ್ತಿರ ಬಂದು ಸೇರಿದಾಗ ಗಾಡಿಗಳು ಸುರಕ್ಷಿತವೆಂದು ಭಾವಿಸಲಾಗುತ್ತಿತ್ತು. ವ್ಯಾಪಾರ ವ್ಯವಹಾರಗಳಿಗೆ ಊರಿಂದ ಊರಿಗೆ ನಡೆದೇ ಹೋಗಬೇಕಾಗಿತ್ತು. ಬಸ್ಸುಗಳ, ವಾಹನಗಳ ಸಂಖ್ಯೆ ಕಡಿಮೆಯಿತ್ತು.

ಮೇಲನಹಳ್ಳಿ ಗ್ರಾಮದಲ್ಲಿ ಇರುವ ಬಹುತೇಕರಿಗೆ ಜಮೀನುಗಳಿದ್ದವು, ಜಮೀನಿಲ್ಲದ ಮೂರು-ನಾಲ್ಕು ಕುಟುಂಬದವರು, ಜಮೀನು ಉಳ್ಳವರ ಹೊಲ ತೋಟಗಳಲ್ಲಿ ಕೂಲಿ-ನಾಲಿ ಮಾಡಿ ದೈನಂದಿನ ಜೀವನ ನಡೆಸುತ್ತಿದ್ದರು, ಚಿಕ್ಕನಾಯಕನಹಳ್ಳಿ ಪಟ್ಟಣದ ಬುಡೆನ್‌ಸಾಬ್ ಸೌದೆ ಅಂಗಡಿಯೊಂದನ್ನು ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ಇಟ್ಟಿದ್ದನು. ಗ್ರಾಮಗಳಲ್ಲಿನ ತೋಟದ ಒಣಗಿದ ಮರಗಳನ್ನು ಖರೀದಿಸಿ, ಕತ್ತರಿಸಿ ಎತ್ತಿನಗಾಡಿಗಳಲ್ಲಿ ತನ್ನ ಅಂಗಡಿಗೆ ಸಾಗಿಸುತ್ತಿದ್ದ, ಮರಗಳನ್ನು ಕಡಿದು, ಜಮೀನಿನ ಮಾಲೀಕರ ಒಪ್ಪಿಗೆಯಂತೆ, ಮಾತುಕತೆಯಂತೆ ದೊಡ್ಡಮರಗಳಿಂದ ಹಲಗೆಗಳನ್ನು ಮಾಡಿ ಬಂದಂತಹ ಹಲಗೆಗಳಲ್ಲಿ ಅರ್ಧದಷ್ಟನ್ನು ತೋಟದ ಮರಗಳ ಮಾಲೀಕನಿಗೆ ನೀಡುವ ಪದ್ಧತಿಯಿತ್ತು.[೧೬]

ತೆಂಗಿನ ಕಾಯಿಯ ಸಿಪ್ಪೆಗಳನ್ನು ತೆಂಗಿನ ಗರಿಯಲ್ಲಿ ಕಟ್ಟಿ ಹಳ್ಳದ ಗುಂಡಿಯಲ್ಲಿ ಹಾಕಲಾಗುತ್ತಿತ್ತು. ಎರಡು ಮೂರು ತಿಂಗಳು ಕೊಳೆತ ಮೇಲೆ ಗೌಡರ ಆಳುಗಳು ಹಳ್ಳದ ಗುಂಡಿಯಲ್ಲಿನ ಕೊಳೆತ ತೆಂಗಿನ ಮಟ್ಟೆಗಳನ್ನು ಮರದ ಬಡಿಗೆಯಿಂದ ಬಡಿದು, ಹೊರಭಾಗದ ಲದ್ದಿಯನ್ನು ತೆಗೆದು, ನಾರನ್ನು ಹಿಂಜಿ ಬಿಸಿಲಿನಲ್ಲಿ ಒಣಗಿಸಿಡುತ್ತಿದ್ದರು, ಅದರಿಂದ ದನಗಳನ್ನು ಕಟ್ಟಿ ಹಾಕಲು ಹಗ್ಗ, ಉಳುವೆಯ ಹಗ್ಗ, ಬಾವಿಯಿಂದ ನೀರು ಸೇದುವ ಹಗ್ಗ ಮೊದಲಾದುವನ್ನು ಹೊಸೆಯುತ್ತಿದ್ದರು ತೆಂಗಿನ ಕಾಯಿಗಳನ್ನು ತೆಂಗಿನ ಮರದಿಂದ ಕೀಳುವ ಕೆಲಸಕ್ಕೆ ಕಾಯಿಗಳನ್ನು ಕೂಲಿ ಕೊಡುವ ಪದ್ಧತಿಯಿತ್ತು. ೧೦೦ ಕಾಯಿ ಕಿತ್ತಿದ್ದಕ್ಕೆ ನಾಲ್ಕು ಕಾಯಿ ಕೂಲಿ ನೀಡಲಾಗುತ್ತಿತ್ತು, ತೋಟದವರು ಜಿಡ್ಡಿ (ರಾಶಿ) ಹಾಕಿದ ಮೇಲೆ ಅವನ್ನು ಎಣಿಸಿ ತನ್ನ ಲೆಕ್ಕಾಚಾರದಂತೆ ಕೊಬ್ಬರಿಯಾದಾಗ ಹೆಚ್ಚು ತೂಕ ಬರುವ ಒಳ್ಳೆಯ ದಪ್ಪನೆಯ ಕಾಯಿಗಳನ್ನು ಕಾಯಿ ಕೀಳುವ

ಕೂಲಿಕಾರನು ಕೂಲಿಯಾಗಿ ಪಡೆಯುತ್ತಾನೆ. ಆಗ ಸೀಮೆಎಣ್ಣೆ ಬಳಕೆಗೆ ಬಂದಿದ್ದರೂ ಅದು ರಾತ್ರಿ ವೇಳೆ ಪ್ರಯಾಣಿಸುವ ಎತ್ತಿನ ಗಾಡಿಗೆ ಕಟ್ಟುವ ಲಾಟೀನಿಗೆ ಬಳಕೆಯಾಗುತ್ತಿತ್ತು. ಮನೆ ಬಳಕೆಗೆ ಜಾಸ್ತಿ ಉಪಯೋಗಿಸುತ್ತಿರಲಿಲ್ಲ, ಮನೆಗಳಲ್ಲಿ ಆಗ ಕುರ್ಚಿ ಮೇಜುಗಳಿರಲಿಲ್ಲ, ಕುಳಿತುಕೊಳ್ಳಲು ಈಚಲುಚಾಪೆ ಕಡ್ಡಿಚಾಪೆ ಅಥವಾ ಮಂದಲಿಕೆ, ಊಟಕ್ಕೆ ಕುಳಿತುಕೊಳ್ಳಲು ಮರದ ಮಣೆ, ಅದರ ಮುಂದೆ ಮೂರು ಕಾಲಿನ ತೀವಟಿಗೆ, ಅದರ ಮೇಲೆ ಕಂಚಿನ ಗಂಗಳವನ್ನು ಇಟ್ಟುಕೊಂಡು ಊಟ ಮಾಡುವುದು ಪದ್ಧತಿಯಾಗಿತ್ತು. ಸುಗ್ಗಿಯ ಕಾಲದಲ್ಲಿ ಮನೆಯವರ ಜೊತೆಗೆ ಊರಿನ ಹೊರ ಆಳುಗಳನ್ನು ನೇಮಿಸಿಕೊಂಡು ಹೊಲದಲ್ಲಿ ಬೆಳೆದ ಬೆಳೆಯ ಹುಲ್ಲು ಕೊಯ್ಸಿ, ಹೊರೆ ಕಟ್ಟಿಸಿ ತಮ್ಮ ಹೊಲಗಳಲ್ಲಿ ಮೆದೆ ಹಾಕಿಸುತ್ತಿದ್ದರು. ಅಲ್ಲಿಯೇ ಹೊಲದಲ್ಲಿ ಕಣ ಮಾಡಿಸುತ್ತಿದ್ದರು, ಸಂಕ್ರಾಂತಿ ಹಬ್ಬದ ಹೊತ್ತಿಗೆ ಹೊಲ ಕೊಯ್ದು, ಮೆದೆ ಹಾಕಿ, ಅಂಕಲು ಆಯ್ದು, ಕಣ ಮಾಡುವ ಕೆಲಸ ಮುಗಿದಿರುತ್ತಿತ್ತು. ದೊಡ್ಡ ಜಮೀನಿನ ಮಾಲೀಕರು ವ್ಯವಸಾಯಕ್ಕೆ ಎರಡು-ಮೂರು ಜೊತೆ ಎತ್ತುಗಳನ್ನು ಸಾಕಿರುತ್ತಿದ್ದರು, ದೊಡ್ಡ ಜಮೀನ್ದಾರರ ಮನೆಗಳಲ್ಲಿ ಮೂವರು ಆಳುಗಳು ಇರುತ್ತಿದ್ದು, ಅಗಿಂದಾಗ್ಗೆ ಇರುವಂತಹ ಎಲ್ಲಾ ಕೆಲಸ ಕಾರ್ಯಗಳನ್ನು ಉತ್ತಮವಾಗಿ ನಡೆಸುತ್ತಿದ್ದರು, ಎತ್ತುಗಳ ಜೊತೆಗೆ ಒಂದು ಜೊತೆ ಹೋರಿಯನ್ನು ಸಾಕಿದ್ದರು. ಅಮಲ್ದಾರರು ಗ್ರಾಮಕ್ಕೆ ವಾರ್ಷಿಕ ಜಮಾಬಂದಿಗೆ ಬಂದಾಗ ಅವರನ್ನು ಊರಿನ ಗೌಡರು ಊರಿನ ಮುಂಭಾಗದಲ್ಲಿ ನಿರ್ಮಿಸಿದ್ದ ವಿಶಾಲವಾದ ಕಲ್ಲುಕಟ್ಟೆಯ ಮೇಲೆ ಕುಳ್ಳಿರಿಸಿ ಕೊಂಬು, ಕಹಳೆಗಳನ್ನು ಊದುತ್ತ ಊರಿನೊಳಗೆ ಬರಮಾಡಿಕೊಳ್ಳಲಾಗುತ್ತಿತ್ತು.[೧೭] ಊರಿಗೆ ಅಂದಿನ ದಿನಗಳಲ್ಲಿ ವರ್ತಮಾನ ಪತ್ರಿಕೆಗಳು ಬರುತ್ತಿರಲಿಲ್ಲ ಶಾಲಾ ಮಾಸ್ತರಿಗೆ ಶಿಕ್ಷಣಕ್ಕೆ ಸಂಬಂಧಿಸಿದ 'ವಿದ್ಯಾದಾಯಿನಿ' ಮಾಸ ಪತ್ರಿಕೆ ಬರುತ್ತಿತ್ತು. ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಇದೇ ಗ್ರಾಮದ ಕಂಚಿಪತಿಗೌಡರಿಗೆ ಪೋಸ್ಟ್‌ಮ್ಯಾನ್‌ರ ಮೂಲಕ ಮೈಸೂರು ಗೆಜೆಟ್ ಬರುತ್ತಿತ್ತು. ಶ್ಯಾನುಭೋಗ ಗುಂಡಪ್ಪನವರು ಎರಡು ಮೂರು ದಿನಗಳಿಗೊಮ್ಮೆ ಅಥವಾ ಕಂದಾಯ ಅಧಿಕಾರಿಗಳು ಬರುವ ದಿನದಂದು ಚಿಕ್ಕನಾಯಕನಹಳ್ಳಿ ಪಟ್ಟಣದಿಂದ ಮೇಲನಹಳ್ಳಿ ಗ್ರಾಮಕ್ಕೆ ಬಂದು ಹೋಗುತ್ತಿದ್ದರು. ಶ್ಯಾನುಭೋಗರು ಗ್ರಾಮದ ದೇವಸ್ಥಾನದ ಬಾವಿಯಲ್ಲಿ ನೀರು ಸೇದಿ ಸ್ನಾನ ಮಾಡಿ ಮಡಿಯುಟ್ಟು ಪಕ್ಕದ ಮಂಟಪದಲ್ಲಿ ಅಡಿಗೆ ಮಾಡಿ ಊಟ ಮಾಡುವುದರಲ್ಲಿಯೇ ಅರ್ಧ ವೇಳೆ ಕಳೆಯುತ್ತಿತ್ತು. ಸಾಲಪತ್ರ, ಪಾಲುಪತ್ರ, ಸರ್ಕಾರಕ್ಕೆ ಅರ್ಜಿ ಬರೆಯಲು ಜನರು ಶ್ಯಾನುಭೋಗ ಗುಂಡಪ್ಪನನ್ನು ಆಶ್ರಯಿಸಬೇಕಿತ್ತು.

ಶ್ಯಾನುಭೋಗರ ಸ್ವಯಂಪಾಕಕ್ಕೆ ಬೇಕಾದ ಅಕ್ಕಿ, ಬೇಳೆ, ಹಾಲು ವಗೈರು ಸಾಮಾನುಗಳನ್ನು ಗ್ರಾಮದ ಗೌಡರೇ ಕಳುಹಿಸುತ್ತಿದ್ದರು. ಸರ್ಕಾರಿ ಅಧಿಕಾರಿಗಳು, ಗಣ್ಯರು ಊರಿಗೆ ಬಂದಾಗ ಗೌಡರದೇ ಅತಿಥ್ಯ ಇರುತ್ತಿತ್ತು. ಜನ ಅಂದು ತಮ್ಮ ಬಟ್ಟೆಗಳನ್ನು ಶುಚಿ ಮಾಡಲು ಸಾಬೂನು

ಬಳಸುತ್ತಿರಲಿಲ್ಲ. ಔಗು ಪ್ರದೇಶದಲ್ಲಿ ಮಳೆಗಾಲದಲ್ಲಿ ನಿಲ್ಲುತ್ತಿದ್ದ ನೀರು, ಬೇಸಿಗೆಯಲ್ಲಿ ಒಣಗಿ ಹೋದಾಗ ಆ ಪ್ರದೇಶದಲ್ಲಿ ಬಿಳಿ ಬಣ್ಣದ ಚೌಳು ಅಲ್ಲಲ್ಲಿ ಕಾಣಿಸುತ್ತಿತ್ತು. ಅದನ್ನು ಸ್ನಾನಕ್ಕೆ ಜನರು ಬಳಸುತ್ತಿದ್ದರು. ಚೌಳುಪ್ಪನ್ನು ಆಗ ಅಡಿಗೆಗೆ ಉಪಯೋಗಿಸುತ್ತಿದ್ದರು. ಸೀಗೆಕಾಯಿಯನ್ನು ಬೇಯಿಸಿ ಅದನ್ನು ಬಟ್ಟೆ ಮಡಿ ಮಾಡಲು ಮತ್ತು ಮೈ ತೊಳೆಯಲು ಉಪಯೋಗಿಸುತ್ತಿದ್ದರು. ಬಟ್ಟೆಗಳನ್ನು ಶುದ್ದಿ ಮಾಡಲು ಉಬ್ಬೆ ಹಾಕುತ್ತಿದ್ದರು. ಉಬ್ಬೆಗೆ ಚೌಳು ಅಥವಾ ಅಂಟುವಾಳುಕಾಯಿ ಉಪಯೋಗಿಸುತ್ತಿದ್ದರು. ಉಬ್ಬೆಗೆ ಹಾಕಿದಾಗ ಬಟ್ಟೆಗಳ ಕೊಳೆ ಹೋಗುವುದರ ಜೊತೆಗೆ ಕೆಲವೊಮ್ಮೆ ಬಟ್ಟೆಗಳ ಬಣ್ಣವೂ ಹೋಗುತ್ತಿದ್ದುದುಂಟು, ಊರಿನ ಶುಭ-ಅಶುಭ ಕಾರ್ಯಗಳಿಗೆ ಬಟ್ಟೆ ಒಗೆದು ಕೊಡುವ ಕೆಲಸ ಗ್ರಾಮದ ಅಗಸರು ಮಾಡುತ್ತಿದ್ದರು. ಮಗು ಹುಟ್ಟಿದಾಗ ಬಾಣಂತಿಯ ಸೀರೆಯನ್ನು ಅಗಸನಿಗೆ ಕೊಡುತ್ತಿದ್ದರು. ಸೂತಕ ಕಳೆದುಕೊಳ್ಳಲು ಅಗಸರವನ ಮಡಿ ಬಟ್ಟೆಗಳೆ ಬೇಕು, ಸತ್ತಾಗ ಶವಕ್ಕೆ ಹೊಸಬಟ್ಟೆ ಉಡಿಸಿ, ಹಳೆಯ ಬಟ್ಟೆ ಅಗಸರಿಗೆ ಕೊಡುತ್ತಿದ್ದರು, ಮದುವೆಯಂತಹ ಶುಭ ಕಾರ್ಯಗಳಲ್ಲಿ, ದೇವರ ಉತ್ಸವದಲ್ಲಿ ಪಂಜು ಹಿಡಿಯುವುದು, ದೀವಟಿಗೆ ಸಲಾಮು ಹಾಕುವುದು, ರಥೋತ್ಸವಕ್ಕೆ ತೇರಿಗೆ ಕಟ್ಟುವ ದಾಳ, ದೇವರಿಗೆ ನಡೆಮುಡಿ ಹಾಕಲು ಬಟ್ಟೆ, ಈತನಿಂದಲೇ ಮಡಿ ಆಗಬೇಕು, ಈ ಕೆಲಸ ವಂಶ ಪಾರಂಪರ್ಯವಾಗಿ ನಡೆದುಕೊಂಡು ಬಂದಿತ್ತು, ರೈತರು ಅಗಸರಿಗೆ ಸುಗ್ಗಿಯ ಕಾಲದಲ್ಲಿ ತಮ್ಮ ಕಣದಲ್ಲಿ ವರ್ಷಕ್ಕಿಷ್ಟು ಎಂದು ನಿಗದಿಮಾಡಿದಂತೆ ದವಸ ಧಾನ್ಯ ಕೊಡುತ್ತಿದ್ದರು.

೧೯೩೦ಕ್ಕೂ ಹಿಂದೆ ವಾರಕ್ಕೊಮ್ಮೆ ರೈತರಿಗೆ ಬೇಸಾಯಕ್ಕೆ ಬಿಡುವಿದ್ದ ಸೋಮವಾರದ ದಿನದಂದು ಕ್ಷೌರದ ಈರಪ್ಪ ಬೇರೆ ಊರಿನಿಂದ ಉದ್ಯೋಗಕ್ಕೆ ಬರುತ್ತಿದ್ದರು. ಸೋಮವಾರವಲ್ಲದೆ, ಹಬ್ಬ, ಜಾತ್ರೆ, ಮದುವೆ ಮುಂತಾದ ವಿಶೇಷ ದಿವಸಗಳಂದು ಕ್ಷೌರಿಕನು ಜನರಿಗೆ ಕ್ಷೌರ ಮಾಡುತ್ತಿದ್ದನು. ಸುಗ್ಗಿಯ ಕಾಲದಲ್ಲಿ ಎಲ್ಲ ಮನೆಯವರು ದವಸ ಧಾನ್ಯಗಳನ್ನು ನಿಗದಿಪಡಿಸಿದಂತೆ ಕ್ಷೌರಿಕನಿಗೆ ಕೊಡುತ್ತಿದ್ದರು. ಕ್ಷೌರಿಕ ವೃತ್ತಿಯ ಜೊತೆಗೆ ಕೃಷಿ ಜಮೀನನ್ನು ಸಹ ಕ್ಷೌರಿಕ ಹೊಂದಿರುತ್ತಿದ್ದರು. ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರರಿಗೆ ಇಂತಹವರ ಮನೆಗೆ ಇಂತಹ ದಿವಸ ಕನ್ನ ಹಾಕುತ್ತೇನೆಂದು ಮುಂಚಿತವಾಗಿ ತಿಳಿಸಿ ಕಳ್ಳತನ ಮಾಡುತ್ತಿದ್ದ ಕೊರವರ ಮಂಜ ಎಂಬ ಕುಖ್ಯಾತ ಕಳ್ಳನನ್ನು ಹಿಡಿಯಲು, ಅಮಲ್ದಾರರು ಪಹರೆಯನ್ನು ನೇಮಿಸುತ್ತಿದ್ದರೂ ಅವರ ಕಣ್ಣ ತಪ್ಪಿಸಿ ಅಂದಿನ ರಾತ್ರಿ ಮುಂಚಿತವಾಗಿ ಹೇಳಿದ್ದಂತಹ ಮನೆಗೆ ಕೊರವರ ಮಂಜನು ಕನ್ನ ಹಾಕುತ್ತಿದ್ದನು.[೧೮] ಕೊರಮರ ಹೆಂಗಸರು ಹಳ್ಳಿಗಳಲ್ಲಿ ಹಾಡು ಹೇಳುತ್ತಾ ಭಿಕ್ಷೆ ಬೇಡುತ್ತಿದ್ದರಲ್ಲದೆ, ಬಳೆ-ಬಿಚ್ಚೋಲೆ, ಕರಿಮಣಿ, ಪಿನ್ನು, ಸೂಜಿ, ದಾರ, ದಬ್ಬಳ, ಬಾಚಣಿಗೆ, ಕನ್ನಡಿ ಮುಂತಾದವುಗಳನ್ನು ಕೊಟ್ಟು ಅದಕ್ಕೆ ಬದಲಾಗಿ ರಾಗಿ, ಜೋಳ, ತೆಂಗಿನಕಾಯಿ ಪಡೆಯುವ ಸಾಟಿ ಪದ್ದತಿಯಿತ್ತು. ಹಚ್ಚೆ ಹೊಯ್ಯುವುದು ಕೊರಮರ ಹೆಣ್ಣುಮಕ್ಕಳಿಗೆ ಅಂಟಿ

ಬಂದ ಕಸುಬಾಗಿತ್ತು. ಕೊರಮರಿಂದ ಹಾಡು ಹೇಳುತ್ತಾ ನೋವನ್ನು ಮರೆಯುತ್ತಾ ಜನರು ಹಚ್ಚೆ ಹೊಯಿಸಿಕೊಳ್ಳುತ್ತಿದ್ದರು.[೧೯]

೨.೫. ಗ್ರಾಮಾಡಳಿತದ ನ್ಯಾಯಾಡಳಿತ ವ್ಯವಸ್ಥೆಯಲ್ಲಿ ದಲಿತರು

ಸ್ಥಳೀಯವಾಗಿ ವ್ಯಾಜ್ಯಗಳು ಹುಟ್ಟಿಕೊಂಡಾಗ, ವಿಷಯವನ್ನು ತಿಳಿದ ಸ್ಥಳದವರಿಂದಲೇ ಗ್ರಾಮದ ಚಾವಡಿಯಲ್ಲಿ ಅಥವಾ ಪ್ರಮುಖ ಊರಿನ ದೇವಸ್ಥಾನದಲ್ಲಿ ಕುಳಿತು, ಎರಡು ಪಕ್ಷಗಳವರ ವಾದ ಪ್ರತಿವಾದಗಳನ್ನೂ ಕೇಳಿ, ತೀರ್ಮಾನಕೊಡುವ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೂ ನಡೆದು ಬರುತ್ತಿತ್ತು. ಜನಪದ ವಿಧಾನ. ಈ ನ್ಯಾಯ ಪಂಚಾಯಿತಿಕೆಯ ತೀರ್ಮಾನದಂತೆ ವ್ಯಾಜ್ಯದ ಉಭಯತ್ರರೂ ನಡೆದುಕೊಳ್ಳುವುದು ವಾಡಿಕೆ. ಇಂದಿನ ದಿನಮಾನದಲ್ಲಿ ಒದಗಿಸಬೇಕಾದ ಪುರಾವೆಯ ಅಸಂಖ್ಯಾತ ಕಾಗದಪತ್ರಗಳು, ಕ್ಷಣ ಕ್ಷಣವೂ ಪಕ್ಷಗಳನ್ನು ಬದಲಾಯಿಸುತ್ತಿರುವ ಸಾಕ್ಷಿಗಳ ಮನಸ್ಸನ್ನು ಓಲೈಸುವ ಕಷ್ಟ, ವಕೀಲರು ಪದೇಪದೇ ಕೇಳುವ ಶುಲ್ಕ ಈ ಎಲ್ಲ ಕಾರಣಗಳಿಂದ ಇಂದೂ ಹಳ್ಳಿಗರು ತಮ್ಮ ದಿನ ನಿತ್ಯವ್ಯವಹಾರಕ್ಕೆ ಸಂಬಂಧಿಸಿದ ಬಹುತೇಕ ವ್ಯಾಜ್ಯಗಳನ್ನು ಸ್ಥಳದ ನ್ಯಾಯ ಪಂಚಾಯಿತಿಕೆಯಲ್ಲಿಯೇ ತೀರ್ಮಾನ ಮಾಡಿಕೊಳ್ಳುತ್ತಾರೆ. ಹಿಂದೆ ಹಳ್ಳಿಗಳಲ್ಲಿ ಪಂಚಾಯಿತಿಕೆಗಳಿಗೆ ಪ್ರಾಮುಖ್ಯತೆ ಬಹಳವಾಗಿತ್ತು. ಆಗಿನ ಕಾಲದಲ್ಲಿ ಆಗುತ್ತಿದ್ದ ತಪ್ಪುಗಳು ವ್ಯಾಜ್ಯ ಕಾರಣಗಳು ಕುರಿತು ವಿಚಾರಣೆ ನಡೆಸುವ ಸಂದರ್ಭದಲ್ಲಿ ಜನರು ಬೀಡಿ, ನಶ್ಯ ಉಪಯೋಗಿಸುವುದಕ್ಕಾಗಲಿ ಅವಕಾಶವಿರುತ್ತಿರಲಿಲ್ಲ. ವಿಚಾರಣೆ ಸನ್ನಿವೇಶದಲ್ಲಿ ತುಂಬಾ ಗಾಂಭೀರ್ಯವಿರುತ್ತಿತ್ತು. ಎರಡು ಪಕ್ಷಗಳವರೂ ಸ್ಥಳೀಯ ಪಂಚಾಯಿತಿ ವಿಚಾರಣೆಗೆ ತಮ್ಮ ತಮ್ಮ ಸಾಕ್ಷಿಗಳನ್ನು ಕರೆತರುತ್ತಿದ್ದರು. ವಿಚಾರಣೆ ತುಂಬಾ ಗಂಭೀರವಾಗಿ ಯಾವುದೇ ಆತುರ ಕಾತುರವಿಲ್ಲದೆ ಮುಚ್ಚುಮರೆಯಿಲ್ಲದ ಗ್ರಾಮಸ್ಥರ ಸಮಕ್ಷಮದಲ್ಲಿ ಕೂಲಂಕಷವಾಗಿ ನಡೆಯುತ್ತಿತ್ತು. ನ್ಯಾಯಿಕ ಪಂಚಾಯಿತಿಯಲ್ಲಿದ್ದವರು ಎಲ್ಲರೂ ಗ್ರಾಮಸ್ಥರೇ ಆದುದರಿಂದಲೂ ಸದರಿ ಗ್ರಾಮದ ವ್ಯಾಪ್ತಿಯ ಜಮೀನು ಮುಂತಾದವುಗಳಲ್ಲಿ ಅವರೆಲ್ಲರಿಗೂ ನೇರ ಅನುಭವವಿದ್ದುದರಿಂದಲೂ ಸತ್ಯವನ್ನು ವಸ್ತುನಿಷ್ಠವಾಗಿ ನಿಖರವಾಗಿ ಕಂಡುಹಿಡಿಯುತ್ತಿದ್ದರು. ಕೆಲವು ವೇಳೆ ಪಂಚಾಯ್ತಿದಾರರೇ ತಪ್ಪು ಯಾರದೆಂದು ಕಂಡುಹಿಡಿಯಲು ಒಂದು ಉಪಸಮಿತಿಯನ್ನು ನಿಯಮಿಸುತ್ತಿದ್ದರು. ಜಮೀನಿನ ವ್ಯಾಜ್ಯವಾಗಿದ್ದರೆ ಜಮೀನು ಯಾರಿಗೆ ನ್ಯಾಯಯುತವಾಗಿ ಸೇರಬೇಕು, ಅದಕ್ಕೆ ಹಣ ಕೊಡಬೇಕಾದರೆ ಯಾರು ಯಾರಿಗೆ ಎಷ್ಟು ಕೊಡಬೇಕು ಎಂಬುದನ್ನು ತೀರ್ಮಾನಿಸಿ ನಿರ್ಧರಿಸುತ್ತಿದ್ದರು. ಹಣಕಾಸು ಲೇವಾದೇವಿ ವ್ಯಾಜ್ಯವಾದರೆ ಅದಕ್ಕೆ ತಕ್ಕ ತೀರ್ಮಾನವನ್ನು ಕೊಡುತ್ತಿದ್ದರು. ಹೊಡೆದಾಟವಾಗಿದ್ದರೆ ವಿಚಾರಿಸಿ ತಪ್ಪು ಯಾರದೆಂದು ಕಂಡುಹಿಡಿದು ದಂಡವನ್ನು ವಿಧಿಸಿ ಆ ಹಣವನ್ನು ಊರೊಟ್ಟಿನ ನಿಧಿಗೆ ಹಾಕುತ್ತಿದ್ದರು. ಕಟ್ಟಿಸಿಕೊಂಡ ದಂಡದಲ್ಲಿ ಸ್ವಲ್ಪ ಭಾಗವನ್ನು ಹೊಡೆದಾಟದಲ್ಲಿ ಗಾಯಗೊಂಡವರ ಉಪಚಾರಕ್ಕಾಗಿ

ಪರಿಹಾರವಾಗಿ ಕೊಡಿಸುತ್ತಿದ್ದರು. ಲೈಂಗಿಕ ಅಪರಾಧಗಳಾದ ಸಂದರ್ಭದಲ್ಲಿ, ಹುಡುಗ ಹುಡುಗಿ ಮದುವೆಯಾಗದವರಾಗಿದ್ದರೆ ಇಬ್ಬರಿಗೂ ಅವರುಗಳ ಜಾತಿ ಮತ್ತು ಇತರ ದೃಷ್ಟಿಗಳಿಂದ ಒಪ್ಪಿದರೆ ಮಾತ್ರ ಅಂತಹವರಿಗೆ ವಿವಾಹ ಮಾಡಿಸುತ್ತಿದ್ದರು. ಬೇರೆ ಬೇರೆ ಜಾತಿಯವರಾಗಿದ್ದರೆ ವಿಚಾರಣೆ ನಡೆಸಿ ದಂಡವನ್ನು ವಿಧಿಸುತ್ತಿದ್ದರು.[೨೦]

ನ್ಯಾಯ ಪಂಚಾಯಿತಿಕೆಯು ಇಂಥ ಸಣ್ಣಪುಟ್ಟ ವ್ಯವಹಾರಗಳಿಗೆ ಮಾತ್ರ ಸೀಮಿತವಾಗಿರದೆ ಖೂನಿ ಹೊರತು ದೊಡ್ಡ ದೊಡ್ಡ ಆಸ್ತಿ ವಿಭಾಗಕ್ಕೆ ಸಂಬಂಧಪಟ್ಟ ವ್ಯಾಜ್ಯಗಳನ್ನೂ ಒಳಗೊಂಡಿದ್ದು ನೂರಕ್ಕೆ ತೊಂಬತ್ತೈದಕ್ಕಿಂತ ಹೆಚ್ಚಿನ ಸಮಸ್ಯೆಗಳು ಸ್ಥಳೀಯ ನ್ಯಾಯ ಪಂಚಾಯಿತಿಗಳಲ್ಲಿ ತೀರ್ಮಾನವಾಗುತ್ತಿದ್ದವು. ಇಂಥ ಪಂಚಾಯಿತಿಕೆಗಳು ನೀಡುತ್ತಿದ್ದ ವ್ಯವಸ್ಥೆಯನ್ನು ನ್ಯಾಯ ಎಂದು ಕರೆಯುತ್ತಿದ್ದರು. ನ್ಯಾಯಕ್ಕೆ ಕುಂತವ್ರೆ, ನ್ಯಾಯ ಬಿದ್ದಯ್ತೆ, ನ್ಯಾಯ ಹೂಡುಸ್ತಿನೀ, ನ್ಯಾಯ ಇಟ್ಕೊಂಡವ್ರೆ ಎಂಬ ಮಾತುಗಳು ಕೆಲವು ಹಳ್ಳಿಗಳಲ್ಲಿ ಪ್ರಚಲಿತದಲ್ಲಿವೆ ಸ್ಥಳೀಯ ನ್ಯಾಯ ಪಂಚಾಯಿತಸ್ಥರು ನೀಡುತ್ತಿದ್ದ ತೀರ್ಮಾನವನ್ನು ಉಭಯ ಪಕ್ಷಗಳವರೂ ಒಪ್ಪುತ್ತಿದ್ದರು. ಪಂಚಾಯಿತಿಯ ತೀರ್ಪನ್ನು ಒಪ್ಪದಿದ್ದವನನ್ನು ಊರಿಗೆ ಒಂಟಿಯಾಗಿ ಮಾಡಿ ಅವನಿಗೆ ಯಾರೂ ಬೆಂಕಿ, ನೀರು ಕೊಡಕೂಡದು, ಅವನೊಂದಿಗೆ ಯಾರೂ ಸೇರಕೂಡದು, ಒಂದು ವೇಳೆ ಯಾರಾದರೂ ಸೇರಿದರೆ ಅವನು ಕೊಡಬೇಕಾದ ದಂಡವನ್ನು ಅವನನ್ನು ಸೇರಿದವರೂ ಕೊಡಬೇಕಾಗುತ್ತದೆ ಎಂದು ಪಂಚಾಯಿತಿಯಿಂದ ನಿರ್ಬಂಧಿಸುತ್ತಿದ್ದರು. ತೀರ್ಮಾನ ಪಡೆದವನು ಸಮಾಜ ಜೀವಿಯಾದುದರಿಂದ ಒಂಟಿಯಾಗಿರಲು ಹೆದರಿ ಪಂಚಾಯಿತಿಯು ತನಗೆ ವಿಧಿಸಿದ ದಂಡವನ್ನು ಕೊಟ್ಟು ಬಿಡುತ್ತಿದ್ದ. ಸಕಾಲಕ್ಕೆ ದಂಡ ಕೊಡದ ತಪ್ಪಿಗಾಗಿ ವಿಧಿಸಿದ ಹೆಚ್ಚು ದಂಡವನ್ನೂ ಕೊಡುತ್ತಿದ್ದ. ಅವನ ಅವಿಧೇಯತೆಗೆ ಗ್ರಾಮದಲ್ಲಿ ಯಾರಾದರೂ ಕುಮ್ಮಕ್ಕು ಕೊಟ್ಟಿದ್ದರೆ ಗ್ರಾಮಸ್ತರು ಅವನಿಗೂ ಸಹ ದಂಡ ವಿಧಿಸುತ್ತಿದ್ದರು.

ನ್ಯಾಯ ತೀರ್ಮಾನಕ್ಕೆ ಹಳ್ಳಿಯ ಪಂಚಾಯಿತಿಕೆಗಳೇ ಅಲ್ಲದೆ ಅದಕ್ಕೂ ಮೇಲುಪಟ್ಟ ನ್ಯಾಯಾಸ್ಥಾನಗಳೂ ಇದ್ದವು. ಎರಡು ಪಕ್ಷದವರಲ್ಲಿ ಯಾವ ಪಕ್ಷಕಾರನಿಗೆ ಹಳ್ಳಿಯ ಪಂಚಾಯಿತಿಕೆಯು ನೀಡಿರುವ ತೀರ್ಪು ಪೂರ್ಣ ಸಮಾಧಾನವನ್ನು ನೀಡಲಿಲ್ಲವೋ ಅವರು ನಾಡಗೌಡರೆಂಬುವರಲ್ಲಿ ಹೋಗಿ ತಮ್ಮ ಮೊಕದ್ದಮೆಯನ್ನು ಅಹವಾಲನ್ನು ದಾಖಲು ಮಾಡುತ್ತಿದ್ದರು. ನಾಡಗೌಡರೆಂದರೆ ಆ ಪ್ರಾಂತದ ಇಂತಿಷ್ಟು ಹಳ್ಳಿಗಳಿಗೆ ಯಜಮಾನರೆಂದು ಜನ ಔಪಚಾರಿಕವಾಗಿ ಒಪ್ಪಿಕೊಂಡವರು. ಈತ ಹಣಕಾಸು ಲೇವಾದೇವಿ, ಜಮೀನ್ದಾರಿ, ದನಕರು ವಹಿವಾಟುಗಳಿಗೆ ಸಂಬಂಧಿಸಿದ ಎಲ್ಲ ದೃಷ್ಟಿಯಿಂದಲೂ ಅನುಕೂಲವಾಗಿದ್ದವನಾಗಿರುತ್ತಿದ್ದ. ನಾಡಗೌಡನ ಮಾತನ್ನು ಇವನ ಆಳ್ವಿಕೆಯ ವ್ಯಾಪ್ತಿಗೆ ಸೇರಿದ ಜನರೆಲ್ಲ ಅಂಗೀಕರಿಸುತ್ತಿದ್ದರು. ಈತ ಇಂಥ ವ್ಯಾಜ್ಯಗಳನ್ನು ತೀರ್ಮಾನ ಮಾಡಲು ಒಂದು ದಿನವನ್ನು ಗೊತ್ತುಮಾಡಿ,

ಒಂದು ನಿಗದಿತ ಸ್ಥಳವನ್ನು ನಿಗದಿ ಮಾಡಿ ಸ್ವಂತ ಖರ್ಚಿನಲ್ಲಿ ಅಲ್ಲಿ ಬಂದು ಬೀಡು ಬಿಡುತ್ತಿದ್ದ. ಒಂದೊಂದು ವೇಳೆ ಜಾತ್ರೆ ಕಾಲದಲ್ಲಿ ಜಾತ್ರೆ ಮೈದಾನದಲ್ಲಿಯೂ ಬೀಡು ಬಿಟ್ಟು ನಾಲ್ಕು ಐದು ದಿನ ವಿಚಾರಣೆ ಮಾಡಿ ನ್ಯಾಯವನ್ನು ಬಗೆಹರಿಸಿ ತೀರ್ಪು ಕೊಟ್ಟು ಹೋಗುತ್ತಿದ್ದ. ಫಿರ್ಯಾದಿಗಾಗಲಿ, ಅಪರಾಧಿಗಾಗಲಿ ಆ ತೀರ್ಮಾನವು ಸಮಾಧಾನವಾಗದಿದ್ದಲ್ಲಿ, ಆಗ ಅವರು ಮೇಲುನಾಡಗೌಡ ಎಂಬುವನಲ್ಲಿ ಹೋಗಿ ಪುನರ್‌ವಿಚಾರಣೆಗೆ ಬೇಡುತ್ತಿದ್ದರು. ಮೇಲುನಾಡಗೌಡ ನೆಂಬುವನು ವರ್ಷಕ್ಕೆ ಒಂದು ಗೊತ್ತಾದ ದಿನದಂದು ನದಿಯ ತೀರ, ಹೊಳೆಯ ದಡ, ತೋಪು, ಬೆಟ್ಟದ ತಪ್ಪಲು ಮುಂತಾದ ವಿಶಾಲ ಪ್ರದೇಶದಲ್ಲಿ ತನ್ನ ದರ್ಬಾರನ್ನು ನಡೆಸುತ್ತಿದ್ದ. ಮೇಲುಗೌಡನ ಜೊತೆಯಲ್ಲಿ ಅನೇಕ ಜನರಿರುತ್ತಿದ್ದರು. ಇವರೆಲ್ಲರ ಊಟ, ಎಲೆ, ಅಡಿಕೆ, ಹೊಗೆಸೊಪ್ಪು ಮುಂತಾದ ಖರ್ಚನ್ನೂ ಫಿರ್ಯಾದಿಯೇ ಕೊಡಬೇಕಾಗುತ್ತಿತ್ತು. ಮೇಲುನಾಡಗೌಡ, ನಾಲ್ಕು ಐದು ದಿನಗಳ ಕಾಲ ಸಾಂಗವಾಗಿ ವ್ಯಾಜ್ಯ ಸ್ವರೂಪವನ್ನು ಸುದೀರ್ಘವಾಗಿ ವಿಚಾರಿಸಿ ಬುದ್ಧಿವಂತಿಕೆಯ ಪ್ರಶ್ನೆಗಳನ್ನು ಹಾಕಿ ಬಹುಮಟ್ಟಿಗೆ ನಿಜಾಂಶವನ್ನು ಕಂಡುಹಿಡಿದು ಸಮರ್ಪಕವಾಗಿ ತೀರ್ಪನ್ನು ಕೊಡುತ್ತಿದ್ದ. ಮೇಲುನಾಡಗೌಡನೂ ತುಂಬ ಧನಿಕನೇ ಆಗಿರುತ್ತಿದ್ದುದರಿಂದ ನ್ಯಾಯ ಕೋರಿ ಬಂದಿದ್ದವರಿಗೆಲ್ಲ ಪಾನಕ ಫಲಾಹಾರ ಮುಂತಾದುವನ್ನು ತನ್ನ ಖರ್ಚಿನಿಂದಲೇ ಹಂಚಿಸುತ್ತಿದ್ದ. ಮೇಲುನಾಡಗೌಡನ ಸಭೆ ರಾಜ ದರ್ಬಾರಿನಂತೆಯೇ ಇರುತ್ತಿತ್ತು. ವಾದಿಯಾಗಲಿ ಪ್ರತಿಪಕ್ಷದವರಾಗಲಿ ಮೇಲುನಾಡಗೌಡನ ತೀರ್ಮಾನವನ್ನು ಒಪ್ಪದಿದ್ದಲ್ಲಿ, ಅವರಿಗೆ ಸರ್ಕಾರದ ಕೋರ್ಟಿಗೆ ಹೋಗಬಹುದಾಗಿತ್ತು.

ಈಚೆಗೆ ನಾಡಗೌಡ, ಮೇಲುನಾಡಗೌಡ ಇವರ ವಿಚಾರಣೆ ತುಂಬ ವಿರಳ, ಆದರೆ ಈಗಲೂ ಸ್ಥಳದ ನ್ಯಾಯ ಪಂಚಾಯಿತಿಗಳಿಂದಲೇ ಸ್ಥಳೀಯ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುವ ಮಂದಿ ಕೆಲವು ಹಳ್ಳಿಗಳಲ್ಲಿದ್ದಾರೆ.

೨.೬. ಮೈಸೂರು ಸಂಸ್ಥಾನದ ಭೂ-ಸಂಬಂಧಿ ಮಸೂದೆ ವ್ಯವಸ್ಥೆಯಲ್ಲಿ ದಲಿತರು

ಈ ಪ್ರಬಂಧದಲ್ಲಿ ಮೈಸೂರು ಸಂಸ್ಥಾನದ ಭೂ ಸಂಬಂಧಿ ಮಸೂದೆಗಳನ್ನು ಕುರಿತು ವಿವೇಚಿಸಲಾಗಿದೆ. ಮೈಸೂರು ಸಂಸ್ಥಾನದಲ್ಲಿ ರೆವಿನ್ಯೂ ಕಾಯಿದೆಗಳುಗೆ ಸಂಬಂಧಿಸಿದಂತೆ ವಿಶೇಷ ಗಮನ ಕೊಡಲಾಯಿತು ಮದ್ರಾಸ ಮತ್ತು ಮುಂಬಯಿ ಪ್ರಾಂತ್ಯಗಳಲ್ಲಿ ಜಾರಿಯಲ್ಲಿದ್ದ ಲ್ಯಾಂಡ ರೆವಿನ್ಯೂ ಕಾಯಿದೆಯನ್ನು ಅಧ್ಯಯನ ಮಾಡಲು ವಿಶೇಷ ಅಧಿಕಾರಿಗಳನ್ನು ಮೈಸೂರು ಸಂಸ್ಥಾನದಿಂದ ಕಳುಹಿಸಲಾಗಿತ್ತು. ಮೈಸೂರು ಸಂಸ್ಥಾನವು ಬಾಂಬೆ ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಅನುಸಾರವಾಗಿ ಕಾಯಿದೆ ಕಾನೂನುಗಳನ್ನು ಇಲ್ಲಿಗೆ ಸರಿಹೊಂದುವಂತೆ ಮಾರ್ಪಡಿಸಿಕೊಂಡಿದ್ದರು. ಅದಕ್ಕಾಗಿ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ೧೮೮೩-೮೪ ರವೆರಗೂ ನಡೆದ ಅಧಿವೇಶನಗಳಲ್ಲಿ ಚರ್ಚೆಗಳು ನಡೆದಿದ್ದವು ರೆವಿನ್ಯೂ ವಿಷಯಕ್ಕೆ ಸಂಬಂಧಿಸಿದ

ನ್ಯಾಯಾಧಿಕಾರಿಗಳ ಒಪ್ಪಿಗೆ ಪಡೆಯಲಾಯಿತು. ನಂತರ ೧೮೮೮ ರಲ್ಲಿ ಮೈಸೂರು ಲ್ಯಾಂಡ ರೆವಿನ್ಯೂ ಕೋಟ್ ಮೈಸೂರು ಸಂಸ್ಥಾನಾದ್ಯಂತ ಜಾರಿಗೆ ಬಂದಿತು. ಈ ಕಾಯಿದೆಯೂ ೧೮೯೧, ೧೮೯೨, ೧೯೦೫, ೧೯೦೯, ೧೯೧೨, ೧೯೧೬, ೧೯೧೯, ೧೯೨೨ ಹೀಗೆ ಹಲವು ಬಾರಿ ಪರಿಷ್ಕರಣೆಗೆ ಒಳಪಟ್ಟಿದೆ. ಇದರಲ್ಲಿ ಲ್ಯಾಂಡ ಇಂಪ್ರೊವ್‌ಮೆಂಟ್ಸ್ ಕಾಯಿದೆ. ಲೋನ್ ರೆಗ್ಯುಲೇಶನ್ ಕಾಯಿದೆ. ಲ್ಯಾಂಡ್ ಆಕ್ವಿಜಿಷನ್ಸ್ ಕಾಯಿದೆಗಳು ಸೇರಿದ್ದವು. ಮೈಸೂರು ಲ್ಯಾಂಡ ರೆವಿನ್ಯೂ ಕೋಡ್ ೧೮೯೦ ರಲ್ಲಿ ಪ್ರಥಮ ಬಾರಿಗೆ ಪ್ರಕಟವಾಯಿತು. ಅದರ ಪರಿಷ್ಕರಣ ಕಾರ್ಯ ೧೯೧೧ ರಲ್ಲಿ ಆಯಿತು. ೧೯೦೨ರ ನಂತರ ರೆವಿನ್ಯೂ ವಿಭಾಗಕ್ಕೆ ರೆವಿನ್ಯೂ ಕಮೀಷನರ್ ಎಂಬ ಮುಖ್ಯ ಅಧಿಕಾರಿಯನ್ನು ನೇಮಿಸಲಾಯಿರು, ೧೯೦೩, ೧೯೦೪ ರ ನಂತರ ಇವರಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವುದರ ಜೊತೆಗೆ ವಿವಿಧ ಜವಾಬ್ದಾರಿಯನ್ನು ಕೊಡಲಾಯಿತು.[೨೦] ಇವರ ಕೆಳಗೆ ಜಿಲ್ಲೆಯಲ್ಲಿ ಡೆಪ್ಯೂಟಿ ಮತ್ತು ಅಸಿಸೆಂಟ್ ಕಮೀಷನರ್‌ಗಳು ಮತ್ತು ತಾಲೂಕಿನ ಅಮಲ್ದಾರರು ರೆವಿನ್ಯೂ ಇಲಾಖೆಗೆ ಸಂಬಂಧಿಸಿದಂತೆ ವಿಶೇಷ ಅಧಿಕಾರ ಪಡೆದರು. ೧೮೮೮ರ ನಂತರ ಜಾರಿಗೆ ಬಂದ ಹಲವು ಕಾಯಿದೆಗಳು ಭೂ ಹಿಡುವಳಿದಾರರಿಗೆ ರಕ್ಷಣೆ ನೀಡುವುದರ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ವಹಿಸಿದವು. ಅವುಗಳಲ್ಲಿ ಕೆಲವನ್ನು ಹೀಗೆ ಗಮನಿಸಬಹುದು. ಲ್ಯಾಂಡ್ ರೆವಿನ್ಯೂ ಕೋಡ್‌ನ ೭೭ನೇ ವಿಧಿಯ ಪ್ರಕಾರ ಯಾವುದೇ ಭೂ ಹಿಡುವಳಿದಾರರನು ತನ್ನ ಹಿಡುವಳಿಯನ್ನು ಪರಬಾರೆ ಮಾಡಿದಾಗ ಡೆಪ್ಯೂಟಿ ಕಮೀಷನ್‌ರವರು ಪರಬಾರೆಯಾದ ಭೂ ಹಿಡುವಳಿಯ ಬಗ್ಗೆ ಸರಕಾರದ ವತಿಯಿಂದ ಸಂಬಂಧಿಸಿದ ಹಿಡುವಳಿದಾರನಿಗೆ ಮಾಹಿತಿ ನೀಡುವ ಕ್ರಮವೂ ಜಾರಿಗೆ ಬಂದಿತ್ತು.[೨೧] ಈ ವಿಧಾನಕ್ಕಾಗಿ ಪ್ರತಿ ತಾಲೂಕು ಕಛೇರಿಗಳಲ್ಲಿ ಒಂದು ದಾಖಲಾತಿ ಪುಸ್ತಕವನ್ನಿಡುತ್ತಿದ್ದರು. ಇಲ್ಲಿ ದಾಖಲಾತಿಯಾದ ಅರ್ಜಿಗೂ ಕೋರ್ಟ್ ಫೀ ಮತ್ತು ಸ್ಟಾಂಪ್ ಹಚ್ಚುವುದರ ಮೂಲಕ ಒಂದು ರೂ. ತೆರಿಗೆ ಪಾವತಿ ಮಾಡಬೇಕಾಗಿತ್ತು. ಈ ವಿಧಾನದಿಂದ ಪ್ರತಿಯೊಬ್ಬ ಭೂ ಹಿಡುವಳಿದಾರನ ಹೆಸರುಗಳು ದಾಖಲಾತಿ ಪುಸ್ತಕದಲ್ಲಿ ನೋಂದಾಯಿಸಲ್ಪಟ್ಟಿದ್ದವು. ತನ್ನ ಹಿಸ್ಸೆಗನುಗುಣವಾಗಿ ಕಂದಾಯ ಕಟ್ಟುವ ಮೂಲಕ ಪಟ್ಟವನ್ನು ನವೀಕರಿಸಿಕೊಳ್ಳತ್ತಿದ್ದನು.

ಸ್ಥಳೀಯ ಕೃಷಿಕರು ತಾವು ವಾಸಮಾಡುವ ಗ್ರಾಮದಲ್ಲಿ ಹೊಸದಾಗಿ ಭೂ ಹಿಡುವಳಿಗಳನ್ನು ಕೃಷಿಗೊಳಪಡಿಸುವ ವೇಳೆಯಲ್ಲಿ ತಮ್ಮ ಗ್ರಾಮದಲ್ಲಿರುವ ಶ್ಯಾನುಭೋಗರ ಹತ್ತಿರ ದರಖಾಸ್ತು ಅರ್ಜಿಗಳನ್ನು ಯಾವ ರೀತಿಯಾದ ತೆರಿಗೆಯನ್ನು ನೀಡದೆ ಬರೆಸಿಕೊಳ್ಳಬಹುದಾಗಿತ್ತು. ಶ್ಯಾನುಭೋಗರು ತಾನು ಬರೆದುಕೊಟ್ಟ ಅರ್ಜಿಯ ಕೆಳಗಿನ ಎಡಭಾಗದಲ್ಲಿ ಸಹಿ ಮಾಡಬೇಕಾಗಿತ್ತು. ಏಕೆಂದರೆ ಇದು ದರಖಾಸ್ತದಾರನನ್ನು ಗುರುತಿಸುವ ಉದ್ದೇಶವಾಗಿತ್ತು.[೨೨] ದರಖಾಸ್ತು ಮೂಲಕ ಭೂಹಿಡುವಳಿ ಹಂಚಿಕೆಯ ಸಂಪೂರ್ಣ ಜವಾಬ್ದಾರಿಯನ್ನು ಜಿಲ್ಲೆಯಲ್ಲಿರುವ ಡೆಪ್ಯೂಟಿ

ಕಮೀಷನರ್ ವಹಿಸಿಕೊಂಡಿದ್ದರು. ಅವರು ಎಕರೆವಾರು ಪ್ರತಿ ಹಿಡುವಳಿಗೆ ಒಂದು ನಿರ್ದಿಷ್ಟ ಬೆಲೆಯನ್ನು ನಿಗದಿಪಡಿಸಿದ್ದರು. ಈ ವೇಳೆಯಲ್ಲಿ ದರಖಾಸ್ತು ನೀಡುವ ಭೂ ಹಿಡುವಳಿಗಳ ವಿಸ್ತೀರ್ಣವು ಪ್ರತಿ ಹಿಡುವಳಿದಾರರನಿಗೆ ಐದು ಎಕರೆಗಳಿಗಿಂತ ಹೆಚ್ಚಾಗಿದ್ದರೆ ಇಲ್ಲವೇ ಮೌಲ್ಯವು ಐದುನೂರುಗಳಿಗಿಂತ ಅಧಿಕವಾಗಿದ್ದರೆ ರೆವಿನ್ಯೂ ಕಮೀಷನರ್ ಅನುಮತಿ ಪಡೆದು ಡೆಪ್ಯೂಟಿ ಕಮೀಷನರ್ ಅವರು ಮಂಜೂರಾತಿ ನೀಡುಬಹುದಾಗಿತ್ತು.[೨೪]

ಒಂದು ಭೂ ಹಿಡುವಳಿಯ ಖಾತೆದಾರನಿಗೆ ಸೇರಿದ ಸರ್ವೆ ನಂಬರಿನಲ್ಲಾಗಲಿ, ಅದರ ಕೋಡ್ ನಂಬರಿನಲ್ಲಾಗಲಿ ಒಬ್ಬ ಭೂ ಹಿಡುವಳಿದಾರನಿಗೆ ಯಾವ ಹಕ್ಕು ಇಲ್ಲವೆಂಬ ವಿಚಾರವನ್ನು ಅಮಲ್ದಾರರ ಗಮನಕ್ಕೆ ಬಂದರೆ ಜಮಾಬಂದಿ ಕಾಲದಲ್ಲಿಯೇ ಆ ವಿಚಾರವನ್ನು ಕುರಿತು ತನಿಖೆ ನಡೆಸುತ್ತಿದ್ದರು. ಒಬ್ಬ ವ್ಯಕ್ತಿಯು ಭೂ ಹಿಡುವಳಿದಾರನಿಗೆ ದಾಸ್ತಾವೇಜಿನ ಮೂಲಕವಾಗಿ ಅಥವಾ ಯಾವ ದಸ್ತಾವೇಜು ಇಲ್ಲದೆಯೂ ೧೨ ವರ್ಷಗಳವರೆಗೆ ಅಥವಾ ಅದಕ್ಕೂ ಹೆಚ್ಚಿನ ಕಾಲಾವಧಿಯವರೆಗೆ ಅವನು ಒಂದು ಭೂ ಹಿಡುವಳಿಯನ್ನು ಸಾಗುವಳಿ ಮಾಡಿದ್ದರೆ ಆ ವಿಚಾರವು ಸ್ಥಳೀಯ ಜನರ ಗಮನಕ್ಕೆ ಬಂದಿರಬೇಕಾಗಿತ್ತು. ಈ ಅವಧಿಯಲ್ಲಿ ಹಿಡುವಳಿದಾರರು ಕಂದಾಯವನ್ನು ಸಲ್ಲಿಸಿದ್ದರೆ ಈಗಾಗಲೆ ದಾಖಲಾದ ಖಾತೆದಾರನ ಬದಲಾಗಿ ತಮ್ಮ ಹೆಸರನ್ನು ದಾಖಲಿಸುವಂತೆ ಅಮಲ್ದಾರರನ್ನು ಕೇಳಿಕೊಳ್ಳಬಹುದಾಗಿತು. ಅದೇ ರೀತಿ ನಿಮ್ಮವರ್ಗದ ಸಮುದಾಯದಿಂದ ಸಾಗುವಳಿಗಾಗಿ ದರಖಾಸ್ತು ಅರ್ಜಿಗಳು ಬಂದರೆ ಡೆಪ್ಯೂಟಿ ಕಮೀಷನರ್ ಅವರು ಸಂಬಂಧಿಸಿದ ಭೂ ಹಿಡುವಳಿಗಳನ್ನು ಹರಾಜು ಮಾಡದೇ ನಿರ್ದಿಷ್ಟಪಡಿಸಿದ ಹಣವನ್ನು ಕಟ್ಟಿಕೊಂಡು ಮೊದಲನೇ ದರಖಾಸ್ತದಾರನಿಗೆ ಕೊಡಬಹುದಾಗಿತ್ತು. ಆದರೆ ಇಂತಹ ಹಿಡುವಳಿಗಳನ್ನು ಪಡೆದವರು ೧೫ ವರ್ಷಗಳಿವರೆಗೆ ಅವುಗಳನ್ನು ಬೇರೆಯವರಿಗೆ ಪರಬಾರೆ ಅಥವಾ ಗುತ್ತಿಗೆ ಕೊಡುವುದಿಲ್ಲವೆಂಬುದಾಗಿ ಮುಚ್ಚಳಿಕೆಯನ್ನು ಬರೆದುಕೊಡಬೇಕಾಗಿತು. ಈ ಷರತ್ತಿನ ಪ್ರಕಾರ ೧೫ ಎಕರೆಗಳಷ್ಟು ಭೂ ಹಿಡುವಳಿಗಳನ್ನು ಮಾತ್ರ ಒಬ್ಬ ಭೂ ಹಿಡುವಳಿದಾರನಿಗೆ ಮಂಜೂರು ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಒಬ್ಬ ಹಿಡುವಳಿದಾರನು ಒಂದು ಭೂ ಹಿಡುವಳಿಯ ಅನುಭವವನ್ನು ಹೊಂದುವುದಕ್ಕೆ ಮೊದಲು ಲ್ಯಾಂಡ್ ರೆವಿನ್ಯೂ ಕೋರ್ಟ್‌ನ ೨೫ನೇ ವಿಧಿಯ ಪ್ರಕಾರ ಅಮಲ್ದಾರರಿಗೆ ಒಂದು ಅರ್ಜಿ ಸಲ್ಲಿಸಬೇಕಾಗಿತ್ತು.

ದಿವಾನರ ಕಾಲಾವಧಿಯಲ್ಲಿ ಬಂದ ಮತ್ತೊಂದು ಪ್ರಮುಖ ಕಾಯಿದೆಯಾದ ಲ್ಯಾಂಡ್ ರೆವಿನ್ಯೂ ಕೋಡ್‌ನ ೪೮ ನೇ ವಿಧಿಯ ಪ್ರಕಾರ ಕೃಷಿಗೊಳಪಟ್ಟ ಭೂ ಹಿಡುವಳಿಗಳನ್ನು ಕೈಗಾರಿಕೆ, ವಾಣಿಜ್ಯೋದ್ಯಮ ಅಥವಾ ಇನ್ನಿತರ ಯಾವುದೇ ಉದ್ದೇಶಗಳಿಗಾಗಿ ಪರಿವರ್ತಿಸುವಾಗ ವಿಶೇಷ ರೀತಿಯ ಕಂದಾಯವನ್ನು ನೀಡಬೇಕಾಗಿತ್ತು. ಅಂದರೆ ಚಿತ್ರದುರ್ಗ ಜಿಲ್ಲೆ ದಾವಣಗೆರೆ ನಗರದಲ್ಲಿ ಎಕರೆ ಒಂದಕ್ಕೆ ಎಂಟು ರೂ. ಗಳಿತ್ತು ಇತರ ಎಲ್ಲಾ ತಾಲೂಕುಗಳಲ್ಲಿಯೂ ಎಕರೆ

ಒಂದಕ್ಕೆ ಆರು ರೂ. ಇತ್ತು ಈ ಕಂದಾಯ ವಿಧಾನವು ಖುಷ್ಕಿ ಹಿಡುವಳಿಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ತರಿ ಮತ್ತು ಭಾಗಾಯ್ತು ಭೂ ಹಿಡುವಳಿಗಳಾಗಿದ್ದರೆ ಆ ಹಿಡುವಳಿಗಿರುವ ಸ್ಥಳೀಯ ದರದ ಎರಡರಷ್ಟು ಹೆಚ್ಚಾಗಿರುತ್ತಿತು. ಇದೇ ರೀತಿ ಇಪ್ಪತ್ತೆಂಟನೇ ವಿಧಿಯ ಪ್ರಕಾರ ಕೃಷಿಗೋಸ್ಕರ ಉಪಯೋಗಿಸುವ ಭೂ ಹಿಡುವಳಿಗಳಲ್ಲಿ ಒಂದು ಸರ್ವೆ ನಂಬರಿನಲ್ಲಿ ಸಾಗುವಳಿಗೆ ಯೋಗ್ಯವಲ್ಲವೆಂದು ಬಿಟ್ಟಿರುವ ಹಿಡುವಳಿಗಳನ್ನು ಯಾರಾದರೂ ಕೃಷಿಗೊಳಪಡಿಸ ಬಹುದಾಗಿತ್ತು. ಇದಕ್ಕೆ ಯಾವುದೇ ರೀತಿಯ ಕಂದಾಯವನ್ನು ವಿಧಿಸುತ್ತಿರಲಿಲ್ಲ. ಆದರೆ ಈ ಪ್ರದೇಶವು ರಸ್ತೆ, ಕೆರೆ. ಸ್ಮಶಾನಕ್ಕಾಗಿ ಅಥವಾ ವಸತಿಗೃಹಗಳನ್ನು ಕಟ್ಟಲು ಉಪಯೋಗಿಸಲ್ಪಡುವ ಪ್ರದೇಶವಾಗಿದ್ದರೆ ಕೃಷಿಗೊಳಪಡಿಸಲು ಅವಕಾಶವಿರಲಿಲ್ಲ.[೨೫]

ದಲಿತರು ಮತ್ತು ದರಖಾಸ್ತು ಭೂ-ಹಿಡುವಳಿ ಪದ್ಧತಿ

ಕಮೀಷನರ್ ಆಡಾಳಿತಾವಧಿಯಲ್ಲಿ (೧೮೩೧– ೧೮೮೧) ಹೊಸದಾಗಿ ಭೂ ಹಿಡುವಳಿಗಳನ್ನು ಕೃಷಿಗೊಳಪಡಿಸುವಾಗ ದರಖಾಸ್ತು ಮೂಲಕ ಅರ್ಜಿ ಸಲ್ಲಿಸಿ ಭೂ ಹಿಡುವಳಿಗಳನ್ನು ಪಡೆಯಬೇಕಾಗಿತ್ತು. ಅವರು ದರಖಾಸ್ತು ಠೇವಣಿಯನ್ನು ನಿರ್ದಿಷ್ಟ ಮೊತ್ತವು ನಾಲ್ಕನೇ ಒಂದಷ್ಟಾಗಿತ್ತು. ಉಳಿದ ಮೊತ್ತವನ್ನು ಸಮಾನವಾದ ಆರು ಕಂತುಗಳಲ್ಲಿ ಪ್ರತಿ ತಿಂಗಳು ೨೦ನೇ ತಾರೀಖಿನೊಳಗೆ ತಾಲೂಕು ಕಛೇರಿಯಲ್ಲಿ ಪಾವತಿಸಬೇಕಾಗಿತ್ತು. ದರಖಾಸ್ತುದಾರನು ಪಾವತಿಸಿದ ಹಣಕ್ಕೆ ರಸೀದಿ ಕೊಡುತ್ತಿದ್ದರು. ಈ ರೀತಿಯಾದ ವ್ಯವಸ್ಥೆ ಕಮೀಷನರ್ ಆಡಳಿತಾವಧಿಯಲ್ಲಿ ಜಾರಿಗೆ ಬಂದಿತು. ಸಾಮಾನ್ಯವಾಗಿ ದರಖಾಸ್ತನ್ನು ಚೀಫ್‌ಕಮೀಷನರ್ ಮಂಜೂರು ಮಾಡುತ್ತಿದ್ದರು. ದರಖಾಸ್ತು ಭೂ ಹಿಡುವಳಿಗೆ ವಿಷಯವು ತಿಳಿಸಿದ ಒಂದು ವಾರದ ಒಳಗಾಗಿ ಈ ಮೊದಲೇ ಮುಂಗಡವಾಗಿ ಠೇವಣಿಯಾಗಿಟ್ಟಿರುವ ಹಣದ ಜೊತೆಗೆ ವಾರ್ಷಿಕವಾದ ಆದಾಯದಲ್ಲಿ ಕಾಲುಭಾಗ ಠೇವಣಿಗೆ ಸರಿಯಾಗುವಂತೆ ನಗದಾಗಲಿ, ಸರಕಾರದ ಕ್ರಯಪತ್ರದ ಮೂಲಕವೇ ಆಗಲಿ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಠೇವಣಿ ಇಡಬೇಕಾಗಿತ್ತು. ನಂತರ ಸರಕಾರದ ಷರತ್ತುಗಳಿಗೆ ಒಪ್ಪಿಕೊಂಡು ಒಂದು ಕರಾರು ಪತ್ರ ಬರೆದು ಕೊಡಬೇಕಾಗಿತ್ತು. ಯಾವುದೇ ದರಖಾಸ್ತುದಾರನು ಗೊತ್ತುಪಡಿಸಿದ ಠೇವಣಿಯನ್ನು ಕಟ್ಟದಿದ್ದಲ್ಲಿ ಅಥವಾ ಕರಾರಿಗೆ ರುಜು ಮಾಡಲು ನಿರಾಕರಿಸಿದರೆ ಅವನು ಮೊದಲಿಟ್ಟ ಠೇವಣಿಯು ರದ್ದಾಗುತ್ತಿತು. ಅಲ್ಲದೇ ಮಂಜೂರಾದ ದರಖಾಸ್ತು ಹಿಡುವಳಿಗಳನ್ನು ರದ್ದುಪಡಿಸುತ್ತಿದ್ದರು. ಕಮೀಷನರ್ ಕಾಲದಲ್ಲಾದ ಮತ್ತೊಂದು ಪ್ರಮುಖ ಅಂಶವೆಂದರೆ ಪ್ರತಿಯೊಬ್ಬ ದರಖಾಸ್ತುದಾರನು ಹೊಂದಿರುವ ಭೂ ಹಿಡುವಳಿಯ ವಿಧಾನವನ್ನು ಪಟ್ಟದಲ್ಲಿ ದಾಖಲಿಸುವ ಕ್ರಮ ಹೀಗಿತ್ತು.[೨೬]

೧. ಭೂ ಹಿಡುವಳಿದಾರರಾಗಿದ್ದು ಸ್ವತಃ ಸಾಗುವಳಿ ಮಾಡದೇ ಇದ್ದರೆ ಸ್ವತಃ ಸಾಗುವಳಿ ಮಾಡದೆ ಇರುವ ಜಮೀನ್ದಾರ ಎಂದು ಗುರುತಿಸುತ್ತಿದ್ದರು.

೨. ಸ್ವತಃ ಸಾಗುವಳಿ ಮಾಡುವವರನ್ನು ಸಾಗುವಳಿ ಜಮೀನ್ದಾರ ಅಥವಾ ರೈತರೆಂದು ಕರೆಯುತ್ತಿದ್ದರು.

೩. ಭೂಮಿಯಲ್ಲಿ ಹಕ್ಕಿಲ್ಲವೆ ನಗದು ಅಥವಾ ಧಾನ್ಯ ಗುತ್ತಿಗೆಗೆ ಸಾಗುವಳಿ ಮಾಡುವವರನ್ನು ಗುತ್ತಿಗೆದಾರರೆಂದು ಕರೆಯುತ್ತಿದ್ದರು. ಕೃಷಿ ಕೆಲಸಕ್ಕೂ. ದನಗಳನ್ನು ಕಾಯುವುದಕ್ಕೂ ಇರುವ ವ್ಯಕ್ತಿಗಳನ್ನು ವ್ಯವಸಾಯ ಜೀತಗಾರರೆಂದು, ಸುಗ್ಗಿ ಮೊದಲಾದ ಕೆಲಸಗಳಲ್ಲಿ ತಾತ್ಕಾಲಿಕವಾಗಿ ಕೂಲಿ ಕೆಲಸ ಮಾಡುವವರನ್ನು ದಿನಗೂಲಿಗಳೆಂದು ಕರೆಯುತ್ತಿದ್ದರು.[೨೭]

ಇದರ ಜೊತೆಗೆ ಪ್ರತಿಯೊಬ್ಬ ದರಖಾಸ್ತುದಾರನು ಅವನ ಜಾತಿ ಧರ್ಮದ ವಿವರಗಳನ್ನು ಸ್ಥಳೀಯವಾಗಿ ವಾಡಿಕೆಯಲ್ಲಿರುವವಂತೆ ಬರೆಸಬೇಕಾಗಿತ್ತು. ಪ್ರತಿ ವ್ಯಕ್ತಿಯು ಯಾವ ಸಮುದಾಯದ ಅಥವಾ ಯಾವ ಧರ್ಮಕ್ಕೆ ಸೇರಿದವನು ಎಂಬುದನ್ನು ವಿವರವಾಗಿ ಗುರುತಿಸುವ ಕೆಲಸ ನಡೆಯಿತು. ಉದಾರಣೆಗೆ ಬ್ರಾಹ್ಮಣರಲ್ಲಿ ಬರುವ ಒಳಪಂಗಡಗಳನ್ನು ಗುರುತಿಸಲಾಗಿತ್ತು. ಹಾಗೆಯೇ ಇತರ ಸಮುದಾಯಗಳಲ್ಲಿ ಕುಂಚಿಟಿಗ ಕಾಡುಕುರುಬ, ಕಮ್ಮ, ಗೌಡ, ಒಕ್ಕಲಿಗ, ಹೀಗೆ ಇತರ ಸಮುದಾಯಗಳನ್ನು ಗುರುತಿಸಲಾಗಿತ್ತು. ಅದೇ ರೀತಿ ಕೆಳ ಸಮುದಾಯಗಳಲ್ಲಿಯೂ ಹೊಲೆಯ, ಮಾದಿಗರ ಭೇದವನ್ನು, ಮುಸ್ಲಿಂ ಸಮುದಾಯದಲ್ಲಿ ಸೈಯದ್, ಶೇಕ್, ಪಠಾನ್, ಸುನ್ನಿ, ಅದೇರೀತಿ ಕ್ರೈಸ್ತರಲ್ಲಿರುವ ರೋಮನ್, ಕ್ಯಾಥೋಲಿಕ್ ಮೊದಲಾದ ಸಮೂಹಗಳಿಗೆ ಸೇರಿದವರು ದರಖಾಸ್ತು ಅರ್ಜಿ ಸಲ್ಲಿಸುವಾಗಲೇ ತಮ್ಮ ಸಮುದಾಯದ ವಿವರವನ್ನು ನೀಡಬೇಕಾಗಿತ್ತು.[೨೮]

ದಿವಾನರ ಕಾಲಾವಧಿಯಲ್ಲಿಯೂ ೧೮೮೧ ರ ನಂತರ ದರಖಾಸ್ತು ಭೂ ಹಿಡುವಳಿಗಳಿಗೆ ಹೆಚ್ಚು ಮಹತ್ವ ನೀಡಲಾಯಿತು. ಈ ಅವಧಿಯಲ್ಲಿ ಹೊಸದಾಗಿ ಭೂ ಹಿಡುವಳಿಗಳನ್ನು ಕೃಷಿಗೊಳಪಡಿಸುವಾಗ ದರಖಾಸ್ತು ಅರ್ಜಿ ಸಲ್ಲಿಸಿ ತಾಲೂಕಿನ ಅಮಲ್ದಾರರಿಂದ ಮಂಜೂರಾತಿ ಪಡೆದ ನಂತರವೇ ಹಿಡುವಳಿಗಳನ್ನು ಕೃಷಿಗೊಳಪಡಿಸಬೇಕಾಗಿತ್ತು. ಆ ಕ್ರಮವೆಂದರೆ ಒಬ್ಬ ವ್ಯಕ್ತಿಗೆ ದರಖಾಸ್ತು ಮಂಜೂರಾದ ತರುವಾಯ ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಶ್ಯಾನುಭೋಗರು ತಯಾರಿಸುತ್ತಿದ್ದರು. ತನಗೆ ಮಂಜೂರಾದ ಭೂಮಿಯ ಬಗ್ಗೆ ಖಚಿತಪಡಿಸಿಕೊಳ್ಳಲು ಮಂಜೂರಾತಿ ಪತ್ರವನ್ನು ಪಡೆಯುವ ವ್ಯವಸ್ಥೆ ದಿವಾನರ ಕಾಲದಲ್ಲಿತ್ತು. ಅಂದಿನ ದರಖಾಸ್ತು ಪತ್ರದಲ್ಲಿ ಒಂದು ಭೂ ಹಿಡುವಳಿಯ ನಂಬರ್, ಹಿಡುವಳಿದಾರರ ಹೆಸರು, ತಾರೀಖು ಮತ್ತು ಹಿಡುವಳಿಯು ತರಿ, ಖುಷ್ಕಿ ಮತ್ತು ಬಾಗಾಯ್ತು ಎಂಬ ಅದರ ಸ್ವಭಾವವನ್ನು ಸ್ಪಷ್ಟವಾಗಿ ನಮೂದಿಸಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ೧೯೧೮ ರಿಂದ ಸುಮಾರು ೧೦ ವರುಷಗಳಲ್ಲಿ ಮಂಜೂರಾದ ದರಖಾಸ್ತು ಭೂ ಹಿಡುವಳಿಗಳ ಅಂಕಿ ಅಂಶಗಳನ್ನು ಈ ಕೆಳಗಿನಂತೆ ಗಮನಿಸಬಹುದು.[೨೯]

ದಲಿತರಿಗೆ ಮಂಜೂರಾದ ದರಖಾಸ್ತು ಭೂ–ಹಿಡುವಳಿ

೧೯೧೮ – ೧೯೨

ವರ್ಷ	ದರಖಾಸ್ತು ಭೂಮಿ
೧೯೧೮–೧೯	೨೩೪
೧೯೧೯–೨೦	೬೮೯
೧೯೨೦–೨೧	೫೬೨
೧೯೨೧–೨೨	೭೨೬
೧೯೨೨–೨೩	೧.೨೯೬
೧೯೨೩–೨೪	೧.೦೪೨
೧೯೨೪–೨೫	೧.೭೮೪
೧೯೨೫–೨೬	೧.೬೩೦
೧೯೨೬–೨೭	೨.೦೧೮
೧೯೨೭–೨೮	೨.೨೦೯

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದರೆ ದಿವಾನರ ಕಾಲದಲ್ಲಿ ದರಖಾಸ್ತು. ಭೂ ಹಿಡುವಳಿಗಳಿದ್ದ ಮಹತ್ವ ಸ್ಪಷ್ಟವಾಗಿ ತಿಳಿಯುತ್ತದೆ. ಏಕೆಂದರೆ ಕೃಷಿ ಮಾಡಲ್ಪಟ್ಟ ಭೂ ಹಿಡುವಳಿಗಳು ಕಂದಾಯ ಇಲಾಖೆಯು ಆಡಳಿತ ವ್ಯವಸ್ಥೆಯಲ್ಲಿ ಬರಲು ಮತ್ತು ಸಮುದಾಯದಲ್ಲಿರುವ ಎಲ್ಲರಿಗೂ ಭೂ ಹಿಡುವಳಿಗಳನ್ನು ಸಮಾನವಾಗಿ ಹಂಚಿಕೆಯಾಗುವಲ್ಲಿ ದರಖಾಸ್ತು ಭೂ ಹಿಡುವಳಿಯ ಮಂಜೂರಾತಿ ಪ್ರಮುಖ ಪಾತ್ರವಹಿಸಿತ್ತು.[೩೦] ಇದರಿಂದ ಸರಕಾರಕ್ಕೆ ಠೇವಣಿ ಹಣ, ಸ್ಟಾಂಪ್ ಶುಲ್ಕ ಮತ್ತು ಭೂ ಕಂದಾಯದ ವಸೂಲಾತಿಯಲ್ಲಾಗುವ ದುರುಪಯೋಗವನ್ನು ಸುಲಭವಾಗಿ ತಡೆಯಬಹುದಾಗಿತ್ತು. ಈ ವ್ಯವಸ್ಥೆಯಿಂದಾಗಿ ಗ್ರಾಮಗಳಲ್ಲಿನ ಪಟೇಲರು ಮತ್ತು ಶ್ಯಾನುಭೋಗರು ಸರಕಾರದ ನೇರ ನಿಯಂತ್ರಣಕ್ಕೊಳಪಡುತ್ತಿದ್ದರು.[೩೧]

ಒಟ್ಟಿನಲ್ಲಿ ೧೮೮೧ರ ನಂತರ ಬಂದ ಭೂ ಸಂಬಂಧಿ ಮಸೂದೆಗಳ ಭೂ ಹಿಡುವಳಿದಾರ ನಿಗೆ ಕೃಷಿಯಲ್ಲಿ ಭದ್ರತೆ ನೀಡುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿರುವದನ್ನು ಈ ಸಂದರ್ಭದಲ್ಲಿ ಗಮನಿಸಲಾಗಿದೆ.

೨.೭. ಚಿತ್ರದುರ್ಗದ ನಾಯಕರ ನಂತರದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ದಲಿತರು

ಚಿತ್ರದುರ್ಗವನ್ನು ದೀರ್ಘಕಾಲದವರೆಗೆ ಆಳಿದ ನಾಯಕ ಅರಸರ ನಂತರದ ಕಾಲಾವಧಿಯ ಗ್ರಾಮಾಡಳಿತ ವ್ಯವಸ್ಥೆ ಹಾಗೂ ಚಿತ್ರದುರ್ಗ ಪ್ರದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ

ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ೧೮ನೇ ಶತಮಾನದ ನಂತರದಲ್ಲಿ ಆಡಳಿತ ನಡೆಸಿದ ಹೈದರಾಲಿ ಮತ್ತು ಟಿಪ್ಪುಸುಲ್ತಾನ ಹಾಗೂ ವಸಾಹತ್ತೋತರ ಮೈಸೂರು ಒಡೆಯರ ಕಾಲಾವಧಿಯನ್ನು ಗಮನದಲ್ಲಿಟ್ಟು ಈ ಲೇಖನದಲ್ಲಿ ಗ್ರಾಮಾಡಳಿತ ವ್ಯವಸ್ಥೆಯನ್ನು ವಿವೇಚಿಸಲಾಗಿದೆ.

ಟಿಪ್ಪು ಕಾಲದ ಕಂದಾಯ ವ್ಯವಸ್ಥೆಯನ್ನು ಸುಭೇದಾರ್ ಮತ್ತು ಅಮೀಲರು ತಾಲೂಕಿನ ಕಂದಾಯ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ವೈಯಕ್ತಿಕವಾಗಿ ನೋಡಿಕೊಳ್ಳುತ್ತಿದ್ದರು. ಹೋಬಳಿಯ ಮುಖ್ಯಸ್ಥನಿಗೆ ಪಾರುಪತ್ತೆ ಎಂದು ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಇವರು ಮುಸ್ಲಿಂ ಸಮುದಾಯದವರಾಗಿದ್ದರು. ಅವರು ಪ್ರತಿಯೊಂದು ಗ್ರಾಮಗಳಿಗೂ ಭೇಟಿ ನೀಡಿ ಸಾಗುವಳಿಯಾದ ಭೂ ಹಿಡುವಳಿಗಳ ಮತ್ತು ಕೆರೆಗಳ ನೀರಾವರಿಗೆ ಒಳಪಟ್ಟ ಭೂಮಿಯ ಬಗ್ಗೆ ಸಮೀಕ್ಷೆ ಮಾಡುತ್ತಿದ್ದರು. ಪಾರುಪತ್ತೆದಾರನು ಗ್ರಾಮದ ಪಟೇಲ್ ಮತ್ತು ಶ್ಯಾನುಭೋಗರಿಂದ ಕಂದಾಯ ಸಂಗ್ರಹಿಸಿ ಅಮೀಲರ ಕಛೇರಿಗೆ ಸಲ್ಲಿಸುತ್ತಿದ್ದರು. ಕಂದಾಯವನ್ನು ಧಾನ್ಯ ಮತ್ತು ನಗದು ರೂಪದಲ್ಲಿಯೂ ಸಂಗ್ರಹಿಸಲಾಗುತ್ತಿತ್ತು. ಸಾಮಾನ್ಯವಾಗಿ ಗ್ರಾಮದ ಶ್ಯಾನುಭೋಗರು ಬ್ರಾಹ್ಮಣರಾಗಿದ್ದರು. ಈ ಅಧಿಕಾರಿಗಳು ಅನುವಂಶಿಕವಾಗಿ ನೇಮಕಗೊಳ್ಳುತ್ತಿದ್ದರು ಅಧಿಕಾರಿಗಳಿಗೆ ಹಣದ ರೂಪದಲ್ಲಿ ವೇತನ ನೀಡುತ್ತಿದ್ದರು.

ಸನ್ ೧೮೮೧ ರಿಂದ ೧೯೪೭ರ ವರೆಗಿನ ಜಿಲ್ಲಾ ಆಡಳಿತ ಸ್ವರೂಪವು ಬ್ರಿಟಿಷ್ ಕಮೀಷನರ್ ಕಾಲದಂತೆ ಮುಂದುವರೆದಿತ್ತು. ಈ ಅವಧಿಯಲ್ಲಿ ಮೈಸೂರು ಸಂಸ್ಥಾನದಾದ್ಯಂತ, ಏಕರೂಪದ ಗ್ರಾಮಾಡಳಿತ ವ್ಯವಸ್ಥೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಇಲ್ಲಿ ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯನ್ನು ೯ ತಾಲೂಕು ಕೇಂದ್ರಗಳನ್ನಾಗಿ ವಿಭಾಗ ಮಾಡಲಾಗಿದ್ದು. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ತಾಲೂಕಗಳಲ್ಲಿ ಅಮಲ್ದಾರರು ಹೋಬಳಿ ಮಟ್ಟದಲ್ಲಿ ಶೇಖ್‌ದಾರರು ಗ್ರಾಮಗಳಲ್ಲಿ ಪಟೇಲರು ಮತ್ತು ಶ್ಯಾನುಭೋಗರು ಆಡಳಿತಾತ್ಮಕ ಕಾರ್ಯ ನಿರ್ವಹಣೆಯನ್ನು ವಹಿಸಿಕೊಂಡಿದ್ದರು ಇದೆ ಸಂದರ್ಭದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ. ನೀರಗಂಟಿ, ತೋಟಿ, ತಳಾರಿ ಇನ್ನೂ ಮುಂತಾದ ಗ್ರಾಮ ನೌಕರಿಗಳು ಈ ಸಮಯದಲ್ಲಿ ಕಾರ್ಯನಿರ್ವಹಿಸಿದರೂ ವಸಾಹತೋತ್ತರ ಕಾಲಾವಧಿಯಲ್ಲಿ ತಮ್ಮ ಹಿಂದಿನ ಮಹತ್ವವನ್ನು ಕಳೆದುಕೊಂಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಗ್ರಾಮದ ಆಡಳಿತವು ತೃಪ್ತಿಕರವಾಗಿ ನಡೆಯುವಂತೆ ಮಾಡಲು ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ಪಟೇಲರನು ನೇಮಿಸಲಾಗುತ್ತಿತ್ತು. ಪಟೇಲನ್ನು ತನ್ನ ಗ್ರಾಮದಲ್ಲಿ ಖಾಯಂ ವಾಸವಾಗಿರಬೇಕಿತ್ತು. ತಾಲೂಕ ಅಮಲ್ದಾರರ ಅನುಮತಿಯನ್ನು ಪಡೆಯದೇ ಪಟೇಲನಾಗಲಿ ಶ್ಯಾನುಭೋಗನಾಗಲಿ ಏಳು ದಿನಗಳಿಗಿಂತ ಹೆಚ್ಚು ದಿನಗಳವರೆಗೆ ಗ್ರಾಮದಿಂದ ಗೈರು ಹಾಜರು ಆಗುವಂತಿರಲ್ಲಿಲ್ಲ ಪಟೇಲರುಗಳಿಂದ ಸರಕಾರಕ್ಕೆ ಸಲ್ಲಬೇಕಾದ ಮುಖ್ಯವಾದ ಕರ್ತವ್ಯಗಳನ್ನು ಪರ್ಯಾಲೋಚಿಸಿ ಅವರುಗಳಿಗೆ ಸಿಗಬೇಕಾದ ಗೌರವವನ್ನು ಗಮನದಲ್ಲಿರಿಸಿಕೊಂಡು ಮೈಸೂರು

ಮಹಾರಾಜರೆ ಕೆಲವು ಇನಾಮುಗಳನ್ನು ಸಂಪೂರ್ಣವಾಗಿ ನೌಕರಿ ಇನಾಮುಗಳಾಗಿ ಬಿಡುತ್ತಿದ್ದರು ಪಟೇಲರುಗಳನ್ನು ಯಾವುದಾದರೂ ಜರೂರಂತೆ ಸಂದರ್ಭಗಳು ಒದಗಿದಾಗ ಪೋಲಿಸ್, ರೆವಿನ್ಯೂ ಮತ್ತು ಇತರೆ ಇಲಾಖೆಗಳಲ್ಲಿ ನೌಕರಿಗೆ ಕರೆಸಿಕೊಳ್ಳುವುದ್ದಕ್ಕೆ ಅರ್ಹರಾದಂಥ ಸರಕಾರಿ ನೌಕರನ್ನಾಗಿ ಭಾವಿಸಬೇಕೆಂತಲೂ ಮತ್ತು ಅವರುಗಳಿಗೆ ೧೮೪೪ರ ಜನವರಿಯಲ್ಲಿ ಕಮೀಷನರ್ ಮಾರ್ಕ ಕಬ್ಬನ್‌ರವರಿಂದ ಕೊಡಲ್ಪಟ್ಟಿರುವ ಸನ್ನದುಗಳನ್ನು ಸಂಪೂರ್ಣವಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ಜಾರಿಗೆ ತಂದಿದ್ದರು. ಗ್ರಾಮದ ಆಡಳಿತಾಧಿಕಾರಿಯಾಗಿ ಪಟೇಲನು ನಿರ್ವಹಿಸುವ ಪ್ರಮುಖ ಕಾರ್ಯಗಳೆಂದರೆ ಲ್ಯಾಂಡ್ ರೆವಿನ್ಯೂ ನಿಬಂದನೆಗಳಿಗೆ ಸೂಚಿಸಿರುವ ನಿಯಮಗಳಿಗೆ ಅನುಸಾರವಾಗಿ ಕಂದಾಯವನ್ನು ವಸೂಲಿ ಮಾಡಿ ಅದಕ್ಕೆ ರಸೀದಿಗಳನ್ನು ಕೊಟ್ಟು ಹಣವನ್ನು ತಾಲೂಕು ಕಛೇರಿಗೆ ಪಾವತಿಸುವುದು. ಗ್ರಾಮದ ಕೆರೆಗಳನ್ನು ನಾಲೆಗಳನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳಲು ಗ್ರಾಮದಲ್ಲಿರುವ ಸರಕಾರಿ ಅರಣ್ಯ ಪ್ರದೇಶವನ್ನು ನೋಡಿಕೊಳ್ಳುವುದು ರಸ್ತೆಯ ಪಕ್ಕದಲ್ಲಿರುವ ಸಾಲುಮರಗಳನ್ನು ನೋಡಿಕೊಳ್ಳುವುದು. ತನ್ನ ಗ್ರಾಮಕ್ಕೆ ಸೇರಿದ ಹಿಡುವಳಿಯಲ್ಲಿಲ್ಲದ ಸರಕಾರಿ ಜಮೀನುಗಳ ಬಾಂದುಗಳನ್ನು ಪಹಣಿ, ಗುರುತು ಕಲ್ಲುಗಳನ್ನು ಸರಿಯಾಗಿ ಇಟ್ಟಿಕೊಳ್ಳಬೇಕಾಗಿತ್ತು.[೨]

ಗ್ರಾಮದ ಶ್ಯಾನುಭೋಗಿಕೆ ನೌಕರಿಯನ್ನು ಮಾಡುತ್ತಿರುವ ಪ್ರತಿಯೊಬ್ಬನು ಎಷ್ಟು ಗ್ರಾಮಗಳ ಕೆಲಸವನ್ನು ನಿರ್ವಹಿಸಲು ಸಮರ್ಥನಾಗಿರುವನೋ ಅಷ್ಟು ಗ್ರಾಮಗಳ ಶ್ಯಾನುಭೋಗಿಕೆ ಕೆಲಸವನ್ನು ಒದಗಿಸುವುದಿತ್ತು. ಕೆಲವು ಸಂದರ್ಭದಲ್ಲಿ ಇರುವ ಶ್ಯಾನುಭೋಗ ಹುದ್ದೆಗಳನ್ನು ಪುನಃ ವಿಂಗಡಿಸಬಹುದಾಗಿತ್ತು. ಒಬ್ಬ ಶ್ಯಾನುಭೋಗನು ಕೆಲಸ ನಿರ್ವಹಿಸಲು ಸಮರ್ಥನಾಗಿರುವಷ್ಟಕ್ಕಿಂತ ಹೆಚ್ಚು ಗ್ರಾಮಗಳು ಇದ್ದರೆ ಮತ್ತೊಬ್ಬ ಶ್ಯಾನುಭೋಗನನ್ನು ಸರಕಾರ ನೇಮಿಸುತ್ತಿತ್ತು ಶ್ಯಾನುಭೋಗರು ಬದಲಿ ಗ್ರಾಮವನ್ನು ಬಯಸಿದರೇ ಒಂದು ವರ್ಷ ಮೊದಲೇ ಆ ಬಗ್ಗೆ ಅರ್ಜಿಯನ್ನು ಸಲ್ಲಿಸಿರಬೇಕಿತ್ತು ಶ್ಯಾನುಭೋಗರಿಗೆ ಮಾತ್ರ ಒಂದಕ್ಕಿಂತ ಜಾಸ್ತಿಗ್ರಾಮಗಳ ಆಡಳಿತ ನಿರ್ವಹಣೆಯನ್ನು ವಹಿಸಲಾಗಿತ್ತು. ಶ್ಯಾನುಭೋಗರು ತಮ್ಮ ಗ್ರಾಮದಲ್ಲಿ ಅಥವಾ ಫಿರ್ಕಾಕ್ಕೆ ಸೇರಿದ ಒಂದು ಗ್ರಾಮದಲ್ಲಿ ವಾಸವಾಗಿರಬೇಕಿತ್ತು ತನ್ನ ಗ್ರಾಮದ ಹಿಡುವಳಿದಾರನಾಗಲೂ ಅಪೇಕ್ಷಿಸಿದರೆ ಯಾವುದೇ ಪ್ರತಿಫಲ ಇಲ್ಲದೆ ಶ್ಯಾನುಭೋಗನು ದರಖಾಸ್ತುಗಳನ್ನು ನೀಡಬೇಕಿತ್ತು. ಗ್ರಾಮ ಮಟ್ಟದ ಕಂದಾಯ ಅಧಿಕಾರಿಗಳಾಗಿ ಪ್ರತಿ ವರ್ಷವು ಗ್ರಾಮ ಮಟ್ಟದಲ್ಲಿನ ರೈತರ ವಾರ್ಷಿಕ ಯೋಜನೆಯನ್ನು ತಯಾರಿಸುತ್ತಿದ್ದರು ಶ್ಯಾನುಭೋಗರು ಕಂದಾಯ ಭೂಮಿಯನ್ನು ಖುಷ್ಕಿ, ತರಿ, ಬಾಗಾಯ್ತು ಎಂಬುದಾಗಿ ವಿಂಗಡಿಸಿ ನಿಗದಿತ ಕಂದಾಯವನ್ನು ಗೊತ್ತುಪಡಿಸುತ್ತಿದ್ದರು. ಗ್ರಾಮದ ಬೆಳೆಗಳ ಬಿತ್ತನೆ ಪ್ರದೇಶ ಮತ್ತು ಇಳುವರಿ ಕಂದಾಯ ವಸೂಲಿ ಮಾಡಿದ ಬಗ್ಗೆ ತನ್ನ ರಜಿಸ್ಟರ್‌ಗಳಲ್ಲಿ ದಾಖಲಿಸಿಕೊಳ್ಳುವುದು ಶ್ಯಾನುಭೋಗನ ಮುಖ್ಯ ಕರ್ತವ್ಯವಾಗಿತ್ತು. ಚಿತ್ರದುರ್ಗ ಪ್ರದೇಶದ

ಕಂದಾಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ, ಪಟೇಲ ಮತ್ತು ಶ್ಯಾನುಭೋಗರುಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಗಮನಿಸಿದರೆ ಸಾಮಾನ್ಯವಾಗಿ ಶ್ಯಾನುಭೋಗರುಗಳಿಗೆ ಓದುಬರಹ ಗೊತ್ತಿದ್ದು, ಕಂದಾಯ ಇಲಾಖೆಯ ಆಡಳಿತದಲ್ಲಿ ಸಮರ್ಥರಾಗಿದ್ದರು ಗ್ರಾಮದ ಮುಖಂಡರಾಗಿದ್ದ ಪಟೇಲರಲ್ಲಿ ಬಹುಸಂಖ್ಯಾತರು ಓದು ಬರಹ ಕಲಿತವರಾಗಿದ್ದರು. ಆದರೆ ಅವರಲ್ಲಿ ಅಸಮರ್ಥರೂ ಇದ್ದರು. ಸುಮಾರು ೪೮ ಜನರಿಗೆ ಸಹಿ ಮಾಡಲು ಬಂದರೆ, ಓದಲು, ಬರೆಯಲು ಬರುತಿರಲಿಲ್ಲ. ೧೭ ಜನರಿಗೆ ಓದು, ಬರಹದ ಜೊತೆಗೆ ಸಹಿ ಮಾಡಲು ಸಹ ಬರುತ್ತಿರಲಿಲ್ಲ. ಅಂದರೆ ಗ್ರಾಮದ ಪ್ರಭಾವಿ ಭೂಮಾಲೀಕರು ಅವಿದ್ಯಾಂತರಾಗಿದ್ದರು. ಸಮಾಜದ ಉನ್ನತ ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಭೂ ಹಿಡುವಳಿದಾರರ ಪ್ರಾಬಲ್ಯದಿಂದಲೂ ಹಲವು ಗ್ರಾಮಗಳು ಕೂಡಿದ್ದವು. ದೊಡ್ಡ ಭೂ ಹಿಡುವಳಿಗಳಲ್ಲಿ ಸಾಮಾನ್ಯವಾಗಿ ಅರ್ಧ ಕಿಲೋ ಮೀಟರವರೆಗೆ ಉದ್ದವಾದ ಹಿಡುವಳಿಗಳು ಒಬ್ಬನೇ ವ್ಯಕ್ತಿಯ ಒಡೆತನದಲ್ಲಿದ್ದವು, ಚಳ್ಳಕೆರೆ, ಜಗಳೂರು, ಹಿರಿಯೂರು, ತಾಲೂಕುಗಳಲ್ಲಿ ಹೆಚ್ಚಾಗಿ ಇದು ಕಂಡು ಬರುತ್ತದೆ. ೧೯೨೩-೨೪ ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸಾಮಾನ್ಯವಾಗಿ ಭೂ ಹಿಡುವಳಿಗಳ ಗಾತ್ರವು ಒಂದರಿಂದ ೫೦೦ ಎಕರೆ ಒಡೆತನ ಹೊಂದಿರುವ ಭೂ ಹಿಡುವಳಿದಾರರೂ ಇದ್ದರು. ಸಾಮಾನ್ಯವಾಗಿ ಪ್ರಬಲ ಭೂ ಹಿಡುವಳಿದಾರರು ಗ್ರಾಮದ ಪಟೇಲರುಗಳಾಗಿದ್ದರು.[೩೩]

ಅಂದಿನ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಚಿತ್ರದುರ್ಗ ಜಿಲ್ಲೆಯ ಪ್ರಮುಖ ಸಮುದಾಯಗಳೆಂದರೆ ಲಿಂಗಾಯತ, ಬೇಡ(ನಾಯಕ), ಒಕ್ಕಲಿಗ, ಆದಿಕರ್ನಾಟಕ, ಮುಸ್ಲಿಂ, ಕುರುಬ, ಗೊಲ್ಲ, ಮತ್ತು ದೇವಾಂಗ ಇನ್ನಿತರ ಸಮುದಾಯಗಳು ಇದ್ದರೂ ೧೮೮೧-೧೯೪೭ರ ಅವಧಿಯಲ್ಲಿ ಹೆಚ್ಚು ಪ್ರಾಬಲ್ಯದಿಂದ ಗ್ರಾಮಾಂತರ ಪ್ರದೇಶದ ಪ್ರಧಾನ ಜಾತಿಗಳಾಗಿ ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅಗ್ರಮಾನ್ಯತೆಯನ್ನು ಪಡೆದ ಸಮುದಾಯಗಳಲ್ಲಿ ಲಿಂಗಾಯತರು ಮತ್ತು ಒಕ್ಕಲಿಗ ಸಮುದಾಯಗಳು ಸೇರುತ್ತವೆ. ಸಂಖ್ಯೆಯ ದೃಷ್ಟಿಯಲ್ಲಿ ಹಾಗೂ ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಲ್ಲಿ ಪ್ರಮುಖರಾಗಿರುವ ಲಿಂಗಾಯತರು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ, ದಾವಣಗೆರೆ, ಹರಿಹರ, ಜಗಳೂರು ತಾಲೂಕುಗಳಲ್ಲಿ ಗ್ರಾಮಾಂತರ ಪ್ರದೇಶದ ಬದುಕನ್ನು, ಊರಿನ ಆಗುಹೋಗುಗಳ ದೃಷ್ಟಿಯಿಂದ ನೋಡಿದರೆ ಮಹತ್ವದ ಪಾತ್ರವನ್ನು ವಹಿಸಿದರು. ಲಿಂಗಾಯತ ಸಮುದಾರದ ಮುಂದಾಳುಗಳು ಹೇಳಿದಂತೆ ಉಳಿದ ಸಮುದಾಯಗಳು ಕೇಳುವ ಅವರ ಕೃಪೆಗಾಗಿ ಕಾಯುವ ವ್ಯವಸ್ಥೆ ಇದ್ದಿತ್ತು ಕೆಲವು ತಾಲೂಕುಗಳಾದ್ಯಂತ ಕ್ಷೇತ್ರಕಾರ್ಯ ಕೈಗೊಂಡ ನನಗೆ ಈ ಬಹುತೇಕ ತಾಲೂಕುಗಳ ಮತ್ತು ಇಲ್ಲಿನ ತಾಲೂಕುಗಳ ಬಾರಬಲೂತಿ ರಿಜಿಸ್ಟರ್‌ಗಳ ಅಧ್ಯಯನದಿಂದಲೂ ಗ್ರಾಮದ ದೊಡ್ಡಕುಳ, ದೊಡ್ಡ ಭೂ ಮಾಲಿಕ, ದೊಡ್ಡ ರೈತ, ದೊಡ್ಡ ಬಂಧುಬಳಗವುಳ್ಳ

ಕುಟುಂಬದ ಯಜಮಾನ, ಈ ಲಕ್ಷಣಗಳಿಂದಾಗಿ ಅವನ ಮಾತು ಸರಕಾರದ ಆಜ್ಞೆಗಿಂತ ಶಕ್ತಿಶಾಲಿಯಾಗಿತ್ತು ಎಂಬುದು ತಿಳಿಯುತ್ತದೆ. ಗ್ರಾಮದ ಆಡಳಿತವು ಸಂಸ್ಥಾನದ ಆಡಳಿತಕ್ಕಿಂತ ದೊಡ್ಡದಾಗಿತ್ತು, ಎಂಬ ಭಾವನೆ ಬೇರೂರಿತ್ತು. ಅನೇಕ ವ್ಯಾಜ್ಯಗಳು ಎಷ್ಟೋ ಸಲ ಪಟೇಲರುಗಳಿಂದ ತೀರ್ಮಾನಕ್ಕೊಳಪಡುತ್ತಿದ್ದವು. ಪಟೇಲರ ನ್ಯಾಯ ಬರೀ ತಮ್ಮ ಸಮುದಾಯಕಷ್ಟೆಯಲ್ಲದೇ ಇಡೀ ಗ್ರಾಮವನ್ನು ನಿಯಂತ್ರಿಸುತ್ತಿತ್ತು. ಈ ಗೌಡಿಕೆಯು ತಲೆಮಾರುಗಳಿಂದ ಅನುಭವಿಸುತ್ತಾ ಬಂದ ಹಕ್ಕಾಗಿರುತ್ತದೆ.[೩೪]

ಚಿತ್ರದುರ್ಗ ಜಿಲ್ಲೆಯ ಒಂಭತ್ತು ತಾಲೂಕಗಳಲ್ಲಿಯೂ ಇರುವ ಗ್ರಾಮದಲ್ಲಿ ಇದೇ ರೀತಿಯಾಗಿ ಆಡಳಿತ ವ್ಯವಸ್ಥೆ ಜಾರಿಯಾಲ್ಲಿತ್ತು. ಇದರ ಹೊರತಾಗಿ ಯಾವುದೇ ರೀತಿಯಾದ ಬದಲಾವಣೆ ಇರಲಿಲ್ಲ. ಕಂದಾಯ ಆಡಳಿತ ವ್ಯವಸ್ಥೆಯು ಶ್ರೇಣೀಕೃತವಾಗಿರುವುದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ನನ್ನ ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಲಭ್ಯವಿರುವ ದಾಖಲೆಗಳಿಂದ ತಿಳಿದು ಬರುತ್ತದೆ. ಇಲ್ಲಿ ಅಧಿಕಾರವು ಮೇಲಿನಿಂದ ಕೆಳಕ್ಕೂ, ಜವಾಬ್ದಾರಿಯು, ಕೆಳಗಿನಿಂದ ಮೇಲ್ಮುಖವಾಗಿಯೂ ಸಾಗುವುದನ್ನು ಗಮನಿಸಬಹುದು. ತಾಲೂಕಿನ ಅಧಿಕಾರ ವರ್ಗದ ಕೆಳಸ್ತರದಲ್ಲಿ ತಳವಾರ, ಶ್ಯಾನುಭೋಗ, ಪಟೇಲರು, ಶೇಖದಾರ ಮತ್ತು ಅಮಲ್ದಾರರನ್ನು ಒಳಗೊಂಡಿತ್ತು. ಜಿಲ್ಲಾ ಮಟ್ಟದಲ್ಲಿ ಡೆಪ್ಯೂಟಿ ಕಮೀಷನರ್ ಉನ್ನತ ಮಟ್ಟದ ಕಂದಾಯ ಅಧಿಕಾರಿಗಳಾಗಿದ್ದರು, ೧೯೩೩ರಲ್ಲಿ ಹೊಳಲ್ಕೆರೆ ತಾಲೂಕಿನಲ್ಲಿ ೧೯೫ ಜನರು ಪಟೇಲರು, ೪೭ ಜನರು ಶ್ಯಾನುಭೋಗರು ಇದ್ದರು. ಅಂದಿನ ಪಟೇಲರುಗಳ ಸಮುದಾಯದ ಅಂಕಿ-ಅಂಶಗಳನ್ನು ವಿಶೇಷವಾಗಿ ಗಮನಿಸಬಹುದಾಗಿದೆ. ಶ್ಯಾನುಭೋಗರಲ್ಲಿ ೪೭ ಜನರೂ ಬ್ರಾಹ್ಮಣರೇ ಆಗಿದ್ದರು. "ಹೊಳಲ್ಕೆರೆ ತಾಲೂಕು ಬರಾಬಲೂತಿ ರಿಜಿಸ್ಟರ್ ೧೯೩೩, ತಾಲೂಕು ಅಧಿಕಾರಿಗಳ ಕಛೇರಿ ಹೊಳಲ್ಕೆರೆ" ಎನ್ನವ ದಾಖಲೆಯ ಪ್ರಕಾರ ಪ್ರಮುಖ ಭೂಮಾಲೀಕ ವರ್ಗ ಲಿಂಗಾಯತರೆಂಬುದಾಗಿಯೂ ತಾಲೂಕಿನ ಬಹುತೇಕ ಗ್ರಾಮಗಳನ್ನು ಅವರು ನಿಯಂತ್ರಿಸುತ್ತಿದ್ದಾರೆ ಎಂಬುದು ತಿಳಿದು ಬರುತ್ತದೆ. ಇಲ್ಲಿ ಸುಮಾರು ೧೧೭ ಜನ ಲಿಂಗಾಯತ ಪಟೇಲರುಗಳು ಕಾರ್ಯ ನಿರ್ವಹಿಸುತ್ತಿದ್ದರು. ಎರಡನೆ ಸ್ಥಾನವನ್ನು ಕುಂಚಟಿಗ ಲಿಂಗಾಯತರು ಹೊಂದಿರುವದು ತಿಳಿಯುತ್ತದೆ. ಇಡೀ ಜಿಲ್ಲೆಯನ್ನು ಗಮನಿಸಿದಾಗ ಜನಸಂಖ್ಯಾ ಬಾಹುಳ್ಯದಲ್ಲಿ ಮುಖ್ಯವಾಗಿ ಭೂ ಮಾಲೀಕ ವರ್ಗವಾಗಿದ್ದವರು ಲಿಂಗಾಯತರು ಮತ್ತು ಒಕ್ಕಲಿಗರು, ಎಂದರೆ ತಪ್ಪಾಗಲಾರದು. ಈ ಮೇಲಿನ ದಾಖಲೆಗಳ ಪ್ರಕಾರ ತಯಾರಿಸಿದ "ಪಟೇಲ" ಎನ್ನುವ ಅಧಿಕಾರವನ್ನು ಹೊಂದಿದ ವಿವಿಧ ಸಮುದಾಯಗಳ ಪಟ್ಟಿಯು ಈ ಕೆಳಗಿನಂತೆ ಇದೆ.[೩೫]

ಈ ಅಂಕಿ-ಅಂಶಗಳನ್ನು ಗಮನಿಸಿದಾಗ ಎರಡು ಅಂಶಗಳು ಕಂಡು ಬರುತ್ತವೆ. ಮೊದಲನೆಯದಾಗಿ ಸಾಮಾಜಿಕವಾಗಿ ಉನ್ನತ ಸ್ಥಾನಗಳು ಪ್ರಭಾವಿ ವರ್ಗಗಳಿಗೆ ಮಾತ್ರ

ದೊರಕಿರುವುದನ್ನು ನೋಡಬಹುದು. ಏಕೆಂದರೆ ಇವರಿಗೆಲ್ಲಾ ಭೂಹಿಡುವಳಿಯ ಮಾಲೀಕತ್ವದತ್ತ ಸಂಬಂಧಿ ಅಧಿಕಾರಗಳು ಇದ್ದವು. ಎರಡನೆಯದಾಗಿ ಈ ಎಲ್ಲಾ ವ್ಯಪರೀತ್ಯಗಳ ಮಧ್ಯೆಯೂ ಪಟೇಲರಂತಹ ಹುದ್ದೆಗಳನ್ನು ಎಲ್ಲ ಸಮುದಾಯದವರು ಹೊಂದಿದ್ದರೆಂಬುದು ಗಮನಾರ್ಹವಾಗಿದೆ. ಅಂದರೆ ಉನ್ನತ ಹುದ್ದೆಗಳು ಕೇವಲ ಸಾಮಾಜಿಕ ಹಿನ್ನೆಲೆಯನ್ನೆ ಅವಲಂಬಿಸಿ ಪ್ರಾಪ್ತವಾಗುತ್ತಿರಲಿಲ್ಲ.

ವಿವಿಧ ಸಮುದಾಯಗಳ ಪಟೇಲರುಗಳ ಪಟ್ಟಿ

ಬಣಜಿಗರು	೦೫	ಗೊಲ್ಲರು	೧೩	ಬೇಡರು	೦೮
ಲಿಂಗಾಯತರು	೧೧೭	ಮ್ಯಾಸನಾಯಕ	೦೩	ನಾಮಧಾರಿ ಒಕ್ಕಲಿಗರು	೦೩
ಕುಂಚಟಿಗ ಲಿಂಗಾಯಿತರು	೨೫	ಬ್ರಾಹ್ಮಣರು	೦೬	ಕುರುಬರು	೦೪
ವಡ್ಡರು	೦೧	ದೇವಾಂಗ	೦೧	ಜಂಗಮರು	೦೨
				ಒಟ್ಟು	೧೮೮

ಆದರೆ ಆಯಾ ಸಮುದಾಯಗಳ ಆರ್ಥಿಕ ಹಿನ್ನೆಲೆಗೆ ಅನುಗುಣವಾಗಿ ದೊರೆಯುತ್ತಿದ್ದವು ಎನ್ನುವುದು ಸ್ಪಷ್ಟ. ಈ ಹುದ್ದೆಗಳೆಲ್ಲ ಅನುವಂಶಿಕವಾಗಿ ಗ್ರಾಮಗಳ ಮುಖಂಡತ್ವವನ್ನು ಹೊಂದಿರುವುದನ್ನು ನಾವು ಇಲ್ಲಿ ಗಮನಿಸಬಹುದು. ೧೯ನೇ ಶತಮಾನದ ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾಜಿಕವಾಗಿ ಎಲ್ಲ ವರ್ಗಗಳ ಆಗವಹಿಸುವಿಕೆಯ ಮೊದಲನೆಯ ಹಂತವನ್ನು ಗುರುತಿಸಬಹುದು. ೧೯೩೧ ರಲ್ಲಿ ಚಿತ್ರದುರ್ಗ ಜಿಲ್ಲೆಯ ಒಕ್ಕಲಿಗರ ಜನಸಂಖ್ಯೆ ೨.೩ ರಷ್ಟು ಇದೆ. ಇದೇ ವೇಳೆಯಲ್ಲಿ ಲಿಂಗಾಯತರ ಜನಸಂಖ್ಯೆ ೨೧.೫ ರಷ್ಟು ಇದೆ. ೧೯೩೫ರ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಗ್ರಾಮದ ಆಡಳಿತದ ಮುಖಂಡತ್ವವನ್ನು ಹೊಂದಿದ ಒಕ್ಕಲಿಗರ ಪಟೇಲರ ಸಂಖ್ಯೆ ೧೬.೭ ರಷ್ಟು ಲಿಂಗಾಯತರ ಮುಖಂಡತ್ವ ಹೊಂದಿದ್ದ ಪಟೇಲರ ಸಂಖ್ಯೆ ೫೬.೬; ಅಂದರೆ ಜಿಲ್ಲೆಯ ಶೇಕಡಾ ೨೧.೭೫ ರಷ್ಟು ಜನಸಂಖ್ಯೆವುಳ್ಳ ಲಿಂಗಾಯತರು ಶೇಕಡಾ ೫೬.೬ ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಪ್ರಭಾವವನ್ನು ಬೀರುವುದನ್ನು ಕಾಣಬಹುದು. ಸ್ವಾತಂತ್ರ್ಯ ನಂತರದಲ್ಲಿ ರಾಜ್ಯ ಸರಕಾರವು ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಿಸಿ ಪಟೇಲ ಮತ್ತು ಶ್ಯಾನುಭೋಗರ ಅಧಿಕಾರಿಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಿತು. ನಂತರದ ಆರ್ಥಿಕ ಸ್ಥಿತ್ಯಂತರಗಳಿಂದಾಗಿ ಹಲವು ಗ್ರಾಮಗಳಲ್ಲಿನ ಪಟೇಲರುಗಳು ಸಹ ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ಕಳೆದುಕೊಂಡರು.

೧೯೪೭ ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಎರಡು ಭೂ ಕಂದಾಯ ಉಪ ವಿಭಾಗಗಳು ಒಂಭತ್ತು ತಾಲೂಕುಗಳು ಮತ್ತು ಮೂವತ್ತು ಹೋಬಳಿಗಳಾಗಿ ವಿಭಾಗಿಸಿದರು. ಈ ವ್ಯವಸ್ಥೆ ೧೯೫೬ ರವರೆಗೂ ಮುಂದುವರೆಯಿತು. ೧೯೫೬ ರಲ್ಲಿ ಭಾಷಾವಾರು ಪ್ರಾಂತ್ಯ ವಿಭಜನೆಯಾದಾಗ

ಚಿತ್ರದುರ್ಗ ಜಿಲ್ಲೆಯನ್ನು ಬೆಂಗಳೂರು ವಿಭಾಗಕ್ಕೆ ಸೇರಿಸಲಾಯಿತು. ಈಗ(೧೯೯೭) ಕರ್ನಾಟಕ ಸರಕಾರವು ದಾವಣಗೆರೆಯನ್ನು ಹೊಸ ಜಿಲ್ಲಾ ಕೇಂದ್ರವನ್ನಾಗಿ ಮಾಡಿದೆ.

ಅಡಿಟಿಪ್ಪಣಿಗಳು

೧. ಎಂ.ಚಿದಾನಂದಮೂರ್ತಿ, **ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-ಪುಟ.೧೨೪.

೨. ಅದೇ, ಪುಟ. ೧೨೮.

೩. ಅದೇ, ಪುಟ. ೧೪೨.

೪. ಎಂ.ಟಿ.ವಿಶ್ವನಾಥಯ್ಯ, ಗ್ರಾಮ-ಜೀವನ (ನೆನಪುಗಳು) ಪುಟ. ೪

೫. ಅದೇ, ಪುಟ. ೩೨-೩೩

೬. ಟಿ.ವಿ.ನಾಗರಾಜು, ಮೈಸೂರು ಸಂಸ್ಥಾನದಲ್ಲಿ ನೀರಾವರಿ(ಕೋಲಾರ ಜಿಲ್ಲೆಯ, ಒಂದು ಅಧ್ಯಯನ) ೨೦೦೮ ಜನನಿ ಪ್ರಕಾಶನ, ಬೆಂಗಳೂರು ಪುಟ-೯೪.

೭. ಅದೇ ಪುಟ.೧೨೫

೮. ಅದೇ ಪುಟ.೧೮೫

೯. ಶಿವಣ್ಣ, ಮಧ್ಯಕಾಲೀನ ಭಾರತದ ಆರ್ಥಿಕ ಇತಿಹಾಸ (೧೨೦೦-೧೭೫೦) ಪುಟ. ೩೬

೧೦. ಅದೇ ಪುಟ ೧೦೪

೧೧. ಫ್ರಾನ್ಸಿಸ್ ಬುಕಾನನ್ ಜರ್ನಿ ಫ್ರಮ್ ಮದ್ರಾಸ್ ಥ್ರೂ ದ ಕಂಟ್ರೀಸ್ ಆಫ್ ಮೈಸೂರು, ಕೆನಡ ಅಂಡ್ ಮಲಬಾರ್. ಸಂಪುಟ-೧ ಪುಟ. ೨೦೨.

೧೨. ಅದೇ ಪುಟ ೨೩೫.

೧೩. ಎಂ.ಚಿದಾನಂದಮೂರ್ತಿ, **ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-ಪುಟ.೧೨೪.

೧೪. ಅದೇ ಪುಟ ೮೦

೧೫. ಕನ್ನಡ ವಿಷಯ ವಿಶ್ವಕೋಶ, ಪುಟ-೧೦.೦

೧೬. ಅದೇ ಪುಟ.೧೫೨

೧೭. ಅದೇ ಪುಟ೨೫೭. ೨೫೮

೧೮. ಅದೇ .೧೭೨

೧೯. ಅದೇ ಪುಟ. ೧೪೨.

೨೦. ೧೯೦೫ನೇ ಮಾರ್ಚ್ ೭ ಹುಕುಂ ಆರ್ ೧೧೬೨೧ ಎಲ್.ಆರ್. ೫೨೨೦೫ ೧ನೇ ನಂಬರಿನ ೪೦ ನೇ ನಿಬಂಧನೆಯ (ಕೆ.ಎಸ್.ಎ)

೨೧. ೧೯೧೩ ಜುಲೈ ೨೮ನೇ ಹುಕುಂ ೯೬೮-೭೭ ಎಲ್. ಆರ್. ೬೧೯.೧೨-೨ ನೇ ನಂಬರಿನ ಸರಕಾರಿ ಹುಕುಂ (ಕೆಎಸ್ಎ)

೨೨. ೧೯೨೫ನೇ ಆಗಸ್ಟ ೧೮ ನೇ ಹುಕುಂ ಆರ್. ೮೬೯-೭೫ ಎಲ್.ಆರ್ ೭೫-೭೫-೨ನೇ ನಂಬರಿನ ಸರಕಾರಿ ಹುಕುಂ (ಕೆಎಸ್ಎ)

೨೩. ೧೯೨೭ ಜುಲೈ ೯೦ನೇ ಹುಕುಂ ಆರ್. ಆರ್ ೧೯೭-೨೧೩ ಎಲ್.ಆರ್. ೯೨-೨೬ ೮ನೇ ನಂಬರಿನ ಸರಕಾರಿ ಹುಕುಂ (ಕೆಎಸ್ಎ)

೨೪. ೧೯೩೨ ಏಪ್ರಿಲ್ ೧೨ನೇ ಹುಕುಂ ಆರ್. ೪೮೦೪ ಎಲ್. ಆರ್ ೯೧-೨೯-೯ನೇ ನಂಬರಿನ ಮತ್ತು ೧೯೩೩ನೇ ಮಾರ್ಚ ೧೪ನೇ ಹುಕುಂ (ಕೆಎಸ್.ಎ)

೨೫. ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಅನುಸಾರವಾಗಿ ರಚಿಸಿದ ನಿಬಂಧನೆಗಳು. ಪುಟ ನಂ: ೧೨೫

೨೬. ಎಚ್. ಈ. ಬಸವರಾಜಪ್ಪ. ಮೈಸೂರು ಸಂಸ್ಥಾನದ ಒಂದು ಭೂ ದಾಖಲೆ ಎಂ.ಜಿ. ನಾಗರಾಜ್. ಪಿ.ವಿ. ಕೃಷ್ಣಮೂರ್ತಿ (ಸಂ) ಇತಿಹಾಸ ದರ್ಶನ. ಕರ್ನಾಟಕ ಇತಿಹಾಸ ಅಕಾಡಮಿ, ಬೆಂಗಳೂರು. ಸಂಪುಟ – ೧೫/೨೦೦೦ ಪುಟ ನಂ: ೧೨೦

೨೭. ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಅನುಸಾರವಾಗಿ ರಚಿಸಿದ ನಿಬಂಧನೆಗಳು ಪುಟ ನಂ: ೧೨೦.

೨೮. ಜಮೀನು ಹಕ್ಕುಗಳ ರೆವಿನ್ಯೂ ದಾಖಲಾತಿ ಸ್ಕೀಂ ಗೌರ್ನಮೆಂಟ್ ಆರ್ಡರ್ ನಂ: ೪೫೪೫. ಡೆವೆಲಪ್‌ಮೆಂಟ್ ಸೆಕ್ಟರಿಯೇಟ್, ನಂ ಆರ್., ೪೫೪೫ ಎಲ್. ಎಸ್. ೩೮/ ೩೨/೫ ಆರ್. ೯-೧೦ನೇ ಮಾರ್ಚ, ೧೯೩೩ ಹೊಸದುರ್ಗ ತಾಲೂಕ ಅಧಿಕಾಗಳ ದಾಖಲಾತಿ ವಿಭಾಗ ಚಿತ್ರದುರ್ಗ ಜಿಲ್ಲೆ.

೨೯. ಮೈಸೂರು ಗೆಜೆಟ್ ಮಾರ್ಚ ೫. ೧೮೮೧.

೩೦. ಗೌರ್ನಮೆಂಟ್ ಆಫ್ ಹಿಸ್ ಹೈನೆಸ್ ದಿ ಮಹಾರಾಜ ಆಫ್ ಮೈಸೂರು, ಪ್ರೊಸೀಡಿಂಗ್ಸ್ ಆಫ್ ದಿ ಮೈಸೂರು, ರೆಪ್ರಜಂಟೇಟಿವ್ ಅಸೆಂಬ್ಲಿ (ದಸರಾ ಸೆಶನ್) ಅಕ್ಟೋಬರ್-ನವೆಂಬರ್ ೧೯೨೮ ಮೈಸೂರು, ಗೌರ್ನಮೆಂಟ್ ಪ್ರೆಸ್ ೧೯೩೧ ಪುಟ ನಂ: ೧೨೨೧.

೩೧. ಮೈಸೂರು ಗೆಜೆಟ್, ಏಪ್ರಿಲ್(೧೧-೦೩-೧೮೮೬) ಮೈಸೂರು ಸರಕಾರ, ಮೈಸೂರು.

೩೨. ಜೇಮ್ಸ್ ಮನೋಹರ್, ಪೊಲಿಟಿಕಲ್ ಚೇಂಜ್ ಇನ್ ನ್ಯೂ ಇಂಡಿಯನ್ ಸ್ಟೇಟ್ ಮೈಸೂರು, ೧೯೧೭-೧೯೫೫, ಸೌತ್ ಏಷಿಯನ್ ಬುಕ್ ದೆಹಲಿ, ೧೯೭೮

೩೩. ಹಾ.ವೆಂ. ನಾಗೇಶ, ಭಾರತೀಯ ಗ್ರಾಮ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೬.

೩೪. ಹೊಳಲ್ಕೆರೆ ತಾಲೂಕ, ಬರಬಲೂತಿ ರಿಜಿಸ್ಟ್ರಾರ್ ೧೯೩೩, ಹೊಳಲ್ಕೆರೆ ತಾಲೂಕ ಅಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ.

೩೫. ಪಟೇಲರು ಮತ್ತು ಶ್ಯಾನುಭೋಗರು ಮಾಡಬೇಕಾದ ತುರ್ತು ರಿಪೋರ್ಟಿನ ನಮೂನೆ, ಮೈಸೂರು ಸರಕಾರ, ಮೈಸೂರು ೧೯೨೨-೨೩

ಅಧ್ಯಾಯ: ಮೂರು

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಹಾಗೂ ದಲಿತವರ್ಗದವರ ಅಭಿವೃದ್ಧಿ ಕಾರ್ಯಗಳ ವಿಶ್ಲೇಷಣೆ

೩.೧. ೧೮೦೦ರ ನಂತರ ಮೈಸೂರು ರಾಜ್ಯದ ಸಂಕ್ಷಿಪ್ತ ಚರಿತ್ರೆ ಮತ್ತು ಪ್ರಜಾಪ್ರತಿನಿಧಿ ಸಭೆ

೩.೨. ದಲಿತವರ್ಗದವರ ಬಗ್ಗೆ ಮಹಾರಾಜರ ನಿಲುವು

೩.೩. ದಲಿತವರ್ಗದವರ ಅಭಿವೃದ್ಧಿಗೆ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ನಿರ್ಣಯಗಳು

ಅಧ್ಯಾಯ: ಮೂರು

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಹಾಗೂ ದಲಿತವರ್ಗದವರ ಅಭಿವೃದ್ಧಿ ಕಾರ್ಯಗಳ ವಿಶ್ಲೇಷಣೆ

ಪ್ರಾಚೀನ ಭಾರತದಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ಪರಿಷತ್ತುಗಳಂತಹ ಪ್ರಜಾಸತ್ತೆಯ ಸಂಸ್ಥೆಗಳು ಇದ್ದವು. ಎಂದು ಭಾರತದ ಮತ್ತು ಯೂರೋಪಿನ ಪ್ರಸಿದ್ಧ ಇತಿಹಾಸಕಾರರು ಒಪ್ಪಿದ್ದಾರೆ. ಭಾರತದ ಅನೇಕ ಭಾಗಗಳಲ್ಲಿ ಜನರಿಂದ ಚುನಾಯಿತವಾದ ಶಾಸನ ಸಭೆಗಳಿದ್ದೂ, ಎಂದು ಅವು ಕಾರ್ಯಕಲಾಪಗಳನ್ನು ಕ್ರಮಬದ್ಧವಾಗಿ ನಡೆಸಲು ಸವಿವರವಾದ ನಡವಳಿಕೆ ವಿಧಾನಗಳನ್ನು ಅನುಸರಿಸುತ್ತಿದ್ದರು ಎಂದು ಅವರು ಬರೆದಿದ್ದಾರೆ. ಸಭಾ ಮತ್ತು ಸಮಿತಿ ಎಂಬ ಪದಗಳನ್ನು ಋಗ್ವೇದ ನಮೂದಿಸಿದೆ. 'ಸಭೆ' ಹಿರಿಯರ ಸದನವಾಗಿತ್ತು ಪ್ರಜ್ಞರೂ ಮತ್ತು ಶ್ರೀಮಂತವರ್ಗದವರು ಅದರಲ್ಲಿ ಸದಸ್ಯರಾಗಿದ್ದರು. ಅದು ಆಧುನಿಕ ಕಾಲದ ಹಿರಿಯರ ಸದನ ಅಥವಾ ಮೇಲ್ಮನೆಯನ್ನು ಹೋಲುತಿತ್ತು. 'ಸಮಿತಿ'ಯು ಜನತೆಯ ಸಾಮಾನ್ಯ ಸಭೆಯಾಗಿತ್ತು. ಈ ಎರಡು ಸಂಸ್ಥೆಗಳು ಸೃಷ್ಟಿಕರ್ತನಾದ ಪ್ರಜಾಪತಿಯ ಅವಳಿ ಪುತ್ರಿಯರೆಂದು ಪ್ರಜಾಪತಿಯು ತಾನು ಕೇವಲ ಭೌತರೂಪದ ವಿಶ್ವವಾಗಿ ಮಾಡಿದ್ದ ಸೃಷ್ಟಿಯ ಕಾರ್ಯವನ್ನು ಅದರ ನೈತಿಕ ಸ್ಥಿತಿ ಮತ್ತು ಮಾನವಾಂಶಗಳನ್ನು ರೂಪಿಸಿ ಪೂರ್ಣಗೊಳಿಸಲು ಅವರನ್ನು ತನ್ನ ಪ್ರತಿನಿಧಿಗಳಾಗಿ ಇಲ್ಲಿಗೆ ಕಳುಹಿಸಿದನೆಂದು ಅಥರ್ವಣವೇದವು ವರ್ಣಿಸಿದೆ. ಸಭಾ ಮತ್ತು ಸಮಿತಿ ಇವೆರಡೂ ರಾಷ್ಟ್ರದ ಅಧಿಪತಿಯಾದ ದೊರೆಯ ಮೇಲೆ ಹೆಚ್ಚು ಪ್ರಭಾವ ಹೊಂದಿದ್ದವು. ಇವೆರಡರಲ್ಲೂ 'ಸಭಾಪತಿ' ಎಂಬ ಹೆಸರಿನ ಅಧ್ಯಕ್ಷರಿರುತ್ತಿದ್ದರು. ಸದಸ್ಯರನ್ನು ಸಭಾಸದರೆಂದು ಕರೆಯುತ್ತಿದ್ದರು. ಈಗಿನ ಸಾರ್ಜಂಟ್ ಅಥವಾ ಮಾರ್ಷಲ್‌ನಂತೆ ಸಭಾಮರ್ಯಾದೆಯ ಅಧಿಕಾರಿಯನ್ನು 'ಸಭಾಪಾಲ'

ಎಂದು ಕರೆಯಲಾಗುತ್ತಿತ್ತು. ಚರ್ಚೆ ನಡೆಯಲು ನಿಯಮಗಳನ್ನು ರೂಪಿಸಲಾಗಿತ್ತು. ಸದಸ್ಯರು ತಮ್ಮ ಭಾಷಣಗಳಿಂದ ಸಭೆಯ ಮನವೊಲಿಸಲು ಕಾತುರರಾಗಿದ್ದರು. ಆದ್ದರಿಂದ ಅವರೆಲ್ಲ ಒಮ್ಮತದ ತೀರ್ಮಾನಕ್ಕೆ ಬರುವುದಾದರೆ ಅವರಿಗೆ ಸಂತೋಷ. ಬಹುಮತದ ಅಭಿಪ್ರಾಯಕ್ಕೆ ಎಲ್ಲರೂ ಬದ್ಧರು. ಸಭೆಯಲ್ಲಿ ಶಿಸ್ತು ವ್ಯವಸ್ಥೆಯನ್ನು ಕಾಪಾಡಲು ಸೂಕ್ತ ಅಧಿಕಾರಿಗಳಿದ್ದರು. ಸಭಾಮರ್ಯಾದೆಯ ವಿರುದ್ಧ ನಡೆದುಕೊಂಡವರನ್ನು ಖಂಡಿಸುತ್ತಿದ್ದರು. ತಮ್ಮದೇ ಪ್ರತ್ಯೇಕ ಕಾರ್ಯವಿಧಾನಗಳನ್ನು ಹೊಂದಿದ್ದ ಬೌದ್ಧಸಂಘಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು. ಸಭೆಯ ಅಧ್ಯಕ್ಷರನ್ನು 'ವಿನಯದರ' ಎಂದು ಸಚೇತಕನನ್ನು 'ಗಣಪೂರಕ' ಎಂದು ಕರೆಯುತ್ತಿದ್ದರು. ಹಾಗೆಯೇ ಆಸನಗಳ ವ್ಯವಸ್ಥೆ ಮಾಡುವವನನ್ನು ಆಸನಪ್ರಜ್ಞಾಪಕನೆಂದೂ ಗೊತ್ತುವಳಿಯನ್ನು ಜ್ಞಪ್ತಿ ಎಂದು ಕರೆಯುತ್ತಿದ್ದರು. ಮತ ಅಥವಾ ಓಟಿಗೆ ಛಂದಾ ಎಂಬುದಾಗಿಯೂ ಬಹುಮತದಿಂದ ತೀರ್ಮಾನವಾಗುವುದಕ್ಕೆ ಭೂಯಾಸಿಕ ಕ್ರಯಾ ಎಂದು ಹೆಸರಿದ್ದವು. ಸರ್ವಾನುಮತದ ನಿರ್ಧಾರ ಸಾಧ್ಯವೇ ಎಂದು ಪರಿಶೀಲಿಸಲು ಪಕ್ಷಗಳ ನಾಯಕರುಗಳಿದ್ದ ಉದ್ವಾಯಿಕ ಸಭಾ ಎಂಬ ಹೆಸರಿನ ಸಮಿತಿ ಇತ್ತು.[೧]

೩.೧. ೧೮೦೦ರ ನಂತರದ ಮೈಸೂರು ರಾಜ್ಯದ ಸಂಕ್ಷಿಪ್ತ ಚರಿತ್ರೆ ಮತ್ತು ಪ್ರಜಾಪ್ರತಿನಿಧಿ ಸಭೆ

ಕಾನೂನು ರಚಿಸುವುದರ ಜೊತೆಗೆ ಬೇರೆ ಅನೇಕ ಕರ್ತವ್ಯಗಳು ಇವೆ. ಶಾಸನ ಸಭೆಗಳನ್ನು ಮೊಟ್ಟಮೊದಲು ರಚಿಸಿದಾಗ ಈಗ ಅವುಗಳಿಗಿರುವ ಎಲ್ಲಾ ಅಧಿಕಾರಗಳನ್ನೂ ಅವು ಹೊಂದಿರಲಿಲ್ಲ. ಶಾಸನ ನಿರೂಪಣೆಯ ಕಾರ್ಯದೊಂದಿಗೆ ಕೆಲವು ಪ್ರಾರಂಭವಾದವು ಇನ್ನು ಕೆಲವು ಶಾಸನ ಸಭೆಗಳು ಜನರ ಕುಂದು ಕೊರತೆಗಳನ್ನು ತಿಳಿಯಪಡಿಸುವ ಮೂಲಕ ಆಡಳಿತದ ಮೇಲೆ ಪ್ರಭಾವ ಬೀರುತ್ತಿದ್ದವು. ಬ್ರಿಟನ್ ದೊರೆ ಜನರಿಂದ ಹಣ, ವಸ್ತುಗಳು ಅಥವಾ ಸೇವೆಗಳು ಬೇಕಾದಾಗ ಕೆಲವು ಸಲಹೆಗಾರರನ್ನು ಕರೆಯುತ್ತಿದ್ದರು. ಇಂತಹ ಸಲಹೆಗಾರರ ಸಭೆಯೇ ಮುಂದೆ ಸಂಸತ್ತಾಗಿ ಪರಿಣಮಿಸಿತು. ಆ ಹಳೆಯ ಕಾಲದಲ್ಲಿ ರಾಜನ ಆಳ್ವಿಕೆ ನಿರಂಕುಶವಾಗಿತ್ತು. ಆದರೂ ದೊರೆ ತನ್ನ ಅಪೇಕ್ಷೆಯ ಆಜ್ಞೆಯನ್ನು ಜಾರಿ ಮಾಡುವ ಮುನ್ನ ಜನರ ಅಭಿಪ್ರಾಯವನ್ನು ತಿಳಿಯುವುದು ಅನುಕೂಲವೆಂದು ಭಾವಿಸಲಾಗಿತ್ತು. ರಾಜನು ಕರೆಸಿಕೊಳ್ಳುತ್ತಿದ್ದ ಈ ಶ್ರೀಮಂತ ವರ್ಗದವರು ಚರ್ಚಿನ ಮುಖಂಡರು ಮತ್ತು ಇತರರು ಈ ಸಲಹೆ ಸಮಾಲೋಚನೆಗಳ ಅಭ್ಯಾಸ ಬೇರೂರಿದಂತೆ ತನಗೆ ಒಂದಷ್ಟು ಅಧಿಕಾರ ಪ್ರಭಾವಗಳಿರಬೇಕೆಂದು ಬಯಸಿ ಕ್ರಮೇಣ ಪಡೆದುಕೊಂಡರು. ದೊರೆ ತನ್ನ ಅಗತ್ಯಗಳಿಗಾಗಿ ಅವರನ್ನು ಕೇಳಿ ಬಿಟ್ಟರೆ ಸಾಕು ಎನ್ನುವ ಭಾವನೆಯನ್ನು ಬಿಡಬೇಕಾಯಿತು. ಅನಂತರ ರಾಜನಿಗೂ ಸಂಸತ್ತಿಗೂ ಘರ್ಷಣೆಯ ಅನುಭವ ಉಂಟಾಯಿತು. ಕೆಲವೊಮ್ಮೆ ತೀವ್ರರೂಪದ ಘರ್ಷಣೆಯಾಯಿತು. ಇವರಲ್ಲೊಬ್ಬರು ಸೋಲಬೇಕಾಗುತ್ತಿತ್ತು. ಹಲವು ಸೋಲುಗಳ ನಂತರ

ಜನತೆಯ ಪ್ರತಿನಿಧಿಯಾಗಿ ಸಂಸ್ಕೃತಿಗೆ ಗೆಲುವು ಸಿಕ್ಕಿತು. ಭಾರತದಲ್ಲಿ ಅರಸರ ಆಳ್ವಿಕೆಯ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯೆಂಬ ವಿಶಿಷ್ಟ ವ್ಯವಸ್ಥೆಯನ್ನು ೧೮೮೧ ರಲ್ಲಿ ಪ್ರಾರಂಭಿಸಲಾಯಿತು. ಆಡಳಿತದಲ್ಲಿ ಜನರು ಭಾಗಿಗಳಾಗಿರಬೇಕೆಂಬುದು ಅವರ ಉದ್ದೇಶವಾಗಿತ್ತು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಬೆಳವಣಿಗೆ ಮತ್ತು ಇತಿಹಾಸವನ್ನು ಗುರ್ತಿಸಬೇಕಾದರೆ, ಸಂಸ್ಥಾನದ ಸಂಕ್ಷಿಪ್ತ ಚರಿತ್ರೆಯನ್ನು ತಿಳಿದುಕೊಳ್ಳಬೇಕಾದದ್ದು ಅವಶ್ಯಕ. ೧೭೯೯ ರಲ್ಲಿ ಶ್ರೀರಂಗಪಟ್ಟಣದ ಪತನವಾಗಿ, ಟಿಪ್ಪುಸುಲ್ತಾನನ ಉತ್ತರಾಧಿಕಾರಿಗಳ ಗಡಿಪಾರಿನೊಡನೆ ಮೈಸೂರಿನ ಆಧುನಿಕ ಚರಿತ್ರೆ ಆರಂಭವಾಗುತ್ತದೆ.

ಶ್ರೀರಂಗಪಟ್ಟಣದ ಪತನದ ನಂತರ ಬ್ರಿಟಿಷರು ಮೈಸೂರು ರಾಜ್ಯವನ್ನು ದೇಶಿಯ ರಾಜವಂಶಕ್ಕೆ ಮತ್ತೆ ಸ್ವಾಧೀನಪಡಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಶುಭದಿನವಾಗಿದ್ದ ೧೭೯೯ ರ ಜೂನ್ ೩೦ ರ ಮಧ್ಯಾಹ್ನ ಸಿಂಹಾಸನವೇರಿದರು. ಆಗ ಅವರಿಗೆ ಕೇವಲ ಐದು ವರ್ಷ ವಯಸ್ಸು. ಜನರಲ್ ಹ್ಯಾರಿಸ್ ಅವರು ಈ ಸಮಾರಂಭವನ್ನು ನೆರವೇರಿಸಿ ಕೊಟ್ಟಾಗ ಪಟ್ಟಾಭಿಷೇಕದ ಸ್ಥಳದ ಬಳಿ ಸೇನಾ ತುಕಡಿಗಳು ಗೌರವಾರ್ಥ ತುಪಾಕಿಗಳಿಂದ ಮೂರು ಸಾಲು ಗುಂಡು ಹಾರಿಸಿದವು. ಶ್ರೀರಂಗಪಟ್ಟಣದ ಫಿರಂಗಿಗಳು ಕುಶಾಲತೋಪು ಹಾರಿಸಿದವು. ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರಿಗೆ ನಿಷ್ಠೆಯಿಂದ ಉತ್ಕೃಷ್ಟಸೇವೆ ಸಲ್ಲಿಸಿದ್ದ ಪೂರ್ಣಯ್ಯನವರನ್ನು ದಿವಾನರನ್ನಾಗಿ ನೇಮಿಸಲಾಯಿತು. ಅವರ ನೇತೃತ್ವದಲ್ಲಿ ರಾಜ್ಯವು ತ್ವರಿತವಾಗಿ ಅಭಿವೃದ್ಧಿ ಹೊಂದಿತು. ಮಹಾರಾಜರು ಪ್ರಾಪ್ತವಯಸ್ಕರಾದಂತೆ, ಅವರ ಮತ್ತು ಪೂರ್ಣಯ್ಯನವರ ನಡುವೆ ಭಿನ್ನಾಭಿಪ್ರಾಯಗಳು ತಲೆದೋರಿದವು. ಪೂರ್ಣಯ್ಯನವರು ೧೮೧೧ ರಲ್ಲಿ ರಾಜೀನಾಮೆ ನೀಡಿದರು ಮತ್ತು ಆಮೇಲೆ ಸ್ವಲ್ಪ ಕಾಲದಲ್ಲೇ ಮೃತರಾದರು.[೨]

ಮಹಾರಾಜರು ಆಡಳಿತದ ಜವಬ್ದಾರಿಯನ್ನು ವಹಿಸಿಕೊಂಡರಾದರೂ ಅವರಿಗೆ ಸಲಹೆಗಾರರಿರಲಿಲ್ಲ. ಆಡಳಿತ ಯಂತ್ರದಲ್ಲಿನ ದಕ್ಷತೆ ಕುಸಿಯಲಾರಂಭವಾಯಿತು. ಕಂದಾಯದ ಬಾಕಿ ವಸೂಲಿಗಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಯಿತು. ಇದರಿಂದ ಅತೃಪ್ತಿ ಉಂಟಾಗಿ, ನಗರ ಎಂಬ ಸ್ಥಳದಲ್ಲಿ ಗಲಭೆಗಳುಂಟಾದವು. ಗಲಭೆಗಳನ್ನು ಅಡಗಿಸಲು ಸೈನ್ಯದ ಕಾರ್ಯಚರಣೆ ನಡೆಸಲಾಯಿತು. ಮೈಸೂರಿನ ಗಲಭೆಗಳ ಮೂಲ, ಬೆಳವಣಿಗೆ ಮತ್ತು ದಮನದ ಬಗ್ಗೆ ತನಿಖೆ ನಡೆಸಲು ಗೌರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ಅವರು ಒಂದು ಸಮಿತಿಯನ್ನು ನೇಮಿಸಿದರು. ರಾಜರ ದುರಾಡಳಿತದಿಂದ ತೀವ್ರ ಅತೃಪ್ತಿ ವ್ಯಾಪಕವಾಗಿ ಹಬ್ಬಿ, ವರಮಾನ ಶೀಘ್ರಗತಿಯಲ್ಲಿ ಕಡಿಮೆಯಾಗುತ್ತಿದೆಯೆಂದೂ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ದುರಾಡಳಿತ ವಿಪರೀತವಾಗಿದೆಯೆಂದು ಸಮಿತಿಯು ವರದಿ ಮಾಡಿತು. ಆದ್ದರಿಂದ ಗೌರ್ನರ್ ಜನರಲ್ ಅವರು ಸಬ್ಸಿಡಿಯಡಿ ಒಪ್ಪಂದದ ನಾಲ್ಕು ಮತ್ತು ಐದನೇ ವಿಧಿಗಳ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದರು. ಅವರು ಮಹಾರಾಜರಿಗೆ ಈ ರೀತಿ ಪತ್ರ ಬರೆದರು.

“ಮೈಸೂರು ಸಂಸ್ಥಾನದ ಬಗ್ಗೆ ರಕ್ಷಣೆಯ ರೀತಿಯಲ್ಲಿ ಬ್ರಿಟಿಷ್ ಸರ್ಕಾರವು ಹೊಂದಿರುವ ಹೊಣೆಯನ್ನು ಲಕ್ಷಿಸುವಂತೆಯೇ, ಮೇಲೆ ಉಲ್ಲೇಖಿಸಲಾಗಿರುವ ಒಪ್ಪಂದದ ಷರತ್ತುಗಳಿಗೂ ಗಮನಕೊಟ್ಟು ಸಂಸ್ಥಾನದ ಸಂರಕ್ಷಣೆಗಾಗಿ ಹಾಗೂ ಸಂಬಂಧವುಳ್ಳ ಹಲವಾರು ಹಿತಾಸಕ್ತಿಗಳೂ ಇನ್ನಷ್ಟು ನಾಶವಾಗದಂತೆ ಅವುಗಳನ್ನು ಕಾಪಾಡುವುದಕ್ಕಾಗಿ, ಮಧ್ಯೆ ಪ್ರವೇಶಿಸುವುದು ಅನಿವಾರ್ಯವೆಂದು ಭಾವಿಸಿದ್ದೇನೆ. ಇದನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕಾಗಿ ಸಂಸ್ಥಾನದ ಇಡೀ ಆಡಳಿತವನ್ನು ಬ್ರಿಟಿಷ್ ಅಧಿಕಾರಿಗಳ ಕೈಗೊಪ್ಪಿಸುವುದು ಅವಶ್ಯಕವೆಂದು ನನಗನಿಸಿದೆ. ಅದರಂತೆ ಈ ಉದ್ದೇಶಕ್ಕಾಗಿ ಇಬ್ಬರು ಕಮಿಷನರುಗಳನ್ನು ನೇಮಕ ಮಾಡಲು ನಿರ್ಧರಿಸಿದ್ದೇನೆ. ಅವರು ತತ್‌ಕ್ಷಣದಲ್ಲಿ ಮೈಸೂರಿಗೆ ತೆರಳಲಿದ್ದಾರೆ.” ಆದ್ದರಿಂದ ಈಗ ವಿದ್ಯುಕ್ತ ಮತ್ತು ಅಂತಿಮ ಸೂಚನೆಯನ್ನು ಮಹಾರಾಜರಿಗೆ ಕಳಿಸಿದ್ದೇನೆ. ಮಹಾರಾಜರು ಈ ಪತ್ರವನ್ನು ಅದೇ ರೀತಿ, ಅಂದರೆ ಮೈಸೂರು ಪ್ರದೇಶವನ್ನು ನೋಡಿಕೊಳ್ಳಲು ವಹಿಸಿಕೊಂಡಾಗ ನಿರ್ಧರಿಸಿದಂತೆ, ನಿರ್ಧಿಷ್ಟಪಡಿಸಿದ ಸಂದರ್ಭದಲ್ಲಿ ಒಪ್ಪಂದದ ಪ್ರಕಾರ ತಮಗೆ ನೀಡಬೇಕಾದ ಸೂಚನಾ ಪತ್ರವೆಂದು ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ. ಆದ್ದರಿಂದ ಬ್ರಿಟಿಷ್ ಕಮಿಷನರುಗಳು ಅವರಿಗೆ ಆಜ್ಞಾಪಿಸುವಂತೆ ಅಥವಾ ಇನ್ನು ಮುಂದೆ ಆದೇಶಿಸುವಂತೆ ಕರ್ತವ್ಯವನ್ನು ವಹಿಸಿಕೊಂಡು ವ್ಯವಹಾರಗಳನ್ನ ನೋಡಿಕೊಳ್ಳಲು ಸಾಧ್ಯವಾಗುವುದಕ್ಕಾಗಿ, ಅವರಿಗೆ ಎಲ್ಲಾ ಇಲಾಖೆಗಳಲ್ಲೂ ಸಂಪೂರ್ಣ ಅಧಿಕಾರವನ್ನು ಕೊಡಲು ಮತ್ತು ಸಂಸ್ಥಾನದ ವರ್ಗಾವಣೆಯನ್ನು ಜಾರಿ ಮಾಡಲು, ತಮಗೆ ಈ ಪತ್ರ ತಲುಪಿದ ಹತ್ತು ದಿನಗಳೊಳಗೆ ಮೈಸೂರಿನ ಅಧಿಕಾರಿಗಳು ಹಾಗೂ ಪ್ರಾಧಿಕಾರಗಳಿಗೆ ಅಗತ್ಯ ಆಜ್ಞೆ ಮತ್ತು ಪ್ರಕಟಣೆಗಳನ್ನು ಹೊರಡಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಮಹಾರಾಜರು ದಸರಾ ಉತ್ಸವಗಳಲ್ಲಿ ನಿರತರಾಗಿದ್ದಾಗ ೧೮೩೧ ರ ಅಕ್ಟೋಬರ್ ೧೯ ರಂದು ಈ ಪತ್ರ ಅವರಿಗೆ ತಲುಪಿತು. ಮಹಾರಾಜರು ಆಡಳಿತ ಸೂತ್ರಗಳನ್ನು ಬ್ರಿಟಿಷರಿಗೆ ಒಪ್ಪಿಸಿದರು. ಅವರು ಅರಮನೆಯಲ್ಲಿ ವಾಸವನ್ನೇನೋ ಮುಂದುವರಿಸಿದರು. ಆಡಳಿತಾಧಿಕಾರವನ್ನಂತೂ ಬ್ರಿಟಿಷರು ರಾಷ್ಟ್ರೀಯ ಮಹೋತ್ಸವದ ಸಂತೋಷ ಸಂಭ್ರಮಗಳ ಮಧ್ಯದಲ್ಲಿ ಹೀಗೆ ವಿವೇಚನೆ ಇಲ್ಲದೆ ನಿರ್ದಾಕ್ಷಿಣ್ಯವಾಗಿ ಕಸಿದು ಕೊಂಡರು, ಒಪ್ಪಂದದ ಪ್ರಕಾರ ಮಹಾರಾಜರಿಗೆ ಅವರ ಸ್ವಂತ ಖರ್ಚುಗಳಿಗಾಗಿ ವರ್ಷಕ್ಕೆ ಒಂದುಲಕ್ಷ ‘ಸ್ಟಾರ್ ಪಗೋಡ’ ನಾಣ್ಯಗಳನ್ನು ನಿಗದಿ ಮಾಡಲಾಯಿತು. ಲಾರ್ಡ್ ವಿಲಿಯಂ ಬೆಂಟಿಂಕ್ ಅವರಿಗೆ ಈ ವಿಷಯದ ಪೂರ್ಣ ಮಾಹಿತಿ ದೊರೆತಾಗ ಈ ಕ್ರಮದ ಕಾನೂನು ಬದ್ಧತೆ ಮತ್ತು ನ್ಯಾಯ ಪರತೆಯ ಬಗ್ಗೆ ಅವರಿಗೆ ಸಂದೇಹ ಉಂಟಾಯಿತು. ಅವರು ೧೮೩೪ರ ಏಪ್ರಿಲ್ ೧೪ ರಂದು ಡೈರೆಕ್ಟರುಗಳ ಮಂಡಳಿಗೆ ಈ ಅಂಶವನ್ನು ವಿವರಿಸಿ, ಮಹಾರಾಜರಿಗೆ ಕೆಲವು ಜಿಲ್ಲೆಗಳನ್ನು ಹಿಂದಕ್ಕೆ ಕೊಟ್ಟು, ಉಳಿದ ಪ್ರದೇಶವನ್ನು ಪೊಗದಿಗೆ ಪ್ರತಿಯಾಗಿ ತಾವೇ ವಶಪಡಿಸಿಕೊಳ್ಳಬೇಕೆಂದು ಸಲಹೆ

ಮಾಡಿದರು. ಮೈಸೂರಿನ ಸಬ್ಸಿಡಿಯ ಕರಾರು ಇನ್ನು ಚಾಲ್ತಿಯಲ್ಲಿದ್ದು, ರಾಜ್ಯ ನಿರ್ವಹಣೆಯನ್ನು ಮಹಾರಾಜರಿಗಾಗಿಯೇ ಅವರ ಪರವಾಗಿ ವಹಿಸಿಕೊಳ್ಳಲಾಗಿದೆ ಎಂಬುದು ತಮ್ಮ ಅಭಿಪ್ರಾಯವೆಂದು ಅವರು ಬರೆದರು. ಆದರೆ ಕರಾರಿನ ಪ್ರಕಾರ ರಾಜ್ಯದ ಸಮಗ್ರತೆಗಾಗಿ ಭರವಸೆ ಕೊಡಲಾಗಿದ್ದುದ್ದರಿಂದ ಆ ರಾಜ್ಯದ ವಿಭಜನೆಯನ್ನಾಗಲಿ, ಅದರಲ್ಲಿ ಎಷ್ಟೇ ಸಣ್ಣ ಭಾಗದ ಪ್ರಜೆಗಳನ್ನಾದರೂ ಅವರನ್ನು ಯಾವ ದುರಾಡಳಿತದಿಂದ ರಕ್ಷಿಸಲಾಗಿತ್ತೊ ಅಂತಹ ಆಡಳಿತಕ್ಕೆ ಮತ್ತೆ ಒಪ್ಪಿಸುವುದನ್ನಾಗಲೀ ನಿರ್ದೇಶಕರ ಮಂಡಳಿ ನಿರಾಕರಿಸಿತು.[೩]

೩.೨. ದಲಿತವರ್ಗದವರ ಬಗ್ಗೆ ಮಹಾರಾಜರ ನಿಲುವು

"ನಾನು ಹದಿನಾರನೇ ವಯಸ್ಸಿನಲ್ಲಿ ಸಂಪೂರ್ಣ ಅಧಿಕಾರ ವಹಿಸಿಕೊಳ್ಳಲು ಕಂಪನಿ ಸರ್ಕಾರ ಅನುಮತಿ ನೀಡಿತು. ನನಗೆ ೧೯ ವರ್ಷ ವಯಸ್ಸಾದಾಗ ೧೮೧೪ ರಲ್ಲಿ ಇಲ್ಲಿನ ರೆಸಿಡೆಂಟರ ಕಟ್ಟುನಿಟ್ಟಾದ ಮತ್ತು ಅತಿನಿಕಟ ಮೇಲ್ವಿಚಾರಣೆಗಾಗಿ ಅಸಮಧಾನ ಸೂಚಿಸುವಂತೆ ಮದರಾಸ್ ಸರ್ಕಾರ ನನ್ನನ್ನು ಪ್ರೋತ್ಸಾಹಿಸಿತು. ಇಂತಹ ರಾಜಕೀಯ ತರಬೇತಿಯಿದ್ದ ಮೇಲೆ ನಾನು ಹಿತನುಡಿಗಳಿಗೆ ೧೮೧೪ ರಲ್ಲಿ ಇದ್ದುದಕ್ಕಿಂತ ೧೮೨೫ ರಲ್ಲಿ ಹೆಚ್ಚು ಒಗ್ಗಿಕೊಳ್ಳದೆ ಇದ್ದರೆ ಅದು ಅಂತಹ ಆಶ್ಚರ್ಯವೇನಲ್ಲ; ಹಾಗೆಯೇ ನನ್ನ ಆಡಳಿತ ದೋಷಗಳು ಕೂಡ ಕಚಿತವಾದ ಮತ್ತು ಅಧಿಕಾರಯುತವಾದ ಯೋಚಿತ ಕ್ರಮಗಳಿಲ್ಲದೆ ಕೇವಲ ಆಕ್ಷೇಪಣೆ ಮಾಡುವುದರಿಂದಲೇ ಸರಿಹೋಗದಂತ ರೀತಿಯಲ್ಲಿದ್ದರೆ ಅದೂ ಆಶ್ಚರ್ಯವಲ್ಲ".

ಮೈಸೂರಿನ ಆಡಳಿತವನ್ನು ಬ್ರಿಟಿಷರು ೧೮೩೧ರ ಅಕ್ಟೋಬರ್ ೩೧ರ ದಿನ ವಹಿಸಿಕೊಂಡರು. ಈ ಪ್ರಾಂತ್ಯದ ಆಳ್ವಿಕೆ ನಡೆಸಲು ಇಬ್ಬರು ಕಮಿಷನರ್‌ಗಳನ್ನು ನೇಮಿಸಲಾಯಿತು. ಅವರಲ್ಲಿ ಹಿರಿಯ ಅಧಿಕಾರಿಯನ್ನು ಭಾರತ ಸರ್ಕಾರವೂ ಕಿರಿಯ ಅಧಿಕಾರಿಯನ್ನು ಮದರಾಸ್ ಸರ್ಕಾರವೂ ನೇಮಕ ಮಾಡಿದ್ದವು. ಅವರಿಬ್ಬರ ನಡುವೆ ಭಿನ್ನಾಭಿಪ್ರಾಯವಿತ್ತು. ಹಾಗಾಗಿ ೧೮೩೪ರ ನಂತರ ಒಬ್ಬ ಕಮಿಷನರರನ್ನೇ ನೇಮಿಸಲಾಯಿತು. ಆ ವರ್ಷ ಕರ್ನಲ್ ಮಾರೀಸನ್ ಅವರ ನೇಮಕವಾಯಿತು. ಅವರನ್ನು ಕಲ್ಕತ್ತಾಕ್ಕೆ ವರ್ಗಾಹಿಸಿದಾಗ ಕರ್ನಲ್ (ಮುಂದೆ 'ಸರ್' ಬಿರುದ್ದು ಪಡೆದ) ಮಾರ್ಕ್ ಕಬ್ಬನ್ ಅವರನ್ನು ಕಮೀಷನರನ್ನಾಗಿ ನೇಮಿಸಲಾಯಿತು.

ಬ್ರಿಟಿಷ್ ವ್ಯವಸ್ಥೆಯು ೧೮೩೧ ರಿಂದ ೧೮೮೧ ರ ವರೆಗೆ ೫೦ ವರ್ಷಗಳ ಕಾಲ ಹಿಂದೆ ಗೊಂದಲವಿದ್ದ ಕಡೆ ಶಾಂತಿ ಸುವ್ಯವಸ್ಥೆಯನ್ನ ಕಾಪಾಡಿತು. ಸಾಧ್ಯವಿದ್ದಷ್ಟು ಮಟ್ಟಿಗೂ ಚಾಲ್ತಿಯಲ್ಲಿದ್ದ ದೇಶಿಯ ವ್ಯವಸ್ಥೆಗಳನ್ನೆ ಇಟ್ಟಿರಬೇಕೆಂದು ಸ್ಪಷ್ಟವಾಗಿ ಕಟ್ಟು ಮಾಡಲಾಗಿತ್ತು. ಕಮಿಷನ್ನಿನ ಮುಂದಿದ್ದ ಕೆಲಸವೆಂದರೆ ಸರ್ಕಾರದ ಹೊಸದೊಂದು ಪದ್ಧತಿಯನ್ನು ಪ್ರಾರಂಭಿಸುವುದಲ್ಲದೆ ಹಳೆಯದರಲ್ಲಿನ ತೀವ್ರದೋಷಗಳನ್ನು ಸುಧಾರಿಸಬೇಕು ಎನ್ನುವುದಾಗಿತ್ತು. ವ್ಯಾಪಾರ, ವಾಣಿಜ್ಯ ನೀತಿಗಳನ್ನು ಉದ್ಧಾರಗೊಳಿಸಿ, ಪ್ರತಿ ಇಲಾಖೆಯಲ್ಲಿನ ನೀತಿ ನಿಷ್ಠೆಯಿಲ್ಲದ

ಅಧಿಕಾರಿ ಸಮೂಹವು ನಡೆಸುತ್ತಿದ್ದ ನಿರಂಕುಶವಾದ ಮತ್ತು ದಯದಾಕ್ಷಿಣ್ಯವಿಲ್ಲದ ವಸೂಲಿ ವಿರುದ್ಧ ಪ್ರಜೆಗಳಿಗೆ ಅದರಲ್ಲೂ ವಿಶೇಷವಾಗಿ ರೈತಾಪಿ ವರ್ಗದವರಿಗೆ ನ್ಯಾಯಬದ್ಧವಾದ ಹಕ್ಕುಗಳಿಗಾಗಿ ರಕ್ಷಣೆ ಕೊಡುವುದೂ, ನ್ಯಾಯದ ಆಡಳಿತವನ್ನು ನಿಯಂತ್ರಿಸಿ ಶುದ್ಧೀಕರಿಸುವುದೂ ಮತ್ತು ರಾಜ್ಯದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಕಮಿಷನನ ಕಾರ್ಯವಾಗಿತ್ತು. ಈ ಅವಧಿಯಲ್ಲಿ ವಿಶೇಷವಾಗಿ ಆಯ್ಕೆಯಾದ ಅಧಿಕಾರಿಗಳ ನಿರಂತರ ಆಡಳಿತದ ಸುಯೋಗ ಮೈಸೂರಿನದಾಯಿತು. ಜನರಲ್ ಸರ್ ಮಾರ್ಕ್‌ಕಬ್ಬನ್ ಅವರು ೧೮೩೪ ರಿಂದ ೧೮೬೧ ರವರೆಗೆ ಕಮಿಷನರ್ ಆಗಿದ್ದರು. ಅವರು ಶ್ರೇಷ್ಠ ಆಡಳಿತಗಾರರೆಂದು ಭಾರತದ ವ್ಯವಹಾರಗಳಲ್ಲಿ ಅನುಭವವುಳ್ಳವರೆಂದು ಹೆಸರುವಾಸಿಯಾಗಿದ್ದರು. ೨೭ ವರ್ಷ ಅವರ ಆಡಳಿತವಿತ್ತು. ರಾಜ್ಯದ ಹಿತಚಿಂತನೆಯಲ್ಲಿ ಅವರಿಗಿದ್ದ ನಿರಂತರ ಆಸಕ್ತಿಯಿಂದ ಅವರಿಗೆ ಸ್ಥಳೀಯರ ಗೌರವ ಮತ್ತು ವಿಶ್ವಾಸ ಲಭಿಸಿದ್ದವು. ಅವರ ನಂತರ ಬಂದವರು ಸಮರ್ಥ ಹಾಗೂ ಅನುಭವಿ ಆಡಳಿತಗಾರ ಎಲ್.ಬಿ.ಬೋರಿಂಗ್ ಮುಂದೆ 'ಸರ್' ಬಿರುದ್ದನ್ನು ಪಡೆದ ಕರ್ನಲ್ ರಿಚ್ಚರ್ಡ್ ಮೀಡ್ ಅವರು ನಂತರ ಕಮೀಷನರ್ ಆದರು. ಆಮೇಲೆ ಬಂದವರು ಕೆಲಕಾಲ ಹೈದರಾಬಾದಿನಲ್ಲಿ ರೆಸಿಡೆಂಟ್ ಆಗಿದ್ದ ಸಿ.ಬಿ.ಸಾಂಡರ್ಸ್ ಅವರ ಕಾಲದಲ್ಲಿ ಅತ್ಯಂತ ಭೀಕರ ಬರಗಾಲವಾಯಿತು. ಸುಮಾರು ಹತ್ತು ಲಕ್ಷ ಜನ ಅದರಲ್ಲಿ ಸತ್ತರು. ಸಂಸ್ಥಾನದ ಅಭ್ಯುದಯ ಕುಸಿದು ಬಿತ್ತು. ಇನ್ನು ಎಳೆ ವಯಸ್ಸಿನ ರಾಜಕುಮಾರ ಚಾಮರಾಜ ಒಡೆಯರ್ ಅವರ ವಿದ್ಯಾಪಾಲಕರಾಗಿದ್ದ ಗಾರ್ಡನ್ ಎಂಬುವವರನ್ನು ೧೮೭೮ ರಲ್ಲಿ ಚೀಫ್ ಕಮಿಷನರ್ ಆಗಿ ನೇಮಿಸಲಾಯಿತು.[೪]

ಸುಮಾರು ಅರ್ಧ ಶತಮಾನದ ಬ್ರಿಟಿಷ್ ಆಡಳಿತ ಕುರಿತು ದಿವಾನ್ ರಂಗಾಚಾರ್ಲುರವರು ಈ ರೀತಿ ಹೇಳಿದ್ದಾರೆ. ವ್ಯವಸ್ಥಿತ ಸರ್ಕಾರ ಮತ್ತು ಶಾಂತಿ ಸುವ್ಯವಸ್ಥೆಗಳ ಪ್ರಾರಂಭದೊಡನೆ ನಿಜವಾದ ಅಭಿವೃದ್ಧಿ ನಿಂತುಹೋಯಿತು. ಹೆಚ್ಚು ಮುಂದುವರಿದ ಬ್ರಿಟಿಷ್ ಪ್ರದೇಶಗಳಲ್ಲಿದ್ದ ಮಾದರಿಯಲ್ಲಿ ಒಂದಾದ ಮೇಲೊಂದರಂತೆ ಹೊಸ ಇಲಾಖೆಗಳನ್ನು ಸತತವಾಗಿ ಪ್ರಾರಂಭಿಸುವುದೇ ಅಗತ್ಯ ಸುಧಾರಣೆಯ ಸಮಗ್ರ ಕಲ್ಪನೆ ಎಂಬಂತಾಯಿತು. ಏಕೆಂದರೆ ನಿಜವಾದ ತತ್ತ್ವಗಳ ತಿಳಿವಳಿಕೆ ಇರಲಿಲ್ಲ ಮತ್ತು ಅವುಗಳನ್ನು ಈ ರಾಜ್ಯದ ಸ್ಥಿತಿಗತಿಗಳಿಗೆ ಹೊಂದಿರುವ ವ್ಯಾಪಕ ಪ್ರಯತ್ನವೂ ಇರಲಿಲ್ಲ."ಮಹಾರಾಜರ ಮನೆವಾರ್ತೆ ಅಥವಾ ಅರಮನೆ ವೆಚ್ಚಗಳನ್ನು ಗಣನೀಯವಾಗಿ ಕಡಿಮೆ ಮಾಡಿದ್ದರೂ ಸಹ ಈ ಪ್ರಾಂತ್ಯದ ಆದಾಯವು ಈ ದುಬಾರಿ ಇಲಾಖೆಗಳಿಗಾಗಿಯೇ ಪೂರ್ತಿಯಾಗಿ ಖರ್ಚಾಗುತ್ತಿತ್ತು."

"ದೇಶಿಯ ಆಡಳಿತದ ನಿಜವಾದ ತಳಪಾಯವಿರುವುದು ಟೊಳ್ಳು ಆಕಾರಗಳು, ದುಬಾರಿ ವ್ಯವಸ್ಥೆಗಳು ಅಥವಾ ಮಾಡಿ ಮುಗಿಸಬಹುದಾದ ಕಾಮಗಾರಿಗಳಲ್ಲೂ ಅಲ್ಲ; ಆದಿರುವುದು ದೇಶಿಯರಿಗೆ ಶಿಕ್ಷಣ ಮತ್ತು ತರಬೇತಿ ಕೊಡುವುದರಲ್ಲಿ ಮತ್ತು ತಮಗಾಗಿ ಒಳ್ಳೆಯ ಸರ್ಕಾರದ

ಅಂಶಗಳನ್ನು ರೂಪಿಸುವ ಸಾಮರ್ಥ್ಯವನ್ನು ಅವರಿಗೆ ತಂದು ಕೊಡುವುದರಲ್ಲಿ –ಎನ್ನುವುದನ್ನು ವಿಚಾರಶೀಲ ಮನಸ್ಸುಗಳು ತಿಳಿಯದೆ ಇರಲಾರವು."

ಈ ಅವಧಿಯಲ್ಲಿ ಮೈಸೂರನ್ನು ಬ್ರಿಟಿಷ್ ಪ್ರದೇಶವನ್ನಾಗಿ ಮಾಡಲು ಹಲವಾರು ಪ್ರಯತ್ನಗಳಾದವು. ಮಹಾರಾಜರಿಗೆ ೬೨ ವರ್ಷ ವಯಸ್ಸಾಗಿ, ಅವರಿಗೆ ವಾರಸುದಾರರಾಗಿ ಗಂಡು ಮಕ್ಕಳಿಲ್ಲದರಿಂದಲೂ, ದತ್ತು ತೆಗೆದುಕೊಳ್ಳುವ ಉದ್ದೇಶವನ್ನು ಅವರು ಸೂಚಿಸಿರಲೇ ಇಲ್ಲವಾದರಿಂದಲೂ, ರಾಜ್ಯವು ಅದನ್ನು ಮೊದಲು ಕೊಟ್ಟಿದ್ದವರಿಗೇ ಹಿಂದಿರುಗಬೇಕೆಂಬ ಕಾರಣದಿಂದ ಮೈಸೂರನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಳ್ಳಬೇಕೆಂಬುದು ಗೌರ್ನರ್ ಜನರಲ್ ಲಾರ್ಡ್‌ಡಾಲ್‌ಹೌಸಿ ಅವರ ಅಪೇಕ್ಷೆಯಾಗಿತ್ತು. ಆದರೆ ಇದಕ್ಕೆ ಒಪ್ಪಿಗೆ ಸಿಕ್ಕಲಿಲ್ಲ. ರಾಜ್ಯವನ್ನು ಮಹಾರಾಜರಿಗೆ ಅನುಗ್ರಹಿಸಿಕೊಟ್ಟ ಒಪ್ಪಂದಗಳಲ್ಲಿ ಅವರ ಉತ್ತರಾಧಿಕಾರಿಗಳ ಬಗ್ಗೆ ಏನನ್ನೂ ಹೇಳದೆ ಅಂತಹ ಪ್ರಸ್ತಾಪವೇ ಇಲ್ಲವಾಗಿ, ಈ ಒಪ್ಪಂದವೇ ಸಂಪೂರ್ಣವಾಗಿ ವ್ಯಕ್ತಿಗತವಾದದ್ದೆಂದು ಸಹ ಡಾಲ್‌ಹೌಸಿ ಸೂಚಿಸಿದ್ದರು. ರಾಜ್ಯವನ್ನು ಬ್ರಿಟಿಷ್ ಸರ್ಕಾರಕ್ಕೆ ಬಿಟ್ಟುಕೊಡುವುದೇ ಮಹಾರಾಜರ ಉದ್ದೇಶವೆಂದು ತಾವು ಭಾವಿಸುವುದಾಗಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

೧೮೩೧ ರಲ್ಲಿ ಸಿಂಹಾಸನ ವಂಚಿತರಾದ ಮಹಾರಾಜರಂತೂ ಈ ಅವಮಾನದಿಂದ ಮುಕ್ತರಾಗಿ ತಮ್ಮ ನ್ಯಾಯಬದ್ಧ ಸ್ಥಾನವನ್ನು ಮತ್ತೆ ಪಡೆಯಲು ಏಜೆಂಟರುಗಳ ಮೂಲಕ, ೩೬ ವರ್ಷಗಳ ದೀರ್ಘಕಾಲ ಮನವಿಗಳನ್ನು ಸಲ್ಲಿಸುತ್ತಾ ತೀವ್ರ ಪ್ರಯತ್ನಗಳನ್ನು ಮಾಡುತ್ತಲೇ ಇದ್ದರು. ೧೮೪೪ ರಲ್ಲಿ ಗೌರ್ನರ್ ಜನರಲ್ ಲಾರ್ಡ್‌ಹಾರ್ಡಿಂಜ್ ಅವರಿಗೆ ಮಹಾರಾಜರು ಪತ್ರ ಬರೆದು ತಮಗೆ ರಾಜ್ಯವನ್ನು ಹಿಂದಿರುಗಿಸಬೇಕೆಂದು ಒತ್ತಾಯದಿಂದ ಕೋರಿದರು. ಕಂಪನಿಯ ನಿರ್ದೇಶಕರ ಮಂಡಳಿ ೧೮೪೭ ರಲ್ಲಿ ಈ ರೀತಿ ಜವಾಬು ನೀಡಿತು.

"ರಾಜ್ಯದಲ್ಲಿ ಒಳ್ಳೆಯ ಸರ್ಕಾರ ಹಾಗೂ ಅಭ್ಯುದಯಗಳಿವೆ. ಪೂರ್ತಿ ಅಸಮರ್ಥರೆಂದು ಅನುಭವದಿಂದ ತಿಳಿದಿರುವ ಅರಸನಿಗೆ ಅದನ್ನು ಮತ್ತೆ ಸೇರಿಸಿದರೆ ಈ ಅಭಿವೃದ್ಧಿ ಮತ್ತು ಒಳ್ಳೆಯ ಸರ್ಕಾರಕ್ಕೆ ಅಪಾಯವೆಂಬುದೇ ಇಲ್ಲಿರುವ ನಿಜವಾದ ಅಡ್ಡಿ." ಇಂಗ್ಲೆಂಡಿನ ರಾಣಿಯವರು ೧೮೫೮ ರಲ್ಲಿ ತಮ್ಮ ಘೋಷಣೆಯಲ್ಲಿ ಭಾರತೀಯ ಅರಸರ ಸಿಂಹಾಸನಾಧಿಕಾರ ಮತ್ತು ವಾರಸುದಾರಿಕೆಯನ್ನು ತಾವು ಸಂರಕ್ಷಿಸುವುದಾಗಿ ಭರವಸೆ ನೀಡಿದ್ದರು. ೧೮೬೦ ರಲ್ಲಿ ಗೌರ್ನರ್ ಜನರಲ್ ಲಾರ್ಡ್ ಕ್ಯಾನಿಂಗ್ ಅವರು ದತ್ತು ಸ್ವೀಕಾರದ ಪರಿಪತ್ರದಲ್ಲಿ ಭಾರತೀಯ ಸಂಸ್ಥಾನಗಳ ಮುಂದುವರಿಕೆ ಕುರಿತು ಭರವಸೆ ನೀಡಿ ಎಲ್ಲಾ ರಾಜರಿಗೂ ದತ್ತು ಸ್ವೀಕಾರದ ಹಕ್ಕಿರುವುದೆಂದು ಒಪ್ಪಿದರು. ಆದರೆ ಮೈಸೂರಿನ ಪ್ರಸಂಗದಲ್ಲಿ ಅವರು ಬೇರೆ ನೀತಿಯನ್ನು ಅನುಸರಿಸಿದರು. ರಾಣಿಯವರ ಘೋಷಣೆಯ ಸಮಯದಲ್ಲಿ ಮಹಾರಾಜರು ತಮ್ಮ ರಾಜ್ಯವನ್ನು ಖುದ್ದಾಗಿ

ಆಳುತ್ತಿರಲಿಲ್ಲವೆಂದು ಹೇಳಿ, ಅವರು ದತ್ತು ತೆಗೆದುಕೊಳ್ಳದಂತೆ ತಡೆದರು. ಮಹಾರಾಜರಿಗಿರುವುದು ಇಂದು ವ್ಯಕ್ತಿಗತವಾದ ಕೊಡುಗೆಯೆಂದೂ, ಅದರ ಮೇಲೆ ಸ್ವಂತ ಮಗನಿಗೂ ಹಕ್ಕೇನೂ ಇಲ್ಲದೆ, ಅದು ಅವರು ಜೀವಿತದೊಂದಿಗೆ ಕೊನೆಗೊಳ್ಳುವುದೆಂದೂ, ಇದನ್ನು ಮೀರಿದಂತೆ ಅವರು ಯಾವ ಹಕ್ಕನ್ನೂ ಚಲಾಯಿಸುವಂತಿಲ್ಲವೆಂದೂ ಕ್ಯಾನಿಂಗ್ ಹೇಳಿದರು. ಮೈಸೂರು ರಾಜ್ಯವನ್ನು ದೊರೆಯ ಸ್ವಂತ ಇಚ್ಛೆಯಿಂದ ಪೂರ್ಣ ಪರಮಾಧಿಕಾರದೊಂದಿಗೆ ಬ್ರಿಟಿಷ್ ಸರ್ಕಾರಕ್ಕೆ ಬಿಟ್ಟುಕೊಡುವುದು ಅಪೇಕ್ಷಣೆಯವೆಂಬ ಅಭಿಪ್ರಾಯವನ್ನು ಅವರು ಸೂಚಿಸಿದರು.[೫]

ಮೈಸೂರಿನ ವ್ಯವಹಾರಗಳ ಉಸ್ತುವಾರಿಯನ್ನು ಮದರಾಸ್ ಸರ್ಕಾರಕ್ಕೆ ವರ್ಗಾಯಿಸಬೇಕೆಂಬ ಒಂದು ಪ್ರಸ್ತಾಪ ೧೮೬೦ ರಲ್ಲಿ ಬಂದಿತ್ತು. ಅದನ್ನು ಮಹಾರಾಜರು ವಿರೋಧಿಸಿದರು. ಆಗ ಕಮಿಷನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್ ಅವರೂ ಸಹ ರಾಜೀನಾಮೆ ಕೊಟ್ಟರು. ಗೌರ್ನರ್ ಜನರಲ್ ಲಾರ್ಡ್ ಕ್ಯಾನಿಂಗ್ ಅವರ ಸೂಚನೆಯಂತೆ ಅದನ್ನು ಕೈಬಿಡಲಾಯಿತು. ಸಂಸ್ಥಾನವನ್ನು ತಮಗೆ ಹಿಂದಿರುಗಿಸಬೇಕೆಂದು ಕೋರಿ ಮಹಾರಾಜರು ೧೮೬೧ ರ ಫೆಬ್ರವರಿಯಲ್ಲಿ ಲಾರ್ಡ್ ಕ್ಯಾನಿಂಗ್ ಅವರಿಗೆ ಪತ್ರ ಬರೆದರು. ಮಹಾರಾಜರ ಕೋರಿಕೆಗೆ ಕ್ಯಾನಿಂಗ್ ಅವರು ಆಕ್ಷೇಪಣೆಯೆತ್ತಿದ್ದರು. "ಮಹಾರಾಜರೊಡನೆ ಇರುವ ಕರಾರು ವ್ಯಕ್ತಿಗತವಾದದ್ದು. ಬ್ರಿಟಿಷರು ಅವರಿಗೆ ಕೊಟ್ಟಿರುವುದನ್ನು ಅವರಿಂದ ಹಿಂದಕ್ಕೆ ಪಡೆದುಕೊಳ್ಳಬಹುದು. ಬ್ರಿಟಿಷ್ ಸರ್ಕಾರವು ತಾನು ಮೂಲತಃ ಮಹಾರಾಜರಿಗೆ ಕೊಟ್ಟಿದ್ದ ಹಕ್ಕನ್ನು ಸಂರಕ್ಷಿಸಲು ಎಚ್ಚರಿಕೆಯಿಂದಿರುವುದಾದರೂ, ಅದು ಮೈಸೂರಿನ ಜನರ ಬಗೆಗೆ ತನ್ನ ಹೊಣೆಗಾರಿಕೆಯಲ್ಲಿ ಅಷ್ಟೇ ಎಚ್ಚರಿಕೆ ವಹಿಸಿದೆ. ಜನರ ಕ್ಷೇಮಾಭ್ಯುದಯಕ್ಕಾಗಿ ತನ್ನ ಜವಬ್ದಾರಿಯನ್ನು ಅದು ಬಿಟ್ಟುಕೊಡುವಂತಿಲ್ಲ," ಎಂದು ಲಾರ್ಡ್ ಕ್ಯಾನಿಂಗ್ ಅವರು ೧೮೬೨ರ ಮಾರ್ಚಿಯಲ್ಲಿ ತಮ್ಮ ಉತ್ತರದಲ್ಲಿ ತಿಳಿಸಿದರು.

ಅನಂತರ ಮಹಾರಾಜರು ಗೌರ್ನರ್ ಜನರಲ್ ಲಾರ್ಡ್ ಎಲ್ಗಿನ್ ಅವರಿಗೆ ತಮ್ಮ ರಾಜ್ಯಭಾರದ ಮರುಪ್ರಾಪ್ತಿಗಾಗಿ ಪತ್ರ ಬರೆದರು. ಅದನ್ನು ಬ್ರಿಟಿಷ್ ಸರ್ಕಾರದ ಭಾರತೀಯ ವ್ಯವಹಾರಗಳ ಕಾರ್ಯದರ್ಶಿಯವರಿಗೆ ಕಳಿಸಲಾಯಿತು. ಆಗ ಆ ಪದವಿಯಲ್ಲಿದ್ದ ಸರ್ ಚಾರ್ಲ್ಸ್‌ವುಡ್ ಅವರು ೧೮೬೩ ರ ಜುಲೈ ೧೭ ರಂದು ಜವಾಬು ಕೊಟ್ಟು, ಮಹಾರಾಜರಿಗೆ ಸೇರಿದ್ದುದನ್ನು ಬ್ರಿಟಿಷ್ ಸರ್ಕಾರ ಒಮ್ಮೆ ವಹಿಸಿಕೊಂಡ ಮೇಲೆ ಅದನ್ನು ಅವರಿಗೆ ಹಿಂದಿರುಗಿಸಬೇಕಾದಂಥ ಯಾವ ಷರತ್ತೂ ೧೭೯೯ ರ ಶ್ರೀರಂಗಪಟ್ಟಣದ ಕರಾರಿನಲ್ಲಿ ಇಲ್ಲವೆಂದು ತಿಳಿಸಿದರು. ಮಹಾರಾಜರನ್ನು ಮತ್ತೆ ರಾಜಗುದ್ದುಗೆಗೆ ತರುವುದು ಜನರ ನಿಜಹಿತಾಸಕ್ತಿಗಳಿಗೆ ಹೊಂದುವುದಿಲ್ಲವೆಂದೂ ಅವರು ಹೇಳಿದರು. ರಾಜ್ಯವನ್ನು ತಮಗೆ ಹಿಂದಿರುಗಿಸಬೇಕೆಂದು ಪುನಃ ಮಹಾರಾಜರು ೧೮೬೪ ರ ಜನವರಿ ೨೪ ರಂದು ಗೌರ್ನರ್ ಜನರಲ್ ರ್ ಜಾನ್ ಲಾರೆನ್ಸ್ ಅವರಿಗೆ ಪತ್ರ ಬರೆದರು. ಅದೇ ಫೆಬ್ರವರಿಯಲ್ಲಿ ಅವರು ಇನ್ನೂ ಒಂದು ಪತ್ರವನ್ನು

ಬರೆದು, ತಾವು ಬ್ರಿಟಿಷ್ ರಾಣಿಯವರಿಗೆ ನೇರವಾಗಿ ಮನವಿ ಮಾಡುವುದಾಗಿಯೂ ಸೂಚಿಸಿದರು. ಸರ್ ಜಾನ್ ಲಾರೆನ್ಸ್‌ರು ಅನಂತರ ಮೇ ತಿಂಗಳಲ್ಲಿ ಉತ್ತರ ನೀಡಿ ತಾವು ಮಹಾರಾಜರ ಕೋರಿಕೆಗೆ ಬೆಂಬಲ ಕೊಡುವುದಿಲ್ಲವೆಂದು ತಿಳಿಸಿದರು.[೧]

ಮಹಾರಾಜರಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಅವರು ಇಲ್ಲಿ ಕಮಿಷನರ್ ಆಗಿದ್ದ ಬೌರಿಂಗ್ ಅವರ ಮೂಲಕ ೧೮೬೪ ರ ಫೆಬ್ರವರಿಯಲ್ಲಿ ಭಾರತ ಸರ್ಕಾರಕ್ಕೆ ಒಂದು ಕೋರಿಕೆಯನ್ನು ಸಲ್ಲಿಸಿ ತಮ್ಮ ಸಂಸ್ಥಾನಕ್ಕೆ ಉತ್ತರಾಧಿಕಾರಿಯಾಗಿರಲು ಒಬ್ಬ ದತ್ತು ಪುತ್ರನನ್ನು ಸ್ವೀಕರಿಸಲು ಅನುಮತಿ ಕೇಳಿದರು. ಆದರೆ ಮೈಸೂರಿನ ರಾಜರು ಉತ್ತರಾಧಿಕಾರಿಯನ್ನು ದತ್ತು ಮಾಡಿಕೊಳ್ಳಲು ಅವರಿಗೆ ಯಾವಾಗಲೂ ಅಧಿಕಾರ ಕೊಟ್ಟಿರಲಿಲ್ಲವೆಂದೂ, ಈಗಲೂ ಅಂತಹ ಅಧಿಕಾರವನ್ನು ಅವರಿಗೆ ಕೊಡಲಾಗುವುದಿಲ್ಲವೆಂದೂ ಸರ್ ಜಾನ್ ಲಾರೆನ್ಸ್ ತಿಳಿಸಿಬಿಟ್ಟರು. ಅದನ್ನು ಭಾರತೀಯ ವ್ಯವಹಾರಗಳ ಕಾರ್ಯದರ್ಶಿ ಸರ್ ಚಾರ್ಲ್ಸ್ ವುಡ್ ಅವರು ಸಮರ್ಥಿಸಿದರು. ಮಹಾರಾಜರು ಎರಡೂವರೆ ವರ್ಷದ ಮಗು ಶ್ರೀ ಚಾಮರಾಜೇಂದ್ರ ಒಡೆಯರ್ ಅವರನ್ನು ೧೮೬೫ ರ ಜೂನ್ ೧೮ ರಂದು ದತ್ತು ಮಗನಾಗಿ ಸ್ವೀಕರಿಸಿದರು. ಅವರು ತಮ್ಮ ಖಾಸಗಿ ಸ್ವತ್ತುಗಳ, ವಿಷಯಕ್ಕಾಗಿ ಹಾಗೆ ಮಾಡಬಹುದೆಂದು ಬ್ರಿಟಿಷ್ ಸರ್ಕಾರ ಒಪ್ಪಿಕೊಂಡರೂ, ಮೈಸೂರು ಸಂಸ್ಥಾನಕ್ಕೆ ಉತ್ತರಾಧಿಕಾರಿಯನ್ನಾಗಿ ದತ್ತು ತೆಗೆದುಕೊಳ್ಳಲಾಗಿದೆಯೆಂಬುದನ್ನು ಮಾನ್ಯ ಮಾಡಲು ನಿರಾಕರಿಸಿತು.[೨]

ಭಾರತದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದ ಸರ್ ಎಚ್. ರಾಲಿನ್ಸ್‌ನ ಅವರ ನೇತೃತ್ವದಲ್ಲಿ ಒಂದು ನಿಯೋಗವು ೧೮೬೬ ರಲ್ಲಿ ಭಾರತ ವ್ಯವಹಾರಗಳ ಕಾರ್ಯದರ್ಶಿ ಲಾರ್ಡ್ ಕ್ರ್ಯಾನ್‌ಬೋರ್ನ್ ಅವರನ್ನು ಭೇಟಿಮಾಡಿ ವಿಶೇಷವಾಗಿ ದತ್ತು ಸ್ವೀಕಾರದಿಂದ ಬದಲಾಯಿಸಿರುವ ಪರಿಸ್ಥಿತಿಯಲ್ಲಿ ಮೈಸೂರಿನ ಇಡೀ ಪ್ರಕರಣವನ್ನು ಪುನರ್ಪರಿಶೀಲಿಸಬೇಕೆಂದು ಪ್ರಾರ್ಥಿಸಿತು. ಆಮೇಲೆ ಹಲವಾರು ಭಾರತೀಯ ಅಧಿಕಾರಿಗಳು ಸಹಿ ಹಾಕಿದ್ದ ಒಂದು ಅರ್ಜಿಯನ್ನು ಜಾನ್ ಸ್ಟೂಯರ್ಟ್ ಮಿಲ್ ಅವರು ಕಾಮನ್ಸ್ ಸಭೆಗೆ ಸಲ್ಲಿಸಿದರು. ಕಪ್ಪ ಒಪ್ಪಿಸುವ ಮೈಸೂರು ಸಂಸ್ಥಾನದಲ್ಲಿ, ಬ್ರಿಟಿಷ್ ಹಿತಾಸಕ್ತಿಗಳಿಗೆ ಮತ್ತು ಆ ರಾಜ್ಯದ ಜನರ ಸುಖ ಮತ್ತು ಏಳಿಗೆಗೆ ಸಾಧ್ಯವಿರುವ ಎಲ್ಲಾ ಸುರಕ್ಷತೆಯಿರುವಂತೆ ಆದಷ್ಟು ಜಾಗ್ರತೆ ದೇಶೀಯ ಸರ್ಕಾರ ಪುನಃ ಸ್ಥಾಪನೆಯಾಗಲು ಸನ್ಮಾನ್ಯ ಸದನವು ತನ್ನ ವಿವೇಚನೆಯಲ್ಲಿ ಅತ್ಯಂತ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಅರ್ಜಿಯಲ್ಲಿ ಪ್ರಾರ್ಥಿಸಲಾಗಿತ್ತು.

ಮಹಾರಾಜರು ಗೌರ್ನರ್ ಜನರಲ್ ಸರ್ ಜಾನ್ ಲಾರೆನ್ಸ್ ಅವರಿಗೆ ೧೮೬೬ ರ ಜುಲೈ ೪ನೇ ದಿನ ಇನ್ನೊಂದು ಮನವಿ ಪತ್ರವನ್ನು ಕಳಿಸಿದರು. ಸಾರ್ವಭೌಮ ಹಾಗೂ ಸಂರಕ್ಷಕ ಪ್ರಭುತ್ವದ ದೃಷ್ಟಿಯಲ್ಲಿ ಬ್ರಿಟಿಷ್ ಹಿತಾಸಕ್ತಿಗಳಿಗೂ ಪ್ರಜೆಗಳ ಕ್ಷೇಮಾಭ್ಯುದಯಕ್ಕೂ

ಸಾಕೆನ್ನಿಸುವಷ್ಟು ಸುರಕ್ಷಣಾ ಏರ್ಪಾಡುಗಳೊಡನೆ ಮತ್ತು ಅಂತಹ ಷರತ್ತುಗಳೊಡನೆ ತಮ್ಮನ್ನು ತಮ್ಮ ರಾಜ್ಯದ ಅಧಿಪತಿಯಾಗಿ ಮತ್ತೆ ಸ್ಥಾಪಿಸಬೇಕೆಂದು ಅದರಲ್ಲಿ ಮಹಾರಾಜರು ಕೋರಿದರು. ಅದನ್ನು ಮಂತ್ರಾಲೋಚನಾ ಮಂಡಳಿ ಅಧ್ಯಕ್ಷರಾದ ಗೌರ್ನರ್ ಜನರಲ್ ಅವರು ೧೮೬೬ ರ ಅಕ್ಟೋಬರ್ ೩೧ರಂದು ಭಾರತ ವ್ಯವಹಾರಗಳ ಕಾರ್ಯದರ್ಶಿಯವರಿಗೆ ಕಳಿಸಿಕೊಟ್ಟರು. ವಿಷಯವನ್ನು ಕಾಮನ್ಸ್ ಸಭೆಯಲ್ಲೂ ಪ್ರಸ್ತಾಪಿಸಲಾಯಿತು.[೮]

ಮೈಸೂರಿನ ಮಹಾರಾಜರು ತಮ್ಮ ದತ್ತುಪುತ್ರನ ವಾರಸುದಾರಿಕೆ ವಿಷಯದಲ್ಲಿ ಮಾಡಿಕೊಂಡ ಮನವಿಯ ಬಗೆಗೆ ಬ್ರಿಟಿಷ್ ಸರ್ಕಾರ ಏನಾದರೂ ನಿರ್ಧಾರಕ್ಕೆ ಬಂದಿದೆಯೇ ಎಂಬುದಾಗಿ ಸರ್ ಹೆನ್ರಿ ರಾಲಿನ್ಸ್‌ನ ಅವರು ೧೮೬೭ ರ ಫೆಬ್ರವರಿ ೨೨ ರಂದು ಕಾಮನ್ಸ್ ಸಭೆಯಲ್ಲಿ ಭಾರತ ವ್ಯವಹಾರಗಳ ಕಾರ್ಯದರ್ಶಿಯವರನ್ನು ಪ್ರಶ್ನಿಸಿದರು. ಹಾಗಿದ್ದಲ್ಲಿ, ಈ ವಿಷಯದಲ್ಲಿ ನಡೆದಿರಬಹುದಾದ ಪತ್ರವ್ಯವಹಾರವನ್ನು ಸಭೆಯ ಮುಂದಿಡಲಾಗುವುದೇ? ಎಂಬುದಾಗಿಯೂ ಕೇಳಿದರು.

ಭಾರತ ವ್ಯವಹಾರಗಳ ಕಾರ್ಯದರ್ಶಿಯವರ ಉತ್ತರದಲ್ಲಿ ಈ ಅಂಶಗಳಿದ್ದವು "೧೭೯೯ರ ಒಪ್ಪಂದದ ಪ್ರಕಾರ ಮಹಾರಾಜರ ಹಕ್ಕು ಕೇವಲ ವ್ಯಕ್ತಿಗತವಾದದ್ದು, ಉತ್ತಮ ಆಡಳಿತವುಳ್ಳ ದೇಶಿಯ ಸಂಸ್ಥಾನವೊಂದಿರುವುದು ಬ್ರಿಟಿಷ್ ಆಳ್ವಿಕೆಯ ಸ್ಥಿರತೆಗೇ ಅಲ್ಲದೆ ಇತರ ರೀತಿಗಳಲ್ಲೂ ನಿಜವಾದ ಪ್ರಯೋಜನವಾಗಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ದೇಶೀಯ ಜನರ ಆತ್ಮ ಗೌರವವನ್ನು ಹೆಚ್ಚಿಸುತ್ತದೆ ಮತ್ತು ಪ್ರಜೆಗಳ ಭಾವನೆ ಬಯಸುವಂಥ ಒಂದು ಆದರ್ಶವಾಗಿರುತ್ತದೆ. ಆದ್ದರಿಂದ ಮಹಾರಾಜರು ಮೃತರಾದಾಗ ಮೈಸೂರು ಸಂಸ್ಥಾನವನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂಬುದು ಬ್ರಿಟಿಷ್ ರಾಣಿಯವರ ಸರ್ಕಾರದ ಉದ್ದೇಶವಲ್ಲ. ಸಂಸ್ಥಾನವನ್ನು ನಿಯಂತ್ರಣ ಅಥವಾ ಅಡತಡೆಗಳಿಲ್ಲದಂತೆ ದೇಶಿಯ ಸರ್ಕಾರಕ್ಕೆ ಕೊಟ್ಟುಬಿಡುವುದು. ಸರ್ಕಾರದ ಕರ್ತವ್ಯಕ್ಕೆ ಹೊಂದಿಕೆಯಾಗುವುದಿಲ್ಲ. ಇನ್ನು ಮಹಾರಾಜರ ದತ್ತು ಪುತ್ರನಿಗೆ ತಮ್ಮ ತಂದೆಯವರು ಹೊಂದಿದ್ದ ಪ್ರದೇಶದ ಸರ್ಕಾರ ಮತ್ತು ಸಿಂಹಾಸನಾಧಿಕಾರದಲ್ಲಿ ಪಾಲನ್ನು ಕೊಡುವ ವಿಷಯ ಕುರಿತು ಹೇಳಬೇಕೆಂದರೆ, ಇಂತಹ ತೀರ್ಮಾನ ತೆಗೆದುಕೊಳ್ಳಬೇಕಾದ ಕಾಲವಿನ್ನೂ ಬಂದಿಲ್ಲ. ಈ ವಿಷಯದ ನಿರ್ಧಾರವನ್ನು ಮುಂದೂಡಬೇಕಾಗಿದೆ. ದತ್ತುಮಗನಿಗೆ ಇನ್ನಷ್ಟೂ ವಯಸ್ಸಾದಾಗ, ಆತನಿಗೆ ಸುಮಾರು ೨೦ ವರ್ಷಗಳ ವಯಸ್ಸಾದಾಗ ಆಗ ಭಾರತ ಸರ್ಕಾರದ ಹೊಣೆ ಹೊತ್ತವರು ಇದನ್ನು ನಿರ್ಧರಿಸಲು ಸಾಧ್ಯವಾಗಬಹುದು."

ಅವರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ತಿಳಿಸುತ್ತಾ ಇಡೀ ಸಂಸ್ಥಾನದ ಅಥವಾ ಅದರ ಒಂದು ಭಾಗದ ಸರ್ಕಾರದಲ್ಲಿ ವ್ಯಾವಹಾರಿಕವಾದ ಪಾಲನ್ನು ದತ್ತುಪುತ್ರನಿಗೆ ನೀಡಬಹು

ದಾದದ್ದು ಬಹುಶಃ ಅತ್ಯುತ್ತಮ ರೀತಿಯೆಂದು ಆಶಿಸಿದರು. ಆದರೆ ಇದು ವಾಗ್ದಾನವೇನಲ್ಲವೆಂದು ಸ್ಪಷ್ಟಪಡಿಸಿದರು.[೯]

"ಈಗಿನ ಮಹಾರಾಜರು ಮೃತಪಟ್ಟಾಗ, ಮೈಸೂರು ಸರ್ಕಾರವನ್ನು ನಿರ್ವಹಿಸುವ ರೀತಿಯಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ. ಎಳೆ ವಯಸ್ಸಿನ ಮಹಾರಾಜರಿಗೆ, ಅವಕಾಶ ಒದಗಿ ಬರುವುದಾದಲ್ಲಿ, ಅವರಿಗೆ ಐರೋಪ್ಯ ಶಿಕ್ಷಣದ ಅನುಕೂಲ ಕಲ್ಪಿಸಲಾಗುವುದು. ಆದ್ದರಿಂದ ಅವರು ತಮಗೆ ಬರಬಹುದಾದ ಜವಾಬ್ದಾರಿಗಳನ್ನು ನಿರ್ವಹಿಸಲು ಸಿದ್ಧತೆ ಪಡೆಯುತ್ತಾರೆ. ಈ ವಿಷಯದ ಪತ್ರವ್ಯವಹಾರವನ್ನು ಸಭೆಯ ಮುಂದಿಡಲು ನನಗೆ ಒಪ್ಪಿಗೆ ಇದೆ. ಮಾನ್ಯ ಸದಸ್ಯರು ಬ್ರಿಟಿಷ್ ರಾಣಿಯವರ ಸರ್ಕಾರದ ಅಭಿಪ್ರಾಯಗಳನ್ನು ಒಪ್ಪದೇ ಇದ್ದಲ್ಲಿ ಅವರು ಈ ವಿಷಯದಲ್ಲಿ ಸಭೆಯ ಅಭಿಪ್ರಾಯವನ್ನು ಕೇಳಬಹುದು". ಶ್ರೀಮನ್ಮಹಾರಾಜರ ಮನವಿ ಪತ್ರವನ್ನು ಪರಿಶೀಲಿಸಿದ ಮೇಲೆ ಬ್ರಿಟಿಷ್ ಸರ್ಕಾರದ ನಿರ್ಧಾರವನ್ನು ೧೮೬೭ರ ಏಪ್ರಿಲ್ ೧೬ ರಂದು ಆಗ ಭಾರತ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದ ಸ್ಟಾಫರ್ಡ್ ಹೆಚ್. ನಾರ್ತ್‌ಕೋಟ್ ಅವರು ಭಾರತದ ಗೌರ್ನರ್ ಜನರಲ್‌ರ ಮಂತ್ರಾಲೋಚನಾ ಮಂಡಳಿಗೆ ತಿಳಿಸಿದರು. ಪ್ರಭುತ್ವವನ್ನು ಮರಳಿ ಪಡೆದುಕೊಳ್ಳುವ ಬಗ್ಗೆ ಮಹಾರಾಜರ ಹಕ್ಕಿನ ವಿಷಯದಲ್ಲಿ ಆಗಲೇ ಕೈಗೊಂಡಿದ್ದ ತೀರ್ಮಾನವನ್ನು ಸಂಪೂರ್ಣವಾಗಿ ಬದಲಾಯಿಸುವ ವಿಷಯದಲ್ಲಿ ಅವರು ಭರವಸೆಯನ್ನೇನೂ ಕೊಡಲಿಲ್ಲ. ಪ್ರಜೆಗಳಿಗೆ ಒಳ್ಳೆಯ ಆಡಳಿತ ಮತ್ತು ಬ್ರಿಟಿಷ್ ಹಿತಾಸಕ್ತಿಗಳಿಗೆ ಸುರಕ್ಷತೆ ಇರುವಂತೆ ಖಾತರಿ ಕೊಡುವಂತಹ ಷರತ್ತಗಳನ್ನಿಟ್ಟ ಮೈಸೂರಿನ ಸಿಂಹಾಸನದ ಮೇಲೆ ಭಾರತೀಯ ರಾಜವಂಶವನ್ನಿಟ್ಟಿರುವುದೇ ಬ್ರಿಟಿಷ್ ಸರ್ಕಾರದ ನೀತಿಯೆಂದು ಅವರು ತಿಳಿಸಿದರು.

"ಮಹಾರಾಜರದು ಪುರಾತನವಾದ ವಂಶ. ಅದು ಮೈಸೂರಿನೊಡನೆ ದೀರ್ಘಕಾಲದ ಸಂಬಂಧವನ್ನು ಹೊಂದಿದೆ ಮತ್ತು ಬ್ರಿಟಿಷ್ ಸರ್ಕಾರಕ್ಕೆ ಮಹಾರಾಜರು ವ್ಯಯಕ್ತಿಕ ನಿಷ್ಠೆ ಮತ್ತು ವಿಶ್ವಾಸ ಹೊಂದಿರುವುದನ್ನು ಅವರು ಸ್ಪಷ್ಟವಾಗಿ ತೋರಿಸಿದ್ದಾರೆಂಬ ಅಂಶಗಳನ್ನ ಪರಿಗಣಿಸಿ, ಮಹಾರಾಜರ ಮತ್ತು ದತ್ತುಪುತ್ರನ ರೂಪದಲ್ಲಿ ಆ ವಂಶವನ್ನು ಸಿಂಹಾಸನದಲ್ಲಿ ಕೂಡಿಸಿರುವುದು ಬ್ರಿಟಿಷ್ ರಾಣಿಯವರ ಅಪೇಕ್ಷೆಯಾಗಿದೆ. ೧೭೯೯ ರಲ್ಲಿ ವಿಧಿಸಲಾದ ಷರತ್ತುಗಳಿಗೆ ಅನುಗುಣವಾಗಿ ಮತ್ತು ಈ ಸಮಯದಲ್ಲಿ ಬದಲಾಗಿರುವ ಸ್ಥಿತಿಗತಿಗಳಲ್ಲಿ ಸಾಧ್ಯವಿರುವಂತೆ, ಇದನ್ನು ಮಾಡಬೇಕಾಗುತ್ತದೆ. ಎಳೆ ವಯಸ್ಸಿನ ರಾಜಕುಮಾರನಿಗೆ ತಮ್ಮ ಸ್ಥಾನ ಮತ್ತು ಅಂತಸ್ತಿಗೆ ತಕ್ಕಂತಹ ಮತ್ತು ಆಡಳಿತದ ಕರ್ತವ್ಯಗಳಿಗೆ ಅವರನ್ನು ಸಿದ್ದಪಡಿಸುವಂತಹ ವಿದ್ಯಾಭ್ಯಾಸದ ಅನುಕೂಲವಿರಬೇಕು. ಈ ಶಿಕ್ಷಣ ಭಾರತ ಸರ್ಕಾರದ ಮೇಲ್ವಿಚಾರಣೆಯಲ್ಲಿರುತ್ತದೆ.[೧೦] ರಾಜಕುಮಾರರು ವಯಸ್ಸಿಗೆ ಬರುವ ಮುನ್ನವೆ ಮಹಾರಾಜರು ಗತಿಸಿದರೆ ರಾಜಕುಮಾರರ ಹೆಸರಿನಲ್ಲೇ ಆಡಳಿತವನ್ನು ವರ್ಗಾಯಿಸುವುದಕ್ಕೆ ಮುಂಚೆ, ಪ್ರಜೆಗಳ ಅಪೇಕ್ಷೆಗಳು ಮತ್ತು

ಆಸಕ್ತಿಗಳಿಗೆ ಸರಿಯಾಗಿ ಹೊಂದುವಂತಹ ಪದ್ದತಿಯ ಸಕಾರವನ್ನಿಟ್ಟಿರಲು ಅಗತ್ಯವಾದಂತಹ ಕರಾರನ್ನು ಮಾಡಿಕೊಳ್ಳಲಾಗುವುದು. ಬ್ರಿಟಿಷ್ ಸರ್ಕಾರದ ಹಕ್ಕುಗಳು ಮತ್ತು ಆಸಕ್ತಿಗಳ ವಿಷಯದಲ್ಲಿ, ಸೇನಾಪಡೆಗಳ ಪಾಲನಾವೆಚ್ಚ ಬಹಳ ಹೆಚ್ಚಾಗಿರುವುದರಿಂದ ಪೊಗದಿಯನ್ನು ಹೆಚ್ಚಿಸುವುದು ಅವಶ್ಯಕವಾಗಿದೆ. ಸಂಪನ್ಮೂಲಗಳು ಹೆಚ್ಚಿರುವುದರಿಂದ ಅದು ಹೊರೆಯಾಗಲಾರದು" ಎಂಬ ಅಂಶಗಳನ್ನು ಅವರು ತಮ್ಮ ಉತ್ತರಗಳಲ್ಲಿ ವ್ಯಕ್ತಪಡಿಸಿದರು. ಭಾರತದ ಮಂಡಲಿಯ ಬಹುಮಂದಿ ಸದಸ್ಯರು ಬ್ರಿಟಿಷ್ ಕಾರ್ಯದರ್ಶಿಯವರ ಅಭಿಪ್ರಾಯವನ್ನು ವಿರೋಧಿಸಿದರು ಮತ್ತು ಕಾಮನ್ಸ್ ಸಭೆಯಲ್ಲು ೧೮೬೭ರ ಮೇ ೨೪ರಂದು ಒಂದು ಚರ್ಚೆಯನ್ನು ಪ್ರಾರಂಬಿಸಲಾಯಿತು. ಗೌರ್ನರ್ ಜನರಲ್ ಅವರು ಬ್ರಿಟಿಷ ಸರ್ಕಾರದ ನಿರ್ಧಾರವನ್ನು ೧೧೮೬೭ರ ಜೂನ್ ೧೬ರಂದು ಮಹಾರಾಜರಿಗೆ ತಿಳಿಸಿದರು.

ಚಾಮರಾಜೇಂದ್ರ ಒಡೆಯರ್ ಅವರನ್ನು ಮುಂದೆ ಮೈಸೂರಿನ ಮಹಾರಾಜರನ್ನಾಗಿ ಮಾನ್ಯ ಮಾಡಿದ ಸಂತೋಷದ ಸಮಾರಂಭವನ್ನು ಆಚರಿಸಲು ಮಹಾರಾಜರು ೧೮೬೭ ಜುಲೈ ೧೮ರಂದು ತಮ್ಮ ಅರಮನೆಯಲ್ಲಿ ವಿಶೇಷ ದರ್ಬಾರ್ ನಡೆಸಿದರು. ಎಳೆಯ ರಾಜಕುಮಾರ ಜನರ ಜಯಘೋಷ ಮತ್ತು ಕಾಣಿಕೆ ಸ್ವೀಕರಿಸಿದರು. ಅನಂತರ ಅವರನ್ನು ಸಾಂಪ್ರದಾಯಿಕವಾಗಿ ಬ್ರಿಟಿಷ ಕಮಿಷನರ್ ಅವರು ಮಹಾರಾಜರ ತೊಡೆಯ ಮೇಲೆ ಕೂರಿಸಿದರು. ರಾಜಕುಮಾರರು ನ್ಯಾಯಬದ್ಧ ವಾರಸುದಾರರೆಂದು ಸ್ವಾಗತ ಪಡೆದರು.

ಮಹಾರಾಜರಿಗೆ ಖಾಯಿಲೆಯಾಯಿತು. ಎಳೆವಯಸ್ಸಿನ ಮಹಾರಾಜನ್ನು ಹಳೆಯ ಮಹಾರಾಜರಿಗೆ ವೈಯಕ್ತಿಕವಾಗಿ ಉತ್ತರಾಧಿಕಾರಿಯಾಗಿ ಪರಿಗಣಿಸಬೇಕೆಂದು ಭಾರತ ವ್ಯವಹಾರಗಳ ಕಾರ್ಯದರ್ಶಿ ಸರ್ ರಿಚರ್ಡ ಟೆಂಪಲ್ ಅವರು ಕಮಿಷನ್ ಎಲ್ ಬೌರಿಂಗ್ ಅವರಿಗೆ ಆದೇಶಿಸಿದರು. ಮಹಾರಾಜರು ೧೮೬೮ ಮಾರ್ಚಿ ೨೭ರ ರಾತ್ರಿ ತೀರಿಕೊಂಡರು. ಏಪ್ರಿಲ್ ೩ರಂದು ಈ ಮುಂದಿನ ಒಕ್ಕಣಿಯ ಘೋಷಣೆಯನ್ನು ಹೊರಡಿಸಲಾಯಿತು.

"ಘನತೆವೆತ್ತ ಗೌರವಾನ್ವಿತ ವೈಸರಾಯ್ ಮತ್ತು ಗೌರ್ನರ್ ಜನರಲ್ ಕೆ.ಜಿ.ಸಿ.ಎಸ್.ಐ. ಬಿರುದಾಂಕಿತರಾದ ಮಹಾರಾಜ ಕೃಷ್ಣರಾಜ ಒಡೆಯರ್ ಬಹುದೂರ್ ಅವರ ನಿಧನ ಹೊಂದಿದ ರೆಂದು ಮೈಸೂರಿನ ಜನರಿಗೂ ನಾಯಕರಿಗೂ ತಿಳಿಯಪಡಿಸುತ್ತಾರೆ. ದಿವಂಗತ ಮಹಾರಾಜರು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಭಾರತ ಸರ್ಕಾರದೊಡನೆ ಸ್ನೇಹಬಾಂಧವ್ಯಗಳೊಡನೆ ನಡೆದುಕೊಂಡಿದ್ದರು. ಭಾರತ ಸರ್ಕಾರ ಇವರ ನಿಧನಕ್ಕೆ ವಿಷಾದಿಸುತ್ತದೆ."

ಸ್ವರ್ಗಸ್ಥ ಮಹಾರಾಜರ ದತ್ತು ಪುತ್ರರಾಗಿ ಅಪ್ರಾಪ್ತ ವಯಸ್ಕರಾಗಿರುವ ಚಾಮರಾಜೇಂದ್ರ ಒಡೆಯರ್ ಬಹುದೂರ್ ಅವರನ್ನು ಮಹಾರಾಜರ ಉತ್ತರಾಧಿಕಾರಿಯೆಂದೂ ಮೈಸೂರು ಸಂಸ್ಥಾನದ ಮಹಾರಾಜರೆಂದೂ ಭಾರತ ಸರ್ಕಾರ ಒಪ್ಪಿಕೊಂಡಿದೆ."[೧೧]

"ಅವರೀಗ ಪೂರ್ವಪ್ರಾಯದಲ್ಲಿರುವಾಗ ಈ ಪ್ರದೇಶದ ಆಡಳಿತವನ್ನು ಅವರ ಹೆಸರಿನಲ್ಲಿ ಬ್ರಿಟಿಷ್ ಸರ್ಕಾರವೇ ನಡೆಸುವುದು. ಇದುವರೆಗಿನ ತತ್ವಗಳು ಮತ್ತು ನಿಬಂಧನೆಗಳನ್ನು ಅನುಸರಿಸಿಯೇ ಆಡಳಿತವಿರುತ್ತದೆ."

"ಶ್ರೀಮನ್ಮಹಾರಾಜರು ಪ್ರಾಯಕ್ಕೆ ಬಂದಾಗ, ಅವರಿಗೆ ಹದಿನೆಂಟು ವರ್ಷ ವಯಸ್ಸಾದಾಗ, ಅವರ ಉನ್ನತ ಸ್ಥಾನದ ಕರ್ತವ್ಯಗಳನ್ನು ಆ ಸಮಯದಲ್ಲಿ ನಿರ್ಧರಿಸಬಹುದಾದ ಷರತ್ತುಗಳಿಗೆ ಅನುಗುಣವಾಗಿ, ಅವರಿಗೆ ವಹಿಸಿಕೊಡಲಾಗುವುದು."

ರಾಜ್ಯಭಾರವನ್ನು ಅವರಿಗೆ ಬಿಟ್ಟುಕೊಡಲು ಬ್ರಿಟಿಷ್ ಸರ್ಕಾರವು ಕ್ರಮಗಳನ್ನು ಪ್ರಾರಂಭಿಸಿತು. ಕಾಲಕ್ರಮದಲ್ಲಿ ಸಂಸ್ಥಾನವನ್ನು ಮಹಾರಾಜರಿಗೆ ಹಿಂತಿರುಗಿಸುವುದಕ್ಕಾಗಿ ಮೈಸೂರಿನ ಆಡಳಿತ ಯಂತ್ರವನ್ನು ಸಿದ್ದಗೊಳಿಸಲು ಅವಶ್ಯಕವಾಗುವ ಕ್ರಮಗಳನ್ನು ಪರಿಶೀಲಿಸಬೇಕೆಂದು ೧೮೭೫ರ ಜೂನ್ ತಿಂಗಳಲ್ಲಿ ಭಾರತ ವ್ಯವಹಾರಗಳ ಕಾರ್ಯದರ್ಶಿಯವರು ಭಾರತ ಸರ್ಕಾರವನ್ನು ಕೋರಿದರು. ಸಂಸ್ಥಾನದಲ್ಲಿ ೧೮೭೬-೭೭ರಲ್ಲಿ ಭೀಕರ ಕ್ಷಾಮವಿದ್ದುದರಿಂದ ಯಾವ ಕ್ರಮವನ್ನು ಕೈಗೊಳ್ಳಲಿಲ್ಲ.

ಎಳೆಯ ಮಹಾರಾಜರಿಗೆ ವಿದ್ಯಾಪಾಲಕರಾಗಿರುವ ಜೊತೆಗೆ ಗಾರ್ಡನ್ ಅವರನ್ನು ಛೀಫ್ ಕಮಿಷನ್ ಆಗಿಯೂ ಇರುವಂತೆ ೧೯೭೮ರ ಏಪ್ರಿಲ್‌ನಲ್ಲಿ ನೇಮಿಸಲಾಯಿತು. ರಾಜಕುಮಾರನನ್ನು ರಾಜ್ಯಕ್ಕೂ ರಾಜ್ಯವನ್ನು ರಾಜಕುಮಾರನಿಗೂ ಹೊಂದಿಸುವ ಆಖೈರು ಕ್ರಮಗಳ ಜವಾಬ್ದಾರಿ ಅವರದಾಯಿತು. ಈ ವಿಷಯದಲ್ಲಿ ೧೮೭೮ರ ಆಗಸ್ಟ್ ೧೨ರಂದು ಕಾಮನ್ ಸಭೆಯಲ್ಲಿ ಡಬ್ಲ್ಯು. ಎಂ.ಟಾರೆನ್ಸವರು ಭಾರತ ವ್ಯವಹಾರಗಳ ಉಪಕಾರ್ಯದರ್ಶಿಯವರನ್ನು ಒಂದು ಪ್ರಶ್ನೆ ಕೇಳಿದರು. ಮಹಾರಾಜರು ೧೮೮೦ರಲ್ಲಿ ಪ್ರಾಪ್ತ ವಯಸ್ಕರಾಗುವ ವೇಳೆಗೆ ಮೈಸೂರಿನಲ್ಲಿ ದೇಶೀಯ ಆಡಳಿತವನ್ನು ಮತ್ತೆ ಸ್ಥಾಪಿಸಲು ೧೮೬೭ರ ಏಪ್ರಿಲ್ ೧೬ರಂದು ಕಾರ್ಯದರ್ಶಿಯವರು ಕಳಿಸಿದ ಆದೇಶದಂತೆ ಏರ್ಪಾಡುಗಳನ್ನು ಮಾಡಲಾಗಿದೆಯೇ? ಎಂದು ಅವರು ಪ್ರಶ್ನಿಸಿದರು.

ಅಂತಹ ಏರ್ಪಾಡುಗಳನ್ನು ಬಹಳ ಸಮಯದಿಂದಲೂ ಮಾಡಲಾಗುತ್ತಿದೆಯೆಂದೂ, ಕ್ಷಾಮದಿಂದಾಗಿ ಸ್ವಲ್ಪ ವಿಳಂಬವಾಗಿದ್ದರೂ ಎಲ್ಲ ಮುಖ್ಯ ಏರ್ಪಾಡುಗಳನ್ನು ಮಹಾರಾಜರು ಪ್ರಾಯಕ್ಕೆ ಬರುವ ವೇಳೆಗೆ ಪೂರ್ಣಗೊಳಿಸಲಾಗುವುದೆಂದು ಇಸ್ಟ್ಯಾನ್ ಹೋಪ್ ತಮ್ಮ ಜವಾಬಿನಲ್ಲಿ ತಿಳಿಸಿದರು.[೧೨]

ಮಹಾರಾಜರಿಗೆ ಕಾರ್ಯಾತ್ಮಕ ಸರ್ಕಾರದ ಪೂರ್ಣ ಅಧಿಕಾರವನ್ನು ವಹಿಸಿಕೊಡಲು ಷರತ್ತು ಮತ್ತು ನಿಬಂಧನೆಗಳನ್ನು ಸೂಚಿಸುವಂತೆ ಮೈಸೂರಿನ ಚೀಫ್ ಕಮಿಷನ್ ರಿಗೆ ೧೮೭೮ರ ನವೆಂಬರ್ ನಲ್ಲಿ ಭಾರತ ಸರ್ಕಾರ ಸೂಚಿಸಿತು. ಮೈಸೂರಿನ ಚೀಫ್ ಕಮಿಷನರ್ ಆಗಿದ್ದ ಜೆ.ಡಿ ಗಾರ್ಡನ್ ಅವರು ಈ ವರ್ಗಾವಣೆಯ ನಿಯಮಗಳನ್ನೂ ಷರತ್ತುಗಳನ್ನು

ಸೂಚಿಸಿದರು. ನಿವೃತ್ತರಾದ ಉನ್ನತ ಅಧಿಕಾಗಳು, ಈ ಪ್ರದೇಶದ ಶ್ರೇಷ್ಠ ಕುಟುಂಬಗಳ ಪ್ರತಿನಿಧಿಗಳು ಮತ್ತು ವಿವಿಧ ಪ್ರಜಾವರ್ಗಗಳು ಮತ್ತು ಹಿತಾಸಕ್ತಿಗಳ ಪ್ರತಿನಿಧಿಗಳನ್ನು ಒಳಗೊಂಡ ಸಭೆಯೊಂದನ್ನು ಸಮಾಲೋಚನೆಗಳನ್ನು ನಡೆಸಲು ಮತ್ತು ಕಾರ್ಯಾಕಾರಿ ಮಂಡಲಿಗೆ ಪೂರಕವಾಗಿರಲು ರಚಿಸಬೇಕೆಂದು ಸಹ ಅವರು ಭಾರತ ವ್ಯವಹಾರಗಳ ಕಾರ್ಯದರ್ಶಿಗೆ ೧೮೭೯ರ ಫೆಬ್ರವರಿಯಲ್ಲಿ ಸಲಹೆ ಮಾಡಿದರು. ಉದ್ದೇಶಿತ ಶಾಸನಕ್ರಮಗಳು, ಆಡಳಿತ ಸುಧಾರಣೆಯ ಮುಖ್ಯ ಕ್ರಮಗಳು ಸರ್ಕಾರಿ ಹಣವನ್ನು ಆಯವ್ಯಯದ ವಿವಿಧ ಬಾಬುಗಳಿಗೆ ಒದಗಿಸುವ ಬಗೆಗೆ ಈ ಸಭೆ ಚರ್ಚಿಸಿ ತನ್ನ ಅಭಿಪ್ರಾಯ ಕೊಡಬೇಕೆಂದು ಅವರು ಅಪೇಕ್ಷಿಸಿದರು. ಇಂತಹ ಸಭೆಯ ರಚನೆಯಲ್ಲಿ ಮೊದಲು ಸ್ವಲ್ಪ ಕಷ್ಟ ಕಂಡುಬಂದರೂ ಅದು ಅಸಾಧ್ಯವೇನಲ್ಲವೆಂದೂ, ಉದ್ದೇಶಿತ ಕ್ರಮಗಳ ಬಗ್ಗೆ ವಾಸ್ತವ ದೃಷಿಯುಳ್ಳ ಮತ್ತು ಬುದ್ಧಿವಂತರಾದ ಜನರು ಸ್ಥಳೀಯ ಸಾರ್ವಜನಿಕ ಅಭಿಪ್ರಾಯವನ್ನು ಸರ್ಕಾರದ ಕಾರ್ಯಾಂಗಕ್ಕೆ ವ್ಯಕ್ತಪಡಿಸಲು ಅದು ಅಮೂಲ್ಯವೆನಿಸುವುದಿದ್ದು, ಕಾರ್ಯಾಂಗಕ್ಕೆ ಅಡೆತಡೆಗಳನ್ನೇನೂ ಒಡ್ಡುವುದಿಲ್ಲವೆಂದೂ ಅವರು ಸೂಚಿಸಿದರು. ಜನವರ್ಗದಲ್ಲಿ ಅಧಿಕಾರೇತರ ಪ್ರಮುಖ ವ್ಯಕ್ತಿಗಳಿಗೆ ಉಪಯುಕ್ತ ಹಾಗೂ ಉತ್ತಮ ಕಾರ್ಯಕ್ಷೇತ್ರವೊಂದನ್ನು ಒದಗಿಸುವ ಇನ್ನೊಂದು ಪ್ರಯೋಜನವೂ ಇದರಿಂದ ಲಭಿಸುವುದೆಂದು ಅವರು ತಿಳಿಸಿದರು.

ಖಚಿತವಾಗಿ ಶಾಸನ ನಿರೂಪಣೆಯ, ಹಣಕಾಸಿಗೆ ಸಂಬಂಧಿಸಿದ ಅಥವ ಆಡಳಿತ ಕಾರ್ಯದ ಅಧಿಕಾರವಿಲ್ಲದೆ, ಅಭಿಪ್ರಾಯಗಳನ್ನು ಕಾರ್ಯಗತ ಮಾಡಲೇ ಬೇಕಾದ ಅಧಿಕಾರವಿಲ್ಲದ ಚರ್ಚೆ ಸಭೆಯ ಒಳ್ಳೆಯ ಹೆಸರನ್ನೂ ಗಳಿಸದೆ ಹೋಗಬಹುದು ಅಥವಾ ಮೊದಲಲ್ಲಿ ನಿರೀಕ್ಷಿಸಿದಕ್ಕಿಂತ ಹೆಚ್ಚಿನ ಚಟುವಟಿಕೆ ಮತ್ತು ಪ್ರಭಾವವನ್ನು ಬೆಳೆಸಿಕೊಳ್ಳಬಹುದು, ಈ ಸಾಧ್ಯತೆಗಳಿವೆ ಎಂದ ಭಾರತ ಸರ್ಕಾರದ ವಿದೇಶಾಂಗ ಇಲಾಖೆ ಕಾರ್ಯದರ್ಶಿಯವರು ೧೮೭೯ರ ಏಪ್ರಿಲ್ ೮ರಂದು ಚೀಫ್ ಕಮಿಷನರ್ ಅವರಿಗೆ ತಿಳಿಸಿದರು. ಭಾರತದ ವೈಸ್‌ರಾಯ್ ಅವರೂ ಸಹ ಕೆಲಕಾಲನಂತರ ಇಂತಹ ಕ್ರಮವಾಗಬಹುದೆಂದು ಅಭಿಪ್ರಾಯ ಪಟ್ಟರು. ಪ್ರಮುಖ ವರ್ಗಗಳ ಮತ್ತು ಹಿತಾಸಕ್ತಿಗಳ ಪ್ರತಿನಿಧಿಗಳನ್ನೊಳಗೊಂಡ ಇಂತಹ ಸಮಾಲೋಚನಾ ಸಭೆಗಳನ್ನು ತಕ್ಷಣದಲ್ಲಿ ರಚಿಸುವುದನ್ನು ಅವರು ಬೆಂಬಲಿಸಲ್ಲಿಲ್ಲ. ಅವು ಭಾರತದ ವ್ಯವಹಾರಗಳ ಕಾರ್ಯದರ್ಶಿಯವರಿಗೆ ೧೮೭೯ ಮೇ ೨೯ರಂದು ಬರೆದ ಪತ್ರದಲ್ಲಿ, ಬ್ರಿಟಿಷ್ ಭಾರತದಲ್ಲಿ ರಚಿಸಿ ನೊಡಲಿಲ್ಲ, ಮತ್ತು ಬೇರೆಲ್ಲೂ ಯಶಸ್ವಿಯಾಗಿಲ್ಲವೆಂದು ಕಂಡಿಲ್ಲದ, ಈ ರೀತಿಯ ಸಮಾಲೋಚನಾ ಸಭೆಯಂತಹ ಸಂಸ್ಥೆಯನ್ನು ಮೈಸೂರಿನಲ್ಲಿದ್ದ ಸ್ಥಿತಿಗತಿಗಳಲ್ಲಿ ಪ್ರಾರಂಭದಲ್ಲೆ ರಚಿಸುವುದು ಅಕಾಲಿಕವಾಗುವುದೆಂದು ಸೂಚಿಸಿದರು. ಆಡಳಿತದ, ಆಧಾರವೊಂದು ಇತ್ಯರ್ಥವಾದ ಮೇಲೆ ಸ್ವಲ್ಪ ಕಾಲದ ನಂತರ ಇಂತಹ ಕ್ರಮವೊಂದು ಬಹುಶಃ ನಡೆಯಬಹುದೆಂದು ಅವರು ಬರೆದರು.[೧೩]

ಮಹಾರಾಜರಿಗೆ ರಾಜ್ಯಭಾರದ ಪುನರ್ ಪ್ರಾಪ್ತಿಗಾಗಿ ಭಾರತ ಸರ್ಕಾರ ಸೂಚಿಸಿದ ಷರತ್ತುಗಳಿಗೆ ೧೮೭೮ರ ಆಗಸ್ಟ್‌ನಲ್ಲಿ ಭಾರತ ವ್ಯವಹಾರಗಳ ಕಾರ್ಯದರ್ಶಿಯವರು ಅನುಮೋದನೆ ಸೂಚಿಸಿದರು. ಶ್ರೀಮನ್ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದೂರ್ ಅವರಿಗೆ ೧೮೮೧ರ ಮಾರ್ಚ ೮ರಂದು ೧೮ವರ್ಷ ವಯಸ್ಸಾಯಿತು.

೧೮೮೧ರ ಮಾರ್ಚ ೨೪ರಂದು ಡಬ್ಲ್ಯು.ಎಂ ಟಾರನ್ಸ್ ಅವರು ಕಾಮನ್ಸ್ ಸಭೆಯಲ್ಲಿ "ಮೈಸೂರಿನ ಮಹಾರಾಜರು ಪ್ರಾಪ್ತವಯಸ್ಕರಾಗುತ್ತಿದ್ದಂತೆ ಅವರಿಗಾಗಿ ದಿವಾನ್ ಅಥವ ಮಂತ್ರಿಯೊಬ್ಬರ ಆಯ್ಕೆಯೂ ಸೇರಿದಂತೆ ರಾಜ್ಯದಲ್ಲಿ ವಾಸ್ತವಿಕ ಸರ್ಕಾರಿ ಆಡಳಿತವನ್ನು ಅವರಿಗೆ ವಹಿಸಿಕೊಡುವ ಏರ್ಪಾಟುಗಳನ್ನು ಭಾರತ ವ್ಯವಹಾರ ಕಾರ್ಯದರ್ಶಿಯವರ ಅನುಮೋದನೆಯೊಡನೆ ಮಾಡಲಾಗುತ್ತಿದೆಯೇ?" ಎಂದು ಪ್ರಶ್ನಿಸಿದರು "ಮೈಸೂರು ಸಂಸ್ಥಾನವನ್ನು ಮಹಾರಾಜ ಚಾಮರಾಜೇಂದ್ರ ಒಡೆಯರವರಿಗೆ ವರ್ಗಾಯಿಸುವ ಸಂಬಂಧದ ಸಾಮಾನ್ಯ ಏರ್ಪಾಟುಗಳನ್ನು ಸಂಪುಟದಲ್ಲಿ ಭಾರತದ ವ್ಯವಹಾರ ಕಾರ್ಯದರ್ಶಿಯವರ ಅನುಮೋದನೆಯೊಡನೆ ಮಾಡಲಾಗಿದೆ. ೨೫ನೇ ತಾರೀಖು ಶುಕ್ರವಾರ ಮದ್ರಾಸ್ ಗೌರ್ನರ್ ಅವರ ಅಧ್ಯಕ್ಷತೆಯಲ್ಲಿ ಮಹಾರಾಜರ ಪಟ್ಟಾಭಿಷೇಕ ನಡೆಯಲಿದೆ" ಎಂದು ಮಾರ್ಕ್ವೀಸ್ ಆಫ್ ಹಾರ್ಟಿಂಗ್ಟನ್ ಅವರು ತಿಳಿಸಿದರು.

ಸಂಸ್ಥಾನದ ಆಡಳಿತದಲ್ಲಿ ಒಬ್ಬ ದಿವಾನರ ಹಾಗೂ ದೇಶೀಯ ಅಧಿಕಾರಿಗಳಿಗಿರುವ ಮಂಡಳಿಯ ಸಹಾಯವನ್ನು ಪಡೆದಿರುತ್ತಾರೆ. ದಿವಾನ್ ಪದವಿಗೆ ಸೂಚಿಸಬಹುದಾದ ಬೇರೆ ಯಾರಿಗಿಂತಲೂ ಶ್ರೀರಂಗಾಚಾರ್ಲು ಸಿ. ಐ. ಇ. ಅವರು ಮಹಾರಾಜರಿಗೆ ಒಪ್ಪಿಗೆಯಾಗಿರುವರೆಂದು ಭಾರತ ಸರ್ಕಾರ ವರದಿ ಮಾಡಿ, ಅವರ ನೇಮಕಕ್ಕೆ ಒಪ್ಪಿಗೆ ಕೊಟ್ಟಿದೆ. ರಾಜ್ಯದಲ್ಲಿ ಈ ಹುದ್ದೆಗೆ ಅವರು ಅತ್ಯಂತ ಅರ್ಹ ವ್ಯಕ್ತಿಯೆಂದು ಮೈಸೂರಿನ ಚೀಫ್ ಕಮಿಷನರ್ ಅವರೂ ಪರಿಗಣಿಸಿದ್ದಾರೆ" ಎಂಬುದಾಗಿಯೂ ಮಾರ್ಕ್ವಿಸ್ ಆಫ್ ಹಾರ್ಟಿಂಗ್ಟನ್ ಹೇಳಿದರು.[೧೪]

ಸಂಸ್ಥಾನದ ಹಸ್ತಾಂತರ ೧೮೮೧ರ ಮಾರ್ಚ ೨೫ರಂದು ನಡೆಯಿತು. ಅಂದು ಬೆಳಿಗ್ಗೆ ಏಳು ಗಂಟೆಯ ಸಮಯದಲ್ಲಿ ಸಾರ್ವತ್ರಿಕವಾದ ಶುಭಾಷಯಗಳ ನಡುವೆ ಮತ್ತು ಜನರು ಅನೇಕನೇಕ ರೀತಿಗಳಲ್ಲಿ ಹರ್ಷ ಸೂಚಿಸುತ್ತಿದ್ದಂತೆ, ಭಾರತದ ವೈಸರಾಯ್ ಮತ್ತು ಗೌರ್ನರ್ ಜನರಲ್ ಹಾಗೂ ಅವರ ಮಂಡಳಿಯ ಘೋಷಪತ್ರದೊಡನೆ ಮಹಾರಾಜರನ್ನು ಮೈಸೂರಿನಲ್ಲಿ ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು. ಮದರಾಸಿನ ಗವರ್ನರ್ ಡಬ್ಲ್ಯೂ. ಆ್ಯಡಮ್ ಅವರು ಪಟ್ಟಾಭಿಷೇಕದ ಸಮಾರಂಭವನ್ನು ನೆರವೇರಿಸಿದರು. ಸಮಾರಂಭ ನಡೆಯುತ್ತಿದ್ದಂತೆ ಶುಭಶಕುನವಾಗಿ ಈ ದೊಡ್ಡ ಅಧಿಕೃತ ಸಂದರ್ಭಕ್ಕೆ ಆಗಸದಿಂದ ಸುರಿದ ಒಸಗೆಯಂತೆ ಹಗುರವಾಗಿ ತುಂತುರು ಹನಿಗಳುದುರಿದುವು. ಮಹಾರಾಜರು ಅದೇ ಸಮಯದಲ್ಲಿ ವರ್ಗಾವಣೆ ಪತ್ರ ಅಥವ ಸನ್ನದಿಗೆ ಸಹಿ ಹಾಕಿದರು.

ಮೈಸೂರು ಸಂಸ್ಥಾನದ ಆಡಳಿತವನ್ನು ಯಾವ ಷರತ್ತುಗಳಿಗನುಸಾರ ಮಹಾರಾಜರಿಗೆ ಬ್ರಿಟಿಷ್ ಸರ್ಕಾರ ವರ್ಗಾಯಿಸಿತೋ ಅವುಗಳನ್ನು ಈ ವರ್ಗಾವಣೆಯ ಪತ್ರವು ಇಪ್ಪತ್ತುನಾಲ್ಕು ಅನುಚ್ಛೇದಗಳಲ್ಲಿ ವಿವರಿಸಿತ್ತು. ಇದರಲ್ಲಿ ಐದನೆಯ ಅನುಚ್ಛೇದದಂತೆ, ಬ್ರಿಟಿಷ್ ಸರ್ಕಾರಕ್ಕೆ ಇದುವರೆಗೆ ಪ್ರತಿವರ್ಷ ಕೊಡಲಾಗುತ್ತಿದ್ದ ೨೪ ೧/೨ ಲಕ್ಷ ರೂಪಾಯಿಗಳ ಪೊಗದಿಯನ್ನು ೩೫ ಲಕ್ಷ ರೂ.ಗಳಿಗೆ ಹೆಚ್ಚಿಸಲಾಯಿತು.

೧೭೯೯ರ ಒಪ್ಪಂದದಂತೆ ಮೈಸೂರು ಸರ್ಕಾರವು ವಾರ್ಷಿಕವಾಗಿ ೨೪ ೧/೨ ಲಕ್ಷ ರೂಪಾಯಿ ಕಪ್ಪವನ್ನು ಸಲ್ಲಿಸಬೇಕಾಗಿತ್ತಲ್ಲದೆ ಹೆಚ್ಚಿದ್ದ ಸಮರ ವೆಚ್ಚಗಳಿಗಾಗಿ ಬ್ರಿಟಿಷ್ ಸರ್ಕಾರಕ್ಕೆ ಹಣ ಕೊಡಬೇಕಾಗಿತ್ತು. ಅನಿರ್ದಿಷ್ಟವಾಗಿ ಯುದ್ಧದ ಸಮಯಗಳಲೆಲ್ಲಾ ಹಣ ಕೊಡಬೇಕಾದ ಈ ಹೊರೆಯನ್ನು ೧೮೦೭ರ ಕರಾರಿನಂತೆ ಬೇರೊಂದು ರೀತಿಗೆ ಪರಿವರ್ತಿಸಲಾಯಿತು. ಅದರಂತೆ, ಪೂರ್ತಿ ಸಜ್ಜಾದ ೪,೦೦೦ ರಾವುತರ ಪಡೆಯನ್ನು ಯುದ್ಧ ಮತ್ತು ಕಾಲಗಳಲ್ಲೆಲ್ಲಾ ಸನ್ನದ್ಧವಾಗಿ ಇಟ್ಟಿರುವ ಹೊಣೆ ಸಂಸ್ಥಾನದ ಸರ್ಕಾರದ್ದಾಯಿತು. ಇದರಲ್ಲಿ ಬ್ರಿಟಿಷ್ ಸರ್ಕಾರದ ಅಭಿಪ್ರಾಯದಲ್ಲಿ ಸಂಸ್ಥಾನದೊಳಗಿನ ರಕ್ಷಣೆ ಕಾರ್ಯಗಳಿಗಾಗಿ ಅಗತ್ಯವಲ್ಲದ ಭಾಗದ ಅಶ್ವಾರೋಹಿದಳವು ಬ್ರಿಟಿಷ್ ಸೈನ್ಯದೊಡನೆ ಮೈಸೂರು ಪ್ರದೇಶದ ಹೊರಗೆ ಕಾರ್ಯಚರಣೆಗಾಗಿ ಯಾವುದೇ ಸಮಯದಲ್ಲಿ ಹೊರಡಲು ಸಿದ್ಧವಾಗಿರುವಂತೆ ಸನ್ನದ್ಧವಾಗಿಟ್ಟಿರಬೇಕಾಗಿತ್ತು. ಸಂಸ್ಥಾನದ ಆಡಳಿತವನ್ನು ಮಹಾರಾಜರಿಗೆ ವರ್ಗಾಯಿಸಿದ ಕರಾರು ಪತ್ರವು ಹೊರಗಿನ ಕಾರ್ಯಾಚರಣೆಗಾಗಿ ಅಶ್ವದಳವನ್ನಿಟ್ಟಿರಬೇಕೆಂಬ ಈ ಹೊಣೆಯನ್ನು ಬದಲಾಯಿಸಿ, ಅದಕ್ಕೆ ಪ್ರತಿಯಾಗಿ ಪ್ರತಿವರ್ಷ ಪೊಗದಿಯ ಜೊತೆಗೆ ೧೦ ೧/೨ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಕೊಡಬೇಕೆಂದು ವಿಧಿಸಿತು.[೧೫]

ಹೆಚ್ಚುವರಿ ಪಾವತಿಯನ್ನು ಐದು ವರ್ಷಗಳ ಕಾಲ ಅಂದರೆ ೧೮೮೬ ರ ಏಪ್ರಿಲ್ ಒಂದರ ತನಕ ಕೊಡಬೇಕಾಗಿಲ್ಲವೆಂದು, ಸಂಸ್ಥಾನದ ಹಣಕಾಸಿನ ಸ್ಥಿತಿಯು ದೃಷ್ಟಿಯಿಂದ ಭಾರತ ಸರ್ಕಾರವು ೧೮೮೧ ರಲ್ಲಿ ಬಿಟ್ಟುಕೊಟ್ಟಿತು. ಈ ಒಪ್ಪಿಗೆಯನ್ನು ಆಮೇಲೆ ೧೮೯೬ ರ ಏಪ್ರಿಲ್ ಒಂದರ ತನಕ ಇನ್ನೂ ಹತ್ತು ವರ್ಷ ಕಾಲಕ್ಕೆ ವಿಸ್ತರಿಸಲಾಯಿತು. ೧೭೯೯ ರಿಂದ ಬ್ರಿಟಿಷ್ ಭಾರತದ ಭಾಗವಾಗಿ ಸೇರಿಸಿಕೊಂಡಿದ್ದ ಶ್ರೀರಂಗಪಟ್ಟಣ ದ್ವೀಪವನ್ನು ೧೮೧೧ ರಿಂದ ವರ್ಷಕ್ಕೆ ೫೦,೦೦೦ ರೂಪಾಯಿಗಳ ಪಾವತಿಗೆ ಪ್ರತಿಯಾಗಿ ಮೈಸೂರು ಸರ್ಕಾರಕ್ಕೆ ಗುತ್ತಿಗೆ ಕೊಡಲಾಗಿತ್ತು. ೧೮೮೧ ರಲ್ಲಿ ಅದನ್ನು ಉಚಿತವಾಗಿ ಕೊಟ್ಟುಬಿಡಲಾಯಿತು. ಶ್ರೀಮನ್ಮಹಾರಾಜರ ಅರಮನೆ ವೆಚ್ಚ ಮತ್ತು ಪೆನ್ಷನ್‌ಗಳಿಗೆ ಕೊಡಲಾಗುತ್ತಿದ್ದ ೧೩ಲಕ್ಷ ರೂಪಾಯಿನ ರಾಜಾಂಶವನ್ನು ಮೊದಲ ಐದು ವರ್ಷಗಳಲ್ಲಿ ೧೦ಲಕ್ಷ ರೂಪಾಯಿಗೆ ಇಳಿಸಲಾಯಿತು. ಈ ಸಮಯದಲ್ಲಿ ಮುಂಬೈ ಸರ್ಕಾರವು ಸ್ವಂತ ಪ್ರಯೋಜನ ಮಾಡಿಕೊಳ್ಳುವುದಕ್ಕಾಗಿ ತನ್ನ ಪ್ರಾಂತ್ಯದ ಗಡಿಯನ್ನು ನೇರ ಮಾಡಿಕೊಳ್ಳಲೆಂದು ಅದು ಮೈಸೂರಿನ ವಾಯುವ್ಯ ತುದಿಯನ್ನು ಮುಟ್ಟುವೆಡೆ ಸೊರಬ

ತಾಲ್ಲೂಕನ್ನೂ ಶಿಕಾರಿಪುರದ ಭಾಗವನ್ನೂ ಸೇರಿಸಿಕೊಂಡುಬಿಡಲು ಯತ್ನಿಸಿತು. ಆದರೆ ಅದಕ್ಕೆ ಗೃಹಶಾಖೆ ಮಂಜೂರಾತಿ ನೀಡಲಿಲ್ಲ.

ರಾಜ್ಯ ವಾಪಸಾತಿಯ ಪ್ರತ್ಯಕ್ಷಫಲವಾಗಿ ಅರ್ಧ ಶತಮಾನ ಕಾಲದ ಬ್ರಿಟಿಷ್ ಆಳ್ವಿಕೆಯ ನಂತರ ಮೈಸೂರು ಸಂಸ್ಥಾನದಲ್ಲಿ ಮತ್ತೆ ಹಿಂದೂ ಆಳ್ವಿಕೆ ಬಂದಿತು. ಅಧಿಕಾರ ವಹಿಸಿಕೊಂಡ ಮೇಲೆ ಮಹಾರಾಜರು ಒಂದು ಘೋಷಣೆ ಎಲ್ಲ ಅಧಿಕಾರಿಗಳನ್ನೂ ಅವರವರ ಹುದ್ದೆಗಳಲ್ಲಿ ಖಾಯಂ ಮಾಡಿದರು. ಸಿ. ರಂಗಾಚಾರ್ಲು ಅವರನ್ನು ದಿವಾನರಾಗಿ ನೇಮಕ ಮಾಡಲಾಯಿತು. ದಿವಾನರು ಪದನಿಮಿತ್ತ ಅಧ್ಯಕ್ಷರಾಗಿದ್ದು ಇತರ ಮೂವರು ಕೌನ್ಸಿಲರುಗಳಿರುವ ಒಂದು ಕಾರ್ಯ ನಿರ್ವಾಹಕ ಮಂಡಳಿಯನ್ನು ರಚಿಸಲಾಯಿತು. ಸಂಸ್ಥಾನದಲ್ಲಿ ಒಳ್ಳೆಯ ಆಡಳಿತ ಮತ್ತು ಪ್ರಜೆಗಳ ಕ್ಷೇಮಾಭ್ಯುದಯಕ್ಕೆ ಸಂಬಂಧಿಸಿದಂತೆ ಶಾಸನ ನಿರೂಪಣೆ, ತೆರಿಗೆ ಮತ್ತು ಇತರ ಎಲ್ಲ ಕ್ರಮಗಳನ್ನು ಕುರಿತು ಮಹಾರಾಜರಿಗೆ ಅಭಿಪ್ರಾಯಗಳನ್ನು ಸಲ್ಲಿಸುವುದು ಈ ಮಂಡಳಿಯ ಕರ್ತವ್ಯವಾಗಿತ್ತು.

ಮಹಾರಾಜರು ಈ ಮುಂದೆ ಕಾಣಿಸಿರುವವರನ್ನು ಕೌನ್ಸಿಲರುಗಳಾಗಿ ನೇಮಿಸಿದರು.

೧. ಟಿ. ಆರ್. ಎ. ತಂಬೂಚೆಟ್ಟಿ (ಮೈಸೂರಿನ ಮುಖ್ಯ ನ್ಯಾಯಾಸ್ಥಾನದ ನಾಯಾಧೀಶರು)

೨. ರಾವ್ ಬಹದೂರ್ ಪಿ. ಕೃಷ್ಣರಾವ್.

೩. ರಾವ್ ಬಹದೂರ್ ಎ. ಸಭಾಪತಿ ಮೊದಲಿಯಾರ್

ಕೃಷ್ಣರಾವ್ ಮತ್ತು ಸಭಾಪತಿ ಮೊದಲಿಯಾರ್ ಅವರಿಬ್ಬರೂ ಸಂಸ್ಥಾನದಲ್ಲಿ ಉನ್ನತ ಅಧಿಕಾರ ಸ್ಥಾನಗಳಲ್ಲಿದ್ದು ನಿವೃತ್ತರಾಗಿದ್ದವರು.

ಮಹಾರಾಜರು ತಮ್ಮ ಉನ್ನತಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಲು ಪ್ರಾರಂಭಿಸಿದಾಗ ಸಂಸ್ಥಾನದ ಹಣಕಾಸಿನ ಸ್ಥಿತಿ ಸಮರ್ಪಕವಾಗಿರಲೇ ಇಲ್ಲ. ಭೀಕರ ಕ್ಷಾಮವುಂಟಾಗಿ ಜನಸಂಖ್ಯೆ ಯಲ್ಲಿ ಐದನೆ ಒಂದು ಬಾಗ ಮೃತಪಟ್ಟಿತ್ತು. ಕೊಡಿಟ್ಟಿದ್ದ ಸುಮಾರು ಒಂದು ಕೋಟಿ ರೂಪಾಯಿ ಹಣ ಕರಗಿ ಹೋಗಿ ಬ್ರಿಟಿಷ್ ಸರ್ಕಾರದಿಂದ ೮೦ ಲಕ್ಷ ರೂಪಾಯಿ ಸಾಲ ಪಡೆಯಲಾಯಿತು. ನಗದು ಶುಲ್ಕು ಆಡಳಿತದ ಸಾಧಾರಣ ವೆಚ್ಚಕ್ಕೂ ಸಾಕಾಗದಷ್ಟು ಕಡಿಮೆಯಾಗಿತ್ತು. ಪ್ರತಿಯೊಂದು ಮೂಲದಿಂದಲೂ ಅತ್ಯಂತ ಕಡಿಮೆ ಆದಾಯ ಬರುತ್ತಿತ್ತು. ಈ ಕಷ್ಟಗಳಿಂದ ಮಹಾರಾಜರು ನಿರುತ್ಸಾಹಗೊಳ್ಳದೆ ಪ್ರಾರಂಭದಿಂದಲೇ ಸಂಸ್ಥಾನದ ಪೋಷಣೆ ತಮ್ಮ ಪ್ರಥಮ ಕರ್ತವ್ಯವೆಂದು ಭಾವಿಸಿದರು. ರಂಗಾಚಾರ್ಲು ಅವರು ಮಹಾರಾಜರಿಗೆ ದಕ್ಷ ದಿವಾನರಾಗಿದ್ದರು.[೧೬]

೧೮೮೧ರ ಮಾರ್ಚಿ ೨೫ ರಂದು ಮಹಾರಾಜರ ಪಟ್ಟಾಭಿಷೇಕ ಮಹೋತ್ಸವದಲ್ಲಿ ಹಾಜರಾಗಿರಲು ರಾಜ್ಯದ ಎಲ್ಲ ಭಾಗಗಳಿಂದ ಅನೇಕ ಜನರನ್ನು ಆಹ್ವಾನಿಸಲಾಗಿತ್ತು. ಅವರೆಲ್ಲ

ಹಿಂದಿರುಗುವ ಮುನ್ನ ಹಾಗೆ ಸೇರಿದ್ದ ಸರ್ಕಾರೀ ಅಧಿಕಾರಿಗಳು, ರೈತರು ಮತ್ತು ವರ್ತಕರೊಡನೆ ಸಾರ್ವಜನಿಕ ವಿಷಯಗಳ ಬಗ್ಗೆ ಮಾತುಕತೆ ನಡೆಸುವ ಪ್ರಯೋಜನ ಹೊಂದಲು ದಿವಾನ್ ರಂಗಾಚಾರ್ಲು ಉದ್ದೇಶಿಸಿದರು. ಅವರೆಲ್ಲರೂ ೨೯ ನೆ ತಾರೀಖಿನ ಬೆಳಿಗ್ಗೆ ಜಗನ್ಮೋಹನ ಅರಮನೆಯಲ್ಲಿ ಸಮಾವೇಶಗೊಂಡರು. ದಿವಾನರು ತಮ್ಮ ಸೋದರ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿ, ಮಹಾರಾಜರು ತಮ್ಮ ಆಡಳಿತವು ಜನರ ಸುಖ ಮತ್ತು ದೇಶದ ಅಭ್ಯುದಯಕ್ಕೆ ಅನುಕೂಲಕರವಾಗಿರಬೇಕೆಂದು ಇಚ್ಚಿಸಿರುವುದಾಗಿ ತಿಳಿಸಿದರು. ಸಂಸ್ಥಾನದಲ್ಲಿ ಭವಿಷ್ಯದ ಆಡಳಿತದ ಪ್ರಖ್ಯಾತಿ ಅಥವಾ ಅಪಕೀರ್ತಿಯು ಸಂಪೂರ್ಣವಾಗಿ ಅಧಿಕಾರಿಗಳನ್ನೇ ಅವಲಂಬಿಸಿರುವುದೆಂದೂ, ಅವರುಗಳ ಬೆಂಬಲ ಮತ್ತು ಸಹಕಾರದೊಡನೆ ತಾವು ಮಹಾರಾಜರ ಆಳ್ವಿಕೆಯನ್ನು ಯಶಸ್ವಿಯಾಗಿಸಲು ಆಶಿಸುವುದಾಗಿಯೂ ದಿವಾನರು ಹೇಳಿದರು.

"ನಾಡಿನ ಮತ್ತು ಅದರ ಜನರ ಪೂರ್ಣ ತಿಳುವಳಿಕೆ ಹೊಂದಿರುವ ದೇಶಿಯ ಆಡಳಿತವು ಪ್ರಾಮಾಣಿಕ ಉದ್ದೇಶದೊಡನೆ ನಿಷ್ಠೆಯಿಂದ ಕೆಲಸ ಮಾಡಿದರೆ ಅತ್ಯಂತ ಹೆಚ್ಚಿನ ಶ್ರೇಷ್ಠತೆಯನ್ನು ಸಾಧಿಸುವುದು ಸಾಧ್ಯವಿದೆ. ತಮ್ಮ ಕರ್ತವ್ಯದ ಹಿಂದಿನ ತತ್ವಗಳನ್ನು ಮತ್ತು ಗುರಿಯಿಡಬೇಕಾದ ಉದ್ದೇಶವನ್ನು ನಿರ್ಧರಿಸಿದ ಮೇಲೆ, ದೇಶವನ್ನೂ ಜನರನ್ನೂ ಪೂರ್ತಿ ಅರಿತಿರುವ ಅವರು ಆ ಉದ್ದೇಶಗಳನ್ನು ನಿಸ್ಸಂದೇಹವಾಗಿ ಸಾಧಿಸುವಂತಾಗಬೇಕು. ಭ್ರಷ್ಟಾಚಾರಕ್ಕೆ ಮಾತ್ರ ಅವಕಾಶ ಕೊಡಬಾರದು. ಪ್ರತಿಯೊಬ್ಬ ಅಧಿಕಾರಿಯೂ ತಾನು ಆಡಳಿತದ ಒಳ್ಳೆ ಹೆಸರಿನ ರಕ್ಷಕನೆಂದು ತಿಳಿದು ಸಾರ್ವಜನಿಕ ಹಿತದ ಏಳಿಗೆಗಾಗಿ ತನ್ನ ಅತ್ಯುತ್ತಮ ಸೇವೆ ಸಲ್ಲಿಸಬೇಕು." ಎಂದು ರಂಗಾಚಾರ್ಲು ಹೇಳಿದರು. ಈ ದೇಶದ ಪ್ರಜೆಗಳಲ್ಲೂ ಸಹ ಅಧಿಕಾರಿ ವರ್ಗ ಮತ್ತು ಸಾಮಾನ್ಯ ಜನರ ನಡುವೆ ಇರುವ ದೊಡ್ಡ ಅಂತರವನ್ನು ಅವರು ವಿಶೇಷವಾಗಿ ಗಮನ ಸೆಳೆದರು. ಇಂತಹ ಸ್ಥಿತಿಗತಿಗಳಲ್ಲಿ ಯಾವೊಂದು ಆಡಳಿತ ವ್ಯವಸ್ಥೆಯು ಜನರ ಮೇಲೆ ಯಾವುದೇ ಪರಿಣಾಮ ಹೊಂದುವುದು ಅಸಾಧ್ಯವೆಂದು ಹೇಳಿದರು.[೧೭]

ಸರ್ಕಾರದ ಹುದ್ದೆಯಲ್ಲಿರುವಷ್ಟು ಕಾಲ ಅದಕ್ಕೆ ಸೇರಿದಂತೆ ಅಧಿಕಾರವಿದೆಯೆಂಬ ಭ್ರಮೆಯಿರುವುದೇ ಇದಕ್ಕೆ ಬಹುಮಟ್ಟಿನ ಕಾರಣವೆಂದು ಅವರು ಹೇಳಿದರಲ್ಲದೆ ಇಂತಹ ಭಾವನೆ ಅಧಿಕಾರಿಗಳ ಮನಸ್ಸನ್ನು ವಿಪರೀತವಾಗಿ ತುಂಬಿಕೊಂಡು, ಸಾಮಾನ್ಯ ಜನರು ತಮ್ಮ ಸಮುದಾಯಕ್ಕೇ ಸೇರಿದವರೆಂಬಂತೆ ಅವರೊಡನೆ ವರ್ತಿಸುವುದು ಈ ಅಧಿಕಾರಿಗಳಿಗೆ ಸಾಧ್ಯವಿಲ್ಲವಾಗಿದೆಯೆಂದರು. ಸರ್ಕಾರೀ ನೌಕರರು ಪ್ರಜೆಗಳ ಸೇವಕರು ಮಾತ್ರವಾಗಿದ್ದು, ಜನರ ಅಭಿಪ್ರಾಯ ಮತ್ತು ಅಪೇಕ್ಷೆಗಳಿಗೆ ಅನುಗುಣವಾಗಿ ಪ್ರತಿಯೊಂದು ಕಾರ್ಯವನ್ನು ಮಾಡುವುದೇ ಅಧಿಕಾರಿಗಳ ಕರ್ತವ್ಯವೆಂಬ ಭಾವನೆಯನ್ನು ಎರಡೂ ವರ್ಗಗಳ ಮನಸ್ಸಿನಲ್ಲಿ ಬೆಳೆಸುವುದಕ್ಕೆ ಅವರು ಬಹು ಮಹತ್ವ ನೀಡಿದ್ದರು.

ರೈತರಿಗೆ ತಮ್ಮ ಜಮೀನುಗಳ ಮೇಲೆ ಸಂಪೂರ್ಣವಾದ ಆಸ್ತಿ ಹಕ್ಕಿದೆಯೆಂಬ ಭಾವನೆಯನ್ನು ಅವರಲ್ಲಿ ಉಂಟು ಮಾಡಬೇಕೆಂದು ರಂಗಾಚಾರ್ಲು ತಿಳಿಸಿದರು. ರೈತರ ಶ್ರಮದ ಫಲ ಪೂರ್ತಿಯಾಗಿ ಅವರದ್ದೇ ಮತ್ತು ಸರ್ಕಾರೀ ನೌಕರರು ತಮಗಿಷ್ಟ ಬಂದಂತೆ ಅವರನ್ನು ಬಳಸಬಾರದು ಮತ್ತು ಅವರ ಸೇವೆಗಾಗಿ ಬಲಾತ್ಕರಿಸಬಾರದು ಎಂಬುದನ್ನೂ ರೈತರಿಗೆ ತಿಳಿಯಪಡಿಸಬೇಕೆಂದು ಅವರು ನುಡಿದರು.

"ಸಿಬ್ಬಂದಿ ವರ್ಗ ಮತ್ತು ಹೆಚ್ಚಿನ ವೇತನ ದರಗಳಿಂದಲೇ ಎಲ್ಲವನ್ನೂ ಸಾಧಿಸಬಹುದೆಂದು ಭಾವಿಸುವುದು ತಪ್ಪು. ಸರಿಯಾಗಿ ಆಯ್ಕೆ ಮಾಡಲಾದ ಕಡಿಮೆ ಸಿಬ್ಬಂದಿಯಿಟ್ಟು, ಚೆನ್ನಾಗಿ ಕೆಲಸ ಮಾಡಿಸಿದರೆ ಹೆಚ್ಚಿನ ದಕ್ಷತೆ ಲಭಿಸುತ್ತದೆ. ತಾಲ್ಲೂಕುಗಳಲ್ಲಿರುವ ಅಮಲ್ದಾರರುಗಳು ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸ ಮಾಡುತ್ತ ಗೌರವಾರ್ಹ ವ್ಯಕ್ತಿಗಳಾಗಿದ್ದರೆ ಅವರನ್ನು ಆಯಾ ತಾಲ್ಲೂಕುಗಳಲ್ಲಿನ ಡೆಪ್ಯುಟಿ ಕಮಿಷನರುಗಳಂತೆಯೇ ತಮ್ಮ ತಮ್ಮ ಜಿಲ್ಲೆಗಳಲ್ಲಿ ಸಂಪೂರ್ಣಾಧಿಕಾರ ಹೊಂದಿರುವ ಜಿಲ್ಲಾಧಿಕಾರಿಗಳಾದ ಡೆಪ್ಯುಟಿ ಕಮಿಷನರುಗಳು ಪರಿಗಣಿಸುವ ರೆಂದು ಆಶಿಸುತ್ತೇನೆ. ಅಂತಹ ಹೊಣೆಗಾರಿಕೆ ಹುದ್ದೆಗಳಿಗೆ ಅನರ್ಹವಾಗಿರುವವರನ್ನು ತೆಗೆದು ಹಾಕುವುದಕ್ಕೂ ಅವರುಗಳು ಹಿಂಜರಿಯಬಾರದು. ಇಂತಹ ವಿಷಯಗಳಲ್ಲಿ ಸಾರ್ವಜನಿಕರ ಹಿತವು ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಭಾವನೆಗಿಂತ ಹೆಚ್ಚು ಮುಖ್ಯವೆನ್ನಿಸಬೇಕು[೧೮]. ನಿವೃತ್ತವಾಗಲಿರುವ ಅಧಿಕಾರಿಗಳನ್ನು ಮುಂದುವರಿಸಿಕೊಳ್ಳುವುದರಿಂದ ಆಡಳಿತಕ್ಕೆ ಪ್ರಯೋಜನವಿಲ್ಲ. ಈ ಅಧಿಕಾರಿಗಳ ಬಗ್ಗೆ ಸಾಕಷ್ಟು ಸಹಾನುಭೂತಿಯಿಟ್ಟುಕೊಂಡು ಉದಾರವಾದ ವಿಶ್ರಾಂತಿವೇತನ ಗಳನ್ನೂ ಕೊಟ್ಟಿರುವಾಗ ಅವರುಗಳು ರೈತರು ಹಾಗೂ ಸಾಮಾನ್ಯ ಜನರೊಡನೆ ಮಿಳಿತರಾಗಿ ಆಡಳಿತದ ರೀತಿ ಮತ್ತು ಪರಿಣಾಮಗಳನ್ನು ವಿಮರ್ಶಿಸುತ್ತಿರಬೇಕು" ಎಂಬುದಾಗಿ ದಿವಾನರು ಸೂಚಿಸಿದರು.

ಆನಂತರ ದಿವಾನರು ರೈತರು ಮತ್ತು ವರ್ತಕರನ್ನುದ್ದೇಶಿಸಿ ಮಾತನಾಡಿ ಮಹಾರಾಜರು ಅವರ ಕ್ಷೇಮಾಭ್ಯುದಯದಲ್ಲಿ ಗಾಢವಾದ ಆಸಕ್ತಿ ಹೊಂದಿದ್ದಾರೆಂದೂ ತಿಳಿಸಿದರು. ಅವರ ಕುಂದುಕೊರತೆಗಳನ್ನೂ ಕೇಳಿ ಸರಿಪಡಿಸಲು ಸದಾ ಸಿದ್ಧರಾಗಿದ್ದಾರೆಂದೂ ತಿಳಿಸಿದರು. ಅವರ ವ್ಯಕ್ತಿಗತ ಮತ್ತು ಸ್ವತ್ತಿನ ಹಕ್ಕುಗಳನ್ನೂ ಮತ್ತು ಇತರ ಉತ್ತಮ ಹಿತಾಸಕ್ತಿಗಳೆಲ್ಲವನ್ನೂ ಚಾಚೂ ಲೋಪವಿಲ್ಲದೆ ಗೌರವಿಸಲಾಗುವುದೆಂದು ಅವರು ಭರವಸೆಯಿತ್ತರು. "ಇದನ್ನು ಮೀರಿ ಸರ್ಕಾರವು ದೇಶದ ಸಂಪತ್ತು ಮತ್ತು ಅಭ್ಯುದಯವನ್ನು ಉತ್ತೇಜಿಸಲು ಹೆಚ್ಚೇನನ್ನೂ ಮಾಡಲಾರದು. ಜನರೇ, ತಮ್ಮ ಬುದ್ಧಿಶಕ್ತಿ ಮತ್ತು ಶ್ರಮದಿಂದ ಕೆಲಸಮಾಡಬೇಕು. ಈ ದೇಶದ ಹೇರಳವಾದ ಜನಸಂಖ್ಯೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಉತ್ಪಾದಕವಾದ ಕಸುಬನ್ನು ಹೊಂದಿದ್ದು, ಇನ್ನೂ ಹೆಚ್ಚು ಬುದ್ಧಿವಂತಿಕೆಯಿಂದ ದಿನದಲ್ಲಿ ಇನ್ನಷ್ಟು ಗಂಟೆಗಳ ಕಾಲ ದುಡಿದರೆ ದೇಶದ ಸಂಪತ್ತನ್ನು

ಅಪಾರವಾಗಿ ಹೆಚ್ಚಿಸಬಹುದು. ರೈಲ್ವೆಯ ವಿಸ್ತರಣೆ ಮತ್ತು ಸರ್ಕಾರ ಕಾರ್ಯಗತ ಮಾಡಬಹುದಾದ ಇತರ ಸಾಮಾನ್ಯ ಸುಧಾರಣೆಗಳಿಂದ ಎಲ್ಲ ಕೈಗಾರಿಕಾ ಪ್ರಯತ್ನಗಳಿಗೂ ಪ್ರೋತ್ಸಾಹ ತಂದು ಅಭಿವೃದ್ಧಿ ಪಡಿಸಲು ಸಾಧ್ಯವಾಗುವುದೆಂದು ಆಶಿಸುತ್ತೇನೆ" ಎಂದು ದಿವಾನ್ ರಂಗಾಚಾರ್ಲು ನುಡಿದರು.

ಆನಂತರ ಅವರು ರೈತರು ಮತ್ತು ವರ್ತಕರನ್ನು ಒಬ್ಬೊಬ್ಬರನ್ನು ಬೇರೆ ಬೇರೆಯಾಗಿ ಪರಿಚಯ ಮಾಡಿಕೊಂಡು ಅವರು ಪ್ರತ್ಯೇಕವಾಗಿ ಹೇಳಿದ್ದನ್ನೆಲ್ಲ ಕೇಳಿಕೊಂಡರು.

ಸಭೆಯು ನಂತರ ಬರಖಾಸ್ತಾಯಿತು. ಸೇರಿದ್ದ ಅಧಿಕಾರಿಗಳು, ರೈತರು ಮತ್ತು ವರ್ತಕರೆಲ್ಲ ನಡುವೆ ನಡೆದ ಕಾರ್ಯಕಲಾಪಗಳಿಂದ ತೃಪ್ತರಾಗಿ ತೆರಳಿದರು.

ಸಮಾಲೋಚನಾ ಸಭೆಯೊಂದರ ರಚನೆಯನ್ನು ಬ್ರಿಟಿಷ್ ಸರ್ಕಾರ ಒಪ್ಪದಿದ್ದರೂ ಅದರಿಂದ ಎದೆಗುಂದದೆ ಮಹಾರಾಜರು ತಾವು ಸರ್ಕಾರವನ್ನು ವಹಿಸಿಕೊಂಡ ಸಮಯದಿಂದಲೇ ಆ ಉದ್ದೇಶಕ್ಕಾಗಿ ಕಾರ್ಯಪ್ರವೃತ್ತರಾದರು. ಕೃಷ್ಣರಾಜ ಒಡೆಯರ್ ಕಾಲದಲ್ಲಿ ಜನರ ಇಚ್ಛೆಗೆ ವಿರುದ್ಧವಾದ ಕ್ರಮಗಳನ್ನು ಕಾಠಿಣ್ಯದಿಂದ ಜಾರಿಗೊಳಿಸಿ ಅದರಿಂದ ಅತೃಪ್ತಿ, ಅಸಮಾಧಾನ ಗಳುಂಟಾಗಿ ಕಡೆಗೆ ಮಹಾರಾಜರ ಆಳ್ವಿಕೆಯೇ ಕೊನೆಗೊಂಡಿದ್ದರಿಂದ, ಈ ಕ್ರಮ ಆಗ ಅವಶ್ಯಕವಿತ್ತು. ಪ್ರಜೆಗಳಿಂದ ಪೂರ್ತಿ ಬೇರ್ಪಟ್ಟ ಸರ್ಕಾರೀ ವ್ಯವಸ್ಥೆಯಲ್ಲಿ ಅನೇಕಾನೇಕ ಕೇಡುಗಳಿರುತ್ತವೆಂದು ಅವರಿಗೆ ಮನವರಿಕೆಯಾಗಿತ್ತು. ಮಹಾರಾಜರು ಮತ್ತು ದಿವಾನರು ಇಂತಹ ಸಂದರ್ಭವುಂಟಾಗದಂತೆ ನಿವಾರಿಸಲು ಯತ್ನಿಸಿ ಪ್ರಜೆಗಳ ಕುಂದುಕೊರತೆಗಳನ್ನು ಧಾರಾಳವಾಗಿ ವ್ಯಕ್ತಪಡಿಸಲಾಗುವಂತಹ ಸಭೆಯ ರಚನೆಗಾಗಿ ಆಲೋಚಿಸಿದರು. ಸಂಸ್ಥಾನದ ಆಡಳಿತಕ್ಕಾಗಿ ಕೈಗೊಳ್ಳಲಾಗುವ ಕ್ರಮಗಳನ್ನು ಜನತೆ ತಿಳಿದುಕೊಂಡು ಸರಿಯಾಗಿ ವಿವೇಚಿಸಬೇಕೆಂದು ಅವರು ಬಯಸಿದರು.[೯] ಆ ರೀತಿಯಲ್ಲಿ ಸರ್ಕಾರದ ಕಾರ್ಯಗಳನ್ನು ಜನರ ಅಪೇಕ್ಷೆ ಮತ್ತು ಹಿತಗಳೊಡನೆ ಹೆಚ್ಚಾಗಿ ಹೊಂದಿಸಬೇಕೆಂದು ಅಪೇಕ್ಷಿಸಿದರು.

೧೮೮೧ ರ ಆಗಸ್ಟ್ ೨೫ ರಂದು ಒಂದು ಆದೇಶವನ್ನು ಹೊರಡಿಸಿ ಅಂತಹ ಸಭೆಯ ಸ್ವರೂಪ ಮತ್ತು ಕರ್ತವ್ಯಗಳನ್ನು ವಿವರಿಸಲಾಯಿತು. ಅದರ ಒಕ್ಕಣೆಯೆಂದರೆ "ಸಂಸ್ಥಾನದ ಆಡಳಿತಕ್ಕಾಗಿ ಅನುಸರಿಸುವ ಕ್ರಮಗಳು ಜನರ ಹಿತಕ್ಕೆಂದೇ ಉದ್ದೇಶಿತವಾಗಿದ್ದು, ಅವುಗಳಲ್ಲಿ ಸರ್ಕಾರದ ಅಭಿಪ್ರಾಯ ಮತ್ತು ಗುರಿಗಳನ್ನು ಜನರೂ ಸರಿಯಾಗಿ ತಿಳಿದು ಒಪ್ಪಬೇಕೆಂದು ಶ್ರೀಮನ್ಮಹಾರಾಜರು ಅಪೇಕ್ಷಿಸುತ್ತಾರೆ. ಈ ಉದ್ದೇಶ ಸಾಧನೆಯ ಪ್ರಾರಂಭವಾಗಿ ಸಂಸ್ಥಾನದ ಎಲ್ಲಾ ಭಾಗಗಳಲ್ಲಿನ ಜಮಿನುದಾರರು ಅಪೇಕ್ಷಿಸಿದ್ದಾರೆ. ಹಿಂದಿನ ವರ್ಷದ ಆಡಳಿತ ಫಲಿತಾಂಶಗಳನ್ನೂ ಮುಂದಿನ ವರ್ಷ ನಡೆಸಲು ಉದ್ದೇಶಿಸಲಾಗಿರುವ ಕಾರ್ಯಕ್ರಮಗಳನ್ನೂ ದಿವಾನರು ಅವರ ಮುಂದಿಡುವರು. ಇಂತಹ ಏರ್ಪಾಡಿನಿಂದ ಜನರಿಗೆ ಸರ್ಕಾರದೊಡನೆ

ನೇರ ಸಂಪರ್ಕವುಂಟಾಗಿ, ಸರ್ಕಾರದ ಅಭಿಪ್ರಾಯ ಹಾಗೂ ಕಾರ್ಯಗಳ ಬಗ್ಗೆ ಅವರಲ್ಲಿ ಯಾವುದೇ ತಪ್ಪು ಗ್ರಹಿಕೆಗಳನ್ನು ನಿವಾರಿಸಬಹುದಾಗುತ್ತದೆ. ಅವರ ಅಪೇಕ್ಷೆಯೇ ಸರ್ಕಾರದ ಆಸಕ್ತಿಯಾಗಿದೆಯೆಂದು ಅವರಿಗೆ ಮನವರಿಕೆಯಾಗುತ್ತದೆ.

ವಾರ್ಷಿಕ ಸಭೆ ಮೈಸೂರಿನಲ್ಲಿ ನಡೆಯುವುದು ಅನುಕೂಲವಾಗಿರುತ್ತದೆ. ದಸರಾ ಉತ್ಸವಗಳು ಮುಗಿಯುತ್ತಿದಂತೆಯೇ ಇದನ್ನು ನಡೆಸಬಹುದು. ಸಭೆಯಲ್ಲಿ ಹಾಜರಿರಲು ಆಹ್ವಾನಿತರಾಗುವವರಿಗೆ ಈ ಸಂದರ್ಭವು ಇನ್ನೊಂದು ಆಕರ್ಷಣೆಯಾಗುತ್ತದೆ. ಸದ್ಯದಲ್ಲಿ ವಿವಿಧ ಜಿಲ್ಲೆಗಳ ಸ್ಥಳೀಯ ನಿಧಿ ಮಂಡಳಿಗಳು ತಮ್ಮ ಪೈಕಿ ಮತ್ತು ಜಿಲ್ಲೆಯ ಇತರರಲ್ಲಿ ಆಯಾ ಜಿಲ್ಲಾಧಿಕಾರಿಗಳನ್ನು ಈ ಸಭೆಯಲ್ಲಿ ಪ್ರತಿನಿಧಿಸಬೇಕಾದವರನ್ನು ಆರಿಸಲು ಕೇಳಲಾಗುವುದು. ಎಲ್ಲ ತಾಲ್ಲೂಕುಗಳ ಕೃಷಿಕರನ್ನೂ ವ್ಯಾಪಾರ ವರ್ಗವನ್ನು ಪ್ರತಿನಿಧಿಸಲು ಪ್ರತಿಯೊಂದು ತಾಲ್ಲೂಕಿನಿಂದ ಜನರಲ್ಲಿ ಪ್ರಭಾವಿಗಳಾದ ಮತ್ತು ವ್ಯವಹಾರ ಜ್ಞಾನವನ್ನು ಹೆಚ್ಚಾಗಿ ಹೊಂದಿರುವ ಹಾಗೂ ಬೇಸಾಯ ಮಾಡುವ ಒಬ್ಬಿಬ್ಬರು ಭೂಮಾಲೀಕರನ್ನೂ, ಅಲ್ಲದೆ ಸಾಮಾನ್ಯವಾಗಿ ಪ್ರತಿ ಜಿಲ್ಲೆಗೆ ಮೂವರು ಅಥವಾ ನಾಲ್ವರು ಪ್ರಮುಖ ವರ್ತಕರನ್ನೂ ಕಳಿಸಿಕೊಡಬೇಕು. ಅವರ ಪ್ರಯಾಣ ವೆಚ್ಚಕ್ಕಾಗಿ ಸ್ಥಳೀಯ ನಿಧಿಗಳಿಂದ ಸಣ್ಣ ಮೊಬಲಗನ್ನು ಕೊಡಬಹುದು."ಸಭೆಯಲ್ಲಿ ಹಾಜರಾಗುವುದು ಪೂರ್ಣವಾಗಿ ಸ್ವಪ್ರೇರಣೆಗೆ ಬಿಟ್ಟಿದ್ದಾಗಿದೆ. ಆದ್ದರಿಂದ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಅವರ ಇಷ್ಟಾನುಕೂಲಗಳನ್ನು ತಿಳಿಯುವುದು ಅಗತ್ಯವಾಗುತ್ತದೆ."

೧೮೮೧ ರ ಆಗಸ್ಟ್ ೨೫ ರ ಕಾರ್ಯಾಂಗದ ಆದೇಶವೊಂದರಿಂದ ಪ್ರಜಾಪ್ರತಿನಿಧಿ ಸಭೆಯನ್ನು ರಚಿಸಲಾಯಿತು. ಅದು ದಸರಾ ಉತ್ಸವ ಮುಗಿದ ಕೂಡಲೆ ಮೈಸೂರಿನಲ್ಲಿ ಪ್ರತಿವರ್ಷ ಸಮಾವೇಶಗೊಳ್ಳುವುದಾಗಿತ್ತು. ಮೊದಲಲ್ಲಿ ಅದು ಸಂಸ್ಥಾನದ ಎಲ್ಲ ಭಾಗಗಳ ರೈತರು ಹಾಗೂ ವ್ಯಾಪಾರಸ್ಥರ ಪ್ರತಿನಿಧಿಗಳ ಸಭೆಯಾಗಿತ್ತು. ದಿವಾನರು ಸಭೆಯ ಮುಂದೆ ಸರ್ಕಾರದ ಹಿಂದಿನ ವರ್ಷದ ಸಾಧನೆಗಳನ್ನೂ ಮುಂದಿನ ವರ್ಷದ ಉದ್ದೇಶಿತ ಕಾರ್ಯಕ್ರಮಗಳನ್ನು ಮಂಡಿಸಬೇಕಾಗಿತ್ತು. ಅವರ ಭಾಷಣದ ನಂತರ ಸದಸ್ಯರು ಸಾರ್ವಜನಿಕ ಹಿತದೃಷ್ಟಿಯಿಂದ ತಮ್ಮ ಸಲಹೆ, ಅಭಿಪ್ರಾಯಗಳನ್ನು ಸಭೆಯಲ್ಲಿ ತಿಳಿಸಿ, ಜನರ ಎಲ್ಲ ಕುಂದುಕೊರತೆಗಳನ್ನು ತಿಳಿಯಪಡಿಸಿ, ಆ ಮೂಲಕ ಅವುಗಳ ನಿವಾರಣೆಗೆ ನೆರವಾಗಬಹುದಾಯಿತು. ಆಡಳಿತದ ರೀತಿಯನ್ನು ಪರಿಶೀಲಿಸಿ ಅವರು ಅದನ್ನು ಟೀಕಿಸಬಹುದಾಗಿತ್ತು. ಒಟ್ಟಿನಲ್ಲಿ ಅದು ಸಾರ್ವಜನಿಕ ಹಿತದ ವಿಷಯಗಳಲ್ಲಿ ಪ್ರಜೆಗಳ ಅಪೇಕ್ಷೆಗಳು ಮತ್ತು ಅಗತ್ಯಗಳ ಪೂರ್ಣ ತಿಳುವಳಿಕೆಯನ್ನು ಪಡೆದುಕೊಳ್ಳುವ ಪ್ರಯತ್ನವಾಗಿತ್ತು. ಸದಸ್ಯರು ಎತ್ತಿದ ವಿಷಯಗಳನ್ನು ಅಲ್ಲೇ ಕೂಡಲೇ ತೀರ್ಮಾನಿಸಲಾಗುತ್ತಿತ್ತು. ಅಥವಾ ಚರ್ಚಿಸಿ ಆನಂತರ ತನಿಖೆ ಮತ್ತು ಪರಿಶೀಲನೆಗಾಗಿ ಕಾಯ್ದಿರಿಸಲಾಗುತ್ತಿತ್ತು.

೩.೩. ದಲಿತವರ್ಗಗಳ ಅಭಿವೃದ್ದಿಗೆ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ನಿರ್ಣಯಗಳು

ಪ್ರಜಾಪ್ರತಿನಿಧಿ ಸಭೆಯು ಸ್ಥಾಪನೆಯಾದ ಮೊದಲು ೨ ದಶಕಗಳವರೆಗೆ ಪಂಚಮರ ಸಮಸ್ಯೆಗಳಿಗೆ ಸಾಕಷ್ಟು ಗಮನವನ್ನು ನೀಡಲಿಲ್ಲ. ಆ ಜನಾಂಗದ ಒಬ್ಬ ಪ್ರತಿನಿಧಿಯೂ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಇರಲಿಲ್ಲ ಮತ್ತು ಅವರ ವ್ಯವಹಾರಗಳು ಅವರ ಅನುಪಸ್ಥಿತಿಯಲ್ಲಿ ನಡೆದವು. ಆದರೆ ಮುಂದಿನ ವರ್ಷಗಳಲ್ಲಿ ಆದಿದ್ರಾವಿಡ ಸಂಘದಿಂದ ಒಬ್ಬ ಪ್ರತಿನಿಧಿಯನ್ನು ನಾಮ ನಿರ್ದೇಶನ ಮಾಡುವುದು ಸೂಕ್ತ ಎಂದು ತೀರ್ಮಾನಿಸಲಾಯಿತು. ಹಾಗೆ ನಾಮ ನಿರ್ದೇಶನ ಮಾಡುವುದು ಸೂಕ್ತ ಎಂದು ಸರ್ಕಾರ ಭಾವಿಸಿ ಹಾಗೆ ನಾಮ ನಿರ್ದೇಶನ ಹೊಂದಿದ ವ್ಯಕ್ತಿ ಹಿಂದುಳಿದ ಮತ್ತು ನಿಮ್ನ ವರ್ಗಗಳ ಸಮಸ್ಯೆಗಳ ಮೇಲೆ ಗಮನವನ್ನು ಕೇಂದ್ರಿಕರಿಸುವಂತೆ ಮಾಡಲು ಸಹಕಾರಿಯಾಗುತ್ತದೆ. ಹಾಗೆಯೇ ನಿಧಾನವಾಗಿ ಇತರ ಸದಸ್ಯರುಗಳು ಕೂಡ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡರು. ಮತ್ತು ಆ ವರ್ಗಗಳ ಉನ್ನತಿಗೆ ಮುಂದಾದರು ಪಂಚಮ ವರ್ಗದವರಿಗೆ ಅಭಿವೃದ್ಧಿಯ ವಿಷಯದಲ್ಲಿ ಬೆಂಬಲಿಸುವಲ್ಲಿ ಹಾಗೂ ಶಕ್ತಿಯುತವಾಗಿ ಮಾತನಾಡಲು ಒಬ್ಬ ಬ್ರಾಹ್ಮಣ ಸಮುದಾಯದ ಸದಸ್ಯರಾದ ಗೋಪಾಲಸ್ವಾಮಿ ಅಯ್ಯರ್ ಅವರಿಗೆ ಅಧಿಕಾರವನ್ನು ವಹಿಸಿಕೊಡಲಾಯಿತು. ಅವರು ಪಂಚಮ ಮಕ್ಕಳಿಗೆ ಇತರ ಮಕ್ಕಳೊಂದಿಗೆ ಸರ್ಕಾರಿ ಸಂಸ್ಥೆಗಳಲ್ಲಿ ಪ್ರವೇಶ ದೊರಕಿಸಿಕೊಡಲು ತೀವ್ರ ಹೋರಾಟವನ್ನು ನಡೆಸಿದರು. ಇತರ ಸಮುದಾಯಗಳ ಸದಸ್ಯರುಗಳಿಂದ ತೀವ್ರ ಮತ್ತು ನಿರಂತರ ವಿರೋಧ ಇದ್ದಾಗ್ಯೂ ಅವರು ತಮ್ಮ ಹೋರಾಟವನ್ನು ನಿಲ್ಲಿಸಲಿಲ್ಲ.

ಪಂಚಮರ ಮಕ್ಕಳಿಗೆ ಸರ್ಕಾರದ ಖರ್ಚಿನಲ್ಲಿ ಶಿಕ್ಷಣವನ್ನು ನೀಡುವ ಕೋರಿಕೆಯನ್ನು ೧೯೧೭ರಲ್ಲಿ ಸಲ್ಲಿಸಲಾಯಿತು. ಪಂಚಮರಿಗೆ ಸೌಲಭ್ಯಗಳನ್ನು ಉತ್ತಮಗೊಳಿಸಬೇಕೆಂಬ ಅಂಶವನ್ನು ೧೯೧೯ರಲ್ಲಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಸಲ್ಲಿಸಲಾಯಿತು. ರಾಜ್ಯದ ಜನಸಂಖ್ಯೆಯ ಆರನೇ ಒಂದು ಭಾಗವಾಗಿರುವ ಪಂಚಮರ ಹಕ್ಕುಗಳ ಬಗ್ಗೆ ದಿವಾನರು ಒಪ್ಪಿಗೆ ಸೂಚಿಸಿದರು. ಇವರು ಕಡುಬಡತನದಲ್ಲಿ ಜೀವಿಸುತ್ತಿದ್ದಾರೆ, ಅನಕ್ಷರಸ್ಥರಾಗಿದ್ದಾರೆ ಮತ್ತು ಈಗಿರುವ ತಮ್ಮ ಪರಿಸ್ಥಿತಿಯಿಂದ ಮೇಲೇರಲು ಸಾಧ್ಯವಾಗದಿರುವುದನ್ನು ಮನಗಂಡ ದಿವಾನರು ಎಲ್ಲಾ ರೀತಿಯ ಸಹಕಾರ ನೀಡಲು ನಿರ್ಧರಿಸಿದರು ಪಂಚಮರಿಗೆ ವಿಶೇಷ ಗಮನ ನೀಡಿದ ಮಾತ್ರಕ್ಕೆ ಇತರ ಜನಾಂಗಗಳ ಪ್ರಗತಿಗೆ ತಣ್ಣೀರು ಸುರಿಯುವುದಿಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸಿದರು. ತದನಂತರ ಸರ್ಕಾರ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪಂಚಮ ಬಾಲಕರುಗಳಿಗೆ ಪ್ರವೇಶವನ್ನ ಮುಕ್ತಗೊಳಿಸಿತು. ಈ ವಿಷಯವಾಗಿ ಪ್ರತಿಭಟನೆಗಳು ನಡೆದರೂ ಸಹ ಸರ್ಕಾರ ಜಗ್ಗಲಿಲ್ಲ. ಪಂಚಮ ಬಾಲಕರು ಇತರರೊಡನೆ ಪರಸ್ಪರ ಸೇರುವುದರಿಂದ ಅದು ಅವರ ಸಾಮಾಜಿಕ ಅಭಿವೃದ್ಧಿಯನ್ನು ಉತ್ತಮಗೊಳಿಸುತ್ತದೆ ಎಂದು ದಿವಾನರು ಅಭಿಪ್ರಾಯ ಪಟ್ಟರು. ೧೯೨೦ ರಲ್ಲಿ ಸರ್ಕಾರದ ಈ ಕ್ರಮದ ಮೇಲೆ ಒಂದು ದೀರ್ಘ ಚರ್ಚೆ ನಡೆಯಿತು. ಪಂಚಮರು ಸಮಾಜದಲ್ಲಿ ಒಂದು

ಅಂತಸ್ತನ್ನು ಹೊಂದುವ ಸಮಯದವರೆಗೆ ಅವರು ಪ್ರತ್ಯೇಕ ಶಾಲೆಗಳನ್ನು ಹೊಂದಿರತಕ್ಕದ್ದು ಎಂದು ಕೆಲವು ಸದಸ್ಯರು ವಾದಿಸಿದರು. ಈ ಜಾತಿ ಭೇದಗಳು ಪ್ರಾಚೀನ ಕಾಲದಿಂದ ಒಬ್ಬರಿಂದ ಒಬ್ಬರಿಗೆ ಬರುತ್ತಿದೆ ಮತ್ತು ಹಿಂದುಳಿದ ನಿಮ್ನ ವರ್ಗಗಳಿಗೆ ತೊಂದರೆ ಎಂದು ಮಾಡುವ ಯಾವುದೇ ಕ್ರಮಕ್ಕೆ ಸರ್ಕಾರ ಮುಂದಾಗುವುದಿಲ್ಲ ಅವರ ಅಭಿವೃದ್ಧಿ ಮಾತ್ರ ಮೈಸೂರು ಸಂಸ್ಥಾನದ ಆಡಳಿತಕ್ಕೆ ಬೇಕಾಗಿರುವುದು ಉತ್ತಮವಾದ ಜೀವನವನ್ನು ನಡೆಸಲು ಪಂಚಮರುಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುವ ಅವಶ್ಯಕತೆ ಇದೆ ಎಂದರು. ಸಮಾಜದಲ್ಲಿ ಎಲ್ಲರಂತೆ ಸಮಾನವಾಗಿ ಬಾಳುವ ಅವಕಾಶವನ್ನು ನಾವು ಪಂಚಮರಿಗೆ ಕಲ್ಪಿಸಿಕೊಡುವ ಜವಾಬ್ದಾರಿಯಾಗಿದೆ. ಸರ್ಕಾರಿ ವೆಚ್ಚದಲ್ಲಿ ನಡೆಯುತ್ತಿರುವ ಸರ್ಕಾರಿ ಶಾಲೆಗಳಿಗೆ ಯಾವುದೇ ಕಾರಣ ನೀಡಿ ಪಂಚಮರನ್ನು ಸೇರಿಸಲು ನಿರಾಕರಿಸುವಂತಿಲ್ಲ ಎಂಬ ಎಚ್ಚರಿಕೆಯನ್ನು ನೀಡಲಾಯಿತು. ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿ ಪ್ರತ್ಯೇಕ ಪಂಚಮಶಾಲೆಗಳನ್ನು ತೆಗೆಯುವುದು ಅಸಾಧ್ಯವಾದ ಮಾತು ಆದ್ದರಿಂದ ಸಾರ್ವಜನಿಕ ಶಾಲೆಗಳಲ್ಲಿ ಅವರ ದಾಖಲಾತಿ ಮಾಡುವುದು ಕಡ್ಡಾಯವಾಗಿದೆ. ದೇವರು ಎಲ್ಲಾ ಮನುಷ್ಯರನ್ನು ಸಮಾನರನ್ನಾಗಿ ಹುಟ್ಟಿಸಿದ್ದಾನೆ. ಆದರೆ ಜನತೆ ಪಂಚಮರನ್ನು ಸಮಾನ ಪ್ರಜೆಗಳಾಗಿ ಒಪ್ಪಲು ಇನ್ನೂ ಸಿದ್ಧವಾಗಿಲ್ಲ. ಪಂಚಮರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಆದ್ದರಿಂದ ಸರ್ಕಾರಿ ಸಂಸ್ಥೆಗಳಲ್ಲಿ ಪಂಚಮ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ನೀಡಬೇಕೆಂಬ ಆದೇಶವನ್ನು ಹೊರಡಿಸಲಾಯಿತು. ಬೋಧಕರುಗಳಿಗೆ ಸಂಬಳ ಮತ್ತು ಶಾಲೆಗಳ ನಿರ್ಮಾಣ ಹಾಗೂ ಪಂಚಮ ಸಮುದಾಯಕ್ಕೆ ವಿಶೇಷ ಸವಲತ್ತುಗಳನ್ನು ನೀಡಲು ಸರ್ಕಾರ ಮುಂದಾಗಿದೆ. ಸಾಮಾಜಿಕವಾಗಿ ಉತ್ತಮಗೊಳ್ಳಲು ಸಹಾಯಕ್ಕೆ ಹೆಚ್ಚು ಅರ್ಹರಾದ ವರ್ಗ ಎಂದರೆ ಪಂಚಮ ರೆಂದು ಕರೆಸಿಕೊಳ್ಳುವ ಜನಾಂಗ ಮತ್ತು ಮೈಸೂರು ಸಂಸ್ಥಾನದಲ್ಲಿ ಈ ವರ್ಗದ ಜನರಿಗಿಂತ ಅರ್ಹರು ಬೇರೆಯಾರು ಇಲ್ಲವೆಂದು ದಿವಾನರು ೧೯೧೯ರ ಪ್ರಜಾ ಪ್ರತಿನಿಧಿ ಸಭೆಯಲ್ಲಿ ತಮ್ಮ ದಸರಾ ಅಧಿವೇಶನದ ಭಾಷಣದಲ್ಲಿ ವಿವರಿಸಿದರು. ಈ ಜನಾಂಗದ ಜನಸಂಖ್ಯೆ ಸುಮಾರು ೧೦ ಲಕ್ಷಗಳು ಅಥವಾ ಅದಕ್ಕಿಂತ ಹೆಚ್ಚು ಒಟ್ಟು ಆರನೆಯ ಒಂದು ಭಾಗದಷ್ಟಿದೆ. ಪಂಚಮರು ಅನಕ್ಷರತೆ, ಕಡು ಬಡತನದಿಂದ ಬಳಸುತ್ತಿದ್ದಾರೆ. ಯಾವುದೇ ಆರ್ಥಿಕ ಸಹಾಯವಿಲ್ಲದೆ ಬದುಕುತ್ತಿರುವ ಈ ಸಮುದಾಯಗಳಿಗೆ ಎಲ್ಲಾ ರೀತಿಯ ನೆರವು ನೀಡಿ ಅವರ ಅಭಿವೃದ್ಧಿಯ ಕಡೆಗೆ ಗಮನ ಹರಿಸುವುದು ಸರ್ಕಾರದ ಬಹುಮುಖ್ಯ ಕಾರ್ಯವಾಗಿದೆ. ಎಂದು ಸಭೆಗೆ ವಿವರಿಸಿದರು.

ಕಳೆದ ಕೆಲವು ವರ್ಷಗಳಿಂದ ಅವರಿಗೆ ಶಿಕ್ಷಣ ಸೌಲಭ್ಯಗಳನ್ನು ನೀಡಲು ಕೆಲವು ಪ್ರಯತ್ನಗಳನ್ನು ಮಾಡಲಾಗಿದೆ. ಅಲ್ಲದೆ ರಾಜ್ಯದ ಎಲ್ಲಾ ಭಾಗಗಳಲ್ಲಿ ಸಾರ್ವಜನಿಕ ಶಾಲೆಗಳ್ನು ಅವರಿಗಾಗಿ ತೆಗೆಯಲಾಗಿದೆ. ಪಂಚಮರ ಸ್ಥಿತಿಯನ್ನು ಉತ್ತಮಗೊಳಿಸುವ ಆಶಯವನ್ನು ಈಗಾಗಲೇ ಸಾಮಾಜಿಕ ಹಂತದಲ್ಲಿ ಸ್ವಪ್ರಯತ್ನದಿಂದ ಮೇಲೆರುವಂತೆ ಮಾಡಲಾಗಿದೆ ಈ ಜನಾಂಗದ

ಪ್ರಗತಿಗೆ ತಣ್ಣೀರೆರಚುವ ಪ್ರಯತ್ನ ಮಾಡಿದರೆ ಅಂತಹ ವ್ಯಕ್ತಿಗಳಿಗೆ ಸೂಕ್ತಕ್ರಮ ಜರುಗಿಸಲಾಗುವುದು. ಎಂಬ ಎಚ್ಚರಿಕೆಯನ್ನು ದಿವಾನರು ನೀಡಿದರು. ನಾಲ್ವಡಿ ಕೃಷ್ಣರಾಜ ಒಡೆಯರು ಒಂದು ಬ್ರಾಹ್ಮಣೇತರ ನಿಯೋಗವನ್ನು ಬೇಟಿಮಾಡಿದ ಸಂದರ್ಭದಲ್ಲಿ ಅವರು "ವಿವಿಧ ಜಾತಿಗಳ ನಡುವೆ ನ್ಯಾಯ ಮತ್ತು ಧರ್ಮಗಳಿಂದ ಕೂಡಿದ ನೀತಿಯನ್ನು ಅನುಸರಿಸುವುದು ನನ್ನ ಉದ್ದೇಶವಾಗಿದೆ. ಅನವಶ್ಯಕವಾಗಿ ಹೆಚ್ಚು ಅದರ ತೋರಿಸುವುದಾಗಲಿ ಅಥವಾ ಯಾವುದೇ ಒಂದನ್ನು ದಮನ ಮಾಡುವುದಾಗಲಿ ಇಲ್ಲದೆ ರಾಜ್ಯದ ಶಾಶ್ವತ ಒಳಿತಿಗಾಗಿ ಎಲ್ಲರನ್ನು ಮೇಲೆತ್ತಲು ಪ್ರಯತ್ನಿಸುವುದೇ ನಮ್ಮ ಗುರಿ ಎಂದು ನುಡಿದು ಎಲ್ಲಾ ಸಮುದಾಯಗಳು ಒಂದೇ ಎಂಬ ಭಾವನೆಯನ್ನು ವ್ಯಕ್ತಪಡಿಸಿದರು. ಪಂಚಮರು ಗೋಪಾಲಸ್ವಾಮಿ ಅಯ್ಯರ್ ಅವರಲ್ಲಿ ಒಬ್ಬ ದಕ್ಷ ಹೋರಾಟಗಾರನನ್ನು ಕಂಡರು ವಿದ್ಯಾಭ್ಯಾಸದ ಬೆಲೆಯನ್ನು ಪಂಚಮರಿಗೆ ಮಾಡಿಸಿದರು. ಮೈಸೂರಿನ ಕೇಂದ್ರಿಯ ಪಂಚಮ ಶಾಲೆಯಲ್ಲಿ ವಸತಿ ಅಭಾವದ ಕಾರಣ ೨೦೦ ರಷ್ಟು ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನಿರಾಕರಿಸಲಾಗಿದೆ. ಆದ್ದರಿಂದ ಸೂಕ್ತ ಸ್ಥಳಾವಕಾಶ ಮಾಡಿಕೊಡುವಂತೆ ಮಹಾರಾಜರಿಗೆ ಮನವಿ ಮಾಡಿಕೊಂಡರು. ಹೊಲೆಯರು ಮತ್ತು ಮಾದಿಗರುಗಳ ಪೈಕಿ ಹೊಲೆಯರು ಹೆಚ್ಚಾಗಿ ಮುಂದೆ ಬರುತ್ತಿದ್ದಾರೆ ಮತ್ತು ಶಾಲೆಗಳಿಗೆ ಹಾಜರಾಗಲು ಅವರನ್ನ ಪ್ರಚೋದಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು ಅಲ್ಲದೆ ಬೆಂಗಳೂರು ನಗರದಲ್ಲಿರುವ ಮಾದಿಗರ ಪಾಳ್ಯದಲ್ಲಿ ಒಂದು ಸರ್ಕಾರಿ ಶಾಲೆಯನ್ನು ತೆರೆಯಬೇಕೆಂದು ಕೋರಿದರು. ಪಂಚಮರ ಶಾಲೆಗಳಲ್ಲಿ ಬೋಧಕರುಗಳನ್ನು ಹೊಂದಿಸುವುದು ಕಷ್ಟವಾಗಿದೆ.[೨೦] ಹೆಚ್ಚಿನ ಸಂಬಳವನ್ನು ಪಾವತಿ ಮಾಡಿದರು ಸಹ ಶಿಕ್ಷಕರ ಕೊರತೆ ನೀಗಿಸಲು ಸಾಧ್ಯವಾಗದೇ ಹೋಗಿದೆ. ಸುಮಾರು ೨೦೦ ಪಂಚಮ ವಿದ್ಯಾರ್ಥಿಗಳ ಶಾಲೆಗೆ ಹಾಜರಾಗುವ ಕಾರಣ ಅವರಿಗೆ ಒಂದು ಉತ್ತಮ ಕಟ್ಟಡ ನೀಡುವಂತೆ ಹಾಗೂ ಒಬ್ಬ ಪಂಚಮ ವಿದ್ಯಾರ್ಥಿ ಶಾಲೆಗೆ ಪ್ರವೇಶಿಸಿದನೆಂದರೆ ಅವನ ತಂದೆ ತಾಯಿಗಳು ತಿಂಗಳಿಗೆ ಸುಮಾರು ೪ ರೂ ನಿಂದ ೨೦ ರೂ ವರೆಗೆ ಕಳೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಪರಿಹಾರ ಒದಗಿಸಲು ವಿದ್ಯಾರ್ಥಿ ವೇತನಗಳ ಹಣದ ಪ್ರಮಾಣವನ್ನು ಹೆಚ್ಚುಸುವುದರ ಮೂಲಕ ಆ ಬಾಲಕರ ತಂದೆತಾಯಿಗಳಿಗೆ ಹಣವನ್ನು ಹಿಂದಿರುಗಿಸಬಹುದು. ಪಂಚಮರ ಶಿಕ್ಷಣಕ್ಕಾಗಿ ಹೆಚ್ಚಿನ ಸೌಲಭ್ಯಗಳನ್ನು ಮೈಸೂರು ಸರ್ಕಾರ ಒದಗಿಸಬೇಕೆಂದು ಬೇಡಿಕೆಯನ್ನು ಗೋಪಾಲಸ್ವಾಮಿ ಅಯ್ಯರ್ ಅವರು ಮಾಡಿದರು. ಮೈಸೂರು ಸಂಸ್ಥಾನದ ಅನೇಕ ಗ್ರಾಮಗಳಲ್ಲಿ ಪಂಚಮಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದು ಉತ್ತಮ ಎಂದು ಸರ್ಕಾರ ತೀರ್ಮಾನಿಸಿದೆಯೆಂದು ೧೯೨೦ರಲ್ಲಿ ಪ್ರಜಾಪ್ರತಿನಿಧಿ ಸಭೆಯು ದಸರಾ ಅಧಿವೇಶನದ ಭಾಷಣದಲ್ಲಿ ದಿವಾನರು ತಿಳಿಸಿದರು. ಕೇವಲ ೨೦ ವಿದ್ಯಾರ್ಥಿಗಳು ಮುಂದೆ ಬಂದರು. ಮೈಸೂರು, ತುಮಕೂರು ಮತ್ತು ಚಿಕ್ಕಮಗಳೂರುಗಳಲ್ಲಿರುವ ಪಂಚಮಶಾಲೆಗಳನ್ನು ಅಭಿವೃದ್ಧಿಗೊಳಿಸಲಾಗುವುದು. ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಪಂಚಮರ ಶಾಲೆಗಳಿಗೆ

ಬೋಧಕರುಗಳನ್ನು ಒದಗಿಸಲಾಗುವುದು ಎಂದರು ಇಂಗ್ಲಿಷ್ ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿದ್ದು ಪಂಚಮರುಗಳಿಗೆ ಪಂಚಮರನ್ನು ಪ್ರತ್ಯೇಕವಾಗಿ ಇಡುವುದರಿಂದ ಪಂಚಮರುಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಸಾಧ್ಯವಿಲ್ಲ. ಅವರಿಗೂ ಮತ್ತು ಇತರ ಪ್ರಬಲ ಸಮುದಾಯದವರಿಗೂ ಒಂದು ದೊಡ್ಡ ಅಂತರವಿದೆ. ಈ ಅಂತರವನ್ನು ಕಡಿಮೆ ಮಾಡಿದಾಗ ಮಾತ್ರ ಅಸ್ಪೃಶ್ಯರ ಅಭಿವೃದ್ಧಿ ಸಾಧ್ಯ ಇದೆ. ಒಂದೆರಡು ವಿದ್ಯಾರ್ಥಿಗಳು ಮಾತ್ರ ಇರುವಾಗ ಕೂಡ, ಎಲ್ಲೆಡೆ ಪಂಚಮರ ಶಾಲೆಯನ್ನು ತೆರೆಯಲು ಸಾಧ್ಯವಿಲ್ಲ ಎನ್ನುವಂತಿಲ್ಲ ಎಲ್ಲಾ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿದ್ದರೆ ಅಂತಹ ಸಂದರ್ಭದಲ್ಲಿ ಪಂಚಮ ಶಾಲೆಗಳನ್ನು ತೆರೆಯುವುದು ಬಹು ಮುಖ್ಯವಾದ ಕಾರ್ಯವಾಗಿದೆ. ಶಿಕ್ಷಣ ಯಾವುದೇ ಒಂದು ವರ್ಗದ ಖಾಸಗಿ ಮತ್ತು ಪ್ರತ್ಯೇಕ ಆಸ್ತಿಯಲ್ಲಿ ಅವರಿಗೆ ಎಲ್ಲ ವಿಧದ ಕೆಲಸಗಳಿಗೆ ಪಂಚಮರು ಬೇಕು. ಆದರೆ ಶಿಕ್ಷಣದ ವಿಚಾರದಲ್ಲಿ ಅವರಿಗೆ ಸಮಾನ ಸೌಲಭ್ಯಗಳನ್ನು ನೀಡುವುದನ್ನು ಅವರು ಇಷ್ಟಪಡುವುದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಪಂಚಮರಿಗೆ ಪ್ರವೇಶ ನೀಡಿದ ಶಾಲೆಗಳಿಂದ ಇತರ ಬಾಲಕರು ಹೊರಬಂದರು ತದ ನಂತರದಲ್ಲಿ ಪರಿಸ್ಥಿತಿಗಳು ಬದಲಾವಣೆ ಹೊಂದಿದ್ದವು. ಸಾಮಾನ್ಯ ಶಾಲೆಗಳಿಗೆ ಪಂಚಮರ ಪ್ರವೇಶದ ವಿರುದ್ಧ ಎದ್ದಿರುವ ಕೂಗಾಟ ಕೆಲವೇ ಕಾಲದಲ್ಲಿ ತಾನಾಗಿಯೇ ಸಾಯುತ್ತದೆ ಎಂಬ ಉದ್ದೇಶದಿಂದ ಮೈಸೂರು ಸಂಸ್ಥಾನದ ಸರ್ಕಾರ ಯಾವುದಕ್ಕೂ ಜಗ್ಗದೆ ತನ್ನ ಕಾಯಕ ಸಾಧಿಸಿತು.

ಸಾಮಾಜಿಕ ಪ್ರಶ್ನೆ ಇದಕ್ಕೆ ಸಮಾಜವೇ ಒಂದು ತೀರ್ಮಾನವನ್ನು ಒದಗಿಸಬೇಕು ಅದರಿಂದ ಪಂಚಮರುಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸತಕ್ಕದ್ದು ಈ ಕಾರ್ಯದಲ್ಲಿ ಎಲ್ಲರೂ ಒಂದಾಗತಕ್ಕದ್ದು, ಉನ್ನತ ತರಗತಿಗಳಲ್ಲಿ ಅಂದರೆ ಪದವಿ ಹಂತದಲ್ಲಿ ಪಂಚಮರು ಇತರ ವಿದ್ಯಾರ್ಥಿಗಳೊಂದಿಗೆ ಕುಳಿತುಕೊಳ್ಳುವುದಕ್ಕೆ ಯವುದೇ ಅಭ್ಯಂತರವಿರದೆ ಎಲ್ಲಾ ಸಮಾನರು ಎಂಬ ಭಾವನೆಯನ್ನು ಬೆಳೆಸಬೇಕಾಗಿದೆ. ಬೇರೆ ವರ್ಗದ ಜನರು ಪಂಚಮರುಗಳೊಂದಿಗೆ ಕೆಲಸ ಮಾಡುತ್ತಾರೆ ಮತ್ತು ಅವರಿಲ್ಲದೆ ಪಂಚಮರುಗಳೊಂದಿಗೆ ಕೆಲಸ ಮಾಡುತ್ತಾರೆ ಮತ್ತು ಅವರಿಲ್ಲದೆ ಯಾವುದೇ ಕೆಲಸ ಕಾರ್ಯಗಳು ಆಗುವುದಿಲ್ಲ. ಆದರೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರುಗಳಿಂದ ವ್ಯಕ್ತವಾದ ಅಭಿಪ್ರಾಯಗಳು ಗ್ರಾಮಗಳಲ್ಲಿನ ಜನರ ಭಾವನೆಗಳೊಂದಿಗೆ ಹೊಂದುವುದಿಲ್ಲ. ಅಲ್ಲಿ ಪಂಚಮರ ಪ್ರವೇಶದ ವಿರುದ್ಧ ಬಲವಾದ ಅಭಿಪ್ರಾಯಗಳಿವೆ. ಹೀಗಿದ್ದರೂ ಪಂಚಮರುಗಳನ್ನು ಗ್ರಾಮದ ಹೊರ ವಲಯದಲ್ಲಿ ಇಡಲಾಗಿದೆ ಮತ್ತು ಗ್ರಾಮದ ವಿಸ್ತರಣೆಯು ಪ್ರಶ್ನೆ ಬಂದಾಗಲೆಲ್ಲಾ ಪಂಚಮರ ಗುಡಿಸಲುಗಳನ್ನು ತಡೆಯಲಾಗಿದೆ ಮತ್ತು ಹೆಚ್ಚು ಹೆಚ್ಚು ದೂರಕ್ಕೆ ಸಾಗಿಸಲಾಗಿದೆ. ಪಂಚಮರುಗಳನ್ನು ಗ್ರಾಮದ ಒಳಗಡೆ ಇರಲು ಈ ಜನ ಇಚ್ಚಿಸುವುದಿಲ್ಲ ಎಂಬುದನ್ನು ಅದು ಸ್ಪಷ್ಟವಾಗಿ ತೋರಿಸುತ್ತದೆ. ಪಂಚಮರುಗಳಿಗೆ ಶಿಕ್ಷಣ ಒದಗಿಸಿದಾಗ ಮಾತ್ರ ಅವರು ಜಾಗೃತರಾಗುತ್ತಾರೆ. ಪಂಚಮರುಗಳು ಹಿಂದೂಗಳ ಒಂದು ಭಾಗವಾಗಿದ್ದಾರೆ.

ಆದ್ದರಿಂದ ಅವರನ್ನು ಸಮಾನವಾಗಿ ಪರಿಗಣಿಸತಕ್ಕದ್ದು. ಹಿಂದೂಗಳು ಸರಿಯಾಗಿ ಗಮನಿಸದೆ ಹೋದಲ್ಲಿ ಅವರು ಧರ್ಮವನ್ನು ತೊರೆದು ಕ್ರೈಸ್ತರಾಗಿ ಹೋಗುತ್ತಾರೆ ಎಂಬ ಅಂಶವನ್ನು ಕೆಲವು ಸದಸ್ಯರು ಚರ್ಚಿಸಿದರು.

ಪಟ್ಟಭದ್ರ ಹಿತಾಸಕ್ತಿಗಳು ಅವರನ್ನು ಕುರುತರನ್ನಾಗಿಸಿದೆ ಎಂದು ಗೋಪಾಲಸ್ವಾಮಿ ಅಯ್ಯರ್ ತಮ್ಮ ವಾದವನ್ನು ಮುಂದುವರೆಸಿದರು ಪಂಚಮರಿಗೆ ಶಿಕ್ಷಣವನ್ನು ನೀಡಿದರೆ ಕೂಲಿಗಳಾಗಿ ಕೆಲಸ ಮಾಡಲು ಅವರು ದೊರಕುವುದಿಲ್ಲ ಎಂದು ಕೆಲವು ಜನರು ಭಾವಿಸುವುದು ವಿಚಿತ್ರವಾಗಿದೆ. ಪಂಚಮರ ಶಿಕ್ಷಣಕ್ಕೆ ವಿರೋಧಿಸುವುದರಲ್ಲಿ ಕೇವಲ ಈ ಸೂತ್ರ ಮಾತ್ರ ಕಾರಣವೇ ಎಂದು ಅವರು ಪ್ರಶ್ನಿಸಿದರು. ಅವಿದ್ಯಾವಂತ ಪಂಚಮ ಒಂದು ದಿನದ ಕೆಲಸಕ್ಕೆ ೪ ಆಣೆಗಳನ್ನು ಪಡೆದರೆ, ಶಿಕ್ಷಣ ಪಡೆದ ನಂತರ ಎಂಟು ಆಣೆಗಳಿಗೆ ಒತ್ತಾಯಿಸಬಹುದು ಎಂಬ ವಿಷಯ ಸತ್ಯಕ್ಕೆ ದೂರವಾದುದು. ಆದರೆ ಅದರಲ್ಲಿ ಕೂಡ ಒಂದು ಪ್ರಯೋಜನವಿದೆ ವಿದ್ಯಾವಂತ ಪಂಚಮನಲ್ಲಿ ಉತ್ತಮ ಕರ್ತವ್ಯ ಪ್ರಜ್ಞೆ ಇರುತ್ತದೆ. ಮತ್ತು ಈಗಿನಂತ ಅತಿ ಸೂಕ್ಷ್ಮವಾದ ಮೇಲ್ವಿಚಾರಣೆ ಅನಗತ್ಯವಾಗುತ್ತದೆ.[೨೧]

ಪಂಚಮ ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸಲು ಕಳೆದ ೩೫ ವರ್ಷಗಳಿಂದ ಪ್ರಯತ್ನ ಮಾಡಲಾಗುತ್ತಿದೆ, ಮೊದಲಿಗೆ ಬೆಂಗಳೂರಿನಲ್ಲಿ ಕಾರ್ಯರೂಪಕ್ಕೆ ತರಲಾಯಿತು ಮತ್ತು ಪಂಚಮರಿಗೆ ಶಿಕ್ಷಣ ನೀಡುವುದು ಹಿಂದೂ ಸಮಾಜದ ವಿರುದ್ಧವಾಗಿ ಕೆಲಸ ಮಾಡಬಹುದೆಂಬ ಯೋಜನೆಯಿಂದ ಕೆಲವು ಜನ ಅದನ್ನು ವಿರೋಧಿಸಿದರು. ಪಂಚಮರ ವಿದ್ಯಾಭ್ಯಾಸಕ್ಕಾಗಿ ಎರಡು ಧರ್ಮ ಪ್ರಚಾರಕ ಮಂಡಳಿ ಶಾಲೆಗಳನ್ನು ಪ್ರಾರಂಭಿಸಲಾಯಿತು. ಆದರೆ ಆ ಕಾಲದಲ್ಲಿ ಈ ಧರ್ಮ ಪ್ರಚಾರ ಮಾಡಲು ಪಂಚಮರನ್ನು ನೇಮಿಸಲಾಯಿತು. ಹೆಚ್ಚಿನ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗಿತ್ತು.

ಬಡತನ ಮತ್ತು ಅಜ್ಞಾನದಲ್ಲಿ ಮುಳುಗಿರುವ ಜನಸಂಖ್ಯೆಯು ಆರನೇ ಒಂದು ಭಾಗದ ನೈತಿಕತೆಗಳನ್ನು ಉತ್ತಮಗೊಳಿಸಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದರು. ಪ್ರಾರಂಭದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಬೋಧಕರುಗಳನ್ನು ಹೊಂದಿದ ಪ್ರತ್ಯೇಕ ಶಾಲೆಗಳು ಪಂಚಮ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಯಿತು. ಆಂಗ್ಲೋ ವರ್ನಾಕುಲಂ ಶಾಲೆಗಳಿಗೆ ಯಾವುದೇ ನಿರ್ಬಂಧವಿರದೇ ಪಂಚಮ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಲಾಯಿತು. ಇದಕ್ಕೆ ಅಪಸ್ವರ ಬಂದಾಗ ವೆಂಕಟಕೃಷ್ಣಯ್ಯನವರು ಮಾತನಾಡಿ ಸರ್ಕಾರದ ದೃಷ್ಟಿಯಲ್ಲಿ ಎಲ್ಲಾ ಪ್ರಜೆಗಳು ಸಮಾನರು ಮತ್ತು ಯಾವುದೇ ವ್ಯತ್ಯಾಸಗಳನ್ನು ತೋರಿಸತಕ್ಕದಲ್ಲ ಎಂಬುದನ್ನು ತಿಳಿಸಿ ಹೇಳಿದರು. ತಲತಲಾಂತರಗಳಿಂದ ಬಂದಿರುವ, ಅಸ್ಥಿತ್ವದಲ್ಲಿರುವ ವ್ಯತ್ಯಾಸಗಳನ್ನು ಕೂಡ ಸರ್ಕಾರ ಅಲಕ್ಷ್ಯ ಮಾಡುವಂತಿಲ್ಲ ಎಂದರು. ಹಿಂದುಳಿದ ನಿಮ್ನ ವರ್ಗಗಳು ಉನ್ನತ ವರ್ಗಗಳೊಂದಿಗೆ ಸೇರಲು

ಸಮರ್ಥರನ್ನಾಗುವಂತೆ ಮಾಡಲು ಸರ್ಕಾರ ಅವರ ಉನ್ನತಿಗಾಗಿ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ. ಪ್ರಪಂಚದ ಯಾವ ಭಾಗಕ್ಕೆ ಹೋದರು ಅಲ್ಲಿ ಸಾಮಾಜಿಕ ವ್ಯಾತ್ಯಾಸಗಳು ಇವೆ. ಆದರೆ ಈ ವ್ಯತ್ಯಾಸಗಳನ್ನು ನಿವಾರಿಸುವುದು ಸರ್ಕಾರದ ಕರ್ತವ್ಯವಾಗಿದೆ. ಅಂತಹ ಕಾರ್ಯವನ್ನು ಮಾಡುವಾಗ ಜಾಗರೂಕತೆಯಿಂದ ಮುಂದುವರಿಯಬೇಕು ಮತ್ತು ಎಲ್ಲವನ್ನು ಎಚ್ಚರಿಕೆಯಿಂದ ಪರೀಕ್ಷಿಸಬೇಕು. ವಿಚಾರಗಳನ್ನು ಹೆಚ್ಚುಗಟ್ಟಲೆಬಿಡತಕ್ಕದ್ದಲ್ಲ ಸಾವಿರಾರು ವರ್ಷಗಳಿಂದ ಮುಂದುವರೆದ ಜನಾಂಗಗಳು ಮಾತ್ರವೇ ಪಂಚಮರುಗಳ ಉನ್ನತಿಗೆ ಮನಸ್ಸು ಮಾಡಬೇಕು. ಪಂಚಮರನ್ನು ಮೇಲೆತ್ತುವ ಬಗ್ಗೆ ಜನ ತಡೆಯಿಲ್ಲದೆ ಮಾತನಾಡುತ್ತಾರೆ. ಆದರೆ ಅವರಲ್ಲಿ ಕೆಲವರು ಮಾತ್ರ ನಿಜವಾಗಿ ಕೆಲಸ ಮಾಡಲು ತಯಾರಾಗಿದ್ದಾರೆ. ಪಂಚಮರುಗಳು ಉನ್ನತ ವರ್ಗಗಳೊಂದಿಗೆ ಸೇರಲು ಅವರೇ ಇನ್ನು ಸಿದ್ಧರಾಗಿಲ್ಲ ಅವರು ಒಂದು ಇಕ್ಕಟ್ಟಿನಲ್ಲಿದ್ದಾರೆ ಮತ್ತು ಅವರನ್ನು ಅವರ ಬಯಕೆಗಳ ವಿರುದ್ದ ಒತ್ತಾಯ ಪಡಿಸುವುದು ಒಳ್ಳೆಯದಲ್ಲ ಎಂದರು.[೨೨] ಆದ್ದರಿಂದ ಆ ಜನಾಂಗಕ್ಕೆ ವಿಶೇಷ ಶಾಲೆಗಳನ್ನು ಒದಗಿಸುವ ಆಲೋಚನೆಯನ್ನು ಪ್ರಾರಂಭಿಸಿದ್ದಾಗಿ ಅವರು ತಿಳಿಸಿದರು. ಪಂಚಮರ ಸ್ಥಿತಿಗತಿಯನ್ನು ಉತ್ತಮಗೊಳಿಸಲು ಮುಂದುವರೆದ ಜನಾಂಗಗಳು ಅವುಗಳ ಕೈಲಾದ ಉತ್ತಮ ಪ್ರಯತ್ನವನ್ನೇ ಮಾಡುವಂತೆ ಕೇಳಿದರು.

ಅಡಿಟಿಪ್ಪಣಿಗಳು

೧. ವಿಧಾನ ಮಂಡಲ ಇತಿಹಾಸ, ಮೈಸೂರು ಪ್ರಜಾಪ್ರತಿನಿಧಿ ಸಭೆ ಸಂ.೧, ಸಿ.೧೮೮೧–೧೯೦೭, ವಿಧಾನಮಂಡಲ ಕಛೇರಿ, ಬೆಂಗಳೂರು, ೨೦೦೨, ಪುಟ ಸಂ.೨.

೨. ಅದೇ ಪುಟ. ೪.

೩. ಅದೇ ಪುಟ. ೬.

೪. ಅದೇ ಪುಟ. ೯.

೫. ಅದೇ ಪುಟ. ೧೬.

೬. ವಿಧಾನ ಮಂಡಲ ಇತಿಹಾಸ, ಮೈಸೂರು ಪ್ರಜಾಪ್ರತಿನಿಧಿ ಸಭೆ, ಸಂಪುಟ ೨, ೧೮೮೧–೧೯೦೭. ಪುಟ. ೨೦೨.

೭. ಅದೇ ಪುಟ. ೨೦೭.

೮. ಅದೇ ಪುಟ.

೯. ಮೂರ್ತಿ ಕೆ.ಎಲ್.ಎನ್, **ಮೈಸೂರು ಸಂಸ್ಥಾನದ ರಾಜಕೀಯ ಮತ್ತು ಸಂವಿಧಾನಾತ್ಮಕ ಬೆಳವಣಿಗೆ.**, ೨೦೦೬. ಚೇತನ ಬುಕ್ ಹೌಸ್ ಮೈಸೂರು. ಪುಟ. ೮೪.

೧೦. ಅದೇ ಪುಟ ೮೬.

೧೧. ಲೀಲಾ ಬಿ. ಮುಂಬೈ, **ಮೈಸೂರು ಸಾಂಸ್ಕೃತಿಕ ಸಂಕಥನ**, ಕನ್ನಡ ಅಧ್ಯಯನ ವಿಭಾಗ, ಮುಂಬೈ ವಿಶ್ವವಿದ್ಯಾನಿಲಯ ಮುಂಬೈ. ಪುಟ ೧೦೮.

೧೨. ವೆಂಕಟ ಸುಬ್ಬಶಾಸ್ತ್ರಿ, **ಅಡ್ಮಿಸ್ಟ್ರೇಷನ್ ಆಫ್ ಮೈಸೂರ್ ಅಂಡರ್ ಸರ್ ಮಾರ್ಕ್ ಕಬ್ಬನ್**,೧೮೩೪–೧೮೬೧, ೧೯೩೨.ಪುಟ ೮೨.

೧೩. ಪ್ರೊಸಿಡಿಂಗ್ಸ್ ಆಫ್ ದಿ ಮೈಸೂರ್ ಲೆಜಿಸ್ಲೆಟಿವ್ ಕೌನ್ಸಿಲ್ ೧೯೦೬ ರಿಂದ ೧೯೦೮. ಫೈಲ್ ನಂ. ಎನ್.೧೩೪ ಎಲ್.ಎಂ. ಪುಟ ೩೦೪.

೧೪. ಅದೇ. ಪುಟ.೩೧೦.

೧೫. ರವಿ ಎಂ.ಆರ್. **ಆಧುನಿಕ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ** ೧೮೮೧–೧೯೪೭. ಸಂವಹನ ಪ್ರಕಾಶನ, ಮೈಸೂರು,೨೦೧೪. ಪುಟ ೧೦೧.

೧೬. ಅದೇ. ಪುಟ.೧೦೪.

೧೭. ಅದೇ.ಪುಟ.೧೦೬

೧೮. ಹೆಟ್ನೆ ಬಿ. **ಪೊಲಿಟಿಕಲ್ ಎಕನಾಮಿ ಆಫ್ ಇನಡೈರೆಕ್ಟ್ ರೂಲ್ ಆಫ್ ಮೈಸೂರ್** ,೧೮೪೨–೧೯೪೭, ಪುಟ ೨೦೧.

೧೯. ಅದೇ ಪುಟ ೨೧೩.

೨೦. ಅದೇ ಪುಟ ೨೧೮.

೨೧. ವಿಧಾನ ಮಂಡಲ ಇತಿಹಾಸ, ಮೈಸೂರು ಪ್ರಜಾಪ್ರತಿನಿಧಿ ಸಭೆ ಸಂ.೧, ಸಿ.೧೮೮೧–೧೯೦೭, ವಿಧಾನಮಂಡಲ ಕಛೇರಿ, ಬೆಂಗಳೂರು, ೨೦೦೨, ಪುಟ ೩೮೪.

೨೨. ಅದೇ ಪುಟ.೩೯೦.

ಅಧ್ಯಾಯ: ನಾಲ್ಕು

ಮೈಸೂರು ಸಂಸ್ಥಾನದ ನ್ಯಾಯವಿಧಾಯ ಸಭೆ ಹಾಗೂ ದಲಿತ ಜನಾಂಗದ ಗ್ರಾಮಾಡಳಿತ ಕಾನೂನುಗಳ ವಿಶ್ಲೇಷಣೆ

೪.೧. ೧೯೦೦ ರಿಂದ ನ್ಯಾಯ ವಿಧಾಯಕ ಸಭೆ ಹಾಗೂ ದಲಿತ ಜನಾಂಗದ ಅಭಿವೃದ್ಧಿ

೪.೨. ನ್ಯಾಯ ವಿಧಾಯಕ ಸಭೆಯಲ್ಲಿ ದಲಿತ ಜನಾಂಗದ ಕಲ್ಯಾಣಕ್ಕಾಗಿನ ಪ್ರಮುಖ ನಿರ್ಣಯಗಳು

೪.೩. ಮೈಸೂರು ಸಂಸ್ಥಾನದ ನ್ಯಾಯ ವಿಧಾಯಕ ಸಭೆಯಲ್ಲಿ ಜಾರಿಗೊಳಿಸಿದ ಮಸೂದೆಗಳು

೪.೪. ದಲಿತ ಜನಾಂಗದವರ ಅಭಿವೃದ್ಧಿಗೆ ನ್ಯಾಯವಿಧಾಯಕ ಸಭೆಯ ಕೊಡುಗೆ

ಅಧ್ಯಾಯ: ನಾಲ್ಕು

ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆ ಹಾಗೂ ದಲಿತ ಜನಾಂಗದ ಗ್ರಾಮಾಡಳಿತ ಕಾನೂನುಗಳ ವಿಶ್ಲೇಷಣೆ

ಪ್ರಜಾಪ್ರತಿನಿಧಿ ಸಭೆಯನ್ನು ೧೮೮೧ರಲ್ಲಿ ಸ್ಥಾಪಿಸಲಾಯಿತಾದರೂ ಅದಕ್ಕೆ ಶಾಸನಗಳನ್ನು ಮಾಡುವ ಅಧಿಕಾರವಿರಲಿಲ್ಲ. ಶಾಸನ ನಿರೂಪಣೆ ಸಂಪೂರ್ಣವಾಗಿ ಸರ್ಕಾರಕ್ಕೆ ಸೇರಿತ್ತು. ಪ್ರತಿನಿಧಿಸಭೆಯ ಮುಂದಿಡಲು ಸಾಕಷ್ಟು ಪ್ರಾಮುಖ್ಯತೆ ಇದೆಯೆಂದು ಸರ್ಕಾರ ಭಾವಿಸಿದ ಸಂದರ್ಭದಲ್ಲಿ ಮಾತ್ರ ಸರ್ಕಾರವು ತನ್ನ ವಿವೇಚನೆಯಂತೆ ಅಂತಹ ಕ್ರಮಗಳ ಬಗ್ಗೆ ಸಭೆಯಲ್ಲಿ ಸಮಾಲೋಚಿಸುತ್ತಿತ್ತು. ಪ್ರತ್ಯೇಕ ಇಲಾಖೆಯೊಂದಿಗೆ ಕಾನೂನು ಇಲಾಖೆಯನ್ನು ಮೊಟ್ಟಮೊದಲಿಗೆ ೧೮೮೬ ರಲ್ಲಿ ಸಂಘಟಿಸಲಾಯಿತು. ಎಲ್ಲಾ ವಿಧಾಯಕ ಕ್ರಮಗಳ ನಿರೂಪಣೆಯು ಕಾರ್ಯ ನಿರ್ವಾಹಕ ಮಂಡಳಿಯ ಕರ್ತವ್ಯಗಳಲ್ಲಿ ಸೇರಿದ ಭಾಗವಾಗಿದ್ದು, ಅದು ತನಗೆ ಅಗತ್ಯವಾದ ಅಂತಹ ಕ್ರಮಗಳನ್ನು ಮಹಾರಾಜರ ಮಂಜೂರಾತಿಯೊಡನೆ ಜಾರಿಗೆ ತರುತ್ತಿತ್ತು.

ಬ್ರಿಟಿಷ್ ಭಾರತದ ಪ್ರಾಂತ್ಯಗಳಲ್ಲಿ ಕಾಯಿದೆಗಳನ್ನು ಮಾಡಲು ನ್ಯಾಯವಿಧಾಯಕ ಸಭೆಗಳನ್ನು ರಚಿಸಲಾಗಿತು. ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು ತಮಗೆ ಶಾಸನಗಳನ್ನು ಮಾಡುವ ಅಧಿಕಾರವನ್ನು ಕೊಡಬೇಕು ಅಥವಾ ಆ ಉದ್ದೇಶಕ್ಕಾಗಿ ನ್ಯಾಯ ವಿಧಾಯಕ ಸಭೆಯನ್ನು ರಚಿಸಬೇಕು ಎಂದು ಕೇಳಲಾರಂಭಿಸಿದರು. ವ್ಯವಸ್ಥಿತವಾದ ಶಾಸಕಾಂಗ ಸಭೆಯೊಂದರಲ್ಲಿ ಕಾನೂನು ಮಾಡುವ ಪ್ರಕ್ರಿಯೆಯಲ್ಲಿ ಕೆಲವು ಅಧಿಕಾರೇತರರು ಸಂಪರ್ಕ ಹೊಂದಿರಬೇಕೆಂದು ಅವರು ೧೮೯೦ ಮತ್ತು ೧೮೯೩ರ ನಡುವೆ ಕೇಳುತ್ತಿದ್ದರು. ನ್ಯಾಯವಿಧಾಯಕ ಸಭೆಯಲ್ಲಿ

ಅಧಿಕಾರೇತರ ಸದಸ್ಯರಿಂದ ಪ್ರಯೋಜನ ಉಂಟು. ಆದರೆ ಈಗ ಅವಶ್ಯಕವೆನಿಸುವ ವಿಧಾಯಕ ಕಾರ್ಯ ಅತ್ಯಲ್ಪವಾಗಿದೆ. ಈಗಿರುವ ಕಾನೂನುಗಳು ಸ್ಥಳೀಯ ಸ್ಥಿತಿಗತಿಗಳಿಗೆ ಅಗತ್ಯವಾದಷ್ಟು ಮಾತ್ರ ಮಾರ್ಪಾಡುಗಳೊಡನೆ ಬ್ರಿಟಿಷ್ ಭಾರತದಲ್ಲಿರುವ ಮಾದರಿಯಲ್ಲಿಯೇ ಇವೆ. ಆದ್ದರಿಂದ ಮೈಸೂರಿಗಾಗಿ ನ್ಯಾಯ ವಿಧಾಯಕ ಸಭೆಯೊಂದನ್ನು ರಚಿಸುವುದು ಆಡಂಬರದ ಕ್ರಮವಾಗಬಹುದು ಎಂದು ದಿವಾನರು ತಮ್ಮ ಉತ್ತರದಲ್ಲಿ ಹೇಳಿದರು. ಈಗ ಪರಿಶೀಲನೆಯಲ್ಲಿರುವ ಯಾವುದೇ ಉದ್ದೇಶಿತ ಮುಖ್ಯ ವಿಧಾಯಕ ಕ್ರಮ ಕುರಿತು ಸಭೆ ನಿಯೋಜಿಸುವ ಪ್ರತಿನಿಧಿಯ ಮೂಲಕ ಸಭೆಯ ಅಭಿಪ್ರಾಯವನ್ನು ಸರ್ಕಾರ ಸಂತೋಷದಿಂದ ಪರಿಗಣಿಸುವುದು ಎಂದು ದಿವಾನರು ತಿಳಿಸಿದರು.

ಮಹಾರಾಜರ ಕಾರ್ಯನಿರ್ವಾಹಕ ಮಂಡಳಿಗೆ ಪ್ರತಿನಿಧಿ ಸಭೆಯ ಒಬ್ಬರು ಅಥವಾ ಹೆಚ್ಚು ಸದಸ್ಯರನ್ನು ಚುನಾಯಿಸುವ ವಿಷಯವನ್ನು ೧೯೮೩ ರಲ್ಲಿ ಪುನಃ ಎತ್ತಲಾಯಿತು. ಸಭೆಯು ಚುನಾಯಿಸುವ ಈ ಹೆಚ್ಚುವರಿ ಸದಸ್ಯರು ವಿಧಾಯಕ ಕಾರ್ಯಕ್ಕಾಗಿ ಮಾತ್ರ ಇರಬೇಕೆಂಬ ಸಲಹೆಯು ಬಂದಿತ್ತು. ವಿಧಾಯಕ ಕ್ರಮಗಳ ಕೆಲಸ ತುಂಬಾ ಕಡಿಮೆ ಇದೆ ಮತ್ತು ಅದಕ್ಕಾಗಿ ಸರ್ಕಾರವು ಬ್ರಿಟಿಷ್ ಭಾರತದಲ್ಲಿನ ಶಾಸನಗಳನ್ನೇ ಸಾಮಾನ್ಯವಾಗಿ ಸ್ವೀಕರಿಸುತ್ತಿದೆ. ಪ್ರತಿನಿಧಿ ಸಭೆಯು ಚುನಾಯಿಸುವ ಒಬ್ಬೊಬ್ಬ ಸದಸ್ಯರೊಡನೆ ಸಮಾಲೋಚಿಸುವುದಕ್ಕಿಂತ ಉತ್ತಮವಾಗಿ ಸರ್ಕಾರವು ಈಗ ನಡೆಯಿತ್ತಿರುವಂತೆಯೇ ಮುಖ್ಯ ವಿಷಯಗಳಲ್ಲಿ ಇಡೀ ಸಭೆಯ ಸಲಹೆಗಳನ್ನು ಪಡೆಯುವುದು ಮುಖ್ಯವಾಗಿತ್ತು.

ಬ್ರಿಟಿಷ್ ಭಾರತದಲ್ಲೂ ತಿರುವಾಂಕೂರು ಸಂಸ್ಥಾನದಲ್ಲೂ ನ್ಯಾಯವಿಧಾಯಕ ಸಭೆಗಳಿವೆ ಯೆಂದು ಅದೇ ರೀತಿ ಮೈಸೂರಿನಲ್ಲಿ ಒಂದು ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಬೇಕೆಂದೂ ಸದಸ್ಯರು ಕೇಳಿದರು. ಆ ಸಭೆ ಹೆಚ್ಚು ಭಾರಿ ಸಮಾವೇಶಗೊಂಡು ಜನರ ಅಪೇಕ್ಷೆಗಳನ್ನು ಪ್ರತಿನಿಧಿಸಲು ಸಾಧ್ಯವಾಗುವುದೆಂದೂ ಹೇಳಿದರು. ನ್ಯಾಯ ವಿಧಾಯಕಸಭೆಯ ಅಗತ್ಯವಿಲ್ಲವೆಂಬ ಇನ್ನೊಂದು ಅಭಿಪ್ರಾಯವೂ ಇತ್ತು. ಈಗ ೨೭೬ ಸದಸ್ಯರು ಪ್ರತಿನಿಧಿ ಸಭೆಯಲ್ಲಿ ಮಾಡುತ್ತಿರುವುದನ್ನು ಕೆಲವೇ ಸದಸ್ಯರು ದಕ್ಷತೆಯಿಂದ ಹೇಗೆ ಮಾಡಬಲ್ಲರೆಂದು ಒಬ್ಬ ಸದಸ್ಯರು ಕೇಳಿದರು. ತಿರುವಾಂಕೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಇಲ್ಲವೆಂದು ಇನ್ನೊಬ್ಬ ಸದಸ್ಯರು ಹೇಳಿದರು. ನ್ಯಾಯ ವಿಧಾಯಕ ಸಭೆಯ ಅಗತ್ಯವಿದೆ ಎನಿಸಿದಾಗ ಸರ್ಕಾರ ಅದನ್ನು ರಚಿಸುವುದೆಂದೂ ವ್ಯಕ್ತವಾಗಿರುವ ಸಲಹೆಗಳನ್ನೆಲ್ಲಾ ಆಗ ಗಮನಿಸಲಾಗುವುದೆಂದೂ ದಿವಾನರೂ ತಿಳಿಸಿದರು.

ಶಾಸನಗಳನ್ನು ರಚಿಸುವಾಗ ಪ್ರತಿನಿಧಿಸಭೆಯ ಸದಸ್ಯರ ಅಭಿಪ್ರಾಯಗಳನ್ನು ತಿಳಿದುಕೊಳ್ಳ ಬೇಕೆಂದು ಅದು ಸಾಧ್ಯವಿಲ್ಲವಾದರೆ ತಿರುವಾಂಕೂರಿನಲ್ಲಿರುವಂತೆ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಬೇಕೆಂದು ೧೯೦೧ ರಲ್ಲಿ ಪ್ರತಿನಿಧಿ ಸಭೆಯಲ್ಲಿ ಕೇಳಲಾಯಿತು.[೧]

ನ್ಯಾಯ ವಿಧಾಯಕ ಸಭೆಯ ಸ್ಥಾಪನೆಗಾಗಿ ಜ್ಞಾಪನಾ ಪತ್ರವೊಂದನ್ನು ೧೯೦೫ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಯಿತು. ವಿಷಯವನ್ನು ಅದೇ ವರ್ಷ ಮತ್ತೆ ಪ್ರತಿನಿಧಿಸಭೆಯಲ್ಲಿ ಎತ್ತಲಾಯಿತು. ಜ್ಞಾಪನಾ ಪತ್ರವನ್ನು ಪರಿಶೀಲಿಸಲಾಗುವುದೆಂದು ಸರ್ಕಾರ ವಾಗ್ದಾನ ಮಾಡಿತ್ತು. ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸುವ ಅಗತ್ಯವನ್ನು ೧೯೦೬ ರಲ್ಲಿ ಪುನಃ ಒತ್ತಿ ಹೇಳಲಾಯಿತು. ಪ್ರತಿನಿಧಿ ಸಭೆ ೨೫ ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಜನರು ಸಾಕಷ್ಟು ಸುಧಾರಿಸಿದ್ದಾರೆಂದೂ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಬೇಕಾದ ಕಾಲ ಬಂದು ಹೋಗಿದೆ ಎಂದೂ ವಾದಿಸಲಾಯಿತು. ನಾಮಕರಣಗೊಳ್ಳುವ ಅಧಿಕಾರಿ ಸದಸ್ಯರ ಜೊತೆಗೆ ಪ್ರತಿಯೊಂದು ಜಿಲ್ಲೆಯಿಂದ ಒಬ್ಬ ಅಧಿಕಾರೇತರ ಸದಸ್ಯರನ್ನು ಆರಿಸಿಕೊಳ್ಳಬೇಕೆಂದೂ ಕೆಲವು ಸದಸ್ಯರನ್ನು ಚುನಾಯಿಸುವ ಹಕ್ಕು ಪ್ರಜಾಪ್ರತಿನಿಧಿ ಸಭೆಗೆ ಇರಬೇಕೆಂದೂ ಸೂಚಿಸಲಾಯಿತು. ನ್ಯಾಯ ವಿಧಾಯಕ ಸಭೆಯ ಇರುವಿಕೆಯಿಂದ ಪ್ರತಿನಿಧಿ ಸಭೆಯ ಉಪಯುಕ್ತತೆ ಮತ್ತು ಪ್ರಾಮುಖ್ಯಕ್ಕೆ ಧಕ್ಕೆ ಉಂಟಾಗಬಾರದೆಂದು ಸ್ಪಷ್ಟಪಡಿಸಲಾಯಿತು. ಈ ಅಂಶಗಳನ್ನು ಸರ್ಕಾರ ದಾಖಲಿಸಿಕೊಂಡು ಅದನ್ನು ಪರಿಶೀಲಿಸಲು ಭರವಸೆ ನೀಡಿತಲ್ಲದೆ ನ್ಯಾಯ ವಿಧಾಯಕ ಸಭೆಯೊಂದನ್ನು ರಚಿಸಿದರೆ ಅದರಿಂದ ಪ್ರತಿನಿಧಿ ಸಭೆಯ ಉಪಯುಕ್ತತೆಯ ಮೇಲೆ ಪರಿಣಾಮವಿರುವುದಿಲ್ಲವೆಂದು ಹೇಳಿತು.

ಈ ವೇಳೆಗೆ ಒಂದು ಕ್ರಮಬದ್ಧ ಶಾಸನ ನಿರೂಪಣಾ ಸಂಸ್ಥೆ ಇರುವುದು ಅಗತ್ಯವೆಂದು ಸರ್ಕಾರಕ್ಕೆ ಮನವರಿಕೆಯಾಗಿತ್ತು. ಪ್ರಗತಿಪರವಾದ ಆಡಳಿತದಲ್ಲಿ ಹೊಸ ಕಾಯಿದೆಗಳನ್ನು ರೂಪಿಸುವುದೂ ಚಾಲ್ತಿ ಕಾಯಿದೆಗಳನ್ನು ಆಗಿಂದಾಗ್ಗೆ ತಿದ್ದುಪಡಿ ಮಾಡುವುದೂ ಅವಶ್ಯಕವಾಗಿತ್ತು. ವಿಧಾಯಕ ಕ್ರಮಗಳಿಗೆ ನಿಸ್ಸಂದೇಹವಾಗಿಯೂ ಎಲ್ಲಾ ದಿವಾನರು ಮತ್ತು ಕೌನ್ಸಿಲರ್‌ಗಳಿಂದ ಪೂರ್ಣ ಪರಿಶೀಲನೆ ಹಾಗೂ ಗಮನ ಲಭಿಸಿತ್ತು. ಆದರೆ ಕಾರ್ಯ ನಿರ್ವಾಹಕ ಮಂಡಳಿಯ ಸ್ವರೂಪ ಮತ್ತು ಸಣ್ಣ ಗಾತ್ರದಿಂದಾಗಿಯೂ ಅದರ ಕಲಾಪಗಳನ್ನು ಪ್ರಚಾರಪಡಿಸದೇ ಇದ್ದುದರಿಂದಲೂ ಶಾಸನ ಕ್ರಮಗಳಿಗೆ ಅಪೇಕ್ಷಣೀಯವಾದಷ್ಟು ದೃಷ್ಟಿಕೋನಗಳಿಂದಲೂ ಸಂಪೂರ್ಣವಾಗಿಯೂ ಪರಿಶೀಲನೆ ಲಭಿಸುತ್ತಿರಲಿಲ್ಲ. ಈ ಮಧ್ಯೆ ವಿದ್ಯಾಭ್ಯಾಸ ವಿಸ್ತೃತಗೊಂಡ ಸುಶಿಕ್ಷಿತ ಮತ್ತು ಬುದ್ಧಿವಂತ ಜನರ ದೊಡ್ಡ ಸಮುದಾಯ ಅಸ್ತಿತ್ವಕ್ಕೆ ಬಂದಿತು. ಮತ್ತು ನ್ಯಾಯ ವಿಧಾಯಕ ಸಭೆಯಲ್ಲಿ ಅಧಿಕಾರೇತರ ಸದಸ್ಯರಾಗಿದ್ದುಕೊಂಡು ಶಾಸನ ಕ್ರಮಗಳನ್ನು ಕುರಿತು ಚರ್ಚೆಗಳಲ್ಲಿ ಉಪಯೋಗಕರವಾದ ಪಾತ್ರವನ್ನು ನಿರ್ವಹಿಸಲು ಅರ್ಹರಾದ ಸಾಕಷ್ಟು ಜನರನ್ನು ಅವರಿಂದ ಆರಿಸಿಕೊಳ್ಳಬಹುದಾಗಿತ್ತು.[೨]

ಸ್ಥಳೀಯ ಸ್ಥಿತಿಗತಿಗಳ ಹಾಗೂ ಅವಶ್ಯಕತೆಗಳ ತಿಳುವಳಿಕೆ ಹಾಗೂ ವ್ಯವಹಾರಿಕ ಅನುಭವದೊಡನೆ ಶಾಸನ ನಿರೂಪಣೆಯ ವಾಸ್ತವಿಕ ಪ್ರಕ್ರಿಯೆಯಲ್ಲಿ ಅಧಿಕಾರೇತರ ವ್ಯಕ್ತಿಗಳು ಪಾಲ್ಗೊಳ್ಳುವಂತೆ ನ್ಯಾಯ ವಿಧಾಯಕ ಸಭೆಯೊಂದನ್ನು ರಚಿಸುವುದು ಸೂಕ್ತವೆಂದು ಈ ಪರಿಸ್ಥಿತಿಯಲ್ಲಿ ಮಹಾರಾಜರು ಭಾವಿಸಿದರು. ಆದರೆ ಮೈಸೂರಿನಲ್ಲಿ ನ್ಯಾಯ ವಿಧಾಯಕ

ಸಭೆಯ ರಚನೆಗೆ ಭಾರತ ಸರ್ಕಾರದವರ ಪೂರ್ಣ ಬೆಂಬಲವಿರಲಿಲ್ಲ. ಆ ಸಲಹೆಯನ್ನು ಸೀಮಿತವಾದ ಉತ್ಸಾಹದಿಂದ ಪರಿಗಣಿಸಲಾಯಿತು. ಉದ್ದೇಶಿತ ಪ್ರಯೋಗ ಬೇಡವೆಂದು ಮಹಾರಾಜರಿಗೆ ಸಲಹೆ ಮಾಡಲು ಅವರಿಗೆ ಸಾಕಷ್ಟು ಕಾರಣ ಕಾಣಲಿಲ್ಲ. ಆ ಕ್ರಮಕ್ಕಾಗಿ ಮೈಸೂರಿನಲ್ಲಿ ವಿಶೇಷವಾದ ಅವಶ್ಯಕತೆ ಏನೂ ಇಲ್ಲವೆಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಸಲಹೆಗೆ ತಮ್ಮ ಅನುಮೋದನೆಯನ್ನಂತೂ ಅವರು ವ್ಯಕ್ತ ಪಡಿಸಿದರು. ಆದರೂ ಯಾವುದೇ ವಿಧಾಯಕ ವ್ಯವಸ್ಥೆಯನ್ನು ಹೊಂದಿದರೂ ಎಲ್ಲಾ ಶಾಸನ ಕ್ರಮಗಳಿಗೂ ಅಂತಿಮ ಜವಾಬ್ದಾರಿ ಸಂಪೂರ್ಣವಾಗಿ ಮಹಾರಾಜರದ್ದೇ ಆಗುವುದೆಂದೂ ೧೮೮೧ರ ರಾಜ್ಯ ವರ್ಗಾವಣೆ ಒಪ್ಪಂದದ ಪ್ರಕಾರ ಇಂತಹ ಶಾಸನ ಕ್ರಮದ ನಿಯಂತ್ರಣ ಗೌರ್ನರ್ ಜನರಲ್‌ರ ಮಂಡಳಿಗೆ ಸೇರಿರುವುದೆಂದೂ ಸ್ಪಷ್ಟಪಡಿಸಿದರು. ಮೈಸೂರಿನಲ್ಲಿ ಶಾಸನಗಳನ್ನೂ ನಿಬಂಧನೆಗಳನ್ನೂ ಮಾಡಲು ಕ್ರಮಬದ್ಧ, ನ್ಯಾಯ ವಿಧಾಯಕ ಸಭೆಯೊಂದನ್ನು ರಚಿಸುವ ಲೆಜಿಸ್ಲೇಟಿವ್ ಕೌನ್ಸಿಲ್ ನಿಬಂಧನೆಯನ್ನು ೧೯೦೭ರ ಮಾರ್ಚ್ ೬ರಂದು ಪ್ರಕಟಿಸಲಾಯಿತು. ಭಾರತ ಸರ್ಕಾರದ ಅಭಿಪ್ರಾಯದಂತೆ ಮೈಸೂರಿನಲ್ಲಿ ಶಾಸನ ನಿರೂಪಣೆಯ ಮೇಲೆ ಭಾರತ ಸರ್ಕಾರ ಹೊಂದಿದ್ದ ಹತೋಟಿ ಪದ್ಧತಿಯನ್ನು ರಕ್ಷಿಸಲು ಅಗತ್ಯ ಏರ್ಪಾಡನ್ನು ಮಾಡಲಾಯಿತು. ನ್ಯಾಯ ವಿಧಾಯಕ ಸಭೆಯ ಸ್ಥಾಪನೆಯು ಆಡಳಿತದ ಇತರ ಎಲ್ಲಾ ವಿಷಯಗಳಲ್ಲಿನಂತೆಯೇ ಶಾಸನ ನಿರೂಪಣೆಯಲ್ಲೂ ಅಂತಿಮ ಜವಾಬ್ದಾರಿ ಮಹಾರಾಜರಿಗೆ ಸೇರಿರುವುದನ್ನು ಯಾವ ರೀತಿಯಲ್ಲೂ ಬದಲಾಯಿಸುವುದಿಲ್ಲವೆಂದು ಈ ನಿಬಂಧನೆಯಲ್ಲಿ ಸ್ಪಷ್ಟಪಡಿಸಲಾಯಿತು. ಪ್ರಜೆಗಳ ಅವಶ್ಯಕತೆಗಳು ಅಪೇಕ್ಷೆಗಳು ಮತ್ತು ಭಾವನೆಗಳನ್ನು ನಿಖರವಾಗಿ ತಿಳಿದುಕೊಂಡು ಸಂಸ್ಥಾನದ ಪ್ರಭುವಾಗಿ ಅವರು ರೂಪಿಸಿದ ಕಾನೂನುಗಳು ಎಲ್ಲಾ ಸಂದರ್ಭಗಳಲ್ಲೂ ಉದ್ದೇಶಿತ ಗುರಿಯನ್ನು ಈಡೇರಿಸಲು ಸರಿಯಾಗಿವೆ. ಎಂಬುದನ್ನು ಖಚಿತಪಡಿಸಲು ಮಹಾರಾಜರಿಗೆ ಮತ್ತು ಸರ್ಕಾರಕ್ಕೆ ನೆರವಾಗುವುದೇ ಅದರ ಉದ್ದೇಶವೆಂದು ಸ್ಪಷ್ಟಪಡಿಸಲಾಯಿತು.[೩]

ಕಾರ್ಯಕಾರಿ ಮಂಡಳಿಯ ಸದಸ್ಯರ ಜೊತೆಗೆ ಐವರು ಅಧಿಕಾರೇತರರನ್ನೂ ಐವರು ಅಧಿಕಾರಿ ಸದಸ್ಯರನ್ನೂ ಒಳಗೊಂಡ ನ್ಯಾಯ ವಿಧಾಯಕ ಸಭೆಯು ಪ್ರಪ್ರಥಮವಾಗಿ ೧೯೦೭ರ ಜುಲೈ ೨೪ರಂದು ದಿವಾನ್ ವಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಮಹಾರಾಜರ ಪರವಾಗಿ ದಿವಾನರು ಸದಸ್ಯರಿಗೆ ಸ್ವಾಗತ ಕೋರಿ ಈ ಘಟನೆಯ ಪ್ರಾಮುಖ್ಯ ಕುರಿತು ಹೀಗೆ ಹೇಳಿದರು, "ನಾವಿಂದು ಪ್ರಮುಖ ಸಾಂವಿಧಾನಿಕ ಪ್ರಯೋಗವೊಂದರ ಹೊಸ್ತಿಲಲ್ಲಿದ್ದೇವೆ. ಅರಸರಿಗೆ ಸಂಸ್ಥಾನದ ವಾಪಸಾತಿಯ ನಂತರ ಇದು ಇಂತಹ ಎರಡನೆಯ ಪ್ರಯೋಗವಾಗಿದೆ. ಕಾಲು ಶತಮಾನದ ಹಿಂದೆ ಪ್ರಾರಂಭವಾದ ಪ್ರಜಾಪ್ರತಿನಿಧಿ ಸಭೆಯು ತಾನು ಮಾಡಿರುವ ಉಪಯುಕ್ತ ಕಾರ್ಯದಿಂದ ಸಂಪೂರ್ಣ ಸಮರ್ಥನೆ ಹೊಂದಿದೆ. ಸರ್ಕಾರದ ವ್ಯವಸ್ಥೆಯಲ್ಲಿ ಅದು ಒಂದು ಖಚಿತಸ್ಥಾನವನ್ನು ಪಡೆದುಕೊಂಡಿದೆ ಸರ್ಕಾರದ ಅತಿಪ್ರಮುಖ

ಕರ್ತವ್ಯವಾದ ಶಾಸನ ನಿರೂಪಣೆಯಲ್ಲಿ ಹಲವಾರು ಅಧಿಕಾರೇತರ ಹಾಗೂ ಅಧಿಕಾರಿ ಸದಸ್ಯರ ಸಹಕಾರವನ್ನು ಆಹ್ವಾನಿಸಿ ಈಗ ನಾವು ಆಡಳಿತದ ತಳಹದಿಯನ್ನು ಎರಡನೆಯ ಭಾರಿ ವಿಸ್ತರಿಸುತ್ತಿದ್ದೇವೆ."

ಮೈಸೂರಿನ ಮಟ್ಟಿಗೆ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರ ನಡುವೆ ಇರುವ ವ್ಯತ್ಯಾಸದ ಸೂಕ್ಷ್ಮರೇಖೆಯನ್ನು ದಿವಾನರು ಆನಂತರ ಪ್ರಸ್ತಾಪಿಸಿದರು. "ಯಾವುದೇ ವಿಷಯದಲ್ಲಿ ಅಧಿಕಾರಿಗಳ ಮತ್ತು ಅಧಿಕಾರೇತರರ ಅಭಿಪ್ರಾಯಗಳು ಅಥವಾ ಪ್ರಜೆಗಳು ಹೊಂದಿರುವ ಅಭಿಪ್ರಾಯಗಳ ನಡುವೆ ಇದೆಯೆಂದು ಹೇಳಲಾಗುವ ವೈರುಧ್ಯಗಳಲ್ಲಿ ನನಗೆ ಅರ್ಥವೇ ಕಾಣುವುದಿಲ್ಲ. ಇಲ್ಲಿನ ಸರ್ಕಾರ ಮಹಾರಾಜರಲ್ಲಿ ಪೂರ್ಣವಾಗಿ ಕೇಂದ್ರೀಕೃತವಾಗಿದೆ. ಮತ್ತು ನಮ್ಮ ಮಹಾರಾಜರಿಗೆ ಸರ್ಕಾರಿ ವಿಷಯಗಳಲ್ಲಿ ತಮ್ಮ ಪ್ರಜೆಗಳ ಹಿತವನ್ನು ಬಿಟ್ಟು ಬೇರೆ ಬೇರೆ ರೀತಿಯ ಆಸಕ್ತಿ ಇಲ್ಲವೆಂದು ನಾನು ಹೇಳುವುದರಲ್ಲಿ ಉತ್ಪ್ರೇಕ್ಷೆಯ ಮಾತಿಲ್ಲವೆಂದು ನಿಮಗೆ ತಿಳಿದಿದೆ. ಈಚೆಗೆ ಚಕ್ರಾಧಿಪತ್ಯದ ನ್ಯಾಯ ವಿಧಾಯಕ ಮಂಡಲಿಯಲ್ಲಿ ಉಲ್ಲೇಖವಾದ ಕಾಳಿದಾಸ ಕವಿಯ ಸುಂದರ ಭಾವನೆಗಳನ್ನು ಸುತ್ತಿ ಎಂಬ ಸಂದೇಹವೇನೂ ಇಲ್ಲದೆ, ನಾವು ಮಹಾರಾಜರಿಗೆ ಅನ್ವಯಿಸಬಹುದಾಗಿದೆ" ಎಂದು ತಿಳಿಸಿದರು

೪.೧. ೧೯೦೦ ರಿಂದ ನ್ಯಾಯವಿಧಾಯಕ ಸಭೆ ಹಾಗೂ ದಲಿತ ಜನಾಂಗದ ಅಭಿವೃದ್ಧಿ

೧. ಜನರು ತಮ್ಮನ್ನು ಪ್ರತಿನಿಧಿಸಲು ಅರ್ಹರಾದ ಸದಸ್ಯರ ಮೂಲಕ ತಮ್ಮ ಆಸೆ, ಆಕಾಂಕ್ಷೆಗಳನ್ನು ಸರ್ಕಾರದ ಮುಂದಿಡಿಸಲು ಈ ಮಂಡಳಿ ನೆರವಾಗುವುದು.

೨. ಮೂವರು ಸದಸ್ಯರ ಕಾರ್ಯನಿರ್ವಾಹಕ ಮಂಡಳಿಯಲ್ಲಿ ಸಾಧ್ಯವಿರುವುದಕ್ಕಿಂತ ಹೆಚ್ಚು ಸಂಖ್ಯೆಯ ಸಮರ್ಥ ಅಧಿಕಾರೇತರ ಹಾಗೂ ಅಧಿಕಾರಿ ಸದಸ್ಯರ ಸಮಾಲೋಚನೆಯ ಪ್ರಯೋಜನವನ್ನು ವಿವಿಧ ಅಭಿಪ್ರಾಯಗಳನ್ನೂ ಉದ್ದೇಶಿತ ಶಾಸನ ಕ್ರಮಗಳ ಬಗ್ಗೆ ಮಂಡಳಿ ಒದಗಿಸುವುದು.

೩. ಕಾನೂನುಗಳನ್ನು ನಿಬಂಧನೆಗಳನ್ನು ಮಾಡುವುದರಲ್ಲಿ ಕಾರ್ಯರೂಪದ ಅನುಭವ ಹಾಗೂ ತಿಳುವಳಿಕೆಯಿಂದ ಅರ್ಹರಾದ ಅಧಿಕಾರಿಗಳು, ವಕೀಲರು ಅಥವಾ ಇತರರ ಸಹಾಯವನ್ನು ಪಡೆದುಕೊಳ್ಳುವುದು.

೪. ಪ್ರತಿಯೊಂದು ಕ್ರಮವನ್ನು ಚುನಾಯಿತ ಸಮಿತಿಗೆ ಒಪ್ಪಿಸುವುದರ ಮೂಲಕ ಅದರ ವಿವರಗಳ ಪರಿಶೀಲನೆಯನ್ನು ಸಾಧ್ಯಗೊಳಿಸಿ ಖಚಿತಪಡಿಸುವುದು.

೫. ಎಲ್ಲಕ್ಕಿಂತ ಹೆಚ್ಚಾಗಿ ಮಂಡಲಿಯು ಎಲ್ಲ ವಿಧಾಯಕ ಕ್ರಮಗಳನ್ನು ಎಲ್ಲ ದೃಷ್ಟಿಕೋನಗಳಿಂದಲೂ ಮುಕ್ತವಾಗಿ ಹಾಗೂ ಸ್ವತಂತ್ರವಾಗಿ ಚರ್ಚಿಸಲು ಅಗತ್ಯವಾದ ಪ್ರಚಾರವನ್ನು ಮಂಡಲಿ ಒದಗಿಸುವುದು.

ನ್ಯಾಯ ವಿಧಾಯಕ ಸಭೆಯಲ್ಲಿ ಕೆಲವು ಕೋಮುಗಳಿಗೆ ಮತ್ತು ಹಿತಾಸಕ್ತಿಗಳಿಗೆ ಪ್ರಾತಿನಿಧ್ಯವಿಲ್ಲವೆಂದು ಒಂದು ಟೀಕೆ ಇತ್ತು. "ಅತ್ಯಂತ ದಕ್ಷತೆಯುಳ್ಳ ರೀತಿಯ ಮಂಡಲಿಯ ರಚನೆ ಎಂದರೆ ಸಂಪೂರ್ಣವಾಗಿ ಅಥವಾ ಪ್ರಮುಖವಾಗಿ ಸಂಸ್ಥಾನದ ವಿವಿಧ ಕೋಮುಗಳ ಹಾಗೂ ಹಿತಾಸಕ್ತಿಗಳ ಪ್ರಾತಿನಿಧ್ಯವುಳ್ಳದೆಂದು ಅರ್ಥವಲ್ಲ. ಈ ರೀತಿಯಲ್ಲಿ ವ್ಯವಹಾರಿಕವಾದ ತೊಂದರೆಗಳು ಇರುವುದು ಕಂಡಿದೆ. ಒಂದು ಕಡೆ ತಮ್ಮ ಸಾಮರ್ಥ್ಯ ಮತ್ತು ಸಾಧನೆಗಳಿಂದ ಮತ್ತು ಇನ್ನೊಂದೆಡೆ ಜನರ ಭಾವನೆಗಳಿಗೆ ಸರಿಯಾದ ರೂಪ ಮತ್ತು ಅಭಿವ್ಯಕ್ತಿಗಳನ್ನೂ ಕೊಡಬಲ್ಲವರಾದ್ದರಿಂದ ಸರ್ಕಾರಕ್ಕೆ ಕಾಯ್ದೆ ರಚನೆಯಲ್ಲಿ ಸಹಾಯ ಮಾಡುವ ಅರ್ಹತೆಯುಳ್ಳ ವ್ಯಕ್ತಿಗಳನ್ನು ಆರಿಸಿಕೊಳ್ಳುವುದೇ ಉತ್ತಮವಾದ ರೀತಿ" ಎಂದು ದಿವಾನರು ಹೇಳಿದರು. "ಉದ್ದೇಶಿತ ಶಾಸನ ಕ್ರಮದಿಂದ ಪರಿಣಾಮಕ್ಕೊಳಗಾಗುವ ಹಿತಾಸಕ್ತಿಗಳು ಅಥವಾ ನಿರ್ದಿಷ್ಟ ಕೋಮುಗಳು ಚುನಾಯಿತ ಸಮಿತಿಯಲ್ಲಿ ಪ್ರಾತಿನಿಧ್ಯ ಪಡೆಯಲು ಈಗಾಗಲೇ ಅವಕಾಶ ಮಾಡಲಾಗಿದೆ. ಸಮಾಜ ಪ್ರಸ್ತುತ ಪರಿಸ್ಥಿತಿಯಲ್ಲಿ ಸರ್ಕಾರಿ ಸೇವಾವರ್ಗ ಹಾಗೂ ವಿಶೇಷವಾಗಿ ವಕೀಲ ವೃತ್ತಿ ಸೇರಿದಂತೆ ಕೆಲವು ಪ್ರಬುದ್ಧ ವೃತ್ತಿಗಳು ದೇಶದಲ್ಲಿ ಬಹುಭಾಗದ ಬುದ್ಧಿಮತ್ತೆ ಮತ್ತು ಸಾಮರ್ಥ್ಯವನ್ನು ಆಕರ್ಷಿಸುತ್ತವೆ. ಈ ಪರಿಸ್ಥಿತಿ ತುಂಬ ಬದಲಾಯಿಸುವ ತನಕ ಜನರ ಪ್ರಾತಿನಿಧ್ಯ ಪರಿಣಾಮಕಾರಿಯಾಗಿರಬೇಕಾದರೆ ಅದು ಈ ವರ್ಗಗಳನ್ನೇ ಆವಲಂಬಿಸಬೇಕು" ಎಂದೂ ದಿವಾನರು ಹೇಳಿದರು.[೪]

ಆಯವ್ಯಯದ ಮುಂಗಡ ಪತ್ರದ ಮೇಲೆ ಚರ್ಚೆ ನಡೆಸುವ ಮತ್ತು ಪ್ರಶ್ನೆ ಕೇಳುವ ಅಧಿಕಾರವನ್ನು ನ್ಯಾಯ ವಿಧಾಯಕ ಸಭೆಗೆ ಕೊಟ್ಟಿಲ್ಲವೆಂಬ ಟೀಕೆಗೆ ದಿವಾನರು ಜವಾಬು ಕೊಟ್ಟು, ಬ್ರಿಟಿಷ್ ಭಾರತದಲ್ಲಿ ನ್ಯಾಯವಿಧಾಯಕ ಮಂಡಳಿಗಳಿಗೆ ಅವು ಅಸ್ತಿತ್ವಕ್ಕೆ ಬಂದ ಕಾಲಾನಂತರದಲ್ಲಿ ಈ ಅಧಿಕಾರವನ್ನು ಕೊಡಲಾಯಿತೆಂದೂ ಮೈಸೂರಿನಂತಹ ದೇಶಿಯ ಸಂಸ್ಥಾನದಲ್ಲಿ ಬ್ರಿಟಿಷ್ ಭಾರತದ ಸರ್ಕಾರಕ್ಕಿಂತ ಹೆಚ್ಚು ಎಚ್ಚರಿಕೆಯಿಂದ ವರ್ತಿಸಬೇಕೆಂದೂ ತಿಳಿಸಿದರು. ಮೈಸೂರಿನಲ್ಲಿ ಈ ಅಧಿಕಾರಗಳನ್ನು ಕೊಡಲು ಅದೇ ಬಗೆಯ ಅವಶ್ಯಕತೆಯಿಲ್ಲವೆಂದೂ ಏಕೆಂದರೆ ಜನರ ಪ್ರತಿನಿಧಿಗಳು ಆಡಳಿತದ ಕ್ರಮಗಳ ಬಗ್ಗೆ ಹಾಗೂ ಪ್ರಜೆಗಳ ಕ್ಷೇಮಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಅರಿಕೆಗಳನ್ನು ಸಲ್ಲಿಸಿ ಸರ್ಕಾರದಿಂದ ಮಾಹಿತಿಯನ್ನು ಪಡೆದುಕೊಳ್ಳಲು ಸಂಸ್ಥಾನ ಈಗಾಗಲೇ ಪ್ರಜಾಪ್ರತಿನಿಧಿ ಸಭೆಯನ್ನು ಹೊಂದಿದೆಯೆಂದೂ ಅವರು ಹೇಳಿದರು. "ನ್ಯಾಯ ವಿಧಾಯಕ ಸಭೆಯೊಂದನ್ನು ರಚಿಸಿ, ಅಧಿಕಾರೇತರ ಸಾರ್ವಜನಿಕ ಅಭಿಪ್ರಾಯದ ಪ್ರತಿನಿಧಿಗಳನ್ನು ಅದಕ್ಕೆ ಸೇರಿಸುವ ಮೂಲಕ ಮಹಾರಾಜರು ತಮ್ಮ ಪ್ರಜೆಗಳ ಹಿತಚಿಂತನೆಯಲ್ಲಿ ತಮಗಿರುವ ಕಳಕಳಿಗೆ ಇನ್ನೂ ಒಂದು ರುಜುವಾತನ್ನು ನೀಡಿದ್ದಾರೆ. ಅದಕ್ಕನುಗುಣವಾಗಿ ನಾವು ನಮಗೆ ವಹಿಸಿರುವ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿ

ಮಹಾರಾಜರು ನ್ಯಾಯವಿಧಾಯಕ ಸಭೆಯ ರಚನೆಯಲ್ಲಿ ತೋರಿರುವ ಹೊಸ ರೀತಿಯನ್ನು ಸಮರ್ಥಿಸುವುದು ನಮಗೆ ಸೇರಿದ್ದು". ಮಾನ್ಯರೆ, ನಿಮ್ಮೆಲ್ಲರ ಸಹಾಯದೊಡನೆ ಈ ಸಭೆಯ ರಚನೆಯಿಂದ ಮಹಾರಾಜರು ಅದರಲಿಟ್ಟಿರುವ ನಿರೀಕ್ಷೆಗಳನ್ನು ಸಾರ್ಥಕಕ್ಕೆ ತರಲಾಗಿದೆ.

ನ್ಯಾಯವಿಧಾಯಕ ಸಭೆಯ ಕರ್ತವ್ಯವನ್ನು ಕಟ್ಟುನಿಟ್ಟಾಗಿ ಶಾಸನ ನಿರೂಪಣೆಗೆ ಸೀಮಿತಗೊಳಿಸಲಾಗಿತ್ತು. ಒಂದು ಮಸೂದೆಯನ್ನು ಮಂಡಿಸುವ ಅನುಮತಿಗಾಗಿ ಅಥವಾ ಮುಂಚೆಯೇ ಮಂಡನೆಯಾಗಿದ್ದ ಮಸೂದೆಗೆ ಸಂಬಂಧಿಸಿದ, ಸೂಚನೆಯನ್ನಲ್ಲದೆ ಬೇರೆ ಯಾವ ನಿರ್ಣಯವನ್ನೂ ತೆಗೆದುಕೊಳ್ಳದಂತೆ ಸಭೆಯನ್ನು ನಿಷೇದಿಸಲಾಗಿತ್ತು. ಈ ರೀತಿ ರಚನೆಯಾದ ಮೈಸೂರು ನ್ಯಾಯ ವಿಧಾಯಕ ಸಭೆಗೆ ಬ್ರಿಟಿಷ್ ಭಾರತದ ಮಂಡಳಿಗಳ ಪ್ರಾರಂಭ ಹಂತಗಳಲ್ಲಿ ಲಾರ್ಡ್ ಮೆಕೆಡಾನೆಲ್ ನೀಡಿದ ವರ್ಣನೆ ಸರಿಯಾಗಿ ಅನ್ವಯಿಸುತ್ತಿತ್ತು. "ಅದು ಕಾಯ್ದೆಗಳನ್ನು ರೂಪಿಸಲು ಉದ್ದೇಶಿಸಲಾದ ಸಮಿತಿಯಾಗಿತ್ತು. ಸರ್ಕಾರದ ಕಾರ್ಯಾಂಗವು ಶಾಸನ ನಿರೂಪಣೆಯಲ್ಲಿ ಆ ಸಮಿತಿಯ ಮೂಲಕ ಸಲಹೆ ಮತ್ತು ಸಹಾಯವನ್ನು ಪಡೆದುಕೊಳ್ಳತ್ತಿತ್ತು. ಕಾನೂನು ರೂಪಿಸುವ ಪ್ರತಿಯೊಂದು ಹಂತದಲ್ಲೂ ಸಾರ್ವಜನಿಕರಿಗೆ ಖಚಿತವಾಗಿ ಪೂರ್ಣ ಪ್ರಚಾರ ದೊರಕಿತು. ಮಂಡಲಿಯು ತತ್ಕಾಲದಲ್ಲಿ ತನ್ನ ಮುಂದಿದ್ದ ಶಾಸನ ಕ್ರಮವನ್ನು ಬಿಟ್ಟು ಬೇರೆ ಯಾವ ವಿಷಯವನ್ನೂ ಚರ್ಚಿಸುವ ಸಭೆಯಾಗಿರಲಿಲ್ಲ. ಕುಂದುಕೊರತೆಗಳ ಪರಿಶೀಲನೆ, ಮಾಹಿತಿಗಳನ್ನು ತರಿಸುವುದು ಅಥವಾ ಕಾರ್ಯಾಂಗದ ವರ್ತನೆಯ ಪರೀಕ್ಷೆ – ಅದಕ್ಕೆ ಸೇರಲಿಲ್ಲ. ಚರ್ಚೆಗೆ ಬಂದಿದ್ದ ನಿರ್ದಿಷ್ಟ ಕ್ರಮಕ್ಕೆ ಸಂಬಂಧಪಟ್ಟಿಲ್ಲದ ಆಡಳಿತಾತ್ಮಕ ಕಾರ್ಯಗಳನ್ನು ಅದು ಸಮರ್ಥಿಸುವುದಾಗಲಿ ಖಂಡಿಸುವುದಾಗಲಿ ಅದಕ್ಕೆ ಸೇರಿರಲಿಲ್ಲ."[೫]

೪.೨. ನ್ಯಾಯವಿಧಾಯಕ ಸಭೆಯಲ್ಲಿ ದಲಿತ ಜನಾಂಗದ ಕಲ್ಯಾಣಕ್ಕಾಗಿನ ಪ್ರಮುಖ ನಿರ್ಣಯಗಳು

೧೯೦೭ರ ಮೈಸೂರು ನ್ಯಾಯ ವಿಧಾಯಕ ಸಭೆ ನಿಬಂಧನೆಯಂತೆ ಸಭೆಯು ಒಬ್ಬ ಅಧ್ಯಕ್ಷರನ್ನೂ ಇಬ್ಬರು ಪದನಿಮಿತ್ತ ಸದಸ್ಯರನ್ನೂ ಐದನೇ ಎರಡು ಭಾಗಕ್ಕೆ ಕಡಿಮೆ ಇಲ್ಲದಂತೆ, ಹತ್ತಕ್ಕೆ ಕಡಿಮೆಯಾಗದೆ ಮತ್ತು ೧೫ಕ್ಕೆ ಹೆಚ್ಚಾಗದಂತೆ, ಸರ್ಕಾರದಿಂದ ನಾಮಕರಣವಾದ ಅಧಿಕಾರೇತರ ಸದಸ್ಯರನ್ನು ಹೊಂದಿತ್ತು. ೧೯೦೭ರ ಜುಲೈನಲ್ಲಿ ಸಭೆಯು ಮೊದಲ ಸಲ ಸಮಾವೇಶಗೊಂಡಾಗ ಅದರಲ್ಲಿ ೫ ಅಧಿಕಾರೇತರ ಹಾಗೂ ೫ ಅಧಿಕಾರಿ ಸದಸ್ಯರಿದ್ದರು. ದಿವಾನರು ಸಭೆಯ ಪದನಿಮಿತ್ತ ಅಧ್ಯಕ್ಷರಾಗಿದ್ದರು. ಕಾರ್ಯ ನಿರ್ವಾಹಕರ ಮಂಡಳಿಯ ಸದಸ್ಯರು ಪದನಿಮಿತ್ತ ಸದಸ್ಯರಾಗಿದ್ದರು.

ಎಲ್ಲಾ ಅಥವಾ ಯಾರೇ ಅಧಿಕಾರೇತರ ಸದಸ್ಯರನ್ನು ನಾಮಕರಣ ಮಾಡಲು ಆಯ್ಕೆಗೆ ಸಂಬಂಧಿಸಿದ ನಿಯಮಗಳನ್ನು ಸರ್ಕಾರ ರೂಪಿಸಬೇಕಾಗಿತ್ತು. ನಾಮಕರಣವಾದ ಪ್ರತಿ ಸದಸ್ಯನಿಗೂ ಎರಡು ವರ್ಷದ ಸದಸ್ಯತ್ವವಿತ್ತು.

ಒಬ್ಬ ಸದಸ್ಯ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದಾಗಿತ್ತು. ಸದಸ್ಯರೊಬ್ಬರು ನೈತಿಕ ಭ್ರಷ್ಟತೆಗಾಗಿ ಶಿಕ್ಷೆಗೊಳಗಾದಾಗ ಅಥವಾ ದಿವಾಳಿಯಾದಾಗ ಅಥವಾ ದಿವಾಳಿತನದ ಕಾರಣಕ್ಕಾಗಿ ತನ್ನ ಸಾಲಗಳನ್ನು ತೀರಿಸುವ ಹೊಣೆಯಿಂದ ಬಿಡಿಸಲ್ಪಟ್ಟಾಗ, ಅವನ ಸ್ಥಾನವು ಖಾಲಿಯಾಗುತ್ತಿತ್ತು. ಅಧಿಕಾರಿ ಸದಸ್ಯರು ನಿವೃತ್ತಿ ಹೊಂದಿದಾಗ ಅಥವಾ ವಜಾ ಮಾಡಲ್ಪಟ್ಟಾಗ ಸ್ಥಾನವನ್ನು ಖಾಲಿ ಮಾಡುತ್ತಿದ್ದರು. ಸದಸ್ಯನೊಬ್ಬನು ಸಭೆ ಸೇರಿದಾಗ ಮೂರು ಭಾರಿ ಅನುಕ್ರಮವಾಗಿ ಗೈರು ಹಾಜರಾದರೆ ಅವನ ಸ್ಥಾನ ಖಾಲಿಯಾಯಿತೆಂದು ಸರ್ಕಾರ ಘೋಷಿಸ ಬಹುದಾಗಿತ್ತು.

ದಿವಾನರ ಗೈರುಹಾಜರಿಯಲ್ಲಿ ಕಾರ್ಯ ನಿರ್ವಾಕ ಮಂಡಲಿಯ ಹಿರಿಯ ಸದಸ್ಯರು, ಅಥವಾ ಒಬ್ಬ ಸದಸ್ಯರಿದ್ದಲ್ಲಿ ಅವರು, ನ್ಯಾಯ ವಿಧಾಯಕ ಸಭೆಯ ಸಮಾವೇಶಗಳಲ್ಲಿ ಅಧ್ಯಕ್ಷತೆ ವಹಿಸುತ್ತಿದ್ದರು. ಸಭೆಯು ತನ್ನ ಕರ್ತವ್ಯಗಳನ್ನು ನಿರ್ವಹಿಸಬೇಕಿದ್ದಲ್ಲಿ, ದಿವಾನರು ಅಥವಾ ಕಾರ್ಯ ನಿರ್ವಾಹಕ ಮಂಡಲಿಯ ಒಬ್ಬ ಸದಸ್ಯರು ಮತ್ತು ಸಭೆಯ ಇಡೀ ಸದಸ್ಯ ಬಲದಲ್ಲಿ ಅರ್ಧಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಹಾಜರಾಗಿರಬೇಕಿತ್ತು. ನಿರ್ಧಾರಕ್ಕಾಗಿ ಮತಗಳು ಸಮಾನವಾಗಿ ಬಂದಾಗ ದಿವಾನರು ಅಥವಾ ತತ್ಕಾಲದಲ್ಲಿ ಅಧ್ಯಕ್ಷತೆಯಲ್ಲಿದ್ದ ಕಾರ್ಯ ನಿರ್ವಾಹಕದ ಸದಸ್ಯರು ಎರಡು ಓಟುಗಳನ್ನು ಅಥವಾ ಒಂದು ನಿರ್ಣಾಯಕ ಓಟನ್ನು ಹೊಂದಿರುತ್ತಿದ್ದರು. ಸಮಾವೇಶ ಕಾಲ ಮತ್ತು ಸ್ಥಳವನ್ನು ದಿವಾನರು ತೀರ್ಮಾನಿಸುತ್ತಿದ್ದರು. ಮತ್ತು ಸಭೆಯನ್ನು ಆಗಿಂದಾಗ್ಗೆ ಮುಂದಕ್ಕೆ ಹಾಕುತ್ತಿದರು. ತಮ್ಮ ಗೈರುಹಾಜರಿಯಲ್ಲಿ ಆಗ ಅಧ್ಯಕ್ಷತೆ ವಹಿಸಿದ್ದ ಕಾರ್ಯ ನಿರ್ವಾಹಕ ಮಂಡಲಿ ಸದಸ್ಯರಿಗೆ ಸಭೆಯನ್ನು ಹಾಗೆ ಮುಂದೂಡುವ ಅಧಿಕಾರವನ್ನು ದಿವಾನರು ವಹಿಸಿಕೊಡುತ್ತಿದ್ದರು.[೬]

ನ್ಯಾಯವಿಧಾಯಕ ಸಭೆಯು ತನ್ನ ಸಮಾವೇಶಗಳಲ್ಲಿ ಕಾರ್ಯಕಲಾಪಗಳು ನಡೆಯಲು ನಿಯಮಗಳನ್ನು ರೂಪಿಸುತ್ತಿತ್ತು. ಆದರೆ ಇಂತಹ ಎಲ್ಲಾ ಅಥವಾ ಯಾವುದೇ ನಿರ್ದಿಷ್ಟ ನಿಯಮವನ್ನು ಸರ್ಕಾರ ತಿರಸ್ಕರಿಸಬಹುದಾಗಿತ್ತು. ನ್ಯಾಯವಿಧಾಯಕ ಸದಸ್ಯ ಬಲವನ್ನು ಕನಿಷ್ಠ ೧೫ ಮತ್ತು ಗರಿಷ್ಠ ೨೧ ಎಂಬುದಾಗಿ ೧೯೧೪ರಲ್ಲಿ ನಿರ್ಧರಿಸಲಾಯಿತು. ಕೆಲವು ಅಧಿಕಾರೇತರ ಸ್ಥಾನಗಳನ್ನು ತುಂಬಲು ಒಂದು ಬಗೆಯ ಪರೋಕ್ಷ ಚುನಾವಣೆಯನ್ನು ಜಾರಿಗೆ ತರಲಾಯಿತು. ಪ್ರತಿನಿಧಿಸಭೆಯು ಶಿಫಾರಸ್ಸು ಮಾಡಬಹುದಾದ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ಎರಡರಿಂದ ನಾಲ್ಕಕ್ಕೇರಿಸಿ, ನಾಲ್ಕು ಸ್ಥಾನಗಳಿಗೆ ಜಿಲ್ಲೆಗಳು ಚುನಾವಣೆ ನಡೆಸಬಹುದೆಂದಾಯಿತು. ಈ ಚುನಾವಣೆಯ ಉದ್ದೇಶಕ್ಕಾಗಿ ಸಂಸ್ಥಾನದ ಎಂಟು ಜಿಲ್ಲೆಗಳನ್ನು ತಲಾ ಎರಡು ಜಿಲ್ಲೆಗಳ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಯಿತು. ಪ್ರತಿ ಗುಂಪಿನ ಪ್ರತಿನಿಧಿ ಸಭಾ ಕ್ಷೇತ್ರಗಳು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳು ತಲಾ ಒಬ್ಬ ಸದಸ್ಯನನ್ನು ಚುನಾಯಿಸುತ್ತಿದ್ದವು. ಎಲ್ಲ ಜಿಲ್ಲೆಗಳಲ್ಲಿ

ಒಟ್ಟು ೧೧,೨೫೦ ಚುನಾಯಿತರಿದ್ದರು. ಹೀಗೆ ನ್ಯಾಯವಿಧಾಯಕ ಸಭೆಯು ತಮ್ಮ ಚುನಾವಣಾ ಕ್ಷೇತ್ರಗಳಿಂದ ಆರಿಸಲ್ಪಟ್ಟ ಎಂಟು ಮಂದಿ ಚುನಾಯಿತ ಸದಸ್ಯರನ್ನು ಹೊಂದಿತ್ತು. ಸರ್ಕಾರದ ನಾಮಕರಣ ಪ್ರಕ್ರಿಯೆ ಔಪಚಾರಿಕವಾಯಿತು.

ಚುನಾವಣೆಗೆ ನಿಲ್ಲುವ ಅಭ್ಯರ್ಥಿಗಳಿಗೆ ಆಸ್ತಿ ಮತ್ತು ಶಿಕ್ಷಣಗಳ ಬಗ್ಗೆ ತುಂಬ ಹೆಚ್ಚಿನ ಅರ್ಹತೆಗಳನ್ನು ವಿಧಿಸಲಾಯಿತು. ಮುನ್ನೂರು ರೂಪಾಯಿ ಭೂಕಂದಾಯ ಅಥವಾ ೨೫ ರೂಪಾಯಿ ಮೊಹತರ್ಫ ತೆರಿಗೆ ಕೊಡುವವರು ಅಥವಾ ೫೦೦ ರೂಪಾಯಿ 'ಬೆರಿಜ್' ಹೊಂದಿರುವ ಇನಾಂ ಗ್ರಾಮಗಳನ್ನು ಹೊಂದಿರುವ ಇನಾಂದಾರರು ನ್ಯಾಯ ವಿಧಾಯಕ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲಾಗುವಷ್ಟು ಇಂಗ್ಲಿಷ್ ಭಾಷೆಯಲ್ಲಿ ಪರಿಶ್ರಮವನ್ನು ಹೊಂದಿದ್ದಲ್ಲಿ ಅಂಥವರು ಅಭ್ಯರ್ಥಿಗಳಾಗಲು ಅರ್ಹರಾಗಿದ್ದರು. ಭಾರತೀಯ ಅಥವಾ ಇಂಗ್ಲೆಂಡಿನ ವಿಶ್ವವಿದ್ಯಾಲಯಗಳ ಪದವೀಧರರಾದವರು ಹತ್ತು ವರ್ಷಗಳ ನಂತರ ಅಭ್ಯರ್ಥಿಗಳಾಗಬಹುದಾಗಿತ್ತು.

ನ್ಯಾಯ ವಿಧಾಯಕ ಸಭೆಯ ಸದಸ್ಯತ್ವದ ಅವಧಿಯನ್ನು ೩ ವರ್ಷಗಳಿಗೆ ಹೆಚ್ಚಿಸಬೇಕೆಂದು ಪ್ರತಿನಿಧಿಸಭೆ ೧೯೧೬ರಲ್ಲಿ ಶಿಫಾರಸ್ಸು ಮಾಡಿತು. ಅದನ್ನು ೧೯೧೭ರಲ್ಲಿ ಜಾರಿ ಮಾಡಲಾಯಿತು. ಬಜೆಟ್‌ನ ಚರ್ಚೆಗಾಗಿ ಹಣಕಾಸು ಸಮಿತಿಯೊಂದನ್ನು ೧೯೧೮ರಲ್ಲಿ ರಚಿಸಿ ಅದಕ್ಕೆ ನ್ಯಾಯ ವಿಧಾಯಕ ಸಭೆಯು ಚುನಾಯಿತ ಅಧಿಕಾರೇತರ ಸದಸ್ಯರೊಬ್ಬರನ್ನು ಕಳಿಸಬೇಕೆಂದು ಅವಕಾಶ ಮಾಡಲಾಯಿತು.[೭]

೪.೩. ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಜಾರಿಗೊಳಿಸಿದ ಮಸೂದೆಗಳು

ನ್ಯಾಯ ವಿಧಾಯಕ ಸಭೆಯನ್ನು ಕಾನೂನುಗಳು ಮತ್ತು ನಿಬಂಧನೆಗಳನ್ನು ಮಾಡುವ ಉದ್ದೇಶಕ್ಕಾಗಿ ೧೯೦೭ರಲ್ಲಿ ಸ್ಥಾಪಿಸಲಾಯಿತು. ದಿವಾನರಿಂದ ಮುಂಚಿತವಾಗಿಯೇ ಬರಹದಲ್ಲಿ ಅನುಮತಿ ಇಲ್ಲದೆ ಯಾವ ಮಸೂದೆಯನ್ನೂ ನ್ಯಾಯ ವಿಧಾಯಕ ಸಭೆಯಲ್ಲಿ ಮಂಡಿಸುವಂತಿರಲಿಲ್ಲ. ಮಂಡಿಸುವ ಮುನ್ನ ಸಭೆಯ ಅನುಮತಿಯನ್ನು ಪಡೆಯಬೇಕಾಗಿತ್ತು. ಮಸೂದೆಗಳ ಪರಿಶೀಲನೆ ಮತ್ತು ಅಂಗೀಕಾರದ ಹೊರತಾಗಿ ಬೇರಾವ ಕಲಾಪವನ್ನೂ ಸಭೆ ನಡೆಸುವಂತಿರಲಿಲ್ಲ. ಯಾವೊಂದು ಮಸೂದೆಯ ಮಂಡನೆ, ಪರಿಶೀಲನೆ ಅಥವಾ ಮುಂಚೆಯೇ ಮಂಡನೆಯಾಗಿದ್ದ ಮಸೂದೆಯ ಅಂಗೀಕಾರಕ್ಕೆ ಹೊರತಾದ ಬೇರೆ ಯಾವ ಸೂಚನೆಯನ್ನು ಯಾವ ಸದಸ್ಯರೂ ತರುವಂತಿರಲಿಲ್ಲ. ಮಸೂದೆಗಳಿಗೆ ಸಂಬಂಧಪಡದ ನಿರ್ಣಯಗಳನ್ನು ನ್ಯಾಯ ವಿಧಾಯಕ ಸಭೆ ಪರಿಶೀಲಿಸುವಂತೆಯೂ ಇರಲಿಲ್ಲ. ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದ ಯಾವ ಕ್ರಮಗಳನ್ನು ಸಭೆ ಪರಿಶೀಲಿಸುವಂತಿರಲಿಲ್ಲ.

ಅ) ಮೈಸೂರಿನ ರಾಜಮನೆತನ;

ಆ) ಸಾರ್ವಭೌಮ ಸರ್ಕಾರದೊಡನೆ ಮಹಾರಾಜರ ಸಂಬಂಧ;

ಇ) ಮಹಾರಾಜರು ಸಾರ್ವಭೌಮ ಸರ್ಕಾರದೊಡನೆ ಮಾಡಿಕೊಂಡಿರುವ ಅಥವಾ ಮುಂದೆ ಮಾಡಿಕೊಳ್ಳಬಹುದಾದ ಒಪ್ಪಂದಗಳು ಮತ್ತು ಒಡಂಬಡಿಕೆಗಳಿಗೆ ಒಳಪಟ್ಟ ಅಂಶಗಳು;

ಈ) ಅಪರಾಧಿಗಳ ಪರಸ್ಪರ ವಿನಿಮಯ;

ಉ) ಐರೋಪ್ಯರಾದ ಅಲೆಮಾರಿಗಳು;

ಊ) ಐರೋಪ್ಯ ಬ್ರಿಟಿಷ್ ಪ್ರಜೆಗಳು;

ಋ) ಅಂಚೆ ಕಛೇರಿ, ತಂತಿ ಹಾಗೂ ರೈಲ್ವೆಗಳು;

ಎ) ಮೈಸೂರು ಸಶಸ್ತ್ರಬಲಗಳು;

ಏ) ಮಹಾರಾಜರು ತಮ್ಮ ಸರ್ಕಾರದ ಪರಿಶೀಲನೆಗೆಂದು ಆಗಿಂದಾಗ್ಗೆ ವಿಶೇಷವಾಗಿ ಮೀಸಲಿರಿಸುವ ಇತರ ವಿಷಯಗಳು.

ನ್ಯಾಯ ವಿಧಾಯಕ ಸಭೆಯು ಯಾವುದಾದರೂ ಕಾಯಿದೆ ಅಥವಾ ನಿಬಂಧನೆಯನ್ನು ಅಂಗೀಕರಿಸಿದಾಗ ಅದನ್ನು ದಿವಾನರ ಮೂಲಕ ಶ್ರೀಮನ್ಮಹಾರಾಜರಿಗೆ ಅವರ ಒಪ್ಪಿಗೆಗಾಗಿ ಕಳಿಸಬೇಕಾಗಿತ್ತು. ಮಹಾರಾಜರ ಅನುಮತಿಯ ನಂತರ ಅದು ಸಕ್ರಮವಾಗುತ್ತಿತ್ತು.

ನ್ಯಾಯ ವಿಧಾಯಕ ಸಭೆಯ ವ್ಯಾಪ್ತಿಯಿಂದ ಹೊರಗಿಡಲಾದ ವಿಷಯಗಳ ಮೇಲೆ ಯಾವುದೇ ನಿಬಂಧನೆಯನ್ನು ಸರ್ಕಾರ ಮಾಡಬಹುದಿತ್ತು. ಸಭೆಯ ವ್ಯಾಪ್ತಿಗೆ ಸೇರಿದ ವಿಷಯಗಳಲ್ಲೂ ಜರೂರು ಅವಶ್ಯಕತೆ ಇರುವಾಗ ಸರ್ಕಾರ ನಿಬಂಧನೆಗಳನ್ನು ಮಾಡಬಹುದಾಗಿತ್ತು. ಅಂತಹ ನಿಬಂಧನೆ ಆರು ತಿಂಗಳ ಕಾಲ ಜಾರಿಯಲ್ಲಿರಬಹುದಾಗಿತ್ತು. ಮಸೂದೆಯನ್ನು ಮಂಡಿಸಿದ ಅಥವಾ ಅಂಗೀಕರಿಸಿದ ದಿನ ಅಧಿಕಾರೇತರ ಸದಸ್ಯರ ಪ್ರಮಾಣ ಪೂರ್ಣವಾಗಿರಲಿಲ್ಲ ವೆಂಬ ಕಾರಣಕ್ಕಾಗಿ ಒಂದು ಕಾನೂನು ಅಥವಾ ನಿಬಂಧನೆಯು ಅಸಿಂಧುವೆಂದು ಪರಿಗಣಿಸಲಾಗುತ್ತಿರಲಿಲ್ಲ.

ಇದರಿಂದ, ನ್ಯಾಯ ವಿಧಾಯಕ ಸಭೆಯನ್ನು ರಚಿಸಿದಾಗ ಅದರ ಕರ್ತವ್ಯಗಳು ಪರಿಮಿತವಾಗಿದ್ದುವೆಂದು ತಿಳಿಯಬಹುದಾಗಿದೆ. ಅದು ಸಮಾಲೋಚನೆಗಳ ಸಭೆಯಾಗಿರಲಿಲ್ಲ. ಅದು ಕುಂದುಕೊರತೆಗಳನ್ನು ವಿಚಾರಿಸುವಂತಿರಲಿಲ್ಲ. ಮಾಹಿತಿಗಳನ್ನು ತರಿಸಲು ಆಗುತ್ತಿರಲಿಲ್ಲ. ಅಥವಾ ಕಾರ್ಯಾಂಗದ ವರ್ತನೆಯನ್ನು ವಿಮರ್ಶಿಸಲಾಗುತ್ತಿರಲಿಲ್ಲ. ಆಡಳಿತದ ಕಾರ್ಯಗಳನ್ನು ಅದು ಟೀಕಿಸುವುದಾಗುತ್ತಿರಲಿಲ್ಲ. ಆದರೆ ಹಂತ ಹಂತವಾಗಿ ಅದು ಇತರ ಅಧಿಕಾರಗಳನ್ನು ಪಡೆದುಕೊಂಡಿತು.[೮]

೧೯೧೪ರಲ್ಲಿ ನ್ಯಾಯ ವಿಧಾಯಕ ಸಭೆಯ ಅಧಿಕಾರಗಳನ್ನು ವಿಸ್ತರಿಸಲಾಯಿತು. ಸಾರ್ವಜನಿಕ ಆಸಕ್ತಿಯ ಅಥವಾ ಪ್ರಾಮುಖ್ಯದ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವ ಹಕ್ಕನ್ನು ಸಭೆಗೆ

ಕೊಡಲಾಯಿತು. ಬಜೆಟ್‌ನ್ನು ಚರ್ಚಿಸುವ ಅಧಿಕಾರವನ್ನು ಸಭೆ ಪಡೆಯಿತು. ಆದರೆ ಅದರ ಮೇಲೆ ಓಟು ಮಾಡುವ ಅಧಿಕಾರ ಸಭೆಗೆ ಇರಲಿಲ್ಲ. ಪ್ರಶ್ನೆಗಳ ಸಂಖ್ಯೆಯನ್ನು ಪ್ರತಿ ಅಧಿವೇಶನಕ್ಕೆ ೧೨ ಎಂದು ಸೀಮಿತಗೊಳಿಸಲಾಯಿತು. ಅಧಿಕಾರೇತರ ಸದಸ್ಯರು ನೀಡಿದ ಬೆಂಬಲ ಮತ್ತು ಇತರ ಪರಿಗಣನೆಗಳ ಆಧಾರದ ಮೇಲೆ ಉತ್ತರ ಪಡೆಯಬೇಕಾದ ಪ್ರಶ್ನೆಗಳನ್ನು ಆಯ್ಕೆ ಮಾಡಲಾಗುತ್ತಿತ್ತು.

ಪ್ರಶ್ನೆಗಳನ್ನು ಕೇಳುವ ಹಕ್ಕನ್ನು ಸದಸ್ಯರಿಗೆ ಕೊಟ್ಟರೂ ಅವರು ಉಪಪ್ರಶ್ನೆಗಳನ್ನು ಕೇಳುವಂತಿರಲಿಲ್ಲ. ನ್ಯಾಯ ವಿಧಾಯಕ ಸಭೆಯ ಉಪಪ್ರಶ್ನೆಗಳಿಗೆ ಅವಕಾಶವಿರಬೇಕೆಂದು ಪ್ರತಿನಿಧಿ ಸಭೆಯ ಸದಸ್ಯರು ಕೇಳಿದರು. ನ್ಯಾಯ ವಿಧಾಯಕ ಸದಸ್ಯರು ಉಪಪ್ರಶ್ನೆಗಳನ್ನು ಕೇಳಬಹುದೆಂಬ ಹಕ್ಕನ್ನು ೧೯೧೪ರಲ್ಲಿ ಒದಗಿಸಲಾಯಿತು. ನ್ಯಾಯ ವಿಧಾಯಕ ಸಭೆಯಲ್ಲಿ ಕೇಳಲಾಗುವ ಪ್ರಶ್ನೆಗಳ ಸಂಖ್ಯೆಯನ್ನು ೨೦ಕ್ಕೆ ಹೆಚ್ಚಿಸಬೇಕೆಂದು ಪ್ರತಿನಿಧಿ ಸಭೆಯ ಸದಸ್ಯರು ಒತ್ತಾಯಪಡಿಸಿದರು. ಸರ್ಕಾರ ಕೋರಿಕೆಗೆ ಅನುಮತಿ ನೀಡಿತು.

ನ್ಯಾಯ ವಿಧಾಯಕ ಸಭೆ ಚಾಲ್ತಿಯಲ್ಲಿರುವ ಅವಧಿಯನ್ನು ೨ ರಿಂದ ೩ ವರ್ಷಕ್ಕೆ ಹೆಚ್ಚಿಸಬೇಕೆಂದು ೧೯೧೬ರಲ್ಲಿ ಪ್ರತಿನಿಧಿ ಸಭೆ ಶಿಫಾರಸು ಮಾಡಿತು. ಅದೇ ರೀತಿ ೧೯೧೭ರಲ್ಲಿ ಸರ್ಕಾರ ಆದೇಶ ನೀಡಿತು. ಬಜೆಟ್ ಸಲಹೆಗಳ ಪರಿಶೀಲನೆಯಲ್ಲಿ ಇನ್ನಷ್ಟು ಸೌಕರ್ಯಗಳನ್ನು ಅದೇ ವರ್ಷ ಒದಗಿಸಲಾಯಿತು.

೧೯೧೯ರಲ್ಲಿ ನ್ಯಾಯ ವಿಧಾಯಕ ಸಭೆಯ ಅಧಿಕಾರಗಳನ್ನು ವಿಸ್ತರಿಸಲಾಯಿತು. ನ್ಯಾಯ ವಿಧಾಯಕ ಸಭೆಯ ವ್ಯಾಪ್ತಿಯಿಂದ ಹೊರತುಪಡಿಸಿದ ವಿಷಯಗಳನ್ನು ಬಿಟ್ಟು ಆಡಳಿತದ ಸಾಮಾನ್ಯ ಆಸಕ್ತಿಯ ವಿಷಯಗಳ ಮೇಲೆ ನಿರ್ಣಯಗಳನ್ನು ಮಂಡಿಸುವ ಅಧಿಕಾರ ಸದಸ್ಯರಿಗೆ ಲಭಿಸಿತ್ತು. ಮಂಡಿಸಲ್ಪಟ್ಟ ನಿರ್ಣಯಗಳ ಸಂಖ್ಯೆ ಹಾಗೂ ಮಂಡಿಸಿದ ಸದಸ್ಯರ ಹೆಸರುಗಳನ್ನು ಅನುಬಂಧ–೭ರಲ್ಲಿ ಕೊಡಲಾಗಿದೆ. ಆಡಳಿತದ ವಿಷಯಗಳನ್ನು ಚರ್ಚಿಸುವ ಮತ್ತು ಪ್ರಶ್ನೆಗಳು ಹಾಗೂ ಉಪಪ್ರಶ್ನೆಗಳ ಮೂಲಕ ಸರ್ಕಾರದ ಕಾರ್ಯಗಳು ಹಾಗೂ ಕ್ರಮಗಳನ್ನು ಕುರಿತು ಮಾಹಿತಿಗಾಗಿ ಕೇಳುವ ಮುಖ್ಯ ಹಕ್ಕನ್ನು ಚಲಾಯಿಸಿ ಸರ್ಕಾರದ ವರ್ತನೆಯನ್ನು ಪರಾಮರ್ಶಿಸುವ ಅಧಿಕಾರ ನ್ಯಾಯ ವಿಧಾಯಕ ಸಭೆಗೆ ಒದಗಿತು.[೯]

ಆರ್ಸೆನಿಕ್ ಪಡೆದಿರುವ ಮತ್ತು ಮಾರುವುದರ ನಿಯಂತ್ರಣ ಮಸೂದೆ

ವೈದ್ಯರು ಮತ್ತು ಔಷಧ ಮಾರಾಟಗಾರರು ವಿಷ ವಸ್ತುಗಳನ್ನು ಮಾರುವುದರ ಮತ್ತು ಬಳಸುವುದರ ಮೇಲಿನ ಹತೋಟಿಗಾಗಿ ಒಂದು ಮಸೂದೆಯನ್ನು ೧೯೦೯ರಲ್ಲಿ ಶ್ರೀ ಕೆ.ಪಿ ಪುಟ್ಟಣ್ಣ ಚೆಟ್ಟಿ ಮಂಡಿಸಿದರು. ಅದು ಬ್ರಿಟಿಷ್ ಭಾರತದಲ್ಲಿನ ಅದೇ ಉದ್ದೇಶದ ಮಸೂದೆಯ ಮಾದರಿಯಲ್ಲಿತ್ತು. ಒಬ್ಬ ವೈದ್ಯ ತನ್ನ ಕೈಚೀಲದಲ್ಲಿ ಸಣ್ಣ ಪ್ರಮಾಣದಲ್ಲಿ ವಿಷದ ಔಷಧಿಗಳನ್ನು

ಕೊಂಡೊಯ್ದರೆ ಅದು ಅಕ್ರಮವೆನಿಸುತ್ತಿರಲಿಲ್ಲ. ಸಭೆಯು ೧-೧೨-೧೯೧೦ರಂದು ಮಸೂದೆಯನ್ನು ಮತ್ತೆ ಕೈಗೆತ್ತಿಕೊಂಡಿತು. ಸ್ವಲ್ಪ ಚರ್ಚೆಯ ನಂತರ ಮಸೂದೆ ಅಂಗಿಕೃತವಾಯಿತು.

ಬಾಲಕರ ಧೂಮಪಾನ ನಿವಾರಣೆ ಮಸೂದೆ

ಸಣ್ಣ ವಯಸ್ಸಿನವರು ದೂಮಪಾನ ಮಾಡುವುದನ್ನು ತಡೆಯಲು ಒಂದು ಮಸೂದೆಯನ್ನು ೧-೧೨-೧೯೧೦ರಂದು ಶ್ರೀ ಹೆಚ್.ವಿ. ನಂಜುಂಡಯ್ಯ ಮಂಡಿಸಿದರು. ನಾಗರಿಕ ಸಮಾಜ ಎನಿಸಿಕೊಳ್ಳುವುದರಲ್ಲಿ ಬಾಲಕರು ಅಗ್ಗವಾಗಿ ಚುಟ್ಟಾ ಸಿಗರೇಟ್‌ಗಳನ್ನು ಸೇದುವ ಅಭ್ಯಾಸ ಹಬ್ಬುತಿದೆ. ಇದು ತುಂಬ ಸೇಡಿನ ಚಟ. ಮಸೂದೆಯು ವ್ಯಕ್ತಿ ಸ್ವಾತಂತ್ರವನ್ನು ಅನಗತ್ಯವಾಗಿ ಮೊಟಕು ಮಾಡುವುದೆಂದು ಅಥವಾ ಪೋಲಿಸರಿಗೆ ವಿಪರೀತ ಅಧಿಕಾರ ಕೊಡುವುದೆಂದು ಸರಿಯಲ್ಲ. ಸ್ವಾತಂತ್ರ್ಯವೆಂದರೆ ತಪ್ಪು ಮಾಡುವುದು ಅಥವ ಸಮಾಜದ ಹಿತಕ್ಕೆ ವಿರೋಧವಾದುದನ್ನು ಮಾಡುವುದು ಎಂದರ್ಥವಲ್ಲ. ಮುಂದುವರಿದ ದೇಶದಲ್ಲೂ ಸಹ ಸಮಾಜವಾದಿ ವಿಚಾರಗಳ ಸ್ಫೂರ್ತಿಯಿಂದ ಇಂತಹ ವಿಷಯಗಳಲ್ಲಿ ಶಾಸನ ರಚನೆಯಾಗುತ್ತದೆ. ೧೬ ವರ್ಷಕಿಂತ ಕಡಿಮೆ ವಯಸ್ಸಿನ ಬಾಲಕರು ದೂಮಪಾನ ಮಾಡುವುದನ್ನು ಕಂಡರೆ ತಂದೆ, ತಾಯಿಯರು ಅಥವಾ ಪೋಷಕರು ಶಾಲಾ ಉಪಾಧ್ಯಾಯರಿಗೆ ಅದನ್ನು ತಿಳಿಸಲು ಮಸೂದೆ ಉದ್ದೇಶಿಸುತ್ತದೆ. ಆದರೆ ಅದಕ್ಕೆ ವಿಧಿಸುವ ಶಿಕ್ಷೆಯು ಕಳಂಕ ತರುವಂತದ್ದು ಅಥವಾ ಬಾಲಕರ ಬದುಕನ್ನು ಹಾಳು ಮಾಡುವಂತದ್ದು ಆಗಿರುವುದಿಲ್ಲ. ಒಂದು ರೂಪಾಯಿ ಜುಲ್ಮಾನೆ ಹಾಕಬಹುದು, ಅಥವಾ ಮ್ಯಾಜಿಸ್ಟ್ರೇಟರ ಹಾಜರಿಯಲ್ಲಿ ಖಾಸಗಿ ಸ್ಥಳದಲ್ಲಿ ಬಾಲಕನಿಗೆ ಛಾಟಿ ಏಟು ವಿಧಿಸಬಹುದು ಎಂದು ಅವರು ಹೇಳಿದರು. ಮಸೂದೆಯು ಮತ್ತೆ ಚರ್ಚೆಗೆ ಬಂದಾಗ ಜುಲ್ಮಾನೆ ಹಾಕುವುದನ್ನೂ ಅಪರಾಧಿ ಬಾಲಕನಿಗೆ ಏಟು ಕೊಡುವುದನ್ನೂ ಶ್ರೀ ಎ. ರಾಮಣ್ಣ ವಿರೋಧಿಸಿದರು. ದಸ್ತಗಿರಿಯಾದ ಬಾಲಕನನ್ನು ಜಾಮೀನಿನ ಮೇಲೆ ಬಿಡಬೇಕೆಂದು ಅವರು ಹೇಳಿದರು. ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಲಾಯಿತು.[೧೦]

ಚುನಾಯಿತ ಸಮಿತಿಯ ವರದಿಯನ್ನು ಪರಿಶೀಲಿಸಬೇಕೆಂದು ೧೧-೯-೧೯೧೧ರಂದು ಶ್ರೀ ಹೆಚ್ ವಿ ನಂಜುಂಡಯ್ಯನವರು ಸೂಚನೆ ತಂದರು. ಈ ಸಮಸ್ಯೆ ಇಲ್ಲದಿರುವ ಗ್ರಾಮೀಣ ಪ್ರದೇಶಗಳಲ್ಲಿ ಮಸೂದೆಯನ್ನು ಜಾರಿ ಮಾಡುವುದಿಲ್ಲವೆಂದು ಅವರು ತಿಳಿಸಿದರು. ಕೆಲವು ಸಣ್ಣ ತಿದ್ದುಪಡಿಗಳೊಡನೆ ಮಸೂದೆಯನ್ನು ಅಂಗೀಕರಿಸಲಾಯಿತು.

ಮನೋರೋಗಕ್ಕೆ ಸಂಬಂಧಿಸಿದ ಕಾನೂನು

ಮಾನಸಿಕ ಅಸ್ವಸ್ಥತೆಗೆ ಸಂಬಂಧಿಸಿದ ಮಸೂದೆಯನ್ನು ಮಂಡಿಸಲು ಶ್ರೀ ಹೆಚ್.ವಿ ನಂಜುಂಡಯ್ಯನವರು ೧೦-೨-೧೯೧೫ರಂದು ಸಭೆಗೆ ಅನುಮತಿ ಬೇಡಿದರು. ಮಾನಸಿಕ ಅಸ್ವಸ್ಥರನ್ನು ಸುಪರ್ದಿಗೆ ತೆಗೆದುಕೊಂಡು ಆಸ್ಪತ್ರೆಯಲ್ಲಿಡುವ ವಿಷಯದ ನಿಯಮಗಳನ್ನು ೧೮೭೭ರಲ್ಲಿ

ಪ್ರಕಟಿಸಲಾಯಿತು. ಬ್ರಿಟಿಷ್ ಭಾರತದಲ್ಲಿರುವ ೧೮೫೮ರ ಹುಚ್ಚಿನ ಕಾಯ್ದೆಯನ್ನು ಅನುಸರಿಸಲಾಗಿದೆ. ಆಗಿನ ನಿಯಮಗಳು ಈ ಕಾಲಕ್ಕೆ ಹೊಂದುವುದಿಲ್ಲ. ಹೊಸ ಶಾಸನವೊಂದು ಅಗತ್ಯವಿದೆ. ಉದ್ದೇಶಿತ ಕಾಯ್ದೆಯು ೧೯೧೨ರ ಬ್ರಿಟಿಷ್ ಭಾರತದ ಕಾನೂನನ್ನು ಅನುಸರಿಸಿ ಸರ್ಕಾರದ ಹುಚ್ಚಾಸ್ಪತ್ರೆಯನ್ನು ಮಾನ್ಯ ಮಾಡುತ್ತದೆ. ಅಪರಾಧಿ ಹುಚ್ಚರು ಮತ್ತು ಹುಚ್ಚರಾದ ಖೈದಿಗಳಿಗೆ ಸೂಕ್ತ ಅವಕಾಶ ಮಾಡಿಕೊಡಲಾಯಿತು.

ಕಡಿಮೆಯಾದವರನ್ನು ಆಸ್ಪತ್ರೆಗೆ ಸೇರಿಸುವ ಮುನ್ನ ಸೂಕ್ತ ಸ್ಥಳದಲ್ಲಿಟ್ಟಿರಲು ನಿರ್ದೇಶನ ಮಾಡುವುದಕ್ಕೆ ಮ್ಯಾಜಿಸ್ಟ್ರೇಟರಿಗೆ ಅಧಿಕಾರವನ್ನು ಕೊಡಲಾಯಿತು. ಆಸ್ಪತ್ರೆ ಸಂದರ್ಶಕರ ಮತ್ತು ಕರ್ತವ್ಯಗಳು ಆಸ್ಪತ್ರೆಯಿಂದ ಮನೋರೋಗಿಗಳ ಬಿಡುಗಡೆ, ಅವರ ಪರಾರಿ ಮರು ಸ್ವಾದೀನ ಮುಂತಾದವಕ್ಕೆಲ್ಲ ಅವಕಾಶ ಮಾಡಲಾಗಿದೆ. ಅಂತಹ ವ್ಯಕ್ತಿಯನ್ನು ಅಧಿಕಾರಿಯವರ ಸುಪರ್ದಿಗೆ ತೆಗೆದುಕೊಳ್ಳಬಹುದಾಗಿದೆ. ಎಲ್ಲಾ ನ್ಯಾಯಾಲಯವು ಅಥವಾ ಪೋಷಕರನ್ನು ನೇಮಿಸಬಹುದೆಂದಿದೆ. ಅಂತಹ ಮನೋರೋಗಿಯ ಉತ್ತರಾಧಿಕಾರಿಯನ್ನು ಅವನ ಪಾಲಕನಾಗಿ ನೇಮಿಸುವುದಿಲ್ಲ. ಅಕ್ರಮವಾಗಿ ಶಿಕ್ಷೆ ವಿಧಿಸಲಾಗುವುದು." ಎಂದು ಅವರು ವಿವರಿಸಿದರು. ೨೮-೬-೧೯೧೫ರಂದು ಶ್ರೀ ಹೆಚ್ ವಿ.ನಂಜುಂಡಯ್ಯನವರು ಒಂದು ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಲಾಯಿತು.[೧೧]

ಅಲ್ಲಲ್ಲಿ ಸಮಿತಿ ಮಾಡಿರುವ ಬದಲಾವಣೆಗಳನ್ನು ಶ್ರೀ ಹೆಚ್.ವಿ ನಂಜುಂಡಯ್ಯನವರು ೨-೧೦-೧೯೧೫ರಂದು ಪ್ರಸ್ತಾಪಿಸಿದರು. ಮನೋವಿಕಾರದವರನ್ನು ಸಂಸ್ಥಾನ ಹಾಗೂ ಪ್ರದೇಶಗಳ ನಡುವೆ ಪರಸ್ಪರ ವಿನಿಮಯ ಮಾಡಿಕೊಳ್ಳುವ ಏರ್ಪಾಡನ್ನು ಸಮಿತಿ ಮಾಡಿತ್ತು. ಅದಕ್ಕೆ ಸಭೆ ಸಮ್ಮತಿಸಿತ್ತು. ಮಸೂದೆ ೮-೧-೧೯೧೬ರಂದು ಅಂಗೀಕೃತವಾಯಿತು.

ಆಹಾರ ವಸ್ತುಗಳ ಕಲಬೆರೆಕೆ ನಿವಾರಣಾ ಮಸೂದೆ

ವೀರ್ ಹಮ್ಜಾ ಹುಸೇನ್ ಅವರು ೨೨-೧೧-೧೯೨೦ರಂದು ಆಹಾರ ವಸ್ತುಗಳ ಕಲಬೆರಕೆ ನಿವಾರಿಸುವ ಉದ್ದೇಶದ ಮಸೂದೆ ಮಂಡಿಸಲು ಸಭೆಯ ಅನುಮತಿ ಕೋರಿದರು. ವಸ್ತುಗಳ ಧಾರಣೆ ವಿಪರೀತ ಹೆಚ್ಚಿ ಅದು ವರ್ತಕರಿಗೆ ಭಾರಿ ಆಮಿಷವನ್ನು ಒಡ್ಡಿತ್ತು. ಈ ಪರಿಸ್ಥಿಯ ಅವಶ್ಯಕತೆಗೆ ಈಗಿನ ಕ್ರಿಮಿನಲ್ ಕಾನೂನು ಸಾಲದು. ಈ ನಿರ್ದಿಷ್ಠ ಸ್ಥಳಗಳಲ್ಲಿ ಸ್ಥಳೀಯ ಅಧಿಕಾರಿಗಳೊಡನೆ ಸಮಾಲೋಚಿಸಿ ಪ್ರಕಟಿಸಿದ ಕೆಲವು ನಿರ್ದಿಷ್ಟ ಉದ್ದೇಶಗಳಿಗಾಗಿ ಜಾರಿ ಮಾಡಲಾಗುವುದು. ಸಾಮಾನ್ಯವಾಗಿ ಬಳಸುವ ಕೆಲವು ವಸ್ತುಗಳ ಪರಿಶುದ್ದತೆಯ ಮಟ್ಟವನ್ನು ಉತ್ತಮಪಡಿಸಲಾಗುವುದು. ಬೆರಕೆ ವಸ್ತುಗಳನ್ನು ನಿಷೇಧಿಸಲಾಗುವುದು. ಸರ್ಕಾರಿ ವಿಶ್ಲೇಷಕರು ಆಹಾರ ವಸ್ತುಗಳನ್ನು ಪರೀಕ್ಷಿಸುತ್ತಾರೆ. ಆಹಾರ ವಸ್ತುಗಳ ಬಗ್ಗೆ ಮೋಸದ ತೂಕಗಳಿಗಾಗಿಯೂ ಶಿಕ್ಷೆ ವಿಧಿಸಲಾಗುವುದು. ಕೊಂಡವರು ಮತ್ತು ಕೊಟ್ಟವರು, ಮೊಕದ್ದಮೆ ಹೂಡಲು ಕಾರ್ಯಕಾರಿ ಅಧಿಕಾರಿಯು ಮಂಜೂರಾತಿ ಬೇಕಾಗಿರುತ್ತದೆ. ಎಂದು ಅವರು ತಿಳಿಸಿದರು.

ಶ್ರೀ ಪುಟ್ಟಣ್ಣ ಚೆಟ್ಟಿಯವರು ಈ ಕ್ರಮಕ್ಕೆ ಸಮರ್ಥನೆ ನೀಡಿ, ಮಸೂದೆ ನಂತರ ಜನರು ಶುದ್ಧವಾದ ಆಹಾರ ವಸ್ತುಗಳನ್ನು ಪಡೆಯಲು ಆಶಿಸಿದರು. ಆದರೆ ಅಪರಾಧಿಗಳ ಬಗ್ಗೆ ಮಸೂದೆ ತುಂಬ ಕಠಿಣವಾಗಿದೆ ಎಂದು ಎಂ. ಶಾಮರಾವ್ ದೂರಿದರು. ಜನರ ಕ್ಷೇಮ ಮತ್ತು ಹಿತದ ದೃಷ್ಟಿಯಿಂದ ತಾವು ಬೆಂಬಲ ಕೊಡುವುದಾಗಿ ಶ್ರೀ ವಿಜಯದೇವ ನುಡಿದರು. ಆರೋಗ್ಯಕ್ಕೆ ಹಾನಿಕರವಾದ ಪ್ರಾಣಿಗಳ ಕೊಬ್ಬನ್ನು ಆಹಾರ ವಸ್ತುಗಳಿಗೆ ಬೆರೆಸುವುದನ್ನು ತಪ್ಪಿಸಲು ಒಂದು ನಿಯಮವನ್ನು ಸೇರಿಸಬೇಕೆಂದು ಅಬ್ಬಾಸ್ ಖಾನ್ ಕೇಳಿದರು ಸೂಚನೆ ಓಟಿನಲ್ಲಿ ಅಂಗೀಕರಿಸಲಾಯಿತು. ಮಸೂದೆಯ ಪಠಣಕ್ಕಾಗಿ ೨೧-೩-೧೯೨೧ರಂದು ಶ್ರೀ ವೀರ್ ಹಮ್ಜ ಹುಸೇನ್ ಸೂಚನೆ ತಂದರು. ಸೂಚನೆ ಸ್ವೀಕೃತವಾಗಿ ಮಸೂದೆಯನ್ನ ಚುನಾಯಿತ ಸಮಿತಿಗೆ ಒಪ್ಪಿಸಲಾಯಿತು.[೧೨]

ಮೈಸೂರು ಕುಷ್ಠರೋಗ ಮಸೂದೆ

ಮೈಸೂರು ಕುಷ್ಠರೋಗ ಮಸೂದೆಯ ಪಠಣಕ್ಕಾಗಿ ಶ್ರೀ ವೀರ್ ಹಮ್ಜಾ ಹುಸೇನ್ ಅವರು ೨೭-೬-೧೯೨೨ರಂದು ಸೂಚನೆ ತಂದರು. ಕುಷ್ಠರೋಗಿಗಳ ನೊಂದಾವಣೆ ಮಾಡಲು ಮತ್ತು ತಮ್ಮನ್ನು ತಾವು ನೋಡಿಕೊಳ್ಳಲು ಅವರು ಅಸಮರ್ಥರೆನಿಸಿದಾಗ ಕಡ್ಡಾಯವಾಗಿ ಪ್ರತ್ಯೇಕಿಸಿಡಲು ಅವಕಾಶ ಮಾಡುವುದು ಮಸೂದೆಯ ಉದ್ದೇಶವಾಗಿತ್ತು. ಸೋಂಕು ಹರಡುವುದನ್ನು ತಪ್ಪಿಸಲು ಕ್ರಮ ಅಗತ್ಯವಾಗಿತ್ತು. ಮುಗ್ದ ಜನರಿಗೆ ಹಿಂಸೆಯಾಗದಂತೆ ರಕ್ಷಣೆ ಕ್ರಮಗಳು ಅದರಲ್ಲಿದ್ದವು. ಅರ್ಹ ವೈದ್ಯಾಧಿಕಾರಿಯು ಕುಷ್ಠರೋಗಿಯನ್ನು ನೋಂದಾಯಿಸಬಹುದಿತ್ತು. ಅವರ ಆಜ್ಞೆಯ ವಿರುದ್ದ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಮನವಿ ಸಲ್ಲಿಸಲು ಅವಕಾಶವಿತ್ತು. ರೋಗಿಗಳಿಗೆ ಸ್ಥಳಾವಕಾಶ ಮತ್ತು ಚಿಕಿತ್ಸೆ ಸೌಲಭ್ಯಗಳ ಬಗ್ಗೆ ತನಿಖೆ ಮಾಡಿದ ನಂತರ ಸರ್ಕಾರವು ನಿಬಂಧನೆಗಳನ್ನು ಜಾರಿಗೆ ತರಬಹುದಾದ ಪ್ರದೇಶಗಳನ್ನು ಪ್ರಕಟಿಸುತ್ತಿತ್ತು. ರೋಗಿಗಳು ವ್ಯಾಪಾರ ನಡೆಸಲು ಅಥವ ಸಾರ್ವಜನಿಕ ಬಾವಿಯಿಂದ ನೀರು ತೆಗೆಯಲು ಅಥವ ಅವುಗಳಲ್ಲಿ ಸ್ನಾನ ಮಾಡಲು ನಿಷೇಧವಿತ್ತು. ಚಿಕಿತ್ಸಾ ಗೃಹಗಳ ಪರೀಕ್ಷೆ ನಡೆಸಲು ಮಂಡಲಿಗಳನ್ನು ನೇಮಿಸುವುದಾಗಿತ್ತು. ಸೂಚನೆಯನ್ನು ಓಟಿಗೆ ಹಾಕಿ ಅದು ಅಂಗೀಕೃತವಾಯಿತು. ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಬೇಕೆಂದು ಶ್ರೀ ವೀರ್ ಹಮ್ಜಾ ಹುಸೇನ್ ಸೂಚನೆ ತಂದರು. ಅದೂ ಅಂಗೀಕೃತವಾಯಿತು.[೧೩]

ಜನನ-ಮರಣಗಳ ನೋಂದಣಿ ಮಸೂದೆ

೧೯೧೭ರಲ್ಲಿ ಅಧಿಕಾರಿ ಸದಸ್ಯ ಶ್ರೀ ಡಿ.ಎಂ. ನರಸಿಂಗರಾಯರು ಜನನ-ಮರಣಗಳ ನೋಂದಣಿ ಮಸೂದೆಯನ್ನು ಮಂಡಿಸಲು ಸಭೆಯ ಮಸೂದೆಯನ್ನು ಮಂಡಿಸಲು ಅನುಮತಿ ಬೇಡಿದರು. ಸಂಶೋಧನೆ ಮತ್ತು ಮಾರ್ಗದರ್ಶನಕ್ಕಾಗಿ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ

ಅತ್ಯಗತ್ಯ ಮಾಹಿತಿ ಪಡೆಯಲು ಮಸೂದೆ ಅಗತ್ಯವೆಂದು ಅವರು ಹೇಳಿದರು. "ಅನೈರ್ಮಲ್ಯದ ಸ್ಥಿತಿಗತಿಗಳನ್ನು ಆಯಾ ಸ್ಥಳಗಳಲ್ಲಿ ಸೀಮಿತಗೊಳಿಸಲು ಮಸೂದೆ ಸಹಾಯಕವಾಗುತ್ತದೆ. ಇದುವರೆಗೆ ಜನನ ಮತ್ತು ಮರಣಗಳ ನೊಂದಣಿಯು ಸ್ವಪ್ರೇರಿತವಾಗಿರುವುದರಿಂದ ದೊರೆತಿರುವ ಮಾಹಿತಿ ಅಪೂರ್ಣವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಜನನ ಮರಣಗಳ ಬಗ್ಗೆ ಜನರು ತಾವೇ ಮುಂದೆ ಬಂದು ಮಾಹಿತಿ ನೀಡಬೇಕೆಂದು ೧೮೭೯ ರಲ್ಲಿ ಚೀಫ್ ಕಮಿಷನರ್ ಅವರು ಪ್ರಕಟಣೆ ಹೊರಡಿಸಿದರು. ಆದರೆ ಪುರಸಭೆಗಳ ಪ್ರದೇಶಗಳಲ್ಲಿ ಈ ಮಾಹಿತಿ ನೀಡುವುದು ಕಡ್ಡಾಯವಾಗಿದೆ, ಸಂಸ್ಥಾನದಲ್ಲಿ ೧೬,೭೫೫ ಗ್ರಾಮ, ಪಟ್ಟಣಗಳು ೩೬ ನಿಯಂತ್ರಿತ ಪುರಸಭೆಗಳೂ ಇವೆ. ೧೮೭೩ ರಷ್ಟು ಮುಂಚೆಯೇ ಈ ವಿಷಯದಲ್ಲಿ ಬಂಗಾಳ ಒಂದು ಶಾಸನವನ್ನು ಅಂಗೀಕರಿಸಿತು. ಬ್ರಿಟಿಷ್ ಭಾರತದಲ್ಲಿನ ಮತ್ತು ಕೆಲವು ಯೂರೋಪ್ ಹಾಗೂ ಅಮೆರಿಕನ್ ದೇಶಗಳಲ್ಲಿನ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯನ್ನು ನೇಮಿಸಲಾಯಿತು. ಕ್ರಮಬದ್ದವಾಗಿ ರಚಿಸಲಾದ ಆಡಳಿತಾಧಿಕಾರಕ್ಕೆ, ಜನನ ಮರಣಗಳ ಬಗ್ಗೆ ಮಾಹಿತಿಯನ್ನು ಕಾನೂನು ಬದ್ದವಾಗಿ ನೀಡಲೇಬೇಕಾದ ವರ್ಗಗಳ ಜನರನ್ನು ಮಸೂದೆಯ ನಿಯಮದಲ್ಲಿ ನಮೂದಿಸಲಾಗಿದೆ, ಈ ಶಾಸನಬದ್ದ ಕರ್ತವ್ಯವನ್ನು ಮಾಡದೆ ಇದ್ದಾಗ ೧೦ ರೂಪಾಯಿಗೆ ಮೀರದಂತೆ ಜುಲ್ಮಾನೆ ವಿದಿಸಬಹುದೆಂದು ೧೮ನೇ ವಿಧಿ ಹೇಳಿದೆ ಜನರಿಗೆ ಅನಗತ್ಯವಾದ ತೊಂದರೆ ಆಗದಂತೆ ರಕ್ಷಣೆಗಳಿವೆ. ಸಾಮಾನ್ಯವಾಗಿ ಜನರು ಜನನ ಮರಣಗಳ ಮಾಹಿತಿ ನೀಡಲು ಅನಿಚ್ಛೆ ತೋರಿಸುವುದಿಲ್ಲ. ಆದರೂ ಕಾನೂನಿನ ಕಡ್ಡಾಯವಿರಬೇಕು. ಅಂಗೀಕಾರವಾದ ತಕ್ಷಣವೇ ಕಾನೂನು ಜಾರಿಗೆ ಬರುವುದಿಲ್ಲ. ಅದನ್ನು ನಿರ್ದಿಷ್ಟ ಸ್ಥಳಗಳಿಗೆ ಅನ್ವಯಿಸಿ ಸರ್ಕಾರವು ಪ್ರಕಟಣೆ ಹೊರಡಿಸುವುದು. ಹಳ್ಳಿಗಳ ಚಾವಡಿಗಳಲ್ಲೂ ಇತರ ಸಾರ್ವಜನಿಕ ಸ್ಥಳಗಳಲ್ಲೂ ವಿವರಗಳನ್ನು ಪ್ರಕಟಿಸಲಾಗುವುದು. ಈ ನೊಂದಣಿಕಾರರು ಹಳ್ಳಿಗಳಲ್ಲೆ ವಾಸಿಸಬೇಕು. ಜನರು ಅವರನ್ನು ಹುಡುಕಿಕೊಂಡು ಹೋಗುವಂತಿರಬಾರದು. ಅವರೂ ತಮ್ಮ ಸ್ಥಳಗಳಲ್ಲಿನ ಜನನ ಮರಣಗಳ ಬಗ್ಗೆ ನಿಗಾ ಇಟ್ಟಿರಬೇಕಾಗುತ್ತದೆ. ಇದರಲ್ಲಿ ಹಾಕಲಾಗುವ ಜುಲ್ಮಾನೆ ಅತ್ಯಲ್ಪ ಎಂದು ಅವರು ಹೇಳಿದರು, ಸೂಚನೆ ಓಟಿನಲ್ಲಿ ಸ್ವೀಕೃತವಾಯಿತು.[೧೪]

ಮೈಸೂರು ಜನನ ಮರಣಗಳ ನೋಂದಣಿ ಮಸೂದೆ

ಸಿ.ಎಸ್. ಬಾಲಸುಂದರ ಐಯ್ಯರ್ ೨೮.೯.೧೯೧೭ ರಂದು ಸೂಚನೆ ತಂದರು. ಸರ್ಕಾರಕ್ಕೂ ಮತ್ತು ವ್ಯಕ್ತಿಗಳಿಗೂ ಉಪಯುಕ್ತವಾದ ಅತ್ಯಗತ್ಯ ಅಂಕಿಅಂಶಗಳನ್ನು ಸಂಗ್ರಹಿಸಲು ಮಸೂದೆ ಅವಶ್ಯಕ ಎಂದು ಅವರು ಹೇಳಿದರು. "ನಿದರ್ಶನವಾಗಿ, ನ್ಯಾಯಾಲಯದ ಖಟ್ಲೆಗಾಗಿ ಒಬ್ಬ ವ್ಯಕ್ತಿ ಹುಟ್ಟಿದ, ಅಥವಾ ಸತ್ತ ನಿಖರವಾದ ತಾರೀಖನ್ನು ತಿಳಿಸುವುದು ಅಗತ್ಯವಾಗಬಹುದು. ಜನನ ಮರಣಗಳ ರಿಜಿಸ್ಟ್ರಾರ್ ಅವರು ಸಾಕ್ಷ್ಯದ ಅಮೂಲ್ಯ ಮೂಲವನ್ನು ಒದಗಿಸಬಲ್ಲವ

ರಾಗಿರುತ್ತಾರೆ. ರಿಜಿಸ್ಟ್ರಾರ್‌ಗಳಲ್ಲಿ ದೊರಕುವ ಆಧಾರ ಅಂಶಗಳನ್ನು ಜೀವವಿಮೆ ಅವಲಂಬಿಸಿರುತ್ತದೆ. ಮಸೂದೆಯಲ್ಲಿ ಕಠಿಣ ಲಕ್ಷಣಗಳೇನು ಇಲ್ಲ, ಕಾನೂನನ್ನು ಅನ್ವಯಿಸುವುದರಲ್ಲಿ ರಕ್ಷಣೆಗಳನ್ನು ಒದಗಿಸಲಾಗಿದೆ" ಎಂದರು ಅವರು. ಸೂಚನೆಯನ್ನು ಓಟಿಗೆ ಹಾಕಿ ಅದು ಅಂಗೀಕಾರವಾಯಿತು.

ಚುನಾಯಿತ ಸಮಿತಿಯ ರಚನೆಗೆ ಸಭೆ ಸಮ್ಮತಿ

ಚುನಾಯಿತ ಸಮಿತಿಯ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಅಧಿಕಾರಿ ಸದಸ್ಯ ಶ್ರೀ ಸಿ.ಎಸ್. ಬಾಲಸುಂದರಂ ಐಯ್ಯರ್ ೨೧.೨.೧೯೧೮ ರಂದು ಸೂಚನೆ ತಂದರು. ನೋಂದಣಿ ಅಧಿಕಾರಿಗೆ ಮಾಹಿತಿ ಕೊಡಲು ನಾಲ್ಕು ದಿನಗಳ ಬದಲು ಏಳು ದಿನಗಳ ಕಾಲಾವಕಾಶ ಇರಬೇಕೆಂದು ಇಂದೆ ಒಂದು ಮಾರ್ಪಾಟನ್ನು ಸಮಿತಿ ಸೂಚಿಸಿದೆ ಎಂದು ಅವರು ತಿಳಿಸಿದರು. ಸೂಚನೆ ಓಟಿನಲ್ಲಿ ಸ್ವೀಕೃತವಾಯಿತು. ಮಸೂದೆಯನ್ನು ಅಂಗೀಕರಿಸಬೇಕೆಂದು ಶ್ರೀ ಐಯ್ಯರ್ ಆನಂತರ ಸೂಚಿಸಿದರು. ಸಭೆ ಸಮ್ಮತಿಸಿತು.

ನಿರ್ಣಯಗಳು

ವಿಕ್ಟೋರಿಯ ಆಸ್ಪತ್ರೆಯಲ್ಲಿ ೨೧.೪.೧೯೨೦ ರಂದು ಕ್ಲೋರೋಫಾರಂ ಕೊಟ್ಟಮೇಲೆ ಶ್ರೀ ಸುಬ್ರಮಣ್ಯ ಎನ್ನುವವರು ಮೃತ್ಯುಆದ ಪ್ರಕರಣದ ಬಗ್ಗೆ ತನಿಖೆ ನಡೆಯಬೇಕೆಂಬ ನಿರ್ಣಯವನ್ನು ಶ್ರೀ ಹೆಚ್ ವೆಂಕಟರಾಮಯ್ಯನವರು ೧೯.೦೫.೧೯೨೦ ರಂದು ಮಂಡಿಸಿದರು. ಸರ್ಕಾರ ಈ ವಿಷಯದಲ್ಲಿ ತನಿಕೆ ನಡೆಸುವುದೆಂದು ಸದಸ್ಯರು ಆಶಿಸಿದ ನಂತರ ನಿರ್ಣಯವನ್ನು ವಾಪಸ್ ಪಡೆಯಲಾಯಿತು.

ಆರೋಗ್ಯಾಧಿಕಾರಿಯವರ ಸುಫರ್ಧಿಯಲ್ಲಿ ಬೆಂಗಳೂರಿನ ಔಷಧಾಲಯಗಳು

ಬೆಂಗಳೂರು ನಗರದಲ್ಲಿರುವ ಎಲ್ಲಾ ಔಷಧಾಲಯಗಳನ್ನು ನಗರಸಭೆಯ ಆರೋಗ್ಯಧಿಕಾರಿ ಯವರ ಸುಫರ್ದಿನಲ್ಲಿಡಬೇಕೆಂದು ತಿಳಿಸುವ ನಿರ್ಣಯವೊಂದನ್ನು ಎಂ ಸುಬ್ಬಯ್ಯ ನವರು ೨೨-೧೧-೧೯೨೦ ರಂದು ಮಂಡಿಸಿದರು. "ಬೆಂಗಳೂರು ನಗರದ ಐದು ಔಷಧಾಲಯಗಳು ಜಿಲ್ಲಾ ವೈದ್ಯಾಧಿಕಾರಿಯವರ ಹತೋಟಿಯಲ್ಲಿವೆ. ಸಬ್ ಅಸಿಸ್ಟೆಂಟ್ ಸರ್ಜನ್ನರು ಜನನ ಮರಣಗಳ ನೋಂದಣಿ ಮತ್ತು ಸಿಡುಬು ದಾಖಲೆಗೆ ಮಾತ್ರ ಗಮನ ಕೊಡುತ್ತಾರೆ. ಆರೋಗ್ಯ ಅಧಿಕಾರಿಗೆ ಅವರ ಮೇಲೆ ಹತೋಟಿ ಇಲ್ಲ. ನಗರದಲ್ಲಿ ಸೊಂಕು ರೋಗ ಹರಡಿದ್ದಾಗ ಆರೋಗ್ಯ ಅಧಿಕಾರಿಯವರು ಜರೂರು ಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಸಬ್ ಅಸಿಸ್ಟೆಂಟ್ ಸರ್ಜನ್ನರು ಸಹಕಾರ ನೀಡುವುದಿಲ್ಲ. ಜಿಲ್ಲಾ ವೈದ್ಯಾಧಿಕಾರಿಯೂ ಅವರನ್ನು ಹತೋಟಿ ಮಾಡಲಾರರು. ಏಕೆಂದರೆ ಅವರು ವರ್ಷದಲ್ಲಿ ಒಂದೊ ಎರಡೊ ಸಲ ಮಾತ್ರ ಔಷಧಾಲಯಗಳ ಪರೀಕ್ಷಣಾ ನಡೆಸುತ್ತಾರೆ" ಎಂದರು ಅವರು. ಶ್ರೀ ಮಹಮದ್ದ್ ಅಬ್ಬಾಸ್ ಖಾನ್ ರವರು ಮಾತನಾಡಿ, "ಪುರಸಭೆಗಳು ಜವಾಬ್ದಾರಿ ಹೊಂದಿವೆ. ಮೂರು ಔಷಧಾಲಯಗಳ ಬಗ್ಗೆ ಜಿಲ್ಲಾ ಮಂಡಳಿಯು

ಮೂರನೇ ಒಂದು ಭಾಗ ಖರ್ಚನ್ನು ಭರಿಸಬೇಕು. ಔಷಧಾಲಯಗಳನ್ನು ಅದಕ್ಷತೆಯಿಂದ ನಡೆಸಲಾಗುತ್ತಿದೆ ಎಂದು ಹೇಳುವುದು ಸರಿಯಲ್ಲ. ಆದರೆ ಆರೋಗ್ಯಧಿಕಾರಿಗೆ ಸಹಕಾರ ಸಿಕ್ಕುತ್ತಿಲ್ಲವೆಂಬುದು ನಿಜ" ಎಂದು ಹೇಳಿದರು. ಔಷಧಾಲಯಗಳ ನಿರ್ವಹಣೆಗೆ ಪುರಸಭೆಗಳು ಬಹುಪಾಲು ಹಣ ಕೊಡುತ್ತಿದ್ದರೂ ಜಿಲ್ಲಾ ವೈದ್ಯಾಧಿಕಾರಿಗೆ ಇತರ ಅನೇಕ ಕರ್ತವ್ಯಗಳು ಇರುವುದರಿಂದ ಅವರು ಔಷಧಾಲಯವನ್ನು ಹತೋಟಿ ಮಾಡಲಾರರೆಂದು ಬಿ.ವಿ. ರಾಮಸ್ವಾಮಿ ಚೆಟ್ಟಿ ಹೇಳಿದರು. "ಆರೋಗ್ಯ ಅಧಿಕಾರಿಯ ಕರ್ತವ್ಯಗಳು ವೈದ್ಯಾಧಿಕಾರಿಯವರ ಕರ್ತವ್ಯ ಗಳಿಗಿಂತ ಭಿನ್ನವಾದವು. ಆರೋಗ್ಯ ಅಧಿಕಾರಿಯವರು ಔಷಧಾಲಯಗಳಲ್ಲಿ ಚಿಕಿತ್ಸೆಗೆ ಗಮನ ಕೊಡಲಾರರು. ವೈದ್ಯ ಅಥವಾ ಶಸ್ತ್ರ ಚಿಕಿತ್ಸಕರಾಗಿರುವುದು ಆರೋಗ್ಯಾಧಿಕಾರಿಯಾಗಿರುವುದಕ್ಕಿಂತ ಬೇರೆ ರೀತಿಯಲ್ಲಿರುತ್ತದೆ", ಎಂದು ಶ್ರೀ ಕೆ.ಪಿ. ಪುಟ್ಟಣ್ಣ ಚೆಟ್ಟಿ ನುಡಿದರು. ಶ್ರೀ ಮೀರ್ ಹಮ್ಜಾ ಹುಸೇನ್ ಅವರು ಜವಾಬುಕೊಟ್ಟು ಸೂಚನೆಯನ್ನು ವಿರೋಧಿಸಿದರು. "ಈ ವಿಷಯದಲ್ಲಿ ಸೀನಿಯರ್ ಸರ್ಜನ್‌ರೊಡನೆ ಸಮಾಲೋಚಿಸಬೇಕು. ಔಷಧಾಲಯಗಳು ವೈದ್ಯಕೀಯ ಇಲಾಖೆಯ ಹತೋಟಿಯಲ್ಲಿರಬೇಕು. ಆರೋಗ್ಯಾಧಿಕಾರಿಯು ನೈರ್ಮಲ್ಯ ಇಲಾಖೆಗೆ ಸೇರಿದವರು. ಅವರ ಕರ್ತವ್ಯಗಳು ವೈದ್ಯಾಧಿಕಾರಿಯ ಕರ್ತವ್ಯಗಳಿಗಿಂತ ಬೇರೆಯಾಗಿರುತ್ತವೆ" ಎಂದು ತಿಳಿಸಿದರು. ಆದರೆ ಈ ವಿಷಯವನ್ನು ಮತ್ತೆ ಪರಿಶೀಲಿಸಲು ತಾವು ಸಿದ್ಧವಿರುವುದಾಗಿ ಹೇಳಿದರು.

೪.೪. ದಲಿತ ಜನಾಂಗದವರ ಅಭಿವೃದ್ಧಿಗೆ ನ್ಯಾಯವಿಧಾಯಕ ಸಭೆಯ ಕೊಡುಗೆ

ಮುರುಗೇಶನ್ ಪಿಳ್ಳೆ ಅವರ ಬೇಡಿಕೆಗೆ ಜಿ. ಗಿರಿಮಾಜಿರಾವ್ ಸಹಕಾರ ತೋರಿಸಿ ಎಲ್ಲಾ ಕೋಮುಗಳು ಬಳಸುವ ಕುಡಿಯುವ ನೀರಿನ ಬಾವಿಗಳಿಂದ ನೀರು ಪಡೆದುಕೊಳ್ಳಲು ನಿಮ್ನ ವರ್ಗಗಳವರಿಗೂ ಅನುಮತಿ ಇರಬೇಕೆಂದು ಸೂಚಿಸಿದರು. ಇತರ ಮೇಲ್ಜಾತಿ ಹಿಂದೂ ಗಳೊಡನೆ ಬೆರೆಯಲು ನಿಮ್ನ ವರ್ಗಗಳಿಗೆ ಅವಕಾಶವಿಲ್ಲವಾಗಿದೆ ಎಂದರು. ಈ ಸಮಸ್ಯೆಯು ಸರ್ಕಾರ ಪರಿಹರಿಸುವುದಕ್ಕಿಂತ ಹೆಚ್ಚಾಗಿ ಜನರೇ ಪರಿಹರಿಸಿಕೊಳ್ಳಬೇಕಾದ ವಿಷಯವಾಗಿದೆ ಎಂದು ಅಧ್ಯಕ್ಷರು ಭಾವಿಸಿದರು. ಅಸ್ಪೃಶ್ಯತೆಯನ್ನು ಒಂದು ಗೆರೆ ಎಳೆದು ಬಿಡುವುದರಿಂದಲೇ ತೆಗೆದುಹಾಕುವುದು ಸುಲಭವಲ್ಲವೆಂದು ಬಾಲಸುಂದರಂ ಅಯ್ಯರ್ ತಿಳಿಸಿದರು. ಅದು ಪುರಾತನ ಭಾವನೆ ಅದನ್ನು ಭಗ್ನಗೊಳಿಸಬೇಕಾಗಿದೆ ಎಂದೂ ಹೇಳಿದರು. ಬೇಲೂರು ಮತ್ತು ಮೇಲುಕೋಟೆಯ ದೇವಾಲಯಗಳಲ್ಲಿ, ನಿಮ್ನ ವರ್ಗಗಳಿಗೆ ಪ್ರವೇಶಾವಕಾಶ ಕೊಟ್ಟಿರುವುದನ್ನು ಅವರು ಪ್ರಸ್ತಾಪಿಸಿ ಅದೇ ರೀತಿಯನ್ನು ಇತರ ದೇವಾಲಯಗಳಲ್ಲೂ ಅನುಸರಿಸಬೇಡವೇ ಎಂದು ಕೇಳಿದರು. ಒಬ್ಬ ಮಹಾನ್ ವ್ಯಕ್ತಿ ಸಾವಿರಾರು ವರ್ಷಗಳ ಹಿಂದೆ ಅದನ್ನು ಮಾಡಿದರೆಂದೂ ಅಂತಹ ಶ್ರೇಷ್ಠ ವ್ಯಕ್ತಿಗಳು, ಆಧ್ಯಾತ್ಮಿಕ ಉನ್ನತಿಯ ಮತ್ತು ಪ್ರಭಾವದ ವ್ಯಕ್ತಿಗಳು ಇರುವುದಾದರೆ, ಮನೋಭಾವಗಳ ಬದಲಾವಣೆ ಸಾಧ್ಯವಿರುವುದೆಂದು ಬಾಲಸುಂದರಂ ಅಯ್ಯರ್ ಹೇಳಿದರು. ಆದರೆ ತಾವು ಹಾಗೂ ಸದಸ್ಯರು ಸಣ್ಣ ವ್ಯಕ್ತಿಗಳೆಂದೂ ತಾವು ಎಷ್ಟು

ದೂರ ಹೋಗಬಹುದೆಂಬುದು ಖಚಿತವಿಲ್ಲವೆಂದೂ ನುಡಿದರು. ಇತರ ಕೋಮುಗಳವರಿಗೆ ಕಟ್ಟಡದೊಳಕ್ಕೆ ಪ್ರವೇಶವಿಲ್ಲವೆಂದೂ ಸರ್ಕಾರಕ್ಕೆ ಗೊತ್ತಿದೆ. ಗರುಡಗಂಬದ ಆಚೆಗೆ ದೇವರ ಬಳಿಗೆ ಹೋಗಲು ಇತರ ಕೋಮುಗಳ ಜನರಿಗೆ ಅನುಮತಿ ಇಲ್ಲವೆಂಬುದು ಸರ್ಕಾರಕ್ಕೆ ತಿಳಿದಿಲ್ಲ. ದೇವಾಲಯವು ಮೈಸೂರು ಸರ್ಕಾರದ ಹತೋಟಿಗೆ ಒಳಪಟ್ಟಿಲ್ಲ–ಎಂದು ಅವರು ತಿಳಿಸಿದರು. ಇತರ ಕೋಮುಗಳ ಭಕ್ತರಿಗೆ ಮತ್ತು ಆದಿ ಕರ್ನಾಟಕರಿಗೆ ದೇವಾಲಯಗಳಿಗೆ ಹೋಗಲು ಮತ್ತು ಗರುಡ ಗಂಬದ ಬಳಿಗೆ ಹೋಗಲು ಏಕೆ ಅವಕಾಶವಿಲ್ಲವೆಂದು ತಿಳಿಸಿದರು.[೨೫]

ಸಾರ್ವಜನಿಕ ಕೆರೆಗಳನ್ನು, ಬಾವಿಗಳನ್ನು, ಕಟ್ಟಡಗಳು ಮತ್ತು ಶಾಲೆಗಳನ್ನು ಸರ್ಕಾರವು ನಿಮ್ಮ ವರ್ಗಗಳಿಗೆ ತೆರೆದಿಟ್ಟಿದೆ. ಬಾವಿಗಳು ಮತ್ತು ಕೆರೆಗಳು ದೇಹದ ಬಾಹ್ಯಾಂಗಗಳನ್ನು ಶುಚಿಗೊಳಿಸಲು ನೆರವಾಗುತ್ತವೆ. ಆದರೆ ದೇವಾಲಯಗಳು ಒಳಗಿನ ಆತ್ಮವನ್ನು ಶುಚಿಗೊಳಿಸುವ ಉದ್ದೇಶ ಹೊಂದಿವೆ. ನಿಮ್ಮ ವರ್ಗಗಳವರನ್ನು ಮೇಲಕ್ಕೆತ್ತುವ ಒಂದು ಅತ್ಯಗತ್ಯ ವಿಧಾನವೆಂದರೆ ಎಲ್ಲ ದೇವಾಲಯಗಳಿಗೂ ಅವರಿಗೆ ಪ್ರವೇಶಾವಕಾಶ ಕೊಡುವುದೇ ಆಗಿದೆ. ವೈಷ್ಣವ ಪಂಥದವರು ಇದಕ್ಕೆ ಆಕ್ಷೇಪಿಸುವುದಿಲ್ಲ. ಏಕೆಂದರೆ ಆಳ್ವಾರ್‌ಗಳಲ್ಲೇ ಕೆಲವರು ನಿಮ್ಮ ವರ್ಗಗಳಿಂದ ಬಂದವರಾಗಿದ್ದರು. ಅರ್ಚಕರಲ್ಲಿ ಕೆಲವರು ಸ್ನಾನವನ್ನೇ ಮಾಡದೆ ದೇವಾಲಯಗಳೊಳಕ್ಕೆ ಹೋಗಿ ಪೂಜೆಗಳನ್ನು ಮಾಡುತ್ತಾರೆ ಎಂದು ಅವರು ಟೀಕಿಸಿದರು. ಬೇಡಿಕೆಯನ್ನು ಓಟಿಗೆ ಹಾಕಿ ಅಂಗೀಕರಿಸಲಾಯಿತು. ದೇವಾಲಯಕ್ಕೆ ಅಸ್ಪೃಶ್ಯನೊಬ್ಬ ಪ್ರವೇಶಿಸಿದಂತಹ ಪ್ರಸಂಗವನ್ನು ಸಭೆಯಲ್ಲಿ ಈ ಕೆಳಗಿನಂತೆ ವಿವರಿಸಲಾಯಿತು.

ಸಂಗಪ್ಪನವರು ಒಬ್ಬ ಅಸ್ಪೃಶ್ಯ ಅವರು ಹೆಚ್.ಎನ್.ಮಾಧವರಾವ್ ಮತ್ತು ಜೆ.ಪಿ.ವೆಂಕಟ ರಮಣ ಶಾಸ್ತ್ರಿ ಎನ್ನುವ ಇಬ್ಬರು ಬ್ರಾಹ್ಮಣ ಸಹೋದ್ಯೋಗಿಗಳೊಡನೆ ಒಂದು ದೇವಾಲಯಕ್ಕೆ ಹೋಗಿ ತೀರ್ಥ ಪ್ರಸಾದಗಳನ್ನು ಪಡೆದರು. ಸಂಗಪ್ಪನವರ ಪ್ರವೇಶದಿಂದ ದೇವಾಲಯ ಮೈಲಿಗೆಯಾಯಿತೆಂದು ಆರೋಪಿಸಿ ಆ ಮೂವರಿಂದಲೂ ನಿರ್ದಿಷ್ಟ ಮೊಬಲಗನ್ನು ಪಡೆದುಕೊಳ್ಳಬೇಕೆಂದು ಸರ್ಕಾರ ಆಜ್ಞಾಪಿಸಿದೆ. ಸಂಗಪ್ಪ ನಿಮ್ಮ ವರ್ಗಗಳಿಗೆ ಸೇರಿದವನು ಮತ್ತು ಆತ ಸರ್ಕಾರಿ ಶಾಲೆಯೊಂದರಲ್ಲಿ ಉಪಾಧ್ಯಾಯರು. ಶಾಲೆಯಲ್ಲಿ ಬ್ರಾಹ್ಮಣ ಜಾತಿಯವರ ಮಕ್ಕಳೂ ಕೂಡ ಕಲಿಯುತ್ತಿದ್ದಾರೆ. ಬ್ರಾಹ್ಮಣ ಉಪಾಧ್ಯಾಯರು ಆತನ ಜೊತೆಯಲ್ಲಿ ಹೋಗಿದ್ದರೆಂಬುದೇ ಆತನು ಮಾಡಿದ ತಪ್ಪಾಗಿದೆ. ನಿಮ್ಮ ವರ್ಗದ ವ್ಯಕ್ತಿಯು ಮುಜರಾಯಿ ದೇವಾಲಯಕ್ಕೆ ಹೋಗಬಾರದೆಂಬ ನಿಷೇಧ ಮುಜರಾಯಿ ನಿಬಂಧನೆಯಲ್ಲಿ ಇಲ್ಲ. ಹರಿಜನರೂ ಸೇರಿದಂತೆ ಎಲ್ಲ ಕೋಮುಗಳ ಸದಸ್ಯರೂ ಇದ್ದ ಒಂದು ಮೆರವಣಿಗೆಯನ್ನು ಬೆಂಗಳೂರಿನಲ್ಲಿ ನಡೆಸಲಾಯಿತು. ಅವರುಗಳು ಹಲವಾರು ದೇವಾಲಯಗಳನ್ನು ಪ್ರವೇಶಿಸಿದರು. ಎಲ್ಲೂ ಅವರನ್ನು ಅಡ್ಡಿಪಡಿಸಲಿಲ್ಲ. ಗರ್ಭಗುಡಿಗಳನ್ನು ಮಾತ್ರ ಪವಿತ್ರ ಎಂದು ಭಾವಿಸಿ ಅದರೊಳಕ್ಕೆ ಯಾರನ್ನೂ ಬಿಡಲಿಲ್ಲ

ಎಂದು ಹೇಳಿ ಸಿಂಧ್ಯ ಜಾತಿ, ವರ್ಣ ಅಥವಾ ತಾರತಮ್ಯವಿಲ್ಲದೆ ಎಲ್ಲಾ ವರ್ಗಗಳಿಗೂ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನೂ ತೆರೆದಿರುವ ಸರ್ಕಾರಿ ಆಜ್ಞೆಯ ಬಗ್ಗೆ ಪ್ರಸ್ತಾಪ ಮಾಡಿದರು. ಮೇಲು ಜಾತಿಯ ಹಿಂದು ಈಗ ಅಸ್ಪೃಶ್ಯನೆಂದು ಹೇಳಲಾಗುವವನ ಪಕ್ಕದಲ್ಲೇ ಕುಳಿತಿರುತ್ತಾನೆ. ಸಮಾಜದ ಜನರ ಮನಸ್ಥಿತಿ ಬದಲಾಯಿಸಿಕೊಳ್ಳಬೇಕು. ಅಸ್ಪೃಶ್ಯ, ನಿಮ್ನ ವರ್ಗಗಳು ಸಹ ತಮ್ಮಂತೆ ಮನುಷ್ಯರು ಎಂದೂ ಭಾವಿಸಿ ಸರ್ಕಾರ ಕಠಿಣ ಕಾನೂನು ಜಾರಿಗೊಳಿಸಿ ಸಮ ಸಮಾಜದ ನಿರ್ಮಾಣಕ್ಕೆ ಸಹಕಾರಿಯಾಗಬೇಕೆಂದು ಆಗ್ರಹಿಸಿದರು.

ಪಳನಿ ಮತ್ತು ಶ್ರೀರಂಗಂ ಮುಂತಾದ ದೇವಾಲಯಗಳಲ್ಲೂ ಇದೇ ಸ್ಥಿತಿ ಇದೆ. ದೇವಾಲಯದೊಳಕ್ಕೆ ಒಂದಷ್ಟು ದೂರದವರೆಗೂ ಹೋಗಲು ಹರಿಜನರಿಗೆ ಅವಕಾಶವಿದೆ. ಈ ರೂಢಿಗಳಿಗೆ ಶಾಸ್ತ್ರಾಧಾರಗಳು ಇವೆಯೆಂದು ವಾದಿಸುವುದಾದರೆ, ತಾವೂ ಕೂಡ ಒಬ್ಬ ಸುಧಾರಕನಾಗಿ ದೇವರ ಆರಾಧನೆಯಲ್ಲಿ ಸಮಾನ ದೃಷ್ಟಿ ಇರಬೇಕೆಂದು ಸೂಚಿಸುವ ಅನೇಕ ಬರಹಗಳನ್ನು ಉಲ್ಲೇಖಿಸುವುದಾಗಿ ತಿಳಿಸಿದರು. ಸೃಷ್ಟಿಕರ್ತನಾದ ದೇವರಿಗೆ ಜಾತಿ ಅಥವಾ ವರ್ಗಗಳ ಭೇದ ಭಾವನೆ ಇಲ್ಲ. ಈಗಿರುವ ರೂಪದಲ್ಲಿ ಅಸ್ಪೃಶ್ಯತೆಗೆ ಹಿಂದೂ ಧರ್ಮದಲ್ಲಿ ಆಧಾರವೇ ಇಲ್ಲವೆಂದು ಅನೇಕ ಪಂಡಿತರು ರುಜುವಾತು ಪಡಿಸಿದ್ದಾರೆ. ಕಾಶ್ಮೀರ, ಬರೋಡಾ ಮತ್ತು ಕೊಲ್ಲಾಪುರಗಳಂಥ ಸಂಸ್ಥಾನಗಳಲ್ಲಿ ದೇವಾಲಯಗಳನ್ನು ಎಲ್ಲಾ ಹಿಂದೂಗಳಿಗೂ ತೆರೆಯಲಾಗಿದೆ. ತಿರುವಾಂಕೂರಿನಲ್ಲಿ ಅನೇಕ ದೇವಸ್ಥಾನಗಳಲ್ಲಿ ಧ್ವಜಸ್ಥಂಭಗಳವರೆಗೆ ಹರಿಜನರಿಗೆ ಪ್ರವೇಶವಿದೆ. ಈಗಲೂ ಕೂಡ ದೇವಾಲಯಗಳಲ್ಲಿ ಯುರೋಪಿನ ಪ್ರೇಕ್ಷಕರನ್ನೂ ಹಿಂದೂಗಳಲ್ಲದ ಸರ್ಕಾರಿ ಅಧಿಕಾರಿಗಳನ್ನೂ ವಿಶೇಷ ಮರ್ಯಾದೆಗಳೊಡನೆ ಬರಮಾಡಿಕೊಳ್ಳಲಾಗುತ್ತದೆ. ಆದರೆ ಅದೇ ಅರ್ಚಕರು ಮತ್ತು ಸಂಪ್ರದಾಯಸ್ಥ ಜನರು ತಮ್ಮವರೇ ಹಿಂದು ಸೋದರರಾದ ಹರಿಜನರಿಗೆ ಧ್ವಜಸ್ಥಂಭದವರೆಗೂ ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ. ಅನೇಕ ದೇವಾಲಯಗಳಲ್ಲು ಪದ್ಧತಿಗಳ ಬದಲಾವಣೆ ಕಂಡು ಬಂದಿದೆ. ಮುಜರಾಯಿ ದೇವಾಲಯಗಳಿಗೆ ಹರಿಜನರಿಗೆ ಪ್ರವೇಶ ಕೊಡುವುದಕ್ಕ ಬೆಂಬಲ ನೀಡುವ ನಿರ್ಣಯವನ್ನು ನ್ಯಾಯವಿಧಾಯಕ ಸಭೆಯ ಅಧಿಕಾರೇತರ ಸದಸ್ಯರು ಅಂಗೀಕರಿಸಿದ್ದಾರೆ ಎಂದು ಅವರು ಹೇಳಿದರು. ಈ ಚರ್ಚೆಯು ದುಷ್ಕರ್ಮಿಗಳ ಕೈಗೆ ಇನ್ನೊಂದು ಆಯುಧವನ್ನು ಒದಗಿಸುತ್ತದೆ ಎಂದು ಮುರುಗೇಶನ್ ಪಿಳ್ಳೆ ಭಾವಿಸಿದರು. ಅಂತಹವರು ಆದಿಕರ್ನಾಟಕರು ದೇವಾಲಯವನ್ನು ಪ್ರವೇಶಿಸಿ ಶಿಕ್ಷೆಗೆ ಒಳಗಾಗಬೇಕೆಂದು ಪ್ರೇರೇಪಿಸಲು ಇಚ್ಛಿಸಬಹುದೆಂದು ಅವರು ಹೇಳಿದರು. ಮಹಾತ್ಮಾ ಗಾಂಧಿಯವರು ಯಾವುದಕ್ಕಾಗಿ ಹೋರಾಡುತ್ತಿದ್ದಾರೆಯೋ ಅಂತಹ ಸುಧಾರಣೆಗಳಿಗೆ ದೇಶದಲ್ಲಿ ಈ ಸರ್ಕಾರಿ ಆಜ್ಞೆಯು ಒಂದು ಅಡ್ಡಿಯನ್ನು ಕಲ್ಪಿಸಿದೆ ಎಂದು ರಾಮಚಂದ್ರ ರಾವ್ ಸಿಂಧಿಯ ತಿಳಿಸಿದರು. ಸೂಚನೆಯನ್ನು ಓಟಿಗೆ ಹಾಕಬೇಕೆಂದು ಕೇಳಿದರು. ಸದಸ್ಯರು ಈ

ವಿಷಯಕ್ಕೆ ಸರ್ಕಾರದ ಗಮನವನ್ನು ಸೆಳೆದಿದ್ದಾಗಿದೆ ಎಂದು ಅಧ್ಯಕ್ಷರು ಹೇಳಿದರು. ಸೂಚಕರು ವಿಷಯವನ್ನು ಸರ್ಕಾರಕ್ಕೆ ಬಿಡಬೇಕೆಂದು ಭಾಷ್ಯಂ ಅಯ್ಯಂಗಾರ್ ಪ್ರಾರ್ಥಿಸಿದರು. ಅಧ್ಯಕ್ಷರು ಅದನ್ನು ಒಪ್ಪಿದಾಗ ಸೂಚಕರು ತಮ್ಮ ವಿಷಯವನ್ನು ಒತ್ತಾಯಪಡಿಸಲಿಲ್ಲ.[೧೬]

ಮುಜರಾಯಿ ಆಡಳಿತಕ್ಕೆ ಒಳಪಟ್ಟ ದೇವಾಲಯಗಳಲ್ಲಿ ಹಿಂದೂಗಳಲ್ಲದವರನ್ನು ಎಲ್ಲಿಯವರೆಗೆ ಬಿಡಲಾಗುವುದೋ ಅಲ್ಲಿಯವರೆಗಾದರೂ ಆದಿಕರ್ನಾಟಕರನ್ನು ಮತ್ತು ಅಸ್ಪೃಶ್ಯರೆಂದು ಹೇಳಲಾಗುವ ಇತರರನ್ನೂ ಒಳಗೆ ಬರುವಂತೆ ಅವಕಾಶ ಕೊಡುವುದು ಅವಶ್ಯಕವೆಂದು ಒತ್ತಾಯಪಡಿಸುವ ಇನ್ನೊಂದು ಖೋತಾ ನಿರ್ಣಯವನ್ನು ಟಿ.ರಾಮಚಂದ್ರ ಮಂಡಿಸಿದರು. ಮೇಲು ಜಾತಿಯ ಹಿಂದೂಗಳ ಭಾವನೆಗಳನ್ನೂ ಅವರು ಬೆಲೆ ಕೊಡುವ ಸಂಪ್ರದಾಯಗಳನ್ನೂ ಕೆಡಿಸುವುದು ತಮ್ಮ ಅಪೇಕ್ಷೆಯಲ್ಲ. ಐರೋಪ್ಯರು ಸೇರಿದಂತೆ ಹಿಂದೂಗಳಲ್ಲದವರನ್ನು ದೇವಾಲಯದಲ್ಲಿ ಒಂದು ನಿರ್ದಿಷ್ಟ ಎಲ್ಲೆಯವರೆಗೆ ಬಿಡಲಾಗುತ್ತದೆ. ಅಲ್ಲಿಯವರೆಗೆ ಕೂಡ ಆದಿಕರ್ನಾಟಕರಿಗೆ ಅವಕಾಶವಿಲ್ಲದಿರುವುದು ವ್ಯಸನಕರವಾಗಿದೆ. ಧ್ವಜಸ್ತಂಭದವರೆಗೆ ಹಿಂದೂಗಳಲ್ಲದವರಿಗೂ ಪ್ರವೇಶಾವಕಾಶ ಇದೆ ಎಂದು ಒಂದು ಪ್ರಶ್ನೆಗೆ ಉತ್ತರವಾಗಿ ಸರ್ಕಾರ ತಿಳಿಸಿತ್ತು. ಆದರೆ ಆದಿಕರ್ನಾಟಕರಿಗೆ ರಸ್ತೆಯ ಬದಿಗಿರುವ ತೀರಾ ಹೊರಗಿನ ಬಾಗಿಲಾದ ಮಹಾದ್ವಾರದವರೆಗೆ ಮಾತ್ರ ಅವಕಾಶವಿದೆ ಎಂದು ಅವರು ಹೇಳಿದರು. ಈ ಕೋರಿಕೆಯನ್ನು ಕೆ.ಟಿ.ಭಾಷ್ಯಂ ಅಯ್ಯಂಗಾರ್ ಪ್ರಬಲವಾಗಿ ಸಮರ್ಥಿಸಿದರು. ಆದಿಕರ್ನಾಟಕರು ಕೂಡ ಹಿಂದೂ ಸಮಾಜದ ಭಾಗವಾಗಿದ್ದಾರೆ. ದೇವಾಲಯಗಳಲ್ಲಿ ಅವರಿಗೆ ಒಂದೇ ರೀತಿಯ ವರ್ತನೆ ತೋರಿಸಬೇಕು. ಹಿಂದೂಗಳಲ್ಲದವರು ದೇವಾಲಯದಲ್ಲಿ ಒಂದು ನಿರ್ದಿಷ್ಟ ಸ್ಥಳದವರೆಗೆ ಹೋಗಬಹುದಾದರೆ ಹಿಂದೂ ಗುಂಪಿಗೆ ಸೇರಿದ ಒಂದು ವರ್ಗವನ್ನು ಅಲ್ಲಿಯವರೆಗೆ ಹೋಗಲು ಬಿಡದೆ ಇರುವುದು ಅವಿವೇಕ. ಅದರಿಂದ ಪಾವಿತ್ರ್ಯ ಹೇಗೆ ಹಾಳಾಗುವುದೆಂಬುದು ತಿಳಿಯದು. ಆದಿಕರ್ನಾಟಕರು ಹಿಂದೂಗಳು ಪೂಜಿಸುವ ದೇವರನ್ನೇ ಪೂಜಿಸುತ್ತಾರೆ. ಅವರ ರೂಢಿಗಳು ಮತ್ತು ರೀತಿಗಳು ಇದೇ ರೀತಿಯಲ್ಲಿವೆ ಎಂದು ಅವರು ನುಡಿದರು. ಖೋತಾ ನಿರ್ಣಯಕ್ಕೆ ಎಂ.ರಾಮಚಂದ್ರ ರಾವ್ ಸಿಂಧಿಯ ಸಹ ಬೆಂಬಲ ನೀಡಿದರು. ಈ ವಿಷಯದಲ್ಲಿ ತಮ್ಮ ಮನಸ್ಸಿಗೆ ನಂಬಿಕೆ ಉಂಟುಮಾಡಲು ಹಿಂದೂ ಮುಖಂಡರು ಅಸಮರ್ಥರಾಗಿದ್ದಾರೆಂದು ಅವರು ಹೇಳಿದರು. ಹೇಗೋ ಅಂತೂ ಈ ಶಾಪ ಅನೇಕ ವರ್ಷಗಳಿಂದ ಹಿಂದೂ ಸಮಾಜದ ಮೇಲೆ ಬಿದ್ದಿದೆ. ಆದಿಕರ್ನಾಟಕರು ಇದೇ ರೈಲುಗಳಲ್ಲಿ ಪ್ರಯಾಣ ಮಾಡುತ್ತಾರೆ ಮತ್ತು ಇತರರೊಡನೆ ಇದೇ ರಸ್ತೆಗಳ ಮೇಲೆ ನಡೆಯುತ್ತಾರೆ. ಒಂದೇ ಮೇಜಿನ ಮೇಲೆ ತಿಂಡಿ ತಿನ್ನುತ್ತಾರೆ. ಆದರೆ ದೇವಾಲಯದಲ್ಲಿ ಒಟ್ಟಿಗೆ ಪೂಜೆ ಮಾಡುವುದು ಸಾಧ್ಯವಿಲ್ಲ – ಎಂದು ಅವರು ವ್ಯಥೆಪಟ್ಟರು.[೧೭]

ದೇವಾಲಯಗಳನ್ನು ಹಿಂದೂ ರಾಜರು ಕಟ್ಟಿಸಿದ್ದಾರೆ ಎಂದು ಪಿ.ಮುರುಗೇಶನ್ ಪಿಳ್ಳೆ ಹೇಳಿ, ಅನೇಕ ದೇವಾಲಯಗಳನ್ನು ಆದಿಕರ್ನಾಟಕರ ನೆರವಿನಿಂದ ಕಟ್ಟಲಾಗಿದೆ ಎಂದರು.

ಅನೇಕ ಹಳೆಯ ಸಂಪ್ರದಾಯಗಳು ಹೊಸದಕ್ಕೆ ಸ್ಥಳ ಕೊಟ್ಟು ಬದಲಾಯಿಸುತ್ತಿವೆ. ಸಂಪ್ರದಾಯ ಶರಣರಾದ ಜನರು ತಾವೇ ರೂಢಿಗಳನ್ನೂ ರೀತಿಗಳನ್ನೂ ಮಾರ್ಪಡಿಸುತ್ತಿದ್ದಾರೆ ಎಂದು ಅವರು ನುಡಿದರು. ಯಾವ ಅಧಿಕಾರೇತರ ಸದಸ್ಯರೂ ಖೋತಾ ನಿರ್ಣಯಕ್ಕೆ ವಿರೋಧವಾಗಿಲ್ಲ ವೆಂದು ಹೆಚ್.ಸಿ.ಸಿದ್ದಪ್ಪ ತಿಳಿಸಿದರು. ಉತ್ತರಾಧಿಕಾರ, ಪಿತ್ರಾರ್ಜಿತ ಮುಂತಾದ ವಿಷಯಗಳಲ್ಲಿ ಕ್ರಾಂತಿಕಾರಿಯಾಗಿ ಹೆಜ್ಜೆ ಹಾಕಿರುವ ಮೈಸೂರಿನಂತಹ ಪ್ರಗತಿಶೀಲ ಆಡಳಿತವು ಹೀಗೆ ಸಂಪ್ರದಾಯಸ್ಥ ಮನೋಭಾವವನ್ನು ಹೊಂದಿರಬಾರದೆಂದು ಅವರು ಸೂಚಿಸಿದರು. ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಮಾತನಾಡಿ ಆದಿಕರ್ನಾಟಕರು ಧ್ವಜಸ್ತಂಭದವರೆಗೆ ಹೋಗುವುದನ್ನು ತಾವು ವಿರೋಧಿಸುವುದಿಲ್ಲವಾದರೂ ಅವರು ಗರ್ಭಗುಡಿಯೊಳಕ್ಕೆ ಪ್ರವೇಶಿಸುವುದನ್ನು ವಿರೋಧಿಸುವುದಾಗಿ ತಿಳಿಸಿದರು. ಈ ವಿಷಯದಲ್ಲಿ ಮಠಗಳ ಅಭಿಪ್ರಾಯಗಳನ್ನು, ಸಮ್ಮತಿಯನ್ನು ಸರ್ಕಾರ ಪಡೆಯಬಹುದೆಂದು ಸೂಚಿಸಿದರು.

ದೇವಾಲಯಗಳಿಗೆ ಭೇಟಿ ನೀಡುವ ಐರೋಪ್ಯರು ಮಾಮೂಲು ಪದ್ಧತಿಗಳನ್ನು ಒಪ್ಪಿಕೊಂಡಿದ್ದಾರೆಯೇ ಎಂದು ಎಂ.ಸಿ. ಲಿಂಗೇಗೌಡ ಪ್ರಶ್ನಿಸಿದರು. ಇಂದು ಏನನ್ನು ಮಾಡಲಾಗುವುದೋ ಅದು ನಾಳೆಗೆ ಮಾಮೂಲಾಗುತ್ತದೆ. ಆದಿಕರ್ನಾಟಕರು ದೇವಾಲಯವನ್ನು ಪ್ರವೇಶಿಸಿದರೆ ದೇವರು ತನ್ನ ಸ್ಥಳದಿಂದ ಓಡಿಹೋಗುತ್ತಾನೆಯೇ ಎಂದು ಕೇಳಬೇಕಾಗುತ್ತದೆ. ಚುಂಚನಗಿರಿ ಮಠದಲ್ಲಿ ಹಿಂದೂಗಳಿಗೆ ಅವಕಾಶವಿರುವ ಸ್ಥಳಗಳಿಗೆಲ್ಲಾ ಆದಿಕರ್ನಾಟಕರನ್ನೂ ಬಿಡಲಾಗುವುದು ಎಂದು ಅವರು ತಿಳಿಸಿದರು. ಈ ವಿಷಯದಲ್ಲಿ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ತಳೆದಿರುವ ನಿಲುವಿನ ಬಗ್ಗೆ ಕೆ.ಚಂಗಲರಾಯರೆಡ್ಡಿ ಆಶ್ಚರ್ಯಪಟ್ಟರು. ಅಯ್ಯಂಗಾರ್ ಹಿಂದೂ ಸಮಾಜದ ಸಂಪ್ರದಾಯಸ್ಥ ವರ್ಗಗಳ ಪರವಾಗಿ ಮಾತನಾಡುತ್ತಿದ್ದಾರೆಂದು ಅವರು ಹೇಳಿದಾಗ, ತಾವು ತಮ್ಮ ಪರವಾಗಿ ಮಾತ್ರ ಮಾತನಾಡಿರುವುದಾಗಿ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ತಿಳಿಸಿದರು. ಮುಜರಾಯಿ ಆಯುಕ್ತರ ಮನೋಭಾವ ಕುರಿತು ನಿಜಕ್ಕೂ ತಮಗೆ ಆಶ್ಚರ್ಯವೆಂದು ರೆಡ್ಡಿ ಹೇಳಿದರು. ಈ ವಿಷಯದಲ್ಲಿ ಯಾವುದೇ ಮುಖ್ಯವಾದ ತತ್ವ ಸಂಬಂಧ ಪಟ್ಟಿಲ್ಲವೆಂದೂ ಇದರಿಂದ ಹಿಂದೂಗಳಲ್ಲಿ ಮತಧರ್ಮದ ದ್ವೇಷಗಳೇನೂ ಸೃಷ್ಟಿಯಾಗುವುದಿಲ್ಲ ವೆಂದೂ ಅವರು ನುಡಿದರು. ಅಧಿಕಾರೇತರ ಸದಸ್ಯರು ಸರ್ವಾನುಮತದಿಂದ ಒಪ್ಪಿಕೊಂಡಿರುವ ಒಂದು ಕೋರಿಕೆಯನ್ನು ಕೂಡ ಮುಜರಾಯಿ ಆಯುಕ್ತರು ವಿರೋಧಿಸುತ್ತಿರುವುದಕ್ಕಾಗಿ ಎಸ್.ಸಿ. ಮಲ್ಲಯ್ಯ ಆಶ್ಚರ್ಯಪಟ್ಟರು. ಸಂಸ್ಥಾನದಲ್ಲಿರುವ ಪ್ರತಿಯೊಬ್ಬ ಸಂಪ್ರದಾಯಸ್ಥ ಹಿಂದೂ ಕೂಡ ಹೋಗಿ ಸರ್ಕಾರ ಈ ಕೋರಿಕೆಯನ್ನು ಮಾನ್ಯ ಮಾಡಬೇಕೆಂದು ಒತ್ತಾಯಿಸಬೇಕೇ ಎಂದು ತಿಳಿಯದು. ಜನರ ಪ್ರತಿನಿಧಿಗಳ ಅಭಿಪ್ರಾಯವನ್ನು ಸರ್ಕಾರ ಕೇಳಬೇಕು.

ಕೆ.ಆರ್.ಶ್ರೀನಿವಾಸ ಅಯ್ಯಂಗಾರ್ ಅವರು ಒಂದು ವ್ಯಕ್ತಿಗತ ವಿವರಣೆಯನ್ನು ನೀಡಿ ಇಂತಹ ಒಂದು ಸುಧಾರಣೆಯನ್ನು ಜನರ ಗಂಟಲುಗಳೊಳಕ್ಕೆ ತುರುಕಬಾರದೆಂದು ಹೇಳಿದರು.

ಖೋತಾ ನಿರ್ಣಯದಲ್ಲಿರುವ ಕೋರಿಕೆಯು ಸಕಾರಣವಾಗಿದೆ ಮತ್ತು ಅನೇಕ ಸಂಪ್ರದಾಯಶೀಲ ವ್ಯಕ್ತಿಗಳು ಅದಕ್ಕೆ ಒಪ್ಪುವಂತೆ ಪ್ರೇರೇಪಿಸಬಹುದು ಎಂದು ಅವರು ನುಡಿದರು. ಈ ವಿಷಯದಲ್ಲಿ ಕಂಡುಬಂದಿರುವ ಅಭಿಪ್ರಾಯದ ಏಕರೂಪತೆಗಾಗಿ ಎಸ್.ಪಿ. ರಾಜಗೋಪಾಲಾಚಾರಿ ಸಂತೋಷ ಸೂಚಿಸಿದರು. ಖೋತಾ ನಿರ್ಣಯದಲ್ಲಿ ಅಡಕವಾಗಿರುವ ಭಾವನೆಯ ಬಗ್ಗೆ ಸರ್ಕಾರ ಸಹಕಾರ ಹೊಂದಿದೆ. ಇನ್ನಷ್ಟು ವಿಚಾರಣೆ ನಡೆಸಿದ ನಂತರ ಈ ಸಲಹೆಗೆ ಅನುಕೂಲವಾಗಿ ಗಣನೀಯ ಪ್ರಮಾಣದ ಅಭಿಪ್ರಾಯವಿರುವುದು ಕಂಡುಬಂದರೆ ಸರ್ಕಾರವು ಸಲಹೆಯನ್ನು ಪರಿಶೀಲಿಸುವುದು. ಸಲಹೆಯನ್ನು ಸಹಾನುಭೂತಿಯಿಂದ ಕಾರ್ಯಗತ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗು ವಂತೆ ಸರ್ಕಾರ ನೋಡಿಕೊಳ್ಳುವುದು. ಇಂತಹ ವಿಷಯಗಳನ್ನು ಮಾಡುವುದರಲ್ಲಿ ಕಷ್ಟಗಳಿರುತ್ತವೆ. ಎಲ್ಲ ದೇವಾಲಯಗಳಲ್ಲೂ ರೂಢಿಗಳು ಒಂದೇ ರೀತಿಯಲ್ಲಿರುವುದಿಲ್ಲ. ಮಹಾದ್ವಾರದಿಂದ ಇನ್ನೂ ಮುಂದೆ ಹೋಗುವುದಕ್ಕೆ ಹಿಂದೂಗಳಲ್ಲದವರಿಗೆ ಅವಕಾಶ ಕೊಡದೆ ಇರುವ ನೂರಾರು ದೇವಾಲಯಗಳಿವೆ. ಮಹಾದ್ವಾರದಿಂದ ಮುಂದೆ ಹಿಂದೂಗಳಲ್ಲದವರಿಗೆ ಪ್ರವೇಶಾವಕಾಶ ನೀಡುವ ಹಿಂದೂ ದೇವಾಲಯಗಳು ಹೆಚ್ಚು ಸಂಖ್ಯೆಯಲಿಲ್ಲ. ಹಲವಾರು ದೇವಾಲಯಗಳಲ್ಲಿರುವ ರೂಢಿಗಳನ್ನು ಕುರಿತು ಸರ್ಕಾರ ವಿಚಾರಣೆ ನಡೆಸುವುದು ಎಂದು ಅವರು ಹೇಳಿದರು. ಚರ್ಚೆಗೆ ರಾಮಚಂದ್ರರವರು ಜವಾಬು ಕೊಟ್ಟು ಮುಜರಾಯಿ ದೇವಾಲಯಗಳ ನ್ಯಾಸಧಾರಿಯಾಗಿ ಸರ್ಕಾರವು ಅನೇಕ ಅವಿವೇಕದ ರೂಢಿಗಳನ್ನು ಬದಲಾಯಿಸಿದೆ ಎಂದು ಹೇಳಿದರು. ಮುಜರಾಯಿ ದೇವಾಲಯಗಳಲ್ಲಿ ದೇವದಾಸಿಯರ ಸೇವೆಗಳನ್ನು ತಪ್ಪಿಸಲಾಗಿದೆ. ಬಹಿರಂಗ ಸ್ಥಳಗಳಲ್ಲಿ ಪ್ರಾಣಿಬಲಿಯನ್ನು ಸರ್ಕಾರ ನಿಲ್ಲಿಸಿದೆ. ಸಾರ್ವಜನಿಕ ಅಭಿಪ್ರಾಯವನ್ನು ಸರ್ಕಾರ ಹೇಗೆ ತಿಳಿಯುವುದೆಂದು ಊಹಿಸಬೇಕಾಗಿದೆ. ಆದಿಕರ್ನಾಟಕರು ಸಹ ಹಿಂದೂಗಳಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಅನೇಕ ಆದಿಕರ್ನಾಟಕರು ತಮ್ಮ ಹಣೆಗಳ ಮೇಲೆ ನಾಮಗಳನ್ನು ಹಾಕುತ್ತಾರಾದರೂ ಅವರು ದೇವಾಲಯದೊಳಕ್ಕೆ ಪ್ರವೇಶಿಸುವುದು ಸಾಧ್ಯವಿಲ್ಲ. ವಿದ್ಯಾವಂತರಾದ ಯುವಕ ಆದಿಕರ್ನಾಟಕರು ಈ ಅಪಮಾನ ಅಸಹನೀಯವೆಂದು ಭಾವಿಸಿದ್ದಾರೆ. ತಾವು ಏಕೆ ಕ್ರಿಶ್ಚಿಯನ್ನರಾಗಬಾರದೆಂದು ಅವರು ಕೇಳುತ್ತಾರೆ ಎಂದರು. ಈ ವಿಷಯದಲ್ಲಿ ಭರವಸೆಯನ್ನೇನೂ ರಾಜಗೋಪಾಲಾಚಾರಿ ಕೊಡಲಿಲ್ಲ.[೧೮]

ಅದೇ ದಿನ ಮುಜರಾಯಿ ಸಂಸ್ಥೆಗಳಿಗಾಗಿ ಬೇಡಿಕೆಯ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಟಿ.ರಾಮಚಂದ್ರ ಒಂದು ಖೋತಾ ನಿರ್ಣಯವನ್ನು ಮಂಡಿಸಿ ಮುಜರಾಯಿ ಆಡಳಿತದ ದೇವಾಲಯಗಳಲ್ಲಿ ಪೂಜೆ ಮಾಡಲು ಹರಿಜನರಿಗೆ ಮತ್ತು ಆದಿದ್ರಾವಿಡರಿಗೆ ಅವಕಾಶವಿರುವಂತೆ ಮಾಡಬೇಕೆಂದರು. ಈಗ ಹರಿಜನರೆಂದು ಕರೆಯಲಾಗುವ ಅಸ್ಪೃಶ್ಯರಿಗೆ ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆ ಇರಬೇಕೆಂಬ ಚಳುವಳಿಗೆ ಸಂಸ್ಥಾನದಲ್ಲಿರುವ ಬೇರೆ ಬೇರೆ ಜಾತಿಗಳ

ಜನರು ಬೆಂಬಲವಾಗಿದ್ದಾರೆಂದು ಅವರು ಹೇಳಿದರು. ಮೇಲುಜಾತಿಯ ಹಿಂದೂಗಳ ಮನೋಭಾವದಲ್ಲಿ ಭಾರಿ ಬದಲಾವಣೆ ಉಂಟಾಗಿದೆ. ಕಾಶ್ಮೀರ, ಬರೋಡ ಮತ್ತು ಕೊಲ್ಲಾಪುರ ಮುಂತಾದ ಸಂಸ್ಥಾನಗಳಲ್ಲಿ ಹರಿಜನರಿಗೆ ಸಾಮಾಜಿಕ ಹಕ್ಕುಗಳನ್ನು ಕೊಡಲು ಸುಧಾರಣೆಗಳನ್ನು ಕೈಗೊಳ್ಳಲಾಗಿದೆ. ಸರ್ಕಾರಗಳು ನಡೆಸುವ ಧಾರ್ಮಿಕ ಸಂಸ್ಥೆಗಳಲ್ಲಿ ಹಿಂದಿನ ಅಸ್ಪೃಶ್ಯ ವರ್ಗದವರು ಪೂಜೆ ಮಾಡಲು ಅವಕಾಶ ಕೊಡಲಾಗಿದೆ. ಕೇವಲ ನ್ಯಾಯ ಮತ್ತು ಸಮಂಜಸತೆಯ ದೃಷ್ಟಿಯಿಂದಲೂ ಕೂಡ ಹಿಂದುಗಳ ಜನಸಂಖ್ಯೆಯಲ್ಲಿ ೪/೫ ಭಾಗವನ್ನು ಸರ್ಕಾರದ ಆಡಳಿತದಲ್ಲಿರುವ ದೇವಾಲಯಗಳಿಂದ ದೂರವಿಡುವುದು ಸಮರ್ಥನೀಯವಲ್ಲ. ಶಾಸ್ತ್ರಗಳು ಅಸಮಾನತೆಯನ್ನು ತರುತ್ತವೆಂದು ಹೇಳಲಾಗದು. ಹಿಂದೂ ಧರ್ಮದ ಶ್ರೇಷ್ಠ ಸಂತರ ಜೀವನಗಳು ಸಮಾನತೆಯ ಉದಾಹರಣೆಗಳಾಗಿವೆ. ಶ್ರೀಗಳಾದ ಶಂಕರಾಚಾರ್ಯ, ರಾಮಾನುಜಾಚಾರ್ಯ, ಬಸವೇಶ್ವರ ಮತ್ತು ಆಧುನಿಕ ಕಾಲದಲ್ಲಿ ಗುರುನಾನಕ್, ರಾಮಕೃಷ್ಣ ಪರಮಹಂಸ, ದಯಾನಂದ ಸರಸ್ವತಿ, ರಾಜಾರಾಮ್ ಮೋಹನ್‌ರಾಯ್, ಗಾಂಧೀಜಿ ಇವರೆಲ್ಲರೂ ಸಮಾನತೆಯ ಪ್ರತಿಪಾದಕರಾಗಿದ್ದರು. ಇಷ್ಟೆಲ್ಲಾ ಘೋಷಣೆಗಳಿದ್ದರೂ ಕೂಡ ಅಸ್ಪೃಶ್ಯತೆಯು ಉಳಿದೇ ಇದೆ. ಅದು ಹಿಂದೂ ಸಮಾಜ ವ್ಯವಸ್ಥೆಯ ಮೇಲಿನ ಶಾಪವಾಗಿದೆ ಮತ್ತು ಹಿಂದೂ ಧರ್ಮವನ್ನು ಕೀಳು ಮಾಡುತ್ತದೆ. ಇತರ ದೇಶಗಳ ಜನರು ಈ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ ನಾವು ಅವಮಾನದಿಂದ ತಲೆ ತಗ್ಗಿಸಬೇಕಾಗುತ್ತದೆ. ಮತಧರ್ಮದ ಪವಿತ್ರವಾದ ಹೆಸರಿನಲ್ಲಿ ದಬ್ಬಾಳಿಕೆಯನ್ನು ಸಹಿಸಲಾಗದ್ದರಿಂದ ನೂರಾರು ಸಹಸ್ರ ಜನರು ಹಿಂದೂ ಸಮುದಾಯವನ್ನು ತ್ಯಜಿಸಿದ್ದಾರೆ. ಮೇಲುಕೋಟೆ ಮತ್ತು ಬೇಲೂರಿನಲ್ಲಿ ವರ್ಷದಲ್ಲಿ ಮೂರು ದಿನ ಹರಿಜನರು ದೇವಾಲಯದೊಳಕ್ಕೆ ಪ್ರವೇಶಿಸಲು ಅನುಮತಿ ಕೊಡಲಾಗಿದೆ. ಸಾವಿರಾರು ಹರಿಜನರು ಮೇಲುಜಾತಿಯ ಬ್ರಾಹ್ಮಣರೊಡನೆ ಭುಜಕ್ಕೆ ಸೋಕಿಸುತ್ತಾರೆ. ಇದನ್ನು ವರ್ಷಪೂರ್ತಿ ಮಾಡಿದರೆ ಅದರ ಸಂತೋಷ ಇನ್ನೂ ಹೆಚ್ಚಾಗಿರುತ್ತದೆ. ಹರಿಜನರು ದೇವಾಲಯದೊಳಕ್ಕೆ ಹೋದಾಗ ದೇವರು ಓಡಿಹೋಗುವುದಿಲ್ಲ. ದೇವಾಲಯದಲ್ಲಿ ಪೂಜೆ ಮಾಡುವ ಸಹಸ್ರಾರು ಜನರ ಹೃದಯಗಳಲ್ಲಿ ದೇವರು ಆರೂಢನಾಗಿದ್ದಾನೆ. ಹರಿಜನರು ದೇವಾಲಯದೊಳಕ್ಕೆ ಬರುವ ಮೂರು ದಿನಗಳಲ್ಲಿ ಮೈಲಿಗೆ ಆಗದಿದ್ದರೆ ಇತರ ದಿನಗಳಲ್ಲೂ ಅದು ಹಾಗಾಗುವುದಿಲ್ಲ. ಈ ವಿಷಯದಲ್ಲಿ ಬರಬಹುದಾದ ಯಾವುದೇ ಭಾವನೆ ತಾರ್ಕಿಕ ಆಧಾರವನ್ನು ಹೊಂದಿರಬೇಕು. ಸರ್ಕಾರವು ಧೈರ್ಯ ಮಾಡಿ ತನ್ನ ಹತೋಟಿಯಲ್ಲಿರುವ ದೇವಾಲಯಗಳಲ್ಲಿ ಪೂಜೆ ಸಲ್ಲಿಸಲು ಹರಿಜನರಿಗೆ ತೆರೆದಿಡಬೇಕು. ಸಾರ್ವಜನಿಕ ಅಭಿಪ್ರಾಯಕ್ಕೆ ಕಾಯುತ್ತಿರುವುದರ ಬದಲು ಸರ್ಕಾರವು ದಾರಿ ತೋರಿಸಬೇಕು.

ಅಸ್ಪೃಶ್ಯರೆಂದು ಹೇಳಲಾಗುವವರು ಹಿಂದೂ ಸಮಾಜದ ಅತಿ ಮುಖ್ಯ ಭಾಗಗಳಲ್ಲಿ ಒಂದೆಂದು ಡಿ.ಹೆಚ್. ಚಂದ್ರಶೇಖರಯ್ಯ ಹೇಳಿದರು. ತತ್ವಶಾಸ್ತ್ರ ಮತ್ತು ನೀತಿ ವಿಷಯಗಳ

ಬಗ್ಗೆ ನಾವೆಲ್ಲಾ ಹೆಮ್ಮೆಯಿಂದ ಮಾತನಾಡುತ್ತೇವೆ. ಆದರೆ ಹಿಂದೂಗಳ ಒಂದು ವರ್ಗವು ಅಪಮಾನಕ್ಕೆ ಮತ್ತು ಸಾಮಾಜಿಕ ಅಸಮಾನತೆಗೆ ತುತ್ತಾಗಿರುವಾಗ ನಾವು ಸುಮ್ಮನಿರಬಾರದು. ಎದ್ದು ನಿಂತು ಇಂತಹ ಅಸಮಾನತೆಗಳನ್ನು ನಿವಾರಿಸಲು ಸಾಧ್ಯವಿರುವ ಸರ್ವಪ್ರಯತ್ನ ಮಾಡಬೇಕಾದ ಸಮಯ ಬಂದಿದೆ. ಅವರುಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಮೈಸೂರು ಸರ್ಕಾರ ಒಂದಷ್ಟು ಪ್ರಯತ್ನ ಮಾಡುತ್ತಿದೆ. ದೇವಾಲಯಗಳಲ್ಲಿ ಹಿಂದೂಗಳಲ್ಲದವರನ್ನು ಎಲ್ಲಿಯವರೆಗೆ ಬಿಡಲಾಗುತ್ತದೆಯೋ ಅಲ್ಲಿಯವರೆಗಾದರೂ ಹರಿಜನರಿಗೆ ಪ್ರವೇಶ ಕೊಡಬೇಕು. ಈ ಹಿಂದೆ ಸರ್ಕಾರದ ಉತ್ತರಗಳು ಸ್ವಲ್ಪವೂ ತೃಪ್ತಿಕರವಾಗಿಲ್ಲ. ಮುಜರಾಯಿ ಇಲಾಖೆಯಲ್ಲಿ ಸೇರಿರುವ ಹಣ ಎಲ್ಲ ಜನರಿಂದ ಬಂದಿದೆ ಮತ್ತು ಅದನ್ನು ಹಿಂದೂಗಳಲ್ಲಿ ಎಲ್ಲ ವರ್ಗಗಳ ಅತ್ಯುತ್ತಮ ಹಿತಾಸಕ್ತಿಗಾಗಿ ಬಳಸಬೇಕು. ಸದ್ಯದಲ್ಲಿ ಹಳ್ಳಿಗಳಲ್ಲಿರುವ ಬಾವಿಗಳನ್ನು ಇತರ ಕೋಮುಗಳ ಒತ್ತಡದ ಪರಿಣಾಮವಾಗಿ ಅಸ್ಪೃಶ್ಯರು ಉಪಯೋಗಿಸುತ್ತಿಲ್ಲ. ದೇವಾಲಯ ಪ್ರವೇಶಕ್ಕೆ ಅನುಮತಿ ಲಭಿಸಿದರೆ ಅದು ಜನರನ್ನು ಜಾಗೃತಗೊಳಿಸುತ್ತದೆ. ಒಂದು ದೇವಾಲಯಕ್ಕಿಂತ ಬಹುಮುಖ್ಯವಾದ ಅರಮನೆಯೊಳಕ್ಕೆ ಅಸ್ಪೃಶ್ಯನನ್ನು ಬಿಡಬಹುದಾದರೆ ಅವರುಗಳನ್ನು ದೇವಾಲಯ ಗಳೊಳಕ್ಕೆ ಬಿಡಲು ಸರ್ಕಾರ ಆಕ್ಷೇಪಿಸಬಾರದು–ಎಂದು ಅವರು ನುಡಿದರು. ಖೋತಾ ನಿರ್ಣಯಕ್ಕ ಪಿ.ಸುಬ್ಬರಾಮ ಚೆಟ್ಟಿ ಬೆಂಬಲ ನೀಡಿದರು. ಮೇಲುಜಾತಿಯ ಹಿಂದೂಗಳ ಮನೋಭಾವ ತುಂಬ ಬದಲಾಯಿಸಿದೆ ಎಂದು ಅವರು ತಿಳಿಸಿದರು. ಸರ್ಕಾರವು ದಾರಿ ತೋರಿಸಿದರೆ ಸಾರ್ವಜನಿಕರು ಅದನ್ನು ಒಪ್ಪಿಕೊಳ್ಳುತ್ತಾರೆ. ಅಲ್ಲಲ್ಲಿ ಪ್ರತಿಭಟನೆಗಳಿದ್ದರೂ ಕೂಡ ನಿಮ್ನ ವರ್ಗಗಳ ಜನರಿಗೆ ಶಾಲೆಗಳಲ್ಲಿ ಅವಕಾಶ ಕೊಡಲಾಗಿದೆ.[೯]

ಮುರುಗೇಶನ್ ಪಿಳ್ಳೆ ಮಾತನಾಡಿ ನಿಮ್ನ ವರ್ಗಗಳ ಅನೇಕ ಜನರು ವೇಷ ಮರೆಸಿಕೊಂಡು ದೇವಾಲಯಗಳನ್ನು ಪ್ರವೇಶಿಸುತ್ತಿದ್ದಾರೆಂದು ತಿಳಿಸಿದರು. ಹರಿಜನರಿಗೆ ದೇವಾಲಯಗಳನ್ನು ತೆರೆಯುವ ಮುನ್ನ ಭಾರಿ ಪ್ರಮಾಣದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಸೃಷ್ಟಿಸಬೇಕಾಗಿದೆ ಎಂದು ಸರ್ಕಾರವು ಕೋರುತ್ತಲೇ ಇದೆ. ಭಾರತದ ಎಲ್ಲೆಡೆಗಳಲ್ಲೂ ಅದಕ್ಕೆ ಅನುಕೂಲವಾಗಿ ಭಾರಿ ಪ್ರಮಾಣದ ಸಾರ್ವಜನಿಕ ಅಭಿಪ್ರಾಯ ಕಂಡುಬಂದಿದೆ. ಹರಿಜನರು ಎನ್ನುವ ಪದಕ್ಕೆ ದೇವರ ಮನುಷ್ಯರು ಎಂದರ್ಥವಾಗುತ್ತದೆ. ಆದರೆ ಹರಿಯ ಆಲಯಗಳೊಳಗೆ ಅವರಿಗೆ ಪ್ರವೇಶವನ್ನು ನಿರಾಕರಿಸಲಾಗುತ್ತಿದೆ ಎಂದು ಅವರು ಹೇಳಿ, ಸರ್ಕಾರವು ತನ್ನ ಭಾವನೆಯನ್ನು ಬದಲಾಯಿಸಿಕೊಳ್ಳಬೇಕೆಂದು ಕಳಕಳಿಯಿಂದ ಕೇಳಿದರು. ಡಿ.ವಿ.ಗುಂಡಪ್ಪನವರು ಬೇರೆ ರೀತಿಯಲ್ಲಿ ದ್ದರು. ತಾವು ನ್ಯಾಯ ಮತ್ತು ಸಮಾನತೆಯಲ್ಲಿ ನಂಬಿಕೆ ಇಟ್ಟವರಾಗಿದ್ದು ಈ ಧಾರ್ಮಿಕ ಅಥವಾ ಸಮಾಜೋ–ಧಾರ್ಮಿಕ ವಿಷಯದಲ್ಲಿ ಪ್ರಾತಿನಿಧ್ಯವಿಲ್ಲದ ಕೋಮಿನ ಪರವಾಗಿ ಮಾತನಾಡು ತ್ತಿರುವುದಾಗಿ ಅವರು ನುಡಿದರು. ಖೋತಾ ನಿರ್ಣಯದಲ್ಲಿರುವ ತತ್ವಗಳ ಬಗ್ಗೆ ಅವರು

ಸಹಾನುಭೂತಿ ಸೂಚಿಸಿದರು. ಆದರೆ ಅದರಲ್ಲಿ ತಿಳಿಸಲಾಗಿರುವ ವಿಧಾನಗಳನ್ನು ತಾವು ಒಪ್ಪುವುದಿಲ್ಲ ಎಂದರು. ಅನಾದಿಕಾಲದಿಂದ ನಡೆದುಬಂದಿರುವ ಹಿಂದೂ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿನ ಒಂದು ಅಂಶವನ್ನು ಸರ್ಕಾರ ತೆಗೆದುಹಾಕಬೇಕೆಂದು ಸದಸ್ಯರು ಅಪೇಕ್ಷಿಸುತ್ತಾರೆ. ಹರಿಜನರು ಅಥವಾ ನಿಮ್ನ ವರ್ಗಗಳವರು ನಿಜವಾಗಿ ಹಿಂದೂಗಳೇ ಎಂದು ಸಂದೇಹಪಡುವ ಜನ ವರ್ಗವೂ ಇದೆ. ಸ್ವತಃ ಅವರು ಹಿಂದೂಗಳೆಂದು ಪರಿಗಣಿಸುವ ತಾವು, ಇಡೀ ಹಿಂದೂ ಜನಸಂಖ್ಯೆಯನ್ನು ಪರಿಗಣಿಸಿದರೆ ಅವರುಗಳು ಒಂದು ಅಲ್ಪಸಂಖ್ಯಾತ ಗುಂಪೆಂದು ತಿಳಿಯುವುದಾಗಿ ನುಡಿದರು. ಈ ಅಲ್ಪಸಂಖ್ಯಾತರ ಹಕ್ಕುಗಳನ್ನು ಸರ್ಕಾರವು ಭದ್ರಪಡಿಸಬೇಕೆಂದು ಖೋತಾ ನಿರ್ಣಯದ ಮಂಡನಕಾರರು ಅಪೇಕ್ಷಿಸಿದ್ದಾರೆ. ಸರ್ಕಾರವು ಕ್ರಿಯಾಶೀಲವಾಗಿ ಇದರಲ್ಲಿ ಕೈಹಾಕಿ ದೇವಾಲಯಗಳ ಆಡಳಿತದಲ್ಲಿ ಹಸ್ತಕ್ಷೇಪ ನಡೆಸಿ, ಆ ಜನರಿಗೆ ರೂಢಿಯ ನಿರಾಕರಿಸಿರುವ ಒಂದು ಸವಲತ್ತನ್ನು ಕೊಡಬೇಕಾಗಿದೆ ಎಂದು ನಿರ್ಣಯದ ಮಂಡನಕಾರರು ಬಯಸಿದ್ದಾರೆ. ದೇವಾಲಯಗಳು, ಮಸೀದಿಗಳು, ಚರ್ಚುಗಳು ಮತ್ತು ಇಂತಹವುಗಳ ವಿಷಯದಲ್ಲಿ ಸರ್ಕಾರ ಕೇವಲ ನ್ಯಾಸಧಾರಿಯಾಗಿರುವುದೇ ಹೊರತು ಸಂಪೂರ್ಣ ಸ್ವಾಮ್ಯದ ಮಾಲೀಕ ಅಥವಾ ಯಜಮಾನನಲ್ಲ. ಈ ದೇವಾಲಯಗಳ ಅಥವಾ ಅವುಗಳ ಸಂಪ್ರದಾಯಗಳ ವಿಷಯದಲ್ಲಿ ಸರ್ಕಾರವು ತನಗಿಷ್ಟ ಬಂದಂತೆ ಕೈಹಾಕಲು ಅದು ಸ್ವತಂತ್ರವೆಂದು ತಾವು ಭಾವಿಸುವುದಿಲ್ಲ ಎಂದರು.[೨೦] ಈ ದೇವಾಲಯಗಳನ್ನು ನಿರ್ಮಿಸಿದವರು ಸೂಚಿಸಿರುವ ರೂಢಿಗಳು, ತತ್ವಗಳು ಮತ್ತು ನೀತಿಯನ್ನು ನಡೆಸಿಕೊಂಡು ಹೋಗಲು ಮಾತ್ರ ಸರ್ಕಾರವಿದೆ. ಆದ್ದರಿಂದ ಸರ್ಕಾರವು ಸಮಾಜ ಸುಧಾರಕನ ಪಾತ್ರವನ್ನು ಸ್ವತಃ ವಹಿಸಿಕೊಳ್ಳಲಾಗದು. ಹಿಂದೂಧರ್ಮ ಈಗ ತೋರಿಸುವ ಸಾಮಾಜಿಕ ಸ್ಥಿತಿಯಲ್ಲಿ ಒಂದು ತೀವ್ರ ಅಸಮಾನತೆ ಇದ್ದರೆ ಈ ವಿಷಯದಲ್ಲಿ ಪ್ರವೇಶಿಸಿ ಅಸಮಾನತೆಯನ್ನು ನಿವಾರಿಸುವುದು ಸರ್ಕಾರದ ಕೆಲಸವಲ್ಲ ಎಂದು ಅವರು ಸೂಚಿಸಿದರು. ಕೆಲವು ಸದಸ್ಯರು ಹೇಳಿರುವಂತೆ ಸಾರ್ವಜನಿಕ ಅಭಿಪ್ರಾಯವು ನಿಜವಾಗಿ ಬದಲಾಯಿಸಿದ್ದರೆ ಸರ್ಕಾರವು ಎಂತಹ ಮನೋಭಾವ ಅನುಸರಿಸುವುದೆಂಬುದು ಮುಖ್ಯವಲ್ಲ ಎಂದು ಗುಂಡಪ್ಪ ಭಾವಿಸಿದರು. ಜನರ ಮನೋಭಾವ, ಧ್ಯೇಯ ಮತ್ತು ನಂಬಿಕೆಗಳಲ್ಲಿ ಮೂಲಭೂತ ಬದಲಾವಣೆಗಳು ಉಂಟಾಗಿದ್ದರೆ ಸಾರ್ವಜನಿಕ ಅಭಿಪ್ರಾಯ ನುಗ್ಗಿಬರುವುದನ್ನು ತಡೆಯಲು ಸರ್ಕಾರ ಸಮರ್ಥವಾಗಿರುವುದಿಲ್ಲ ಎಂದು ಅವರು ಸೂಚಿಸಿ, ಸಾರ್ವಜನಿಕ ಅಭಿಪ್ರಾಯವು ಅಷ್ಟು ಸುಲಭವಾಗಿ ಬದಲಾಯಿಸುತ್ತಿಲ್ಲವೆಂಬುದು ತಮ್ಮ ಭಾವನೆ ಎಂದರು. ಮಹಾತ್ಮ ಗಾಂಧಿಯವರಂತಹ ಜನರ ನಾಯಕತ್ವದ ಒತ್ತಡದಿಂದಾಗಿ ಜನರಲ್ಲಿ ಜಾಗೃತಿಯ ಚಿಹ್ನೆಗಳು ಕಾಣುತ್ತಿವೆ. ಆದರೆ ಜನರು ತಮ್ಮ ಹಳೆಯ ಮನೋಭಾವಕ್ಕೆ ಹಿಂದೆ ಸರಿಯುತ್ತಾರೆ. ಭಾರತದಲ್ಲಿ ಸಾರ್ವಜನಿಕ ಅಭಿಪ್ರಾಯವು ನಿರ್ಲಿಪ್ತವಾಗಿರುತ್ತದೆ ಮತ್ತು ಧಾರ್ಮಿಕ ವಿಷಯಗಳಲ್ಲಿ

ಅದು ತುಂಬ ಸುಲಭವಾಗಿ ಚಲಿಸುವುದಿಲ್ಲ. ಆದ್ದರಿಂದ ಸಾರ್ವಜನಿಕ ಅಭಿಪ್ರಾಯದಲ್ಲಿ ಭಾರಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ ಎಂದು ಹೇಳುವುದು ಸರಿಯಲ್ಲ ಎಂದು ಹೇಳಲಾಯಿತು.

ಸಾಮಾಜಿಕವಾಗಿ ಹರಿಜನರ ಅಂತಸ್ತನ್ನು ಹೆಚ್ಚಿಸುವುದು ಈ ಖೋತಾ ನಿರ್ಣಯದ ಉದ್ದೇಶವಾಗಿದೆಯೇ ಎಂದು ಅಯ್ಯಂಗಾರ್ ಕೇಳಿದರು. ಹರಿಜನರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ಯಾವುದೇ ಕ್ರಮಕ್ಕೆ ತಮ್ಮ ಹೃತ್ಪೂರ್ವಕ ಸಹಕಾರ ಇರುವುದೆಂದು ತಿಳಿಸಿದರು. ಅವರಿಗೆ ಇನ್ನೂ ಉತ್ತಮವಾದ ಮನೆಗಳನ್ನು, ಉತ್ತಮತರ ಆಹಾರ ಮತ್ತು ನೀರನ್ನು ಹೆಚ್ಚು ಉತ್ತಮವಾದ ವಿದ್ಯಾಭ್ಯಾಸ ಮತ್ತು ಸಂಪಾದನೆ ಸಾಮರ್ಥ್ಯವನ್ನು ಕೊಡಬೇಕು.[೨೧] ಆದರೆ ಹರಿಜನರು ದೇವಾಲಯಗಳನ್ನು ಪ್ರವೇಶಿಸಿದ ಕೂಡಲೇ ಸ್ವರ್ಗಕ್ಕೆ ಹೋಗಿಬಿಡುತ್ತಾರೆಯೇ ಎಂದು ಕೇಳಬೇಕಾಗಿದೆ. ಹರಿಜನರಿಗೆ ಉತ್ತಮತರವಾದ ಆಹಾರ ಮತ್ತು ಶಿಕ್ಷಣ ಬೇಕಾಗಿದೆಯೇ ಅಥವಾ ಅವರು ಮೇಲುಜಾತಿಯ ಹಿಂದೂಗಳ ದೇವಸ್ಥಾನಗಳಿಗೆ ಹೋಗಲು ಆಪೇಕ್ಷಿಸುತ್ತಾರೆಯೇ ಎಂದು ಶ್ರೀನಿವಾಸ ಅಯ್ಯಂಗಾರ್ ಕೇಳಿದರು. ಅವರಿಗೆ ಏನು ಬೇಕೆಂಬುದು ತಮಗೆ ಗೊತ್ತಿದೆ ಎಂದರು. ಹರಿಜನರು ಒಳ್ಳೆಯ ಆಹಾರ ಹೊಂದಲು, ಚೆನ್ನಾಗಿ ಬಟ್ಟೆ ಹಾಕಲು ಮತ್ತು ಒಳ್ಳೆಯ ಶಿಕ್ಷಣ ಹೊಂದಲು ಅಪೇಕ್ಷಿಸುತ್ತಾರೆಯೇ ಹೊರತು ಪರಲೋಕದ ಯಾವುದೋ ಊಹಾತ್ಮಕ ವಸ್ತುವನ್ನು ಬಯಸುವುದಿಲ್ಲ ಎಂದರು. ಖೋತಾ ನಿರ್ಣಯವನ್ನು ಬೆಂಬಲಿಸಿರುವವರು ತಾವೇ ಒಂದು ಮಾದರಿಯಂತೆ ವರ್ತಿಸಿ ಹರಿಜನರನ್ನು ತಮ್ಮ ಮನೆಗಳೊಳಕ್ಕೆ, ಅಂದರೆ ಪೂಜೆಯ ಕೊಠಡಿ, ಅಡಿಗೆ ಮನೆ, ಮುಂತಾಗಿ ಎಲ್ಲ ಭಾಗಗಳಿಗೂ ಸೇರಿಸಿಕೊಳ್ಳಬೇಕೆಂದು ತಾವು ಅವರನ್ನು ಕೇಳುವುದಾಗಿ ಅಯ್ಯಂಗಾರ್ ತಿಳಿಸಿದರು. ಮೊಟ್ಟಮೊದಲಾಗಿ ಅವರು ತಮ್ಮ ಮನೆ ಹೆಂಗಸರ ಒಪ್ಪಿಗೆಯನ್ನು ಪಡೆಯಬೇಕು ಎಂದರು. ಸಂಪ್ರದಾಯಸ್ಥ ಜನರ ಇಚ್ಛೆಗೆ ವಿರುದ್ಧವಾಗಿ ಮೇಲುಜಾತಿಯ ಹಿಂದೂಗಳ ದೇವಾಲಯಗಳಿಗೆ ಪ್ರವೇಶ ಕಲ್ಪಿಸುವುದರ ಬದಲು ಈ ರೀತಿಯಿಂದ ಅವರಿಗೆ ಹೆಚ್ಚು ಉಪಯೋಗವಾಗುತ್ತದೆ ಎಂದರು. ಹರಿಜನರು ಪ್ರತ್ಯೇಕ ದೇವಾಲಯಗಳನ್ನು ಕಟ್ಟಿಕೊಳ್ಳಬಹುದೆಂದೂ ಅವುಗಳಲ್ಲಿ ಈ ಗೆಳೆಯರೂ ಕೂಡ ಪೂಜೆಗೆ ಸೇರಿಕೊಳ್ಳಬಹುದೆಂದೂ ಅವರು ಸೂಚಿಸಿದರು. ಹರಿಜನರೂ ಕೂಡ ಆಗ ತಮ್ಮನ್ನು ಸೇರಿಸಿಕೊಳ್ಳಲು ಇಷ್ಟವಿಲ್ಲದವರ ಜೊತೆಗಿರುವುದರ ಬದಲು ಅಂತಹ ಸಂದರ್ಭದಲ್ಲಿ ಸಮಾನತೆಯ ಭಾವನೆಯನ್ನು ಪಡೆಯುವರೆಂದು ಸೂಚಿಸಿದರು. ಈ ಬೆಂಬಲಿಗರು ತಮ್ಮ ಅಭಿಪ್ರಾಯಗಳನ್ನು ಇತರರ ಮೇಲೆ ಹೊರಿಸಿ ಸಾವಿರಾರು ವರ್ಷಗಳಿಂದ ಜನರಲ್ಲಿ ಇರುವ ಭಾವನೆಗಳನ್ನು ಉಲ್ಲಂಘಿಸಬಾರದೆಂದು ತಿಳಿಸಿದರು. ಒಂದಷ್ಟು ಸಂಖ್ಯೆಯ ಈ ಹರಿಜನರು ಹಿಂದೂ ಸಮುದಾಯ ವನ್ನು ಬಿಟ್ಟು ಬೇರೆ ಮತಗಳಿಗೆ ಸೇರುವರೆಂಬ ಬೆದರಿಕೆಯ ಕಾರಣದಿಂದ ಈ ಭಾವನೆಗಳನ್ನು ಸುಲಭವಾಗಿ ಬಿಡುವುದು ಸಾಧ್ಯವಿಲ್ಲ. ಮತಧರ್ಮವನ್ನು ಅಷ್ಟು ಸುಲಭವಾಗಿ ಬಿಟ್ಟುಬಿಡಬಹುದಾದರೆ

ಹಿಂದೂ ಧರ್ಮವು ಸಾವಿರಾರು ವರ್ಷಗಳ ಹಿಂದೆಯೇ ನಾಶವಾಗುತ್ತಿತ್ತು. ದೇವಾಲಯಗಳೊಳಕ್ಕೆ ಹರಿಜನರು ಪ್ರವೇಶಿಸಕೊಡದೆಂದು ನಿಷೇಧವಿರುವುದಾದರೂ ಕೂಡ ಹಿಂದೂ ಧರ್ಮವು ಇಷ್ಟು ವರ್ಷಗಳಲ್ಲೂ ಬದುಕಿ ಉಳಿದಿದೆ ಮತ್ತು ಈಗ ತಮ್ಮ ತಲೆಗಳೆಡೆಗೆ ಪಿಸ್ತೂಲನ್ನು ಗುರಿಯಿಟ್ಟು ತಾವು ಹರಿಜನರನ್ನು ದೇವಾಲಯಗಳೊಳಕ್ಕೆ ಬಡಿದೇ ಇದ್ದರೆ ಅವರು ಹಿಂದೂಗಳಾಗಿ ರುವುದು ತಪ್ಪಿಹೋಗುವುದೆಂದು ಹೇಳಿದರೆ, ತಾವು ಆ ೧೫೦ ಲಕ್ಷ ಜನರು ಹಿಂದೂ ಸಮುದಾಯದಿಂದ ಹೊರಟು ಹೋದರೆ ಹಿಂದೂ ಧರ್ಮವು ಸತ್ತುಹೋಗುವುದಿಲ್ಲವೆಂದು ಉತ್ತರ ಕೊಡಲಿಚ್ಛಿಸುವುದಾಗಿ ಅಯ್ಯಂಗಾರ್ ತಿಳಿಸಿದರು. ಒಂದು ವೇಳೆ ಅವರು ಮಹಮದೀಯ ರಾದರೂ ಕೂಡ ಆಗಲೂ ಅವರು ಭಾರತೀಯರೇ ಆಗಿರುತ್ತಾರೆ. ನಮಗೆ ಬೇಕಾಗಿರುವುದು ಒಂದು ಸಾಮಾನ್ಯ ದೇಶವಾದ ಭಾರತ ಮತ್ತು ಅಂತಹ ದೇಶವು ಮಹಮದೀಯರು, ಕ್ರಿಶ್ಚಿಯನ್ನರು ಮತ್ತು ಹಿಂದೂಗಳನ್ನು ಕೂಡ ಒಳಗೊಂಡಿರುತ್ತದೆ ಎಂದು ಹೇಳಿ ಅವರು ಖೋತಾ ನಿರ್ಣಯವನ್ನು ಕಟುವಾಗಿ ವಿರೋಧಿಸಿದರು. ಹರಿಜನರ ಒಂದು ಮೆರವಣಿಗೆಯು ಬೆಂಗಳೂರಿನಲ್ಲಿ ಒಂದರಿಂದ ಇನ್ನೊಂದು ದೇವಾಲಯಕ್ಕೆ ಹೋಯಿತೆಂದೂ ಅವರುಗಳಿಗೆ ದೇವಾಲಯಗಳಲ್ಲಿ ಪ್ರವೇಶ ಕೊಡಲಾಯಿತೆಂದೂ ಸುಬ್ಬರಾಮ ಚೆಟ್ಟಿ ಹೇಳಿದ್ದಾರೆ. ಆ ಸಂದರ್ಭದಲ್ಲಿ ಹರಿಜನರು ಬೆಂಗಳೂರಿನ ಎರಡು ದೇವಾಲಯಗಳೊಳಕ್ಕೆ ಪ್ರವೇಶಿಸಿದರು. ಒಂದು ಸಂಸ್ಥೆಯ ಅರ್ಚಕರು ಸಂಪ್ರೋಕ್ಷಣೆಗಾಗಿ ೪೦ ರೂಪಾಯಿನ ಬಿಲ್ಲನ್ನು ತಮಗೆ ಕಳುಹಿಸಿದ್ದಾರೆಂದು ಅನಂತರಾಮನ್ ತಿಳಿಸಿದರು. ಇನ್ನೊಂದು ಸಂಸ್ಥೆಯಲ್ಲಿ ಹರಿಜನರು ಪ್ರವೇಶಿಸಿದಾಗ ಗಾಬರಿಯಿಂದ ಮೆರವಣಿಗೆಯು ಚದುರಬೇಕಾಯಿತು. ಏಕೆಂದರೆ ಅವರುಗಳಿಗೂ ಅಲ್ಲಿನ ಭಕ್ತರಿಗೂ ಹೊಡೆದಾಟ ವಾಯಿತು. ಈ ಎರಡು ನಿದರ್ಶನಗಳಿಂದ ಬೆಂಗಳೂರಿನ ಜನರು ಸುಧಾರಣೆಗೆ ಅನುಕೂಲ ವಾಗಿದ್ದಾರೆಂಬ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ. ಗ್ರಾಮಾಂತರದಲ್ಲಿರುವ ಸ್ಥಿತಿಗತಿಗಳ ಅನುಭವದಿಂದ ಹೇಳಬೇಕೆಂದರೆ ಈ ವಿಷಯದಲ್ಲಿ ಜನರ ಭಾವನೆ ಹೇಗಿದೆ ಎಂಬುದು ತಮಗೆ ತಿಳಿದಿರುವುದಾಗಿ ಅನಂತರಾಮನ್ ನುಡಿದರು. ಕೆಲವು ಸಲ ಅವರ ಅಭಿಪ್ರಾಯಗಳನ್ನು ವಿಕೃತ ರೂಪದ್ದೆಂದು ಹೇಳಬಹುದು. ಆದರೆ ದುರದೃಷ್ಟವಶದಿಂದ ಸರ್ಕಾರಿ ನೌಕರರಾಗಿರುವವರು ಆಚರಣೆಯಲ್ಲಿರುವ ರೂಢಿಗಳನ್ನು ಜಾರಿಯಲ್ಲಿಡಬೇಕಾಗುತ್ತದೆ. ೧೦ ವರ್ಷಗಳ ಹಿಂದೆ ಒಂದು ಗ್ರಾಮವನ್ನು ಅದರ ಪಕ್ಕದಲ್ಲಿದ್ದ ದಾರಿಯಿಂದ ಪ್ರವೇಶಿಸುತ್ತಿದ್ದಾಗ ಗ್ರಾಮದ ಹೊರಗೆ ಒಂದು ಸಣ್ಣ ಕಟ್ಟಡವಿದ್ದು ಅದರ ಮುಂದೆ ಒಂದು ಸಣ್ಣ ಚಪ್ಪರವಿತ್ತು. ಒಬ್ಬ ವ್ಯಕ್ತಿ ಕಟ್ಟಡದ ಹೊರಗೆ ಕುರ್ಚಿಯ ಮೇಲೆ ಕುಳಿತು ಒಳಭಾಗದೆಡೆಗೆ ತಿರುಗಿದ್ದರು. ವಿಚಾರ ಮಾಡಿದಾಗ ಅದು ಹೊಲೆಯರ ದೇವಾಲಯವೆಂದೂ ಅಲ್ಲಿ ಕುಳಿತಿದ್ದ ವ್ಯಕ್ತಿ ಶಾಲಾ ಉಪಾಧ್ಯಾಯನಾಗಿದ್ದು ಮಾದಿಗನಾಗಿದ್ದುದರಿಂದ ಅದರೊಳಕ್ಕೆ ಪ್ರವೇಶಿಸಲಾಗದೆಂದೂ ತಿಳಿದುಬಂದಿತು. ಆದ್ದರಿಂದ

ಅವನನ್ನು ಹೊರಕ್ಕೆ ತಳ್ಳಿ, ವಿದ್ಯಾರ್ಥಿಗಳು ಒಳಗೆ ಕುಳಿತು, ಪಾಠಗಳು ನಡೆಯುತ್ತಿದ್ದವು. ಆದಿಕರ್ನಾಟಕರೇ ಈ ವಿಷಯದಲ್ಲಿ ಯಾವ ಭಾವನೆ ಹೊಂದಿದ್ದಾರೆಂಬುದು ಇದರಿಂದ ತಿಳಿಯುತ್ತದೆ. ಈ ವಿಷಯವನ್ನು ಮುಂದುಮಾಡಿಕೊಂಡು ಸಭೆಯ ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ಶ್ರೀನಿವಾಸ ಅಯ್ಯಂಗಾರ್ ಸವಾಲನ್ನು ಎಸೆದಿದ್ದಾರೆ. ಯಾವುದಾದರು ಒಂದು ಪವಾಡ ನಡೆಯದಿದ್ದರೆ ಅವರುಗಳ ಯಶಸ್ಸಿನ ಬಗ್ಗೆ ತೀವ್ರ ಸಂದೇಹವೇ ಇರಬೇಕಾಗುತ್ತದೆ. ಭಾರತದ ಇತರ ಭಾಗಗಳಲ್ಲಿ ಈ ಉದ್ದೇಶಕ್ಕಾಗಿ ಚಳುವಳಿಗಳು ನಡೆಯುತ್ತಿವೆ ಎಂಬ ವಾದವನ್ನು ಪ್ರಸ್ತಾಪಿಸುವುದಾದರೆ, ಎಲ್ಲ ಹಿಂದೂ ದೇವಾಲಯಗಳೊಳಕ್ಕೂ ಹರಿಜನರನ್ನು ಬಿಡಲಾಗುತ್ತಿದೆಯೇ ಎಂದು ಶಂಕಿಸಬೇಕು. ಆದಿಕರ್ನಾಟಕರು ತಾವೇ ಇತರ ಕೋಮುಗಳ ದೇವಾಲಯಗಳನ್ನು ಪ್ರವೇಶಿಸಲು ಅಪೇಕ್ಷಿಸುವರೇ ಎನ್ನುವುದು ಸ್ಪಷ್ಟವಿಲ್ಲ. ಅವರು ತಮ್ಮದೇ ದೇವಾಲಯಗಳನ್ನು ಹೊಂದಿದ್ದಾರೆ ಮತ್ತು ವಿಚಿತ್ರವೆನ್ನಿಸುವ ತಮ್ಮದೇ ಪೂಜಾ ವಿಧಾನಗಳನ್ನು ಹೊಂದಿದ್ದಾರೆ.[೨೨] ಬ್ರಿಟಿಷ್ ಭಾರತದಲ್ಲಿ ಚುನಾವಣೆಗಳ ಉದ್ದೇಶಕ್ಕಾಗಿ ಕೋಮುಗಳ ಸಂಖ್ಯೆಯೇ ಮುಂತಾದ ರಾಜಕೀಯ ಪರಿಗಣನೆಗಳಿಂದ ಹಲವಾರು ಬೆಳವಣಿಗೆಗಳು ಉಂಟಾಗುತ್ತಿವೆ. ಸುಬ್ಬರಾಮ ಚೆಟ್ಟಿಯವರು ಬೆಂಗಳೂರಿನಲ್ಲಿ ಬಹಳ ಪ್ರಭಾವಶಾಲಿಯಾದ ವ್ಯಕ್ತಿ. ಸರ್ಕಾರವು ಯಾವುದೇ ಬಗೆಯ ಹತೋಟಿಯನ್ನು ಹೊಂದಿಲ್ಲದ ಹೆಚ್ಚು ಸಂಖ್ಯೆಯ ಖಾಸಗಿ ದೇವಾಲಯಗಳಿವೆ. ಆ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶ ಕಲ್ಪಿಸಿ ಸುಬ್ಬರಾಮ ಚೆಟ್ಟಿಯವರು ಒಂದು ಮೇಲ್ಪಂಕ್ತಿ ಹಾಕಬೇಕೆಂದು ಸಲಹೆ ಮಾಡುತ್ತಿದ್ದೇನೆ. ಅದು ಒಂದು ಶ್ರೇಷ್ಠ ಪ್ರಾರಂಭವಾಗಿರುತ್ತದೆ ಮತ್ತು ಸಾರ್ವಜನಿಕರಿಗೆ ತಿಳುವಳಿಕೆಯೂ ಆಗುತ್ತದೆ ಎಂಬುದಾಗಿ ಅವರು ಹೇಳಿದರು. ಸುಬ್ಬರಾಮ ಚೆಟ್ಟಿಯವರು ಜವಾಬು ಕೊಟ್ಟು ಹರಿಜನರು ಖಾಸಗಿ ದೇವಾಲಯಗಳೊಳಕ್ಕೆ ಪ್ರವೇಶಿಸುತ್ತಿದ್ದಾರೆಂದೂ ಯಾರೂ ಅದನ್ನು ಗಮನಿಸಿಲ್ಲವೆಂದೂ ಹೇಳಿದರು. ಆದರೆ ಈ ವಿಷಯವನ್ನು ಯಾರೂ ಛಾವಣಿಗಳ ಮೇಲೆ ನಿಂತು ಕೂಗಿ ಹೇಳುವುದಿಲ್ಲ ಎನ್ನಲಾಯಿತು.

ಹೆಚ್.ಸಿ. ದಾಸಪ್ಪನವರು ಮಾತನಾಡಿ ಸರ್ಕಾರದ ಕಡೆ ಕೂತಿರುವ ಅನೇಕ ಸದಸ್ಯರು ತಮ್ಮ ನಂಬಿಕೆ–ನಿಷ್ಠೆಗಳ ಬಗ್ಗೆ ನಿಜವಾದ ಪ್ರಾಮಾಣಿಕತೆ ಹೊಂದಿಲ್ಲ ಎಂದರು. ಅವರಲ್ಲಿ ಅನೇಕರು ತಮ್ಮ ನಂಬಿಕೆಗೆ ವಿರುದ್ಧವಾಗಿಯೇ ಮಾತನಾಡುತ್ತಾರೆ. ಏಕೆಂದರೆ ಪೂಜಾಸ್ಥಳಗಳ ಶಾಂತತೆಯನ್ನು ಕಿಂಚಿತ್ತಾದರೂ ಪಲ್ಲಟಗೊಳಿಸುವ ಏನನ್ನು ಮಾಡುವುದಕ್ಕೂ ಮೈಸೂರು ಸರ್ಕಾರ ಹೆದರುತ್ತದೆ ಎಂದು ಹೇಳಿದರು. ಶ್ರೋತಾ ನಿರ್ಣಯದ ವಿರುದ್ಧವಾಗಿ ತಮ್ಮ ಮನೋಭಾವದಲ್ಲಿ ನ್ಯಾಯಪಕ್ಷಪಾತ ಇದ್ದು ಅದರಿಂದ ತಾವು ಸೋತಿರುವುದಾಗಿ ಅರ್ಥವಲ್ಲ ಎಂದು ಹೇಳಿದರು. ಅಧ್ಯಕ್ಷರು ಮಾತನಾಡಿ ಶ್ರೋತಾ ನಿರ್ಣಯದ ಉದ್ದೇಶದಲ್ಲಿ ಅಡಗಿರುವ ಭಾವನೆ ಕುರಿತು ತನಗೆ ಸಂಪೂರ್ಣ ಸಹಾನುಭೂತಿ ಇರುವುದಾಗಿ ಕಳೆದ ವರ್ಷ ಸರ್ಕಾರ

ತಿಳಿಸಿತ್ತೆಂದು ನೆನಪು ಮಾಡಿದರು. ಖೋತಾ ನಿರ್ಣಯದಲ್ಲಿ ಸೂಚಿಸಲಾಗಿರುವ ಉದ್ದೇಶವು ಸರಿಯಾಗಿದೆ ಎನ್ನುವುದಕ್ಕಲ್ಲದೆ ಬೇರೆ ಯಾವುದಾದರೂ ಕಾರಣಗಳಿಗಾಗಿ ಸರ್ಕಾರವು ತನ್ನ ಪ್ರಜೆಗಳ ವಿರುದ್ಧವಾಗಿಯೇ ವಾದ ಮಾಡುತ್ತದೆಯೇ ಎಂದು ದಾಸಪ್ಪ ಪ್ರಶ್ನಿಸಿದರು. ಅದು ಗೆಳೆಯರಾದ ಡಿ.ವಿ.ಗುಂಡಪ್ಪ ಮತ್ತು ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಅವರುಗಳು ತಳೆದಿರುವ ಮನೋಭಾವಕ್ಕಿಂತ ತೀರ ಬೇರೆ ರೀತಿಯದಾಗುತ್ತದೆ. ಸುಧಾರಣೆಯನ್ನು ಜಾರಿಗೆ ತರುವುದು ತುಂಬಾ ಅಪೇಕ್ಷಣೀಯವೆಂಬ ಅಂಶ ಕುರಿತು ಸರ್ಕಾರಿ ಅಧಿಕಾರಿಗಳು ಹೆಚ್ಚುಕಡಿಮೆ ಒಪ್ಪಿಕೊಂಡಿದ್ದಾರೆ. ಅಪೇಕ್ಷಣೀಯವಾದ ಅನೇಕ ಅಂಶಗಳನ್ನು ಇತರ ಅನುಕೂಲಗಳ ಕಾರಣಗಳಿಂದ ಅನುಸರಿಸಲು ಸಾಧ್ಯವಿರುವುದಿಲ್ಲ. ಆದರೆ ದೇವಾಲಯಗಳಿಗೆ ಹರಿಜನರಿಗೆ ಪ್ರವೇಶವಿರಬೇಕೆಂಬ ತತ್ವವನ್ನು ಒಪ್ಪಿಕೊಂಡ ಮೇಲೆ ಸರ್ಕಾರವು ತನ್ನ ಅಂತಸ್ಸಾಕ್ಷಿಗೆ ಅನುಗುಣವಾಗಿ ಏಕೆ ವರ್ತಿಸುವುದಿಲ್ಲ ಎನ್ನುವುದು ತಿಳಿಯದಾಗಿದೆ. ಗೆಳೆಯರಾದ ಗುಂಡಪ್ಪ ಶ್ರೀನಿವಾಸ ಅಯ್ಯಂಗಾರ್ ಇದರಲ್ಲಿನ ಮುಖ್ಯ ಅಂಶವನ್ನು ಪೂರ್ತಿಯಾಗಿ ಬೇರೆಡೆಗೆ ತಿರುಗಿಸಿದ್ದಾರೆ. ಅವರು ಶಾಸ್ತ್ರಗಳು, ವೇದಗಳು, ಮತಧರ್ಮದ ನಿಗೂಢತೆ ಮುಂತಾದ ಅಂಶವನ್ನು ಪೂರ್ತಿಯಾಗಿ ಬೇರೆಡೆಗೆ ತಿರುಗಿಸಿದ್ದಾರೆ. ಅವರು ಶಾಸ್ತ್ರಗಳು, ವೇದಗಳು, ಮತಧರ್ಮದ ನಿಗೂಢತೆ ಮುಂತಾದ ಅಂಶಗಳ ಆಧಾರದ ಮೇಲೆ ವಾದಿಸಿದ್ದಾರೆ. ಆದರೆ ಭಕ್ತರ ಮಟ್ಟಿಗೆ ಹೇಳುವುದಾದರೆ ಸರ್ಕಾರವು ನೋಡಿಕೊಳ್ಳುತ್ತಿರುವ ದೇವಾಲಯಗಳೊಳಕ್ಕೆ ಯಾವುದೇ ಅಡಚಣೆ ಇಲ್ಲದೆ ಅವರುಗಳಿಗೆ ಪ್ರವೇಶ ಇರಬೇಕೆಂದು ರಾಮಚಂದ್ರ ವಾದಿಸಿದ್ದಾರೆ ಎಂದು ಹೇಳಿದರು. ಅಧ್ಯಕ್ಷರು ಮಧ್ಯೆ ಪ್ರವೇಶಿಸಿ ಖೋತಾ ನಿರ್ಣಯವನ್ನು ತಂದಿರುವ ಸದಸ್ಯರು ವಾದಿಸಿರುವ ವಿಷಯ ಅದಲ್ಲವೆಂದು ಹೇಳಿದರು. ಮುಜರಾಯಿ ದೇವಾಲಯಗಳನ್ನು ಹರಿಜನರು ಅವುಗಳಲ್ಲಿ ಪೂಜೆ ಮಾಡಲಾಗುವಂತೆ ತೆರೆದಿರಬೇಕೆಂಬುದು ಅವರ ಸೂಚನೆಯಾಗಿದೆ. ಅದು ಸಾಮಾನ್ಯ ಸಲಹೆಯೂ ಹೌದು. ಯಾವುದೊಂದು ಸ್ಥಳದಲ್ಲಿ ವಾಸಿಸುವ ಜನರು ದೇವಾಲಯಕ್ಕೆ ಹರಿಜನರನ್ನು ಬಿಡಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದರೆ ಸರ್ಕಾರವು ಅದಕ್ಕೆ ಅಡ್ಡಿ ಬರಬಾರದೆಂದು ರಾಮಚಂದ್ರ ತಿಳಿಸಿರುವುದಾಗಿ ದಾಸಪ್ಪ ಹೇಳಿದರು. ಅಬ್ಕಾರಿ ಆಯುಕ್ತರು ಹೇಳಿರುವ ಮಾತಿನಲ್ಲಿ, ಸ್ಥಳೀಯ ಆಯ್ಕೆಗೆ ಮಾನ್ಯತೆ ಇರಬೇಕೆಂದು ಇದರ ಅರ್ಥವಾಗುತ್ತದೆ–ಎಂದರು. ದಾಸಪ್ಪನವರು ಈಗ ಹೊಸದೊಂದು ಸಲಹೆ ನೀಡುತ್ತಿದ್ದಾರೆ ಎಂಬುದಾಗಿ ಮಹಮದ್ ಅಬ್ಬಾಸ್ ಖಾನ್ ಭಾವಿಸಿದರು. ಅದರಿಂದ ಮುಖ್ಯ ವಿಷಯಕ್ಕೆ ಹೇಗೂ ವ್ಯತ್ಯಾಸವಾಗುವುದಿಲ್ಲವೆಂದು ದಾಸಪ್ಪ ನುಡಿದರು. ಯಾವುದೇ ಸ್ಥಳದ ಜನರು ಒಂದು ದೇವಾಲಯಕ್ಕೆ ಹರಿಜನರು ಪ್ರವೇಶಿಸಲು ಆಕ್ಷೇಪಣೆ ಹೊಂದಿಲ್ಲವಾದರೆ ಸರ್ಕಾರವು ಅದಕ್ಕೆ ಅಡ್ಡಿಪಡಿಸಬಾರದು ಮತ್ತು ಗೆಳೆಯರಾದ ಡಿ.ವಿ.ಗುಂಡಪ್ಪ ಅಥವಾ ಶ್ರೀನಿವಾಸ ಅಯ್ಯಂಗಾರ್ ಅವರಂತಹವರೂ ಅಡ್ಡಿಪಡಿಸಬಾರದು – ಎಂದರು. ಈ

ವಿಷಯವನ್ನು ಅಂತಹ ರೀತಿಯಲ್ಲಿ ಮಂಡಿಸಿದ್ದರೆ ತಾವು ಅದರ ವಿಷಯವಾಗಿ ಮಾತನಾಡುತ್ತಿದ್ದುದಾಗಿ ಶ್ರೀನಿವಾಸ ಅಯ್ಯಂಗಾರ್ ಹೇಳಿದರು. ಆದರೆ ಸಭೆಯ ಮುಂದಿರುವ ವಿಷಯ ಬೇರೆ ರೀತಿಯದು ಎಂದರು.

ದಾಸಪ್ಪನವರು ಮುಂದುವರಿದು ಪ್ರತಿ ಸಂದರ್ಭದಲ್ಲೂ ಸಾಮಾಜಿಕ ಪ್ರಾಮುಖ್ಯವುಳ್ಳ ಒಂದು ವಿಷಯ ಬಂದಾಗ ಯಾವುದೋ ಒಂದು ಮೂಲದಿಂದ ಒಂದು ಪ್ರತಿಕ್ರಿಯೆ ಅಥವಾ ವಿರೋಧ ಬರುತ್ತದೆ ಎಂದರು. ಆದರೆ ಯಾವುದು ಸರಿಯೋ ಅದನ್ನು ಸ್ವಲ್ಪ ವಿರೋಧವಿದೆ ಎಂಬ ಕಾರಣದಿಂದ ಸರ್ಕಾರವು ಮಾಡದೇ ಇರಬಾರದೆಂದು ಅರ್ಥವಾಗುವುದಿಲ್ಲ. ಸರ್ಕಾರದಲ್ಲಿ ಮತ್ತು ಅದರ ಅನುದಾನವಿರುವ ವಿದ್ಯಾಸಂಸ್ಥೆಗಳಲ್ಲಿ ಹರಿಜನರನ್ನು ಸೇರಿಸಬೇಕೆಂಬ ವಿಷಯ ಬಂದಾಗಲೂ ಸಹ ಪ್ರಬಲವಾದ ವಿರೋಧವಿತ್ತು. ಆದರೂ ಕೂಡ ಸರ್ಕಾರಿ ಆಜ್ಞೆಯನ್ನು ಪ್ರಕಟಿಸಲಾಯಿತು. ಆ ಹಳೆಯ ದಿನಗಳಲ್ಲಿ ಅದು ಪ್ರಗತಿಪರವಾದ ಅಭಿಪ್ರಾಯವಾಗಿತ್ತು. ಆದರೆ ಅದು ಈಗ ಪ್ರತಿಗಾಮಿಯಾಗಿದೆಯೇ ಎಂದು ದಾಸಪ್ಪ ಕೇಳಿದರು.[೨೩] ಹರಿಜನರು ದೇವಾಲಯಗಳಲ್ಲಿ ಪ್ರವೇಶಿಸುವುದಕ್ಕೆ ಒಂದು ಚಿಕ್ಕ ಗುಂಪಿನ ಅಲ್ಪಸಂಖ್ಯಾತರು ಆಕ್ಷೇಪಣೆ ತರಬಹುದೆಂಬುದಕ್ಕಾಗಿ ಸರ್ಕಾರ ಹೆದರಬೇಕಾಗಿದೆಯೇ ಎಂದು ಅವರು ಕೇಳಿದರು. ಕಟ್ಟ ಕಡೆಗೆ ಪ್ರತಿಯೊಬ್ಬರು ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಾರೆ ಮತ್ತು ಅದರಿಂದ ಮೈಸೂರಿಗೆ ಕೀರ್ತಿ ಹೆಚ್ಚುತ್ತದೆ. ಒಬ್ಬ ಮೋಚಿ ಸದಸ್ಯರು, ಅದೂ ಕೂಡ ಶಾಲಾ ಉಪಾಧ್ಯಾಯರಾಗಿರುವವರು, ಒಂದು ದೇವಾಲಯವನ್ನು ಪ್ರವೇಶಿಸಿದಾಗ, ಸಾರ್ವಜನಿಕರಿಂದ ಬೇಡಿಕೆ ಬರದಿದ್ದರೂ ಕೂಡ, ಮುಜರಾಯಿ ಇಲಾಖೆಯು ಸಂಪ್ರೋಕ್ಷಣೆಗಾಗಿ ಖರ್ಚು ಮಾಡಿದಾಗಲೂ ನಾವು ನಮ್ಮನ್ನು ಪ್ರಗತಿಶೀಲರೆಂದು ಹೇಳಿಕೊಳ್ಳುತ್ತೇವೆ. ಅಷ್ಟೇ ಅಲ್ಲದೆ ಆ ಹಣವನ್ನು ಅದೇ ಉಪಾಧ್ಯಾಯರು ತರಬೇಕಾಯಿತು. ಸರ್ಕಾರ ಈ ವಿಷಯದಲ್ಲಿ ಹೆಮ್ಮೆ ಪಡದೇ ಇರಬೇಕಾದಂತಹ ಪ್ರಸಂಗ ಇದಾಗಿದೆ ಎಂದರು. ಹರಿಜನರಿಗೆ ಪ್ರತ್ಯೇಕವಾದ ದೇವಾಲಯಗಳನ್ನು ಕಟ್ಟಬೇಕೆಂದೂ ಮತ್ತು ಹರಿಜನರು ಹಿಂದೂ ಸಮುದಾಯವನ್ನು ಬಿಟ್ಟುಹೋದರೆ ತಾವು ಲಕ್ಷಿಸುವುದಿಲ್ಲವೆಂದೂ ಗುಂಡಪ್ಪ ಮತ್ತು ಶ್ರೀನಿವಾಸ ಅಯ್ಯಂಗಾರ್ ಅವರು ಮಂಡಿಸಿರುವ ವಾದವನ್ನು ದಾಸಪ್ಪನವರು ಪ್ರಸ್ತಾಪಿಸಿದಾಗ ಗುಂಡಪ್ಪನವರು ತಮ್ಮ ಮಾತನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ ಎಂದರು. ಹರಿಜನರು ಹಿಂದೂಗಳೊಡನೆಯೇ ಇದ್ದರೆ ತಾವು ಕೃತಜ್ಞತೆ ಹೊಂದಿರುವುದಾಗಿ ತಿಳಿಸಿದ್ದಾಗಿ ನುಡಿದರು. ಇಂತಹ ಸಲಹೆಯನ್ನು ಶ್ರೀನಿವಾಸ ಅಯ್ಯಂಗಾರ್ ಮಾಡಿದರೆಂದು ದಾಸಪ್ಪನವರು ಹೇಳಿದರು. ಆಗ ಶ್ರೀನಿವಾಸ ಅಯ್ಯಂಗಾರ್ ಮಧ್ಯೆ ಮಾತನಾಡಿ ತಾವು ತಮ್ಮ ಧಾರ್ಮಿಕ ನಿಷ್ಠೆಗಳನ್ನು ಒಂದು ಬೆದರಿಕೆಯಿಂದ ಬಿಟ್ಟುಬಿಡುವುದು ಸಾಧ್ಯವಿಲ್ಲವೆಂದು ತಿಳಿಸಿದರು. ಇಂತಹ ಸಂಪೂರ್ಣ ತಾತ್ಸಾರವೇ ಈ ದೇಶದಲ್ಲಿ ಸಹಸ್ರ ಸಂಕಟಗಳಿಗೆ ಕಾರಣವಾಗಿದೆ ಎಂದು

ದಾಸಪ್ಪ ತೀವ್ರವಾಗಿ ವಾದಿಸಿದರು. ಜನರು ಇನ್ನಷ್ಟು ಉತ್ತಮವಾದ ಭಾವನೆಗಳನ್ನು ತೋರಿಸಿದ್ದರೆ ಈ ದೇಶವು ಪ್ರತಿಯೊಬ್ಬ ದುಷ್ಟ ಸಾಹಸಿ ಅಥವಾ ಶೋಷಣೆಗಾರನಿಗೆ ಆಟದ ಮೈದಾನವಾಗುತ್ತಿರಲಿಲ್ಲ ಎಂದು ಟೀಕಿಸಿದರು. ಭಾರತದ ರಾಜಕೀಯ ವಾತಾವರಣದಲ್ಲಿ ತೋರಿರುವ ಈ ಮೋಹವು ಇಡೀ ರಾಷ್ಟ್ರವನ್ನು ಪ್ರತ್ಯೇಕಿಸಿ, ಅದನ್ನು ಬಲಹೀನಗೊಳಿಸಿ ಭಾರತದ ಹೊರಗಿನಿಂದ ಬರುವ ಪ್ರತಿಯೊಬ್ಬ ದುಸ್ಸಾಹಸಿಯ ಕ್ರೀಡಾ ಕ್ಷೇತ್ರವಾಗಿ ಮಾಡಿದೆ ಎಂದರು. ಹಿಂದೂ ಧರ್ಮವು ಜಗತ್ತಿನಲ್ಲೇ ಅತಿ ಶ್ರೇಷ್ಠವಾದುದೆಂದೂ ಮತ್ತು ಅತ್ಯಂತ ಪ್ರಾಚೀನವೆಂದೂ ಮುಂತಾಗಿ ಹೇಳಿಕೊಳ್ಳುತ್ತಾರೆ. ಆದರೂ ಸಹ ಸಮಾನತೆಯ ಬಗ್ಗೆ ಹೊರದೇಶಗಳವರು ಪ್ರಶ್ನಿಸಿದಾಗ ಅದಕ್ಕೆ ಉತ್ತರವಿಲ್ಲ.

ಹರಿಜನರಿಗೆ ಪ್ರತ್ಯೇಕ ದೇವಾಲಯಗಳಿರಬೇಕೆಂಬ ಸಲಹೆಯು ಚೌಕಾಸಿ ಮಾಡುವ ಭಾವನೆ ಯನ್ನು ತೋರಿಸುವುದೆಂದು ದಾಸಪ್ಪ ಹೇಳಿದರು. ಪರೋಪಕಾರಿಗಳು ಮತ್ತು ಧಾರ್ಮಿಕ ಮನೋಭಾವವಿದ್ದ ಸಜ್ಜನರು ದೇವಾಲಯಗಳನ್ನು ಕಟ್ಟಿಸಿದ್ದಾರೆ. ಆದರೆ ಯಾರೂ ಕೂಡ ಅವುಗಳಿಗೆ ಹರಿಜನರು ಪ್ರವೇಶಿಸಬಾರದೆಂಬ ಷರತ್ತನ್ನಿಟ್ಟು ತಾವು ಕಟ್ಟಿಸಿರುವುದಾಗಿ ಹೇಳಿಕೊಂಡಿಲ್ಲ. ಅಂತಹ ಯಾವುದಾದರು ಸಂಸ್ಥೆ ಇದ್ದರೆ ಅದರೊಡನೆ ತಮಗೆ ಕಲಹವಿಲ್ಲ ಎಂದರು ದಾಸಪ್ಪ. ಆದರೆ ದುರ್ಬಲರನ್ನು, ಶೋಷಿತರನ್ನು, ಮತ್ತು ಅಜ್ಞಾನಿಗಳನ್ನು ಶೋಷಣೆ ಮಾಡಿ ಪ್ರತಿಯೊಂದು ಪ್ರಯೋಜನವನ್ನು ಸ್ವಾರ್ಥದ ಅನುಕೂಲಕ್ಕಾಗಿ ಪಡೆದುಕೊಳ್ಳಲಾಗುತ್ತಿದೆ. ಈ ವಿಷಯದಲ್ಲಿ ಇಂತಹ ಜನರು ದೇಶಕ್ಕೆ ಮತ್ತು ಪ್ರಜೆಗಳಿಗೆ ಮಾತ್ರವಲ್ಲದೆ ದೇವರು ಮುಂದೆ ಕೂಡ ಜವಾಬ್ದಾರಿಯನ್ನು ಹೊರಬೇಕಾಗಿದೆ. ಈ ಅನುಕೂಲಗಳನ್ನೆಲ್ಲಾ ಪಡೆದುಕೊಂಡು ಇದೇ ಜನರು ಆದಿಕರ್ನಾಟಕರು ತಮ್ಮದೇ ಆದ ದೇವಾಲಯಗಳನ್ನು ಹೊಂದಬೇಕೆಂದು ಹೇಳುತ್ತಿದ್ದಾರೆ.[೨೪] ದೇವಾಲಯಗಳು ಪ್ರತಿಯೊಬ್ಬ ಹಿಂದೂವಿಗೂ ಸೇರಿವೆ. ಎಲ್ಲರೂ ಭಕ್ತರೇ ಆಗಿದ್ದಾರೆ. ದೇವಾಲಯ ಗಳಲ್ಲಿ ಹರಿಜನರಿಗೆ ಪ್ರವೇಶ ಕೊಡಲು ಇಚ್ಛಿಸುವ ಅಧಿಕ ಸಂಖ್ಯಾತ ವರ್ಗಕ್ಕೆ ಸಣ್ಣದೊಂದು ಅಲ್ಪಸಂಖ್ಯಾತರ ಗುಂಪು ಆಜ್ಞೆ ಮಾಡಬಾರದು. ಸರ್ಕಾರವು ಸರ್ವಸ ಅಲ್ಪಸಂಖ್ಯಾತರ ಮಾತನ್ನೇ ಕೇಳುತ್ತಿರಬಾರದು.

ಮದರಾಸ್ ಕಾಯ್ದೆಯ ಮಾದರಿಯಲ್ಲಿ ದೇವಾಲಯ ಪ್ರವೇಶದ ಕಾಯ್ದೆಯನ್ನು ಮಂಡಿಸ ಬೇಕೆಂದು ಸರ್ಕಾರವನ್ನು ಕೋರುವ ಇನ್ನೊಂದು ಖೋತಾ ನಿರ್ಣಯವನ್ನು ಡಿ.ಹೆಚ್. ಚಂದ್ರಶೇಖರಯ್ಯ ತಂದರು. ಹಿಂದೂಗಳಲ್ಲದವರು ದೇವಾಲಯಗಳಲ್ಲಿ ಎಲ್ಲಿಯವರೆಗೆ ಹೋಗ ಬಹುದೋ ಆ ಪ್ರದೇಶಕ್ಕೆ ಆದಿಕರ್ನಾಟಕರು ಹೋಗುವಂತೆ ಸರ್ಕಾರವು ಆಜ್ಞೆ ಹೊರಡಿಸಿತು. ಆದರೆ ಶ್ರವಣಬೆಳಗೊಳದ ವಿಷಯದಲ್ಲಿ ಆ ಆಜ್ಞೆಯನ್ನು ಹಿಂದೆಗೆದುಕೊಳ್ಳಲಾಯಿತು. ಮದರಾಸಿನಲ್ಲಿ ವಿಶೇಷವಾಗಿ ಮಲಬಾರ್ ಪ್ರದೇಶದಲ್ಲಿ, ಯಾರೇ ೫೦ ಮಂದಿ ಭಕ್ತರು ಹರಿಜನರು ದೇವಾಲಯಕ್ಕೆ

ಪ್ರವೇಶಿಸಬೇಕೆಂದು ಅಪೇಕ್ಷಿಸಿದರೆ ಸರ್ಕಾರವು ಸಾರ್ವಜನಿಕ ಅಭಿಪ್ರಾಯವನ್ನು ಓಟುಗಳ ಮೂಲಕ ತಿಳಿದುಕೊಂಡು, ಹರಿಜನರೂ ಸೇರಿದಂತೆ ಎಲ್ಲ ಹಿಂದೂಗಳಿಗೂ ದೇವಾಲಯದಲ್ಲಿ ಪ್ರವೇಶ ಕೊಡುವ ಒಂದು ಕಾಯ್ದೆಯನ್ನು ಅಂಗೀಕರಿಸಲಾಗಿದೆ. ಓಟುಗಳು ದೇವಾಲಯ ಪ್ರವೇಶಕ್ಕೆ ವಿರುದ್ಧವಾಗಿ ಬಂದರೆ ಆ ವಿಷಯವನ್ನು ಎರಡು ವರ್ಷಗಳ ಕಾಲ ಕೈಬಿಡಲಾಗುವುದು. ದೇವಾಲಯದಲ್ಲಿ ಪ್ರವೇಶವನ್ನು ಅಪೇಕ್ಷಿಸುವ ವ್ಯಕ್ತಿಗಳು ೨೦೦ ರೂಪಾಯಿ ಠೇವಣಿಯನ್ನು ಕೊಡಬೇಕೆಂದಿದೆ. ಅದರಿಂದ ಚೇಷ್ಟೆಗಾಗಿ ಮಾಡಬಹುದಾದ ಅರ್ಜಿಗಳು ತಪ್ಪುತ್ತವೆ. ತಿರುವಾಂಕೂರಿನಲ್ಲಿ ದೇವಾಲಯಗಳನ್ನು ಎಲ್ಲ ಹಿಂದೂಗಳಿಗೂ ತೆರೆಯಲಾಗಿದೆ. ದೇವಾಲಯ ಪ್ರವೇಶಕ್ಕೆ ಸಾರ್ವಜನಿಕರು ಬೆಂಬಲವಾಗಿರುವ ಸಂದರ್ಭಗಳಲ್ಲೆಲ್ಲಾ ಅದಕ್ಕೆ ಅವಕಾಶ ಕೊಡಬೇಕೆಂದು ಸದಸ್ಯರು ಸಲಹೆ ಮಾಡಿದರು. ಸುಬ್ಬರಾಮ ಚಿಟ್ಟಿ ಸಲಹೆಯನ್ನು ಸಮರ್ಥಿಸಿದರು. ೧೯೨೪ರಲ್ಲಿ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ಮತಧರ್ಮಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಯಿತು. ಮುಜರಾಯಿ ಸಂಸ್ಥೆಗಳ ಆಡಳಿತವನ್ನು ಜನರಿಗೆ ಬಿಟ್ಟುಬಿಡಬೇಕು ಮತಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬಾರದು, ಸರ್ಕಾರದ ಕೈವಾಡ ನೆಪ ಮಾತ್ರಕ್ಕೆ ಇರಬೇಕು ಎಂಬ ಅಂಶವನ್ನು ಕೃಷ್ಣರಾಯರು ಸಭೆಯಲ್ಲಿ ವಿವರಿಸಿದರು. ಮೈಸೂರು ಧಾರ್ಮಿಕ ಸಂಸ್ಥೆಗಳ ಮಸೂದೆಯನ್ನು ಜಾರಿಗೆ ತರಲು ಮತ್ತು ಈ ಹಿಂದೆ ಇದ್ದ ೧೮೭೭ ರ ಮಸೂದೆ ಹಾಗೂ ೧೯೧೩ರ ಮುಜರಾಯಿ ಮಸೂದೆಯಲ್ಲಿನ ಕೆಲ ಅಂಶಗಳನ್ನು ಬದಲಾವಣೆ ಮಾಡಿ ಎಲ್ಲಾ ಧಾರ್ಮಿಕ ಸಂಸ್ಥೆಗಳನ್ನು ಮುಜರಾಯಿ ಇಲಾಖೆಗೆ ಒಳಪಡಿಸಬೇಕು. ಅಲ್ಲದೆ ಮುಜರಾಯಿ ಆಯುಕ್ತರು ಅಥವಾ ಅವರ ಕೆಳಗಿನ ಅಧಿಕಾರಿಗಳು ಧರ್ಮದರ್ಶಿಗಳನ್ನು ನೇಮಕ ಮಾಡುವ ಅಧಿಕಾರ ಹೊಂದಲಿದ್ದಾರೆ. ಮಠಾಧಿಪತಿಗಳ ನೇಮಕವನ್ನು ಅನುಮೋದಿಸುವ ಅಧಿಕಾರವನ್ನು ಸರ್ಕಾರ ಹೊಂದಿರಲು ಅಪೇಕ್ಷಿಸಿತ್ತು. ಆದರೆ ಪ್ರಜಾಪ್ರತಿನಿಧಿ ಮತ್ತು ನ್ಯಾಯ ವಿದಾಯಕ ಸಭೆಯಲ್ಲಿ ತೀವ್ರ ವಿರೋಧ ವ್ಯಕ್ತವಾದ್ದರಿಂದ ಆ ಸಲಹೆಯನ್ನು ಈ ಮಸೂದೆಯಿಂದ ತೆಗೆಯಲು ಸರ್ಕಾರ ತೀರ್ಮಾನಿಸಿತು. ಜನರಲ್ಲಿ ದೈವೀಗುಣವನ್ನು ಉತ್ತೇಜಿಸಲು ಮಠಗಳಿಗೆ ಮತ್ತು ದೇವಾಲಯಗಳಿಗೆ ಪ್ರಜೆಗಳು ಹಣ ಕೊಡುತ್ತಾರೆ. ಆದರೆ ಅನೇಕ ಮಠಗಳು ಮತ್ತು ದೇವಾಲಯಗಳಲ್ಲಿ ಹಣವನ್ನು ಲಪಟಾಯಿಸಲಾಗುತ್ತದೆ ಎಂಬ ವಿಚಾರಕ್ಕೆ ಮುಜರಾಯಿ ದೇವಾಲಯಗಳಲ್ಲಿ ಇರುವ ಹಣವನ್ನು ಅವುಗಳ ದುರಸ್ತಿ ಮತ್ತು ಜೀರ್ಣೋದ್ದಾರಕ್ಕಾಗಿ ಮಂಜೂರು ಮಾಡಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಜೆ.ರುದ್ರಪ್ಪನವರು ಮಾತನಾಡಿ ಭಕ್ತರ ಭಾವನೆಗಳನ್ನು ಮತ್ತು ರೂಢಿಯನ್ನು ಗಮನದಲ್ಲಿಟ್ಟು ಪಾರುಪತ್ಯಗಾರನ ನೇಮಕ ಮಾಡುತ್ತಿಲ್ಲವೆಂದು ಅವರು ದೂರಿದರು. ಕುಣಿಗಲ್ ತಾಲ್ಲೂಕಿನ ಯಡಿಯೂರಿನ ಪ್ರಕರಣವನ್ನು ಅವರು ಉದಾಹರಣೆ ನೀಡಿದರು. ಸಂಸ್ಥೆ ಲಿಂಗಾಯಿತರಿಗೆ ಸೇರಿದ್ದರೂ ಪಾರುಪತ್ಯಗಾರರು

ಬ್ರಾಹ್ಮಣರಾಗಿದ್ದಾರೆ. ದೈನಂದಿನ ಪೂಜೆಗಳು ಮತ್ತು ಕೈಂಕರ್ಯಗಳಲ್ಲಿ ಈ ಬ್ರಾಹ್ಮಣರ ಹಸ್ತಕ್ಷೇಪವನ್ನು ಕೆಲವೊಮ್ಮೆ ಭಕ್ತರು ವಿರೋಧಿಸುತ್ತಾರೆ.[೨೫] ವಿಶೇಷವಾಗಿ ಜಾತ್ರೆಗಳ ಸಮಯದಲ್ಲಿ ಇದು ಕಂಡು ಬರುತ್ತದೆ. ಬ್ರಾಹ್ಮಣರು ಕೆಲವು ಸಲ ಇತರ ಕೋಮುಗಳವರ ದೇವಾಲಯಗಳಲ್ಲಿ ಪೂಜೆ ಮಾಡುವ ಹಕ್ಕಿಗಾಗಿ ಒತ್ತಾಯಿಸುತ್ತಾರೆ. ಆದರೆ ಅದರಿಂದ ಜಗಳಗಳು ಉಂಟಾಗುತ್ತವೆ. ದುರದೃಷ್ಟವೆಂದರೆ ಇಂತಹ ವಿಷಯಗಳನ್ನು ಮೇಲ್ಮನವಿಯಲ್ಲಿ ನಿರ್ಧಾರ ಮಾಡುವ ವ್ಯಕ್ತಿಗಳು ಕೂಡ ಆ ನಿರ್ದಿಷ್ಟ ಕೋಮಿಗೆ ಸೇರಿದವರಾಗಿರುತ್ತಾರೆ. ಲಿಂಗಾಯಿತರು ಮತ್ತು ಬ್ರಾಹ್ಮಣರ ಮಧ್ಯೆ ವಿವಾದಗಳನ್ನು ಬಗೆಹರಿಸಲು ಜನರ ಮನೋಭಾವ ಮತ್ತು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಸೂಕ್ತ ನಿರ್ಣಯವನ್ನು ಕೈಗೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು.

ದ್ವಿತೀಯ ಸದಸ್ಯ ಎಸ್.ಪಿ. ರಾಜಗೋಪಾಲಾಚಾರಿ ೧೯೩೫ರ ಜೂನ್ ೨೮ ರಂದು ಮುಜರಾಯಿ ಸಂಸ್ಥೆಗಳಿಗಾಗಿ ೩.೫೨ ಲಕ್ಷ ರೂಪಾಯಿಗಳಿಗಾಗಿ ಬೇಡಿಕೆ ಮಂಡಿಸಿದರು ಡಿ.ಹೆಚ್.ಚಂದ್ರಶೇಖರಯ್ಯ ಒಂದು ಖೋತಾ ನಿರ್ಣಯವನ್ನು ತಂದು ಮಠಗಳೂ ಸೇರಿದಂತೆ ಎಲ್ಲ ಮುಜರಾಯಿ ಸಂಸ್ಥೆಗಳಿಗೂ ನ್ಯಾಸಧಾರಿಗಳನ್ನು ಮತ್ತು ಧರ್ಮದರ್ಶಿಗಳನ್ನು ಸರ್ಕಾರ ನೇಮಿಸಬೇಕೆಂದು ಹೇಳಿದರು. ಈ ವಿಷಯವನ್ನು ತಾವು ಕಳೆದ ಜೂನ್‌ನಲ್ಲೇ ಸೂಚಿಸಿದ್ದರೆಂದೂ ಸರ್ಕಾರ ಇದಕ್ಕೆ ಗಮನಕೊಡುವುದಾಗಿ ಅಧ್ಯಕ್ಷರು ಭರವಸೆ ನೀಡಿದ್ದರೆಂದೂ ಅವರು ಹೇಳಿದರು. ಮುಜರಾಯಿ ಸಂಸ್ಥೆಗಳಿಗೆ ನ್ಯಾಸಧಾರಿಗಳನ್ನು ನೇಮಿಸಲಾಗಿದೆ ಎಂದು ಮುಜರಾಯಿ ಆಯುಕ್ತ ಎನ್.ಮಾಧವರಾವ್ ತಿಳಿಸಿದರು. ಆದರೆ ಮಠಗಳ ಸ್ವತ್ತುಗಳನ್ನೂ ವರಮಾನವನ್ನೂ ಸುರಕ್ಷಿತ ಗೊಳಿಸಬೇಕೆಂದು ಚಂದ್ರಶೇಖರಯ್ಯ ಸರ್ಕಾರವನ್ನು ಒತ್ತಾಯಪಡಿಸಿದರು. ಮಠಗಳಿಗೆ ಧರ್ಮದರ್ಶಿ ಗಳನ್ನು ನೇಮಕ ಮಾಡಬೇಕೆಂಬ ವಿಷಯವನ್ನು ಮುಜರಾಯಿ ಆಯುಕ್ತರು ತಿರಸ್ಕರಿಸಿದರು. ಇಂತಹ ವಾಗ್ದಾನವನ್ನೇನೂ ಹಿಂದೆ ಕೊಟ್ಟಿಲ್ಲ ಎಂದರು. ಕೆಲವು ಮಠಗಳ ಸ್ವತ್ತುಗಳೇನೋ ಸರ್ಕಾರದ ನೇರ ಹತೋಟಿಗೆ ಬಂದಿರುವುದು ನಿಜ. ದುರಾಡಳಿತವಿದೆ ಎಂಬ ದೂರುಗಳು ಬಂದಲ್ಲಿ ತನಿಖೆ ನಡೆಸಲಾಗುವುದು ಎಂದರು. ಮಠಗಳು ತಮ್ಮ ಆದಾಯ ಮತ್ತು ಖರ್ಚಿನ ವಾರ್ಷಿಕ ಹೇಳಿಕೆಗಳನ್ನು ಪ್ರಕಟಿಸಬೇಕೆಂದು ಸರ್ಕಾರ ಕೋರಬೇಕು, ಅವುಗಳ ಮನವೊಲಿಸಬೇಕು ಅಥವಾ ಪ್ರಾರ್ಥಿಸಬೇಕು ಎಂದು ಸದಸ್ಯರು ಹೇಳುತ್ತಲೇ ಇರುವುದಾಗಿ ಡಿ.ವಿ.ಗುಂಡಪ್ಪ ನುಡಿದರು. ಲೆಕ್ಕಗಳನ್ನು ಇಡುವಂತೆ ಮಠಗಳನ್ನು ಬಲಾತ್ಕರಿಸಬೇಕೆಂದು ಸೂಚಿಸಲಾಯಿತು.

ಈಗಿರುವ ಕಾನೂನಿನಂತೆ ಅದು ಸಾಧ್ಯವಿಲ್ಲವೆಂದು ಎಸ್.ಪಿ.ರಾಜಗೋಪಾಲಾಚಾರಿ ತಿಳಿಸಿದರು. ಮಠಗಳನ್ನು ಸಂಬಂಧಪಟ್ಟ ಮಠಾಧಿಪತಿಗಳು ಸರಿಯಾಗಿ ನಿರ್ವಹಿಸಬೇಕೆಂದು ನಿಬಂಧನೆಯಲ್ಲಿ ವಿಧಿಸಲಾಗಿದೆ. ಶಿಷ್ಯರಿಂದ ದೂರುಗಳು ಬಂದಾಗ ಸರ್ಕಾರವು ತಾನೇ ಸ್ವತಃ ಯಾವುದೇ ಮಠದ ವ್ಯವಹಾರಗಳ ಬಗ್ಗೆ ತನಿಖೆ ನಡೆಸಬಹುದು. ಸ್ಥಿರ ಸ್ವತ್ತುಗಳ ಪರಭಾರೆ

ಪ್ರಸಂಗಗಳ ಬಗ್ಗೆ ವಿಚಾರಣೆ ನಡೆಸಬಹುದಾಗಿದೆ. ಆದರೆ ಈಗಿರುವ ಪರಿಸ್ಥಿತಿಯಲ್ಲಿ ಮಠದ ಶಿಷ್ಯರು ಬಹುಶಃ ತಾವು ಮಠದ ಬಗ್ಗೆ ಹೊಂದಿರುವ ಗೌರವದ ಕಾರಣದಿಂದ ದೂರು ಕೊಡಲು ಇಚ್ಛಿಸುವುದಿಲ್ಲ. ಅವಶ್ಯಕತೆ ಎಂದು ಕಂಡು ಬಂದಲ್ಲಿ ಇದಕ್ಕೆ ಸಂಬಂಧಿಸಿದ ನಿಬಂಧನೆಯನ್ನು ಸರ್ಕಾರ ತಿದ್ದುಪಡಿ ಮಾಡಬಹುದು.[೨೬] ಮಠಗಳ ನಿರ್ವಹಣೆಯನ್ನು ಉತ್ತಮಪಡಿಸುವಂತೆ ಮಠಾಧಿಪತಿಗಳ ಮೇಲೆ ನೈತಿಕ ಪ್ರಭಾವವನ್ನು ಬೀರುವ ಅಧಿಕಾರ ಸರ್ಕಾರಕ್ಕಿದೆ ಎಂದು ಅವರು ತಿಳಿಸಿದರು. ಮಠಗಳ ಸ್ವತ್ತುಗಳನ್ನು ರಕ್ಷಿಸಬೇಕೆಂಬ ತಮ್ಮ ನಿಲುವನ್ನು ಡಿ.ಹೆಚ್.ಚಂದ್ರಶೇಖರಯ್ಯ ಪುನರುಚ್ಚರಿಸಿದರು. ಅನೇಕ ಮಠಗಳಿಗೆ ನಗರಗಳಲ್ಲಿ ಕೊಟ್ಟಿರುವ ಸ್ವತ್ತುಗಳು ಖಾಸಗಿ ಸ್ವತ್ತುಗಳಾಗಿ ಹೋಗಿವೆ ಎಂದು ಅರ್ಜಿಗಳು ಬಂದಿರುವುದಾಗಿ ಬಿ.ಕೆ.ಗರುಡಾಚಾರ್ ತಿಳಿಸಿದರು. ಮಠಗಳನ್ನು ಸಾರ್ವಜನಿಕ ಸಂಸ್ಥೆಗಳೆಂದು ಪರಿಗಣಿಸಲಾಗಿದೆಯೇ ಅಥವಾ ಖಾಸಗಿ ಸಂಸ್ಥೆಗಳೆಂದು ಪರಿಗಣಿಸಲಾಗಿದೆಯೇ ಎಂದು ಡಿ.ವಿ.ಗುಂಡಪ್ಪ ಹೇಳಿದರು. ಅವು ಸಾರ್ವಜನಿಕ ಸಂಸ್ಥೆಗಳೆಂದು ಎಸ್.ಪಿ. ರಾಜಗೋಪಾಲಾಚಾರಿ ತಿಳಿಸಿದರು. ಮಠಗಳಿಗೆ ಸಂಬಂಧಿಸಿದಂತೆ ಒಂದು ವಿಶೇಷ ಅಧ್ಯಾಯ ಮುಜರಾಯಿ ನಿಬಂಧನೆಯಲ್ಲಿದೆ. ನಿಯಂತ್ರಣದ ಕೆಲವು ಸಾಮಾನ್ಯ ಅಧಿಕಾರಿಗಳನ್ನು ಸರ್ಕಾರ ಹೊಂದಿದೆ. ಆದರೆ ಲೆಕ್ಕಾಚಾರದ ಅಥವಾ ಆಯವ್ಯಯದ ತಃಖ್ತೆಗಳನ್ನು ಪ್ರಕಟಿಸುವಂತೆ ಮಠಗಳನ್ನು ಬಲಾತ್ಕರಿಸುವ ಅಧಿಕಾರ ಅದರಲ್ಲಿ ಸೇರಿಲ್ಲವೆಂದು ತಿಳಿಸಿದರು. ಖೋತಾ ನಿರ್ಣಯವನ್ನು ವಾಪಸ್ ಪಡೆಯಲಾಯಿತು.

ಜೆ. ರುದ್ರಪ್ಪನವರು ಮತ್ತೊಂದು ನಿರ್ಣಯವನ್ನು ಮಂಡಿಸಿ ಛತ್ರಗಳ ನಿಧಿಯಲ್ಲಿ ದೊರಕುತ್ತಿರುವ ೬೦.೨೨೮ರೂಪಾಯಿಯನ್ನು ಎಲ್ಲಾ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ಊಟ ಹಾಕಲು ಬಳಸಬೇಕೆಂದು ಪ್ರಜಾಪ್ರತಿನಿಧಿ ಸಭೆ ಅಂಗೀಕರಿಸಿರುವ ನಿರ್ಣಯವನ್ನು ಅವರು ನೆನಪು ಮಾಡಿದರು. ಈ ನಿರ್ಣಯವನ್ನು ಬಹುಮತದಿಂದ ಅಂಗೀಕರಿಸಲಾಯಿತು. ಬೆಂಗಳೂರಿನಲ್ಲಿರುವ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ವಿದ್ಯೆಯ ಕೆಲವು ಭಾಗಗಳನ್ನು ಮಾತ್ರ ಕಲಿಸುತ್ತಿರುವ ನಿರ್ಬಂಧವನ್ನು ಸಭೆಯಲ್ಲಿ ವಿವರಿಸಿದರು. ಬ್ರಾಹ್ಮಣ ಪಂಡಿತರು ತಮಗೆ ಸಾಕಷ್ಟು ಹಣ ಕೊಟ್ಟರೆ ವೇದಗಳನ್ನು ಬ್ರಾಹ್ಮಣೇತರರಿಗೂ ಕಲಿಸಲು ಹಿಂಜರಿಯುವುದಿಲ್ಲವೆಂದು ಮಲ್ಲಪ್ಪ ಹೇಳಿದರು. ಹಾಗೇಯೇ ಬ್ರಾಹ್ಮಣೇತರರಿಗೆ ಹೇಳಿಕೊಡಲು ನಿರಾಕರಿಸುವ ಅಧ್ಯಾಪಕರನ್ನು ನಿವೃತ್ತಿಗೊಳಿಸಬೇಕೆಂದು ಆಗ್ರಹಿಸಿದರು. ಸ್ವಾತಂತ್ರ್ಯ ಮತ್ತು ಸೋದರತೆ ಎಂಬ ಅಭಿಪ್ರಾಯವಿರುವ ಈ ದಿನಗಳಲ್ಲಿ ಕೆಲವೇ ಜನರ ಸ್ವಾರ್ಥಪರ ಉದ್ದೇಶಕ್ಕಾಗಿ ಮತ್ತು ಸಮಗ್ರ ಭಾರತವನ್ನು ಶಾಶ್ವತವಾದ ಅಜ್ಞಾನ ಮತ್ತು ದಾಸ್ಯದಲ್ಲಿ ಇಟ್ಟಿರಲು ಸಂಸ್ಕೃತದ ಸಂಪತ್ತು ಆ ಕೆಲವರ ವಿಶಿಷ್ಟ ಏಕಸ್ವಾಮ್ಯವಾಗಿರಬೇಕಾ? ಎಲ್ಲಾ ವರ್ಗಗಳಿಗೂ ಹಕ್ಕುಗಳು ಮತ್ತು ಸವಲತ್ತುಗಳನ್ನು ನ್ಯಾಯೋಚಿತವಾಗಿ ಮತ್ತು ಸಮಾನವಾಗಿ ಹಂಚಬೇಕೇಂದು ಮಲ್ಲಪ್ಪನವರು ಒತ್ತಾಯ ಪಡಿಸಿದರು. ಆದರೆ ಬ್ರಾಹ್ಮಣ ಅಧ್ಯಾಪಕರು ಬ್ರಾಹ್ಮಣರಲ್ಲದ ವ್ಯಕ್ತಿಗಳಿಗೆ ವೇದಗಳ ಸಾಂಪ್ರದಾಯಿಕ ಪಠಣವನ್ನು

ಕಲಿಸಲು ಸಂಪೂರ್ಣ ಅನಿಚ್ಛೆ ತೋರಿಸುತ್ತಾರೆಂಬ ಅಂಶವನ್ನು ಪರಿಗಣಿಸಬೇಕು ವೇದಗಳ ಪಠಣವನ್ನು ಹೇಳಿಕೊಡಲು ಬ್ರಾಹ್ಮಣ ಪಂಡಿತರನ್ನು ಬಿಟ್ಟು ಬೇರೆ ಯಾರೇ ಉಪಾಧ್ಯಾಯರು ಸಿಕ್ಕುವುದಿಲ್ಲವೆಂದು ಸಮಿತಿಯಲ್ಲಿನ ಲಿಂಗಾಯಿತ ಸದಸ್ಯರು ನುಡಿದರು. ಅಲ್ಲದೇ ಲಿಂಗಾಯಿತ ಉಪಾಧ್ಯಾಯರು ಕೂಡ ಇತರ ಕೋಮುಗಳಿಗಲ್ಲದೆ ಲಿಂಗಾಯಿತರಿಗೆ ಮಾತ್ರ ಹೇಳಿಕೊಡಲು ಇಚ್ಛಿಸುತ್ತಾರೆ. ಅಧ್ಯಾಪಕರು ಎಲ್ಲಾ ವರ್ಗಗಳ ಜನರಿಗೂ ವೇದಗಳ ಪ್ರಯೋಗವನ್ನು ಹೇಳಿಕೊಡಲು ಇಚ್ಛಿಸುವುದಿಲ್ಲವಾದರೆ ಸಮಿತಿಯನ್ನು ವಿಸರ್ಜಿಸಬೇಕೆಂದು ಹಾಗೂ ಮತ ಧರ್ಮಗಳೆಲ್ಲ ಸೋದರ ಭಾವದಲ್ಲಿದ್ದರೆ ಭಿನ್ನತೆ ಮತ್ತು ವಿವಾದಗಳು ತಪ್ಪಿ ಐಕ್ಯತೆಯನ್ನು ಸಾಧಿಸಲು ಸಹಕಾರಿಯಾಗುವ ನಿಟ್ಟಿನಲ್ಲಿ ಕಾನೂನು ಜಾರಿಗೊಳಿಸಲು ಸಭೆಯಲ್ಲಿ ತೀರ್ಮಾನವಾಯಿತು.

ಚಾಮರಾಜೇಂದ್ರ ವೇದ ಪಾಠ ಶಾಲೆಗಾಗಿ ಕೇಳಿರುವ ಬೇಡಿಕೆಯನ್ನು ತೆಗೆದುಹಾಕಬೇಕೆಂದು ಚನ್ನಪ್ಪ ಅಪೇಕ್ಷಿಸಿದರು. ಏಕೆಂದರೆ ಈ ಸಂಸ್ಥೆಗಳಿಗೆ ಪ್ರವೇಶಗಳನ್ನು ಕೊಡುವುದರಲ್ಲಿ ಅನ್ಯಾಯ ವಾಗುತ್ತಿದೆ ಎಂದರು. ಸಂಸ್ಥೆಯನ್ನು ಸರ್ಕಾರಿ ಹಣದಿಂದ ನಡೆಸುತ್ತಿರುವುದರಿಂದ ಎಲ್ಲ ಕೋಮು ಗಳಿಗೂ ಅಲ್ಲಿ ವ್ಯಾಸಂಗ ಮಾಡುವ ಅವಕಾಶವಿರಬೇಕೆಂದು ಹೇಳಿದರು. ಸುಬ್ಬರಾಮಚೆಟ್ಟಿ ಮಾತನಾಡಿ ಹಿಂದೂ ಶಾಸ್ತ್ರಗಳ ಪ್ರಕಾರ ವೇದಗಳ ಅಧ್ಯಯನಕ್ಕೆ ದ್ವಿಜರಿಗೆ ಮಾತ್ರ ಹಕ್ಕಿದೆ ಎಂದು ಹೇಳಿದರು. ಆದರೂ ಕೂಡ ಯಾರೇ ಶೂದ್ರ ಅಥವಾ ಅಸ್ಪೃಶ್ಯರನ್ನು ವೇದಪಾಠಶಾಲೆಗೆ ಸೇರಿಸುತ್ತಿಲ್ಲವೆಂದು ದೂರಿದರು. ಹಳೆಯ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಬಾರ ದೆಂದು ಡಿ.ಎಸ್.ಮಲ್ಲಪ್ಪ ಸೂಚಿಸಿದರು. ಸಂಸ್ಥೆಯನ್ನು ಮುಚ್ಚಿಬಿಡಬೇಕೆಂದು ಹೇಳಿದರು. ಜರ್ಮನ್ನರು, ಫ್ರೆಂಚರು ಮುಂತಾದ ವಿದೇಶೀಯರು ಬ್ರಾಹ್ಮಣರಿಂದ ವೇದಗಳನ್ನು ಕಲಿತರೂ ಆದರೆ ಭಾರತದ ಜನರಿಗೆ ಅದನ್ನು ಹೇಳಿಕೊಡಲು ತಿರಸ್ಕರಿಸುವುದೇಕೆಂದು ತಮಗೆ ಅರ್ಥವಾಗುವು ದಿಲ್ಲವೆಂದೂ ಹೆಚ್.ಸಿದ್ದಯ್ಯ ನುಡಿದರು. ಸರ್ಕಾರವು ಅನುದಾನ ನೀಡಿರುವ ಮತೀಯ ಸಂಸ್ಥೆಗಳಿಗೆ ನಿಮ್ನ ವರ್ಗಗಳಿಗೆ ಪ್ರವೇಶವಿಲ್ಲವೆಂದು ಪಿ.ಮುರುಗೇಶನ್ ಪಿಳ್ಳೈ ದೂರಿದರು. ಜಾತಿ, ಪಂಥ ಅಥವಾ ವರ್ಣದ ತಾರತಮ್ಯವಿಲ್ಲದೆ ಶಾಲೆಗಳು ಮತ್ತು ಇತರ ಸಂಸ್ಥೆಗಳನ್ನು ತೆರೆದುಕೊಟ್ಟಿರುವಾಗ ಮುಜರಾಯಿ ಸಂಸ್ಥೆಗಳೂ ಕೂಡ ಎಲ್ಲಾ ಪ್ರಜಾವರ್ಗಗಳಿಗೂ ಪ್ರವೇಶ ಕೊಡಬೇಕೆಂಬುದು ನ್ಯಾಯೋಚಿತವಾಗಿದೆ. ನಿಮ್ನ ವರ್ಗಗಳ ಜನರಿಗೆ ಪ್ರಸಾದವನ್ನೂ ಕೊಡುವುದಿಲ್ಲ ಎಂದು ಅವರು ದೂರಿದರು. ಅವರು ಸೂಚಿಸಿದ ಅಂಶಕ್ಕೆ ಡಿ.ಹೆಚ್.ಚಂದ್ರಶೇಖರಯ್ಯ ಸಹಕಾರ ನೀಡಿದರು.

ಅಡಿಟಿಪ್ಪಣಿಗಳು

೧. ವಿಧಾನ ಮಂಡಲ ಇತಿಹಾಸ, ಮೈಸೂರು ನ್ಯಾಯ ವಿಧಾಯಕ ಸಭೆ. ಸಂ.೧. ಭಾಗ.೧ (೧೯೦೭-೧೯೨೩)ವಿಧಾನ ಮಂಡಲದ ಕಛೇರಿ ಬೆಂಗಳೂರು, ೨೦೦೭.ಪುಟ.೧

೨. ಅದೇ ಪುಟ. ೩.

೩. ಅದೇ ಪುಟ ೫.

೪. ಅದೇ ಪುಟ ೬.

೫. ಅದೇ ಪುಟ. ೮.

೬. ಅದೇ ಪುಟ.೧೪.

೭. ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು ರಿಪೋರ್ಟ್, ೧೮೬೨-೧೯೫೬. ಪುಟ. ೩೧೮.

೮. ಅದೇ ಪುಟ ೪೦೪.

೯. ಸ್ಪೀಚಸ್ ಬೈ ಹಿಸ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್. ಸಿ.ರಂಗಾಚಾರ್ಲು, ದಿವಾನ್ ಆಫ್ ಮೈಸೂರು. ಪುಟ ೭೫.

೧೦. ಅದೇ ಪುಟ ೮೬.

೧೧. ಅದೇ ಪುಟ ೮೮.

೧೨. ಗುಂಡಪ್ಪ ಡಿ.ವಿ. ರಂಗಾಚಾರ್ಲು, ಬೆಂಗಳೂರು, ದಿ ಕರ್ನಾಟಕ ಪಬ್ಲಿಷಿಂಗ್ ಹೌಸ್, ೧೯೪೦. ಪುಟ ೨೬.

೧೩. ಅದೇ ಪುಟ ೩೦.

೧೪. ಅದೇ ಪುಟ ೩೩.

೧೫. ಅದೇ ಪುಟ ೩೬.

೧೬. ಸ್ಪೀಚಸ್ ಬೈ ಶ್ರೀ ಸಿ. ರಂಗಾಚಾರ್ಲು ದಿವಾನ್ಸ್ ಆಫ್ ಮೈಸೂರ್. ಪುಟ ೪೦.

೧೭. ಅದೇ ಪುಟ. ೪೮.

೧೮. ದಿವಾನ್ ಆಫೀಸ್ ಫೈಲ್ ೧೯೧೭ ಫೈಲ್ ನಂ. ಎಸ್. ಎಲ್ ಎನ್ ಎಸ್ ೧೨೮.

೧೯. ಅದೇ ಫೈಲ್ ನಂ. ಎಸ್. ಎಲ್ ಎನ್ ಎಸ್ ೧೩೦.

೨೦. ವಿಧಾನ ಮಂಡಲ ಇತಿಹಾಸ, ಮೈಸೂರು ನ್ಯಾಯ ವಿಧಾಯಕ ಸಭೆ. ಸಂ.೨. ಭಾಗ.೨ (೧೯೨೪-೧೯೪೭)ವಿಧಾನ ಮಂಡಲದ ಕಛೇರಿ ಬೆಂಗಳೂರು, ೩೭೦

೨೧. ಅದೇ ಪುಟ ೩೯೦

೨೨. ಅದೇ ಪುಟ. ೪೧೦.

೨೩. ಅದೇ ಪುಟ.೪೧೮.

೨೪. ಅದೇ ಪುಟ.೪೨೮.

೨೫. ಅದೇ ಪುಟ. ೪೩೧.

೨೬. ಅದೇ ಪುಟ ೪೪೨.

ಅಧ್ಯಾಯ: ಐದು

ಮೈಸೂರು ಸಂಸ್ಥಾನದ ಗ್ರಾಮ, ಸ್ಥಳೀಯ ಸಂಸ್ಥೆ ಹಾಗೂ ಪಂಚಾಯಿತಿ ವ್ಯವಸ್ಥೆಯಲ್ಲಿ ಸಾಮಾಜಿಕ ಸಂರಚನೆಯ ವಿಶ್ಲೇಷಣಾತ್ಮಕ ನೋಟ

೫.೧. ಗ್ರಾಮೀಣ ನೈರ್ಮಲ್ಯವನ್ನು ಉತ್ತಮಪಡಿಸಲು ಕೈಗೊಂಡ ಕ್ರಮಗಳಲ್ಲಿ ದಲಿತರು

೫.೨. ಗ್ರಾಮೀಣ ಆರೋಗ್ಯ ಸುಧಾರಿಸಲು ಕೈಗೊಂಡ ಕ್ರಮಗಳಲ್ಲಿ ದಲಿತರು

೫.೩. ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಶಾಸನಗಳಲ್ಲಿ ದಲಿತರು

೫.೪. ಸಣ್ಣ ಕೆರೆಗಳ ಜೀರ್ಣೋದ್ಧಾರ ಮಸೂದೆಯಲ್ಲಿ ದಲಿತರ ಪಾತ್ರ

೫.೫. ಸಸ್ಯ ರೋಗಗಳ ನಿವಾರಣೆ ಮಸೂದೆಯಲ್ಲಿ ದಲಿತರು

೫.೬. ಮೈಸೂರು ಸಂಸ್ಥಾನದ ಗ್ರಾಮ ನ್ಯಾಯಾಲಯಗಳ ಮಸೂದೆಯಲ್ಲಿ ದಲಿತರು

ಅಧ್ಯಾಯ: ಐದು

ಮೈಸೂರು ಸಂಸ್ಥಾನದ ಗ್ರಾಮ, ಸ್ಥಳೀಯ ಸಂಸ್ಥೆ ಹಾಗೂ ಪಂಚಾಯಿತಿ ವ್ಯವಸ್ಥೆಯಲ್ಲಿ ಸಾಮಾಜಿಕ ಸಂರಚನೆಯ ವಿಶ್ಲೇಷಣಾತ್ಮಕ ನೋಟ

ಪ್ರಾಚೀನ ಕಾಲದಿಂದಲೂ ಆಡಳಿತದ ಅನುಕೂಲಕ್ಕಾಗಿ ಹಲವಾರು ರೀತಿಯ ವಿಭಾಗಗಳನ್ನು ಮಾಡಿ ಆಳ್ವಿಕೆ ಮಾಡಿರುವುದನ್ನು ನೋಡಬಹುದು. ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಪ್ರತಿಯೊಂದು ಸಾಮ್ರಾಜ್ಯ, ಸಂಸ್ಥಾನವು ತಮ್ಮದೇ ಆದ ಆಡಳಿತ ವಿಭಾಗಗಳನ್ನು ಮಾಡಿ ಆಡಳಿತವನ್ನು ನಡೆಸಿವೆ. ಜಗತ್ತಿನಾದ್ಯಂತ ಉತ್ತಮ ಆಡಳಿತದ ರಾಜಕೀಯ ಚಿಂತನೆಗಳ ಬಗ್ಗೆ ಚಿಂತನ ಮಂಥನಗಳು ಸಾಕಷ್ಟು ನಡೆಯುತ್ತಿವೆ. ಆದರೆ ಭಾರತೀಯ ಪರಂಪರೆಯಲ್ಲಿ ಈ ತರಹದ ಚಿಂತನೆಗಳು ಪ್ರಾಚೀನ ಕಾಲದಿಂದಲೂ ಅನುಷ್ಠಾನದಲ್ಲಿದ್ದವು ಎಂಬುದನ್ನು ಗಮನಿಸಬಹುದು.[೧]

ಆಧುನಿಕ ಮೈಸೂರು ಸಂಸ್ಥಾನ ತನ್ನದೇ ಆದಂತಹ ಆಡಳಿತ ವಿಭಾಗಗಳನ್ನು ಒಳಗೊಂಡಿತ್ತು ಆಡಳಿತದ ಅನುಕೂಲಕ್ಕಾಗಿ ನಾಡು, ಸ್ಥಳ, ಸೀಮೆ ಮುಂತಾದ ಘಟಕಗಳ ಮೂಲಕ ಆಡಳಿತವನ್ನು ನಿರ್ವಹಿಸಲಾಗುತ್ತಿತ್ತು. ಗ್ರಾಮಗಳ ಆಡಳಿತವನ್ನೇ ಗೌಡ, ಶಾನುಭೋಗ, ಪಟೇಲ ಮತ್ತಿತರರು ನಿರ್ವಹಿಸಿದರೆ, ನಾಡಗೌಡ, ನಾಡಪ್ರಭುಗಳು ನಾಡಿನ ಅಧಿಕಾರಿಗಳಾಗಿರುತ್ತಿದ್ದು ಅರಸನಿಗೆ ಆಡಳಿತದಲ್ಲಿ ನೆರವಾಗುತ್ತಿದ್ದರು. ರಾಜ್ಯಾಡಳಿತ ಪದ್ದತಿಯಲ್ಲಿ ಭೂಕಂದಾಯ ನಿರ್ಧರಿಸಿ ಕಂದಾಯ ಸಂಗ್ರಹಿಸಲಾಗುತ್ತಿತ್ತು. ಅದರ ಏಳಿಗೆಗಾಗಿ ಸ್ಥಳೀಯ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿತ್ತು. ಟಿಪ್ಪು ಸುಲ್ತಾನನ ಆಳ್ವಿಕೆ ನಂತರ ಮೈಸೂರು ಆಡಳಿತದ ವಿಧಾನವೇ ಬದಲಾವಣೆಯಾಯಿತು.

ಮೈಸೂರು ಸಂಸ್ಥಾನದಲ್ಲಿ ೧೭೯೯–೧೮೧೧ ವರೆಗೆ ಆಳ್ವಿಕೆ ನೆಡೆಸಿದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನರು ಅಧಿಕಾರ ನಡೆಸುತ್ತಿದ್ದರು ಸಂಸ್ಥಾನದಲ್ಲಿ ಅಷ್ಟಗ್ರಾಮ, ಬಿದನೂರು ನಗರವೆಂಬ ಮೂರು ವಿಭಾಗಗಳಿದ್ದವು. ಆಡಳಿತದ ಸಾಮಾನ್ಯ ಮೇಲ್ವಿಚಾರಣೆಗಾಗಿ ಫೌಜುದಾರರೆಂಬ ಅಧಿಕಾರಿಗಳನ್ನು ಬೆಂಗಳೂರು, ಚಿತ್ರದುರ್ಗ ನಗರದ ವಿಭಾಗಗಳಲ್ಲಿಟ್ಟಿದ್ದರು. ಒಟ್ಟು ೧೧೫ರಿಂದ೧೨೦ ತಾಲ್ಲೂಕುಗಳಿದ್ದು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಬ್ಬ ಅಮುಲ್ದಾರರಿದ್ದರು. ತಾಲ್ಲೂಕು ಮಟ್ಟದಲ್ಲಿ ಅಮುಲ್ದಾರ ಫೌಜುದಾರ ಹುದ್ದೆಗಳಿದ್ದು ಅವರು ಆಡಳಿತ ನಡೆಸುತ್ತಿದ್ದರು. ರೈತರ ಕುಂದುಕೊರತೆ ನಿವಾರಣೆ, ಕಂದಾಯ ಸಂಗ್ರಹವನ್ನು ಅಧಿಕಾರಿಗಳು ಮಾಡುತ್ತಿದ್ದರು. ೧೮೬೩ರಲ್ಲಿ ತಾಲ್ಲೂಕು ಮಂಡಳಿಗಳು ರಚನೆಯಾದವು. ನಂತರ ಜಿಲ್ಲಾ ಬೋರ್ಡ್‌ಗಳು ಆರಂಭವಾದವು. ತಾಲ್ಲೂಕಿನಲ್ಲಿ ಅಮುಲ್ದಾರರೇ ಪ್ರಮುಖ ಆಡಳಿತಗಾರರಾಗಿದ್ದರು. ಅವರು ಕಂದಾಯ ನೌಕರರು, ಗ್ರಾಮಗಳ ಪಟೇಲ, ಶಾನುಭೋಗರ ಮೂಲಕ ಗ್ರಾಮಾಡಳಿತ ನಡೆಸುತ್ತಿದ್ದರು. ಅಮಲ್ದಾರರಿಗೆ ನ್ಯಾಯ ತೀರ್ಮಾನಿಸುವ ಅಧಿಕಾರವಿತ್ತು.

ಪ್ರಾಚೀನ ಕಾಲದಿಂದಲೂ ಗ್ರಾಮಗಳ ಆಡಳಿತ ನಿರ್ವಹಣೆಗೆ ಆರಂಭದಲ್ಲಿ ಎಂಟು ನಂತರ ಹನ್ನೆರಡು ಜನ ಆಯಗಾರರು ಗ್ರಾಮದ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ೧೯೪೭ರ ವೇಳೆಗೆ ಅವುಗಳಲ್ಲಿ ಗೌಡ, ಶಾನುಭೋಗ, ತೋಟಿ, ತಳವಾರ ಹಾಗೂ ನೀರ್ಗಂಟಿಗಳಷ್ಟೆ ಚಾಲ್ತಿಯಲ್ಲಿ ಉಳಿದಿದ್ದರು. ಆದರೆ ಸ್ವಾತಂತ್ರ್ಯ ನಂತರದಲ್ಲಿ ಇದ್ದ ವಂಶವಾರು ಶಾನುಭೋಗಿಕೆಯನ್ನು ೧೯೭೦ರ ಕಾಯ್ದೆಯ ಅನ್ವಯ ರದ್ದುಗೊಳಿಸಲಾಯಿತು. ಆಗ ಗ್ರಾಮಾಡಳಿತವನ್ನು ಗ್ರಾಮ ಲೆಕ್ಕಗರಿಗೆ ವಹಿಸಿಕೊಡಲಾಯಿತು. ಆಡಳಿತದ ಕೆಳಘಟಕದ ಮುಖ್ಯಸ್ಥರಾದ ಇವರು ಸರ್ಕಾರ ಸಮಾಜಗಳ ನಡುವಣ ಕೊಂಡಿಯಾಗಿದ್ದು, ಗ್ರಾಮದಾಖಲೆಗಳ ಸಂರಕ್ಷಣೆ ಹಾಗೂ ಕಂದಾಯ ಶಾನುಭೋಗರ ಹೊಣೆಯಾಗಿರುತ್ತದೆ. ಹಿಂದಿನ ಶಾನುಭೋಗರ ಅಧಿಕಾರಿಗಳನ್ನೆ ಹೊಂದಿರುವ ಇವರ ನೆರವಿಗೆ ಗ್ರಾಮ ಸಹಾಯಕರಿರುತ್ತಾರೆ.

ಹಿಂದೆ ಗ್ರಾಮಗಳಲ್ಲಿ ಶಾನುಭೋಗ, ಕುಲಕರ್ಣಿ ಅಥವಾ ಪಟೇಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ತಳವಾರ, ಒಲೇಕಾರ, ಮುಂತಾದ ಹುದ್ದೆಗಳಿಗೆ ಬದಲು ಪ್ರಸ್ತುತ ಗ್ರಾಮ ಸಹಾಯಕರನ್ನು ನೇಮಿಸಲಾಗಿದೆ. ಅಮಲ್ದಾರ್, ಮಾಮಲ್ದಾರ್ ಎಂದು ಕರೆಯಲ್ಪಡುತ್ತಿದ್ದ ಅಧಿಕಾರಿಗಳು ಇಂದು ತಹಶೀಲ್ದಾರರಾಗಿ ಉಪ ವಿಭಾಗಾಧಿಕಾರಿಯ ಅಧೀನದಲ್ಲಿ ಕಾರ್ಯ ನಿರ್ವಹಿಸುವ ತಾಲ್ಲೂಕಿನ ದಂಡಾಧಿಕಾರಿ. ಪ್ರಾಚೀನ ಕಾಲದಿಂದಲೂ ಅರಸರು ಸಾರ್ವ ಭೌಮಾಡಳಿತದ ನಡುವೆಯೂ ಸ್ವಯಂ ಆಡಳಿತ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿತ್ತು.[೨] ಹಳ್ಳಿ, ಪಟ್ಟಣ, ಅಗ್ರಹಾರಗಳು, ಸಭಾಸಮಿತಿ ಮುಂತಾದವು ಸ್ಥಳೀಯ ಆಡಳಿತ ನಡೆಸುತ್ತಿದ್ದು ಊರ ಸಮಸ್ಥರು ಊರೊಕ್ಕಲು, ಊರ ಹದಿನೆಂಟು ಜಾತಿ ಅಥವಾ

ಸಮುದಾಯದವರು ಅವರಂತೆ ನಡೆದುಕೊಳ್ಳುತ್ತಿದ್ದರು. ಅನೇಕ ಶಾಸನಗಳಲ್ಲಿ ಈ ಸ್ಥಳೀಯ ಆಡಳಿತದ ಬಗ್ಗೆ ಉಲ್ಲೇಖವಿರುವುದನ್ನು ಕಾಣಬಹುದು. ಚೋಳ ಶಾಸನಗಳಂತೂ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯನ್ನು ಬಿಂಬಿಸುವ ಕೈಗನ್ನಡಿಗಳಾಗಿವೆ. ಗ್ರಾಮಗಳಲ್ಲಿ ಗೌಡ, ಶಾನುಭೋಗ, ತೋಟಿ, ತಳವಾರ, ನೀರಗಂಟಿ, ಅಗಸ, ಬಡಗಿ, ಕುಂಬಾರ, ಕಮ್ಮಾರ, ನಾವಿದ, ಜ್ಯೋತಿಷಿ ಮುಂತಾದ ಆಯಾಗಾರರು ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿಯೊಂದು ಗ್ರಾಮವೂ ಹೆಚ್ಚು ಸ್ವಾವಲಂಬಿ ಘಟಕವಾಗಿರುತ್ತಿದ್ದವು ಪ್ರಾಚೀನ ಅಗ್ರಹಾರಗಳ ಆಡಳಿತವನ್ನೇ ಮಹಾಜನರು ನಡೆಸುತ್ತಿದ್ದ ಅಂಶ ಚೋಳ, ಹೊಯ್ಸಳ, ವಿಜಯನಗರ ಕಾಲದ ಶಾಸನಗಳಿಂದ ತಿಳಿಯುತ್ತದೆ.

೧೯ನೇ ಶತಮಾನದ ಉತ್ತರಾರ್ಧ ಭಾಗದವರೆವಿಗೂ ಯಾವುದೇ ಸರ್ಕಾರಿ ಕಾಯ್ದೆಗಳಿರಲಿಲ್ಲ ೧೮೭೦ರ ಕೇಂದ್ರ ಪುರಸಭಾ ನಿಯಂತ್ರಣ ಕಾಯ್ದೆಯು ೧೮೭೧ ರಲ್ಲಿ ಸಂಸ್ಥಾನದಲ್ಲಿ ಜಾರಿಗೆ ಬಂದಿತು ಇದರ ಪರಿಣಾಮವಾಗಿ ಮೂರು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿದ್ದು, ತಾತ್ಕಾಲಿಕ ಪುರಸಭಾ ಸಮಿತಿಗಳು ಕಾರ್ಯನಿರ್ವಹಿಸಲಾರಂಭಿಸಿದವು. ೧೯೦೨ ಹಾಗೂ ೧೯೦೭ರ ಸ್ಥಳೀಯ ಬೋರ್ಡ್ ಕಾಯ್ದೆಗಳನ್ವಯ ಈ ಸ್ಥಳೀಯ ಸಂಸ್ಥೆಗಳಿಗೆ ಸ್ಪಷ್ಟ ರೂಪುರೇಷೆ ಎಬ್ಬಿಸಿತು. ೧೯೧೮ರ ಸ್ಥಳೀಯ ಬೋರ್ಡ್ ಕಾಯ್ದೆಯ ಅನ್ವಯ ನಷ್ಟದಲಿರುವ ಪುರಸಭಾ ಸಮಿತಿಗಳನ್ನು ವಿಸರ್ಜಿಸುವುದರ ಜೊತೆಗೆ ಮುನಿಸಿಪಾಲಿಟಿಗಳನ್ನು ನಗರಸಭೆ, ಪುರಸಭೆ ಹಾಗೂ ಉಪ ಪುರಸಭೆಗಳೆಂದು ವರ್ಗೀಕರಿಸಲಾಯಿತು. ಅಲ್ಲದೆ ಪುರಸಭೆಯ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಹಕ್ಕನ್ನು ಸದಸ್ಯರಿಗೆ ನೀಡುವುದರ ಜೊತೆಗೆ ಸರ್ಕಾರದ ಹಸ್ತಕ್ಷೇಪವನ್ನು ಸೀಮಿತಗೊಳಿಸಿತು. ೧೯೨೮-೨೯ ರ ಕಾಯ್ದೆ ಮಹಿಳೆಯರಿಗೂ ಸದಸ್ಯರಾಗಲೂ ಅವಕಾಶ ಕಲ್ಪಿಸಿತು.[೩] ೧೯೩೩ ರ ಉಪಪುರಸಭೆಗಳ ಕಾಯ್ದೆ ಪ್ರಾಪ್ತರಿಗೆ ಮತದಾನದ ಹಕ್ಕನ್ನು ನೀಡುವುದರ ಜೊತೆಗೆ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿತು.

ಆಧುನಿಕ ಗ್ರಾಮಪಂಚಾಯ್ತಿ ಆಡಳಿತ ವ್ಯವಸ್ಥೆಯು ಜಾರಿಗೆ ಬರುವುದಕ್ಕೆ ಮೊದಲೇ ಸಂಸ್ಥಾನದ ಗ್ರಾಮಗಳ ನೈರ್ಮಲ್ಯ ರಕ್ಷಣೆಯನ್ನು ಆರೋಗ್ಯ ಇಲಾಖೆಯೇ ೧೮೯೮ ರ ಗ್ರಾಮೀಣ ನೈರ್ಮಲ್ಯ ಕಾಯ್ದೆಯನ್ವಯ ನಿರ್ವಹಿಸುತ್ತಿತ್ತು. ಹಳ್ಳಿಗಳ ಅಭಿವೃದ್ಧಿ ಯೋಜನೆಯನ್ನು ಸರ್.ಎಂ. ವಿಶ್ವೇಶ್ವರಯ್ಯನವರು ೧೯೧೪ರಷ್ಟು ಹಿಂದೆಯೇ ಜಾರಿಗೊಳಿಸಿದರು. ಮುಂದೆ ೧೯೧೮ರ ಕಾಯ್ದೆಯನ್ವಯ ಸಂಸ್ಥಾನದಲ್ಲಿ ಕಾನೂನುಬದ್ಧ ಗ್ರಾಮ ಪಂಚಾಯ್ತಿಗಳು ಅಸ್ಥಿತ್ವಕ್ಕೆ ಬಂದವು. ಅದರಂತೆ ಪ್ರತಿ ಗ್ರಾಮಕ್ಕೆ. ಸಾಮಾನ್ಯವಾಗಿ ಹಿಂದೂಗಳಲ್ಲಿ ಆಧ್ಯಾತ್ಮಿಕ ಸಾಧನೆಗೈದ ಹಿರಿಯರು, ಗುರುಗಳು ಇತ್ಯಾದಿ ಹಿರಿಕರು ಸತ್ತಾಗ ಅವರನ್ನ ಅದರಲ್ಲಿಯೂ ಪ್ರಮುಖವಾಗಿ ಹೊಲೆಯ ಮಾದಿಗರಲ್ಲಿ ತಮ್ಮ ಸತ್ತ ಹಿರೀಕರು ಪಾತಾಳದಲ್ಲಿ ಇರುತ್ತಾರೆ ಎಂದು ನಂಬುತ್ತಾರೆ. ಕನ್ನಡದಲ್ಲಿ ಪಾತಿ ಅಥವಾ ಪಾತೆ ಎಂದರೆ ವ್ಯವಸಾಯಕ್ಕಾಗಿ ಸಿದ್ದಗೊಳಿಸುವ ಭೂಮಿ ಎಂದು ಅರ್ಥ

ಅದರ ಇನ್ನೊಂದು ಅರ್ಥ ನೀರಿನ ಅನುಕೂಲ ಚೆನ್ನಾಗಿರುವ ಭೂಮಿ ಅಥವಾ ಗದ್ದೆ ಎಂದು. ಅದರ ಅಧಿಪತಿ ಪೋತರಾಜ ರಾಜ ಎಂಬ ಪದದ ಮೂಲ ಅರ್ಥ ಹೊಲ ಮಾಡುವವನು ಅಥವಾ ಹೊಂದಿದವನು ಎಂದು ಮೂಲ ಕನ್ನಡಿಗರು ತಮ್ಮ ಮಾತಿನಲ್ಲಿ ಈಗಲೂ ಸಂಸ್ಕೃತವನ್ನು ಹೆಚ್ಚು ಬೆರೆಸುವುದಿಲ್ಲ ಹಾಗಾಗಿ ಅವರು ಪೋತಪ್ಪ ಎಂಬ ಹೆಸರನ್ನು ಉಳಿಸಿಕೊಂಡಿದ್ದಾರೆ. ಅಪ್ಪ ಹಾಗೂ ಅಯ್ಯ ಪದಗಳು ಕನ್ನಡದ ಮೂಲ ಜನರಿಗೆ ಹಿರಿಯ, ಯಜಮಾನ, ದೊಡ್ಡವ, ರಾಜ, ರಾಯ, ಅರಸ, ಮುಖ್ಯಸ್ಥ ಹಾಗೂ ಒಡೆಯ ಎಂಬೆಲ್ಲಾ ಅರ್ಥಗಳನ್ನು ನೀಡುತ್ತವೆ. ಹಾಗಾಗಿ ಪೋತಪ್ಪ ಎಂದರೆ ನಾವು ಪೊಲದಪ್ಪ ಅಥವಾ ಪೊಲದಯ್ಯ ಎಂದು ಸಹ ಅರ್ಥೈಸಬಹುದು. ಆತನ ಹೆಂಡತಿಯರು ಗಂಗಮ್ಮ ಹಾಗೂ ಪೊಲಕಮ್ಮ ಅಥವಾ ಪೊತಾರಮ್ಮ ಇಲ್ಲಿ ಪೋತಪ್ಪನು ನೆಲದ ಒಡೆಯ ಅಥವಾ ರೈತರಿಗೆ ಬೇಕಾದ ನೀರಿನ ಒಡೆಯನಾಗಿದ್ದಾನೆ. ನದಿ, ಹಳ್ಳ ತೊರೆಗಳ ಹಾಗೂ ಇತರೆ ಜಲಮೂಲಗಳ ಒಡೆಯನಾಗಿದ್ದಾನೆ ಎಂದು ಹೇಳಬಹುದು.

ಇಲ್ಲಿ ಗಂಗಮ್ಮ ಎಂದಾಕ್ಷಣ ನಾವು ಅವಳೊಬ್ಬಳನ್ನು ಪುರಾಣದ ದೇವತೆ ಎಂಬಂತೆ ಅರ್ಥೈಸಬಾರದು. ಅವಳ ಹಿಂದೆ ಜಲಮೂಲ ಕಾಲುವೆಗಳ ಒಡತಿ, ನೀರುಗಂಟಿ ಕಾಯಕದವಳು ಎನ್ನುವುದು ಸೂಕ್ತ ಅಥವಾ ತನ್ನ ಗಂಡನ ಆಡಳಿತವಿರುವ ನಾಡಿನಲ್ಲಿ ನೀರಿನ ರಕ್ಷಣೆ ಮಾಡುವ ಜವಾಬ್ದಾರಿ ಹೊತ್ತವಳು ಎಂದು ಅರ್ಥೈಸಬೇಕಾಗುತ್ತದೆ.

ವ್ಯವಸಾಯವೇ ಒಬ್ಬನ ಅಧಿಕಾರ ಅಂತಸ್ತನ್ನು ಎತ್ತಿ ತೋರಿಸುವ ಕಾಲದಲ್ಲಿ ಹೊಲದ ಒಡೆಯನೇ ಆಡಳಿತದ ಮುಖ್ಯಸ್ಥನಾಗಿರುತಿದ್ದ. ಆತನ ಹಲವು ಜವಾಬ್ದಾರಿಗಳಲ್ಲಿ ನೀರಿನ ಸಂರಕ್ಷಣೆ ಕೂಡ ಒಂದಾಗಿದೆ. ಏಕೆಂದರೆ ಆಗಿನ ಸಂದರ್ಭದಲ್ಲಿ ಊರುಗಳು, ಪಟ್ಟಣಗಳು ಹಾಗೂ ಹಳ್ಳಿಗಳು ಕೇವಲ ನೀರು, ಉರುವಲು ಹಾಗೂ ಆಹಾರಕ್ಕೆ ವ್ಯವಸ್ಥೆ ಇರುವ ಪ್ರದೇಶಗಳಲ್ಲಿ ಮಾತ್ರ ಹುಟ್ಟುತ್ತಿದ್ದವು. ಇದರ ರಕ್ಷಣೆಯ ಜವಾಬ್ದಾರಿ ನೀರುಗಂಟಿಯದ್ದಾಗಿರುತ್ತಿತ್ತು.[೪]

ಹೊಲೆಯರನ್ನು, ಮಾದಿಗರನ್ನು ತೋಟಿ, ನೀರುಗಂಟಿ ಹಾಗೂ ತಳವಾರಿಕೆ ಕೆಲಸದಿಂದ ದಿವಾನ್ ಪೂರ್ಣಯ್ಯನವರು ತೆಗೆದು ಹಾಕಲು ಆರಂಭಿಸಿದ ಮೇಲೆ ಹೊಲೆ ಮಾದಿಗರು ಮೈಸೂರು ಸಂಸ್ಥಾನದಲ್ಲಿ ಸಾರ್ವಜನಿಕ ಕೆರೆ ಭಾವಿಗಳಿಂದ ದೂರವಿಡುವ ಅಸ್ಪೃಶ್ಯತೆ ಆರಂಭವಾಯಿತು ಅಲ್ಲಿಯವರೆಗೆ ಸಾರ್ವಜನಿಕ ಭೂಮಿ, ನೀರು ಕಾಲುವೆ ಬಾವಿ, ನದಿ ಕೊಳಗಳಲ್ಲಿ ದಲಿತರು ಸ್ವಲ್ಪ ಮಟ್ಟಿಗಟಿಗಾದರೂ ಉಪಯೋಗಿಸಬಹುದಾಗಿತ್ತು.

ಜನತಂತ್ರ ವ್ಯವಸ್ಥೆಯಲ್ಲಿ ಮೇಲ್ಮಟ್ಟದ ಸಂಸ್ಥೆಗಳ ಬೆಳವಣಿಗೆಗೆ ಆಧಾರ ಸ್ಥಂಭಗಳಾಗಿ ಸ್ಥಳೀಯ ಸಂಸ್ಥೆಗಳು ತರಬೇತಿ ಕೇಂದ್ರಗಳಾಗಿರುತ್ತವೆ. ಆದ್ದರಿಂದ ಅವುಗಳ ಅಭಿವೃದ್ಧಿಯ ಬಗ್ಗೆ ದಿವಾನ್ ರಂಗಾಚಾರ್ಲುರವರು ಗಾಢವಾದ ಭಾವನಾತ್ಮಕ ವಿಶ್ವಾಸ ಹೊಂದಿದ್ದರು.

ಅವರ ಅಭಿಪ್ರಾಯದಲ್ಲಿ ನಿಜವಾದ ಪ್ರಜಾಪ್ರಭುತ್ವ ಅತ್ಯಂತ ಕೆಳಮಟ್ಟದಿಂದ ಆರಂಭವಾಗಬೇಕು. ಜನಾಭಿಪ್ರಾಯವನ್ನೇ ಬಿಂಬಿಸುವ ಪ್ರಜಾಪ್ರತಿನಿಧಿ ಶಾಸನ ಸಭೆಯನ್ನು ಮೇಲ್ಮಟ್ಟದಲ್ಲಿ ರಚಿಸುವುದು ಹೊರನೋಟಕ್ಕೆ ಮಾತ್ರ ಚೆಂದ. ಆಳವಾದ ತಳಹದಿಯ ಮೇಲೆ ನಿಲ್ಲಿಸಿದರೆ ಮಾತ್ರ ಪ್ರಜಾಪ್ರಭುತ್ವ ಒಂದು ಬಲವಾದ ಆರೋಗ್ಯಕರವಾದ ಸಂಸ್ಥೆಯಾಗಿ ಉಳಿಯುತ್ತದೆ. ಪ್ರಜಾಪ್ರತಿನಿಧಿ ಸಭೆ ಪ್ರಾರಂಭವಾದ ಎರಡನೆಯ ವರ್ಷ ಅವರು ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣ, ಅವರು ಎಂತಹ ಶ್ರೇಷ್ಠ ರಾಜನೀತಿಯನ್ನು ಹೊಂದಿದ್ದರು ಎಂಬುದನ್ನು ತಿಳಿಯಬಹುದಾಗಿದೆ. ಕೆಲವು ನಿರ್ಧಿಷ್ಟ ಕ್ಷೇತ್ರದಲ್ಲಿ ಪೂರ್ಣ ಸ್ವಾತಂತ್ರ ಹೊಂದಿದ್ದು, ಜನತಂತ್ರದಿಂದ ಆಯ್ಕೆಯಾದ ತಾಲ್ಲೂಕು ಮಂಡಳಿಗಳು, ಗ್ರಾಮಪಂಚಾಯ್ತಿಗಳು ಕಾರ್ಯನಿರ್ವಹಿಸುವ ರಾಜ್ಯಗಳ ಮಾದರಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಳೀಯ ಸಂಸ್ಥೆಗಳ ಅಭಿವೃದ್ದಿಗೆ ಪ್ರಯತ್ನಿಸಿದರು.

೧೮೮೭ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಚರ್ಚೆ ಪುರಸಭೆಗಳ ಮತ್ತು ಲೋಕಲ್ ಬೋರ್ಡ್ ಮಂಡಳಿಗಳನ್ನು ಉತ್ತಮಗೊಳಿಸುವ ಪ್ರಯತ್ನದಲ್ಲಿ ಮೈಸೂರು ಸಂಸ್ಥಾನ ವಿಫಲವಾಗಿರುವುದನ್ನು ಒಪ್ಪಿಕೊಂಡರು. ಸ್ಥಳೀಯ ಸಂಸ್ಥೆಗಳ ಆಡಳಿತ ಸುಧಾರಿಸಿದೆ, ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಅದರ ಅಭಿವೃದ್ಧಿಗೆ ಸಹಕಾರಿಯಾಗುವುದಿಲ್ಲ. ಅದ್ದರಿಂದ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಮೊದಲು ಆದ್ಯತೆ ನೀಡಿದರೆ ಆಗ ಮಾತ್ರ ಪ್ರಜಾಪ್ರತಿನಿಧಿ ಸಭೆಯು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂಬ ಅಂಶವನ್ನು ಸಭೆಯಲ್ಲಿ ಚರ್ಚಿಸಿದರು. ಪೂನಾ ಸಾರ್ವಜನಿಕ ಸಭೆಯಲ್ಲಿ ಅನುಷ್ಠಾನಗೊಂಡಿರುವ ಅಂಶಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪವಾಯಿತು. ಈ ವರದಿಯನ್ನು ಪರಿಶೀಲಿಸುವುದು ಉಪಯುಕ್ತ ಎಂಬ ತೀರ್ಮಾನಕ್ಕೆ ಬರಲಾಯಿತು.

ಜಿಲ್ಲಾಧಿಕಾರಿಗಳು ಲೋಕಲ್ ಬೋರ್ಡ್ ಮಂಡಳಿಯ ಹಾಗೂ ಸಭೆಯ ಅಧ್ಯಕ್ಷತೆ ವಹಿಸುವುದನ್ನು ತಿರಸ್ಕರಿಸಲಾಯಿತು. ಜಿಲ್ಲಾಧಿಕಾರಿಗಳು ಈ ಮಂಡಳಿಗಳ ಅಧ್ಯಕ್ಷತೆ ವಹಿಸಿದರೆ ಅವರ ಪ್ರಭಾವದಿಂದಾಗಿ ಮಂಡಳಿಯು ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಅಡ್ಡಿಯಾಗುತ್ತದೆಂಬುದು ಎಲ್ಲರ ನಿಲುವಾಗಿತ್ತು. ವಿದ್ಯಾವಂತ ವರ್ಗಗಳು ಮಂಡಲಿಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ಪಡೆದಿರಬೇಕೆಂಬ ವಾದವನ್ನು ತಿರಸ್ಕರಿಸಲಾಯಿತು.

ಪುರಸಭಾ ಮಂಡಳಿಗಳು ಮತ್ತು ಸ್ಥಳೀಯ ನಿಧಿಮಂಡಲಿ ಆಡಳಿತಾಂಗ ಹಾಗೂ ಕಾರ್ಯಾಂಗಗಳ ಮಧ್ಯೆ ಸ್ಪಷ್ಟವಾದ ವ್ಯತ್ಯಾಸವಿರಬೇಕೆಂದು ಚರ್ಚಿಸಿದರು. ಮಿತವಾದ ಅಯವ್ಯಯ ವಿರುವ ಸಣ್ಣ ಪುರಸಭೆಗಳು ಕಾರ್ಯಾಂಗ ಮತ್ತು ಆಡಳಿತಾಂಗ ಎರಡನ್ನು ಸೇರಿಸಿ ಪೂರ್ಣ ಆಡಳಿತವನ್ನು ಪುರಸಭಾ ಮಂಡಲಿಗಳಿಗೆ ವಹಿಸಿಕೊಡಬಹುದು, ಆದರೆ ದೊಡ್ಡನಗರಗಳಾದ ಬೆಂಗಳೂರು ಮತ್ತು ಮೈಸೂರು ಪುರಸಭೆಗಳು ಯಶಸ್ವಿಯಾಗಬೇಕಾದಲ್ಲಿ ಕಾರ್ಯಾಂಗ ಮತ್ತು

ಆಡಳಿತಾಂಗದ ಹೊಣೆಗಾರಿಕೆಯನ್ನು ಪ್ರತ್ಯೇಕಿಸಬೇಕೆಂಬುದು ಸದಸ್ಯರ ಅಭಿಪ್ರಾಯವಾಗಿತ್ತು. ಸ್ಥಳೀಯ ಮಂಡಳಿಗಳಿಗೆ ತೆರಿಗೆ ವಸೂಲಿ ಮಾಡುವ ಜವಾಬ್ದಾರಿ ಹೊರಿಸಬೇಕಾಗಿಲ್ಲ ಏಕೆಂದರೆ ಸರ್ಕಾರ ತನ್ನ ಕಂದಾಯ ವಸೂಲಿ ಮಾಡಲು ಇಡೀ ಪ್ರಾಂತ್ಯದಲ್ಲಿ ಹರಡಿಕೊಂಡ ಬೃಹತ್ ವ್ಯವಸ್ಥಾ ಇರುವುದರಿಂದ ಈ ಅಧಿಕಾರಿಗಳ ಸಭೆಯನ್ನೇ ಉಪಯುಕ್ತವಾಗಿ ಬಳಸಿಕೊಳ್ಳಬೇಕು. ಅವರ ಮೂಲಕವೆ ಲೋಕಲ್ ಮಂಡಲಿ ತೆರಿಗೆಗಳನ್ನು ಅಧಿಕಾರದ ಸಂಘರ್ಷವಿಲ್ಲದೆ ದಕ್ಷತೆಯಿಂದ ಮಾಡಬಹುದೆಂಬ ಭಾವನೆ ವ್ಯಕ್ತಪಡಿಸಿದರು.[೫]

ಲೋಕಲ್ ಫಂಡ್ ಮಂಡಲಿಗಳು ಕಾರ್ಯನಿರ್ವಹಣೆಯನ್ನು ಸರ್ಕಾರದ ಇಲಾಖೆಗಳು ನಿರ್ವಹಿಸಬೇಕು ಸಮಾನಾಧಿಕಾರ ಮತ್ತು ಸಮಾನ ಹೊಣೆಗಾರಿಕೆ ಇರುವ ಪ್ರತ್ಯೇಕ ವ್ಯವಸ್ಥೆಯನ್ನು ಹೊಂದಿರುವುದು ಎಷ್ಟೇ ಅಪೇಕ್ಷಣೀಯವಾದರೂ, ಸ್ಥಳೀಯ ನಿಧಿ ಮಂಡಳಿಗಳಿಗೆ ತೆರಿಗೆಗಳನ್ನು ಗೊತ್ತುಪಡಿಸುವುದು, ತೆರಿಗೆಯ ಪ್ರಮಾಣ, ವಸೂಲಿಯ ರೀತಿ ಮನ್ನಾ ಮಾಡುವುದು ಮೇಲ್ಮನವಿಗಳನ್ನು ಕೇಳುವುದು, ಅಯವ್ಯಯ ಸಿದ್ದ ಮಾಡುವುದು, ಹೊಸ ಕೆಲಸಗಳಿಗೆ ಅಂದಾಜುಗಳನ್ನು ಮಂಜೂರು ಮಾಡುವುದು ಮತ್ತು ಆ ಕಾರ್ಯಗಳ ನಿರ್ವಹಣೆ ಹೇಗಿರ ಬೇಕೆಂಬುದು ಮುಂತಾದ ಆಡಳಿತಾತ್ಮಕ ಅಧಿಕಾರಿಗಳನ್ನ ಸ್ಥಳೀಯ ನಿಧಿ ಮಂಡಳಿಗಳು ನಿರ್ವಹಿಸಬಹುದಾಗಿದೆ. ಪುರಸಭಾಮಂಡಳಿ ಮತ್ತು ಸ್ಥಳೀಯ ಮಂಡಳಿಗಳಲ್ಲಿ ಚುನಾಯಿತ ಸದಸ್ಯರೇ ಎಲ್ಲರೂ ಇರುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕಾಯಿತು. ಒಂದು ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚಿನ ತೆರಿಗೆ ಕೊಡುತ್ತಿರುವ ಒಂದು ವಿಭಾಗದಲ್ಲಿರುವ ಮನೆ ಮಾಲೀಕರು ಮತ್ತು ಇತರರು ಪುರಸಭೆಗಳಿಗೂ, ಒಂದು ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚಿನ ಸ್ಥಳೀಯ ಶುಲ್ಕಗಳನ್ನು ಕೊಡುವವರು ಸ್ಥಳೀಯ ಮಂಡಳಿಗಳಿಗೂ ಮತದಾನ ಮಾಡಲು ಅರ್ಹರಾಗಬೇಕು ಮಂಡಳಿಗೆ ಇಬ್ಬರು ಅಥವಾ ಮೂರು ಜನರನ್ನು ಸರ್ಕಾರ ನೇಮಿಸಬಹುದು. ಚುನಾಯಿತ ಪದ್ದತಿಯ ನೈತಿಕ ಶಕ್ತಿಯನ್ನು ದುರ್ಬಲಗೊಳಿಸುವುದರಿಂದ ಮಂಡಲಿಯು ಸದಸ್ಯರ ಒಟ್ಟು ಸಂಖ್ಯೆಯು ಮೂರನೇ ಒಂದು ಭಾಗ ಅಥವಾ ಎಲ್ಲಾ ಸದಸ್ಯರನ್ನು ಸರ್ಕಾರ ನೇಮಕ ಮಾಡುವುದು, ಅನಗತ್ಯ ಮತ್ತು ಅಕ್ಷೇಪಾರ್ಹವಾಗಿರುತ್ತದೆ. ಮಂಡಲಿಯ ಕೆಲಸ ತೃಪ್ತಿಕರವಾಗಿಲ್ಲದಿದ್ದರೆ, ಅದರ ತೀರ್ಮಾನವನ್ನು ಒಪ್ಪದಿರುವ ಮತ್ತು ಹಣಕಾಸಿನ ನಿರ್ವಹಣೆ ಮಾಡುವ ಅಧಿಕಾರವನ್ನು ಸರ್ಕಾರವು ಕಾದಿರಿಸಿಕೊಳ್ಳಬಹುದಾಗಿದೆ. ಒಂದು ನಿರ್ದಿಷ್ಟ ಅಂದಾಜಿಗೆ ಮೀರಿದ ಕೆಲಸಗಳಿಗೆ ಸರ್ಕಾರದ ಪೂರ್ವಾನುಮತಿ ಅಗತ್ಯ. ಸಾಲಗಳನ್ನ ಎತ್ತುವುದಕ್ಕೆ, ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಮೊದಲಾದವುಗಳಿಗೆ ಸರ್ಕಾರದ ಪೂರ್ವಾನುಮತಿ ಅಗತ್ಯ. ತಾವು ಮಾಡಿರುವ ಈ ಪ್ರಸ್ತಾಪಗಳಿಗೆ ಪ್ರಜಾಪ್ರತಿನಿಧಿಗಳು ಒಪ್ಪಿಗೆಯನ್ನಿತ್ತಿದೆ. ಇವುಗಳನ್ನಾಧರಿಸಿ ಸರ್ಕಾರ ಶಾಸನ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ರಂಗಾಚಾರ್ಲುರವರ ವಿಚಾರ ರೀತಿ ಪ್ರಗತಿಪರವಾದುದು. ಅವರ ನಾಯಕತ್ವದಲ್ಲಿ ಪ್ರಜಾಪ್ರಭುತ್ವ ಸಂಸ್ಥೆಯ ಅಡಿಪಾಯ ಬಲಗೊಂಡು ಅದು ಹಂತಹಂತವಾಗಿ ಬೆಳೆಯತೊಡಗಿತು.

೧೮೮೨ ರಲ್ಲಿ ದಿವಾನ್ ರಂಗಾಚಾರ್ಲುರವರು ಮಾಡಿದ್ದ ಸ್ಥಳೀಯ ಸಂಸ್ಥೆಗಳ ಆಡಳಿತದ ಸರ್ಕಾರದ ಯೋಜನೆಯ ಬಗ್ಗೆ ೧೮೮೩ ರಲ್ಲಿ ದಿವಾನ್ ಶೇಷಾದ್ರಿ ಐಯ್ಯರ್‌ರವರು ಸಭೆಯನ್ನುದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದರು. ಸ್ಥಳೀಯ ಮಂಡಳಿಯು ಮತ್ತು ನೀರಾವರಿ ನಿಧಿಯನ್ನು ಯಾವ ರೀತಿ ನಿರ್ವಹಿಸಬೇಕೆಂಬುದರ ಬಗ್ಗೆ ಮಹಾರಾಜರು ಹೊಸ ಕರಡು ಕಾನೂನಿಗೆ ಒಪ್ಪಿಗೆ ನೀಡಿದ್ದಾರೆಂದು ಸ್ಪಷ್ಟಪಡಿಸಲಾಯಿತು.[೬]

ಮಸೂದೆ ಪ್ರಸ್ತುತದಲ್ಲಿರುವ ತಾಲ್ಲೂಕು ಅಥವಾ ಉಪಭಾಗಕ್ಕೆ ಒಂದೊಂದು ಸ್ಥಳೀಯ ಮಂಡಳಿ ರಚಿಸಲಾಗುವುದು ಎಂದರು. ಸಣ್ಣ ಸಣ್ಣ ಪ್ರದೇಶಗಳಿಗೆ ಒಂದು ಸ್ಥಳೀಯ ಮಂಡಳಿ ರಚನೆಯಿಂದ ದಕ್ಷತೆಗೆ ಸಹಾಯಕವಾಗುವುದಿಲ್ಲವೆಂಬ ಅಂಶವನ್ನು ಅವರು ಪ್ರಸ್ಥಾಪಿಸಿ, ಪ್ರಸ್ತುತ ಜಿಲ್ಲಾ ಸದಸ್ಯರಾಗಿರುವವರಿಗೆ ಸ್ಥಳೀಯ ಆಸಕ್ತಿಯಾಗಲೀ ಸ್ಥಳೀಯ ತಿಳುವಳಿಕೆಯಾಗಲಿ ಇಲ್ಲದಿರುವುದರಿಂದ ಸ್ಥಳೀಯ ಮಂಡಳಿ ಆಡಳಿತ ಅದಕ್ಷತೆಯಿಂದ ಕೂಡಿದೆ ಎಂದರು. ಆದುದರಿಂದ ಈ ವ್ಯವಸ್ಥೆಗೆ ನ್ಯಾಯವಾದ ಅವಕಾಶ ದೊರಕಬೇಕಾಗಿದ್ದರೆ ತಾಲ್ಲೂಕು ಮಂಡಳಿಗಳಿಂದ ಪ್ರಾರಂಭಿಸಬೇಕೆಂಬುದು ದಿವಾನರ ಅಭಿಪ್ರಾಯವಾಗಿತ್ತು. ಮೊದಲ ಹಂತದಲ್ಲಿ ತಾಲ್ಲೂಕು ಮಂಡಳಿಗಳ ಕಾರ್ಯ ವ್ಯಾಪ್ತಿಯನ್ನು ಪ್ರಾಥಮಿಕ ವಿದ್ಯಾಭ್ಯಾಸ, ವೈದ್ಯಕೀಯ, ಸ್ಥಳೀಯ ಪ್ಲಾಂಟೇಷನ್‌ಗಳು, ನೀರು ಸರಬರಾಜು ಮುಂತಾದವುಗಳಿಗೆ ಸೀಮಿತ ಗೊಳಿಸುವು ದಾಗಿತ್ತು. ಹೊಸ ಮಸೂದೆಯಲ್ಲಿ ಅಧಿಕಾರೇತರಿಗೆ ಆದ್ಯತೆ ನೀಡಲಾಗಿದೆ. ಆದರೆ ಸರ್ಕಾರ ತೆರಿಗೆ ಕೊಡುತ್ತಿರುವ ಖಾಸಗಿ ತೆರಿಗೆದಾರರಲ್ಲಿ ಕೆಲಸವನ್ನೇ ಅರಿತ ಅವರನ್ನು ತೆರಿಗೆದಾರರೇ ಆಯ್ಕೆ ಮಾಡಲು ಅವಕಾಶ ನೀಡಲಾಗುವುದು ಎಂದರು. ಮೊದಲಿಗೆ ತಾಲ್ಲೂಕು ಮಂಡಳಿಗಳ ರಚನೆಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಕಾರಣಗಳಿಂದ ಗ್ರಾಮ ಸಮುದಾಯಗಳು ಭಾರೀ ಪೆಟ್ಟನ್ನು ತಿಂದಿದ್ದವು. ಅದ್ದರಿಂದ ಮೈಸೂರು ರಾಜ್ಯದ ಬಹುಭಾಗ ಚುನಾವಣೆಗೆ ಸಿದ್ದವಿಲ್ಲವೆಂದು ತೀರ್ಮಾನಿಸಿದರು. ಅದ್ದರಿಂದ ಮಹಾರಾಜರು ಮೊದಲು ಸ್ಥಳೀಯ ಮಂಡಳಿಗಳಿಗೆ ಸದಸ್ಯರ ನಾಮಕರಣ ಮಾಡಿ, ಸರ್ಕಾರ ನೀಡುವ ಅನುಭವದಿಂದ ಚುನಾವಣೆಗಳಿಗೆ ಈ ಸಂಸ್ಥೆಗಳು ಅರ್ಹವೆಂದು ಕಂಡುಬಂದರೆ ಕೆಲ ಇತಿಮಿತಿಗಳೊಡನೆ ಚುನಾವಣೆಗಳಿಗೆ ಅವಕಾಶ ಮಾಡಿಕೊಡಲು ತೀರ್ಮಾನಿಸಲಾಯಿತು. ದಿವಾನರು ಜಿಲ್ಲಾ ಮಂಡಳಿಗಳ ಅಧಿಕಾರೇತರ ಸದಸ್ಯರು ತಾಲ್ಲೂಕು ಮಂಡಳಿಗಳ ಪ್ರತಿನಿಧಿಗಳಾಗಿರುವರೆಂದೂ, ಮತ್ತು ಮೊದಲಲ್ಲಿ ಜಿಲ್ಲೆ ಮತ್ತು ಸಬ್ - ಡಿವಿಷನ್ ಅಧಿಕಾರಿಗಳು ಅಧ್ಯಕ್ಷತೆ ವಹಿಸುವರು ಎಂದು ಭರವಸೆ ನೀಡಿದರು. ಸರ್ಕಾರ ಬಹಳ ಜಾಗ್ರತೆಯಿಂದ ಅತಿ ಸಣ್ಣ ರಾಜಕೀಯ

ಬೆಳವಣಿಗೆಯನ್ನು ಗಮನಿಸುತ್ತದೆ. ಕ್ರಮ ಕ್ರಮವಾಗಿ ಅಧಿಕಾರಿಗಳನ್ನು ಮಂಡಳಿಗಳಿಂದ ಹಿಂದಕ್ಕೆ ಕರೆಸಲಾಗುವುದು.

ಸರ್ಕಾರವು ಕೆರೆಗಳ ದುರಸ್ಥಿ ಕಾರ್ಯವನ್ನು ಜಿಲ್ಲಾಮಂಡಳಿಗಳಿಗೆ ವಹಿಸಿಕೊಡುವುದಾಗಿ ಪ್ರಕಟಿಸಿತು. ಹೋಬಳಿ ಶಾಲೆಗಳು ವಿಫಲವಾಗಿರುವುದರಿಂದ ಸ್ಥಳೀಯ ಮಂಡಳಿಗಳು ಅವುಗಳನ್ನು ವಹಿಸಿಕೊಂಡು ಸರ್ಕಾರ ಕೊಡುವ ಹಣದಿಂದ ನಿರ್ವಹಿಸಬೇಕೆಂದೂ ಸೂಚಿಸಿತು. ಸ್ಥಳೀಯ ಸಂಸ್ಥೆಗಳ ಸ್ಥಾಪನೆ ಮತ್ತು ಅಧಿಕಾರ ವಿಸ್ತರಣೆ ಬಗ್ಗೆ ವಿವಿಧ ಇಲಾಖೆಗಳಲ್ಲಿರುವ ಸರ್ಕಾರಿ ಅಧಿಕಾರಿಗಳ ಸ್ನೇಹಪೂರ್ಣ ಸಹಾಯ ಮತ್ತು ಸಹಕಾರದೊಡನೆ ಒಳ್ಳೆಯ ಕೆಲಸ ಮಾಡಲು ತಿಳಿಸಲಾಯಿತು.

೧೮೮೩ರಲ್ಲಿ ಅಮಲ್ದಾರರಿಗೆ ನ್ಯಾಯಾಧೀಶರ ಅಧಿಕಾರಗಳನ್ನು ಕೊಡಬೇಕೆಂಬ ವಿಚಾರ ಎತ್ತಿದರು. ಅಮಲ್ದಾರರುಗಳು ನ್ಯಾಯಾಧೀಶರಾಗಲು ಸೂಕ್ತ ಶಿಕ್ಷಣ ಪಡೆದಿಲ್ಲವೆಂದು ಹೇಳಿ ಈ ಬೇಡಿಕೆಯನ್ನು ದಿವಾನರು ತಳ್ಳಿಹಾಕಿದರು. ಈ ಸಂದರ್ಭದಲ್ಲಿ ಅವರು ಪಂಚಾಯತ್ ನ್ಯಾಯಾಲಯಗಳ ಸ್ಥಾಪನೆ ಮಾಡಬಹುದೆಂದರು. ಅಂತಹ ನ್ಯಾಯಾಲಯಗಳನ್ನು ಶೀಘ್ರವೇ ಸ್ಥಾಪಿಸಲಾಗುವುದೆಂದು ಭರವಸೆ ನೀಡಿದರು.

ಪುರಸಭೆಗಳಿಗೆ ಚುನಾವಣಾ ಪದ್ಧತಿಯನ್ನು ಅನುಷ್ಠಾನಕ್ಕೆ ತರಲು ೧೮೮೮ ರಲ್ಲಿ ಅಪ್ಪಾಜಯ್ಯನವರು ಪ್ರಬಲವಾಗಿ ಒತ್ತಾಯಪಡಿಸಿದರು. ಆದರೆ ಬೆಂಗಳೂರು ನಗರದ ಸದಸ್ಯರಿಂದ ಈ ಸಲಹೆಗೆ ಅತ್ಯಂತ ಪ್ರಬಲವಾದ ವಿರೋಧ ವ್ಯಕ್ತವಾಯಿತು ಚುನಾವಣಾ ಪದ್ಧತಿಯನ್ನು ವಿರೋಧಿಸಲು ತಾಲ್ಲೂಕಿನ ಬಹುಮಂದಿ ಸದಸ್ಯರು ಒಂದೇ ಗುಂಪಾಗಿ ಎದ್ದು ನಿಂತರು. ಚುನಾವಣಾ ಪದ್ಧತಿಯನ್ನು ವಿರೋಧಿಸಲು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್‌ನಲ್ಲಿ ನಡೆದ ಚುನಾವಣೆಯನ್ನು ಎದುರಿಸಿ ಅಲ್ಲಿನ ಚುನಾವಣಾ ಫಲಿತಾಂಶಗಳು ತೀರಾ ವಿಷಾದನೀಯವಾಗಿ ತ್ತೆಂದರು. ಗೌರವಾನ್ವಿತ ಜನರು ಚುನಾವಣೆಯಲ್ಲಿ ಭಾಗವಹಿಸಲಿಲ್ಲ. ಚುನಾವಣೆ ಅಕ್ರಮಗಳ ಹಗರಣಗಳು ನೋವುಂಟಾಗುವಂತಿದ್ದವು. ಸ್ಥಾನಮಾನಗಳು ನಿಜವಾದ ಪ್ರಭಾವವೂ ಇಲ್ಲದ, ಅಸಮರ್ಥ ಜನ ನಂಬಿಕೆಗೆ ಅರ್ಹರಲ್ಲದ ಜನ ಆಯ್ಕೆಯಾದರೆಂದು ಕೆಲ ಸದಸ್ಯರು ಹೇಳಿದರು. ಈ ಬೇಡಿಕೆಯನ್ನು ಮುಖ್ಯವಾಗಿ ಮಾಡಿರುವವರು ಅನನುಭವಿಗಳು, ಜನರ ನಿಜವಾದ ಅಗತ್ಯತೆಗಳ ಅರಿವಿಲ್ಲದವರು, ಅವರ ಬೇಡಿಕೆಗೆ ಮೈಸೂರು ದರ್ಬಾರು ಒಲಿಯಬಾರದೆಂದು ಸದಸ್ಯರು ಪ್ರಸ್ತಾಪಿಸಿದರು.

ಚುನಾವಣಾ ಪದ್ಧತಿಯ ತತ್ವವು ನಿಸಂಶಯವಾಗಿ ಒಳ್ಳೆಯದೆಂಬ ನಂಬಿಕೆ ತಮಗಿದೆಯೆಂದೂ ಆದರೂ ಆ ಪದ್ಧತಿಯನ್ನು ಜಾರಿಗೆ ತರಲು ಪಕ್ವವಾಗಿಲ್ಲವೆಂದು ದಿವಾನರೂ ಹೇಳಿದರು ಆದರೆ ಪದ್ಧತಿಯಲ್ಲಿ ಕೆಲ ಸುಧಾರಣೆಗಳನ್ನು ಪ್ರಾರಂಭಿಕವಾಗಿ ಮಾಡಬಹುದು ಎಂದು ದಿವಾನರು

ತಿಳಿಸಿ ತಮ್ಮಲ್ಲಿರುವ ಒಂದು ಯೋಜನೆಯಂತೆ ಸರ್ಕಾರ, ಚಾರಿತ್ರ್ಯವುಳ್ಳವರು, ವಿದ್ಯಾವಂತರು ಮತ್ತು ಅಂತಸ್ತು ಮತ್ತು ಆಸ್ತಿ ಇರುವವರನ್ನು ಆಯ್ಕೆ ಮಾಡುವುದು. ಈ ಅರ್ಹ ವ್ಯಕ್ತಿಗಳ ಪಟ್ಟಿಯಿಂದ ಪುರಸಭಾ ಮಂಡಳಿಗಳಿಗೆ ಸಾರ್ವಜನಿಕರು ಆಯ್ಕೆ ಮಾಡಬಹುದೆಂದೂ ತಿಳಿಸಲಾಯಿತು.

ಮೇಲೆ ವಿವರಿಸಿದ ನಡವಳಿಕೆಗಳಿಂದ, ಸದಸ್ಯರು ಚುನಾವಣಾ ಪದ್ದತಿಗೆ ವಿರೋಧವಾಗಿದ್ದ ರೆಂಬುದು ಸ್ಪಷ್ಟ ಆದರೆ ಕಾಲಕಳೆದಂತೆ, ಸದಸ್ಯರಿಗೆ ಆಡಳಿತ ಶಾಹಿಯ ಒತ್ತಡಗಳ ಅರಿವಾಗುತ್ತ ಬಂದು, ಕ್ರಮೇಣ ಚುನಾವಣೆಯ ಬಗ್ಗೆ ತಮಗಿದ್ದ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುತ್ತಾ ಬಂದರು. ನಂತರ ವರ್ಷಗಳಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಾಗಿ ಹೆಚ್ಚಿನ ಬೇಡಿಕೆ ಬಂದಿತು. ಅವರು ಉದಾರ ಮನಸ್ಸಿನಿಂದ ಒಂದಲ್ಲ ಒಂದು ದಿನ ಅನಿವಾರ್ಯವಾಗಬಹುದಾದ ಚುನಾವಣಾ ತತ್ವವನ್ನು ಒಪ್ಪಿಕೊಂಡರು.

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಬಯಸುವ ಸದಸ್ಯರ ಸಂಖ್ಯೆ ೧೮೯ರಲ್ಲಿ ಏರಿತು. ಇಂದಿನ ಪದ್ದತಿಯಲ್ಲಿ ಅಧಿಕಾರಿಗಳು ಸಾಕಷ್ಟು ಆಸಕ್ತಿ ವಹಿಸುತ್ತಿಲ್ಲವೆಂದು ಅವರು ದೂರಿದರು.

ವಿವಾದಗಳ ಇತ್ಯರ್ಥಕ್ಕೆ ಪಂಚಾಯ್ತಿ ಪದ್ಧತಿಯನ್ನು ಜಾರಿಗೆ ತರಲು ದಿವಾನ್ ರಂಗಾಚಾರ್ಲುರವರು ಇಟ್ಟಿದ್ದ ಭರವಸೆಯನ್ನು ಕಾರ್ಯಗತ ಮಾಡಬೇಕೆಂದು ೧೮೯೧ರಲ್ಲಿ ಪ್ರಬಲವಾದ ಬೇಡಿಕೆ ಸಲ್ಲಿಸಲಾಯಿತು. ಸಿವಿಲ್ ನ್ಯಾಯಾಲಯಗಳಲ್ಲಿ ಬಹಳ ದುಬಾರಿ ಮತ್ತು ಅನಾನುಕೂಲವೆಂದು ವಾದಿಸಲಾಯಿತು. ಕಕ್ಷಿದಾರರಿಬ್ಬರೂ ಒಪ್ಪಿಕೊಂಡ ಮೊಕದ್ದಮೆಗಳನ್ನು ಪಂಚಾಯಿತಿಗೆ ಒಪ್ಪಿಸುವಂತಹ ವ್ಯವಸ್ಥೆ ಮಾಡಿದ್ದಲ್ಲಿ ಸದಸ್ಯರಿಗೆ ತೃಪ್ತಿಯಾಗುವುದೆ ಎಂದು ದಿವಾನರು ಸದಸ್ಯರನ್ನು ಕೇಳಿದರು. ಸದಸ್ಯರು ಇದಕ್ಕೆ ಒಪ್ಪಿಗೆ ಸೂಚಿಸಿದರು. ನಾರ್ವೆ ದೇಶದಲ್ಲಿರುವಂತೆ ಪಂಚಾಯತ್‌ದಾರರೇ ಅಂಥ ಮಂಡಳಿಗಳು ಎಂದು ರಚಿಸಿಕೊಳ್ಳಬೇಕೆಂದು ಕೆಲ ಸದಸ್ಯರು ಇಚ್ಚಿಸಿದರು.

೧೮೯೨ರಲ್ಲಿ ಗ್ರಾಮ ನ್ಯಾಯಾಲಯಗಳ ಸ್ಥಾಪನೆಗಾಗಿ ಒಂದು ಕರಡು ಮಸೂದೆಯನ್ನು ಸರ್ಕಾರದ ಮುಂದೆ ಪರಿಶೀಲನೆಗೆ ಇಡಲಾಯಿತು ಈ ವಿಷಯದ ಮೇಲೆ ಸದಸ್ಯರ ಅಭಿಪ್ರಾಯ ಕೇಳಿದರು. ಎಲ್ಲಾ ಸದಸ್ಯರು ಒಮ್ಮತದ ಅಭಿಪ್ರಾಯದಿಂದ ಗ್ರಾಮ ನ್ಯಾಯಾಲಯಗಳ ಸ್ಥಾಪನೆಗೆ ಸಹಮತವನ್ನು ವ್ಯಕ್ತಪಡಿಸಿದರು. ೧೮೯೩ರಲ್ಲಿ ಜಿಲ್ಲಾ ಮಂಡಳಿಗಳೂ, ಸ್ಥಳೀಯ ನಿಧಿ ಮಂಡಲಿಗಳು ಮತ್ತು ಪುರಸಭೆಗಳ ಹಣಕಾಸಿನ ಸ್ಥಿತಿ ಬಗ್ಗೆ ದಿವಾನರು ಪ್ರಸ್ಥಾಪಿಸಿ ಪುರಸಭೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ವಸೂಲಾದ ಕೆಲವು ತೆರಿಗೆಗಳಲ್ಲಿ ಸರ್ಕಾರ ತನ್ನ ಪಾಲನ್ನು ಬಿಟ್ಟು ಕೊಡಬೇಕೆಂದು ತಿಳಿಸಿದರು ಇದರಿಂದಾಗಿ ಪುರಸಭೆಗಳು ತಮ್ಮ ವರಮಾನ ಹೆಚ್ಚಿಸಿಕೊಂಡು

ತಮ್ಮ ಕರ್ತವ್ಯ ನಿರ್ವಹಿಸಬಹುದಾದ್ದರಿಂದ ಈ ವಿಷಯದ ಬಗ್ಗೆ ಸರ್ಕಾರ ತೀವ್ರ ಪರಿಶೀಲನೆ ನಡೆಸುತ್ತದೆ.

೧೮೯೬ರಲ್ಲಿ ಸ್ಥಳೀಯ ನಿಧಿ ಸಂಸ್ಥೆಗೆ ಚುನಾವಣಾ ಬೇಡಿಕೆಯನ್ನು ಸದಸ್ಯರು ಪುನಃಮಾಡಿದರು ಪ್ರತಿ ತಾಲ್ಲೂಕಿನ ಒಬ್ಬ ಅಧಿಕಾರೇತರ ಸದಸ್ಯರು ಜಿಲ್ಲಾ ನಿಧಿ ಮಂಡಲಿಯ ತಾಲ್ಲೂಕನ್ನು ಪ್ರತಿನಿಧಿಸಬೇಕು, ಜಿಲ್ಲಾ ನಿಧಿ ಮಂಡಳಿಗಳಿಗೆ ಪುರಸಭೆಗಳಲ್ಲಿರುವ ಅಧಿಕಾರೇತರರನ್ನು ಆಯ್ಕೆ ಮಾಡಬೇಕು ಎಂದು ಸಲಹೆ ಮಾಡಿದರು ಈ ಸಲಹೆಗಳನ್ನೊಳಗೊಂಡ ಸ್ಥಳೀಯ ಮಂಡಲಿಗಳ ಕರಡು ಶಾಸನವೊಂದು ಸಿದ್ಧತೆಯಲ್ಲಿದೆ ಎಂದು ಸರ್ಕಾರ ಉತ್ತರ ನೀಡಿತು.[೭]

೧೯೦೧ರಲ್ಲಿ ಪುರಸಭೆಗಳಿಗೆ ಹೆಚ್ಚಿನ ಅಧಿಕಾರ ಕೊಡುವ ವಿಚಾರ ಪ್ರಸ್ತಾಪವಾಯಿತು. ಪುರಸಭೆಗಳ ಕರಡು ಮಸೂದೆಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು, ಭಾರತ ಸರ್ಕಾರ ಒಪ್ಪಿಗೆ ಇಟ್ಟ ನಂತರ ಸ್ಥಳೀಯ ಮಂಡಲಿಗಳ ಶಾಸನವನ್ನು ಜಾರಿಗೊಳಿಸಲಾಗುವುದು ಎಂದು ಸರ್ಕಾರ ತಿಳಿಸಿತು.

೫.೧. ಗ್ರಾಮೀಣ ನೈರ್ಮಲ್ಯವನ್ನು ಉತ್ತಮಪಡಿಸಲು ಕೈಗೊಂಡ ಕ್ರಮಗಳಲ್ಲಿ ದಲಿತರು

ನೈರ್ಮಲ್ಯವನ್ನು ಉತ್ತಮಪಡಿಸಲು ಮತ್ತು ಗ್ರಾಮಸ್ಥರ ಹಿತಕಾಯಲು ಹಳ್ಳಿಗಳ ಪುನರ್ ನಿರ್ಮಾಣ ಯೋಜನೆಯೊಂದನ್ನು ೧೯೧೩ರಲ್ಲಿ ರೂಪಿಸಿತು. ರಾಜ್ಯದ ಆರ್ಥಿಕ ಜನಸಂಖ್ಯೆ ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಹಾಗೂ ಮುಖ್ಯವಾದ ಕಸುಬನ್ನಾಗಿ ಕೃಷಿಯನ್ನು ಅವಲಂಭಿಸಿದೆ ಆದ್ದರಿಂದ ಪಟ್ಟಣಗಳು ಮತ್ತು ಗ್ರಾಮಗಳ ನಿರ್ವಹಣೆಯಲ್ಲಿ ಸರ್ಕಾರ ಗಣನೀಯ ಪಾತ್ರ ವಹಿಸಿತು. ಕೆಲವೊಂದು ನಿಬಂಧನೆಯನ್ನು ಹಳ್ಳಿಗಳಲ್ಲಿ ಜಾರಿಗೆ ತರಲು ಉದ್ದೇಶಿಸಿತು. ಗ್ರಾಮಸ್ಥರಿಂದ ಕೂಡಿದ ಒಂದು ಸಣ್ಣ ಮಂಡಳಿಯನ್ನು ರಚಿಸುವ ಒಂದು ಕಾರ್ಯಾಂಗ ಆದೇಶವನ್ನ ಹೊರಡಿಸಿತು. ಈ ಮಂಡಳಿಯು ನಿರ್ವಹಿಸಬೇಕಾದ ಕಾರ್ಯಗಳು ಈ ಕೆಳಗಿನಂತಿವೆ.

೧. ದನಕರುಗಳಿಗೆ ಮತ್ತು ಜನರಿಗೆ ನೀರು ಸರಬರಾಜು

೨. ಛತ್ರಗಳು, ಮಂಟಪಗಳು ಮತ್ತು ತೋಪುಗಳ ನಿರ್ವಹಣೆ

೩. ದೇವಸ್ಥಾನಗಳು, ಮಸೀದಿಗಳು ಮತ್ತು ಇತರ ಮತೀಯ ಸಂಸ್ಥೆಗಳ ರಕ್ಷಣೆ

೪. ಹಳ್ಳಿಯ ಕಾಲುದಾರಿಗಳ ಮತ್ತು ಬೇಲಿಗಳ ಸಂರಕ್ಷಣೆ

೫. ಕೆರೆ ಕಟ್ಟೆಗಳ ಮೇಲ್ವಿಚಾರಣೆ

೬. ಸಣ್ಣ ಜಾತೀಯ ಕಲಹಗಳು ಮತ್ತು ವ್ಯವಹಾರ ವ್ಯಾಜ್ಯಗಳನ್ನು ವಿಚಾರಿಸಲು ಗ್ರಾಮ ನ್ಯಾಯಾಧೀಕರಣ ಸ್ಥಾಪನೆ

೭. ಅರಕ್ಷಕ, ಅರಣ್ಯ ಮತ್ತು ಗ್ರಾಮ ಸೇವಕರಿಗೆ ಸಂಬಳ ನೀಡಲು ಮುಂಗಡ ಪತ್ರದಲ್ಲಿ ಅವಶ್ಯಕವಾದ ವ್ಯವಸ್ಥೆ

೮. ಸಹಕಾರ ಪದ್ಧತಿ ರೀತ್ಯಾಕೃಷಿ ಸಂಘಗಳನ್ನು ಸ್ಥಾಪಿಸುವುದು

೯. ಶಾಲೆಗಳ ಸ್ಥಾಪನೆ

೧೦. ಮೀನುಗಾರಿಕೆ, ಎರವಲು ಪೂರೈಕೆ ಮುಂತಾದವುಗಳ ನಿರ್ವಹಣೆ

ಈ ಕಾರ್ಯಯೋಜನೆಗೆ ಸರ್ಕಾರ ಭೂಕಂದಾಯ ಹಳ್ಳಿಯ ಅಬಕಾರಿ ವರಮಾನ ಮತ್ತು ಪುನರ್ ವಸತಿಗಾಗಿ ಹೆಚ್ಚಿಸಿರುವ ಭೂಕಂದಾಯದ ಒಂದು ಭಾಗವನ್ನು ಬಳಸಿಕೊಳ್ಳಲು ತೀರ್ಮಾನಿಸಲಾಯಿತು. ಗ್ರಾಮಗಳಲ್ಲಿ ಅನೇಕ ಪಂಗಡಗಳಿದ್ದು, ಪ್ರತಿಯೊಬ್ಬ ವ್ಯವಸಾಯಗಾರನೂ ಲಭ್ಯವಿರುವ ನೀರಿನಲ್ಲಿ ಪಕ್ಕದವನಿಗಿಂತ ಹೆಚ್ಚಿಗೆ ಉಪಯೋಗಿಸಲು ಪ್ರಯತ್ನಿಸುವುದನ್ನು ತಡೆಯಲು ನೀರಾವರಿ ಅಭಿವೃದ್ಧಿ ಪಡಿಸಲು ನೇಮಕವಾದ ಸಮಿತಿಯನ್ನು ರಚಿಸಲಾಗಿದ್ದು, ನೀರಿನ ಬಳಕೆಯನ್ನು ಹಾಗೂ ನಿರ್ವಹಣೆಯನ್ನು ನಿರ್ಬಂಧಗೊಳಿಸುವುದಕ್ಕೆ ಸಂಬಂಧಿಸಿದ ನೀರಾವರಿ ಕಾಯಿದೆಯನ್ನು ೧೯೨೨ ರಲ್ಲಿ ಆಚರಣೆಗೆ ತಂದಿತು. ಸರ್ಕಾರ ಗ್ರಾಮಾಂತರ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿತು. ಹಳ್ಳಿಗಳಲ್ಲಿ ಕುಡಿಯುವ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದು ಸರ್ಕಾರದ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಇದರ ಉದ್ದೇಶಕ್ಕಾಗಿ ಸರ್ಕಾರವು ೨ ವರ್ಷಗಳಿಗೊಮ್ಮೆ ೧೫ಲಕ್ಷ ರೂಪಾಯಿ ಖರ್ಚು ಮಾಡಲಾಗುತ್ತಿದೆ. ಪ್ರಸ್ತುತ ೫೪೮೬ ಬಾವಿಗಳನ್ನು ತೋಡಲಾಗಿದೆ. ಗ್ರಾಮಾಂತರ ಪ್ರದೇಶದ ನೀರಿನ ಕಾಲುವೆ ಸಂಪರ್ಕಕ್ಕಾಗಿ ೪ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಗ್ರಾಮಾಂತರ ಪ್ರದೇಶದಿಂದ ತೆರಿಗೆ ರೂಪದಲ್ಲಿ ಸುಮಾರು ೨ಕೋಟಿ ರೂಪಾಯಿ ಅಂದರೆ ಒಟ್ಟು ವರಮಾನದ ಶೇಕಡ ೪೩ರಷ್ಟನ್ನು ಸರ್ಕಾರದ ಖಜಾನೆ ತುಂಬಿಸುತ್ತಿತ್ತು. ಗ್ರಾಮಾಭಿವೃದ್ಧಿಯ ಕಾರ್ಯಕ್ರಮಗಳಲ್ಲಿ ಮಾದರಿ ಗ್ರಾಮಗಳನ್ನು ನಿರ್ಮಿಸುವುದು, ಗ್ರಾಮೀಣ ಕುಟುಂಬಗಳಿಗೆ ಕುರಿ ಸಾಕಾಣೆ, ಕೋಳಿ, ಸಾಕಾಣೆ, ಎಮ್ಮೆ ಕೊಳ್ಳುವುದು ಮುಂತಾದವುಗಳಿಗಾಗಿ ಸರ್ಕಾರ ೫೦ ರೂಪಾಯಿಗಳ ಸಾಲ ಸೌಲಭ್ಯ ಒದಗಿಸಲು ಮುಂದಾಯಿತು.[೮]

ಅಂದಿನ ಸಂದರ್ಭದ ಭಾರತದಲ್ಲಿ ೭ಲಕ್ಷ ಹಳ್ಳಿಗಳಿದ್ದು ಅವುಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ೧೬,೮೦೦ ಹಳ್ಳಿಗಳಿದ್ದವು. ಆ ಜನ ಅಜ್ಞಾನ ಮತ್ತು ಬಡತನದಲ್ಲಿ ಜೀವನ ನಿರ್ವಹಿಸುತ್ತಿದ್ದರು. ಅವರ ಆರ್ಥಿಕಾಭಿವೃದ್ಧಿಗೆ ಮದರಾಸಿನ ಸಮಿತಿಯ ಮಾದರಿಯಲ್ಲಿ ಸಂಸ್ಥಾನದಲ್ಲಿ ಸಮಿತಿ ರಚಿಸಲು ಮುಂದಾಯಿತು. ಸರ್ಕಾರದಿಂದ ವಿದ್ಯಾಭ್ಯಾಸ, ಆರೋಗ್ಯ, ನೀರು ಸರಬರಾಜು ಮುಂತಾದವುಗಳಿಗೆ ಖರ್ಚು ಮಾಡಿರುವ ಹಣದಿಂದ ಗ್ರಾಮಸ್ಥರಿಗೆ ಪ್ರಯೋಜನವಾಗಿದೆ. ಗ್ರಾಮಾಭಿವೃದ್ಧಿ ಸಾಧಿಸಲು ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ಕೈಗೊಂಡಿತು. ೧೯೪೧ರ ದಸರ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡು ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ೧೦ ಹಳ್ಳಿಗಳನ್ನು ಮಾದರಿ ಗ್ರಾಮಗಳಾಗಿ ಪರಿವರ್ತಿಸಲು ನಿರ್ಣಯವನ್ನ ತೆಗೆದುಕೊಳ್ಳಲಾಯಿತು.

೫.೨. ಗ್ರಾಮೀಣ ಆರೋಗ್ಯ ಸುಧಾರಿಸಲು ಕೈಗೊಂಡ ಕ್ರಮಗಳಲ್ಲಿ ದಲಿತರು

ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳು ಅಂದಿನ ಕಾಲದಲ್ಲಿ ತೀರ ಕಡಿಮೆ ಇತ್ತು ಎಂಬುದು ಒಪ್ಪತಕ್ಕ ವಿಚಾರ ಜನತೆಯ ಬದುಕಿನಲ್ಲಿ ಬಹುಮುಖ್ಯವಾದ ಈ ಸೇವೆಯ ಬಗ್ಗೆ ಸರ್ಕಾರ ಕೊಡಬೇಕಾದಷ್ಟು ಗಮನವನ್ನು ಕೊಟ್ಟಿರಲಿಲ್ಲ. ಸರ್ಕಾರದ ದೃಷ್ಟಿ ಹೊಸ ಸಂಪನ್ಮೂಲಗಳ ಮೂಲಕ ರಾಜ್ಯದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸುವ ಕಡೆಗಿತ್ತು. ವೈದ್ಯಕೀಯ ಮತ್ತು ಆಸ್ಪತ್ರೆ ಸೌಕರ್ಯಗಳು ಬೇಕಾದಷ್ಟು ಇರಲಿಲ್ಲ ಮತ್ತು ದಕ್ಷತೆಯೂ ಇರಲಿಲ್ಲ. ವೈದ್ಯಕೀಯ ಸೌಲಭ್ಯಗಳ ಬಗ್ಗೆ ಅಂದಿದ್ದ ಪರಿಸ್ಥಿತಿಯ ಬಗ್ಗೆ ಸಭೆ ಕಲಾಪಗಳ ವರದಿಯಲ್ಲಿ ಅಂಕಿ ಅಂಶಗಳು ದೊರೆಯದಿದ್ದರೂ, ಒಳ್ಳೆಯ ಆರೋಗ್ಯ ಸೇವೆಗಳನ್ನು ಒದಗಿಸಬೇಕೆಂಬ ಭಾವನೆ ತುಂಬಾ ತಡವಾಗಿ ಬಂದಿತೆಂಬುದು ಸ್ಪಷ್ಟ. ಪ್ಲೇಗ್ ಆಗಾಗ ರಾಜ್ಯವನ್ನು ಕಾಡಿ ತೀವ್ರ ಪ್ರಾಣ ಹಾನಿಗೆ ಕಾರಣವಾಗಿತ್ತು ಮತ್ತು ಪತ್ತೆ ಹಚ್ಚಲಾಗದ ಜ್ವರದಿಂದಾಗಿ ಅನೇಕ ಸಾವುಗಳಾಗುತ್ತಿತ್ತು. ಈ ಬಗ್ಗೆ ಮುಂದೆ ಹೆಚ್ಚಿನ ವಿವರಗಳನ್ನು ಕೊಡಲಾಗಿದೆ.

೧೮೮೬ರಲ್ಲಿ ದೊಡ್ಡಬಳ್ಳಾಪುರದ ಚಿಕಿತ್ಸಾಲಯಕ್ಕಾಗಿ ಒಬ್ಬ ತರಬೇತಿ ಪಡೆದ ಸೂಲಗಿತ್ತಿಯನ್ನು ನೇಮಕ ಮಾಡಲಾಯಿತು. ಆದರೆ ಶಿವಮೊಗ್ಗದಲ್ಲಿ ಒಬ್ಬ ಇಂಗ್ಲಿಷ್ ಸೂಲಗಿತ್ತಿ ಬಗ್ಗೆ ಸ್ಥಳೀಯರು ಸಂಶಯಗೊಂಡ ಪರಿಣಾಮ ಆಕೆಯ ಬಳಿಗೆ ರೋಗಿಗಳು ಹೋಗದಿದ್ದ ಒಂದು ಘಟನೆ ನಡೆಯಿತು.[೯] ಈ ಕ್ಷೇತ್ರದಲ್ಲಿ ಸ್ಥಳೀಯ ಹೆಂಗಸರು ತರಬೇತಿ ನೀಡುವ ಕಾರ್ಯಕ್ಕೆ ಮುಂದಾದರು. ಪುರಸಭೆಗಳು ಸೂಲಗಿತ್ತಿಯರನ್ನೂ, ಪೋಲೀಸರನ್ನೂ ನೇಮಿಸಲು ಸಾಧ್ಯವಾಗುವಂತೆ ಪುರಸಭೆಗಳ ಪ್ರದೇಶದೊಳಗೆ ಬಂದ ವರಮಾನವನ್ನೆಲ್ಲಾ ಅವುಗಳಿಗೇ ಕೊಡಬೇಕೆಂಬ ಸದಸ್ಯರ ಬೇಡಿಕೆಗೆ ಮೈಸೂರು ಸರ್ಕಾರ ಸಮ್ಮತಿಸಿತು. ಆದರೆ ಈ ಬಗ್ಗೆ ಒಂದು ಅಧ್ಯಯನ ಮಾಡಿಸುವ ಭರವಸೆ ಇತ್ತರು. ಸಾರ್ವಜನಿಕ ಆರೋಗ್ಯವು ತೃಪ್ತಿಕರವಾಗಿದೆಯೆಂದು ೧೮೯೬ರಲ್ಲಿ ದಿವಾನರು ಸ್ಪಷ್ಟಪಡಿಸಿದರು.

ಯಾವುದೇ ರೀತಿಯ ಸಾಂಕ್ರಾಮಿಕ ರೋಗಗಳಿರಲಿಲ್ಲ. ರಾಜ್ಯದಲ್ಲಿನ ೧೭೭ ಆಸ್ಪತ್ರೆಗಳಲ್ಲಿ ಸುಮಾರು ೭,೧೬,೧೧೨ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ಮಹಿಳೆಯರಿಗೆ ನರ್ಸ್ ಮತ್ತು ಮಿಡ್‌ವೈಫ್ ತರಬೇತಿ ಕೊಡಬೇಕೆಂದೂ, ಬಾಲಕಿಯರ ಶಾಲೆಗೆ ಹೋಗುತ್ತಿರುವ ಮಕ್ಕಳಿಲ್ಲದ ವಿಧವೆಯರನ್ನು ಕಡ್ಡಾಯವಾಗಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುವಂತೆ ಮಾಡಬೇಕೆಂದೂ ನಿರ್ಧರಿಸಲಾಯಿತು. ನರ್ಸ್ ಮತ್ತು ಮಿಡ್‌ವೈಫ್‌ಗಳ ತರಬೇತಿಗೆ ಸರ್ಕಾರ ಕ್ರಮಗಳನ್ನು ಕೈಗೊಂಡಿದೆ, ಎಂದು ಆದರೆ ಸರ್ಕಾರ ಇನ್ನು ಮುಂದೆಹೋಗಿ ಕ್ರಮಗಳನ್ನ ತೆಗೆದುಕೊಳ್ಳಲು ಸವರ್ಣೀಯ ಮಹಿಳೆಯರು ಈ ತರಬೇತಿಗೆ ಒಪ್ಪುವುದು ಕಷ್ಟ ಎಂಬ ಅಂಶವನ್ನ ತಿಳಿಸಲಾಯಿತು.

೧೮೯೮ರಲ್ಲಿ ತೀವ್ರ ರೀತಿಯ ಪ್ಲೇಗ್ ರೋಗಕ್ಕೆ ರಾಜ್ಯ ತುತ್ತಾಯಿತು. ಆ ವರ್ಷ ಪ್ರಜಾಪ್ರತಿನಿಧಿ ಸಭೆ ಅಧಿವೇಶನ ನಡೆಯಲಿಲ್ಲ. ೧೮೯೮ ಆಗಸ್ಟ್ ೧೨ ರಂದು ಪ್ಲೇಗ್

ಬೆಂಗಳೂರು ನಗರದಲ್ಲಿ ಕಾಣಿಸಿಕೊಂಡಿತು. ಸರ್ಕಾರ ಸಾಂಕ್ರಾಮಿಕ ರೋಗ ನಿಯಂತ್ರಣ ಶಾಸನವನ್ನ ಜಾರಿಗೆ ತಂದು, ನಿಯಮಗಳನ್ನು ರಚಿಸಿ ಈ ಉಪದ್ರವದ ವಿರುದ್ಧ ಹೋರಾಟ ಆರಂಭಿಸಿತು. ರೈಲು ಮತ್ತು ರಸ್ತೆ ಮೂಲಕ ನಗರಕ್ಕೆ ಬರುವ ಪ್ರಯಾಣಿಕರನ್ನೆಲ್ಲಾ ತಡೆದು ಪರೀಕ್ಷಿಸಲಾಗುತ್ತಿತ್ತು. ತಾತ್ಕಾಲಿಕ ಪ್ಲೇಗು ಆಸ್ಪತ್ರೆಗಳನ್ನು ಆರಂಭಿಸಲಾಯಿತು. ರೋಗಿಗಳನ್ನು ಪ್ರತ್ಯೇಕಿಸಲು ಆರೋಗ್ಯ ಶಿಬಿರಗಳನ್ನು ಪ್ರಾರಂಭಿಸಲಾಯಿತು. ಗ್ರಾಮ ಮತ್ತು ನಗರ ಮಟ್ಟದಲ್ಲಿ ವಿಶೇಷವಾಗಿ ತಿಳಿಯದಿದ್ದರೂ, ಹುಬ್ಬಳಿಯಿಂದ ಇದು ಬಂದಿತೆಂದು ಭಾವಿಸಲಾಯಿತು. ಬೆಂಗಳೂರು ಜಿಲ್ಲೆ ನಂತರ ಮೈಸೂರು, ಕೋಲಾರ ಮತ್ತು ತುಮಕೂರಿನ ಕೆಲ ಭಾಗಗಳಲ್ಲಿ ಕ್ಷಿಪ್ರವಾಗಿ ಈ ಪ್ಲೇಗ್ ರೋಗ ಹರಡಿಕೊಂಡಿತು. ಒಂದು ಸಾವಿರಕ್ಕೂ ಹೆಚ್ಚು ಜನ ಬೆಂಗಳೂರು ಒಂದರಲ್ಲೇ ಮೃತರಾದರು. ೧೮೯೯ರ ಮಾರ್ಚ್ ೧೧ ರಿಂದ ಜೂನ್ ೨೦ ರವರೆಗಿನ ಅವಧಿಯಲ್ಲಿ ಪ್ಲೇಗ್ ಪ್ರಕೋಪ ಇಳಿಮುಖವಾಯಿತು. ಆದರೆ ಜೂನ್ ನಲ್ಲಿ ಕಾಣಿಸಿಕೊಂಡಿತು. ಮೈಸೂರು ನಗರದಲ್ಲಿ ಕೆಲವರಿಗೆ ಪ್ಲೇಗ್ ತಗಲಿದ ವರದಿಗಳಿವೆ. ರಾಜ್ಯದೆಲ್ಲೆಡೆಯಲ್ಲಿ ೧೪,೮೩೧ ಜನಕ್ಕೆ ಪ್ಲೇಗ್ ತಗುಲಿದ್ದು ೧೨,೩೭೩ ಜನ ಮೃತರಾದರು. ಎಂದು ಅಂದಾಜು ಮಾಡಲಾಗಿದೆ ಎಂದು ವರದಿಯಲ್ಲಿ ದಾಖಲಾಗಿರುವುದನ್ನ ಗಮನಿಸಬಹುದು.[೧೦]

೧೮೯೮ ರ ಮೊದಲಲ್ಲಿ ಪ್ಲೇಗ್ ಕಮಿಷನರ್ ಒಬ್ಬರನ್ನು ನೇಮಿಸಲಾಯಿತು. ಪ್ಲೇಗ್ ಹರಡಿದ್ದ ಪ್ರದೇಶದಲ್ಲಿ ಕ್ರಿಮಿನಾಶಕಗಳನ್ನ ವ್ಯವಸ್ಥಿತವಾಗಿ ಎಡೆಬಿಡದೆ ಸಿಂಪಡಿಸಲಾಯಿತು. ಪ್ಲೇಗ್‌ನಿಂದ ಮೃತರಾದವರನ್ನ ರಾಜ್ಯದ ವೆಚ್ಚದಲ್ಲಿ ಸ್ಮಶಾನಕ್ಕೆ ಸಾಗಿಸಿ ಸುಡಲಾಯಿತು. ಪ್ಲೇಗ್ ನಿರೋಧಕ ಚುಚ್ಚುಮದ್ದನ್ನು ಜನರಿಗೆ ಹಾಕಲಾಯಿತು. ವಾಸಕ್ಕೆ ಅನರ್ಹವಾದ ಮನೆಗಳೆಂದು ಅನೇಕ ಮನೆಗಳನ್ನು ಬೆಂಗಳೂರಲ್ಲಿ ಕೆಡವಲಾಯಿತು. ರಾಜ್ಯದಿಂದ ಪ್ಲೇಗ್ ರೋಗ ಸಂಪೂರ್ಣ ವಾಗಿ ಮಾಯವಾಗುವುದೆಂಬ ಭರವಸೆಯನ್ನ ಸರ್ಕಾರ ಕೊಡಲು ಸಾಧ್ಯವಿರಲಿಲ್ಲ. ಆದರೆ ಕಳೆದ ವರ್ಷಕ್ಕಿಂತ ಪರಿಸ್ಥಿತಿ ಸುಧಾರಿಸಿತ್ತೆಂದು ಅವರು ಭಾವಿಸಿದ್ದರು.

೧೯೦೧ರಲ್ಲಿ ಸಾರ್ವಜನಿಕ ಆರೋಗ್ಯ ಅನುಕೂಲಕರವಾಗಿರಲಿಲ್ಲ. ಅನೇಕ ರೋಗಗಳು ಹರಡಿಕೊಂಡು ಜನನಕ್ಕಿಂತ ೨೦,೦೦೦ ಹೆಚ್ಚು ಸಾವುಗಳಾಗಿತ್ತು. ಹಿಂದಿನ ಕಾಲರದಿಂದ ಕೇವಲ ೧೨೦ ಜನ ಸತ್ತಿದ್ದರು, ಈ ಸಾಲಿನಲ್ಲಿ ೯,೬೨೦ ಜನ ಸತ್ತರು. ಜ್ವರ ಮತ್ತು ಸಿಡುಬಿನಿಂದ ಸಾವು ಹೆಚ್ಚಿತು. ಪ್ಲೇಗ್ ರೋಗವು ಹೋಗಿ ಬಿಡುವ ಲಕ್ಷಣಗಳು ಕಂಡುಬಂದಿದ್ದರೂ ಈ ಸಾಲಿನಲ್ಲಿ ವ್ಯಾಪಕವಾಗಿ ಹರಡಿಕೊಂಡಿತು. ಸತ್ತವರ ಸಂಖ್ಯೆ ೫೦೦೧ ರಿಂದ ೧೩,೫೭೩ ಕ್ಕೇರಿತು. ಈ ಖಾಯಿಲೆಯಿಂದ ಮುಕ್ತವಾಗಿದ್ದ ಶಿವಮೊಗ್ಗ ಮತ್ತು ಕಡೂರುಗಳಲ್ಲಿ ರೋಗ ತೀವ್ರವಾಗಿ ಹರಡಿಕೊಂಡಿತು. ಹೆಚ್ಚಿನ ಸಂಖ್ಯೆಯಲ್ಲಿ ಪ್ಲೇಗ್ ರೋಗಿಗಳು ದಸರಾದ ೮ನೇ ದಿನ ಮೃತರಾದುದ್ದರಿಂದ ೨ನೇ ಬಾರಿಗೆ ಸಭಾಧಿವೇಶನವನ್ನ ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತೆಂದು

ದಿವಾನರು ತಿಳಿಸಿದರು. ೧೯೦೧ ರಲ್ಲಿ ರೋಗವು ಸೌಮ್ಯವಾಗಿದ್ದುದರಿಂದ ಮಹಾರಾಣಿ ರೀಜೆಂಟ್ ರವರು ಸಭಾಧಿವೇಶನವನ್ನ ಕರೆಯಲು ಆಜ್ಞೆ ಮಾಡಿದರು.

ಮತ್ತೆ ೧೯೦೩ರಲ್ಲಿ ಸಾರ್ವಜನಿಕ ಆರೋಗ್ಯಕ್ಕೆ ತೀವ್ರ ಕುಂದು ಬಂದಿತು. ಕಾಲರಾ ಮತ್ತು ಸಿಡುಬಿನಿಂದ ಸಾವುಗಳು ಕಡಿಮೆಯಾಗಿದ್ದರೂ ಜ್ವರ ಮತ್ತು ಪ್ಲೇಗ್‌ನಿಂದ ಸಾವುಗಳು ಹೆಚ್ಚಿತು. ಈ ರೋಗಗಳಿಂದ ಸುಮಾರು ೪೭,೦೦೦ ಜನ ಸತ್ತರು. ಪ್ಲೇಗ್‌ನಿಂದಾಗಿದ್ದ ಪರಿಸ್ಥಿತಿಯನ್ನ ಎದುರಿಸಲು ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿತ್ತು. ಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಉಚಿತವಾಗಿ ನಿರ್ಮಾಣ ಸಾಮಗ್ರಿಗಳನ್ನ ಕೊಡಲಾಯಿತು. ಮತ್ತೆ ಕೆಲವರಿಗೆ ಅಸಲು ಬೆಲೆಗೆ ಒದಗಿಸಲಾಯಿತು. ನೈರ್ಮಲ್ಯ ಕಾರ್ಯಗಳನ್ನ ಕೈಗೊಳ್ಳಲಾಯಿತು. ಕ್ರಿಮಿನಾಶಕಗಳನ್ನ ಸಿಂಪಡಿಸ ಲಾಯಿತು. ಮೈಸೂರು ಮತ್ತು ಭಾರತದ ಇತರೆ ಕೆಲ ಭಾಗಗಳಲ್ಲಿ ಪ್ಲೇಗ್ ಪಿಡುಗಿನ ಬಗ್ಗೆ ದಿವಾನರು ೧೯೦೪ರಲ್ಲಿ ಪ್ರಸ್ಥಾಪಿಸಿದರು. ವೈಸ್‌ರಾಯ್ ಲಾರ್ಡ್‌ಕರ್ಜನ್‌ರವರು ಈ ರೋಗವು "ವಿಶ್ಲೇಷಣೆಗೆ ಸಿಕ್ಕುತ್ತಿಲ್ಲ. ಆಡಳಿತ ಶಕ್ತಿಯನ್ನು, ವೈದ್ಯಕೀಯ ನೈಪುಣ್ಯವನ್ನು ವಿಫಲಗೊಳಿಸುತ್ತದೆ. ಇದರ ಮೂಲವನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ ಇದು ವಿನಾಶದಲ್ಲಿ ನಿರ್ದಯಿ, ಅನೇಕ ವೇಳೆ ಒಂದೇ ದಿನದಲ್ಲಿ ಸಾವಿರಾರು ಜನರನ್ನು, ವಾರದಲ್ಲಿ ಹತ್ತಾರು ಸಾವಿರ ಜನರನ್ನು ಗುಡಿಸಿ ಹಾಕುತ್ತದೆ" ಎಂದರು. ಬೊಂಬಾಯಿಯಲ್ಲಿ ಒಂದು ಸಾವಿರಕ್ಕೆ ೪.೧೯ ಸಾವುಗಳಾಗಿದ್ದರೆ ಮೈಸೂರಿನಲ್ಲಿ ಅದು ಸಾವಿರಕ್ಕೆ ೨.೪೬ ಆಗಿತ್ತು. ಈ ರೋಗದ ಪರಿಣಾಮ ಮದ್ರಾಸಿನಲ್ಲಿ ಭೀಕರವಾಗಿತ್ತು. ಇಡೀ ಭಾರತದ ಜನರಿಗೆ ಸಮಾನ ಶತ್ರುವಾಗಿರುವ ಈ ರೋಗದ ನಾಶಕ್ಕೆ ಸದಸ್ಯರ ಪೂರ್ಣ ಸಹಕಾರವನ್ನು ದಿವಾನರು ಕೋರಿದರು.[೧೧]

೧೯೦೬ರಲ್ಲಿ ಮೈಸೂರು ನಗರವು ಪ್ಲೇಗ್‌ನಿಂದ ಪೂರ್ಣವಾಗಿ ವಿಮುಕ್ತಿ ಹೊಂದಿದುದ್ದು ದಿವಾನರಿಗೆ ಸಂತೋಷವನ್ನು ತಂದಿತು. ಟ್ರಸ್ಟ್ ಬೋರ್ಡ್ ನೈರ್ಮಲ್ಯ ಸೌಕರ್ಯಗಳನ್ನು ಹೆಚ್ಚಿಸಿದ ಫಲ ಇದು ಹಿಂದಿನ ವರ್ಷ ೩,೦೦೦ ಜನಕ್ಕೆ ಪ್ಲೇಗ್ ಬಂದು ೨,೧೫೮ ಜನ ಮೃತರಾದರು. ಈ ರೋಗಗಳ ವಿರುದ್ಧ ಹೋರಾಟಕ್ಕಾಗಿ ೧,೦೦,೦೦೦ ರೂಪಾಯಿಗಳ ವೆಚ್ಚವಾಯಿತು. ಆದರೆ ಜ್ವರದಿಂದ ಅದರಲ್ಲೂ ಮಲೇರಿಯಾದಿಂದ ಹೆಚ್ಚಿನ ಸಾವುಗಳಾಗಿತ್ತು.

೧೯೦೭ರಲ್ಲಿ ೫,೯೭೯ ಮಂದಿಗೆ ಪ್ಲೇಗ್ ತಗುಲಿತು. ೪,೨೭೮ ಮಂದಿ ಸತ್ತರು ಅದರ ಹಿಂದಿನ ವರ್ಷ ೩,೦೩೩ ಮಂದಿಗೆ ಪ್ಲೇಗ್ ತಗುಲಿದ್ದು ೨,೧೩೬ ಮಂದಿ ಸತ್ತರು ಎಂದು ವರದಿ ಮಾಡಿದರು. ಅತ್ಯಂತ ಕಷ್ಟಕ್ಕೆ ಈಡಾಡಿದ್ದು ಬೆಂಗಳೂರು ಜಿಲ್ಲೆ. ಈ ರೋಗವನ್ನು ತಡೆಯಲು ಕ್ರಮವನ್ನು ಕೈಗೊಳ್ಳಲಾಯಿತು. ಸರ್ಕಾರವು ಹೊಸದಾಗಿ ಸಾರ್ವಜನಿಕ ಆರೋಗ್ಯ ಇಲಾಖೆಯನ್ನು ರಚಿಸಿತು.

ಪ್ಲೇಗ್ ರೋಗ ಕಾಡುತ್ತಿದ್ದುದ್ದರಿಂದ, ಪ್ರಜಾಪ್ರತಿನಿಧಿ ಸಭೆ ಅಧಿವೇಶಗಳನ್ನ ೧೮೯೮, ೧೯೦೦ ಮತ್ತು ೧೯೦೨ ರಲ್ಲಿ ನಡೆಸಲಾಗಲಿಲ್ಲ.[೧೨]

೫.೩. ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಶಾಸನಗಳಲ್ಲಿ ದಲಿತರು

ಕೆರೆಗಳ ಪಂಚಾಯಿತಿ ಮಸೂದೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ೧-೧೦-೧೯೦೮ರಂದು ಕೆ.ಪಿ. ಪುಟ್ಟಣ್ಣ ಚೆಟ್ಟಿಯವರು ಸೂಚನೆ ಮಂಡಿಸಿದರು. "ಸಂಸ್ಥಾನದಲ್ಲಿ ೪೦೦೦ ಭಾರಿ ಮತ್ತು ಸಣ್ಣ ಕೆರೆಗಳಿವೆ. ಅವುಗಳಲ್ಲಿ ೩೦೦೦ ಕೆರೆಗಳು ಸರ್ಕಾರಕ್ಕೆ ಆದಾಯ ತರುತ್ತವೆ. ಅನೇಕ ಕೆರೆಗಳು ಸರಿಯಾದ ದುರಸ್ತಿ ಇಲ್ಲದೆ ಹಾಳಾಗಿವೆಯೆಂಬುದು ನಿಜ. ಹೊಸ ಕೆರೆಗಳನ್ನು ನಿರ್ಮಿಸುವುದರ ಬದಲು ಹಳೆಯವನ್ನು ಸರ್ಕಾರ ರಿಪೇರಿ ಮಾಡಿಸಿ ನೋಡಿಕೊಂಡರೆ ಸಾಕು. ರೈತರು ತಮ್ಮ ರೂಢಿಯ ಹೊಣೆಗಳನ್ನು ನಿರ್ವಹಿಸುತ್ತಿಲ್ಲ. ಅವರು ಒಂದು ಮಂಕರಿ ಮಣ್ಣನ್ನು ಅತ್ತಿತ್ತ ಹಾಕಲು, ಹಳ್ಳಗಳನ್ನು ಮುಚ್ಚಲು, ಕಟ್ಟೆಗಳನ್ನು ಸರಿಯಾಗಿಡಲು ಅಥವಾ ಕಳೆಗಳನ್ನು ತೆಗೆಯಲು ಹಿಂಜರಿಯುತ್ತಾರೆ. ೧೮೭೩ರಲ್ಲಿ ಪ್ರಕಟಿಸಲಾದ ನಿಯಮಗಳು ಇನ್ನೂ ಜಾರಿಯಲ್ಲಿವೆ. ಅನೇಕ ಕೆರೆಗಳನ್ನು ಬಳಸದೆ ತ್ಯಜಿಸಲಾಗಿದೆ. ೩೦೦ ರೂಪಾಯಿ ಅಥವಾ ಹೆಚ್ಚಿನ ವರಮಾನ ತರುವ ಕೆರೆಗಳನ್ನು ಭಾರಿ ಕೆರೆಗಳೆಂದೂ ಉಳಿದವನ್ನು ಸಣ್ಣ ಕೆರೆಗಳೆಂದೂ ೧೮೮೭ ರಿಂದ ವರ್ಗೀಕರಿಸಲಾಗಿದೆ. ೨೩೮೮ ಭಾರಿ ಕೆರೆಗಳೂ ೨೬೬೮೨ ಸಣ್ಣ ಕೆರೆಗಳೂ ಇವೆ. ದೊಡ್ಡ ಕೆರೆಗಳನ್ನು ರೈತರು ಹಣ ಕೊಟ್ಟಂತೆಲ್ಲ ಕಾಮಗಾರಿ ಇಲಾಖೆ ರಿಪೇರಿ ಮಾಡುತ್ತದೆ. ಸರ್ಕಾರ ಹಾಗೂ ರೈತರು ಸೇರಿಕೊಂಡು ಸಣ್ಣ ಕೆರೆಗಳನ್ನು ರಿಪೇರಿ ಮಾಡಿಸುತ್ತಾರೆ. ನಿಯಮಗಳನ್ನು ೧೯೦೪ ರಲ್ಲಿ ಪುನರ್ವಿಮರ್ಶಿಸಲಾಯಿತು. ಪ್ರತಿ ವರ್ಷ ಸುಮಾರು ೧೧೦ ಕೆರೆಗಳನ್ನು ರಿಪೇರಿ ಮಾಡಲಾಗುತ್ತಿದೆ.[೧೩] ಈ ರೀತಿಯಲ್ಲಿ ಎಲ್ಲ ಸಣ್ಣ ಕೆರೆಗಳೂ ರಿಪೇರಿ ಆಗುವ ಮುನ್ನ ಎರಡು ಶತಮಾನಗಳು ಕಳೆಯುತ್ತವೆ. ಕೆರೆಗಳನ್ನು ರಿಪೇರಿ ಮಾಡಿ ನೋಡಿ ಕೊಳ್ಳುವುದು ರೈತರ ಜವಬ್ದಾರಿ. ರೈತರಲ್ಲಿ ಸಹಕಾರದ ಭಾವನೆ ಕಡಿಮೆ ಆಗಿದೆ. ಅವರಿಗೆ ಶಿಕ್ಷಣವಿರಬೇಕು. ಈ ವಿಷಯದಲ್ಲಿ ಬಲತ್ಕಾರವಿರಬಾರದು. ಅಗತ್ಯವಾದ ಕಾಮಗಾರಿಗಳನ್ನು ಮಾಡಲು ರೈತರಿಗೆ ಅಧಿಕಾರವನ್ನು ಕೊಡಬೇಕು. ಅವರಿಗೆ ಅವಶ್ಯಕತೆ ಇರುವಾಗ ಸಹಾಯವಾಗುವಂತೆ ಒಂದು ನಿಧಿಯನ್ನು ರಚಿಸುವುದಕ್ಕೂ ಸರ್ಕಾರ ಸಿದ್ದವಿದೆ. ಕೆರೆಗಳೂ ತಮಗೆ ಸೇರಿವೆಯೆಂಬ ಭಾವನೆ ಅವರಲ್ಲಿ ಬಂದು ತಮ್ಮ ಮನೆಗಳಿಗೆ ಛಾವಣಿ ಹೊದಿಸುವ ಅಥವಾ ತಮ್ಮ ತೋಟಗಳನ್ನು ರಿಪೇರಿ ಮಾಡುವ ರೀತಿಯಲ್ಲೇ ಅವರು ಆಸಕ್ತಿ ತೋರಿಸಬೇಕು. ಆದ್ದರಿಂದ ಗ್ರಾಮೀಣ ಕೆರೆ ಪಂಚಾಯಿತಿಗಳನ್ನು ರಚಿಸಲು ಸರ್ಕಾರ ಉದ್ದೇಶಿಸಿದೆ. ಆಯಾ ಹಳ್ಳಿಯ ಪಟೇಲ – ಶಾನುಭೋಗರು ಮತ್ತು ರೈತರ ಪೈಕಿ ಚುನಾಯಿತರಾದ ಇನ್ನೊಬ್ಬರು ಸದಸ್ಯರೂ ಅದರಲ್ಲಿರುತ್ತಾರೆ. ಕೆರೆಗಳನ್ನು ನಿರ್ವಹಿಸಲು ತಮ್ಮ ಹೊಣೆಯಿಂದ ರೈತರಿಗೆ ಬಿಡುಗಡೆ ಇರುವುದಿಲ್ಲವಾದರೂ, ಅದರ ವ್ಯವಸ್ಥೆ ಮಾತ್ರ ಬದಲಾಯಿಸುತ್ತದೆ. ಇಂತಹ ಪಂಚಾಯಿತಿಗಳು ದಕ್ಷಿಣ ಭಾರತದಲ್ಲಿ ಪುರಾತನ ಕಾಲದಿಂದಲೂ ಇದ್ದವು. ಇಂತಹ ವ್ಯವಸ್ಥೆ ೧೦ನೇ ಶತಮಾನದಲ್ಲಿ ಇದ್ದುದರ ಬಗ್ಗೆ ಚೆಂಗಲ್ಪಟ್ ಜಿಲ್ಲೆಯಲ್ಲಿ ಶಾಸನಗಳಲ್ಲಿ ಉಲ್ಲೇಖವಿದೆ. ಗ್ರಾಮ ಸಭೆಗಳನ್ನು

ನೇಮಕ ಮಾಡಲಾಗುತ್ತಿತ್ತು. ಮತ್ತು ಅವುಗಳ ಸಮಿತಿಗಳಲ್ಲಿ ಒಂದು ಕೆರೆಗಳ ಉಸ್ತುವಾರಿ ನೋಡಿಕೊಳ್ಳುತ್ತಿತ್ತು. ಕೆರೆಗಳ ನಿರ್ವಹಣೆಯ ಮೇಲೆ ರಾಜರಿಗೆ ನೇರವಾದ ಹತೋಟಿ ಇರುತ್ತಿರಲಿಲ್ಲ. ಕೆರೆ ಪಂಚಾಯಿತಿಗಳು ರೆವಿನ್ಯೂ ಅಧಿಕಾರಿಗಳ ಬಲತ್ಕಾರವಿಲ್ಲದೆ ಕೆರೆಗಳನ್ನು ದಕ್ಷತೆಯಿಂದ ನೋಡಿಕೊಳ್ಳುತ್ತವೆಂದು ಆಶಿಸಬೇಕಾಗಿದೆ. ಗ್ರಾಮಸ್ಥರು ಪಂಚಾಯಿತಿ ಸಮಿತಿಗಳಿರಬೇಕೆಂದು ಅಪೇಕ್ಷಿಸುವ ಹಳ್ಳಿಗಳಲ್ಲಿ ಪ್ರಾಯೋಗಿಕ ಕ್ರಮವಾಗಿ ಈ ಯೋಜನೆಯನ್ನು ಜಾರಿಗೆ ತರಲಾಗುವುದು ಅವಶ್ಯಕವೆಂದು ಸರ್ಕಾರ ಭಾವಿಸಿದಾಗ ಮಾತ್ರ ಸಮಿತಿಗಳನ್ನು ರಚಿಸಲಾಗುವುದು. ಆಧುನಿಕ ನಾಗರಿಕತೆಯ ವಿಚ್ಛಿದ್ರಕಾರಕ ಪ್ರಭಾವ ಅನೇಕ ಹಳ್ಳಿಗಳಲ್ಲಿ ಕಾಣುತ್ತಿದೆ. ಸಮಿತಿಗಳಲ್ಲಿ ಅದಕ್ಷತೆ ಕಂಡುಬಂದಲ್ಲಿ ಅವುಗಳನ್ನು ಸರ್ಕಾರ ರದ್ದುಪಡಿಸುವುದು" ಎಂದು ಪುಟ್ಟಣ್ಣ ಚೆಟ್ಟಿ ಹೇಳಿದರು.[೧೪] ಕೆರೆ ಅಂಗಳಗಳಲ್ಲಿ ಹಂಗಾಮಿಯಾಗಿ ಸಾಗುವಳಿ ಮಾಡಲು ಅನುಮತಿ ಕೊಡುವ ಅಧಿಕಾರ ಪಂಚಾಯಿತಿಗಿತ್ತು. ಬಿತ್ತನೆ ಕೆಲಸ ಯಾವಾಗ ಪ್ರಾರಂಭವಾಗಬೇಕೆಂದು ಅದು ನಿರ್ಧರಿಸುತ್ತಿತ್ತು. ಮತ್ತು ನೀರು ಹರಿಸುವುದನ್ನು ನಿಯಂತ್ರಿಸುತ್ತಿತ್ತು. ತರಿ ಬೇಸಾಯಕ್ಕೆ ನೀರು ಬಳಸುವುದರ ಮೇಲೆ ಅದು ನಿರ್ಬಂಧ ವಿಧಿಸಬಹುದಾಗಿತ್ತು. ನೀರು ಸಾಲದೆ ಇರುವ ಕಾರಣಕ್ಕಾಗಿ ನೀರಾವರಿ ಬೆಳೆಯನ್ನು ತೆಗೆಯದೆ ಇರುವೆಡೆ ೨/೩ ರಷ್ಟಕ್ಕೆ ಕಡಿಮೆ ಇಲ್ಲದ ರೈತರ ಒಪ್ಪಿಗೆ ಪಡೆದ ನಂತರ ನಿಶ್ಚಿತ ಕಂದಾಯದಲ್ಲಿ ಅರ್ಧವನ್ನು ಮನ್ನಾ ಮಾಡಲಾಗುತ್ತಿತ್ತು.

ಶ್ರೀ ಪುಟ್ಟಣ್ಣ ಚೆಟ್ಟಿಯವರು ಮುಂದುವರಿದು, ತರಿ ಜಮೀನಿನಿಂದ ಸರ್ಕಾರಕ್ಕೆ ಆದಾಯ ಬಹಳ ಸ್ವಲ್ಪವೆಂದು ಹೇಳಿದರು. "ಒಳ್ಳೆ ಫಸಲಿನ ಮತ್ತು ಕೆಟ್ಟ ವರ್ಷಗಳಲ್ಲಿನ ಸರಾಸರಿ ಬೆಳೆ ಪ್ರಮಾಣವನ್ನು ಕಂದಾಯ ನಿಷ್ಕರ್ಷೆಯಲ್ಲಿ ಪರಿಗಣಿಸಲಾಗುವುದು. ವ್ಯಾಪಕವಾಗಿ ಅನಾವೃಷ್ಟಿ ಇರುವ ಸಂದರ್ಭಗಳಲ್ಲಿ ಸರ್ಕಾರವು ವಾಸ್ತವವಾಗಿ ಕಂದಾಯವನ್ನು ಮನ್ನಾ ಮಾಡುತ್ತಿದೆ. ಕೆರೆಗಳಿಂದ ದೂರದಲ್ಲಿ ವಾಸಿಸುವ ರೈತರು ಪಂಚಾಯಿತಿಗಳ ನಿರ್ಧಾರದಂತೆ ನಡೆದುಕೊಳ್ಳುವರೇ ಎಂದು ಖಂಡಿತವಾಗಿ ಹೇಳಲಾಗದು". ಪಂಚಾಯಿತಿ ಸಂಗ್ರಹಿಸಿದ ಹಣವನ್ನು ಕೆರೆ ನಿಧಿಗೆ ಜಮಾ ಮಾಡಿ, ಪಂಚಾಯಿತಿಯೇ ಅದರ ಮೇಲೆ ಹತೋಟಿ ಹೊಂದಿರುವುದು.

"ಮೀನು ಹಿಡಿಯುವ ಹಕ್ಕು ಕೆರೆ ಏರಿ ಮೇಲೆ ಹುಲ್ಲು ಮೇಯಿಸುವ ಹಕ್ಕು ಮುಂತಾದ ಹಲವಾರು ಬಾಬುಗಳಿಂದ ಬಂದ ಹಣವನ್ನೆಲ್ಲ ಕೆರೆ ನಿಧಿಗೆ ಜಮಾ ಮಾಡಲಾಗುತ್ತಿತ್ತು. ಸರ್ಕಾರದಿಂದ ಪಡೆದ ಮುಂಗಡ ಅಥವ ಸಾಲವೂ ಅದರಲ್ಲಿ ಸೇರುತ್ತಿತ್ತು. ಕಲ್ಲು-ಗಾರೆ ಕಟ್ಟಡದ ಕೆಲಸವನ್ನು ಸರ್ಕಾರ ತನ್ನ ಖರ್ಚಿನಿಂದ ಮಾಡುವುದೆಂದು ೧೫ನೇ ವಿಧಿ ಸೂಚಿಸಿತು. ಅಂತಹ ಕೆಲಸವನ್ನು ಜಿಲ್ಲಾಧಿಕಾರಿಯವರು ಪಂಚಾಯಿತಿಗೆ ವಹಿಸಬಹುದಾಗಿತ್ತು.

ಮತ್ತೆ ಜಾರಿಗೆ ತರಬೇಕೆಂದು ಸರ್ಕಾರವನ್ನು ಪದೇ ಪದೇ ಕೇಳಲಾಗಿದೆ. ಸಣ್ಣಮಟ್ಟ ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳ ಇತ್ಯರ್ಥಕ್ಕಾಗಿ ಗ್ರಾಮ ನ್ಯಾಯಾಲಯಗಳನ್ನು

ಸ್ಥಾಪಿಸಬೇಕೆಂಬ ಬೇಡಿಕೆಗಳಿದ್ದವು. ರೈತಾಪಿ ಜನ ಕೆರೆಯೊಡನೆ ಏಕೀಭಾವ ಹೊಂದಿ ಅದು ತಮ್ಮ ಸ್ವತ್ತೆಂಬ ಆಸಕ್ತಿ ತಳೆದು, ಅದನ್ನು ಚೊಕ್ಕವಾಗಿ ಮತ್ತು ಅಚ್ಚುಕಟ್ಟಾಗಿ ಇಟ್ಟುಕೊಂಡಿರುವುದರಲ್ಲಿ ಹೆಮ್ಮೆ ಪಡುವ ದಿನಗಳಿಗಾಗಿ ಎದುರು ನೋಡಬೇಕಾಗಿದೆ. ಕೆರೆಗಳನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸುವ ಬಗ್ಗೆ ರೈತರಲ್ಲಿ ತೀವ್ರ ಸ್ಪರ್ಧೆ ಕಾಣುವುದೆಂದು ಆಶಿಸಬೇಕಾಗಿದೆ" ಎನ್ನಲಾಯಿತು.[೧೫]

ಮಸೂದೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಅವರು ಸೂಚನೆ ತಂದರು. ಪರಿಶೀಲನೆಯ ನಂತರ ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಲಾಯಿತು. ಚುನಾಯಿತ ಸಮಿತಿಯು ವರದಿ ನೀಡಿದ ನಂತರ ಮಸೂದೆಯು ೧೮-೮-೧೯೧೦ ರಂದು ಮತ್ತೆ ಪರಿಶೀಲನೆಗೆ ಬಂದಿತು. ದಿವಾನರು ಮಾತನಾಡಿ ಕಂದಾಯ ಸರ್ವೇಕ್ಷಣೆಯ ಸೂಪರಿಂಟೆಂಡೆಂಟರು ೧೫ನೇ ವಿಧಿಯನ್ನು ಬಿಟ್ಟುಬಿಡಬೇಕೆಂದು ಪತ್ರ ಬರೆದಿರುವುದಾಗಿ ತಿಳಿಸಿದರು. "ತರಿ ಬೇಸಾಯದ ಮೇಲಿನ ನಿರ್ಬಂಧಗಳು ಮತ್ತು ಕಂದಾಯದ ಮನ್ನಾಗಳು ಸರ್ವೇಕ್ಷಣೆ ನಿಷ್ಕರ್ಷೆಯ ಮತ್ತು ಖಾತರಿಯ ಷರತ್ತುಗಳಿಗೆ ಅನುಗುಣವಾಗಿಲ್ಲ. ಈ ವಿಧಿ ಸರ್ಕಾರದ ನೀತಿಗೆ ವಿರೋಧವಾಗಿದ್ದು ಅಪಾಯಕರವಾಗಿದೆ. ಅದು ತುಂಬ ಆಕ್ಷೇಪಣಾರ್ಹವೂ ಕಾರ್ಯಸಾಧ್ಯವಲ್ಲದ್ದೂ ಆಗಿದೆ. ಸರ್ವೇಕ್ಷಣೆ ನಿಷ್ಕರ್ಷೆಯಲ್ಲಿ ದಾಖಲಾಗಿರುವಂತೆ ಮಣ್ಣು ಮತ್ತು ನೀರಿನ ವರ್ಗೀಕರಣವು ಬಲು ಪುರಾತನ ಕಾಲದಿಂದ ನಡೆದು ಬಂದಿರುವ ರೂಢಿಯ ಹಕ್ಕುಗಳ ಆಧಾರವನ್ನು ಪಡೆದಿದೆ. ಇಂತಹ ಭೂಮಾಲೀಕನಿಗೆ ಉಂಟಾಗುವ ನಷ್ಟವು ಅಸಾಧಾರಣವಾದ ಅನಾವೃಷ್ಟಿಯ ಕಾಲದಲ್ಲಿ ಅವನಿಗೆ ದೊರೆಯುತ್ತಿದ್ದ ತೆರಿಗೆ ಮನ್ನಾದ ಮೊಬಲಗಿಂತಲೂ ತುಂಬ ಹೆಚ್ಚಾಗಿರುತ್ತದೆ. ಕೆರೆ ಎಷ್ಟರ ಮಟ್ಟಿಗೆ ತುಂಬುವುದೆಂದು ಮೊದಲೇ ಹೇಳಲು ಸಾಧ್ಯವಿಲ್ಲ. ಈಗಿರುವ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ಜನರಿಂದ ಅದರಲ್ಲೂ ವಿದ್ಯಾಭ್ಯಾಸವಿಲ್ಲದ ಹಳ್ಳಿ ರೈತರಿಂದ, ಸ್ವಂತ ಹಿತವನ್ನು ಸಮೂಹದ ಹಿತಕ್ಕೆ ಅಧೀನ ಮಾಡುವುದನ್ನು ನಿರೀಕ್ಷಿಸುವುದಾಗದು. ಸಮಷ್ಟಿ ಭಾವನೆಯನ್ನು ಹುಟ್ಟಿಸುವುದರ ಬದಲು ಮಸೂದೆಯು ದುರ್ಬಲರನ್ನು ಹತಾಶರನ್ನಾಗಿ ಮಾಡುತ್ತದೆ. ಮನ್ನಾ ಮಾಡಲಾಗುವುದೆಂಬ ಭರವಸೆಯು ಸೋಮಾರಿತನವನ್ನು ಬೆಳೆಸುವ ಪ್ರಲೋಭನವಾಗುತ್ತದೆ. ಸರ್ಕಾರಕ್ಕೆ ಕಾನೂನಿನಂತೆ ಬರಬೇಕಾದ ಆದಾಯದಿಂದ ಅದನ್ನು ವಂಚಿತಗೊಳಿಸಲು ರೈತರಿಗೆ ಅವಕಾಶ ಮಾಡುತ್ತದೆ. ತರಿ ಭೂಮಿ ಹೊಂದಿರುವ ಒಬ್ಬಿಬ್ಬರು ಪ್ರಭಾವಶಾಲಿ ಮಾಲೀಕರು ಬಡ ರೈತರಿಗೆ ಅರ್ಧ ಕಂದಾಯ ಮಾಫಿ ಮಾಡಿಸುವ ಭರವಸೆ ನೀಡಿ, ಇರುವ ನೀರನ್ನೆಲ್ಲಾ ತಮ್ಮ ಜಮಿನಿಗೆ ಬಿಟ್ಟುಕೊಳ್ಳುವುದನ್ನು ಸಾಧ್ಯಗೊಳಿಸುತ್ತದೆ ಎಂದು ಪತ್ರ ಸೂಚಿಸಿತ್ತು. ಮಸೂದೆಯ ಹಿಂದಿರುವ ನೀತಿಯು ಅದರ ನಿಧಿಗಳ ಸ್ವಪ್ರೇರಣೆ ಸ್ವಭಾವವನ್ನು ಅವಲಂಭಿಸಿದೆಯೆಂದು ಶ್ರೀ ಎ. ರಂಗಸ್ವಾಮಿ ಐಯ್ಯಂಗಾರ್ ಹೇಳಿದರು. ಬಹುಮತದವರು ಪಂಚಾಯಿತಿಬೇಕೆಂದು ಅಪೇಕ್ಷಿಸಿದಾಗ ಅಲ್ಪ ಸಂಖ್ಯಾತರ ವಿಘ್ನಕಾರಿ ಧೋರಣೆಯನ್ನು ಅನುಸರಿಸಿ ಕೆರೆಗಳ ತೃಪ್ತಿಕರ ದುರಸ್ತಿಗೆ ಅಡ್ಡಿತರಬಾರದು ಎಂದು ಹೇಳಲಾಯಿತು.[೧೬]

ಚುನಾಯಿತ ಸಮಿತಿ ಮಾಡಿದ್ದ ಮುಖ್ಯ ಬದಲಾವಣೆಗಳನ್ನು ಶ್ರೀ ಕೆ.ಪಿ. ಪುಟ್ಟಣ್ಣಚೆಟ್ಟಿ ಪ್ರಸ್ತಾಪಿಸಿದರು. ಮೂಲ ನಿಯಮದಂತೆ, ಕೆರೆ ಪಂಚಾಯಿತಿಯನ್ನು ರಚಿಸಲು ಹಳ್ಳಿಯ ರೈತರಲ್ಲಿ ಬಹುಮತದವರು ಒಪ್ಪಬೇಕಾಗಿತ್ತು. ಆದರೆ ಕೆರೆಯ ಅಚ್ಚುಕಟ್ಟಿನಲ್ಲಿ ವಿಶಾಲವಾದ ತರಿ ಜಮೀನು ಹೊಂದಿರುವ ಮಾಲೀಕರು ಗ್ರಾಮಸ್ಥರಲ್ಲಿ ಬಹುಸಂಖ್ಯೆಯವರ ನಿರ್ಧಾರದಿಂದ ತೊಂದರೆಗೆ ಒಳಗಾಗುವರೆಂದು ಮನವಿ ಮಾಡಿಕೊಳ್ಳಲಾಯಿತು. ಗ್ರಾಮದಲ್ಲಿ ಕೆರೆಯಡಿ ತರಿ ಜಮೀನು ಹೊಂದಿರುವವರ ಸಂಖ್ಯೆ ಕಡಿಮೆ ಇರಬಹುದು. ಅವರುಗಳು ಕೆರೆ ಕೆಳಗಿನ ತರಿ ಭೂಮಿಯಲ್ಲಿ ಆಸಕ್ತಿ ಇಲ್ಲದ ಬಹು ಸಂಖ್ಯಾತ ರೈತರ ಓಟಿನಿಂದ ಸುಮ್ಮನಿರಬೇಕಾಗುತ್ತದೆ. ಆದ್ದರಿಂದ ಗ್ರಾಮದ ರೈತರಲ್ಲಿ ಮೂರನೆ ಎರಡರಷ್ಟಕ್ಕಿಂತ ಕಡಿಮೆ ಇಲ್ಲದೆ ರೈತರು ಒಪ್ಪಿಗೆ ಕೊಡಬೇಕೆಂದೂ ಅವರಲ್ಲಿ ಕೆರೆ ಕೆಳಗಿನ ತರಿ ಜಮಿನಿನಲ್ಲಿ ಅರ್ಧಕ್ಕೆ ಕಡಿಮೆ ಇಲ್ಲದಷ್ಟು ಭೂಮಿಯ ಮಾಲೀಕರು ಸೇರಿರಬೇಕೆಂದೂ ಚುನಾಯಿತ ಸಮಿತಿ ಸೂಚಿಸಿರುವುದಾಗಿ ಅವರು ತಿಳಿಸಿದರು.

"ಚುನಾಯಿತ ಸಮಿತಿ ಇನ್ನೊಂದು ಮಾರ್ಪಾಡನ್ನು ಮಾಡಿದೆ. ತರಿ ಬೇಸಾಯವನ್ನು ನಿರ್ಬಂಧಿಸುವ ಪಂಚಾಯಿತಿಯ ಅಧಿಕಾರವನ್ನು ತಮ್ಮಲ್ಲಿ ಕೆರೆ ಕೆಳಗಿನ ಜಮೀನಿನಲ್ಲಿ ಮೂರನೇ ಎರಡರಷ್ಟಕ್ಕಿಂತ ಕಡಿಮೆಯಿಲ್ಲದ ಭೂಮಿಯನ್ನು ಹೊಂದಿರುವವರು ಸೇರಿದಂತೆ ರೈತರಲ್ಲಿ ಬಹು ಸಂಖ್ಯೆಯವರು ಚಲಾಯಿಸಬಹುದೆಂಬುದು ಈ ಬದಲಾವಣೆ. ಯಾವುದೇ ಒಂದು ಬೇಸಾಯದ ಹಂಗಾಮಿನಲ್ಲಿ ಬೇಸಾಯಕ್ಕೆ ಒಳಪಡುವ ಜಮೀನಿನ ವಿಸ್ತೀರ್ಣವನ್ನು ಪಂಚಾಯಿತಿ ನಿರ್ಧರಿಸಬಹುದು. ಪಂಚಾಯಿತಿಯ ಸದಸ್ಯರಾಗಲು ಅರ್ಹತೆ ಮಿತಿಯನ್ನು ತರಿ ಜಮೀನು ಬಗ್ಗೆ ೫೦ ರೂಪಾಯಿನಿಂದ ಇಪ್ಪತ್ತು ರೂಪಾಯಿಗೆ, ಖುಷ್ಕಿ ಭೂಮಿಯ ಬಗ್ಗೆ ೨೦ ರೂಪಾಯಿನಿಂದ ೧೦ ರೂಪಾಯಿಗೆ ಇಳಿಸಲಾಗಿದೆ. ತರಿ ಜಮೀನಿನಲ್ಲಿ ಬಿತ್ತನೆ ಮಾಡುವ ಕಾಲವನ್ನು ನಿರ್ಧರಿಸುವ ಅಧಿಕಾರವನ್ನು ಪಂಚಾಯಿತಿಗೆ ಕೊಡಬಾರದೆಂದು ಸಮಿತಿ ಸೂಚಿಸಿದೆ. ಕೆರೆಯಿಂದ ನೀರು ಬಿಡುವ ಕಾಲ ಮತ್ತು ಬಿಡುವ ಪ್ರಮಾಣ ಸೇರಿದಂತೆ ನೀರು ಸರಬರಾಜನ್ನು ಮಾತ್ರ ಪಂಚಾಯಿತಿ ನಿಯಂತ್ರಿಸಬಹುದು. ಪಂಚಾಯಿತಿಗಳ ಸದಸ್ಯತ್ವದಲ್ಲಿ ಆಗ್ಗಾಗೆ ಉಂಟಾಗುವ ಖಾಲಿ ಸ್ಥಾನಗಳನ್ನು ತುಂಬಲು ಅವಕಾಶ ಕಲ್ಪಿಸಲಾಗಿದೆ. ಸದಸ್ಯರು ತಮ್ಮ ಹೊಣೆ ನಿರ್ವಹಿಸುವುದರಲ್ಲಿ ಕೋರ್ಟು ಖಟ್ಲೆಗಳಿಂದ ರಕ್ಷಣೆ ಇರುತ್ತದೆ. ಕೆರೆ ಅಂಗಳವನ್ನು ಸಾಗುವಳಿ ಕೊಡುವ ಅಧಿಕಾರ ಪಂಚಾಯಿತಿಗೆ ಇರುವ ಬಗ್ಗೆ ಚುನಾಯಿತ ಸಮಿತಿಯಲ್ಲಿ ಸರ್ವಾನುಮತ ಇರಲಿಲ್ಲ. ಈ ಅಧಿಕಾರವನ್ನು ಜಿಲ್ಲಾಧಿಕಾರಿಗಳ ಹತೋಟಿಗೆ ಒಳಪಟ್ಟು ಪಂಚಾಯಿತಿಗಳು ಹೊಂದಿರಬಹುದೆಂದು ಸೂಚಿಸಲಾಗಿತ್ತು. ಪಂಚಾಯಿತಿಯ ನಿರ್ಣಯದಿಂದ ನೀರನ್ನು ಪಡೆಯದೆ ಇದ್ದ ತರಿ ಜಮೀನುಗಳಿಗೆ ಅರ್ಧ ಕಂದಾಯವನ್ನು ಮಾಫಿ ಮಾಡುವ ಅಧಿಕಾರದ ಬಗ್ಗೆ ಸಮಿತಿ ಯಾವ ಬದಲಾವಣೆಯನ್ನೂ ಸೂಚಿಸಿರಲಿಲ್ಲ. ಗ್ರಾಮೀಣ ಜನಪದಗಳಲ್ಲಿ ಪ್ರಜಾಸತ್ತೆಯ ಸ್ವರೂಪವನ್ನು ತರಲು ಈ ಅಧಿಕಾರ ಅತ್ಯಗತ್ಯವೆಂದು ಸಮಿತಿ ನಿರ್ಧರಿಸಿತು"[೧೭]

ಚುನಾಯಿತ ಸಮಿತಿಯ ಸದಸ್ಯರು ಆಡಳಿತದಲ್ಲಿ ಬಹಳ ಅನುಭವವುಳ್ಳವರೆಂದು ಈ ಸೂಚನೆಯನ್ನು ಸಮರ್ಥಿಸಿದ ಎ. ರಂಗಸ್ವಾಮಿ ಐಯ್ಯಂಗರ್ ಹೇಳಿದರು. ಮನ್ನಾ ಮಾಡುವ ಅಧಿಕಾರವನ್ನು ಸರ್ಕಾರ ಲಘವಾಗಿ ಚಲಾಯಿಸುವುದಿಲ್ಲವೆಂದು ಅವರು ಆಶಿಸಿದರು. ಕೆಲವು ವೈಯಕ್ತಿಕ ಪ್ರಸಂಗಗಳಲ್ಲಿ ಕಾನೂನು ಅನಾನುಕೂಲ ಮತ್ತು ಕಷ್ಟವನ್ನು ತರಬಹುದು: ಆದರೆ ಬದಲಾದ ಪರಿಸ್ಥಿತಿಗೆ ಜನರು ಕಾಲಕ್ರಮದಲ್ಲಿ ಹೊಂದಿಕೊಳ್ಳುತ್ತಾರೆಂದು ಹೇಳಿದರು.

ಡಿ.ಶಾಮರಾವ್ ಅವರು ೧೫ನೇ ವಿಧಿ ಕುರಿತು ಮಾತನಾಡಿ ನೀರನ್ನು ನಿಯಂತ್ರಿಸಲು ಪಂಚಾಯಿತಿಗೆ ಕೊಡಲಾಗುವ ಅಧಿಕಾರದಿಂದ ಸ್ವೇಚ್ಛಾವರ್ತನೆ ಉಂಟಾಗಬಹುದೆಂದು ಹೇಳಿದರು. "ಸಣ್ಣ ಕೆರೆಗಳು ಮಳೆಗಾಲದಲ್ಲಿ ಒಂದು ಅಥವಾ ಎರಡು ಸಲ ತುಂಬಿಕೊಳ್ಳದಿದ್ದರೆ ನೀರಾವರಿ ಬೆಳೆಗೆ ಬೇಕಾಗುವಷ್ಟು ನೀರು ಅವುಗಳಲ್ಲಿ ಇರುವುದಿಲ್ಲ. ರೈತರು ಮುಖ್ಯವಾಗಿ ಮಳೆಯ ನೀರನ್ನು ಅವಲಂಬಿಸಿ ಕೆರೆಯಲ್ಲಿ ಸೇರಿದ ನೀರನ್ನು ಪೂರಕವಾಗಿ ಬಳಸುವುದರಿಂದ ನಿರ್ದಿಷ್ಟ ಹಂಗಾಮಿನಲ್ಲಿ ಕೆರೆಯಿಂದ ನೀರಾವರಿ ಪಡೆಯಬಹುದಾದ ವಿಸ್ತೀರ್ಣವನ್ನು ನಿರ್ಧರಿಸುವುದು ಸಾಧ್ಯ ಇಲ್ಲ. ಅನೇಕ ಹಂಗಾಮುಗಳಲ್ಲಿ ಕೃಷಿಯಿಂದ ಬರುವ ಫಸಲುಗಳಲ್ಲಿ ಉಂಟಾಗುವ ಏರುಪೇರುಗಳನ್ನು ಪರಿಗಣಿಸಿ ಕಂದಾಯ ನಿಶ್ಚಯಮಾಡುವುದರಿಂದ ಮನ್ನಾ ಮಾಡುವ ಅಧಿಕಾರವು ಸರ್ವೇಕ್ಷಣ ನಿಶ್ಚಯದ ಸ್ಪಷ್ಟ ಸೂತ್ರಗಳನ್ನು ಹಾಳಗೆಡವುತ್ತದೆ. ಈಗ ಸ್ಪಷ್ಟವಾಗಿ, ಚೆನ್ನಾಗಿ ತಿಳಿದಿರುವ ಮತ್ತು ನೆಲೆಗೊಂಡಿರುವ ವಿಷಯಗಳನ್ನು ಇದು ಅನಗತ್ಯವಾಗಿ ಜಟಿಲಗೊಳಿಸುತ್ತದೆ. ರೈತರಲ್ಲಿ ಪೂರ್ವ ಸಂಚಿತವಾದ ಹುನ್ನಾರಗಳಿಂದ ಅವರು ಕಂದಾಯ ಮನ್ನಾದ ನಿರೀಕ್ಷೆಯೊಡನೆ ಸಾಗುವಳಿಯಲ್ಲಿ ಉತ್ಸಾಹ ತೋರಿಸುವುದಿಲ್ಲ". ಎಂದು ಅವರು ನುಡಿದರು.[೧೮]

ಸರ್ವೇಕ್ಷಣ ಇತ್ಯರ್ಥದ ಪ್ರಕಾರ ಖಾತರಿ ಪಡೆದಿರುವ ಸ್ವಾಮ್ಯದ ಹಕ್ಕುಗಳಿಗೆ ಉದ್ದೇಶಿತ ಮಸೂದೆಯು ಅಡಚಣೆಯಾಗುವುದೆಂದು ಶ್ರೀ ರಾಮಣ್ಣ ಹೇಳಿದರು. "ಬೇಸಾಯ ಪ್ರಾರಂಭಿಸುವ ಮುನ್ನ ರೈತನು ಪಂಚಾಯಿತಿಯ ನಿರ್ಧಾರ ಕಾಯಬೇಕಾಗುತ್ತದೆ. ಕೃಷಿಯಲ್ಲಿ ಸಮಯ ತುಂಬ ಮುಖ್ಯವಾದದ್ದು. ಕೆರೆಗಳ ನೀರಾವರಿ ತೀರಾ ಅನಿಶ್ಚಿತ. ತೂಬಿನ ದೂರದಲ್ಲಿರುವ ರೈತ ಒಳ್ಳೆಯ ಬೇಸಾಯಗಾರನಿದ್ದು ಕೆರೆಯ ಪಕ್ಕದಲ್ಲಿರುವವನು ಒಳ್ಳೆಯ ಕೃಷಿಕನಲ್ಲದಿರಬಹುದು. ಕೃಷಿಯಲ್ಲಿ ಧೈರ್ಯದಿಂದ ಮುನ್ನುಗ್ಗುವವನೇ ಅನೇಕ ಸಲ ಲಾಭ ಪಡೆಯುತ್ತಾನೆ." ಎಂದು ಅವರು ನುಡಿದರು. ಕೆ.ಪಿ ಪುಟ್ಟಣ್ಣಚೆಟ್ಟಿಯವರು ಈ ಅಭಿಪ್ರಾಯವನ್ನು ಒಪ್ಪಿದರೂ ಪಂಚಾಯಿತಿಯಲ್ಲಿ ಉತ್ತಮ ದರ್ಜೆಯ ವ್ಯಕ್ತಿಗಳೇ ಇರುವುದರಿಂದ ಪಂಚಾಯಿತಿಯು ಸ್ವೇಚ್ಛೆಯಾಗಿ ತಪ್ಪು ನಿರ್ಧಾರವನ್ನು ಮಾಡುವುದು ಅಸಂಭವ ಎಂದರು. ಇದು ಹೊಸ ಕಾಯಿದೆಯಾಗಿ ರುವುದರಿಂದ ಅದರ ಅನುಷ್ಠಾನ ಕಷ್ಟಕರವಾಗಬಹುದು ಎಂದು ಹೇಳಿದರು. ಕಾಯ್ದೆಯ ಅನುಷ್ಠಾನಕ್ಕೆ ೧೫ನೇ ವಿಧಿ ಅಗತ್ಯವೆಂದು ಶ್ರೀ ಎಸ್. ನಾರಾಯಣ ರಾವ್ ತಿಳಿಸಿದರು.

ಪ್ರಮಾಣಿತವಾದ ಕೆರೆಗಳನ್ನು ಮಾತ್ರ ದುರಸ್ತಿಗೆ ಎತ್ತಿಕೊಳ್ಳಬಹುದೆಂದು ಸೂಚಿಸುವ ತಿದ್ದುಪಡಿಯನ್ನು ಶ್ರೀ ಕೆ.ಪಿ. ಪುಟ್ಟಣ್ಣ ಚೆಟ್ಟಿ ತಂದರು. ಎಲ್ಲಾ ಕೆರೆಗಳನ್ನು ರಿಪೇರಿಗೆ ತೆಗೆದುಕೊಂಡರೆ ಅನೇಕ ದಶಕಗಳು ಬೇಕಾಗುತ್ತವೆಂದು ಅವರು ಹೇಳಿದರು. ಅದರೆ ಮೊದಲ ತಿದ್ದುಪಡಿ ಅಂಗೀಕೃತವಾಯಿತು.

ಹಲವಾರು ವಿಧಿಗಳಿಗೆ ಇತರ ಅನೇಕ ತಿದ್ದುಪಡಿಗಳನ್ನು ನ್ಯಾಯ ವಿಧಾಯಕ ಸಭೆ ಪರಿಶೀಲಿಸಿತು. ಕೂಲಂಕುಷ ಚರ್ಚೆಯ ನಂತರ ಅವುಗಳನ್ನು ಅಂಗೀಕರಿಸಿತು. ಪಂಚಾಯಿತಿಗಳಲ್ಲಿ ಪಟೇಲರು ಪದನಿಮಿತ್ತ ಅಧ್ಯಕ್ಷರಾಗುವುದನ್ನು ಶ್ರೀ ಡಿ. ವೆಂಕಟರಾಮಯ್ಯ ವಿರೋಧಿಸಿದರು. ಪಟೇಲರು ಸಾಮಾನ್ಯವಾಗಿ ಅನಕ್ಷರಸ್ಥರೆಂದೂ ಸ್ವತ್ತನ್ನೂ ಹೊಂದದೆ ಇರಬಹುದೆಂದೂ ಅವರು ಭಾವಿಸಿದರು. ಆದರೆ ಕೆ.ಪಿ. ಪುಟ್ಟಣ್ಣ ಚೆಟ್ಟಿಯವರು ಪಟೇಲರೇ ಅತ್ಯಂತ ಅರ್ಹ ವ್ಯಕ್ತಿಯೆಂದೂ ಹಳ್ಳಿಗಳ ಆಡಳಿತ ಮುಖ್ಯಸ್ಥರಾಗಿದ್ದ ಅವರ ಅಧಿಕಾರವನ್ನು ದುರ್ಬಲಗೊಳಿಸಬಾರದೆಂದೂ ಹೇಳಿದರು. ಅಧಿಕಾರೇತರ ಅಧ್ಯಕ್ಷರು ಸರ್ಕಾರದ ಹತೋಟಿಗೆ ಒಗ್ಗದೆ ಇರಬಹುದೆಂದು ರಂಗಸ್ವಾಮಿ ಐಯ್ಯಂಗರ್ ಸೂಚಿಸಿದರು. ನಿರ್ಣಯ ಅಂಗೀಕಾರವಾಯಿತು.[೧೯]

ಮಸೂದೆಯ ಅಂಗೀಕೃತಕ್ಕಾಗಿ ಶ್ರೀ ಕೆ.ಪಿ. ಪುಟ್ಟಣ್ಣ ಚೆಟ್ಟಿ ಅವರು ೨೨–೧೧–೧೯೧೦ ರಂದು ಸೂಚನೆಯನ್ನು ಮಂಡಿಸಿದರು. ಮಸೂದೆಯು ಕಾಯಿದೆಯಾದಾಗ ಗ್ರಾಮಗಳ ಸ್ವಾಡಳಿತದ ಪುನರುಜ್ಜೀವನವಾಗುವುದೆಂದು ಅವರು ಮತ್ತೆ ಹೇಳಿದರು. "ಗ್ರಾಮಾಂತರದ ಜನರು ತಮ್ಮ ವ್ಯವಹಾರಗಳನ್ನು ತಾವೇ ನೋಡಿಕೊಳ್ಳಬೇಕೆಂದು ಕೇಳುತ್ತಿದ್ದಾರೆ. ಸಣ್ಣಮಟ್ಟ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆ, ಗ್ರಾಮ ನೈರ್ಮಲ್ಯದ ಆಡಳಿತ, ಹಾಗೂ ಬಾವಿಗಳು ಮತ್ತು ಕುಡಿಯುವ ನೀರಿನ ಕೆರೆಗಳ ನಿರ್ಮಾಣ ಮುಂತಾದ ಸ್ಥಳೀಯ ಸಣ್ಣ ಕಾಮಗಾರಿಗಳ ದುರಸ್ತಿ ಮುಂತಾದ ಅಧಿಕಾರಗಳನ್ನು ಪಂಚಾಯಿತಿಗಳಿಗೆ ಕೊಡಲಾಗುವುದು. ಕೆರೆಗಳ ವಿಶೇಷ ನಿಧಿಯನ್ನು ಸ್ಥಾಪಿಸಲಾಗುವುದು. ಕೆರೆಯ ನೀರನ್ನು ಮಿತವ್ಯಯ ರೀತಿಯಲ್ಲಿ ಬಳಸಲು ಹಳ್ಳಿಯವರು ಸಹಕರಿಸಿದರೆ ತರಿ ಜಮೀನಿನ ನಿಶ್ಚಿತ ಕಂದಾಯದಲ್ಲಿ ಅರ್ಧವನ್ನು ಮನ್ನಾ ಮಾಡಲಾಗುವುದು" ಎಂದು ಅವರು ಭರವಸೆ ಇತ್ತರು.

ಸೂಚನೆಯನ್ನು ಎ. ರಾಮಣ್ಣನವರು ಅನುಮೋದಿಸಿ ಸಮುದಾಯದ ಸಂಸ್ಥೆಗಳು ಭಾರತಕ್ಕೆ ಹೊಸವಲ್ಲವೆಂದೂ, ಆದರೆ ಅವು ಈಚೆಗೆ ಕ್ಷೀಣಿಸಿವೆಯೆಂದೂ ಹೇಳಿದರು. ಮಸೂದೆಯು ಜನರಿಗೆ ತಿಳುವಳಿಕೆ ಕೊಟ್ಟು ಸಮುದಾಯ ಪ್ರಜ್ಞೆಯನ್ನು ಬೆಳೆಸುವ ಮುಖ್ಯಕ್ರಮವಾಗಿದೆಯೆಂದು ಎಂ.ಪಿ. ರಂಗೈಯ್ಯಂಗಾರ್ ಭಾವಿಸಿದರು. "ಸರ್ಕಾರ ಸದುದ್ದೇಶಗಳನ್ನು ಹೊಂದಿದೆ. ಆದರೆ ಫಲಿತಾಂಶ ಬಹು ಮಟ್ಟಿಗೆ ಸ್ಥಳೀಯ ಅಧಿಕಾರಿಗಳನ್ನು ಅವಲಂಭಿಸುತ್ತದೆ. ಆನರಿಗೆ ಪ್ರೋತ್ಸಾಹ ಮಾರ್ಗದರ್ಶನ ಹಾಗೂ ಸಲಹೆ ನೀಡುವುದು ಅವರುಗಳ ಕರ್ತವ್ಯ ಎಂದರು ಅವರು. ಸೂಚನೆ ಸಭೆಯಲ್ಲಿ ಅಂಗೀಕಾರವಾಯಿತು.

ದಿನಾಂಕ: ೮-೧-೧೯೧೬ ರಂದು ಎಂ. ಕಾಂತರಾಜ ಅರಸು ಅವರು ಇನ್ನೊಂದು ಮಸೂದೆಯನ್ನು ಮಂಡಿಸಿದರು. "ಹಳೆಯ ನಿಯಮಗಳಂತೆ ವರ್ಷಕ್ಕೆ ೩೦೦ ರೂಪಾಯಿಗಿಂತ ಹೆಚ್ಚು ವರಮಾನ ತರುವ ಕೆರೆಗಳನ್ನು ಭಾರಿ ಕೆರೆಗಳೆಂದೂ ಉಳಿದುವನ್ನು ಸಣ್ಣ ಕೆರೆಗಳೆಂದೂ ಕರೆಯಲಾಯಿತು. ೧೯೧೪ ರ ಡಿಸೆಂಬರ್‌ನಲ್ಲಿ ಹೊರಟ ಸರ್ಕಾರೀ ಆದೇಶದಂತೆ ಮಣ್ಣಿನ ಕೆಲಸ ಮತ್ತು ಕಲ್ಲುಕಟ್ಟಡ ಅಥವಾ ಗಾರೆ ಕಟ್ಟಡ ಸೇರಿದಂತೆ ಜೀರ್ಣೋದ್ಧಾರ ದ ಮೂರನೆ ಒಂದು ಭಾಗದ ವೆಚ್ಚವನ್ನು ರೈತರು ಕೊಡಬೇಕೆಂದೂ ಉಳಿದುದನ್ನು ಸರ್ಕಾರ ಕೊಡಬೇಕೆಂದೂ ಗೊತ್ತಾಗಿತ್ತು. ವಾಸ್ತವದ ಕಾಮಗಾರಿಯನ್ನು ಪಂಚಾಯಿತಿಗೆ ವಹಿಸಬಹುದಾಗಿತ್ತು." ಎಂದು ಅವರು ತಿಳಿಸಿದರು. ಮಸೂದೆಯನ್ನು ಕೆ. ಆರ್ .ಶ್ರೀನಿವಾಸ ಐಯ್ಯಂಗಾರ್ ಅನುಮೋದಿಸಿದರು. ಅದು ಓಟಿಗೆ ಹಾಕಲ್ಪಟ್ಟು ಅಂಗೀಕಾರವಾಯಿತು.

ಮಸೂದೆಯ ಪಠಣಕ್ಕಾಗಿ ಎ. ಆರ್. ಬ್ಯಾನರ್ಜಿ ಅವರು ೨೮-೪-೧೯೧೬ ರಂದು ಸೂಚನೆ ತಂದರು. ಮಸೂದೆಯ ಮುಖ್ಯ ಲಕ್ಷಣಗಳನ್ನು ಅವರು ಮತ್ತಷ್ಟು ವಿವರಿಸಿದರು. ಸೂಚನೆ ಓಟಿನಲ್ಲಿ ಸ್ವೀಕೃತವಾಯಿತು. ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಲಾಯಿತು. ಚುನಾಯಿತ ಸಮಿತಿಯ ವರದಿಯನ್ನು ಪರಿಶೀಲಿಸಬೇಕೆಂದು ಎ. ಆರ್. ಬ್ಯಾನರ್ಜಿ ಅವರು ೫-೧೨-೧೯೧೬ ರಂದು ಸೂಚನೆ ತಂದರು. ಕೆರೆಯ ಕೆಳಗಿನ ನೀರಾವರಿ ಜಮೀನಿನಲ್ಲಿ ಅರ್ಧಕ್ಕೆ ಕಡಿಮೆಯಿಲ್ಲದೆ ಹಿಡುವಳಿ ಹೊಂದಿರುವವರೆಂದು ರೈತ ಎನ್ನುವ ಪದಕ್ಕೆ ಸಮಿತಿಯು ವ್ಯಾಖ್ಯಾನ ನೀಡಿತು. ತಿದ್ದುಪಡಿಯಾದಂತೆ ಮಸೂದೆ ಅಂಗೀಕೃತವಾಯಿತು.[೨೦]

ಕೆರೆ ಪಂಚಾಯಿತಿ ನಿಯಂತ್ರಣ ಮಸೂದೆಯ ಪಠಣವಾಗಬೇಕೆಂದು ೨೦-೩-೧೯೧೭ರಂದು ಎ. ಆರ್. ಬ್ಯಾನರ್ಜಿ ಸೂಚನೆ ತಂದರು. "ಚಾಲ್ತಿಯಲ್ಲಿನ ಕಾನೂನಿನಂತೆ, ಖುಷ್ಕಿ ಜಮೀನು ಹೊಂದಿರುವ ಅಥವಾ ಮೊಹತರ್ಫ ಕೊಡುವ ರೈತರು ಕೆರೆ ಪಂಚಾಯಿತಿಯಲ್ಲಿ ಕಾಲು ಭಾಗದಿಂದ ಅರ್ಧದಷ್ಟು ಇರಬೇಕು. ಉಳಿದ ಸ್ಥಾನಗಳನ್ನು ತರಿ ಅಥವಾ ಬಾಗಾಯಿತು ಜಮೀನು ಹೊಂದಿರುವ ರೈತರಿಂದ ಚುನಾವಣೆ ಮೂಲಕ ತುಂಬಲಾಗುವುದು: ಆದರೆ ಖುಷ್ಕಿ ಜಮೀನಿನ ಮಾಲೀಕರ ಪ್ರತಿನಿಧಿಗಳಿಂದ ಸ್ಥಾನಗಳನ್ನು ತುಂಬುವುದು ಕಷ್ಟವೆಂದು ಅನುಭವದಿಂದ ತಿಳಿದಿತ್ತು. ತರಿ ಅಥವಾ ಬಾಗಾಯಿತು ಜಮೀನು ಮಾಲೀಕರ ಬಗ್ಗೆ ಹೇಳುವುದಾದರೆ ಪ್ರಮಾಣ ಹೆಚ್ಚಾಗಿಯೂ ಇತ್ತು. ಆದ್ದರಿಂದ ತರಿ ಜಮೀನು ಮಾಲೀಕರು ಮುಂತಾದವರಿಗಾಗಿ ಕಾಲು ಭಾಗವನ್ನು ಗರಿಷ್ಠ ಪ್ರಮಾಣವೆಂದು ನಿರ್ಧರಿಸುವಂತೆ ೬ನೆ ವಿಧಿಯನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿತ್ತು. ಈ ಬಗೆಯ ಸದಸ್ಯರು ದೊರಕದಿದ್ದರೆ, ಈ ಮಾರ್ಗದಲ್ಲಿ ಲಭಿಸುವವರನ್ನು ಆರಿಸಿಕೊಳ್ಳಬಹುದಾಗಿತ್ತು. ಮತ್ತು ಇತರರನ್ನು ಉಳಿದವರ ಪೈಕಿ ತೆಗೆದುಕೊಳ್ಳ ಬಹುದಾಗಿತ್ತು.

೫.೪. ಸಣ್ಣ ಕೆರೆಗಳ ಜೀರ್ಣೋದ್ಧಾರ ಮಸೂದೆಯಲ್ಲಿ ದಲಿತರ ಪಾತ್ರ

ಎಂ. ಕಾಂತರಾಜ ಅರಸ್ ಅವರು ೮-೧-೧೯೧೬ ರಂದು ಸಣ್ಣ ಕೆರೆಗಳ ಜೀರ್ಣೋದ್ಧಾರ ಮಸೂದೆಯನ್ನು ಮಂಡಿಸಿದರು. ಚಾಲ್ತಿಯಲ್ಲಿದ್ದ ಕಾಯ್ದೆಯಂತೆ ಕೆರೆಯ ಅಚ್ಚುಕಟ್ಟಿನಲ್ಲಿ ನೀರಾವರಿಗೆ ಬರುವ ಜಮೀನಿನಲ್ಲಿ ಮೂರನೆ ಎರಡರಷ್ಟು ಮಾಲೀಕರು ಕೆರೆಯ ದುರಸ್ಥಿಗೆ ಸಮ್ಮತಿಸಿ ವಂತಿಗೆ ನೀಡಿದರೆ, ಉಳಿದ ಹಿಡುವಳಿದಾರರು ಅದಕ್ಕೆ ಬದ್ದರಾಗಿ, ತಮ್ಮ ವಂತಿಕೆ ಕೊಡಬೇಕಾಗಿತ್ತು. ಈ ಪಾವತಿಯಲ್ಲಿನ ಸುಸ್ತಿಯನ್ನು ಕಂದಾಯದ ಬಾಕಿಯಂತೆ ಪರಿಗಣಿಸಲಾಗುತ್ತಿತ್ತು. ರೈತರಲ್ಲಿ ವಿಷಾದಕವೆನ್ನಿಸುವಂತೆ ಸಹಕಾರದ ಅಭಾವವಿತ್ತೆಂದೂ ಕೆಲವು ಹಿಡುವಳಿದಾರರು ವಿಘ್ನಕಾರಿ ಮನೋಭಾವ ತೋರುತ್ತಿದ್ದರೆಂದೂ ಕಾಂತರಾಜ ಅರಸ್ ಹೇಳಿದರು. ಉಪ ಅಮುಲ್ದಾರರ ದರ್ಜೆಯ ಒಬ್ಬ ಅಧಿಕಾರಿಯು ಒಪ್ಪಿಗೆಗಳನ್ನು ಬರಹದಲ್ಲಿ ದಾಖಲು ಮಾಡಿ ಉಳಿದವರಿಗೆ ಸೂಚನೆಗಳನ್ನು ಜಾರಿ ಮಾಡುತ್ತಿದ್ದರು. ಅದರ ವಿರುದ್ದದ ಮನವಿಗಳನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ರೆವಿನ್ಯೂ ಕಮಿಷನರ್ ಅವರಿಗೆ ಸಲ್ಲಿಸಬಹುದಾಗಿತ್ತು. ಕೆಲವೇ ಜನರು ಇಡೀ ಸಮುದಾಯಕ್ಕೆ ಅಡಚಣೆಯಾಗಿರಬಾರದೆಂದು ಕೆ.ಆರ್. ಶ್ರೀನಿವಾಸ ಐಯ್ಯಂಗಾರ್ ಒಪ್ಪಿದರು. ಸೂಚನೆ ಓಟಿನಲ್ಲಿ ಸರ್ವಾನುಮತದಿಂದ ಸ್ವೀಕೃತವಾಯಿತು. ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಬೇಕೆಂದು ೨೮-೪-೧೯೧೬ ರಂದು ಎ.ಆರ್. ಬ್ಯಾನರ್ಜಿ ಸೂಚನೆ ತಂದರು. ಸಭೆ ಒಪ್ಪಿತು.

ಚುನಾಯಿತ ಸಮಿತಿಯ ವರದಿಯನ್ನು ಪರಿಶೀಲಿಸಬೇಕೆಂದು ೫-೧೨-೧೯೧೬ ರಂದು ಎ. ಆರ್. ಬ್ಯಾನರ್ಜಿ ಸೂಚನೆ ಮಂಡಿಸಿದರು. ಕೆರೆಗಳ ನಿರ್ಮಾಣಕ್ಕಲ್ಲದೆ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗೆ ಮಾತ್ರ ಮಸೂದೆಯ ವ್ಯಾಪ್ತಿಯನ್ನು ಮಿತಿಗೊಳಿಸಲು ಸಮಿತಿ ಅಪೇಕ್ಷಿಸಿತ್ತು. ಜಿಲ್ಲಾಧಿಕಾರಿಯವರ ಆಜ್ಞೆ ಅಂತಿಮವಾದುದೆಂದು ತಿಳಿಸಿತ್ತು. ಸೂಚನೆಯನ್ನು ಓಟಿಗೆ ಹಾಕಿ ಅಂಗೀಕೃತವಾಯಿತು. ಪಿ. ರಾಘವೇಂದ್ರರಾವ್ ಅವರು ೨೯-೬-೧೯೨೩ ರಂದು ಇನ್ನೊಂದು ಮಸೂದೆಯನ್ನು ತಂದರು. "ಮೈಸೂರು ಸಂಸ್ಥಾನವು ಎರಡು ಪಾರ್ಶ್ವಗಳಲ್ಲೂ ಬೆಟ್ಟ ಸಾಲುಗಳನ್ನು ಹೊಂದಿ ಸಮುದ್ರ ಮಟ್ಟಕ್ಕೆ ೨೦೦೦ ಅಡಿ ಎತ್ತರದಲ್ಲಿರುವ ಪ್ರಸ್ಥಭೂಮಿಯಾಗಿದೆ. ಅದರ ಮೇಲ್ಮೈ ಏರಿಳಿತಗಳಿಂದ ಕೂಡಿ ಬೆಟ್ಟದ ಏಣುಗಳ ಶ್ರೇಣಿಗಳೊಡನೆ ಎಲ್ಲ ದಿಕ್ಕುಗಳಿಗೂ ಹರಡುತ್ತದೆ. ನೈರುತ್ಯ ಮತ್ತು ಈಶಾನ್ಯ ಮುಂಗಾರುಗಳೆರಡರ ಪ್ರಯೋಜನವೂ ಸಂಸ್ಥಾನಕ್ಕೆ ದೊರಕುವುದಾದರೂ ಪಶ್ಚಿಮ ಘಟ್ಟಗಳಿರುವುದರ ಪರಿಣಾಮವಾಗಿ ಎಷ್ಟೋ ಸಲ ಮಳೆಯು ತುಂಬಾ ಕಡಿಮೆಯಾಗಿ ವರ್ಷಪೂರ್ತಿ ಹಂಚಿ ಬರುವುದಿಲ್ಲ. ಪಶ್ಚಿಮ ಘಟ್ಟಗಳ ಪೂರ್ವ ತಪ್ಪಲಿನಲ್ಲಿ ೨೦೦ ಅಂಗುಲದಿಂದ ಹಿಡಿದು ಸಂಸ್ಥಾನದ ಮಧ್ಯದ ಹಾಗೂ ಉತ್ತರದ ಭಾಗಗಳಲ್ಲಿ ೨೦ ಅಂಗುಲದವರೆಗೆ ಮಳೆ ವ್ಯತ್ಯಾಸವಾಗುತ್ತದೆ. ಮೈಸೂರಿನಲ್ಲಿ ಶತಮಾನಗಳ ಕಾಲದಿಂದ ನೀರು ಶೇಖರಿಸುವ ಜಲಾಶಯಗಳ ಅದ್ಭುತ ವ್ಯವಸ್ಥೆಯನ್ನೇ ಅಭಿವೃದ್ಧಿಪಡಿಸಲಾಗಿದೆ. ಕೆರೆಗಳಿಗೆ ಚಾಲ್ತಿಯಲ್ಲಿರುವ ನೀರು ಹರವಿಗೆ ಅಡಚಣೆ ತರದಂತೆ ಹೊಸ ನಿವೇಶನವೊಂದನ್ನು ಆರಿಸಲು

ಸಾಧ್ಯವಿಲ್ಲದಂತಹ ಪರಿಸ್ಥಿತಿಯೇ ಉಂಟಾಗಿದೆ. ಸಂಸ್ಥಾನದಲ್ಲಿ ೨೫,೦೦೦ ಕೆರೆಗಳಿದ್ದು೭.೬ ಲಕ್ಷ ಎಕರೆ ಭೂಮಿಗೆ ನೀರುಣಿಸುತ್ತಿವೆ.[೨೧] ೧೮೮೭ರಲ್ಲಿ ಜಾರಿಗೆ ತಂದ ಯೋಜನೆಯಂತೆ ಕೆರೆಗಳ ಒಟ್ಟು ೧೫ ಲಕ್ಷ ರೂಪಾಯಿನ ಆದಾಯತರುತ್ತಿವೆ. ಕಾಲ ಕಳೆದಂತೆ ಸಣ್ಣ ಕೆರೆಗಳ ಕಟ್ಟೆ ಒಡೆದವು, ಹೂಳು ತುಂಬಿಕೊಂಡವು ಅಥವಾ ನಿರುಪಯುಕ್ತವಾಗಿ ಗಂಭೀರ ಸಮಸ್ಯೆಗಳುಂಟಾದವು. ಕೆರೆಗಳ ಜೀರ್ಣೋದ್ಧಾರಕ್ಕೆ ಹೂಳು ತೆಗೆಯುವುದು ಒಂದು ವಿಧಾನವಾದರೆ ನೀರು ಶೇಖರಣೆ ಪ್ರಮಾಣವನ್ನು ಉತ್ತಮ ಪಡಿಸಲು ಕೋಡಿಬಾಗಿಲುಗಳನ್ನು ಎತ್ತರಿಸುವುದು ಇನ್ನೊಂದು ವಿಧಾನ. ಹೊಳನ್ನು ತೆಗೆಯುವುದು ಕಾರ್ಯ ಸಾಧ್ಯವಿಲ್ಲ ಮತ್ತು ವಿಪರೀತ ಝುರ್ಚಿನ ರೀತಿ. ಎರಡನೆಯ ವಿಧಾನದಲ್ಲಿ ಅಚ್ಚುಕಟ್ಟಿನ ಮೇಲ್ಭಾಗದ ಜಮೀನುಗಳು ಮುಳುಗಡೆಯಾಗುವ ಭೀತಿ ಇದೆ. ಸಣ್ಣ ಕೆರೆಗಳ ಕಟ್ಟೆ ಪಡೆದಿರುವೆಡೆ ಕೆಲವು ದುರಸ್ತಿ ಕ್ರಮಗಳು ಸಾಧ್ಯವಿದೆ. ೧೮೭೨ ರಿಂದ ಪ್ರತ್ಯೇಕ ನೀರಾವರಿ ಇಲಾಖೆಯನ್ನೇ ರಚಿಸಲಾಯಿತು. ಅದನ್ನು ೧೮೮೯ ರಲ್ಲಿ ರದ್ದುಪಡಿಸಲಾಯಿತು. ಜೀರ್ಣೋದ್ಧಾರದ ಒಟ್ಟು ಖರ್ಚಿನ ೧/೩ ಭಾಗವನ್ನು ರೈತರು ಕೊಡಬೇಕೆಂದು ೧೯೧೪ರಲ್ಲಿ ಆಜ್ಞೆ ಹೊರಡಿಸಲಾಯಿತು. ಹಿಡುವಳಿದಾರರಲ್ಲಿ ೨/೩ ರಷ್ಟಕ್ಕೆ ಕಡಿಮೆ ಆಗದ ಹಿಡುವಳಿದಾರರು ಖರ್ಚಿನ ೧/೩ ಭಾಗವನ್ನು ಕೊಡಲು ಒಪ್ಪಿದರೆ ರೈತರ ಪಾಲನ್ನು ಕಂದಾಯದ ಬಾಕಿಯಂತೆ ವಸೂಲಿ ಮಾಡಲು ೧೯೧೬ ರ ನಿಬಂಧನೆಯು ಅವಕಾಶ ಮಾಡಿತು. ಈ ಕ್ರಮಗಳೆಲ್ಲ ಇದ್ದರೂ ಕೆರೆಗಳ ಜೀರ್ಣೋದ್ಧಾರದ ಕೆಲಸ ನಿಧಾನವಾಗಿದ್ದು ಫಲಿತಾಂಶ ನಿರಾಶಾದಾಯಕವಾಗಿತ್ತು. ಹಣಕಾಸಿನ ಮುಗ್ಗಟ್ಟು ಅದಕ್ಕೆ ಕಾರಣ, ರೈತರು ಸರಿಯಾಗಿ ಪ್ರತಿಕ್ರಿಯೆ ತೋರಿಸದೆ ಇದ್ದುದೇ ಕಾರ್ಯಕ್ರಮ ಯಶಸ್ವಿಯಾಗದಿರಲು ಮುಖ್ಯ ಕಾರಣವಾಗಿತ್ತು. ಪ್ರಜಾಪ್ರತಿನಿಧಿ ಸಭೆಯ ಎರಡು ಸಮಿತಿಗಳು ಈ ಪ್ರಶ್ನೆಯನ್ನು ಪರಿಶೀಲಿಸಿದವು. ಮಣ್ಣಿನ ಕೆಲಸದ ಹೊಣೆ ಮಾತ್ರ ರೈತರದ್ದಾಗಿರಬೇಕೆಂದೂ ಅಥವಾ ರೈತರ ವಂತಿಗೆಯನ್ನು ವೆಚ್ಚದ ೧/೩ ಭಾಗದಿಂದ ಕಾಲು ಬಾಗಕ್ಕೆ ಇಳಿಸಬೇಕೆಂದೂ ಸಲಹೆ ಮಾಡಲಾಯಿತು. ಕೇಂದ್ರ ನೀರಾವರಿ ಮಂಡಳಿಯು ಸಲಹೆಗಳನ್ನು ಒಪ್ಪಿಕೊಂಡಿತು. ದುರಸ್ತಿ ಕಾಣಬೇಕಾದ ಇನ್ನೂ ೧೪,೦೦೦ ಕೆರೆಗಳು ಇವೆ ಎಂದು ಶ್ರೀ ರಾಘವೇಂದ್ರರಾವ್ ತಿಳಿಸಿದರು. "ಕಡ್ಡಾಯದ ವಂತಿಗೆಯನ್ನು ತಪ್ಪಿಸಲು ಆಗುವುದಿಲ್ಲ. ಆದ್ದರಿಂದ ನೀರಾವರಿ ಪ್ರದೇಶದ ೨/೩ ರಷ್ಟು ಭೂಮಾಲೀಕರು ವಂತಿಗೆ ಕೊಡಲು ಒಪ್ಪಲಿ ಅಥವಾ ಬಿಡಲಿ, ರೈತರ ಪಾಲಿನ ಪಾವತಿಯನ್ನು ಕಾನೂನಿನ ಮೂಲಕ ಕಡ್ಡಾಯಗೊಳಿಸಲು ಉದ್ದೇಶಿಸಲಾಗಿದೆ. ರೈತರ ಜವಾಬ್ದಾರಿಯನ್ನು ೧/೩ ರಿಂದ ೧/೪ ಭಾಗಕ್ಕೆ ತಗ್ಗಿಸಲಾಗುವುದು. ಪ್ರತಿಯೊಂದು ಕೆರೆಯ ಜೀರ್ಣೋದ್ಧಾರದ ಅಂದಾಜು ವೆಚ್ಚವನ್ನು ತಾಲ್ಲೂಕು ಕಛೇರಿಯಲ್ಲಿ ಜಾಹೀರಾತುಪಡಿಸಲಾಗುವುದು. ಜಮೀನು ಮಾಲೀಕರು ಆಕ್ಷೇಪಣೆಗಳನ್ನು ಒಂದು ತಿಂಗಳೊಳಗೆ ದಾಖಲು ಮಾಡಬಹುದು. ಮನವಿಗಳನ್ನು ಕೇಳಿದ ನಂತರ ಜಿಲ್ಲಾಧಿಕಾರಿಯವರು ಆ ಕಾರ್ಯವನ್ನು ಮುಂದುವರಿಸಬೇಕೆ ಬೇಡವೇ ಎಂದು ನಿರ್ಧರಿಸುವರು. ರೆವಿನ್ಯೂ ಕಮಿಷನರ್ ಅವರಿಗೆ ಮೇಲ್ಮನವಿ ಮಾಡಿಕೊಳ್ಳಬಹುದಾಗಿರುತ್ತದೆ. ಅವರ ತೀರ್ಮಾನ ಅಂತಿಮವಾದುದು. ದುರಸ್ತಿಯ

ಖರ್ಚಿನ ಕಾಲು ಭಾಗವನ್ನು ಹಿಡುವಳಿದಾರರಿಂದ ದಾಮಾಷಾ ಮೇರೆಗೆ ನಿಶ್ಚಿತ ಕಂದಾಯದ ಜೊತೆಗೆ ವಾರ್ಷಿಕ ಕಂತಾಗಿ ವಸೂಲು ಮಾಡಲಾಗುವುದು" ಎಂದು ಅವರು ಹೇಳಿದರು.

ಸೂಚನೆಯನ್ನು ಎಸ್. ಕಡಾಂಬಿಯವರು ಸಮರ್ಥಿಸಿ, ಇರುವ ಕೆರೆಗಳನ್ನು ಪೂರ್ಣ ಸಾಮರ್ಥ್ಯ ಪಡೆಯುವಂತೆ ದುರಸ್ತಿಗೊಳಿಸಬೇಕೆಂದು ಬಯಸಿದರು. ಸಮಷ್ಠಿ ಭಾವ ದುರ್ಬಲ ವಾಗುತ್ತಿರುವುದು ಮುಂತಾದ ಕಾರಣಗಳಿಂದ ಸ್ಥಳಿಯ ಸಂಪನ್ಮೂಲಗಳು ಕ್ಷೀಣಿಸಿವೆ ಎಂದು ಅವರು ನುಡಿದರು. ಎನ್.ಎಸ್. ನಂಜುಂಡಯ್ಯ ಮಸೂದೆಯನ್ನು ಬೆಂಬಲಿಸಿದರು. ಪರಿಷ್ಕೃತ ಅಂದಾಜುಗಳನ್ನು ಹಳ್ಳಿಗಳಲ್ಲಿ ಹೇಗೆ ತಿಳಿಯಪಡಿಸಲಾಗುವುದೆಂದು ಅವರು ಕೇಳಿದರು.[೨೨] ಕಾಮಗಾರಿಯು ಪೂರ್ತಿಯಾದ ನಂತರ ಪ್ರತಿ ಹಿಡುವಳಿದಾರನ ಹೊಣೆಯನ್ನು ಅವನ ಲೆಕ್ಕಕ್ಕೆ ಸೇರಿಸಲಾಗುವುದೆಂದು ದಿವಾನರು ತಿಳಿಸಿದರು. ಅಂದಾಜನ್ನು ಪುನರ್ವಿಮರ್ಶಿಸಿದಾಗಲೆಲ್ಲಾ ಹೆಚ್ಚುವರಿ ಖರ್ಚನ್ನು ಸರ್ಕಾರವೇ ಭರಿಸಬೇಕೆಂದು ಶ್ರೀ ಎನ್. ಎಸ್. ನಂಜುಂಡಯ್ಯ ಸೂಚಿಸಿದರು. ಕೆರೆಗಳ ಜೀರ್ಣೋದ್ಧಾರದ ಖಚಿತ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂದು ಅವರು ಕೇಳಿದರು.

ಸ್ವಪ್ರೇರಣೆಯ ಪದ್ಧತಿ ಹಿಂದೆ ನಿಷ್ಫಲಕಾರಿಯಾಯಿತೆಂದು ಶ್ರೀ ಎಂ.ಸಿ. ರಂಗೈಯ್ಯಂಗಾರ್ ಹೇಳಿದರು. ಶ್ರೀ ಬಿ.ವಿ. ರಾಮಸ್ವಾಮಿಯವರೂ ಮಸೂದೆಗೆ ಬೆಂಬಲ ನೀಡಿದರು. ಹಳೆಯ ಕಾಲದಲ್ಲಿ ರೈತರು ಕೆರೆಗಳ ದುರಸ್ತಿ ವಿಷಯದಲ್ಲಿ ಸರ್ಕಾರದೊಡನೆ ಸಹಕರಿಸುತ್ತಿದ್ದರೆಂದು ಹೇಳಿದ ಕೆ.ಪಿ. ಪುಟ್ಟಣ್ಣ ಚೆಟ್ಟಿಯವರು ಅಂದಾಜುಗಳನ್ನು ಪುನರ್ವಿಮರ್ಶಿತ ಅಂದಾಜು ಮೂಲಕ್ಕಿಂತ ಶೇಕಡ ೫ ಅಧಿಕವಾದರೆ ಗ್ರಾಮಸ್ಥರು ಒಪ್ಪಿಕೊಳ್ಳಬೇಕೆಂದೂ ಎಂ. ಶಾಮರಾವ್ ಹೇಳಿದರು. ಈ ವಂತಿಗೆಯನ್ನು ಜಮೀನಿನ ಮೇಲಿನ ತೆರಿಗೆಯೆಂದೇ ಪರಿಗಣಿಸಬೇಕೆಂದು ಕೆ. ಚಾಂಡಿ ಸೂಚಿಸಿದರು.

ಕೆರೆಗಳನ್ನು ಆಯ್ಕೆ ಮಾಡುವುದರಲ್ಲಿ ರೈತರ ಅಭಿಪ್ರಾಯಕ್ಕೆ ಮಾನ್ಯತೆ ಇರಬೇಕೆಂದು ಕೆ. ಆರ್. ಶ್ರೀನಿವಾಸ ಐಯ್ಯಂಗಾರ್ ನುಡಿದರು. ಕಾಲು ಭಾಗದ ವೆಚ್ಚವನ್ನು ಕೊಡುವುದು ರೈತರಿಗೆ ಭಾರವಾಗಬಹುದು ಎಂದರು. ಅನೇಕ ಕೆರೆಗಳಲ್ಲಿ ಕುಡಿಯುವುದಕ್ಕೂ ನೀರು ದೊರಕುವು ದಿಲ್ಲವೆಂದು ಶ್ರೀ ಅಬ್ದುರ್ ರಹಮಾನ್ ವ್ಯಥೆಪಟ್ಟರು. ಭಾರಿ ಮತ್ತು ಸಣ್ಣ ಕೆರೆಗಳೆಂಬ ಭೇದವನ್ನು ಕಿತ್ತೆಸೆದು ಜನರ ಹಿತವನ್ನು ನೋಡಿಕೊಂಡು ಕೆರೆಗಳ ಜೀರ್ಣೋದ್ಧಾರ ಮಾಡಬೇಕೆಂದು ಹೆಚ್. ವೆಂಕಟರಾಮಯ್ಯ ಹೇಳಿದರು. ಆದ್ದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುವುದೆಂದು ಅವರು ತಿಳಿಸಿ ಮಸೂದೆಯನ್ನು ವಿರೋಧಿಸಿದರು.

ದಿವಾನರು ಚರ್ಚೆಯನ್ನು ಮುಕ್ತಾಯಗೊಳಿಸುತ್ತಾ ನಿಬಂಧನೆಯನ್ನು ಕಾರ್ಯಗತ ಮಾಡುವುದರಲ್ಲಿ ತೊಂದರೆಗಳು ಬರಬಹುದೆಂದು ಒಪ್ಪಿಕೊಂಡರು. ಅವುಗಳ ನಿವಾರಣೆಗೆ

ನಿಯಮಗಳಲ್ಲಿ ಅವಕಾಶ ಕಲ್ಪಿಸಬಹುದೆಂದರು. ಉದ್ದೇಶಿತ ಕ್ರಮವು ರೈತರಿಗೆ ಒಪ್ಪಿಗೆಯಾಗುವುದೆಂದು ಆಶಿಸಿದರು. ಸೂಚನೆಯನ್ನು ಓಟಿಗೆ ಹಾಕಿ ಅದು ಅಂಗೀಕೃತವಾಯಿತು.

ಮಸೂದೆಯ ಪಠಣಕ್ಕಾಗಿ ಕೆ.ಆರ್. ಶ್ರೀನಿವಾಸ ಐಯ್ಯಂಗಾರ್ ಅವರು ೧೧-೮-೧೯೨೩ ರಂದು ಸೂಚನೆ ತಂದರು. ಸ್ವ-ಪ್ರೇರಣೆಯಿಂದ ವಂತಿಗೆಗಳು ಬರದೆ ಇರುವುದರಿಂದ ಬಲತ್ಕಾರ ಅಗತ್ಯವೆಂದು ಅವರು ಮತ್ತೆ ಹೇಳಿದರು.

ಈ ಕಡ್ಡಾಯವು ರೈತ ಸಮುದಾಯದ ಪ್ರಯೋಜನಕ್ಕಾಗಿ ಎಂದು ಕೆ.ಪಿ. ಪುಟ್ಟಣ್ಣ ಚೆಟ್ಟಿ ಅಭಿಪ್ರಾಯಪಟ್ಟರು. ರೈತರು ತಮ್ಮ ಪಾಲನ್ನು ಕಂತುಗಳಲ್ಲಿ ಪಾವತಿ ಮಾಡಲು ಸರ್ಕಾರ ಅವಕಾಶ ಮಾಡಿರುವುದಕ್ಕಾಗಿ ಅನಂತಯ್ಯ ಸಂತೋಷ ಸೂಚಿಸಿದರು. ರೈತರ ಅಪೇಕ್ಷೆಗಳನ್ನು ಮಾನ್ಯ ಮಾಡಲಾಗುವುದೆಂದು ದಿವಾನರು ಹೇಳಿದರು. ನಿಯಮಗಳ ಪ್ರಕಾರ ಕೆರೆಗಳನ್ನು ಆಯ್ಕೆ ಮಾಡಲಾಗುವುದೆಂದು ಶ್ರೀ ಕೆ. ಆರ್ ಶ್ರೀನಿವಾಸ ಐಯ್ಯಂಗಾರ್ ಸ್ಪಷ್ಟೀಕರಣ ನೀಡಿದರು. ನಿರ್ಮಾಣದ ವೆಚ್ಚ ಕುರಿತು ಮುನ್ಸೂಚನೆ ಕೊಡಲಾಗುವುದೆಂದೂ ಮೇಲ್ಮನವಿಗೆ ಅವಕಾಶವಿರುವುದೆಂದೂ ಭರವಸೆ ನೀಡಿದರು. ವಂತಿಗೆಯನ್ನು ಹಲವು ವರ್ಷಗಳ ಕಾಲ ಕಂದಾಯದ ಜೊತೆಗೆ ವಸೂಲು ಮಾಡಲಾಗುವುದು ಎಂದರು. ಕೆಲವು ಕೆರೆಗಳ ಕಾಮಗಾರಿ ರೈಲು ಮಾರ್ಗ ಅಥವಾ ರಸ್ತೆಯ ಸುರಕ್ಷತೆ ದೃಷ್ಟಿಯಿಂದ ಅಗತ್ಯವಾದರೆ ಆಕ್ಷೇಪಣೆಗಳನ್ನು ತಿರಸ್ಕರಿಸಬೇಕೆಂದು ಚಾಂಡಿ ಸೂಚಿಸಿದರು. ರೈತರ ಸಮ್ಮತಿ ಇಲ್ಲದೆ ಯಾವ ಕೆರೆಯ ದುರಸ್ತಿಯನ್ನೂ ಎತ್ತಿಕೊಳ್ಳಬಾರದೆಂದು ನಂಜುಂಡಯ್ಯ ಚೆಟ್ಟಿ ಹೇಳಿದರು. ರಿಪೇರಿ ನಡೆಯುತ್ತಿರುವ ಕೆರೆಗಳ ಕೆಲಸವನ್ನು ಪೂರ್ಣಗೊಳಿಸಬೇಕೆಂದು ಪರಮಶಿವಯ್ಯ ಕೇಳಿದರು.

ರೈತರು ಮುಂದೆ ಬಂದಾಗ ಕೆರೆಗಳ ಜೀರ್ಣೋದ್ಧಾರವನ್ನು ಸರ್ಕಾರ ಕಡ್ಡಾಯವಾಗಿ ನಡೆಸಬೇಕೆಂದು ನಂಜುಂಡಯ್ಯ ಹೇಳಿದರು. ಜೀರ್ಣೋದ್ಧಾರದ ವೆಚ್ಚದಲ್ಲಿ ಮುಕ್ಕಾಲು ಭಾಗವನ್ನು ಅದೇ ವರ್ಷದಲ್ಲಿ ಸರ್ಕಾರ ಕೊಡುವುದು ಕಡ್ಡಾಯವಾಗಬಾರದೆಂದು ಅಬ್ಬಾಸ್ ಖಾನ್ ನುಡಿದರು. ಸ್ವಪ್ರೇರಣೆಯ ಪದ್ಧತಿಯಿಂದ ಅನೇಕ ಕೆರೆಗಳು ಹಾಳಾಗಿವೆಯೆಂದು ರಾಮಸ್ವಾಮಿ ಚೆಟ್ಟಿ ಭಾವಿಸಿದರು. ೧೯೧೬ರ ನಿಬಂಧನೆಯು ರೈತರಿಗೆ ಪ್ರಯೋಜನಕರ ಫಲಿತಾಂಶಗಳನ್ನು ಕೊಟ್ಟಿಲ್ಲವೆಂದು ದಿವಾನರು ಹೇಳಿ, ತಿದ್ದುಪಡಿಯಾದ ನಿಬಂಧನೆಯು ಸಂಸ್ಥಾನದಲ್ಲಿ ವ್ಯವಸಾಯವನ್ನು ಉತ್ತಮಪಡಿಸುವುದೆಂದು ಆಶಿಸಿದರು. ಕಾಮಗಾರಿಗಳ ವ್ಯವಸ್ಥಿತ ಕಾರ್ಯಕ್ರಮವನ್ನು ವರ್ಷ ವರ್ಷವೂ ಹೊಂದಲಾಗುವುದೆಂದು ತಿಳಿಸಿದರು. ಮಸೂದೆ ಅಂಗೀಕೃತವಾಯಿತು.

೫.೫. ಸಸ್ಯ ರೋಗಗಳ ನಿವಾರಣೆ ಮಸೂದೆಯಲ್ಲಿ ದಲಿತರು

ಕಾಂತರಾಜ ಅರಸ್ ಅವರು ಸಸ್ಯ ರೋಗಗಳು ಹರಡುವುದನ್ನು ತಡೆಗಟ್ಟುವ ಮಸೂದೆಯನ್ನು ಪಠಣಕ್ಕೆ ತೆಗೆದುಕೊಳ್ಳಬೇಕೆಂದು ೨೦-೩-೧೯೧೭ ರಂದು ಸೂಚನೆ ಮಂಡಿಸಿದರು.

ಕೃಷಿ ಮತ್ತು ತೋಟಗಾರಿಕೆಗೆ ಕ್ರಿಮಿಕೀಟಗಳ ಭಾದೆ ತೀವ್ರವಾಗುತ್ತಿದೆಯೆಂದು ಅವರು ಹೇಳಿದರು. "ಅಡಕೆ ತೋಟಗಳಲ್ಲಿ ಕೊಳೆ ರೋಗ ಮತ್ತು ಕಾಫಿ ತೋಟಗಳಲ್ಲಿ ಹಸಿರು ಕೀಟದ ಹಾವಳಿ ಹೆಚ್ಚಾಗಿದೆ. ಅವುಗಳ ವ್ಯಾಪನೆಯನ್ನು ತಡೆಗಟ್ಟಿ ಸಂಪೂರ್ಣವಾಗಿ ನಿರ್ನಾಮ ಮಾಡಲು ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಬೇಕು."ಎಂದರು ಅವರು.

ಸೂಚನೆಗೆ ಸಭೆ ಸಮ್ಮತಿಸಿ, ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಲಾಯಿತು. ಚುನಾಯಿತ ಸಮಿತಿಯ ವರದಿಯ ಪರಿಶೀಲನೆಗಾಗಿ ಎಂ.ಕಾಂತರಾಜ ಅರಸ್ ಅವರು ಅದೇ ವರ್ಷ ಸೂಚನೆ ತಂದರು. "ಈ ಕ್ರಮವು ರೈತರಿಗೆ ಹಿಂಸೆ ತರಬಹುದೆಂದು ಕೆಲವರಲ್ಲಿರುವ ಭಾವನೆಯನ್ನು ತೆಗೆದು ಹಾಕಲು ಸಮಿತಿಯು ಮುಖ್ಯ ಮಾರ್ಪಾಡುಗಳನ್ನು ಮಾಡಿದೆ. ರೋಗ ಹಬ್ಬಿರುವ ಪ್ರದೇಶದ ಜೊತೆಗೆ ಅದು ತಗಲಿರುವ ನಿರ್ದಿಷ್ಟ ಬೆಳೆಯನ್ನು ಪ್ರಕಟಿಸಬೇಕೆಂಬುದು ಮೊದಲ ಮುಖ್ಯ ತಿದ್ದುಪಡಿ. ಕೆಲವೆಡೆ ಬೆಳೆಗೆ ರೋಗ ತಗಲಿರದಿದ್ದರೂ ಆ ರೋಗದ ಹರಡುವಿಕೆ ತಪ್ಪಿಸಲು ಬೆಳೆಯನ್ನು ನಾಶಪಡಿಸಿದಾಗ ಮಾಲೀಕರಿಗೆ ಪರಿಹಾರ ಕೊಡಲಾಗುವುದು. ರೋಗ ಉಲ್ಬಣಿಸಿದಾಗ ಬೆಳೆಗಳನ್ನು ನಾಶಪಡಿಸಲಾಗುವುದು. ಈ ಕಾರ್ಯಕ್ರಮದ ಬಗ್ಗೆ ಜನರಲ್ಲಿ ಚೆನ್ನಾಗಿ ತಿಳುವಳಿಕೆ ಇಲ್ಲದ್ದರಿಂದ ಮ್ಯಾಜಿಸ್ಟ್ರೇಟರು ಸಹಾನುಭೂತಿಯಿಂದಿರಬೇಕು. ಯಾವುದೇ ಪ್ರದೇಶವನ್ನು ಜಾಹೀರು ಮಾಡುವ ಮುನ್ನ ರೈತರ ಅಭಿಪ್ರಾಯ ಪಡೆಯಲಾಗುವುದು". ಎಂದು ಅವರು ಹೇಳಿದರು.

ಉದ್ದೇಶಿತ ನಿಬಂಧನೆಯ ವಿರುದ್ಧ ಪ್ರತಿಭಟನೆ ಸೂಚಿಸಿ ಕೊಪ್ಪ ಮಲೆನಾಡು ಸಂಘ ಕಳಿಸಿದ ತಂತಿ ಬಗ್ಗೆ ಎಸ್. ಸೀತಾರಾಮಯ್ಯ ಪ್ರಸ್ಥಾಪಿಸಿದರು. ನಿಬಂಧನೆಯು ಜಾರಿಗೆ ಬಂದ ಕೂಡಲೆ ರೈತರು ಸಿಂಪಡಿಕೆ ನಡೆಸಬೇಕಾಗಿಲ್ಲವೆಂದು ಕೆ.ಆರ್. ಶ್ರೀನಿವಾಸ ಐಯ್ಯಂಗಾರ್ ಹೇಳಿದರು. "ಸರ್ಕಾರವು ಸಾಕಷ್ಟು ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳುವುದು. ರೈತರಿಗಾಗಿ ಪ್ರದರ್ಶನವನ್ನು ಏರ್ಪಡಿಸಲಾಗುವುದು. ಕರಡು ನಿಯಮಗಳನ್ನು ಪ್ರಕಟಿಸಿ ಅಭಿಪ್ರಾಯಗಳನ್ನು ಆಹ್ವಾನಿಸಲಾಗುವುದು" ಎಂದು ಅವರು ವಿವರಿಸಿದರು. ಮಸೂದೆಯ ಪರಿಶೀಲನೆಯನ್ನು ಮುಂದಕ್ಕೆ ಹಾಕಬೇಕೆಂದು ಸದಸ್ಯರು ಒತಾಯಿಸಿದ್ದರಿಂದ ವಿಷಯವನ್ನು ಓಟಿಗೆ ಹಾಕಲಾಯಿತು. ಅಧಿಕ ಸಂಖ್ಯೆಯಲ್ಲಿ ವಿರೋಧ ವ್ಯಕ್ತವಾಯಿತು. ತಿದ್ದುಪಡಿಯಾದಂತೆ ಮಸೂದೆಯನ್ನು ಓಟಿಗೆ ಹಾಕಿ. ಅದು ಅಂಗೀಕೃತವಾಯಿತು.

೫.೬. ಮೈಸೂರು ಸಂಸ್ಥಾನದ ಗ್ರಾಮ ನ್ಯಾಯಾಲಯಗಳ ಮಸೂದೆಯಲ್ಲಿ ದಲಿತರು

ಮೈಸೂರು ಗ್ರಾಮ ನ್ಯಾಯಾಲಯಗಳ ನಿಬಂಧನೆಯನ್ನು ತಿದ್ಧುಪಡಿ ಮಾಡುವ ಮಸೂದೆಯನ್ನು ಎಂ. ಕಾಂತರಾಜ ಅರಸು ಅವರು ೨೦-೦೩-೧೯೧೭ರಂದು ಮಂಡಿಸಿದರು. ಕೆಳದರ್ಜೆಯ ಯಾವುದೆ ನ್ಯಾಯಾದೀಶರನ್ನು ಮುನ್ಸಿಫ್ ಎಂಬ ಪದದ ವಿವರಣೆಯಲ್ಲಿ

ಸೇರಿಸಲಾಗುವುದೆಂದು ಮಸೂದೆ ಉದ್ದೇಶಿಸಿತು. ಚಾಲ್ತಿ ಕಾಯಿದೆಯಂತೆ ಶಿವಮೊಗ್ಗದ ಮುನ್ಸಿಫರಿಗೆ ಶಿವಮೊಗ್ಗ ತಾಲ್ಲೂಕಿನ ಮೇಲೆ ಅಧಿಕಾರ ವ್ಯಾಪ್ತಿ ಇರಲಿಲ್ಲ.

ಸೂಚನೆಯನ್ನು ಓಟಿಗೆ ಹಾಕಿ ಅಂಗೀಕಾರವಾಯಿತು. ಚುನಾಯಿತ ಸಮಿತಿಗೆ ಒಪ್ಪಿಸದೇ ಮಸೂದೆಯನ್ನು ಅಂಗೀಕರಿಸಲು ಸಭೆ ಒಪ್ಪಿತು.[೨೩]

ಶ್ರೀ ಕಾಂತರಾಜ ಅರಸು ಅವರು ೨೮-೬-೧೯೧೮ರಂದು ಮಸೂದೆಗೆ ಇನ್ನೊಂದು ತಿದ್ದುಪಡಿ ತಂದರು. ಚಾಲ್ತಿ ಕಾಯಿದೆಯಂತೆ ಗ್ರಾಮ ನ್ಯಾಯಾಲಯಗಳನ್ನು ಜಿಲ್ಲಾ ನ್ಯಾಯಾಧೀಶರು ಅಥವಾ ಜಿಲ್ಲಾಧಿಕಾರಿಯವರು ಅಥವಾ ಮುನ್ಸೀಫರು ಪರೀಕ್ಷಣ ನಡೆಸಬಹುದಾಗಿತ್ತು. ಆ ಕೆಲಸವನ್ನು ಜಿಲ್ಲಾದಿಕಾರಿಯವರು ಅಮಲ್ದಾರ್ ದರ್ಜೆಯ ಅಧಿಕಾರಿಗಳಿಗೆ ವಹಿಸಬಹುದೆಂದು ಸರ್ಕಾರ ಭಾವಿಸಿತು. ಆ ಅಧಿಕಾರಿಗಳು ಜಮಾಬಂದಿಗೆ ಅಥವಾ ಇತರ ಪ್ರವಾಸಕ್ಕೆ ಹೋದಾಗ ಅನುಕೂಲವಾಗಿ ಇಂತಹ ಪರೀಕ್ಷಣೆ ನಡೆಸಬಹುದೆಂದು ಸರ್ಕಾರ ಅಭಿಪ್ರಾಯಪಟ್ಟಿತು. ಸೂಚನೆಯನ್ನು ಓಟಿಗೆ ಹಾಕಿ ಅದು ಸರ್ವಾನುಮತದಿಂದ ಅಂಗೀಕಾರವಾಯಿತು. ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಲು ೧೭-೯-೧೯೧೮ರಂದು ಸಮ್ಮತಿಸಿತು. ಮಸೂದೆ ೨೫-೫-೧೯೨೦ರಂದು ಅಂಗೀಕಾರವಾಯಿತು.

ಗ್ರಾಮ ನ್ಯಾಯಾಲಯಗಳಲ್ಲಿ ಕೋರ್ಟ್ ಶುಲ್ಕವನ್ನು ವಿಧಿಸಲು ಅವಕಾಶ ಮಾಡುವ ಮಸೂದೆಯನ್ನು ಮೀರ್ ಹವಮ್ಜಾ ಹುಸೇನ್ ಅವರು ೧೮-೧೨-೧೯೨೨ರಂದು ಮಂಡಿಸಿದರು. ಗ್ರಾಮ ನ್ಯಾಯಾಲಯಗಳಿಗೆ ಸಿಬ್ಬಂದಿಯಾಗಲೀ ಕಟ್ಟಡಗಳಾಗಲಿ ಇಲ್ಲ. ಈಗ ಇಂತಹ ೨೦೦ ನ್ಯಾಯಾಲಯಗಳಿದ್ದು ಬೇರೆ ಪ್ರದೇಶಗಳಲ್ಲಿ ಇನ್ನಷ್ಟಕ್ಕಾಗಿ ಬೇಡಿಕೆಗಳಿವೆ, ಉದ್ದೇಶಿತ ನ್ಯಾಯಾಲಯ ಶುಲ್ಕವನ್ನು ಈಗಿನ ನ್ಯಾಯಾಲಯ ಶುಲ್ಕ ನಿಬಂಧನೆಯಂತೆ ವಿಧಿಸಬಹುದಾದ ಮೊಬಲಗಿನಲ್ಲಿ ಅರ್ಧವನ್ನು ಪರಮಾವಧಿಯಾಗಿ ಗೊತ್ತುಪಡಿಸಲಾಗುವುದು. ಪ್ರತಿನಿಧಿ ಸಭೆಯು ಈ ಕ್ರಮವನ್ನು ಬೆಂಬಲಿಸಿತ್ತು.[೨೪]

ಗ್ರಾಮ ನ್ಯಾಯಾಲಯಗಳ ಉಪಯುಕ್ತತೆಯನ್ನು ಅಡ್ಡಿಪಡಿಸುವ ಯಾವ ಕ್ರಮವನ್ನೂ ಕೆ.ಪಿ. ಪುಟ್ಟಣ್ಣ ಚೆಟ್ಟಿ ಅವರು ಇಷ್ಟಪಡಲಿಲ್ಲ. ಈ ಹೊಸ ಶುಲ್ಕವನ್ನು ವಿಧಿಸುವುದಕ್ಕೆ ಯಾವ ಸಮರ್ಥನೆಯೂ ಎಂ.ಸಿ. ರಂಗ ಐಯ್ಯಂಗಾರ್ ಅವರಿಗೆ ಕಾಣಿಸಲಿಲ್ಲ. ಕೋರ್ಟ್ ಶುಲ್ಕಗಳ ವರಮಾನದಿಂದ ಸಾಕಷ್ಟು ಹನ ಹೆಚ್ಚುವರಿಯಗಿ ಉಳಿದಿದೆಯೆಂದು ಅವರು ಹೇಳಿದರು. ಎಂ. ಶಾಮರಾಯರು ಮಸೂದೆಗೆ ಬೆಂಬಲ ನೀಡಿ ಈ ಶುಲ್ಕವನ್ನು ವಿಧಿಸಿದರೆ ಅನಗತ್ಯವಾಗಿ ಮೊಕದ್ದಮೆಗಳನ್ನು ಹೂಡುವುದು ತಪ್ಪುವುದೆಂದರು. ಇದಕ್ಕೆ ಪ್ರತಿಯಾಗಿ ಪರಮಶಿವಯ್ಯನವರು ಗ್ರಾಮ ನ್ಯಾಯಾಲಯಗಳು ಈಗ ಹೇಳಲಾಗಿರುವಷ್ಟು ಜನಪ್ರಿಯವಾಗಿಲ್ಲ ಎಂದರು. ಕೆಲವು ನ್ಯಾಯಾಲಯಗಳು ಕೆಲಸ ಮಾಡುತ್ತಿಲ್ಲವೆಂದೂ ಡಿಕ್ರಿಗಳನ್ನು ಜಾರಿಮಾಡುತ್ತಿಲ್ಲವೆಂದು ಅವರು

ಹೇಳಿದರು. ಇಷ್ಟು ಮುಂಚಿತವಾಗಿ ಶುಲ್ಕ ವಿಧಿಸಬೇಕಾಗಿಲ್ಲವೆಂದು ವೆಂಕಟೇಶಯ್ಯ ಭಾವಿಸಿದರು. ಶುಲ್ಕ ವಿಧಿಸುವುದು ಖಟ್ಲೆದಾರರಿಗೆ ತೊಂದರೆಯೆಂದೂ ಸಾಧಾರಣವಾದ ಕೋರ್ಟ್ ಶುಲ್ಕದಲ್ಲಿ ಕಾಲು ಭಾಗವನ್ನು ಪರಮಾವದಿಯಾಗಿಡಬೇಕೆಂದೂ ಎಂ. ರಾಮಚಂದ್ರರಾವ್ ಹೇಳಿದರು. ಗ್ರಾಮ ನ್ಯಾಯಾಲಯಗಳು ಹಣ ಪಾವತಿಯ ಖಟ್ಲೆಗಳ ಬಗ್ಗೆ ವ್ಯವಹರಿಸುತ್ತವೆಂದೂ ಈಗ ಸೂಚಿಸಿರುವ ಶುಲ್ಕವು ತುಂಬ ಕಡಿಮೆ ಎಂದೂ ಬಿ.ವಿ. ರಾಮಸ್ವಾಮಿ ಚೆಟ್ಟಿ ನುಡಿದರು. ಗ್ರಾಮ ನ್ಯಾಯಾಲಯಗಳು ಜನರಲ್ಲಿ ಅಪ್ರಿಯವಾಗಿದೆ ಎಂದು ಎಂ. ಸುಬ್ಬಯ್ಯ ಭಾವಿಸಿದರು.

ಚರ್ಚೆಗೆ ಮೀರ್ ಹುಸೇನ್ ಅವರು ಜವಾಬು ಕೊಟ್ಟು ಶುಲ್ಕ ವಿಧಿಸುವುದನ್ನು ಮಸೂದೆ ಕಡ್ಡಾಯ ಮಾಡುವುದಿಲ್ಲವೆಂದು ಹೇಳಿದರು. "ಈ ಅಧಿಕಾರವನ್ನು ಸರ್ಕಾರ ವಹಿಸಿ ಕೊಳ್ಳುತ್ತಿದೆ, ಅಷ್ಟೆ. ಈ ನ್ಯಾಯಾಲಯಗಳ ಪರೀಕ್ಷಣೆ ನಡೆಸಿದಾಗ ಅವು ತೃಪ್ತಿಕರವಾಗಿ ಕೆಲಸ ಮಾಡುತ್ತಿರುವುದು ಕಂಡು ಬಂದಿದೆ. ಪುರಸಭೆಗಳ ಮತ್ತು ನಗರ ಪ್ರದೇಶಗಳಲ್ಲಿ ಇಂತಹ ಇನ್ನಷ್ಟು ನ್ಯಾಯಾಲಯಗಳ ಸ್ಥಾಪನೆಗಾಗಿ ಬೇಡಿಕೆ ಇದೆ" ಎಂದು ಅವರು ತಿಳಿದರು. ಖಟ್ಲೆ ವ್ಯವಹಾರಗಳು ಸರಳವಾಗಿರಲು ಮತ್ತು ಗ್ರಾಮಸ್ಥರಿಗೆ ಅನುಕೂಲವಾಗಿರಲು ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆಯೆಂದು ದಿವಾನರು ಹೇಳಿದರು".

ಅಡಿಟಿಪ್ಪಣಿಗಳು

೧. ಡಾ. ಎಂ.ಎಂ. ಕಲಬುರ್ಗಿ, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯,ಪುಟ.೨೦.

೨. ಅದೇ ಪುಟ. ೨೮.

೩. ಅದೇ ಪುಟ. ೩೨

೪. ಟಿ.ವಿ. ನಾಗರಾಜು, ಮೈಸೂರು ಸಂಸ್ಥಾನದಲ್ಲಿ ನೀರಾವರಿ (ಕೋಲಾರ ಜಿಲ್ಲೆಯ ಒಂದು ಅಧ್ಯಯನ) ಜನನಿ ಪ್ರಕಾಶನ,೨೦೦೮ ಪುಟ. ೧೦೪-೧೦೬.

೫. ವಿಧಾನಮಂಡಲ ಇತಿಹಾಸ, ಮೈಸೂರು ನ್ಯಾಯ ವಿಧೇಯಕ ಸಭೆ, ಸಂಪುಟ-೨ ಭಾಗ-೨, ೧೯೨೪-೧೯೪೦, ವಿಧಾನಮಂಡಲ ಕಛೇರಿ ಬೆಂಗಳೂರು.೨೦೦೨ ಪುಟ ೧೧೧೮.

೬. ಅದೇ ಪುಟ. ೧೧೫೦.

೭. ಅದೇ ಪುಟ. ೧೧೭೨.

೮. ಅದೇ ಪುಟ. ೧೧೮೦.

೯. ಸಂಪುಟ-೧ ಭಾಗ೧-೧೮೮೧-೧೯೦೨ ಪುಟ-೨೩೦.

೧೦. ಅದೇ ಪುಟ.೨೩೪.

೧೧. ಅದೇ ಪುಟ. ೨೩೬

೧೨. ಅದೇ ಪುಟ. ೨೩೭.

೧೩. ಹೋಬಳಿ ಆಡಳಿತ ಇಲಾಖೆ ಕಡತ-೧೮೭೬-೧೯೭೧.

೧೪. ಅದೇ ಪುಟ.೯೨.

೧೫. ಅಗ್ರಿಕಲ್ಚರ್ ಅಡ್ಮಿನಿಸ್ಟ್ರೇಷನ್ ಅಫ್ ಲ್ಯಾಂಡ್ ವಿಲೇಜ್ ಪಂಚಾಯಿತಿ ಪಬ್ಲಿಕ್ ಇನ್‌ಸ್ಟ್ರಕ್ಷನ್ ಕಡತ-೨-ಡಿಸೆಂಬರ್ ೧೯೪೬. ನಂ. ಎಲ್ ೩೦೯೧-ವಿಪಿ. ೨-೪೬-೧೪. ಪುಟ ೨೨೫.

೧೬. ಅದೇ ಪುಟ-೨೫೬.

೧೭. ಜನರಲ್ ಮತ್ತು ರವಿನ್ಯೂ ಸೆಕ್ರೆಟರಿ ಆಫ್ ದಿ ಗೌರ್ನಮೆಂಟ್ ಆಪ್ ಹೈಸಿಸ್ ಆಫ್ ಮೈಸೂರು-೧೯೩೭ ಟು ೧೯೪೭ ಪುಟ. ೪೮

೧೮. ಅದೇ ಪುಟ.೮೬.

೧೯. ಅದೇ ಪುಟ. ೧೦೨.

೨೦. ನ್ಯಾಯ ವಿಧೇಯಕ ಸಭೆ-ಪುಟ-೨೮೦.

೨೧. ಅದೇ ಪುಟ. ೨೮೬.

೨೨. ಅದೇ ಪುಟ.೨೯೦.

೨೩. ಅದೇ ಪುಟ. ೨೯೨.

೨೪. ಅದೇ ಪುಟ.೨೯೩.

ಅಧ್ಯಾಯ: ಆರು

ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಮತ್ತು ದಲಿತ ವರ್ಗದ ಅಭಿವೃದ್ಧಿಗೆ ಆಡಳಿತಾತ್ಮಕ ಕ್ರಮಗಳು

ಅಧ್ಯಾಯ: ಆರು

ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಮತ್ತು ದಲಿತ ವರ್ಗದ ಅಭಿವೃದ್ಧಿಗೆ ಆಡಳಿತಾತ್ಮಕ ಕ್ರಮಗಳು

ಮೈಸೂರು ಸಂಸ್ಥಾನದಲ್ಲಿ ಮೈಸೂರು ಭೂಸ್ವಾಧೀನ ಕಾಯ್ದೆ ಅನ್ವಯ ವಶಪಡಿಸಿಕೊಳ್ಳಲಾದ ಜಮೀನುಗಳನ್ನು ಆದಿದ್ರಾವಿಡ, ಆದಿಕರ್ನಾಟಕ, ಭೋವಿ, ಬಂಜಾರ ಸಮುದಾಯಗಳ ಸಾಮಾಜಿಕ ಶೈಕ್ಷಣಿಕ, ಆರ್ಥಿಕ ಪ್ರಗತಿಗೆ ಮತ್ತು ಈ ಸಮುದಾಯಗಳ ಅಭಿವೃದ್ಧಿಗೆ ಉಪಯೋಗಿಸಿ ಕೊಳ್ಳಲಾಯಿತು. ಈ ಅವಧಿಯಲ್ಲಿ ಹುಟ್ಟಿಕೊಂಡ ಕೇಂದ್ರಿಯ ನಿಮ್ನ ವರ್ಗಗಳ ಕಮಿಟಿಯು ನಿಮ್ನ ವರ್ಗಗಳ ಸಮಸ್ಯೆಗಳನ್ನು ರಾಜಕಾರಣಿಗಳ, ಒಡೆಯರ, ಸಾರ್ವಜನಿಕರ ಗಮನವನ್ನು ಸೆಳೆದಿದೆ. ಈ ಕಮಿಟಿಯು ಪ್ರಜ್ಞಾಪೂರ್ವಕ ಸಾಮಾಜಿಕ ಕಳಕಳಿಯಿಂದ ಕೂಡಿದ್ದಾಗಿದ್ದು. ಸಂಸ್ಥಾನದಲ್ಲಿದ್ದಂತಹ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಅಸಮಾನತೆಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿತ್ತು.

ಸಂಸ್ಥಾನದಲ್ಲಿನ ಜನತೆ ನಿಮ್ನವರ್ಗದವರನ್ನು ಮನುಷ್ಯರಂತೆ ಕಾಣಬೇಕು ಅವರು ಕೂಡ ಇನ್ನಿತರರಂತೆ ಸ್ವಾಭಿಮಾನ ಮತ್ತು ನೆಮ್ಮದಿಯ ಬದುಕನ್ನು ನಡೆಸಬಹುದು ಎಂಬುದು ಈ ಕಮಿಟಿಯ ಆಶಯವಾಗಿತ್ತು. ಅಸ್ಪೃಶ್ಯರ ಜೀವನ ಮತ್ತು ಅವರ ಆಸ್ತಿಗೆ ಭದ್ರತೆ ಒದಗಿಸುವುದು ಅವರ ಮೇಲಿನ ದೌರ್ಜನ್ಯಗಳನ್ನು ತಡೆಯಲು ಕಾನೂನಾತ್ಮಕ ಪರಿಹಾರ ಕಂಡುಕೊಳ್ಳುವುದು ಈ ಕಮಿಟಿಯ ಜವಾಬ್ದಾರಿಯಾಗಿತ್ತು. ಕೆಲವು ಕಡೆ ನಿಮ್ನವರ್ಗದವರಿಗೆ ಮನೆ ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಯಿತು. ವಿದ್ಯಾರ್ಥಿನಿಲಯಗಳ ಸ್ಥಾಪನೆಗಾಗಿ ಸ್ಥಳಾವಕಾಶವನ್ನು ಮಾಡಿ ಕೊಡಲಾಯಿತು. ನಿವೇಶನಗಳನ್ನು ನೀಡಲು ಭೂ ಸ್ವಾಧೀನವಾದ ಜಮೀನುಗಳನ್ನು ಬಳಸಿಕೊಳ್ಳ ಲಾಯಿತು. ಒಟ್ಟಾರೆಯಾಗಿ ಮೈಸೂರು ಸಂಸ್ಥಾನದಲ್ಲಿ ಜಾರಿಗೊಂಡ ಭೂಸ್ವಾದೀನ ಕಾಯ್ದೆ ೧೮೯೪

ರಂತೆ ಅಗತ್ಯವಿರುವ ಹಳ್ಳಿಗಳಲ್ಲಿ ಉದ್ದೇಶಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮಾಡಿರುವುದರ ವಿವರ ಈ ಮುಂದಿನಂತೆ ಚರ್ಚಿಸಲಾಗಿದೆ.

೬.೧. ಮೈಸೂರು ಸಂಸ್ಥಾನದಲ್ಲಿ ದಲಿತರ ಅಭಿವೃದ್ಧಿಗೆ ಭೂಸ್ವಾದೀನಪಡಿಸಿಕೊಂಡ ಕ್ರಮಗಳು

ದೊಡ್ಡಬಳ್ಳಾಪುರ ತಾಲ್ಲೂಕಿನ ಹಲಸಿಗನಹಳ್ಳಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಾಗಿದ್ದ ಜಾಗದಲ್ಲಿ ಎ.ಕೆ.ಹಟ್ಟಿಯ ಬಡಾವಣೆಗಾಗಿ ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿಗಳು ೧ ಎಕರೆ ೯ ಗುಂಟೆ ಜಾಗವನ್ನು ವಶಪಡಿಸಿಕೊಂಡು ಅಸ್ಪೃಶ್ಯರಿಗೆ ಮನೆಗಳನ್ನು ನಿರ್ಮಿಸಿಕೊಳ್ಳಲು ನೀಡಿದರು. ಆ ಜಮೀನನ್ನು ಸರ್ಕಾರದ ಆದೇಶ ಸಂಖ್ಯೆ ೧–೭೯೩೭–ಯು.ಪಿ.೧೬–೩೪ ೧೪೬ ದಿನಾಂಕ ೧೭ ಮೇ ೧೯೩೫ ರಲ್ಲಿ ಆದೇಶ ಹೊರಡಿಸಿ ಸ್ವಾಧೀನಕ್ಕೆ ಜಮೀನನ್ನು ಪಡೆಯಲಾಯಿತು. ಈ ಜಮೀನಲ್ಲಿ ಆದಿಕರ್ನಾಟಕ ಹಟ್ಟಿಯನ್ನು ನಿರ್ಮಿಸಲು ಸರ್ಕಾರ ನಿರ್ಧಾರ ಮಾಡಿತು.[1]

ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಹೋಬಳಿಯಲ್ಲಿ ವಡವನಘಟ್ಟ ದಲ್ಲಿ ಸರ್ಕಾರಿ ಜಾಗ ಸರ್ವೆನಂಬರ್ ೧೧೯/೪ ರಲ್ಲಿ ಉಳುಮೆ ಮಾಡುತ್ತಿದ್ದ ಮರಿಯ ಬಿನ್ ಗೌಡಜ್ಜ ಎಂಬುವರಿಂದ ಸರ್ಕಾರವು ಜಮೀನನ್ನು ಸ್ವಾಧೀನ ಪಡಿಸಿಕೊಂಡು ಅದರಲ್ಲಿ ಆದಿಕರ್ನಾಟಕ ಜನಾಂಗದವರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಯಿತು. ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ನಿಡಗಲ್ಲು ಹೋಬಳಿಯ ಕೊತ್ತೂರಿನಲ್ಲಿ ಸರ್ಕಾರಿ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ಸೀನಯ್ಯ ಬಿನ್ ನಂಜುಂಡಯ್ಯ ಎಂಬುವರಿಗೆ ಮಧುಗಿರಿ ಉಪವಿಭಾಗದ ಉಪವಿಭಾಗಾಧಿಕಾರಿಗಳು ನೋಟಿಸ್ ಅನ್ನು ಜಾರಿ ಮಾಡಿ ತಾವು ಸರ್ಕಾರಿ ಜಮೀನಿಲ್ಲಿ ಉಳುಮೆಮಾಡುತ್ತಿದ್ದು ಅದನ್ನು ಬಿಟ್ಟು ಕೊಡುವಂತೆ ಸರ್ಕಾರಿ ಆದೇಶ ಸಂಖ್ಯೆ ಐ,೬೩೪೪ – ಯು.ಪಿ. ೧೧–೩೮–೧೦೨ ದಿನಾಂಕ ೯ ಫೆಬ್ರವರಿ ೧೯೩೯ ರಂದು ನೋಟಿಸ್ ಜಾರಿ ಮಾಡಿ ಇದಕ್ಕೆ ೩೦ ದಿನದೊಳಗೆ ಉತ್ತರಿಸುವಂತೆ ಸೂಚಿಸಿದರು. ಇಲ್ಲವಾದರೆ ಏಕಪಕ್ಷೀಯವಾಗಿ ಆ ಜಮೀನನ್ನು ವಶಪಡಿಸಿಕೊಳ್ಳಲಾಗುವುದೆಂದು ತಿಳಿಸಿದರು. ಈ ಜಮೀನನ್ನು ವಶಪಡಿಸಿಕೊಂಡು ಆದಿಕರ್ನಾಟಕ ಜನಾಂಗದವರಿಗೆ ಮನೆಗಳನ್ನು ನಿರ್ಮಿಸಲು ಅವಕಾಶ ಮಾಡಿಕೊಟ್ಟರು.[2]

ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿ ಹೋಬಳಿಯ ಬೇವಿನ ತಲಪುರ ಗ್ರಾಮದಲ್ಲಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದ ಸಿದ್ದೇಗೌಡ, ಕೊಂಡೆಗೌಡ, ಒಬೇಗೌಡ ಅವರಿಂದ ಸರ್ವೆ ನಂ ೧೪೮ ರ ಜಮೀನನ್ನು ಸರ್ಕಾರವು ಸ್ವಾಧೀನ ಪಡಿಸಿಕೊಂಡು ೫ ಎಕರೆ ೧೯ ಗುಂಟೆ ಜಾಗವನ್ನು ಕ್ರಿಶ್ಚಿಯನ್ನರು ಮತ್ತು ಆದಿಕರ್ನಾಟಕ ಜನಾಂಗದವರು ಮನೆ ನಿರ್ಮಿಸಿಕೊಳ್ಳಲು ಅವಕಾಶ ಮಾಡಿಕೊಡಲಾಯಿತು.

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಕಸಬಾ ಹೋಬಳಿ ಅರಸೀಕೆರೆಯಲ್ಲಿ ಸರ್ವೆ ನಂ ೪೬೦/೧ರಲ್ಲಿ ೧೭ ಗುಂಟೆ ಜಮೀನನ್ನು ಹಾಸನ ಉಪವಿಭಾಗಾಧಿಕಾರಿಗಳು ವಶಪಡಿಸಿಕೊಂಡು

ಅದರಲ್ಲಿ ಆದಿಕರ್ನಾಟಕ ಜನಾಂಗದವರಿಗೆ ಮನೆಗಳನ್ನು ನಿರ್ಮಿಸಲು ಆದೇಶ ಮಾಡಿದರು. ಇದರಿಂದಾಗಿ ಅರಸೀಕೆರೆ ಗ್ರಾಮದಲ್ಲಿ ಊರ ಹೊರಗೆ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದ ಕುಟುಂಬಗಳಿಗೆ ಮನೆಯನ್ನು ಹೊಂದುವ ಅವಕಾಶವನ್ನು ಮೈಸೂರು ಸಂಸ್ಥಾನದ ಸರ್ಕಾರವು ಕಲ್ಪಿಸಿತು.[೩]

ಸರ್ಕಾರಿ ಜಾಗವನ್ನು ಉಳುಮೆಮಾಡುತ್ತಿದ್ದ ಚಿತ್ರದುರ್ಗ ಜಿಲ್ಲೆ ದಾವಣಗೆರೆ ತಾಲ್ಲೂಕು ಬಾಳೆಹೊನ್ನೂರಿನ ನಾಗಜ್ಜ ಭರಮಪ್ಪ ಬಿನ್ ಕರೆ ಪ್ರಭು ಪಾಲ್ ಎಂಬುವರು ಸರ್ವೆ ನಂ ೨೧/ ೧ ರ ಸರ್ಕಾರಿ ಜಮೀನನ್ನು ವಶಕೊಂಡು ಆದಿಕರ್ನಾಟಕ ಮತ್ತು ಆದಿದ್ರಾವಿಡ ಜನಾಂಗದ ನಿವೇಶನಕ್ಕೆ ಮೀಸಲಿಡಲಾಯಿತು. ಮೈಸೂರು ಸಂಸ್ಥಾನದ ಭೂ ಸ್ವಾಧೀನ ಕಾಯ್ದೆ ಅಡಿಯಲ್ಲಿ ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ರಿಜಿಪುರ ಹಳ್ಳಿಯಲ್ಲಿ ಸರ್ವೆ ನಂ ೯೮ ರಲ್ಲಿ ಕೊಂಗಾಡಿಯಪ್ಪ ಎಂಬುವರು ಸರ್ಕಾರಿ ಜಾಗವನ್ನು ಅತಿಕ್ರಮಿಸಿಕೊಂಡು ೨ ಎಕರೆ ೪ ಗುಂಟೆ ಜಾಗದಲ್ಲಿ ವ್ಯವಸಾಯವನ್ನು ಮಾಡುತ್ತಿದ್ದರು. ದೊಡ್ಡಬಳ್ಳಾಪುರದ ಉಪವಿಭಾಗಾಧಿಕಾರಿಗಳು ಈ ಜಮೀನನ್ನು ವಶಪಡಿಸಿಕೊಂಡು ಆದಿಕರ್ನಾಟಕ ಸಮುದಾಯದ ಶಾಲೆಗೆ ನೀಡಿ, ಇಲ್ಲಿ ಶಾಲೆಯ ಕಟ್ಟಡ ಸ್ಥಾಪಿಸಲು ಆದೇಶಿಸಿದರು. ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ತಲಕಾಡು ಹೋಬಳಿ ಮಾದಪುರದಲ್ಲಿ ನಂಜೇಗೌಡ ಎಂಬುವರಿಂದ ಸರ್ವೆನಂಬರ್ ೨೦೧೧ ರಲ್ಲಿ ೨ ಎಕರೆ ಭೂಮಿಯನ್ನು ವಶಪಡಿಸಿಕೊಂಡು ಆದಿಕರ್ನಾಟಕ ಜನಾಂಗದವರಿಗೆ ವಸತಿಯನ್ನು ಸ್ಥಾಪಿಸಿಕೊಳ್ಳಲು ಅವಕಾಶ ಮಾಡಿಕೊಡಲಾಯಿತು. ಇದರ ಸರ್ಕಾರಿ ಆದೇಶ ಸಂಖ್ಯೆ ೧.೩೯೫೫, ಯು.ಪಿ.೧೨-೩೦-೫೨ ದಿನಾಂಕ ೧೩ ನವೆಂಬರ್ ೧೯೩೦ ರಂದು ಆದೇಶ ಮಾಡಲಾಯಿತು.[೪] ಕಡೂರು ಜಿಲ್ಲೆ ಚಿಕ್ಕಬಾಗಲೂರಿನಲ್ಲಿ ಆದಿಕರ್ನಾಟಕ ಜನಾಂಗದ ವಿದ್ಯಾರ್ಥಿಗಳಿಗೆ ಶಾಲೆಯ ಕಟ್ಟಡ ನಿರ್ಮಿಸಲು ಜಿಲ್ಲಾ ಕಮಿಷನರ್ ರವರಿಗೆ ಮನವಿ ಮಾಡಿ ೩೪ ಗುಂಟೆ ಜಮೀನನ್ನು ನೀಡಲಾಯಿತು.

ಮೈಸೂರು ಸಂಸ್ಥಾನದಲ್ಲಿ ಮೈಸೂರು ಭೂಸ್ವಾಧೀನ ಕಾಯ್ದೆ ೧೮೯೪ರಂತೆ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಪರಿಶಿಷ್ಟ ಜಾತಿಯವರ ಅಭಿವೃದ್ಧಿಗೆ ಉಪಯೋಗಿಸಿದರ ಪಟ್ಟಿ

ಕ್ರಸಂ	ಜಮೀನು ಸ್ವಾಧೀನವಾದ ಸ್ಥಳ	ಉದ್ದೇಶ
೧.	ಸಿದ್ದನಹಳ್ಳಿ, ಮಾಲೂರು ಹೋಬಳಿ, ಚನ್ನಪಟ್ಟಣ ತಾಲ್ಲೂಕು, ಬೆಂಗಳೂರು ಜಿಲ್ಲೆ	ಆದಿಕರ್ನಾಟಕ ಬಡಾವಣೆ
೨.	ದಸಾವರ, ಮಾಲೂರು ಹೋಬಳಿ, ಚನ್ನಪಟ್ಟಣ ತಾಲ್ಲೂಕು, ಬೆಂಗಳೂರು ಜಿಲ್ಲೆ	ಆದಿಕರ್ನಾಟಕ ಬಡಾವಣೆ

೩	ಮಾರಿಕುಪ್ಪೆ, ಸೋಲುರ್ ಹೋಬಳಿ, ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೪	ಸೂಲಿವಾರ, ತಾವರೆಕೆರೆ ಹೋಬಳಿ, ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೫	ಹರಿಹರ ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ಜಿಲ್ಲೆ	ಹರಿಜನ ಕಾಲೋನಿ
೬	ಬೊಮ್ಮನಹಳ್ಳಿ, ಗೂಳೂರು ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿದ್ರಾವಿಡ ಕಾಲೋನಿ
೭	ಬ್ಯಾತ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿಕರ್ನಾಟಕ ಬಡಾವಣೆ
೮	ವೊಜಿನಹಳ್ಳಿ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಭೋವಿ ಕಾಲೋನಿ
೯	ಅಮ್ಮನಪುರ, ಚಂದಕಾವ್ವದ ಹೋಬಳಿ, ಚಾಮರಾಜನಗರ, ಮೈಸೂರು ಜಿಲ್ಲೆ	ಆದಿಕರ್ನಾಟಕ ಬಡಾವಣೆ
೧೦	ಕುರಿಹುಂಡಿ, ಹುಲ್ಲಹಳ್ಳಿ ಹೋಬಳಿ ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆ	ಆದಿಕರ್ನಾಟಕ ಬಡಾವಣೆ
೧೧	ಹುನಗನಹಳ್ಳಿ, ಬಸರಿ ಹೋಬಳಿ, ಹೊಳೆನರಸೀಪುರ ತಾಲ್ಲೂಕು ಹಾಸನ ಜಿಲ್ಲೆ	ಆದಿಕರ್ನಾಟಕ ರಸ್ತೆ
೧೨	ಹೊಳೆನರಸೀಪುರ ಕಸಬಾ ಹೋಬಳಿ ಹೊಳೆನರಸೀಪುರ ತಾಲ್ಲೂಕು ಹಾಸನ ಜಿಲ್ಲೆ	ಹರಿಜನ ಕಾಲೋನಿ
೧೩	ಕೆರೆಮಂಗಲ, ಬೇಗೂರು ಹೋಬಳಿ, ಬೆಂಗಳೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೧೪	ಬಲ್ಲೂರು, ಅತ್ತಿಬೆಲೆ ಹೋಬಳಿ, ಆನೆಕಲ್ಲು ತಾಲ್ಲೂಕು, ಬೆಂಗಳೂರು ಜಿಲ್ಲೆ	ಹರಿಜನ ಕಾಲೋನಿ
೧೫	ದಾಸರಹಳ್ಳಿ, ಕೃಷ್ಣನಾರಾಯಣ ಹೋಬಳಿ, ಬೆಂಗಳೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ

೧೬	ಬೆನಹಿ, ಬುಕ್ಕಾಪಟ್ಟಣ ಹೋಬಳಿ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ	ಆದಿಕರ್ನಾಟಕ ಮತ್ತು ಆದಿದ್ರಾವಿಡ ಬಡಾವಣೆ
೧೭	ಚಿಕ್ಕಸಂದ್ರ, ಯಶವಂತಪುರ ಹೋಬಳಿ, ಬೆಂಗಳೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೧೮	ಕೊಪ್ಪ, ಜಿಗಳಿ ಹೋಬಳಿ, ಆನೆಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ	ಹರಿಜನ ಕಾಲೋನಿ
೧೯	ಅಜ್ಜನಹಳ್ಳಿ, ಚನ್ನರಾಯಪಟ್ಟಣ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೨೦	ವಜ್ಜನಕುರ್ಕೆ, ಕಸಬಾ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ	ವಡ್ಡರ ಕಾಲೋನಿ
೨೧	ಹುಣಸೆ ಕಟ್ಟೆ, ಬುಕ್ಕಪಟ್ಟಣ ಹೋಬಳಿ, ಶಿರಾ ತಾಲ್ಲೂಕು ತುಮಕೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೨೨	ಹೊದೆಕಲ್ಲು, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಹರಿಜನ ಕಾಲೋನಿ
೨೩	ಬೆಳಧರ, ಕೋರ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿದ್ರಾವಿಡ ಕಾಲೋನಿ
೨೪	ಹೊಸಗೆರೆ, ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿದ್ರಾವಿಡ ಕಾಲೋನಿ
೨೫	ಕಂಭತ್ತನಹಳ್ಳಿ, ಗೂಳೂರು ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೨೬	ಮೈದಾಳ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೨೭	ಚನ್ನಹಳ್ಳಿ, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೨೮	ಮಾದ್ರಹಳ್ಳಿ, ಮೂಗೂರು ಹೋಬಳಿ, ಟೀ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ	ಹರಿಜನ ಕಾಲೋನಿ
೨೯	ನಲ್ಲೂರು, ಕಸಬಾ ಹೋಬಳಿ, ಚನ್ನಗಿರಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ	ಮಹಾತ್ಮ ಕಾಲೋನಿ
೩೦	ಕಂಪ್ಲಿ, ಕಂಪ್ಲಿ ಹೋಬಳಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ	ಪರಿಶಿಷ್ಟ ಜಾತಿಯವರಿಗೆ ಮನೆ ಮತ್ತು ನಿವೇಶನದ ಉದ್ದೇಶ

೩೧	ಗೂಳೂರು, ಗೂಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು, ಕೋಲಾರ ಜಿಲ್ಲೆ	ಆದಿಕರ್ನಾಟಕ ಬಡಾವಣೆ
೩೨	ಗೊರವನಹಳ್ಳಿ, ಹೊಳವನಹಳ್ಳಿ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿಕರ್ನಾಟಕ ಬಡಾವಣೆ
೩೩ ೩೪	ಸೋರೆಕುಂಟೆ, ಬೆಳ್ಳಾವಿ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ಯಗಚಕುಪ್ಪೆ, ಬನ್ನಿಕಟ್ಟೆ ಹೋಬಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ	ಆದಿಕರ್ನಾಟಕ ಕಾಲೋನಿ ಹರಿಜನ ಕಾಲೋನಿ
೩೫	ಮಳವಳ್ಳಿ, ಕಸಬಾ ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ	ಹರಿಜನ ವಿದ್ಯಾರ್ಥಿ ನಿಲಯ
೩೬	ವಡ್ಡರಹಳ್ಳಿ, ದೇವಸಮುದ್ರ ಹೋಬಳಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಆದಿಕರ್ನಾಟಕ ಕಾಲೋನಿ ಸ್ಥಳಾಂತರ
೩೭	ತೆಲಗಿ, ತೆಲಗಿ ಹೋಬಳಿ, ಹರಪ್ಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ	ಹರಿಜನ ಕೇರಿ
೩೮	ಅಗರ, ಬೇಗೂರು ಹೋಬಳಿ, ಬೆಂಗಳೂರು ಜಿಲ್ಲೆ	ಆದಿದ್ರಾವಿಡ ಕಾಲೋನಿ
೩೯	ಹೊನ್ನುಡಿಕೆ, ಗೂಳೂರು ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೪೦	ದೊಡ್ಡಮಾಲೂರು, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ	ನಿಮ್ನ ವರ್ಗಗಳ ಕಾಲೋನಿ
೪೧	ಕಾತೇನಹಟ್ಟಿ, ಕುಬ್ಬನಹಳ್ಳಿ ಹೋಬಳಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ	ಆದಿಕರ್ನಾಟಕ ಕಾಲೋನಿ
೪೨	ಶನಿಗೆರೆ, ಬಾಣಾವರ ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ	ಬಂಜಾರ ಸಮುದಾಯದ ಕಾಲೋನಿ
೪೩	ಹತ್ಸಾಲ, ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ	ಹರಿಜನವಸತಿ ಮತ್ತು ನಿವೇಶನ
೪೪	ಊರುಕೆರೆ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ	ಆದಿದ್ರಾವಿಡ ಕಾಲೋನಿ

೬.೨. ಮೈಸೂರು ಸಂಸ್ಥಾನದಲ್ಲಿ ನಿಮ್ನ ವರ್ಗದ ಕಮಿಟಿ ರಚನೆ

ಮೈಸೂರು ಸಂಸ್ಥಾನದಲ್ಲಿ ಪ್ರಮುಖವಾಗಿ ನಿಮ್ನವರ್ಗಗಳ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಅಭಿವೃದ್ದಿಯ ಸಲುವಾಗಿ ಕೇಂದ್ರಿಯ ನಿಮ್ನವರ್ಗಗಳ ಸಂಘವನ್ನು ಸ್ಥಾಪಿಸಲಾಯಿತು. ಇದರಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಸಾಮಾನ್ಯವರ್ಗದ ಉತ್ತಮ ವ್ಯಕ್ತಿಗಳನ್ನು ಈ ಸಂಘವು ಒಳಗೊಂಡಿತ್ತು.

ಕೇಂದ್ರಿಯ ನಿಮ್ನವರ್ಗಗಳ ಕಮಿಟಿಯಲ್ಲಿ ಅಧ್ಯಕ್ಷರಾಗಿ ರೆವಿನ್ಯು ಕಮಿಷನರ್ ಅವರನ್ನು ನೇಮಕ ಮಾಡಲಾಯಿತು. ಹಾಗೆಯೇ ಸರ್ಕಾರದ ಪ್ರತಿನಿಧಿಗಳಾಗಿ

೧. ಸಾರ್ವಜನಿಕ ಮಾಹಿತಿ ನಿರ್ದೇಶಕರು

೨. ಕೃಷಿ ನಿರ್ದೇಶಕರು

೩. ಸಹಕಾರ ಸಂಘಗಳ ಕುಲಸಚಿವರು

೪. ಕೈಗಾರಿಕೆ ಮತ್ತು ವಾಣಿಜ್ಯ ವಿಭಾಗದ ನಿರ್ದೇಶಕರನ್ನು ಒಳಗೊಂಡಿತ್ತು ಸರ್ಕಾರೇತರ ಸಾಮಾನ್ಯವರ್ಗ ಪ್ರತಿನಿಧಿಗಳಾಗಿ

೧. ಮಾಂಬಳಿ ಮಾದಯ್ಯ

೨. ಡಿ. ಗೋವಿಂದದಾಸ್

೩. ಆರ್ ಚನ್ನಿಗರಾಮಯ್ಯ

೪. ಟಿ ರಾಮಚಂದ್ರ

೫. ಜಾತ್ರಾ ನಾಯಕ

೬. ಆರ್. ಗೋಪಾಲ್‌ಸ್ವಾಮಿ ಅಯ್ಯರ್

ಅವರನ್ನೊಳಗೊಂಡಂತೆ ೧೬ ಅಕ್ಟೋಬರ್ ೧೯೩೯ ರಂದು ಈ ನಿಮ್ನ ವರ್ಗಗಳ ಸಂಘ ಅಸ್ಥಿತ್ವಕ್ಕೆ ಬಂದಿತು.

ಈ ಕಮಿಟಿಯ ಸದಸ್ಯರುಗಳು ೬ ತಿಂಗಳಿಗೆ ಒಂದು ಭಾರಿ ಸಭೆ ಸೇರಿ ನಿಮ್ನವರ್ಗಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಶೈಕ್ಷಣಿಕ ಸ್ಥಾನಮಾನಗಳನ್ನು ಮತ್ತು ಅವರ ಅಭಿವೃದ್ಧಿ ಕುರಿತು ಚರ್ಚಿಸಲಾಗುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಈ ಕಮಿಟಿಯ ಅಧ್ಯಕ್ಷರಾಗಿರುತ್ತಿದ್ದಂತಹ ರೆವಿನ್ಯು ಕಮಿಷನರ್ ಅವರು ನಿಮ್ನವರ್ಗಗಳ ಅನೇಕ ಸಮಸ್ಯೆಗಳನ್ನು ಮತ್ತು ಅವರ ಉನ್ನತಿಗೆ ಸಾಧಕ ಬಾದಕಗಳ ಹಲವಾರು ಅಂಶಗಳನ್ನು ಕಮಿಟಿಯ ಮುಂದೆ ಪ್ರಸ್ತಾಪಿಸಿ ವರದಿ ನೀಡುವ ಕಾರ್ಯ ಅವರದ್ದಾಗಿತ್ತು.[೫] ರೆವಿನ್ಯು ಕಮಿಷನರ್ ನೀಡಿದ ವರದಿಯ ಆಭಾರದ ಮೇಲೆ ಈ ಸಭೆಯಲ್ಲಿ ವಿವರವಾಗಿ ಈ ಎಲ್ಲಾ ಅಂಶಗಳ ಕುರಿತು ಚರ್ಚೆ ನಡೆಯುತ್ತಿದ್ದವು

ಅಂತಿಮವಾಗಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡು ನಿಮ್ನವರ್ಗಗಳ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡುವುದರ ಮುಖಾಂತರ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು. ಹಾಗೆಯೇ ಹಲವಾರು ಜಿಲ್ಲೆ ಹಾಗೂ ತಾಲ್ಲೂಕು ಕಮಿಟಿಗಳನ್ನು ರಚಿಸಿ ಆಯಾ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿರುವ ನಿಮ್ನವರ್ಗದ ಸಮಸ್ಯೆ ಮತ್ತು ಅಭಿವೃದ್ಧಿಗೆ ಪೂರಕವಾಗಿರುವಂತಹ ಯೋಜನೆಗಳನ್ನು ಪಟ್ಟಿಮಾಡಿ, ಕೇಂದ್ರೀಯ ನಿಮ್ನವರ್ಗದ ಸಂಘಕ್ಕೆ ವರದಿಯನ್ನು ಸಲ್ಲಿಸಬೇಕಾಗಿತ್ತು. ಜಿಲ್ಲಾ ಮತ್ತು ತಾಲ್ಲೂಕು ಕಮಿಟಿಗಳಿಂದ ಬಂದಂತಹ ದೂರು ಮತ್ತು ಸಮಸ್ಯೆಗಳನ್ನು ಕೇಂದ್ರಿಯ ನಿಮ್ನವರ್ಗದ ಕಮಿಟಿಯಲ್ಲಿ ಚರ್ಚಿಸಿ, ಆ ಸಮಸ್ಯೆಗಳಿಗೆ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪರಿಹಾರವನ್ನು ಒದಗಿಸುವ ಕಾರ್ಯ ಕೇಂದ್ರಿಯ ನಿಮ್ನವರ್ಗದ ಸಂಘದ ಕಾರ್ಯವಾಗಿತ್ತು.

ಜಿಲ್ಲಾ ಮತ್ತು ತಾಲ್ಲೂಕಿನ ನಿಮ್ನ ವರ್ಗದ ಕಮಿಟಿಗಳು ಕೇಂದ್ರ ನಿಮ್ನವರ್ಗದ ಸಂಘದ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಬೇಕಾಗಿತ್ತು. ಜಿಲ್ಲೆ ಮತ್ತು ತಾಲ್ಲೂಕು ಕಮಿಟಿಗಳ ಉಸ್ತುವಾರಿಯನ್ನು ಆಯಾ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ಅವರು ನಿರ್ವಹಿಸಬೇಕಾಗಿತ್ತು. ತಾಲ್ಲೂಕು ಕಮಿಟಿಯವರು ನಿಮ್ನವರ್ಗದ ಸಮುದಾಯದವರ ಸಮಸ್ಯೆ ಮತ್ತು ಸೌಲಭ್ಯಗಳ ವರದಿಯನ್ನು ಡೆಪ್ಯೂಟಿ ಕಮಿಷನರ್ ಅವರಿಗೆ ಸಲ್ಲಿಸಬೇಕಾಗಿತ್ತು. ವರದಿಯನ್ನು ಅವರು ಕೇಂದ್ರ ಕಮಿಟಿಗೆ ಶಿಫಾರಸ್ಸು ಮಾಡುವ ಜವಾಬ್ದಾರಿ ಅವರದಾಗಿತ್ತು. ನಂತರ ವರದಿಯ ಶಿಫಾರಸ್ಸುಗಳನ್ನು ಕೇಂದ್ರ ನಿಮ್ನವರ್ಗಗಳ ಸಂಘದ ಅಧ್ಯಕ್ಷರಾದ ರೆವಿನ್ಯು ಕಮಿಷನ್ ರವರು ೬ ತಿಂಗಳಿಗೊಮ್ಮೆ ಸೇರುವ ಕಮಿಟಿಯ ಮುಂದೆ ಚರ್ಚೆಗೆ ಮಂಡಿಸಬೇಕಾಗಿತ್ತು. ಈ ರೀತಿಯ ಕಾರ್ಯವನ್ನು ಪ್ರತಿಯೊಂದು ಕಮಿಟಿಯ ಮುಖ್ಯಸ್ಥರು ಮಾಡಬೇಕಾಗಿತ್ತು. ಇದನ್ನು ಹೊರತುಪಡಿಸಿ ಬೇರೆ ಯಾವುದಾದರೂ ಸಲಹೆ ಸೂಚನೆಗಳನ್ನು ನೀಡುವ ಅಧಿಕಾರ ಕೇಂದ್ರ ಕಮಿಟಿಯದ್ದಾಗಿರುತ್ತಿತ್ತು. ಜಿಲ್ಲಾ ತಾಲ್ಲೂಕಿನ ಮತ್ತು ಕೇಂದ್ರ ಕಮಿಟಿಗಳು ಪರಸ್ಪರ ಸಹಕಾರದೊಂದಿಗೆ ಕಾರ್ಯನಿರ್ವಹಿಸಬೇಕಾಗಿತ್ತು.

ಸಮಾಜದ ಅಂದಿನ ಜ್ವಲಂತ ಸಮಸ್ಯೆಗಳನ್ನು ಬಹು ಜಾಗರೂಕತೆಯಿಂದ ನಿರ್ವಹಿಸಬೇಕಾಗಿತ್ತು. ಏಕೆಂದರೆ ಶತಶತಮಾನಗಳಿಂದ ಜಾತಿ ಆಧಾರದ ಮೇಲೆ ಸಮಾಜ ಮೇಲು ಕೀಳುಗಳೆಂಬ ಪ್ರಭೇದಗಳಾಗಿ ಒಡೆದು ಹೋಗಿತ್ತು. ಸಮಾಜದ ಅತ್ಯಂತ ಕೆಳವರ್ಗದ ಜನರನ್ನು ಮಾದಿಗರು, ಹೊಲೆಯರು, ಒಡ್ಡರು, ಕೊರಚರು, ಕೊರಮರು ಮತ್ತು ಲಂಬಾಣಿಗಳೆಂದು ವರ್ಗೀಕರಿಸಲಾಗಿತ್ತು. ಈ ವರ್ಗದ ಜನರೆಲ್ಲರು ಶೋಷಣೆಗೆ ಒಳಗಾಗಿದ್ದ ಅಸ್ಪೃಶ್ಯರಾಗಿದ್ದರು. ಸಹಜವಾಗಿಯೇ ಅವರ ಸ್ಥಿತಿಗತಿ ಹೀನಾಯವಾಗಿತ್ತು.[೬] ಮೌಢ್ಯ, ಅಜ್ಞಾನ, ಹಸಿವು ಮತ್ತು ಅನಕ್ಷರತೆಗೆ ಒಳಗಾಗಿದ್ದು ಈ ವರ್ಗದ ಜನರು ಸಮಾಜದ ಮುಖ್ಯವಾಹಿನಿಯಿಂದ ಬೇರ್ಪಟ್ಟು

ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ನಾಗರೀಕ ಸಮಾಜದ ಎಲ್ಲಾ ಮೂಲಭೂತ ಸೌಕರ್ಯಗಳಿಂದ ಇವರನ್ನು ದೂರವಿಟ್ಟಿದ್ದು ದುರದೃಷ್ಟವೆ ಸರಿ ಇಂತಹ ಪರಿಸ್ಥಿತಿ ಕ್ರಮೇಣ ಸುಧಾರಣೆಗೊಳ್ಳಲು ಕಾರಣ ಪ್ರಗತಿಪರ ಮೈಸೂರಿನ ಮಹಾರಾಜರು ಹಾಗೂ ಈ ನಿಮ್ನವರ್ಗದ ಸಂಘದಂತಹ ಸಂಘಟನೆಗಳು ಕೈಗೊಂಡ ಕಾರ್ಯಗಳಿಂದಾಗಿ ಸಾಮಾಜಿಕ ಬದಲಾವಣೆಗೆ ಸ್ವಲ್ಪಮಟ್ಟಿಗೆ ಸಹಕಾರವಾಯಿತು.

ಇದರಿಂದಾಗಿ ಸರ್ಕಾರವು ನಿಮ್ನವರ್ಗಗಳತ್ತ ಗಮನಹರಿಸಿತು. ಮತ್ತು ಅವುಗಳ ಉದ್ದಾರಕ್ಕಾಗಿ ಹಲವಾರು ಕಾರ್ಯಯೋಜನೆಗಳನ್ನು ಪ್ರಾರಂಭಿಸಲಾಯಿತು. ನಿಮ್ನವರ್ಗಗಳ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ವಾರ್ಷಿಕ ಧನಸಹಾಯ ೩೦,೦೦೦ ರೂಪಾಯಿಗಳನ್ನು ನಿಮ್ನವರ್ಗಗಳ ಸಹಕಾರ ಸಂಘಕ್ಕೆ ನೀಡಲಾಯಿತು. ಕೈಗಾರಿಕೆಗಳು, ಕೃಷಿ ನೇಯ್ಗೆ ಮತ್ತು ಮರಗೆಲಸದ ವಿಶೇಷ ವೃತ್ತಿ ಶಾಲೆಗಳನ್ನು ಬೆಂಗಳೂರು, ಮೈಸೂರು ಮತ್ತು ಇತರ ಜಿಲ್ಲೆಗಳಲ್ಲಿ ತೆರೆಯಲಾಯಿತು. ಸರ್ಕಾರ ಜಾರಿಗೊಳಿಸಿದ ಸಂವಿಧಾನಾತ್ಮಕ ಬದಲಾವಣೆಗಳಿಂದ ನಿಮ್ನವರ್ಗಗಳು ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು ಪ್ರಜಾಪ್ರತಿನಿಧಿ ಪರಿಷತ್ತಿನಲ್ಲಿ ಗೌರವಯುತವಾದ ಪ್ರಾತಿನಿಧ್ಯ ಪಡೆಯುವುದಕ್ಕೆ ಅನುವುಮಾಡಿಕೊಟ್ಟಿತು. ಮುರುಗೇಶನ್ ಪಿಳ್ಳೆಯವರಂತ ನಿಮ್ನವರ್ಗಗಳ ಪ್ರತಿನಿಧಿಗಳು ಈ ಸಮುದಾಯದ ಬಹುಕಾಲದಿಂದ ಬಾಕಿಯಿದ್ದ ಕುಂದುಕೊರತೆಗಳ ಬಗ್ಗೆ ಹೋರಾಡಲು ಸಹಕಾರಿಯಾಯಿತು. ಈ ಕೇಂದ್ರಿಯ ನಿಮ್ನವರ್ಗದ ಸಂಘದ ಸಂಬಂಧದ ಮುಖಾಂತರ ಬದಲಾವಣೆಯ ಪ್ರಮುಖ ಕಾರ್ಯಗಳಾಗಿದ್ದವು. ಪುರಾತನ ಸಾಮಾಜಿಕ ಮತ್ತು ಮೂಢನಂಬಿಕೆಗಳು, ನಂಬಿಕೆಗಳು ಮತ್ತು ಆಚರಣೆಗಳ ಸ್ಥಾನದಲ್ಲಿ ಉತ್ತಮ ಚಿಂತನೆಗಳನ್ನು ತರುವ ದಾರಿಯಿಂದ ಈ ಸಂಘವು ಕಾರ್ಯನಿರ್ವಹಿಸಿತು.

ಪರಿಣಾಮಕಾರಿಯಾಗಿ ಜಿಲ್ಲೆ ಮತ್ತು ತಾಲ್ಲೂಕು ಕಮಿಟಿಗಳ ಸಹಕಾರದಿಂದ ಸಾಮೂಹಿಕ ರಾಜಕೀಯ ಚಲನಶೀಲತೆಯನ್ನು ಪ್ರಾರಂಭಿಸಿದ ಮತ್ತು ರಾಜ್ಯವ್ಯಾಪ್ತಿ ರಾಜಕೀಯ ಸಂಘಟನೆಯನ್ನು ಪ್ರಾರಂಭಿಸಿತು. ಈ ಸಂಘದಲ್ಲಿ ಭಿನ್ನವಾದ ತಲೆಮಾರಿನವರು ಹಾಗೂ ಭಿನ್ನ ಹಿನ್ನೆಲೆಯುಳ್ಳವರಿದ್ದರು. ಎರಡನೆಯ ತಲೆಮಾರಿನ ಬ್ರಾಹ್ಮಣೇತರ ಮುಖಂಡರು ೧೮೯೬ ರಿಂದ ೧೯೧೫ ರ ಅವಧಿಯಲ್ಲಿ ಜನಿಸಿದವರು. ಈ ನಾಯಕರು ತಮ್ಮ ಹಿಂದಿನ ಬ್ರಾಹ್ಮಣೇತರ ನಾಯಕರ ಹಿಡಿತಕ್ಕೆ ಸಿಗದಿದ್ದು, ಜಿಲ್ಲಾ ಮತ್ತು ತಾಲ್ಲೂಕು ಕಮಿಟಿಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದರು. ಒಟ್ಟಾರೆ ಇಂತಹ ಸಭೆಗಳಿಂದಾಗಿ ಘರ್ಷಣೆ, ಹಿಂಸೆ, ಕ್ರೌರ್ಯ, ದೌರ್ಜನ್ಯಗಳು ನಿಮ್ನವರ್ಗದವರ ಮೇಲೆ ನಡೆಯುತ್ತಿದ್ದವು. ಕ್ರಮೇಣ ಇವುಗಳು ಕಡಿಮೆಯಾಗತೊಡಗಿದವು. ಸಮಾಜದ ಉನ್ನತ ಜಾತಿವರ್ಗಗಳಲ್ಲಿ ಮನೆಮಾಡಿಕೊಂಡಿರುವ ತಾರತಮ್ಯವಾದ ವಿಚಾರಗಳನ್ನು ಸ್ವಲ್ಪಮಟ್ಟಿಗೆ ಈ ನಿಮ್ನವರ್ಗದ ಸಂಘದ ಮುಖಾಂತರ ಹೋಗಲಾಡಿಸಲು ಪ್ರಯತ್ನಿಸಿತು.[೬] ಪ್ರತಿಯೊಬ್ಬ ವ್ಯಕ್ತಿಗೂ

ಶಿಕ್ಷಣ ಅಗತ್ಯವಾಗಿ ಬೇಕೆ ಬೇಕು. ಶಿಕ್ಷಣದಿಂದಲೂ ವ್ಯಕ್ತಿ ತನ್ನ ಆಸೆ ಆಕಾಂಕ್ಷೆ ಮತ್ತು ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ. ವೈಚಾರಿಕ ಮನೋಭಾವನೆ ಬೆಳಸಿಕೊಂಡು ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಹಾಗೂ ಮಾನವೀಯ ಮೌಲ್ಯಗಳನ್ನು ಬೆಳಸಿಕೊಳ್ಳಲು ಸಾಧುವಾಗುತ್ತದೆ. ಒಟ್ಟಾರೆ ಶಿಕ್ಷಣವು ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾಗಿರಬೇಕು.

ಹಾಗಾಗಿ ಈ ಸಂಘದ ಮುಖಾಂತರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. ಸಂಘದ ಸದಸ್ಯರಾದ ಗೋಪಾಲಸ್ವಾಮಿ ಅಯ್ಯರ್ ಅವರು ಮೈಸೂರು ಸಂಸ್ಥಾನದಲ್ಲಿ ಪಶುಗಳಿಗಿಂತಲೂ ಕೀಳುಜೀವನ ನಡೆಸುತ್ತಿದ್ದಂತಹ ಅಸ್ಪೃಶ್ಯರಿಗೆ ಶಿಕ್ಷಣ ನೀಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಿದರು. ಸಾರ್ವಜನಿಕ ವಲಯದಲ್ಲಿ ಅದರಲ್ಲೂ ನಿಮ್ನವರ್ಗದವರ ಅಭಿವೃದ್ಧಿಗೆ ನಿರಂತರವಾಗಿ ಸೃಜನಶೀಲ ಕ್ರಾಂತಿಯನ್ನುಂಟು ಮಾಡಿದರು. ಇವರ ಸಾಮಾಜಿಕ ಚಟುವಟಿಕೆ ಜಡ್ಡುಗಟ್ಟಿದ ಅಸ್ಪೃಶ್ಯ ಸಮುದಾಯವನ್ನು ಚಲನಶೀಲಗೊಳಿಸಿದವು. ತುಳಿತಕ್ಕೊಳಗಾದ ಈ ಸಮುದಾಯವು ಮೈಸೂರು ಸಂಸ್ಥಾನದಲ್ಲಿ ವಿವೇಚನೆಯ ಹಾದಿ ಹಿಡಿದವು. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗೆ ನಿಸ್ವಾರ್ಥ ಮನೋಭಾವನೆಯಿಂದ ಕೇಂದ್ರಿಯ ನಿಮ್ನವರ್ಗಗಳ ಸಂಘದ ಜೊತೆ ಕೈ ಜೋಡಿಸಿ ನಾಲ್ವಡಿ ಅವರು ರೂಪಿಸಿದ ಅಸ್ಪೃಶ್ಯರ ಅಭಿವೃದ್ಧಿ ಕಾರ್ಯಗಳಿಗೆ ನೇರವಾಗಿ ನಿಮ್ನವರ್ಗಗಳ ಸೌಲಭ್ಯ ಲಭಿಸಲು ಸಹಕಾರಿಯಾದರು.

೬.೩. ಪಂಚಮ ಎಂಬ ಹೆಸರಿನ ಬದಲಾಗಿ ಆದಿಕರ್ನಾಟಕ ಎಂದು ಕರೆಯಲು ಮಾಡಿದ ಆದೇಶ

ಸರ್ಕಾರದ ಅದೇಶ ಸಂಖ್ಯೆ ಉ ೨೫೫೩-೬೦೮-ಉಜ-೬೬-೬೫-೧ ದಿನಾಂಕ ೨೩ನೇ ಅಕ್ಟೋಬರ್ ೧೯೨೫ ರಂದು ಹೊರಡಿಸಿದ ಆದೇಶದಲ್ಲಿ ಹೊಲೆಯ ಮತ್ತು ಮಾದಿಗ ಅಥವಾ ಪಂಚಮ ಎಂದು ನೇರವಾಗಿ ಸರ್ಕಾರಿ ದಾಖಲೆಗಳಲ್ಲಿ ನಮೂದಿಸುವುದನ್ನು ನಿಲ್ಲಿಸುವಂತೆ ನಿರ್ದೇಶನ ನೀಡಲಾಯಿತು. ಇದಕ್ಕೆ ಬದಲಾಗಿ ಆದಿದ್ರಾವಿಡ ಮತ್ತು ಆದಿಕರ್ನಾಟಕ ಎಂಬ ಪದವನ್ನು ಬಳಸಲು ನಿರ್ಧರಿಸಲಾಯಿತು.[೮] ಏಕೆಂದರೆ ೧೯೨೫ ರಲ್ಲಿ ಅಯ್ಯರ್ ಅವರ ನೇತೃತ್ವದಲ್ಲಿ ಪಂಚಮರ ಸಮ್ಮೇಳನವು ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ನಡೆಯಿತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ತುಮಕೂರಿನ ಜಿಲ್ಲಾಧಿಕಾರಿಗಳಾದ ಕೆ.ವಿ. ಅನಂತರಾಮನ್ ಅವರು ವಹಿಸಿದರೆ ಈ ಸಭೆಯ ಕಾರ್ಯಕ್ರಮದಲ್ಲಿ ನರಸಿಂಹಶಾಸ್ತ್ರಿಗಳು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ಎಲ್ಲಾ ಸದಸ್ಯರು ಮತ್ತು ಕಾರ್ಯಕರ್ತರು ಸರ್ವಾನುಮತದಿಂದ ಇನ್ನು ಮುಂದೆ ಪಂಚಮರನ್ನು ಒಂದು ಜಾತಿಯ ಹೆಸರಿನಿಂದ ಗುರುತಿಸುವುದು ಸರಿಯಲ್ಲ. ತಮ್ಮನ್ನು ಆದಿಕರ್ನಾಟಕ ಮತ್ತು ಆದಿದ್ರಾವಿಡ ಎಂದು ಕರೆಯಬೇಕೆಂದು ತೀರ್ಮಾನಿಸಿ

ನಾಲ್ವಡಿ ಅವರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರು. ಈ ವಿಷಯಕ್ಕೆ ಸ್ಪಂದಿಸಿದ ನಾಲ್ವಡಿ ಅವರ ಸರ್ಕಾರ ಅದೇ ವರ್ಷ ಅಂದರೆ ಅಕ್ಟೋಬರ್ ೨೩-೧೯೨೫ ರಂದು ಸರ್ಕಾರ ಆಜ್ಞೆಯನ್ನು ಹೊರಡಿಸಿ ಇನ್ನು ಮುಂದೆ ಪಂಚಮರನ್ನು ಆದಿಕರ್ನಾಟಕ ಮತ್ತು ಹೊಲೆಯರನ್ನು ಆದಿದ್ರಾವಿಡ ಎಂದು ಕರೆಯಬೇಕೆಂದು ಸೂಚಿಸಿತು. ಆದಿಕರ್ನಾಟಕ ಎಂಬ ಪದವನ್ನು ಏಕೆ ಬಳಸಲಾಯಿತು ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಆದಿಕರ್ನಾಟಕ ಅಂದರೆ ಕನ್ನಡದ ದಲಿತರು ಅನ್ನುವ ಪರಿಭಾಷೆಯಲ್ಲಿ ಬಂದಿದ್ದು ಬಹುಮುಖ್ಯವಾಗಿ ಈ ನೆಲದ ಕನ್ನಡಿಗರು ಎಂಬ ಕಲ್ಪನೆ ಒಟ್ಟಾರೆ ಇವರು ಬೇರೆ ಕಡೆಯಿಂದ ವಲಸೆ ಬಂದವರಾಗಿರದೆ ಮೂಲತಃ ಈ ನಾಡಿನ ಮೂಲ ನಿವಾಸಿಗಳು ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಆದರೆ ಇಂದು ಅದು ಒಂದು ಜಾತಿಯ ಪರಿಭಾಷೆಯಾಗಿ ಬಳಕೆಯಾಗುತ್ತಿರುವುದು ದೊಡ್ಡ ದುರಂತ.[೯]

ಆದಿದ್ರಾವಿಡ ಮತ್ತು ಆದಿಕರ್ನಾಟಕ ಸಮುದಾಯದವರಿಗೆ ಅನೇಕ ಸೌಲಭ್ಯಗಳನ್ನು ನೀಡಲು ತಮಿಳು ಮತ್ತು ಕನ್ನಡಿಗರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚನೆ ಮಾಡಲು ಮೈಸೂರು ಸಂಸ್ಥಾನದ ಸರ್ಕಾರ ಕೈಗೊಂಡಿತು. ಅದೇ ರೀತಿಯಲ್ಲಿ ಸರ್ಕಾರದ ಆದೇಶಸಂಖ್ಯೆ ಉ ೨೪೨ -೩೬೦- ಸೆನ್ಸಸ್ -೩೨-೩೯-೫ ದಿನಾಂಕ ೯ ಜುಲೈ -೧೯೪೦ ಎರಡು ದಲಿತ ಸಮುದಾಯಗಳಾದ ಹೊಲೆಯ ಮತ್ತು ಮಾದಿಗ ಜನಾಂಗವನ್ನು ವರ್ಗೀಕರಿಸಿ ಆದಿದ್ರಾವಿಡ (ಬಲಗೈ) ಆದಿಕರ್ನಾಟಕ (ಎಡಗೈ) ಎಂದು ಗೌರವ ಸೂಚಕವಾಗಿ ಸರ್ಕಾರದ ಗಣತಿ ವರದಿಗಳಲ್ಲಿ ನಮೂದಿಸಲು ಆದೇಶ ಮಾಡಿತು.

೬.೪. ಮೈಸೂರು ಸಂಸ್ಥಾನದಲ್ಲಿ ಪಂಚಮರಲ್ಲಿ ಎಡ-ಬಲ ಸಮಸ್ಯೆ

ಮೈಸೂರು ಸಂಸ್ಥಾನದಲ್ಲಿಯೇ ಈ ಎಡ ಬಲ ಸಮಸ್ಯೆ ತಾರತಮ್ಯ ಉದ್ಭವವಾಗಿರುವುದನ್ನು ಗುರ್ತಿಸಬಹುದು ಪಂಚಮರಲ್ಲಿ ಎರಡು ಬಣಗಳಾಗಿ ಹುಟ್ಟಿಕೊಂಡವು. ಎಡಗೈ ಮತ್ತು ಬಲಗೈ ಎಂದು ಅಂದರೆ ಮಾದಿಗರು ಮತ್ತು ಹೊಲೆಯರು ಎಂದು ಅವರ ನಡುವೆ ಮಹತ್ತರವಾದ ವ್ಯತ್ಯಾಸಗಳು ಇವೆ. ಹೊಲೆಯರಿಗಾಗಿ ಉದ್ದೇಶಿಸಲಾದ ಶಾಲೆಗೆ ಹಾಜಗರಾಗಲು ಮಾದಿಗನಿಗೆ ಅನುಮತಿ ಇಲ್ಲ. ಇಂತಹ ಒಂದು ಪ್ರಕರಣ ಸೋಸಲೆಯಲ್ಲಿ ನಡೆಯಿತು. ಅಲ್ಲಿ ಮಾದಿಗರು ಒಂದು ಪ್ರತ್ಯೇಕ ಶಾಲೆಯ ಬೇಡಿಕೆ ಇಟ್ಟರು. ಈ ಕೋರಿಕೆಯನ್ನು ಮಾನ್ಯ ಮಾಡದ ಕಾರಣ ಅವರು ಸಭೆಯಲ್ಲಿ ಕೇವಲ ೮ ಜನ ಇದ್ದು ಅವರು ಆಂಗ್ಲೋ - ವರ್ನಾಕ್ಯುಲಾರ್ ಶಾಲೆಗೆ ಸೇರಿದರು. ಅದರ ಪರಿಣಾಮ ೨೦೦ ಇತರ ಬಾಲಕರು ಶಾಲೆಯಿಂದ ಹೊರಬಂದರು. ಹತ್ತಿರದ ಪ್ರವೇಶಾನುಮತಿ ಭವಿಷ್ಯದಲ್ಲಿ ಪ್ರತಿಕೂಲ ಪರಿಣಾಮಗಳಿಗೆ ಕಾರಣವಾಯಿತು. ಪಂಚಮರು ತಮ್ಮ ಭಿನ್ನಾಭಿಪ್ರಾಯಗಳ್ನು ಅವರ ನಡುವೆಯೇ ಪರಿಹರಿಸಿಕೊಳ್ಳಬೇಕು. ಟಿ.ನರಸೀಪುರದಲ್ಲಿ ಮಾದಿಗ ಬಾಲಕರು ಮಾತ್ರ ಪಂಚಮರ ಶಾಲೆಗೆ ಹಾಜರಾಗುತ್ತಿದ್ದಾರೆ. ಆದರೆ ಒಬ್ಬ ಹೊಲೆಯರು

ಕೂಡ ಅವರ ಮಕ್ಕಳನ್ನು ಅಲ್ಲಿಗೆ ಸೇರಿಸಲು ಬಯಸುತ್ತಿಲ್ಲ. ಒಬ್ಬ ಮುಸಲ್ಮಾನ ಬೋಧಕರ ಸುಪರ್ದಿನಲ್ಲಿ ಕೇವಲ ಮೂವರು ಮಾದಿಗ ಬಾಲಕರು ಇದ್ದಾರೆ, ಆಸ್ಪತ್ರೆ ಮತ್ತು ರೈಲ್ವೆಗಾಡಿಗಳಲ್ಲಿ ಎಡ ಬಲದ ಸಮಸ್ಯೆ ಎದುರಾಗುವುದನ್ನು ಕಾಣಬಹುದು.

ಮಾದಿಗರು ಮತ್ತು ಹೊಲೆಯರ ನಡುವೆ ಅಸ್ಥಿತ್ವದಲ್ಲಿರುವ ಭಿನ್ನಾಭಿಪ್ರಾಯಗಳು ವಿದ್ಯಾವಂತ ವರ್ಗಗಳಲ್ಲಿ ಕೂಡ ಸಾಧ್ಯವಾದ ಮಟ್ಟಕ್ಕೆ ಅಸ್ಥಿತ್ವದಲ್ಲಿದೆ ಎಂಬ ಅಂಶವನ್ನು ಗೋಪಾಲಸ್ವಾಮಿ ಅಯ್ಯರ್ ಅವರು ತಿಳಿಸಿದರು. ಸಾಮಾಜಿಕ ಕೆಡಕುಗಳ ಮೇಲೆ ಶಿಕ್ಷಣ ಸುಧಾರಿಸುವ ಪ್ರಭಾವ ಹೊಂದಿದೆ. ಶಿಕ್ಷಣದಿಂದ ಪಂಚಮರು ನಿಶ್ಚಯವಾಗಿ ಸಾಮಾಜಿಕ ಕೆಡಕುಗಳನ್ನು ದೂರಸರಿಸುತ್ತಾರೆ. ಅದ್ದರಿಂದ ಈಗ ಇಷ್ಟು ಧೈರ್ಯದಿಂದ ಅನುಸರಿಸಿರುವ ಪ್ರಗತಿಪರ ನೀತಿಯ ಹೆಜ್ಜೆಗಳನ್ನು ಸರ್ಕಾರ ಹಿಂತೆಗೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.[೧೦]

೬.೫. ಆದಿಕರ್ನಾಟಕ ಜನಾಂಗದ ಸಹಕಾರ ಸಂಘ ಸ್ಥಾಪನೆ

ಮೈಸೂರು ಸಂಸ್ಥಾನದಲ್ಲಿ ಮೈಸೂರು ಸಹಕಾರ ಸಂಘಗಳ ನಿರ್ದೇಶಕರು ಚನ್ನಪಟ್ಟಣ ತಾಲ್ಲೂಕಿನಲ್ಲಿ ಇದ್ದಂತಹ ಮಾಲ್ಲೂರು ಪಟ್ಟಣ ಸಹಕಾರ ಸಂಘ(ನೋಂದಣಿ ಸಂಖ್ಯೆ ೯೯೭ ದಿನಾಂಕ ೧೦ ಮಾರ್ಚ್ ೧೯೧೭) ರಲ್ಲಿ ಸ್ಥಾಪನೆಗೊಂಡಿತು. ಇದನ್ನು ಮಾಲ್ಲೂರು ಪಟ್ಟಣ ಆದಿಕರ್ನಾಟಕ ಸಹಕಾರ ಸಂಘ ಎಂಬುದಾಗಿ ಬದಲಾವಣೆ ಮಾಡಲಾಯಿತು. ನೋಂದಣಿ ಸಂಖ್ಯೆ ೧೧೭ ದಿನಾಂಕ ೧೬ ಮೇ ೧೯೨೭ ರಂದು ಮರು ನಾಮಕರಣ ಮಾಡಿ ವಿಶೇಷವಾಗಿ ಆದಿಕರ್ನಾಟಕದ ಸಹಕಾರ ಸಂಘ ಸ್ಥಾಪಿಸಿ ಅದರ ಮುಖಾಂತರ ಜನಾಂಗ ಆರ್ಥಿಕವಾಗಿ ಹಿಂದುಳಿದಿದ್ದು ಅವರನ್ನೇ ಆರ್ಥಿಕವಾಗಿ ಸಬಲರನ್ನಾಗಿಸುವ ಉದ್ದೇಶದಿಂದ ಕಿರು ಸಾಲ ಸೌಲಭ್ಯ, ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು ಮುಂತಾದ ಯೋಜನೆಗಳನ್ನು ರೂಪಿಸಿ ಅದರ ಮುಖಾಂತರ ಆದಿಕರ್ನಾಟಕ ಜನಾಂಗವನ್ನು ಬಡತನದಿಂದ ಮುಕ್ತಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಸಹಕಾರಿ ಸಂಘದ ರಿಜಿಸ್ಟಾರ್ ಆದ ಎಂ.ಜಿ. ಮೆಕ್ರಿ ಅವರು ಅಧಿಸೂಚನೆ ಸಂಖ್ಯೆ: ೪೦೮೬– ಸಿ.ಎಸ್. ಕ್ಯಾಂಪ್ ಮೈಸೂರು ದಿನಾಂಕ ೨೫ ಡಿಸೆಂಬರ್ ೧೯೩೩ ರಲ್ಲಿ ಅಧಿಸೂಚನೆ ಹೊರಡಿಸಿ ಸಾಲಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಿದರು.[೧೧]

೬.೬. ಪಂಚಮರಿಗೆ ಸರ್ಕಾರಿ ಮತ್ತು ಸಾರ್ವಜನಿಕ ಬಾವಿಗಳಿಗೆ ಮುಕ್ತ ಪ್ರವೇಶ

ಸರ್ಕಾರಿ ಆದೇಶ ಸಂಖ್ಯೆ ಖ .೨೮೬೪–೯೨೩–೪–೧೨೧೧–೩೨–೨ ದಿನಾಂಕ ೧೫ ಡಿಸೆಂಬರ್ ೧೯೩೩, ಬೆಂಗಳೂರು ಈ ಆದೇಶದಂತೆ ಸರ್ಕಾರಿ ಸ್ಥಳಗಳಲ್ಲಿರುವ ಬಾವಿಗಳಿಗೆ ಆದಿಕರ್ನಾಟಕ ಸಮುದಾಯದ ಸದಸ್ಯರುಗಳು ಯಾವುದೇ ನಿರ್ಬಂಧವಿಲ್ಲದೆ ಬಳಸುವಂತೆ ನಿರ್ದೇಶನ ನೀಡಲಾಯಿತು. ಸರ್ಕಾರಿ ಬಾವಿಗಳಿಗೆ ಯಾವುದೇ ವಿಷಯದಿಂದ ಆದಿಕರ್ನಾಟಕ ಸಮುದಾಯದವರು ಬಳಸದಂತೆ ತಡೆಯುವುದನ್ನು ಮಹಾರಾಜರು ವಿರೋಧಿಸಿ, ಎಲ್ಲಾ ಸರ್ಕಾರಿ

ಬಾವಿಗಳಿಗೂ ಇವರಿಗೆ ಮುಕ್ತ ಪ್ರವೇಶ ನೀಡುವ ನಿರ್ಧಾರ ಕೈಗೊಂಡರು. ನ್ಯಾಯ ಸಮ್ಮತವಾಗಿ ಎಲ್ಲರು ಬಳಸುವಂತೆ ಸೂಚಿಸಿದರು.[೨]

೬.೭. ಪಂಚಮರ ಸುಧಾರಣೆಗಾಗಿ ದುಡಿದ ಆರ್. ಗೋಪಾಲಸ್ವಾಮಿ ಅಯ್ಯರ್

ಪಾಶ್ಚಾತ್ಯ ಶಿಕ್ಷಣದ ಪರಿಣಾಮವಾಗಿ ವ್ಯಾಪಕವಾದ, ಉದಾರವಾದ, ಕ್ರೈಸ್ತ ಮಿಶನರಿಗಳ ಪ್ರಚಾರಕ್ಕೆ ಆದ ಪ್ರತಿಕೂಲ ಪ್ರತಿಕ್ರಿಯೆ ಹಾಗೂ ಈ ದೇಶದಲ್ಲಿ ಕಾಣಿಸಿಕೊಂಡ ಅಖಿಲ ಭಾರತ ಸುಧಾರಣಾವಾದಿ ಚಳವಳಿಗಳಾದ ಬ್ರಹ್ಮಸಮಾಜ, ಆರ್ಯಸಮಾಜ, ಥಿಯೊಸಾಫಿಕಲ್ ಸೊಸೈಟಿ ಮತ್ತು ರಾಮಕೃಷ್ಣ ಮಿಶನ್‌ಗಳ ಪ್ರಭಾವದಿಂದಾಗಿ ಹೋದ ಶತಮಾನದ ಅಂತ್ಯಕ್ಕೆ ಕರ್ನಾಟಕದಲ್ಲಿ ಅಸ್ಪೃಶ್ಯತಾ ನಿವಾರಣಾ ಚಳವಳಿ ಕಾಣಿಸಿಕೊಂಡಿತು. ಬ್ರಹ್ಮ ಸಮಾಜದಿಂದ ಪ್ರಭಾವಿತರಾಗಿದ್ದ ಕುದ್ಮಲ್ ರಂಗರಾಯರು ಮಂಗಳೂರಿನಲ್ಲೂ, ಗೋವಿಂದಾಚಾರ್ಯಸ್ವಾಮಿ ಎಂಬ ಧಾರ್ಮಿಕ ವೃತ್ತಿಯ ವ್ಯಕ್ತಿ ಮತ್ತು ಎಂ. ವೆಂಕಟಕೃಷ್ಣಯ್ಯನವರು ಮೈಸೂರು ನಗರದಲ್ಲೂ ಸರ್ದಾರ್ ವೀರಣಗೌಡ ಪಾಟೀಲರು ಮುಂಬೈ ಕರ್ನಾಟಕದಲ್ಲೂ ಗಾಂಧೀಯುಗಕ್ಕೆ ಪೂರ್ವದಲ್ಲೇ ಅಸ್ಪೃಶ್ಯತಾ ನಿವಾರಣೆಗೆ ದುಡಿದವರಲ್ಲಿ ಗಣ್ಯರು. ಆದರೆ ಬೆಂಗಳೂರಿನ ಆರ್. ಗೋಪಾಲಸ್ವಾಮಿ ಅಯ್ಯರ್ ಮೈಸೂರು ಸಂಸ್ಥಾನದಲ್ಲಿ ಸುಮಾರು ಮೂರು ದಶಕಗಳ ಕಾಲ ತಾವು ಸಲ್ಲಿಸಿದ ಅಪಾರ ವ್ಯಾಪಕ ಸೇವೆಯಿಂದ ಈ ಕ್ಷೇತ್ರದ ಅಗ್ರಗಣ್ಯ ಕಾರ್ಯಕರ್ತರೆನಿಸುತ್ತಾರೆ. ಪಂಚಮರಲ್ಲಿ ಅವರು ನಡೆಸಿದ ಕಾರ್ಯದಿಂದ ಅವರು 'ಪಂಚಮ' ಗೋಪಾಲಸ್ವಾಮಿ ಅಯ್ಯರ್ ಎಂದು ಹೆಸರು ಪಡೆದರು.

ದಿವಾನ್ ಆರ್. ಶೇಷಾದ್ರಿ ಅಯ್ಯರ್ ಅವರು ಥಿಯೋಸಾಫಿಕಲ್ ಸೊಸೈಟಿಯ ಸದಸ್ಯರೂ ಮಹಾ ರಾಷ್ಟ್ರದ ರಾನಡೆ, ಕರ್ವೆಯವರಂಥ ಸುಧಾಕರರಿಂದ ಪ್ರಭಾವಿತರಾದವರೂ ಆಗಿದ್ದು ಅವರ ಕಾಲದಲ್ಲಿಯೇ ಪಂಚಮರಿಗೆ ಪ್ರತ್ಯೇಕ ಶಾಲೆಯನ್ನು ತೆರೆಯಲಾಗಿತ್ತು. ಮುಂದೆ ಸೆಂಟ್ರಲ್ ಪಂಚಮ ಇನ್ಸಟಟ್ಯೂಟನ್ನು ಮೈಸೂರಲ್ಲಿ ಸ್ಥಾಪಿಸಿ ಪಂಚಮ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ನೀಡಲು ಯೋಜನೆ ಹಾಕಲಾಗಿತ್ತು. ಮೈಸೂರು, ಬೆಂಗಳೂರು, ತುಮಕೂರು, ಚಿಕ್ಕಮಗಳೂರುಗಳಲ್ಲಿ ಶಾಲೆ, ಬೋರ್ಡಿಂಗ್‌ಗಳನ್ನು ತೆರೆಯಲಾಗಿತ್ತು. ಕನಿಷ್ಠ ೨೫ ವಿದ್ಯಾರ್ಥಿಗಳಿರುವಲ್ಲಿ ಪಂಚಮರಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯುವ ಅಧಿಕಾರವನ್ನೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜುಕೇಶನ್ ಅವರಿಗೆ ನೀಡಲಾಗಿತ್ತು.[೧೩]

ಮೈಸೂರಿನ ವೆಂಕಟಕೃಷ್ಣಯ್ಯ, ಯಜಮಾನ್ ವಿರುಪಾಕ್ಷಯ್ಯ, ಮುಂದೆ ಯುವರಾಜ ಕಂಠೀರವ ನರಸರಾಜ ಒಡೆಯರು, ಇವರೆಲ್ಲ ಪಂಚಮರ ಶಿಕ್ಷಣದ ಬಗ್ಗೆ ಅಪಾರ ಶ್ರದ್ಧೆಯಿಂದ ಬೆಂಬಲ ನೀಡುತ್ತಿದ್ದರು. ಆದರೆ ಸರಕಾರದ ಈ ಯೋಜನೆಗೆ ಬೆಂಬಲ ಚಾಲನೆ ನೀಡಿ ಮೂರು ದಶಕಗಳ ಕಾಲ ದುಡಿದವರು ಆರ್. ಗೋಪಾಲಸ್ವಾಮಿ ಅಯ್ಯರ್. ಮೈಸೂರಿನ

ಸರಕಾರಿ ವಕೀಲರಾಗಿದ್ದ ರಾಮಸ್ವಾಮಿ ಅಯ್ಯರ್‌ರ ಪುತ್ರರಾದ ಇವರು ಮೈಸೂರಿನಲ್ಲಿ ೨೨-೬-೧೮೭೮ ರಲ್ಲಿ ಜನಿಸಿ, ಮುಂದೆ ಅಡ್ವೋಕೇಟ್ ಜನರಲ್ ಆದ ತಮ್ಮ ತಂದೆಯ ಜೊತೆ ಬೆಂಗಳೂರಿಗೆ ವಾಸ್ಯವ್ಯಕ್ಕೆ ಹೋಗಿರಲು, ತಮ್ಮ ತಂದೆ ತೀರಿಕೊಂಡ ನಂತರ, ತಮ್ಮ ೨೦ನೇ ವಯಸ್ಸಿನಲ್ಲಿ ತಮ್ಮ ಕಾಲೇಜು ಶಿಕ್ಷಣ ನಿಲ್ಲಿಸಿದರು. ಆಗ ಅವರ ಮದುವೆಯಾಯಿತು. ಮೊದಲ ಪತ್ನಿ ತೀರಿಕೊಂಡಾಗ ಮರುಮದುವೆ ಮಾಡಿಕೊಂಡರೂ ಅವರಿಗೆ ಮಕ್ಕಳಾಗಲಿಲ್ಲ "ಹರಿಜನರೇ ಅವರ ಮಕ್ಕಳಾಗಬೇಕೆಂದು ಬಹುಶಃ ದೈವೇಚ್ಛೆ ಇರಬೇಕು" ಎಂದು ಅವರಿಂದ ಪ್ರೋತ್ಸಾಹಿತರಾಗಿ ಮುಂದೆ ಗಣ್ಯ ಸರಕಾರಿ ನೌಕರರಾದ ವೈ.ಸಿ. ಹೊಂಬಾಳಯ್ಯ ಹೇಳಿದ್ದಾರೆ.[೧೪] ಯುವರಾಜ ನರಸಿಂಹ ರಾಜ ಒಡೆಯರೂ ಆಗ ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜುಕೇಷನ್ ಆಗಿದ್ದ ಪ್ರೊ. ಸಿ.ಆರ್. ರೆಡ್ಡಿಯವರೂ ರಾಜ್ಯದ ಇತರ ಅಧಿಕಾರಿಗಳೂ, ಮಂತ್ರಿಗಳೂ ಇವರಿಗೆ ಬೆಂಬಲವಾಗಿದ್ದರೆಂದೂ ಅವರು ಹೇಳಿದ್ದಾರೆ.

ಮೈಸೂರಿನಲ್ಲಿ ೧೯೧೩ರಲ್ಲಿ ಸ್ಥಾಪಿತವಾದ ಸೆಂಟ್ರಲ್ ಪಂಚಮ ಬೋರ್ಡಿಂಗ್ ಸ್ಕೂಲ್‌ನ ಜೊತೆ ಅವರ ಸಂಪರ್ಕವಿತ್ತು. ೧೯೧೮ರ ಸುಮಾರಿಗೆ ತುಮಕೂರ, ಚಿಕ್ಕಮಗಳೂರು, ಹಾಸನಗಳಲ್ಲಿ ಅಂಥ ಬೋರ್ಡಿಂಗ್ ಸ್ಕೂಲ್‌ಗಳು ಅವುಗಳಲ್ಲದೇ ಬೆಂಗಳೂರಲ್ಲಿ ಇವರು ಪಂಚಮರ ಶಾಲೆಗಳಿಗಾಗಿ ೧೯೨೨ರಲ್ಲಿ ಬೋರ್ಡಿಂಗ್ ಹೋಮ್ ಒಂದು ಸಿದ್ದವಾಗಿ ಮುಂದೆ ಇದನ್ನು ನರಸಿಂಹರಾಜ ಹಾಸ್ಟೆಲ್ ಎಂದು ಕರೆದರು. ೧೯೨೬ರಲ್ಲಿ ಹಾಸನದಲ್ಲಿ ಒಂದು ಪಂಚಮ ಹುಡುಗರ ಮಿಡ್ಲ್ ಸ್ಕೂಲ್ ಮತ್ತು ೧೯೨೯ರಲ್ಲಿ ಬೆಂಗಳೂರಲ್ಲಿ ಆದಿ ಕರ್ನಾಟಕ ಬೋರ್ಡಿಂಗ್ ಗರ್ಲ್ಸ್ ಸ್ಕೂಲ್ ಆರಂಭವಾದವು. "ಈ ಎಲ್ಲ ಚಟುವಟಿಕೆಗಳೆಂದರೆ ಶ್ರೀ ಅಯ್ಯರ್ ಅವರ ಸೇವೆಯ ವಿಸ್ತರಣೆಯೇ ಅಲ್ಲದೆ ಮುಂದಿನ ಅವರ ಜೀವಿತ ಕಾಲದಲ್ಲಿ ವರ್ಷಪೂರ್ತಿ ಅವರ ಪೂರ್ಣಕಾಲದ ಉದ್ಯೋಗದ ಸಂಗತಿಯಾಯಿತು"(ಹೊಂಬಾಳಯ್ಯ)[೧೫]

ಬೆಂಗಳೂರಲ್ಲಿ ೧೯೧೫ರಲ್ಲಿ ಸ್ಥಾಪನೆಗೊಂಡ ಸಿವಿಲ್ ಅಂಡ್ ಸೋಶಿಯಲ್ ಪ್ರೋಗ್ರೆಸ್ ಅಸೋಸಿಯೇಶನ್‌ಗೆ ಮುಂದೆ ಗೋಪಾಲಸ್ವಾಮಿ ಅಯ್ಯರ್ ಕಾರ್ಯದರ್ಶಿಗಳಾದರು. ಎಂ. ವೆಂಕಟಕೃಷ್ಣಯ್ಯ, ಸರ್ ಕೆ.ಸಿ. ಪುಟ್ಟಣ್ಣ ಚೆಟ್ಟಿ, ಸಿ.ಆರ್. ರೆಡ್ಡಿ, ಬಿ. ಪುಟ್ಟಯ್ಯ ಮುಂತಾದ ಗಣ್ಯರೂ ಯುವರಾಜ ನರಸಿಂಹರಾಜ ಒಡೆಯರೂ ಸಂಬಂಧ ಹೊಂದಿದ್ದ ಈ ಸಂಘ ಅವರ್ಣರನ್ನು ಉದ್ಧಾರ ಮಾಡಲು ಹೆಣಗಿತು. "ಇದೊಂದೆ ಕೆಲಸಕ್ಕೆಂದು ಈ ಸಂಘ ಜನ್ಮವೆತ್ತಿದ್ದು ಸಾರ್ಥಕ ಎಂದು ಒಪ್ಪಬೇಕು" ಎಂದು ಈ ಬಗ್ಗೆ ಡಾ. ಬಿ.ಸಿ. ರಾಧಾಕೃಷ್ಣ ಹೇಳಿದ್ದಾರಲ್ಲದೆ.[೧೬] "ಸಿವಿಕ್ ಸಂಘ ಹರಿಜನರ ಏಳಿಗೆಗಾಗಿ ಕೈಕೊಂಡ ಕಾರ್ಯಕ್ಕೆಲ್ಲ ಗೋಪಾಲ ಸ್ವಾಮಿ ಅಯ್ಯರೆ ಜೀವವಾಗಿದ್ದರು" ಎಂದಿರುವರು. ಈ ಸಂಘದ ಮುಖಾಂತರ ತಮ್ಮ ಸೈಕಲ್ ಸಹಿತ ಮೈಸೂರು ಸಂಸ್ಥಾನದಲ್ಲಿ ಎಲ್ಲಿ ಬೇಕಾದರೂ ರೈಲಿನಲ್ಲಿ ಪ್ರಯಾಣ ಮಾಡಲು

ಸರಕಾರವು ಅವರಿಗೆ ಪಾಸ್ ಒದಗಿಸಿತ್ತೆಂದು ಅವರು ತಿಳಿಸಿದ್ದಾರೆ.[೧೭] ಈ ಪಾಸು ಮೊದಲ ವರ್ಗದ ಪ್ರಯಾಣದ್ದಾಗಿತ್ತೆಂದೂ ಇದರ ವಿನಾ ಸರಕಾರದಿಂದ ಅವರಿಗೆ ವೈಯಕಿಕವಾಗಿ ಯಾವುದೇ ವೇತನ ಅಥವಾ ಸವಲತ್ತು ಇರಲಿಲ್ಲವೆಂದೂ ಹೊಂಬಾಳಯ್ಯ ಸೂಚಿಸಿದ್ದಾರೆ.[೧೮]

ಹರಿಜನರಿಗಾಗಿ ಶಾಲೆ ತೆರೆಸುವುದು, ಹರಿಜನರಿಗಾಗಿ ಸಹಕಾರ ಸಂಘ ತೆರೆಸುವುದು ಸಿವಿಕ್ ಸಂಘದ ಪ್ರಯತ್ನಗಳಲ್ಲಿ ಸೇರಿತ್ತು. ಹರಿಜನರು ತಾವಾಗಿ ಮುಂದೆ ಬಂದು ಬೆಂಗಳೂರಲ್ಲಿ ಮಾಡಿಕೊಂಡ ಸಹಕಾರ ಸಂಘದ ಮೊದಲ ಅಧ್ಯಕ್ಷರನ್ನು ಸರಕಾರವು ಪ್ರಜಾಪ್ರತಿನಿಧಿ ಸಭೆಗೂ ಜಿಲ್ಲಾ ಬೋರ್ಡಿಗೂ ಸದಸ್ಯರಾಗಿ ನಾಮಕರಣ ಮಾಡಿತ್ತು.[೧೯] ೧೯೧೯ರಲ್ಲಿ ಪಂಚಮರ ಮಹಾಸಭೆಯೊಂದನ್ನು ಸಿವಿಕ್ ಸಂಘವು ಮೈಸೂರಲ್ಲಿ ಸೇರಿಸಿತ್ತು. ಹರಿಜನರಿಗೆ ಭಜನೆಗಾಗಿ ಹಾರ್ಮೋನಿಯಂ, ತಬಲಾಗಳನ್ನು ಸಿವಿಕ್ ಸಂಘ ಒದಗಿಸಿತ್ತು. ಭಜನೆ ಸಂಘಗಳ ಕಟ್ಟಡಕ್ಕೆ ಕೂಡ ಹಣ ಒದಗಿಸಿತ್ತು.[೨೦]

ಹರಿಜನರನ್ನು ಮಳವಳ್ಳಿಯ ಸಾರ್ವಜನಿಕ ಕೆರೆಗೆ ನೀರು ತುಂಬಲು ಕರೆದೊಯ್ದು ಯಶಸ್ವಿಯಾದ ಅಯ್ಯರ್ ಅವರು ಪ್ರಾಣಾಪಾಯದ ಭಯವನ್ನೂ ಎದುರಿಸಿದರು.[೨೧]

"ಗೋಪಾಲಸ್ವಾಮಿ ಅಯ್ಯರ್‌ರುಹೊರಹೊರಟಾಗ ಅವರ ಹಿಂದೆ ಐದಾರು ಹರಿಜನ ವಿದ್ಯಾರ್ಥಿಗಳು ಇಲ್ಲದಿದ್ದ ದಿನವೇ ಇಲ್ಲ. ಈ ವಿದ್ಯಾರ್ಥಿಗಳಿಗೆ ಒಳ್ಳೆಯ ನೌಕರಿಯನ್ನು ಕೊಡಿಸುವವರೆಗೆ ಬಗೆ ಬಗೆಯ ಸಹಾಯ ಅಯ್ಯರ್‌ರವರಿಂದ ದೊರಕುತ್ತಿತ್ತು" ಎಂದು ಒಬ್ಬರು ಹೇಳಿದ್ದರೆ.[೨೨] "ಶಾಲಾ ಕಾಲೇಜುಗಳು ಆರಂಭವಾದಾಗ (ಹರಿಜನ) ವಿದ್ಯಾರ್ಥಿಗಳ ಎಡ್ಮಿಷನ್ ಬಗ್ಗೆ ಅವರು ಓಡಾಟ ನಡೆಸುತ್ತಿದ್ದರೆ, ಮುಂದೆ ಆ ವಿದ್ಯಾರ್ಥಿಗಳ ಬೋರ್ಡಿಂಗ್, ಲಾಡ್ಜಿಂಗ್, ಪುಸ್ತಕ, ಸ್ಕಾಲರ್‌ಶೀಪ್, ಬಟ್ಟೆ ವ್ಯವಸ್ಥೆ ಇವುಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು" ಎಂದು ಇನ್ನೊಬ್ಬರು ಹೇಳಿದ್ದಾರೆ. ಇದೇ ರೀತಿ ಈ ವಿದ್ಯಾರ್ಥಿಗಳಿಗೆ ಕ್ರೀಡೆ, ಗ್ರಂಥಾಧ್ಯಯನ, ಶೈಕ್ಷಣಿಕ ಪ್ರವಾಸಗಳಿಗೆ ಕರೆದೊಯ್ಯುವುದು, ಇಂಥ ಕೆಲಸಗಳಲ್ಲೂ ಅವರು ತೊಡಗಿರುತ್ತಿದ್ದರು.[೨೩]

ಬೇರೆ ಬೇರೆ ಊರುಗಳಲ್ಲಿ. ಓದುತ್ತಿದ್ದ ವಿದ್ಯಾರ್ಥಿಗಳ ಪತ್ರಗಳಿಗೆ ಉತ್ತರ ಬರೆಯುವುದು, ಅವರಿಗೆ ಪತ್ರಗಳ ಮಾತಿನ ಮೂಲಕ ಹುರುಪು ತುಂಬುವುದು ಈ ಎಲ್ಲ ಕೆಲಸ ಮಾಡುತ್ತಿದ್ದ ಅವರ ಜೇಬು ವಿವಿಧ ಪತ್ರಗಳಿಂದ ತುಂಬಿದ ಒಂದು ಕಿರು ಪೋಸ್ಟಾಫೀಸಿನಂತೆ ಇರುತ್ತಿತ್ತು.[೨೪] ಹಾಸ್ಟೆಲ್‌ಗಳ ಆಡಳಿತದಲ್ಲಿ ಅವ್ಯವಹಾರ ನಡೆಯದಂತೆ ಕೂಡ ಅವರು ನೋಡಿಕೊಳ್ಳುತ್ತಿದ್ದರು.

ಯಾವ ವಿದ್ಯಾರ್ಥಿ ಯಾವ ಇಲಾಖೆಯಲ್ಲಿ ಮುಂದೆ ಉದ್ಯೋಗ ಪಡೆಯಲು ಯೋಗ್ಯ, ಎಂದು ಮೊದಲೇ ಯೋಚಿಸಿ, ಎಸ್.ಎಸ್.ಎಲ್.ಸಿ. ಆದವರು, ಆಗದವರು ಇವರನ್ನೆಲ್ಲ ಬೇರೆ ಬೇರೆ ಸರಕಾರ ಇಲಾಖೆಯಲ್ಲಿ ಸೇರಿಬಹುದೆಂದು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರನ್ನು

ಮನ ಒಲಿಸಿ ಕೆಲಸ ಕೊಡಿಸುತ್ತಿದ್ದರು. ಅಯ್ಯರ್ ಅವರೊಂದಿಗೆ ಇದ್ದ, ತಮ್ಮ ವಿದ್ಯಾರ್ಥಿಗಳಿಗೆ ನಿರುದ್ಯೋಗದ ಸಮಸ್ಯೆ ಎಂದೂ ಕಾಡಲಿಲ್ಲ. ಅವರ ವಿನಂತಿಯನ್ನು ಯಾವುದೇ ಅಧಿಕಾರಿ ತಳ್ಳಿ ಹಾಕಲಿಲ್ಲ. ಏಕೆಂದರೆ ಅವರ ಆಕರ್ಷಕ ವ್ಯಕ್ತಿತ್ವ ಮನವೊಲಿಸುವ ಹಾಗೂ ತರ್ಕಬದ್ಧ ಮಾತುಗಾರಿಕೆ ಅವರದ್ದಾಗಿತ್ತು, ಎಂದು ಹೊಂಬಾಳಯ್ಯ ಹೇಳಿದ್ದಾರೆ.[೨೫] ತಾವು ಪದವೀಧರರಾಗಿ ಪುಣೆಯಿಂದ ಕಾನೂನು ಶಿಕ್ಷಣ ಮುಗಿಸಿ ಬಂದಾಗ ೧೯೪೨ರಲ್ಲಿ ಅಯ್ಯರ್ ಅವರು ಅನಾರೋಗ್ಯ ದಿಂದ ಹಾಸಿಗೆ ಹಿಡಿದಿದ್ದರು. ತಮ್ಮನ್ನು ಗೆಜೆಟೆಡ್ ಹುದ್ದೆಗೆ ನೇಮಿಸಬೇಕೆಂದು ದಿವಾನರಿಗೆ ಅಯ್ಯರ್ ಪತ್ರ ಬರೆದರೆಂದು ಹೊಂಬಾಳಯ್ಯ ತಿಳಿಸಿದ್ದಾರೆ.[೨೬] ಅಲ್ಲದೆ ಅಸ್ಪೃಶ್ಯರಿಗೆ ಸವಲತ್ತು ನೀಡುವ ಬಗೆಗಿನ ಎಲ್ಲ ಸರಕಾರಿ ಕಾನೂನು ನಿಯಮ, ಆಜ್ಞೆಗಳ ಒಂದು ಸಂಗ್ರಹವೇ ಸದಾಕಾಲ ಅವರಲ್ಲಿದ್ದು ಕಾಲಕಾಲಕ್ಕೆ ತಾವು ಭೇಟಿಯಾಗುವ ಅಧಿಕಾರಿಗಳ ಗಮನಕ್ಕೆ ಅವುಗಳನ್ನು ಅವರು ತರುತ್ತಿದ್ದರಂತೆ.[೨೭]

ಅಹರ್ನಿಶಿ ಸೈಕಲ್‌ನಲ್ಲಿ ಓಡಾಡುತ್ತ ಬೆಳಗ್ಗೆ ಹಾಸ್ಟೆಲ್‌ಗಳಿಗೆ ಭೇಟಿ, ಗ್ರಂಥಾಲಯಗಳ ಭೇಟಿ, ಮಧ್ಯಾಹ್ನ ೨ ರಿಂದ ೫ ರವರೆಗೆ ಸರ್ಕಾರಿ ಆಫೀಸು, ಫಾಕ್ಟರಿಗಳಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಕೆಲಸ ಕೊಡಿಸುವ ಕಾಯಕವನ್ನು ಮಾಡುತ್ತಿದ್ದರೆಂದು ಇನ್ನೊಬ್ಬ ಲೇಖಕರು ಹೇಳಿದ್ದಾರೆ.[೨೮]

ಬೆಂಗಳೂರಲ್ಲಿ ೧೯೩೨ರಲ್ಲಿ ಅವರು ಆದಿಕರ್ನಾಟಕ ಏಡೆಡ್ ಹಾಸ್ಟೆಲ್ ಆರಂಭಿಸಿದರು. ಮುಂದೆ ಅವರ ಮರಣಾಂತರ ಆ ಹಾಸ್ಟೆಲ್‌ಅನ್ನು ಆರ್. ಗೋಪಾಲಸ್ವಾಮಿ ಅಯ್ಯರ್ ವಿದ್ಯಾರ್ಥಿ ನಿಲಯವಾಗಿ, ನಂತರ ೧೯೭೧ರಲ್ಲಿ ರೆಸಿಡೆನ್ಸಿಯರ್ ಹೈಸ್ಕೂಲಾಯಿತು.[೨೯] ಇದಲ್ಲದೆ ೧೯೩೦ರಲ್ಲಿ ಇವರು ಆರಂಭಿಸಿದ್ದ ಮಾಗಡಿ ರಸ್ತೆಯ ಆದಿಜಾಂಬದ ವಿದ್ಯಾರ್ಥಿ ನಿಲಯಕ್ಕೆ[೩೦] ೧೯೩೪ರಲ್ಲಿ ಗಾಂಧೀಜಿ ಶಿಲಾನ್ಯಾಸ ಮಾಡಿದ್ದು ಇಂದಿಗೂ ಅದು ಬಾಪೂಜಿ ವಿದ್ಯಾರ್ಥಿ ನಿಲಯ ವೆಂದು ಪ್ರಸಿದ್ಧವಾಗಿದೆ.

ತಮ್ಮ ಮೂರು ದಶಕಗಳ ದೀರ್ಘ ಸೇವೆಯ ನಂತರ ೧೯-೦೩-೧೯೪೩ರಲ್ಲಿ ಅಯ್ಯರ್ ತೀರಿಕೊಂಡರು. ಅಯ್ಯರ್ ಅವರು ಅಸ್ಪೃಶ್ಯರಿಗಾಗಿ ಅಷ್ಟೇ ಅಲ್ಲ, ಇತರ ನೊಂದ ಜನರಿಗಾಗಿಯೂ ದುಡಿಯುತ್ತಿದ್ದರು. ತಾವು "ದಿಸ್ಯಾಡ್" (ಅಸ್ಪೃಶ್ಯರು) "ದಿಬ್ಯಾಡ್"(ಅಪರಾಧಿ ಕೈದಿಗಳು) ಹಾಗೂ "ದಿಮ್ಯಾಡ್"(ಮಾನಸಿಕ ಆಸ್ಪತ್ರೆಯ ರೋಗಿಗಳು) ಇವರಿಗಾಗಿ ದುಡಿಯುವೆ ಎಂದು ಅವರು ಎನ್ನುತ್ತಿದ್ದರೆಂದೂ ಆದರೆ ಇತರ ಕೆಲಸಗಳಿಗಿಂತ ಅಸ್ಪೃಶ್ಯರ ಬಗ್ಗೆ, ಅವರ ಕಾಯಕ ಕೇಂದ್ರಿಕೃತವಾಗಿತ್ತೆಂದೂ ಹೊಂಬಾಳಯ್ಯ ಹೇಳುತ್ತಾರೆ.

ಅಸ್ಪೃಶ್ಯರ ನಡುವೆ ಅವರು ಮಾಡುತ್ತಿದ್ದ ಕೆಲಸದಿಂದ ತಾವು ಸ್ವಜನರಿಂದ ಅವಹೇಳನಕ್ಕೆ ಒಳಗಾದರೂ ತಾವು ಮಾತ್ರ ತಮ್ಮ ಕೆಲಸದ ಬಗ್ಗೆ ತೀರ ದಿಟ್ಟರೂ ಹಟವಾದಿಗಳೂ ಆಗಿದ್ದು

ತಾವು ಆಯ್ದುಕೊಂಡ ತಮ್ಮ ಜೀವನದ ಮಿಶನ್ ಬಗ್ಗೆ, ಅವರು ತೀರ ದೃಢರಾಗಿದ್ದರೆಂದೂ, ಅವರೊಬ್ಬ ಸಜ್ಜನರು 'ದೇವರೇ ಸೃಷ್ಟಿಸಿದ ಸಜ್ಜನರು' ಎಂದು ಡಾ. ಡಿ.ವಿ.ಜಿ. ಅವರ ಬಗ್ಗೆ ಹೇಳಿದ್ದಾರೆ.[೩೧]

೬.೮. ದಲಿತರ ಉದ್ಧಾರಕ್ಕಾಗಿ ದುಡಿದ ಗೋವಿಂದಾಚಾರ್ಯಸ್ವಾಮಿ

ಮೈಸೂರು ಸಂಸ್ಥಾನದಲ್ಲಿ ಜನತೆಯ ರಾಜಕೀಯ ಜಾಗೃತಿಗೆ ಹಲವಾರು ಚಳುವಳಿಗಳು ಪ್ರೇರಣೆಯಾದವು. ರಾಷ್ಟ್ರ ಪ್ರೇಮದ ಭಾವನೆಗಳನ್ನು ಬೆಳೆಸಿಕೊಂಡಿದ್ದ ಅನೇಕ ಮಹನೀಯರು ಈ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು, ಹರಿಜನರ ಉದ್ಧಾರಕ್ಕಾಗಿ ಮಹಾತ್ಮಾ ಗಾಧೀಜಿಯವರು ಮೈಸೂರು ಸಂಸ್ಥಾನದಲ್ಲಿ ಕೈಗೊಂಡ ಪ್ರವಾಸಿಗಳಿಂದ ಪ್ರಭಾವಿತರಾದ ಅನೇಕರು ೧೯೩೦ರ ದಶಕದಲ್ಲಿ ಹರಿಜನರ ಅಧ್ಯಯನಕ್ಕಾಗಿ ಪ್ರಗತಿದಾಯಕ ಪ್ರಯತ್ನಗಳನ್ನು ನಡೆಸಿದರು.

ಮೈಸೂರು ಜಿಲ್ಲೆಯಲ್ಲಿ ಹರಿಜನೋದ್ಧಾರಕ್ಕಾಗಿ ಸಕ್ರಿಯವಾಗಿ ಶ್ರಮಿಸಿದ ಪ್ರಮುಖರೆಂದರೆ ಎಂ. ವೆಂಕಟಕೃಷ್ಣಯ್ಯ, ತಡಗೂರು ರಾಮಚಂದ್ರರಾಯರು, ಆರ್ ಗೋಪಾಲಸ್ವಾಮಿ ಅಯ್ಯರ್, ಎಂ, ಎನ್ ಜೋಯಿಸ್ ಮತ್ತು ಗೋವಿಂದಾಚಾರ್ಯಸ್ವಾಮಿಯವರು. ಹರಿಜನರಿಗೆ ಆರೋಗ್ಯದ ಮಹತ್ವದ ಬಗ್ಗೆ ತಿಳಿವಳಿಕೆ ನೀಡುವುದು ಶಾಲೆಗಳಿಗೆ ಮತ್ತು ದೇವಸ್ಥಾನಗಳಿಗೆ ಪ್ರವೇಶಾವಕಾಶ ಒದಗಿಸುವುನು, ಕ್ರೈಸ್ತಮತಾಂತರ ವಿರೋಧ ಮುಂತಾದ ಚಟುವಟಿಕೆಗಳನ್ನು ಇವರು ಹಮ್ಮಿಕೊಂಡರು. ಕ್ರೈಸ್ತ ಪಾದ್ರಿಗಳ ಒತ್ತಾಯಕ್ಕೆ ಒಳಗಾಗಿ ಕ್ರೈಸ್ತ ಧರ್ಮ ಸ್ವೀಕರಿಸಿದ ಮೈಸೂರು ಜಿಲ್ಲೆಯ ಅನೇಕ ದಲಿತ ಹಿಂದೂಗಳ 'ಶುದ್ದ' ಕಾರ್ಯವನ್ನು ತಗಡೂರು ರಾಮಚಂದ್ರರಾಯರು ಕೈಗೊಂಡರು. ಈ ಕಾರ್ಯಗಳಲ್ಲಿ ತಗಡೂರು ರಾಮಚಂದ್ರರಾಯರಿಗೆ ಬೆಂಬಲಿಗರಾಗಿ ನಿಂತು ಅತ್ಯಂತ ಉತ್ಸಾಹದಿಂದ ದಲಿತ ಹಿಂದೂಗಳ 'ಶುದ್ದ' ಮತ್ತು ಮುದ್ರಾಧಾರಣೆ ನಡೆಸಿಕೊಟ್ಟವರು ಮೈಸೂರು ನಗರದ ನಿವಾಸಿಗಳಾದ ಗೋವಿಂದಾಚಾರ್ಯ ಸ್ವಾಮಿಯವರು.

ಅಲ್ಕೊಂಡವಿಲ್ಲಿ ಗೋವಿಂದಾಚಾರ್ಯರು ೧೮೫೭ರಲ್ಲಿ ಜನಿಸಿದರು. ಬೆಂಗಳೂರಿನ 'ಸ್ಕೂಲ್ ಆಫ್ ಎಂಜಿನಿಯರಿಂಗ್ ಮತ್ತು ನ್ಯಾಚುರಲ್ ಸೈನ್ಸ್'ನಲ್ಲಿ ೧೮೭೮ರಲ್ಲಿ ಪ್ರಥಮ ರ್‍ಯಾಂಕ್ ಗಳಿಸಿ ಉತ್ತೀರ್ಣರಾದರು, ನಂತರ ಮೈಸೂರು ಸರ್ಕಾರದ ಮರಮತ್ ಇಲಾಖೆಯಲ್ಲಿ ಎಂಜಿನಿಯರ್ ಆಗಿ ನೇಮಕ ಹೊಂದಿದರು. ಇವರ ತಂದೆ ಎ. ಶ್ರೀನಿವಾಸ ಅಯ್ಯಂಗಾರರು ಮೈಸೂರು ಸರ್ಕಾರದ ಅಧೀನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಹಾಗೂ ಮೈಸೂರಿನ ಮಹಾರಾಜರಾಗಿದ್ದ ಹತ್ತನೆಯ ಚಾಮರಾಜೇಂದ್ರ ಒಡೆಯರವರಿಗೆ ಕೆಲವು ಕಾಲ ಇಂಗ್ಲಿಷ ಪಾಠ ಹೇಳುತ್ತಿದ್ದು., ಅಂಗ್ರೇಜಿ ಅಯ್ಯಂಗಾರ್ ಎಂದೇ ಅರಮನೆಯಲ್ಲಿ ಪರಿಚಿತರಾಗಿದ್ದರು. ಇವರು ತೆಂಗಲೆ ಪಂಗಡಕ್ಕೆ ಸೇರಿದ್ದ ಶ್ರೀ ವೈಷ್ಣವ ಬ್ರಾಹ್ಮಣರು. ಶ್ರೀ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತದಿಂದ ಪ್ರಭಾವಿತರಾಗಿದ್ದ ಗೋವಿಂದಾಚಾರ್ಯರು ಕೆಲವು ಗ್ರಂಥಗಳನ್ನು

ರಚಿಸಿದ್ದಾರೆ. ಇದರಲ್ಲಿ ಪ್ರಮುಖವಾದವು 'ಲೈಫ್ ಆಫ್ ರಾಮಾನುಜ, 'ಎ ಮೆಟಫಿಸಿಕ್ಸ್ ಆಫ್‌ಮಿಸ್ಟಿಸಿಸಮ್', 'ಹೋಲಿಲೈಫ್ ಆಫ್‌ದಿ ಆಳ್ವಾರ್ಸ್' 'ಐಡ್ಸ್ ಆಫ್ ಹಿಂದ್ ಮತ್ತು ದಿ ಡಿವೈನ್ ವಿಸ್ಡಮ್ ಆಫ್ ದಿ ದ್ರಾವಿಡಾ ಸೇಂಟ್ಸ್' ದಯಾಪ್ರವೃತ್ತಿಯುಳ್ಳ ಈ ಕುಟುಂಬದಲ್ಲಿ ಇವರೊಡನೆ ಇಂತಹ ಕಾರ್ಯಗಳಲ್ಲಿ ಪಾಲ್ಗೊಂಡವರು ಇವರ ಪತ್ನಿ ವೇದನಾಯಕಮ್ಮ. ಆಚಾರ್ಯರ ಸಹೋದರಿ ವೆಂಕಟಕೃಷ್ಣಮ್ಮ. ಮತ್ತು ಆಕೆಯ ಪತಿ ಶ್ರೀನಿವಾಸ ಅಯ್ಯಂಗಾರ್ಯರು ಸಹ ಬೆಂಗಳೂರಿನಲ್ಲಿ ಅನಾಥ ಬಾಲಕಿಯರ ಏಳಿಗೆಗಾಗಿ 'ಶ್ರೀನಿವಾಸಮಂದಿರಂ ಚಾರಿಟೀಸ್' ಎಂಬ ಸೇವಾ ಸಂಸ್ಥೆಯನ್ನು ಸ್ಥಾಪಿಸಿ ಶ್ರಮಿಸಿದವರು.

ಮೈಸೂರು ಜಿಲ್ಲೆಯಲ್ಲಿ ೧೯೨೫ರಲ್ಲಿ ಸಮಾಜ ಸುಧಾರಣೆಯ ಆಂದೋಲನದಲ್ಲಿ ಜರುಗಿದ ಮುಖ್ಯ ಘಟನೆಯೆಂದರೆ 'ಕಣಿಯರು' ಎಂಬ ಜಾತಿಯ ಜನರಿಗೆ ಮುದ್ರಾಧಾರಣೆ ಮಾಡಿ ಉತ್ತಮ ಹಿಂದೂಗಳಾಗಿ ಪರಿವರ್ತಿಸುವ ಕಾರ್ಯ, ಈ ಜನರಿಗೆ ಮುದ್ರಾಧಾರಣೆ ಮಾಡಿ ಇವರ ಸಾಮಾಜಿಕ ಅಭ್ಯುದಯಕ್ಕಾಗಿ ಗೋವಿಂದಾಚಾರ್ಯರು ವಹಿಸಿದ ಶ್ರಮ ಅಪಾರ. ತಿರುಮಕೂಡ್ಲು ನರಸೀಪುರದಲ್ಲಿ ಸೆಪ್ಟಂಬರ್ ೫ ೧೯೨೫ ರಂದು ಗಾಂಧಿ ಮೈದಾನದಲ್ಲಿ ಜರುಗಿದ ಅಖಿಲ ಕರ್ನಾಟಕ ಕಣಿಯರು ಮಹಾಸಮ್ಮೇಳನದ ಅಧ್ಯಕ್ಷತೆಯನ್ನು ಮೈಸೂರಿನ ಎಂ. ವೆಂಕಟಕೃಷ್ಣಯ್ಯ ವಹಿಸಿದ್ದರು. ಕಣಿಯರ ಜನಾಂಗಕ್ಕೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲು ಕಾತರರಾಗಿದ್ದ ಮಹನೀಯರಾದ ಎ. ಗೋವಿಂದಾಚಾರ್ಯಸ್ವಾಮಿ, ತಿ.ತಾ. ಶರ್ಮ ಜಿ.ಆರ್.ಎಸ್. ರಾವ್, ವಿ.ಎಸ್. ಸಂಜೀವರಾವ್, ಪಿ. ಆರ್. ರಾಮಯ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಗರಂ ರಂಗಯ್ಯ, ತಗಡೂರು ರಾಮಚಂದ್ರರಾವ್ ಮುಂತಾದವರು ಇಲ್ಲಿ ಸೇರಿದ್ದರು. ಕಣಿಯ ಜನಾಂಗದ ೨೬ ಜನರುಳ್ಳ ಒಂದು ಸಭೆಯನ್ನು ಆಯ್ದು, ಪ್ರತಿ ಸದಸ್ಯನೂ ತನ್ನ ಕ್ಷೇತ್ರದ ಕಣಿಯರ ಅಭಿವೃದ್ದಿಗೆ ಶ್ರಮಿಸಬೇಕೆಂದು ಮತ್ತು ವರದಿಯನ್ನು ತಗಡೂರು ರಾಮಚಂದ್ರರಾಯರಿಗೆ ಸಲ್ಲಿಸಬೇಕೆಂದು ಇಲ್ಲಿ ನಿರ್ಣಯವಾಯಿತು. ಕಣಿಯರು ಪಡೆದ ಈ ಸಾಮಾಜಿಕ ನ್ಯಾಯವನ್ನು ಜನತೆಯ ಗಮನಕ್ಕೆ ತರಲು ಫೆಬ್ರವರಿ ೧೪, ೧೯೨೬ ರಂದು ಬೆಂಗಳೂರಿನ ಮುಖ್ಯ ಬೀದಿಗಳಲ್ಲಿ ಕಣಿಯರು ಭಜನೆ ಮಾಡಿಕೊಂಡು ಮೆರವಣಿಗೆಯಲ್ಲಿ ಹೋಗಿ ಗವಿಗಂಗಾಧರೇಶ್ವರ ಸ್ವಾಮಿ, ಶ್ರೀನಿವಾಸ ಮಂದಿರ ಮುಂತಾದ ದೇವಸ್ಥಾನಗಳಲ್ಲಿ, ತೀರ್ಥ, ಪ್ರಸಾದ ತೆಗೆದುಕೊಳ್ಳುವ ಕಾರ್ಯಕ್ರಮ ಏರ್ಪಟ್ಟಿತ್ತು, ಈ ಕಾರ್ಯಕ್ರಮದ ಮುಂದಾಳತ್ವ ವಹಿಸಿದವರು ಗೋವಿಂದಾಚಾರ್ಯಸ್ವಾಮಿ ಮತ್ತು ಇವರ ಪತ್ನಿ ವೇದನಾಯಕಮ್ಮ, ಬೆಂಗಳೂರಿನಲ್ಲಿ ಕಣಿಯರಿಗೆ ದೊರೆತ ಸ್ಥಾನಮಾನಗಳನ್ನು ಇತರ ಪ್ರದೇಶಗಳಲ್ಲೂ ದೊರಕಿಸಿಕೊಡಬೇಕೆಂಬುದು ಮರುದಿನ ಗಾಂಧಿ ಮೈದಾನದಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಗಿ ಈ ಕಾರ್ಯಕ್ಕಾಗಿ ಗೋವಿಂದಾಚಾರ್ಯಸ್ವಾಮಿ ಕೆ. ಸಂಪದ್ಗಿರಿರಾವ್, ಸಿಂಗಮ್ಮ, ದೇವುಡು ನರಸಿಂಹಶಾಸ್ತ್ರಿ

ನೇಮಿಸಲ್ಪಟ್ಟರು. ನಂತರ ಬೆಂಗಳೂರಿನಲ್ಲಿ ಜುಲೈ ೨೫.೧೯೨೬ ರಂದು "ಕಣಿಯರಸಂಘ" ಏರ್ಪಟ್ಟು ಅಗಸ್ಟ್ ೧೦ ೧೯೨೬ ರಂದು ಅದು ಸರ್ಕಾರದಲ್ಲಿ ರಿಜಿಸ್ಟರಾಯಿತು.

ಗೋವಿಂದಾಚಾರ್ಯರು ಮೊಟ್ಟಮೊದಲು ೧೯೨೫ರಲ್ಲಿ ಕೈಗೊಂಡ ಮುದ್ರಾಧಾರಣ ಕಾರ್ಯಕ್ರಮ ಮೈಸೂರು ಜಿಲ್ಲೆಯ ತಗಡೂರಿನ ಕಿರಗುಂದ ಗ್ರಾಮದಲ್ಲಿ ಸಂತೆಯೊಂದರ ದಿನ ಬೃಹತ್ ಸಮಾರಂಭದೊಂದಿಗೆ ಪ್ರಾರಂಭವಾಯಿತು. ಸುತ್ತಮುತ್ತಲಿನ ೧೩-೧೪ ಗ್ರಾಮಗಳಿಂದ ಮುದ್ರಾಧಾರಣೆಗಾಗಿ ಕಣಿಯರು ಬಂದು ಸೇರಿದ್ದರು. ಸರ್ಕಾರದ ಅಧಿಕಾರಿಗಳಾದ ಡೆಪ್ಯೂಟಿ ಕಮೀಷನರ್ ಪೋಲಿಸ್ ಸೂಪರಿಂಟೆಂಡೆಂಟ್ ಮತ್ತಿತರ ಸಿಬ್ಬಂದಿಯು ಬಿಗಿ ಕಾವಲು ಬೇರೆ, ಕ್ರೈಸ್ತ ಪಾದ್ರಿ ಪಾದರ್ ಸಾಡೆಯವರು ಸಹ ಅಂದು ಹಾಜರಿದ್ದರು, ಇಂತಹ ಬಿಗುವಿನ ವಾತಾವರಣದಲ್ಲಿ ಸಮಾರಂಭಕ್ಕೆ ಬಂದಿದ್ದ ಎಲ್ಲ ಕಣಿಯರಿಗೂ ಗೋವಿಂದಾಚಾರ್ಯರು ಮುದ್ರಾಧಾರಣೆ ಮಾಡಿಸಿ ನೆರೆದ ಜನ ಸಮೂಹಕ್ಕೆ ಊಟ ಹಾಕಿಸಿ ಸರ್ಕಾರಿ ಅಧಿಕಾರಿಗಳಿಗೆ ದಿಗ್ಭ್ರಾಂತಿಯನ್ನುಂಟು ಮಾಡಿದರು, ಇಲ್ಲಿಂದ ಮುಂದೆ ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕುಗಳಲ್ಲಿ ಆಚಾರ್ಯರು ಕಣಿಯರ ಮುದ್ರಾಧಾರಣಾ ಕಾರ್ಯದಲ್ಲಿ ಯಶ್ವಸಿಯಾದರು. ಯಳಂದೂರು ತಾಲೂಕಿನಲ್ಲಿ ಆಚಾರ್ಯರಿಗೆ ಆಶ್ರಮ ಕೊಡಬಾರದೆಂಬ ಸರ್ಕಾರಿ ಆಜ್ಞೆ ಜಾರಿಯಲ್ಲಿ ಇದ್ದರೂ ಇವರಿಗೆ ರಾತ್ರಿ ಆಶ್ರಯ ನೀಡಿದ ಶ್ರೀನಿವಾಸಯ್ಯನೆಂಬ ಶ್ಯಾನುಭೋಗರು ಸರ್ಕಾರದ ಕೋಪಕ್ಕೆ ತುತ್ತಾಗಿ ಕೆಲಸದಿಂದಲೇ ತೆಗೆಯಲ್ಪಟ್ಟರು, ಇದರಿಂದ ಹೆದರಿದ ಕಣಿಯರು ಮುದ್ರಾಧಾರಣೆಗೆ ಬರದೇ ನದಿಯ ದಡದಲ್ಲೇ ಇರುವುದನ್ನು ನೋಡಿದ ಆಚಾರ್ಯರು ನದಿ ದಡಕ್ಕೆ ಹೋಗಿ ತೋಟ ಒಂದರ ಮಧ್ಯ ಕುಳಿತು ಮುದ್ರಾಧಾರಣೆ ಕಾರ್ಯ ನೆರವೇರಿಸಿದರು,

ಮುಂದೆ ತಿರುಮಕೂಡ್ಲು ನರಸೀಪುರದಲ್ಲಿ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮೇ ೧೬, ೧೯೨೬ ರಂದು ಕಣಿಯರಿಗೆ ತೀರ್ಥ, ಪ್ರಸಾದ ನೀಡುವಂತೆ ಆಗಿದ್ದು ಸಮಾಜ ಸುಧಾರಣೆಯ ಒಂದು ದೊಡ್ಡ ಹಂತ. ಅಂದು ಆಚಾರ್ಯರು ನೆರವೇರಿಸಿದ ಕಣಿಯರ ಮುದ್ರಾಧಾರಣೆ ಮತ್ತು ದೇವಸ್ಥಾನದ ಪ್ರವೇಶಕ್ಕೆ ಪರೋಕ್ಷವಾಗಿ ಬೆಂಬಲ ಸಿಕ್ಕಿದ್ದು, ಮೈಸೂರಿನ ಸಬ್ ಡಿವಿಜನಲ್ ಅಫೀಸರ್ ಆಗಿದ್ದ ಶ್ರೀ ವೈಷ್ಣವ ಮತಸ್ಥರಾದ ಅಪ್ಪಣ್ಣಯ್ಯಂಗಾರ್ಯರು ಕಣಿಯರಿಗೆ ತೀರ್ಥ, ಪ್ರಸಾದ ಹಂಚಿದ ನಂತರ ದೇವಸ್ಥಾನದ ಮುಂದೆ ಇದ್ದ ಮೈದಾನದ ಮಂಟಪದಲ್ಲಿ ಕಣಿಯರ ಸತ್ಯಾಗ್ರಹ ೮ ದಿನಗಳ ಕಾಲ ನಡೆಯಿತು. ಅದೇ ಸಮಯದಲ್ಲಿ ಜರುಗಿದ ಪ್ರಜಾಪ್ರತಿನಿಧಿ ಸಭೆಯಲ್ಲಿ ಹೊಸಕೊಪ್ಪ ಕೃಷ್ಣರಾಯರು, ನೀಲಗಿರಿ ಸಂಜೀವಯ್ಯ, ಬೈಯಣ್ಣ, ಎಂ. ಸಿ. ಅಂಗೇಗೌಡ, ಎಸ್. ಸಿ ಮಲ್ಲಯ್ಯ ಮುಂತಾದ ಸದಸ್ಯರು ಕಣಿಯರ ಸತ್ಯಾಗ್ರಹ ಮತ್ತು ದೇವಸ್ಥಾನದ ಪ್ರವೇಶ ಕುರಿತು ಚರ್ಚೆ ನಡೆಸಿದರು. ಅನೇಕ ಸದಸ್ಯರು

ತಿರುಮಕೂಡ್ಲು ನರಸೀಪುರಕ್ಕೆ ಬಂದು ಸತ್ಯಾಗ್ರಹಿಗಳನ್ನು ಭೇಟಿ ಮಾಡಿ ಸರ್ಕಾರದ ಗಮನ ಸೆಳೆಯುವ ಭರವಸೆ ಕೊಟ್ಟ ಮೇಲೆ ಸತ್ಯಾಗ್ರಹ ನಿಲ್ಲಿಸಲ್ಪಟ್ಟಿತು.

ಗೋವಿಂದಾಚಾರ್ಯರು ಶ್ರೀರಾಮಾನುಜರ ಸಿದ್ಧಾಂತಗಳನ್ನು ಆಚರಣೆಗೆ ತಂದ ಮಹಾನುಭಾವರು. ಮಹಾಪಂಡಿತರಾದ ಇವರಿಗೆ ಶ್ರೀ ಪರಕಾಲಮಠದ ಅಗ್ರ ತೀರ್ಥದ ಮರ್ಯಾದೆ ಇತ್ತು. 'ಕಣಿಯರ ಸಾಮಾಜಿಕ ಸುಧಾರಣೆಯನ್ನು ಕೈಗೆತ್ತಿಕೊಂಡು, ಕಣಿಯರ ನೆಲೆಗಳಿಗೆ ಭೇಟಿ ಕೊಟ್ಟು, ಅವರಿಗೆ ಮುದ್ರಾಧಾರಣೆ ದೇವಸ್ಥಾನದ ಪ್ರವೇಶಾವಕಾಶ ಮತ್ತು ತೀರ್ಥ, ಪ್ರಸಾದಗಳನ್ನು ವಿನಿಯೋಗಿಸುವ ಕ್ರಾಂತಿಕಾರಿ ಆಂದೋಲನದಲ್ಲಿ ಭಾಗವಹಿಸಿ ದುಡಿದ ಕೀರ್ತಿ ಆಚಾರ್ಯರಿಗೆ ಸಲ್ಲುತ್ತದೆ.

ಗೋವಿಂದಾಚಾರ್ಯರ ನಿಧನ(೧೯೩೨)ದ ನಂತರ ದಲಿತರ ಮುದ್ರಾಧಾರಣ ಕಾರ್ಯವನ್ನು ಇವರ ಮೊಮ್ಮಗ ಎಂ. ಯಮುನಾಚಾರ್ಯರು ಮುಂದುವರೆಸಿದರು. ಮೈಸೂರು ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಯಮುನಾಚಾರ್ಯರು ಗಾಂಧೀಜಿಯವರ ಕುರಿತು ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ನಗರದ ಹಾರ್ಡ್ವಿಕ್ ವೃತ್ತದ ಬಳಿಯಿರುವ ಇವರ ನಿವಾಸಕ್ಕೆ ಆಚಾರ್ಯರಿಂದ ಮುದ್ರಾಧಾರಣೆ ಪಡೆದು ಶ್ರೀವೈಷ್ಣವರಾದ ಇವರ ಶಿಷ್ಯರ ವಂಶಸ್ಥರು ಇಂದಿಗೂ ಗೋಕುಲಾಷ್ಟಮಿ ಮತ್ತು ವರಮಹಾಲಕ್ಷ್ಮಿ ಹಬ್ಬಗಳಂದು ಆಗಮಿಸಿ ಆಚಾರ್ಯರ ವಂಶಸ್ಥರಿಂದ ಆರ್ಶೀವಾದ ಪಡೆಯುವ ಪದ್ಧತಿಯಿದೆ.

ಅಡಿಟಿಪ್ಪಣಿಗಳು

೧. Document No.1 – 7937 – UP 16-34 -146

೨. Document No.1,6348- UP11-38-102. Date 6 feb 1939.

೩. -do-

೪. Document NO. 1. 3995.up 12. 50-52. Date. 13 Nov.1930.

೫. ಡಾಕ್ಯೂಮೆಂಟ್ ಸಂಖ್ಯೆ ೯೬೧೮–ವಿ.ಪಿ.೪೪–೮೩ ನೋಟಿಫಿಕೇಷನ್ ದಿನಾಂಕ ೨೬– ಮಾರ್ಚ ೧೯೪೫.

೬. ಅದೇ ಪುಟ ೨೮೨.

೭. ಅದೇ ಪುಟ ೩೦೦.

೮. ಡಾಕ್ಯೂಮೆಂಟ್ ಸಂಖ್ಯೆ ಜಿ.೨೫೫೩–೬೦೮–೪೦೧–೬೬–೬೫–೧. ದಿನಾಂಕ ೨೩ ಅಕ್ಟೋಬರ್ ೧೯೨೫.

೯. ಮೇಲಿನದೆ ಪುಟ ೪.

೧೦. ಮೇಲಿನದೆ ಪುಟ ೮.

೧೧. ಡಾಕ್ಯೂಮೆಂಟ್ ಸಂಖ್ಯೆ, ೪೦೮೬-ಸಿಎಸ್ ಕ್ಯಾಂಪ್ ಮೈಸೂರು.

೧೨. ಡಾಕ್ಯೂಮೆಂಟ್ ಸಂಖ್ಯೆ- ೧೨-೨೮೬೪-೯೨೩-೪-೧೨೧೧-೩೨-೨ ದಿನಾಂಕ ಡಿಸೆಂಬರ್ ೧೫-೧೯೩೩.

• ಮುಖ್ಯ ಸಂಪಾದಕ, ಕರ್ನಾಟಕ ಗ್ಯಾಸೆಟಿಯರ್, ಕಾವೇರಿ ಭವನ, ಬೆಂಗಳೂರು-೯

೧೩. ಮೈಸೂರ್ರ್ಯಾಂಡಂ ಆನ್ ಎಜುಕೇಷನ್ ಇನ್ ಮೈಸೂರ್, ಪುಟ ನಂ: ೨೮-೨೯

೧೪. ವೈ. ಸಿ. ಹೊಂಬಾಳಯ್ಯ "ಎ ಡಾಯ್ನಮಿಕ್ ಸೋಶಿಯಲ್‌ವರ್ಕರ್-ಆರ್. ಗೋಪಾಲಸ್ವಾಮಿ ಅಯ್ಯರ್, ಆರ್. ಗೋಪಾಲಸ್ವಾಮಿ ಅಯ್ಯರ್ ರೆಸಿಡೆನ್ಷಿಯಲ್ ಹೈಸ್ಕೂಲು, ಶ್ರೀರಾಮಪುರ, ಬೆಂಗಳೂರು, ಸೊವೆನೀರ್ ೧೯೭೨.

೧೫. ಅದೇ ಪುಟ ೧೦-೧೧

೧೬. ಬಿ.ಸಿ. ರಾಧಾಕೃಷ್ಣ, ನನ್ನ ತಂದೆ ಬೆಂಗಳೂರು ೧೯೪೯, ಪುಟ ನಂ: ೧೪೪

೧೭. ಮೇಲೆ ಹೇಳಿದ ಸೋವೆನೀರ್, ಪುಟ ನಂ: ೧೦

೧೮. ರಾಧಾಕೃಷ್ಣ ಹೇಳಿದ್ದು ಪುಟ ನಂ: ೧೪೫

೧೯. ಅದೇ ಪುಟ ೧೪೬

೨೦. ಹೊಂಬಾಳಯ್ಯ, ಮೇಲೆ ಹೇಳಿದ್ದ ಸೊವೆನೀರ್ ಪುಟ ನಂ: ೧೪೩.

೨೧. ರಾಧಾಕೃಷ್ಣ, ಮೇಲೆ ಹೇಳಿದು, ಪುಟ ನಂ: ೧೦

೨೨. ಅದೇ ಪುಟ

೨೩. ಅದೇ ಪುಟ-೧೦

೨೪. ಅದೇ ಪುಟ-೧೦

೨೫. ಅದೇ ಪುಟ-೧೧

೨೬. ಸಿ.ಆರ್. ತಿಪ್ಪೇಸ್ವಾಮಿ, "ಅಸ್ಪೃಶ್ಯತೆ ಅಳಿಸಲು ಯತ್ನಿಸಿದ ಅಯ್ಯರ್", ಯಾತ್ರಿಕ(ಪತ್ರಿಕೆ) ದೀಪಾವಳಿ ಸಂಚಿಕೆ-೧೯೮೨ ಪುಟ-೩೯

೨೭. ಎ. ಕೃಷ್ಣಪ್ಪ, "ನಾ ಕಂಡ ಸೇವಾದೀಕ್ಷ ಪಿತಾಮಹಶ್ರೀ ಡಿ. ವೆಂಕಟಯ್ಯ", ಮೇಲೆ ಹೇಳಿದ ಸೊವೆನೀರ್ ಪುಟ-೩೮-೪೦

೨೮. ಹೊಂಬಾಳಯ್ಯ, ಮೇಲೆ ಹೇಳಿದ ಸೊವೆನೀರ್ ಪುಟ-೧೨

೨೯. ಅದೇ ಪುಟ-೧೦

೩೦. ಅದೇ. ಡಾ. ಡಿ.ವಿ.ಗುಂಡಪ್ಪ, "ಆರ್ ಗೋಪಾಲಸ್ವಾಮಿ ಅಯ್ಯರ್, ಎ ಕ್ಯಾಂಡ್ಲ್, ಇನ್ ಡಾರ್ಕ್‌ನೆಸ್"ಪುಟ-೨೫

೩೧. ಕರ್ಮಯೋಗಿ ಸಂ. ಎಂ.ಎನ್. ಜೋಯಿಸ್ 'ಸ್ವಾತಂತ್ರ್ಯ ಸಂಗ್ರಾಮದ ಸಂಸ್ಮೃತಿಗಳು' ಭಾಗ-೨ ಸಂ. ಡಾ. ಸೂರ್ಯನಾಥ ಕಾಮತ್

ಅಧ್ಯಾಯ: ಏಳು

ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಮತ್ತು ದಲಿತ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳು

ಅಧ್ಯಾಯ: ಏಳು

ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಮತ್ತು ದಲಿತ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳು

ವಿದ್ಯಾಭ್ಯಾಸ ವಿಸ್ತರಣೆಯಲ್ಲಿ ಅಂದಿನ ಮೈಸೂರು ಸಂಸ್ಥಾನವು ಅತ್ಯುನ್ನತ ಮಟ್ಟದಲ್ಲಿದ್ದಿತು. ನಾಗರಿಕರಿಗೆ ಮೂಲ ಶಿಕ್ಷಣ ಕೊಡುವುದು ಪ್ರಗತಿಯ ಮಾರ್ಗವೆಂದು ಮಹಾರಾಜರು ಅರಿತಿದ್ದರು. ಗುಣಮಟ್ಟ ಮತ್ತು ವಿದ್ಯಾ ಸಂಸ್ಥೆಗಳ ಸಂಖ್ಯೆ ಎರಡರಲ್ಲೂ ಮೈಸೂರು ಭಾರತದ ಇತರೆ ಎಲ್ಲಾ ರಾಜ್ಯಗಳಿಗಿಂತ ಅನುಕೂಲಕರ ಸ್ಥಿತಿಯಲ್ಲಿತ್ತು. ೧೮೮೧ರಿಂದಲೂ ಪ್ರಜಾಪ್ರತಿನಿಧಿ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣಗಳಲ್ಲಿ ರಾಜ್ಯವು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ, ಅದರಲ್ಲೂ ವಿದ್ಯಾಸಂಸ್ಥೆಗಳ ಸಂಖ್ಯೆ ಮತ್ತು ಅದರ ಲಾಭ ಪಡೆದ ವಿದ್ಯಾರ್ಥಿಗಳ ಸಂಖ್ಯೆಯ ಪ್ರಸ್ತಾಪವಿದ್ದುದನ್ನು ಕಾಣಬಹುದಾಗಿದೆ. ಆಶ್ಚರ್ಯಕರ ವಿಚಾರವೆಂದರೆ, ಎಲ್ಲಾ ದಿವಾನರುಗಳೂ ವಿಶಾಲ ತಳಹದಿಯ ಮೇಲೆ ವಿದ್ಯಾಭ್ಯಾಸ ಪದ್ಧತಿಯನ್ನು ರೂಪಿಸಲು, ಅದರಲ್ಲೂ ತಾಂತ್ರಿಕ ಮತ್ತು ವೃತ್ತಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಅಗತ್ಯಕ್ಕೆ ತಮ್ಮ ಭಾಷಣಗಳಲ್ಲಿ ಒತ್ತು ಕೊಡುತ್ತಿದ್ದುದನ್ನು ಕಾಣಬಹುದಾಗಿದೆ.[೧]

೧೮೮೧ ರಲ್ಲಿ ದಿವಾನ್ ರಂಗಾಚಾರ್ಲುರವರು ಸಭೆಯಲ್ಲಿ ಭಾಷಣ ಮಾಡುತ್ತಾ ವಿವೇಚನೆ ಇಲ್ಲದೆ ಶಾಲೆಗಳನ್ನು ಹೆಚ್ಚಿಸುತ್ತ ಹೋಗುವುದಕ್ಕಿಂತ ಬೋಧನಾ ಮಟ್ಟವನ್ನು ಉತ್ತಮಗೊಳಿಸಬೇಕಾದ ಅಗತ್ಯಕ್ಕೆ ಒತ್ತು ಕೊಟ್ಟಿದ್ದರು. ೧೮೮೪ ರಲ್ಲಿ ದಿವಾನ್ ಶೇಷಾದ್ರಿ ಐಯ್ಯರ್‌ರವರು ಹೋಬಳಿ ಶಾಲೆಗಳು ವಿಫಲವಾಗಿರುವುದರಿಂದ ಅವನ್ನು ಲೋಕಲ್ ಬೋರ್ಡ್‌ಗಳು ವಹಿಸಿಕೊಂಡು ಸರ್ಕಾರ ಕೊಡುವ ಹಣದ ಸಹಾಯದಿಂದ ಅವುಗಳನ್ನು ನಿರ್ವಹಿಸಬೇಕೆಂದು ತಿಳಿಸಿದರು.

ವೈದ್ಯಕೀಯ ಮತ್ತು ಶಿಕ್ಷಣ ಸಂಸ್ಥೆಗಳ ಪುನರ್ ವ್ಯವಸ್ಥೆಗಳ ಬಗ್ಗೆ ೧೮೮೪ ರಲ್ಲಿ ದಿವಾನರು ಪ್ರಸ್ತಾಪಿಸಿದರು.

ಸದಸ್ಯರು ಇಂಗ್ಲಿಷ್ ಶಾಲೆಗಳಿಗಾಗಿ ತಮಗಿರುವ ಗೀಳನ್ನು ಅನೇಕ ವರ್ಷಗಳಲ್ಲಿ ಪ್ರಧಾನವಾಗಿ ವ್ಯಕ್ತಪಡಿಸಿದರು. ೧೮೮೫ ರಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಹೋಬಳಿಗಳಲ್ಲಿ ಕೂಡ ಇಂಗ್ಲಿಷ್ ಶಿಕ್ಷಣಕ್ಕಾಗಿ ಒತ್ತಾಯವಿದ್ದಿತು. ೧೮೮೫ ರಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಇಂಗ್ಲಿಷ್ ಶಾಲೆಗಳನ್ನು ತೆರೆಯಲು ಕೋರಿಕೆ ಬಂದಿತು. ಈ ಕೋರಿಕೆಯನ್ನು ಪರಿಶೀಲಿಸಲು ಭರವಸೆಯನ್ನು ಕೊಟ್ಟು ದಿವಾನರು ಕನ್ನಡ ಮತ್ತು ಸಂಸ್ಕೃತ ಕಲಿಯಬೇಕಾದ ಅಗತ್ಯಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟರು.

೧೮೮೫ ರಲ್ಲಿ ಅರಕಲಗೂಡು ವೆಂಕಟಕೃಷ್ಣಯ್ಯ ಚೆಟ್ಟಿಯವರು ಪರೀಕ್ಷೆಗಳನ್ನು ಇಂಗ್ಲಿಷ್ ಜೊತೆಗೆ ಸ್ಥಳೀಯ ಭಾಷೆ (ಕನ್ನಡ)ಯಲ್ಲಿಯೂ ನಡೆಸಬೇಕೆಂದು ಒತ್ತಾಯಪಡಿಸಿದರು. ದೊಡ್ಡ ಊರುಗಳಲ್ಲಿ ಬಾಲಕಿಯರ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಅನುದಾನ ಕೊಡುವುದಾಗಿ ದಿವಾನರು ತಿಳಿಸಿದರು. ಅದೇ ವರ್ಷ ದಿವಾನರಿಗೆ ಸಲ್ಲಿಸಿದ ಮನವಿಯಲ್ಲಿ, ದೊಡ್ಡನಗರಗಳಾದ ಮೈಸೂರು, ಬೆಂಗಳೂರುಗಳಲ್ಲಿ ಕಲಾಶಾಲೆಗಳನ್ನು ಸ್ಥಾಪಿಸಬೇಕೆಂದು ಕೋರಲಾಗಿದ್ದಿತು. ಸರ್ಕಾರಕ್ಕೆ ಇದರಿಂದ ಅಧಿಕ ವೆಚ್ಚವಾಗುವುದಾದರೂ ಈ ಸಲಹೆಯನ್ನು ಪರಿಶೀಲಿಸುವುದಾಗಿ ದಿವಾನರು ತಿಳಿಸಿದರು.[೨] ಒಂದು ವಯಸ್ಸಿನವರೆಗೆ ಎಲ್ಲಾ ಬಾಲಕರಿಗೂ ಸಾಮಾನ್ಯ ಜ್ಞಾನದ ಶಿಕ್ಷಣ ಶಾಲೆಗಳಲ್ಲಿ ಕೊಡಬೇಕೆಂದೂ, ಒಂದು ಮಟ್ಟದ ವಯಸ್ಸನ್ನು ಮಟ್ಟದವರು, ಸಾಮರ್ಥ್ಯ ತೋರಿದಲ್ಲಿ ಅರ್ಹವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ವಿದ್ಯಾಭ್ಯಾಸ ಮುಂದುವರೆಸಲು ಅವಕಾಶ ಮಾಡಿಕೊಡಬೇಕೆಂಬ ಸಲಹೆಯೂ ಬಂದಿತು. ಈ ಸಲಹೆಯು ತುಂಬಾ ಅರ್ಥಪೂರ್ಣ ವಾಗಿದ್ದರೂ, ಇದನ್ನು ಅನುಷ್ಠಾನಕ್ಕೆ ತರುವುದು ಬಹಳ ಕಷ್ಟ ಎಂದು ದಿವಾನರು ತಿಳಿಸಿದರು.

ತಾಲ್ಲೂಕು ಶಾಲೆಗಳಲ್ಲಿ ಅತಿ ಹೆಚ್ಚಿನ ಶುಲ್ಕ ಹಾಕಲಾಗುತ್ತಿದೆಯೆಂದು ೧೮೮೫ ರಲ್ಲಿ ದೂರಲಾಯಿತು. ದಿವಾನರು ಇದನ್ನು ಒಪ್ಪದೆ ಕೇವಲ ಬಡತನದ ಆಧಾರದ ಮೇಲೆ ವಿವೇಚನೆ ಇಲ್ಲದೆ ವಿದ್ಯಾರ್ಥಿಗಳನ್ನು ಉಚಿತವಾಗಿ ಶಾಲೆಗೆ ಸೇರಿಸಿಕೊಳ್ಳುವುದು ಅಪೇಕ್ಷಣೀಯವಲ್ಲವೆಂದರು. ಕಲಿಯಲು ವಿಶೇಷ ಆಸಕ್ತಿಯನ್ನು ತೋರುವ ಬಡ ಬಾಲಕರನ್ನು ಉಚಿತವಾಗಿ ಸೇರಿಸಿಕೊಳ್ಳಲು ತಮ್ಮ ಅಕ್ಷೇಪವಿಲ್ಲವೆಂದರು.

೧೮೮೬ರಲ್ಲಿ ದಿವಾನರ ಭಾಷಣದ ಮೇಲಿನ ಚರ್ಚೆಯಲ್ಲಿ ರಾತ್ರಿ ಶಾಲೆಗಳನ್ನು ತೆರೆಯಬೇಕೆಂಬ ಸಲಹೆಯನ್ನು ಮಾಡಲಾಯಿತು. ಇಂದಿನಂತೆಯೇ ಅಂದೂ ಶಾಲಾಕಟ್ಟಡಗಳ ಕೊರತೆ ಇದ್ದಿತೆಂಬುದು ಇದರಿಂದ ಸ್ವಯಂ ಸ್ಪಷ್ಟ. ನಗರದಲ್ಲಿನ ಕಾರ್ಮಿಕರಿಗಾಗಿ ರಾತ್ರಿ ಶಾಲೆಗಳನ್ನು ತೆರೆಯಲು ಕೆಲ ಸದಸ್ಯರು ಸೂಚಿಸಿದರು. ಈ ವಿಚಾರವನ್ನು ಪರಿಶೀಲಿಸುವುದಾಗಿ

ದಿವಾನರು ತಿಳಿಸಿದರು. ೧೮೮೬ ರಲ್ಲಿ ಲಾರ್ಡ್ ಢಫರಿನ್‌ರವರು ಮೈಸೂರಿಗೆ ಭೇಟಿ ನೀಡಿದ್ದರು. ರಾಜ್ಯದಲ್ಲಿ ಆಗಿರುವ ವಿದ್ಯಾಭ್ಯಾಸ ಪ್ರಗತಿ ಬಗ್ಗೆ ಅವರು ತುಂಬಾ ಪ್ರಶಂಸಿಸಿದರು.

"ತಾವು ವಿದ್ಯಾಭ್ಯಾಸದ ಬಗ್ಗೆ ಪ್ರಸ್ತಾಪಿಸಿದ್ದು ನನಗೆ ಬಹಳ ಸಂತೋಷವನ್ನುಂಟು ಮಾಡಿದೆ. ಅದರ ಬಗ್ಗೆ ಮನಃಪೂರ್ವಕವಾಗಿ ನನ್ನ ಸಂತೋಷವನ್ನು ವ್ಯಕ್ತಪಡಿಸಲು ನನಗೊಂದು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಈ ವಿಷಯದಲ್ಲಿ ಈ ರಾಜ್ಯದಲ್ಲಿರುವ ಗಾಢವಾದ ಆಸಕ್ತಿಯು ಸ್ಪಷ್ಟ ಕುರುಹುಗಳನ್ನು ವಿದ್ಯಾಭ್ಯಾಸದ ಪ್ರಗತಿಗಾಗಿ ಧಾರೆ ಎರೆದಿರುವ ಜಾಣ ಶಕ್ತಿಯನ್ನೂ ಎಲ್ಲೆಲ್ಲೂ ಕಂಡು ನನಗೆ ಬಹಳ ಸಂತೋಷವಾಗಿದೆ. ನಾನು ರಸ್ತೆಯಲ್ಲಿ ಹಾದು ಬರುವಾಗ ಸುಮಾರು ಕಾಲುಮೈಲಿಗಳಿರಬಹುದು, ರಸ್ತೆಯ ಇಕ್ಕೆಲದಲ್ಲೂ ೮-೧೦ ಸಾಲುಗಳಲ್ಲಿ ತಮ್ಮ ಉಪಾಧ್ಯಾಯರುಗಳ ನೇತೃತ್ವದಲ್ಲಿ ನಿಂತಿದ್ದ ಯುವಕರನ್ನು ನೋಡಿದಾಗ, ನನಗೆನ್ನಿಸಿತು ನೀವು ಶ್ರೀಮಂತ ಭವಿಷ್ಯಕ್ಕೆ ಎಂದೆಂದೂ ನಿಲ್ಲುವ ವಿಶಾಲವಾದ ಹಾಗೂ ಆಳವಾದ ಅಡಿಪಾಯನ್ನು ಹಾಕುತ್ತಿರುವಿರೆಂದು, ಸಾಮಾನ್ಯ ವಿದ್ಯಾಭ್ಯಾಸ ವಿಚಾರದಲ್ಲಿ ನೀವು ಮಾಡಿರುವ ಸಾಧನೆಯ ಸಾಕ್ಷ್ಯವನ್ನು ನೋಡಿಯೇ ನನಗೆ ಬಹಳ ತೃಪ್ತಿಯಾಯಿತು. ಆದರೆ ನನಗೆ ಕಂಡು ಬಂದ ಮತ್ತೊಂದು ದೃಶ್ಯದಿಂದ ಇನ್ನೂ ಹೆಚ್ಚಿಗೆ ತೃಪ್ತಿಯಾಗಿದೆ. ಬಹುಶಃ ಭಾರತದ ಬೇರೆಲ್ಲೂ ಈ ದೃಶ್ಯ ಕಂಡು ಬರಲಾರದು. ಕುಲೀನ ಕುಟುಂಬದ ಹೆಣ್ಣುಮಕ್ಕಳು ಅದೇ ಪ್ರಶಂಸಾರ್ಹ ವ್ಯವಸ್ಥೆಗೆ ಸೇರಿ ಸಾಲುಸಾಲಾಗಿ ನಿಂತಿದ್ದುದನ್ನು ಕಂಡು ನನಗೆ ಇನ್ನೂ ಹೆಚ್ಚಿನ ಆನಂದವಾಗಿದೆ. ಯೂರೋಪಿನ ಅತ್ಯಂತ ಮುಂದುವರೆದ ನಗರಗಳಲ್ಲಿ ಜ್ಞಾನಾರ್ಜನೆಗೆ, ಅನುಭವ ವಿಸ್ತರಣೆಗೆ, ತಿಳುವಳಿಕೆಯನ್ನು ಶಕ್ತಗೊಳಿಸುವುದಕ್ಕೆ ಇರುವಷ್ಟೇ ವಿಸ್ತಾರವಾದ ಅವಕಾಶಗಳು ಈ ಬಾಲಕಿಯರಿಗಿವೆ, ಎಂದು ಅವರು ಹೇಳಿದರು.[೩]

ಸರ್ಕಾರವು ವಿದ್ಯಾಭ್ಯಾಸ ವಿಚಾರವನ್ನು ಅತ್ಯಂತ ಪ್ರಮುಖವಾಗಿ ಪರಿಗಣಿಸುತ್ತದೆಂದು ದಿವಾನರು ೧೮೮೬ ರಲ್ಲಿ ಹೇಳಿದರು. ಎಲ್ಲ ವರ್ಗದ ಜನರಿಗೂ ದೊರೆಯುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಊನಗೊಳ್ಳದಂತೆ ನಡೆಸಿಕೊಂಡು ಬರುವುದು ಸರ್ಕಾರದ ಗುರಿಯಾಗಿದೆ. ಸರ್ಕಾರವು ದೇಶಿಯ ಹಾಗೂ ಪುರಾತನವಾದ ಉತ್ತಮ ಭಾಷೆಗಳ ವಿದ್ವತ್‌ಪೂರ್ಣ ಅಧ್ಯಯನವನ್ನು ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ವಿಸ್ತರಿಸುವುದನ್ನು ಯುವಕರಿಗೆ ವೃತ್ತಿಶಿಕ್ಷಣಗಳಾದ ವೈದ್ಯಕೀಯ ಇಂಜನಿಯರಿಂಗ್ ಇತ್ಯಾದಿಗಳಲ್ಲಿ ಶಿಕ್ಷಣ ಕೊಡುವುದನ್ನು ಬಯಸುತ್ತದೆ ಎಂದರು. ವ್ಯವಸ್ಥಿತ ಪುರಾತನ ಸಂಶೋಧನೆ ಬೆಂಗಳೂರಿನಲ್ಲಿ ಪ್ರಾರಂಭವಾಗಿದೆ ಎಂದು ದಿವಾನರು ತಿಳಿಸಿದರು.

ಇಂಗ್ಲಿಷ್ ಮತ್ತು ಸಂಸ್ಕೃತ ಶಾಲೆಗಳಿಗಾಗಿ ಬೇಡಿಕೆಗಳು ಬಂದವು. ಇಂತಹ ಶಾಲೆಗಳಿಗೆ ಬೇಡಿಕೆಗಳು ಬಂದಾಗ, ದಿವಾನರು ಪ್ರಧಾನವಾಗಿ ದೇಶೀಯ ಭಾಷೆಯಲ್ಲಿ ಪೂರ್ಣ ಜ್ಞಾನ

ಪಡೆಯಲು ಗಮನಕೊಡಬೇಕೆಂದೂ, ಉಳಿದ ವೇಳೆ ಶಕ್ತಿ ಮತ್ತು ಹಣವನ್ನು ಮಾತ್ರ ಇಂಗ್ಲಿಷ್ ಮತ್ತು ಸಂಸ್ಕೃತದಲ್ಲಿ ಜ್ಞಾನವನ್ನು ಗಳಿಸಲು ಬಳಸಬೇಕೆಂಬ ಹೇಳುತ್ತಿದ್ದರು. ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಇಂಗ್ಲಿಷ್ ಶಾಲೆಗಳನ್ನು ಪ್ರಾರಂಭಿಸಬೇಕೆಂಬ ಬೇಡಿಕೆಗೆ ದಿವಾನರು ಉತ್ತರವಿತ್ತು ಆದಷ್ಟು ಮಟ್ಟಿಗೆ ಅದನ್ನು ಮಾಡಲಾಗುವುದೆಂದೂ, ಆದರೆ ರಾಜ್ಯದ ಒಳಭಾಗಗಳಲ್ಲಿರುವ ಶಾಲೆಗಳಿಗೆ ಕನ್ನಡ ಕಲಿಸುವ ಉಪಾಧ್ಯಾಯರುಗಳ ನೇಮಕ ಬಹಳ ಮುಖ್ಯ ಎಂದೂ ಹೇಳುತ್ತಿದ್ದರು. ತಾವು ಹೋಬಳಿಗಳಲ್ಲಿ ಕನ್ನಡ ಶಾಲೆಗಳ ಬದಲು ಸಂಸ್ಕೃತ ಶಾಲೆಗಳನ್ನು ಆರಂಭಿಸಬೇಕೆಂಬ ಸಲಹೆಯ ಪರ ಇಲ್ಲವೆಂದು ಸಂಸ್ಕೃತ ಶಾಲೆಗಳನ್ನು ಆರಂಭಿಸಬೇಕೆಂಬ ಸಲಹೆಯ ಪರ ಇಲ್ಲವೆಂದು ಸಂಸ್ಕೃತ ಮತ್ತು ಕನ್ನಡ ಕೃತಿಗಳ ಸಂಗ್ರಹಕ್ಕಾಗಿ ಒಂದು ವಿದ್ವಾಂಸರ ಮಂಡಳಿಯನ್ನು ರಚಿಸಬೇಕೆಂಬ ಬೇಡಿಕೆಗೆ ದಿವಾನರು, ಈ ಕಾರ್ಯವನ್ನು ಖಾಸಗಿಯವರು ಮಾಡುವಂತಹದು, ಅಗತ್ಯವಾದಲ್ಲಿ ಸರ್ಕಾರ ಅನುದಾನ ಕೊಡುವುದೆಂದರು.

ಕಳೆದ ಎರಡು ವರ್ಷಗಳಲ್ಲಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಶೇಕಡ ೨೦ ರಷ್ಟು ಹೆಚ್ಚಿದೆ ಎಂದು ದಿವಾನರು ೧೮೮೮ ರಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು. ಜನರು ಶಾಲಾಶುಲ್ಕವನ್ನು ಕೊಡಲು ಒಪ್ಪಿಕೊಂಡಿರುವುದು ಅವರಿಗೆ ವಿದ್ಯಾಭ್ಯಾಸದಲ್ಲಿರುವ ಆಸಕ್ತಿಯ ಸಂಕೇತವಾಗಿದೆ ಎಂದರು. ದೇಶೀಯ ಭಾಷೆಯ ಶಾಲೆಗಳ ಸ್ಥಳೀಯ ಪರೀಕ್ಷೆಗಳು ಅತ್ಯಂತ ದಕ್ಷತೆಯಿಂದ ಕೂಡಿದ್ದು ಮೇಲ್ಮಟ್ಟದಲ್ಲಿದೆ. ಪೂನಾ ಮತ್ತು ಮದರಾಸುಗಳಲ್ಲಿರುವ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಮೈಸೂರಿನ ವಿದ್ಯಾರ್ಥಿಗಳು ಮೊದಲ ಮತ್ತು ದ್ವಿತೀಯ ಸ್ಥಾನಗಳನ್ನು ಗಳಿಸಿದರು. ಇದರಿಂದಾಗಿ ಇವರು ಬೊಂಬಾಯಿಯ ಲೋಕೋಪಯೋಗಿ ಇಲಾಖೆಯಲ್ಲಿ ಉದ್ಯೋಗವನ್ನು ಖಾತರಿಯಾಗಿ ಪಡೆಯಲು ಅರ್ಹರಾಗಿದ್ದಾರೆ ಎನ್ನುವ ವಿಷಯವನ್ನು ಪ್ರಸ್ತಾಪಿಸಿದರು. ಮೈಸೂರಿನ ಮಹಾರಾಣಿಯವರ ಪ್ರೌಢಶಾಲೆ ಯಶಸ್ವಿಯಾಗಿದ್ದು ಇತರೆ ಸ್ಥಳಗಳಿಂದಲೂ ಶಾಲೆಗಳ ಪ್ರಾರಂಭಕ್ಕೆ ಬೇಡಿಕೆಗಳು ಬರುತ್ತಿವೆ. ಪಾಳೇಗಾರ ಪಿಂಚಣಿದಾರರಿಗೆ ಮತ್ತು ಮಹಮ್ಮದ್ದೀಯರಿಗೆ ಮಹಾರಾಜರು ವಿಶೇಷ ವಿದ್ಯಾರ್ಥಿ ವೇತನಗಳನ್ನು ಸ್ಥಾಪಿಸಿದರು.[೪] ಉಚ್ಚ ಶಿಕ್ಷಣ ಪಡೆಯುವ ಅವಕಾಶಗಳನ್ನು ಬಳಸಿಕೊಳ್ಳಲು ಮುಸ್ಲಾಂನರು ಈವರೆಗೆ ಮುಂದೆ ಬಾರದ ಬಗ್ಗೆ ದಿವಾನರು ವಿಷಾದ ವ್ಯಕ್ತಪಡಿಸಿದರು.

ಹೋಬಳಿಗಳಲ್ಲಿರುವ ಶಾಲೆಗಳ ಉಪಾಧ್ಯಾಯರುಗಳು ತಮ್ಮ ಕೆಲಸದ ಬಗ್ಗೆ ಅಲಕ್ಷ್ಯ ತೋರುತ್ತಿದ್ದಾರೆಂಬ ದೂರು ಮಾಡಲಾಯಿತು. ಇದನ್ನು ಸರಿಪಡಿಸಲು ಅವರ ಕೆಲಸದ ಬಗ್ಗೆ ಪಟೇಲರು ಅಥವಾ ಶಾನುಬೋಗರು ದೃಢೀಕರಣ ಪತ್ರ ಕೊಟ್ಟ ನಂತರವೇ ಅವರಿಗೆ ವೇತನ ಕೊಡಬೇಕೆಂಬ ಸಲಹೆ ಬಂದಿತು. ದಿವಾನರು ಈ ಸಲಹೆಯನ್ನು ತಿರಸ್ಕರಿಸಿದರು. ಲೋಕಲ್ ಫಂಡ್ ಶಾಸನದಂತೆ ಸಮಿತಿಗಳನ್ನು ರಚಿಸಿ, ಅವುಗಳ ಮೇಲ್ವಿಚಾರಣೆಗೆ ಶಾಲೆಗಳನ್ನು ಒಪ್ಪಿಸುವುದಕ್ಕೆ

ತಮ್ಮ ಒಪ್ಪಿಗೆ ಇದೆ ಎಂದು ದಿವಾನರು ತಿಳಿಸಿದರು. ರೆವಿನ್ಯೂ ಅಧಿಕಾರಿಗಳು ಶಾಲೆಗಳ ಆಡಳಿತದ ಬಗ್ಗೆ ಹೆಚ್ಚಿನ ಉತ್ಸಾಹ ಮತ್ತು ಆಸಕ್ತಿ ತೋರಬೇಕೆಂದು ಅವರು ಹೇಳಿದರು. ಹಿಂದೂ ಯುವಕರಲ್ಲಾಗುತ್ತಿರುವ ಧಾರ್ಮಿಕ ಅವನತಿ ತಪ್ಪಿಸಲು ಹೆಚ್ಚು ವೇದ ಶಾಲೆಗಳನ್ನು ಸ್ಥಾಪಿಸುವ ಬೇಡಿಕೆಯನ್ನು ದಿವಾನರು ತಿರಸ್ಕರಿಸಿ ಬೆಂಗಳೂರು ಮತ್ತು ಮೈಸೂರಿನಲ್ಲಿ ಅಂತಹ ಒಂದೊಂದು ಶಾಲೆಗಳಿವೆ ಎಂದೂ ಅವುಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವೇನೂ ಇಲ್ಲವೆಂದು ಹೇಳಿದರು.

೧೮೮೮ ರಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಇಂಗ್ಲಿಷ್ ಶಾಲೆ ಪ್ರಾರಂಭಿಸಲು ಬೇಡಿಕೆ ಬಂದಿತು. ದಿವಾನರು ಈ ಬೇಡಿಕೆಯನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸಿ ದೇಶಿಯ ಭಾಷೆಯನ್ನು ಕಲಿಯುವುದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಸೂಚಿಸಿದರು. ೧೮೮೯ ರಲ್ಲಿ ದಿವಾನರ ಭಾಷಣದ ಮೇಲಿನ ಚರ್ಚೆಯ ಕಾಲದಲ್ಲಿ ಪ್ರತಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ರಾತ್ರಿ ಶಾಲೆಗಳನ್ನು ತೆರೆಯಲು ಬೇಡಿಕೆಯನ್ನು ಮಾಡಲಾಯಿತು. ದಿವಾನರು ಇದಕ್ಕೆ ಅನುಕೂಲಕರ ಉತ್ತರವನ್ನಿತ್ತರು. ಇಂದಿಗೂ ಅನೇಕ ಶಾಲೆಗಳು ಪಾಳಿಗಳಲ್ಲಿ ಕೆಲಸ ಮಾಡುತ್ತಿವೆ.[೫] ಮತ್ತೆ ಕೆಲವು ಸಂಜೆಯವರೆಗೂ ತರಗತಿಗಳನ್ನು ನಡೆಸುತ್ತಿರುವುದನ್ನು ಇಲ್ಲಿ ಹೇಳಬಹುದಾಗಿದೆ. ವಿದ್ಯಾಭ್ಯಾಸ ಸೌಕರ್ಯಗಳನ್ನು ವಿಸ್ತರಿಸಲು ಇರುವ ಕಟ್ಟಡಗಳನ್ನು, ಉಪಾಧ್ಯಾಯರುಗಳನ್ನು ಬಳಸಿಕೊಳ್ಳುವ ಪದ್ಧತಿ ೧೮೮೦ ರಲ್ಲಿ ಮಹಾರಾಜರ ಆಳ್ವಿಕೆಯ ಕಾಲದಲ್ಲೂ ಇದ್ದಿತೆಂಬುದನ್ನು ಕಾಣಬಹುದಾಗಿದೆ.

೧೮೯೦ ರಲ್ಲಿ ದಿವಾನರು ತಮ್ಮ ಭಾಷಣದಲ್ಲಿ ಹಿಂದಿನ ವರ್ಷ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿಯಾಗಿದೆ ಎಂದು ತಿಳಿಸಿದರು. ರಾಜ್ಯದಲ್ಲಿನ ೧,೪೩೭ ಸರ್ಕಾರಿ ಶಾಲೆಗಳಲ್ಲಿ ೫೫,೧೯೦ ವಿದ್ಯಾರ್ಥಿಗಳು, ಅನುದಾನ ಪಡೆಯುತ್ತಿರುವ ೨೫೨ ಶಾಲೆಗಳಲ್ಲಿ ೧೧,೮೯೨ ವಿದ್ಯಾರ್ಥಿಗಳೂ ಇದ್ದು ಕಳೆದ ವರ್ಷಕ್ಕಿಂತ ೭೦೦೦ ಹೆಚ್ಚಿನ ವಿದ್ಯಾರ್ಥಿಗಳು ಇದ್ದಾರೆಂದರು. ಇದಲ್ಲದೆ ಅನುದಾನ ಪಡೆದಿರುವ ೧೨೪೮ ಶಾಲೆಗಳಲ್ಲಿ ೧೬,೧೯೬ ವಿದ್ಯಾರ್ಥಿಗಳಿರುವುದಾಗಿಯೂ ತಿಳಿಸಿದರು. ಮೈಸೂರಿನ ಮಹಾರಾಣಿಯವರ ಬಾಲಕಿಯರ ಶಾಲೆಯು, ಕ್ಲಿಷ್ಟಕರವಾದ ಬಾಲಕಿಯರ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಉತ್ತಮ ಕಾರ್ಯ ನಿರ್ವಹಣೆ ಮಾಡುತ್ತಾ, ತನ್ನ ದಕ್ಷತೆಯನ್ನೂ ಜನಪ್ರಿಯತೆಯನ್ನೂ ಉಳಿಸಿಕೊಂಡಿದೆ ಎಂದರು.

೧೮೯೨ ರಲ್ಲಿ ಸಾರ್ವಜನಿಕ ವಿದ್ಯಾಸಂಸ್ಥೆಗಳ ಸಂಖ್ಯೆ ೧೮೫೬ ರಿಂದ ೧೬೫೩ ಕ್ಕೇರಿತು. ಇಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೭೨,೭೯೦ ರಿಂದ ೭೬,೩೨೨ ಆಯಿತು. ಖಾಸಗಿ ಅಥವಾ ದೇಶಿಯ ವಿದ್ಯಾಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೨೧೬೦ ರಿಂದ ೨೫,೦೪೧ ಕ್ಕೇರಿತು. ಎಲ್ಲಾ ಮೂಲಗಳಿಂದಲೂ ವಿದ್ಯಾಭ್ಯಾಸಕ್ಕೆ ೯,೦೬,೦೦೦ ರೂಪಾಯಿಗಳ ವೆಚ್ಚವಾಯಿತು. ಶಾಲೆಗಳನ್ನು

ವರ್ಗೀಕರಿಸಿ ಶಿಕ್ಷಣ ಮಟ್ಟವನ್ನು ಪರಿಷ್ಕರಿಸಲಾಯಿತು.[೬] ಶಿಸ್ತನ್ನು ತರಲು ಮೇಲ್ವಿಚಾರಣೆಯನ್ನು ಉತ್ತಮ ಪಡಿಸಲು ಅಂತರ ಶಾಲಾ ನಿಯಮಗಳನ್ನು ರಚಿಸಲಾಯಿತು. ಪಠ್ಯ ಪುಸ್ತಕಗಳನ್ನು ಸಿದ್ದ ಮಾಡಲು ಒಂದು ಸಮಿತಿಯನ್ನು ರಚಿಸಲಾಯಿತು. ಮೈಸೂರಿನಲ್ಲಿ ಒಂದು ಕೈಗಾರಿಕಾ ಶಾಲೆಯನ್ನು ಪ್ರಾರಂಭಿಸಲಾಯಿತು. ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ ೧,೦೪,೦೦೦ ರೂಪಾಯಿಗಳ ವೆಚ್ಚ ಮಾಡಲಾಯಿತು. ಹಿಂದಿನ ವರ್ಷ ಮಹಾರಾಣಿಯರ ಬಾಲಕಿಯರ ಶಾಲೆ ಉತ್ತಮ ಪ್ರಗತಿ ಸಾಧಿಸಿತು.

೧೮೯೩ರಲ್ಲಿ ೧೯೬೮ ಸಾರ್ವಜನಿಕ ವಿದ್ಯಾಸಂಸ್ಥೆಗಳಿದ್ದವು. ಇದರಲ್ಲಿ ೭೭,೯೬೩ ವಿದ್ಯಾರ್ಥಿ ಗಳಿದ್ದರು. ೨೦೧೨ ಖಾಸಗಿ ವಿದ್ಯಾಸಂಸ್ಥೆಗಳಿದ್ದು ಅವುಗಳಲ್ಲಿ ೨೫,೫೮೬ ವಿದ್ಯಾರ್ಥಿ ಗಳಿದ್ದರು. ೧೮೮೧ ರಿಂದ ೧೮೯೧ರ ದಶಕದಲ್ಲಿ ವಿದ್ಯಾವಂತ ಗಂಡಸರ ಸಂಖ್ಯೆ ೨, ೩೪,೯೬೮ ರಿಂದ ೨,೬೧,೫೦೮ ಕ್ಕೇರಿ ಶೇಕಡ ೧೧.೪ರಷ್ಟು ಹೆಚ್ಚಳ ತೋರಿತು. ೧೮೮೧ ರಲ್ಲಿ ೯,೦೦೦ ವಿದ್ಯಾವಂತ ಮಹಿಳೆಯರಿದ್ದುದು ೧೮೯೧ ರಲ್ಲಿ ೧೭,೦೦೦ ಕ್ಕೇರಿ ಶೇಕಡ ೯೩.೩ ರಷ್ಟು ಹೆಚ್ಚಳ ತೋರಿತು. ಸಾರ್ವಜನಿಕ ವಿದ್ಯಾಭ್ಯಾಸಕ್ಕಾಗಿ ೭,೬೨,೯೫ ರೂಪಾಯಿಗಳ ವೆಚ್ಚವಾಗಿದ್ದಿತು.[೭]

೧೮೯೯ ರಲ್ಲಿ ದಿವಾನ್ ರವರು ಸಭೆಯನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ವಿದ್ಯಾಭ್ಯಾಸದ ಪ್ರಗತಿ ಬಗ್ಗೆ ಪ್ರಸ್ತಾಪಿಸಿ ೧೮೮೧-೧೮೮೫ ವರೆಗಿನ ಮಹಾರಾಜರವರ ಆಡಳಿತದಲ್ಲಿ ಸರ್ಕಾರಿ ಅನುದಾನ ಪಡೆಯುತ್ತಿದ್ದ ಶಾಲೆಗಳ ಸಂಖ್ಯೆ ೮೬ ರಿಂದ ೧,೭೯೭ ಕ್ಕೇರಿತು. ಇದೇ ಅವಧಿಯಲ್ಲಿ ವಿದ್ಯಾಭ್ಯಾಸ ವೆಚ್ಚ ೩,೧೫,೦೦೦ ರೂಪಾಯಿಗಳಿಂದ ೮,೧೯,೮೧೦ ರೂಪಾಯಿಗಳಿಗೇರಿತು; ಅದೇ ಕಾಲದಲ್ಲಿ ಶಾಲೆಗಳಲ್ಲಿ ಗಂಡು ಹುಡುಗರ ಸಂಖ್ಯೆ ೩೯,೪೧೩ ರಿಂದ ೮೩,೩೯೮ ಕ್ಕೇರಿತು, ಶಾಲೆಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ೩,೦೦೦ ದಿಂದ ೧೨,೦೦೦ ಕ್ಕೇರಿತು ಎಂದು ಹೇಳಿದರು. ೧೯೦೧ ರಲ್ಲಿ ಸರ್ಕಾರಿ ಮತ್ತು ಖಾಸಗೀಯದು ಸೇರಿ ೪,೦೧೯ ವಿದ್ಯಾ ಸಂಸ್ಥೆಗಳು ಇದ್ದು, ಇವುಗಳಲ್ಲಿ ೯೯,೪೦೮ ಹುಡುಗರು ಮತ್ತು ೧೫,೭೫೪ ಹುಡುಗಿಯರು ಓದುತ್ತಿದ್ದರು. ಹಿಂದಿನ ವರ್ಷಕ್ಕಿಂತ ೧೨೫ ಸಂಸ್ಥೆಗಳು ಹೆಚ್ಚಾಗಿ ಆರಂಭವಾಗಿದ್ದವು. ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಪ್ರಮಾಣ ಶೇಕಡ ೨೯.೯ ಇದ್ದಿತು. ವಿವಿಧ ಮೂಲಗಳಿಂದ ೯,೪೮,೭೩೬ ರೂಪಾಯಿಗಳ ವೆಚ್ಚವಾಗಿದ್ದಿತು. ಇಂಜಿನಿಯರಿಂಗ್, ವೈದ್ಯಕೀಯ, ಉಪಾಧ್ಯಾಯರ ಶಿಕ್ಷಣ ಮುಂತಾದವುಗಳನ್ನು ನೆರೆರಾಜ್ಯಗಳಲ್ಲಿ ಕಲಿಯಲು ೬೨ ಕ್ಕಿಂತ ಹೆಚ್ಚು ವಿದ್ಯಾರ್ಥಿ ವೇತನವನ್ನು ಕೊಟ್ಟಿತು. ಒಬ್ಬರನ್ನು ಇಂಗ್ಲೆಂಡಿಗೆ ಕಳಿಸಲಾಯಿತು. ನೇಯ್ಗೆಯಲ್ಲಿ ವಿಶೇಷ ಶಿಕ್ಷಣ ವ್ಯವಸ್ಥೆಯನ್ನು ಮೈಸೂರಿನಲ್ಲಿ ಮಾಡಲಾಯಿತು. ಜೀವನದ ಇತರೆ ಪ್ರಮುಖ ಕ್ಷೇತ್ರಗಳಿಂದ ಅನೇಕ ಯುವಕರನ್ನು ಸಾಹಿತ್ಯ ಪ್ರಧಾನ ವಿದ್ಯಾಭ್ಯಾಸ ಆಕರ್ಷಿಸಿದೆ, ಆದುದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಇಂಗ್ಲಿಷ್ ಶಾಲೆಗಳನ್ನು ತೆರೆಯುವಾಗ ಇವೆರೆಡರ ಮಧ್ಯೆ ಜಾಗೃತ ಹೊಂದಾಣಿಕೆ ಎಂದರು.

ಇಂತಹ ವಿದ್ಯಾಭ್ಯಾಸ, ಸರ್ಕಾರಿ ಸೇವೆಯಲ್ಲಿ ಗುಮಾಸ್ತರಾಗುವವರೆಗೂ ಅಥವಾ ಶಾಲೆಗಳಲ್ಲಿ ಉಪಾಧ್ಯಾಯರಾಗುವವರೆಗೆ, ಅಲ್ಲದೆ ವಿವಿಧ ವೃತ್ತಿಗಳಲ್ಲಿ ನಿರತರಾಗುವವರೆಗೆ ಮತ್ತು ದೇಶದ ಸಂಪದಭಿವೃದ್ಧಿಗೆ ಅಗತ್ಯವಾದ ಕೈಗಾರಿಕೆಗಳಲ್ಲಿ ಸೇರುವವರೆಗೆ ಎಲ್ಲರಿಗೂ ಅವರವರ ಅಗತ್ಯಗಳಿಗೆ ತಕ್ಕಂತೆ ವಾಸ್ತವಿಕವಾಗಿ ಉಪಯುಕ್ತವಾಗಿದೆ. ಇಂಗ್ಲಿಷ್ ಮಾಧ್ಯಮದಲ್ಲಿ ಉನ್ನತ ಶಿಕ್ಷಣ ಪಡೆಯುವವರ ಪ್ರಗತಿಗೆ ತೊಂದರೆ ಬಾರದಂತೆ, ದೇಶೀಯ ಭಾಷೆಯಲ್ಲೂ ಸಾಹಿತ್ಯ ಪ್ರಧಾನ ವಿದ್ಯಾಭ್ಯಾಸ ಕೊಡುವ ಮಾರ್ಗವನ್ನು ರೂಪಿಸಬೇಕಾದ ಅವಶ್ಯಕತೆ ಇದೆ ಎಂದು ದಿವಾನರು ಹೇಳಿದರು.[೮]

ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಚರ್ಚಿಸಲು ೧೯೧೧ರಲ್ಲಿ ಸಭೆಯ ಸಾಕಷ್ಟು ಸಮಯವನ್ನು ತೆಗೆದುಕೊಂಡಿತು. ವಿದ್ಯಾಭ್ಯಾಸವನ್ನು ಕಡ್ಡಾಯ ಮಾಡಬೇಕೆಂದೂ ಓದು ಬರವಣಿಗೆ ಮತ್ತು ಗಣಿತದಲ್ಲಿ ಪರೀಕ್ಷೆಯನ್ನು ಮಾಡಬೇಕೆಂದು ಒತ್ತಾಯ ಪಡಿಸಲಾಯಿತು. ಈಗ ಶಾಲೆಗೆ ಹೋಗುತ್ತಿರುವ ಹುಡುಗರು ಸಕಾಲಕ್ಕೆ ಮತ್ತು ತಪ್ಪಿಸಿಕೊಳ್ಳದೆ ಹೋಗುವುದರಿಂದ, ಅವರು ಶಾಲೆಗಳಿಗೆ ಹೋಗುವಂತೆ ಕಡ್ಡಾಯ ಮಾಡಬೇಕೆಂದು ಕೋರಲಾಯಿತು. ಇದಲ್ಲದೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಯಾವುದಾದರೊಂದು ಕೈಗಾರಿಕೆ ಶಿಕ್ಷಣವನ್ನು ಕಡ್ಡಾಯ ಮಾಡಬೇಕೆಂದು ಕೋರಲಾಯಿತು. ಮಾಧ್ಯಮಿಕ ಶಾಲೆಗಳಲ್ಲಿ ರೇಖಾಚಿತ್ರ ಕಲೆಯನ್ನೂ ಮತ್ತು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಆರೋಗ್ಯ ಶಾಸ್ತ್ರವನ್ನು ಕಡ್ಡಾಯ ಮಾಡಲು ಕೋರಲಾಯಿತು. ಸರ್ಕಾರವು ಈ ಸೂಚನೆಗಳು ಅಸ್ಪಷ್ಟವೆಂದು ತಿರಸ್ಕರಿಸಿ, ಒಂದು ಕಾರ್ಯಸಾಧ್ಯವಾದ ವಿವರವಾದ ಯೋಜನೆಯನ್ನು ಕೊಟ್ಟರೆ ಪರಿಶೀಲಿಸುವುದಾಗಿ ಉತ್ತರ ನೀಡಿತು.

ತಾಂತ್ರಿಕ ಶಿಕ್ಷಣಕ್ಕಾಗಿಯೂ, ಸುಧಾರಿತ ಪ್ರಾಯೋಗಿಕ ಕೃಷಿ ಪದ್ದತಿಗಳನ್ನೂ, ಶ್ರಮ ತಗ್ಗಿಸುವ ಯಂತ್ರಗಳ ಬಳಕೆಯನ್ನು ಅಧ್ಯಯನ ಮಾಡಲು ವಿದ್ಯಾರ್ಥಿಗಳನ್ನು ಇಂಗ್ಲೆಂಡ್ ಮತ್ತು ಅಮೆರಿಕಾಗಳಿಗೆ ಕಳುಹಿಸಬೇಕೆಂಬ ಸಲಹೆಯು ಬಂದಿತು. ಯೂರೋಪ್, ಅಮೆರಿಕಾ ಮತ್ತು ಜಪಾನ್ ಗಳಲ್ಲಿರುವ ವಿವಿಧ ಉತ್ಪಾದನಾ ಮತ್ತು ಕೈಗಾರಿಕೋದ್ಯಮಗಳಲ್ಲಿ ಅಧ್ಯಯನ ಮಾಡಲು ವಿದ್ಯಾರ್ಥಿ ವೇತನಗಳನ್ನೂ ಕೊಡಬೇಕೆಂದೂ ಸೂಚಿಸಲಾಯಿತು. ಇದರಲ್ಲಿ ಕಾರ್ಯ ಸಾಧ್ಯವಾದ ಯೋಜನೆ ಕೊಟ್ಟಲ್ಲಿ ಪರಿಶೀಲಿಸಲಾಗುವುದೆಂದು ಸರ್ಕಾರ ಉತ್ತರಿಸಿತು. ವಿದ್ಯುಚ್ಛಕ್ತಿ ಬಗ್ಗೆ ಕಲಿಯಲು ಕೆಲವು ಯುವಕರನ್ನು ಅಮೆರಿಕಾಗೆ ಕಳಿಸುವ ಉದ್ದೇಶವಿದೆಯೆಂಬ ವಿಚಾರ ಸರ್ಕಾರವು ಈಗಾಗಲೆ ತಿಳಿಸಿದೆಯೆಂದರು.

ಕೈಗಾರಿಕಾ ಶಾಲೆಗಳನ್ನು ತೆರೆಯುವ ಬೇಡಿಕೆಯನ್ನು ಮತ್ತೆ ಸಲ್ಲಿಸಲಾಯಿತು. ಎಲ್ಲಾ ಪ್ರಮುಖ ಊರುಗಳಲ್ಲೂ ಅಂತಹ ಶಾಲೆಗಳಿರಬೇಕು, ಅಂತಹ ಶಾಲೆಗಳಿಗಾಗುವ ವೆಚ್ಚವನ್ನು ಶ್ರೀಮಂತರು ಕೊಡುವಂತೆ ಮನವೊಲಿಸಬಹುದೆಂದು ಹೇಳಲಾಯಿತು. ಸರ್ಕಾರೇತರ ಅಥವಾ

ಸರ್ಕಾರದಿಂದ ಸಹಾಯ ಪಡೆಯುತ್ತಿರುವ ಅನೇಕ ಕೈಗಾರಿಕಾ ಶಾಲೆಗಳು ಅಸ್ತಿತ್ವದಲ್ಲಿವೆ ಎಂದು ಸರ್ಕಾರ ಉತ್ತರ ನೀಡಿತು.[೯]

ಎಲ್ಲಾ ದೇಶ ಭಾಷೆಯ ಶಾಲೆಗಳಲ್ಲಿ ಸಂಸ್ಕೃತವನ್ನು ದ್ವಿತೀಯ ಭಾಷೆಯಾಗಿ ಕಲಿಸಬೇಕೆಂಬ ಕೋರಿಕೆಯನ್ನು ಮತ್ತೆ ಮಾಡಲಾಯಿತು. ಸರ್ಕಾರವು ಈ ಸಲಹೆಯನ್ನು ಗಮನಕ್ಕೆ ತೆಗೆದುಕೊಳ್ಳುವುದೆಂದೂ, ಆದರೆ ಎಲ್ಲಾ ಕಡೆಗೆ ಸಂಸ್ಕೃತ ತರಗತಿಯನ್ನು ತೆರೆಯುವುದು ಸಾಧ್ಯವಿಲ್ಲವೆಂದು ಉತ್ತರ ನೀಡಲಾಯಿತು. ಪಠ್ಯ ಪುಸ್ತಕ ಸಮಿತಿಯನ್ನು ಪುನರ್‌ರಚಿಸಬೇಕು ಮತ್ತು ಅದು ಇತರೆ ಲೇಖಕರ ಪುಸ್ತಕಗಳನ್ನು ಪರಿಶೀಲನೆ ಮಾತ್ರ ಮಾಡಬೇಕು ಎಂದು ಮತ್ತೊಂದು ಕೋರಿಕೆ ಬಂದಿತು. ಈ ಸಲಹೆಯನ್ನು ಸರ್ಕಾರ ಪರಿಶೀಲಿಸಲು ಗಮನಕ್ಕೆ ತಂದುಕೊಂಡಿತು. ಪ್ರತಿ ಜಿಲ್ಲಾ ಕೇಂದ್ರದಲ್ಲೂ ಉಚಿತ ಪುಸ್ತಕ ಭಂಡಾರಗಳನ್ನು ತೆರೆಯಬೇಕೆಂಬ ಕೋರಿಕೆಯನ್ನು ಸರ್ಕಾರ ಒಪ್ಪಲಿಲ್ಲ. ಇದು ಸಾಧ್ಯವಾಗದ ಸಲಹೆ. ಆದರೆ ಅರ್ಹ ಸಾರ್ವಜನಿಕ ಸಂಸ್ಥೆಗಳಿಗೆ ಅನುದಾನ ಕೊಡಲಾಗುವುದೆಂದು ಉತ್ತರ ಕೊಟ್ಟಿತು.[೧೦]

೧೯೦೧ರ ಜನಗಣತಿಯಂತೆ ೫೫ಲಕ್ಷ ಜನರಲ್ಲಿ ಕೇವಲ ಶೇಕಡ ೪.೮ರಷ್ಟು ಜನ ಮಾತ್ರ ಅಕ್ಷರಸ್ಥರಾಗಿದ್ದರು. ಅದರಲ್ಲಿ ಹೆಣ್ಣು ಮಕ್ಕಳು ಶೇಕಡ ೦.೬ ಮಾತ್ರವಿದ್ದರು. ವಿದ್ಯಾಭ್ಯಾಸ ವಿಷಯದಲ್ಲಿ ಸರ್ಕಾರಕ್ಕೆ ಸಲಹೆಗಳನ್ನು ಕೊಡಲು ಕಾಲೇಜುಗಳ ಪ್ರಾಂಶುಪಾಲರುಗಳಿಂದ ಕೂಡಿದ ಒಂದು ವಿದ್ಯಾಭ್ಯಾಸ ಮಂಡಳಿಯನ್ನು ರಚಿಸುವ ಸಲಹೆ ಬಂದಿತು. ಸರ್ಕಾರ ಈ ಸಲಹೆಯನ್ನು ಗಮನಕ್ಕೆ ಮಾತ್ರ ತೆಗೆದುಕೊಂಡಿತು.

೧೯೦೫ರಲ್ಲಿ ಮೈಸೂರಿನಲ್ಲಿ ಒಂದು ಇಂಜನಿಯರಿಂಗ್ ಶಾಲೆಯನ್ನು ಪ್ರಾರಂಭಿಸಲಾಯಿತೆಂದೂ, ಅದು ತೃಪ್ತಿಕರ ಪ್ರಗತಿ ಸಾಧಿಸಿದೆಯೆಂದು ೧೯೦೪ ರಲ್ಲಿ ದಿವಾನರು ಹೇಳಿದರು. ಮೈಸೂರಿನ ಕೈಗಾರಿಕಾ ಶಾಲೆಯೂ ಉತ್ತಮಗೊಂಡಿತ್ತು. ಮದ್ರಾಸ್ ಪ್ರಾಂತದಲ್ಲಿರುವಂತೆ ರಾಜ್ಯದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ನಿಯಂತ್ರಿಸಬೇಕೆಂಬ ವಿಚಾರವನ್ನು ದಿವಾನರ ಭಾಷಣದ ಮೇಲಿನ ಚರ್ಚೆಯಲ್ಲಿ ಎತ್ತಲಾಯಿತು. ಮೈಸೂರಿನ ವಿದ್ಯಾರ್ಥಿಗಳು ಮದ್ರಾಸ್ ಪ್ರಾಂತದ ಪರೀಕ್ಷೆಗಳಿಗೆ ಕೂಡುವುದರಿಂದ ಈ ಕ್ರಮ ಅಗತ್ಯವೆಂದು ವಾದ ಮಾಡಲಾಯಿತು. ಕನ್ನಡದಲ್ಲಿ ಒಂದು ಮಟ್ಟದ ಜ್ಞಾನಾರ್ಜನೆಯಾಗುವವರೆಗೆ, ಇಂಗ್ಲಿಷ್ ಕಲಿಯುವುದನ್ನು ಮುಂದಕ್ಕೆ ಹಾಕುವುದರಿಂದ, ವಿದ್ಯಾಭ್ಯಾಸದ ಅವಧಿಯನ್ನು ಹೆಚ್ಚಿಸಿದಂತಾಗುವುದಲ್ಲದೆ ಇಂಗ್ಲಿಷಿನಲ್ಲಿ ಉತ್ತಮ ಜ್ಞಾನವನ್ನೂ ಮುಂದೆ ಹಾಕಿದಂತಾಗಿ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಅಂಬಳೆ ಅಣ್ಣಯ್ಯ ಪಂಡಿತರು ಮತ್ತು ಗುಬ್ಬಿ ರಾಮಾನುಜ ಐಯ್ಯಂಗಾರ್ ರವರು ವ್ಯಕ್ತಪಡಿಸಿದರು. ಇಂಗ್ಲಿಷ್‌ನ್ನು ಕಲಿಸುವ ಮೊದಲು ನಿರ್ಧಿಷ್ಟ ಪ್ರಮಾಣದ ದೇಶ ಭಾಷೆಯ ಪ್ರಾಥಮಿಕ ಜ್ಞಾನವಿರಬೇಕೆಂಬ ಭಾರತ ಸರ್ಕಾರದ ನಿರ್ಣಯದ ಬಗ್ಗೆಯೂ

ಪ್ರಸ್ತಾಪಿಸಿದರು. ಬ್ರಿಟಿಷ್ ಇಂಡಿಯಾದಲ್ಲಿ ರೂಢಿಯಲ್ಲಿರುವ ಪದ್ಧತಿಯನ್ನೆ ರಾಜ್ಯ ಅನುಸರಿಸಬೇಕೆಂದೂ ಬಯಸಿದರು. ಈ ಪ್ರಶ್ನೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಸರ್ಕಾರ ರಚಿಸಲಿದೆಯೆಂದು ಸರ್ಕಾರ ಉತ್ತರವಿತಿತ್ತು.

ತಾಂತ್ರಿಕ ಶಿಕ್ಷಣವು ತೀವ್ರ ಪ್ರಗತಿ ಸಾಧಿಸುತ್ತಿದೆ ಎಂದು, ಮೈಸೂರಿನ ಇಂಜಿನಿಯರಿಂಗ್ ಶಾಲೆಯ ಅನೇಕ ವಿದ್ಯಾರ್ಥಿಗಳು ಮದ್ರಾಸಿನ ತಾಂತ್ರಿಕ ಪರೀಕ್ಷೆಗಳಲ್ಲಿ ಯಶಸ್ಸನ್ನು ಗಳಿಸಿದ್ದರೆಂದು ದಿವಾನರು ೧೯೦೫ ರಲ್ಲಿ ಹೇಳಿದರು. ಹಿಂದಿನ ಡಿಸೆಂಬರ್‌ನಲ್ಲಿ ಬಂಬಾಯಿಯಲ್ಲಿ ಏರ್ಪಡಿಸಿದ್ದ ಕೃಷಿ ಮತ್ತು ಕೈಗಾರಿಕಾ ಪ್ರದರ್ಶನದಲ್ಲಿ ಪ್ರತ್ಯೇಕ ಮೈಸೂರು ವಿಭಾಗವನ್ನು ತೆರೆಯಲಾಯಿತು. ಪ್ರದರ್ಶಿಸಿದ ೭೨ ವಸ್ತುಗಳಲ್ಲಿ ೩೯ ಸ್ಥಳದಲ್ಲೆ ಮಾರಾಟವಾದವು. ಅನೇಕ ಪದಕಗಳನ್ನು ಪ್ರಶಸ್ತಿ ಪತ್ರಗಳನ್ನು ಪಡೆಯಲಾಯಿತು ಎಂದು ಹೇಳಿದರು.

೧೯೦೬ರಲ್ಲಿ ತಾಂತ್ರಿಕ ಮತ್ತು ಕೈಗಾರಿಕಾ ವಿದ್ಯಾಭ್ಯಾಸ ಸಮಾಧಾನಕರ ಪ್ರಗತಿಯನ್ನು ಆ ವರ್ಷಸಾಧಿಸಿದೆಯೆಂದು ದಿವಾನರು ಹೇಳಿದರು. ಸದಸ್ಯರು ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತಾ ಜನರಲ್ಲಿ ಶಿಕ್ಷಣದ ಅಭಾವ ಇರುವ ಬಗ್ಗೆ ತೀವ್ರ ಆತಂಕವನ್ನು ವ್ಯಕ್ತಪಡಿಸಿದರು. ರಾಜ್ಯದ ಜನರಲ್ಲಿ ಬಹುಭಾಗ ಅಜ್ಞಾನದಲ್ಲಿ ಮುಳುಗಿದ್ದಾರೆ, ಜನಸಾಮಾನ್ಯರಿಗೆ ಶಿಕ್ಷಣ ಕೊಡದಿದ್ದಲ್ಲಿ ನಿಜವಾದ ಪ್ರಗತಿಯನ್ನು ನಿರೀಕ್ಷಿಸಲಾಗದು ಎಂದರು. ಆದ್ದರಿಂದ ೭ ವರ್ಷ ಮೀರಿದ ಬಾಲಕ ಬಾಲಕಿಯರಿಗೆ ಶಿಕ್ಷಣ ಕೊಡುವಂತೆ ತಂದೆ ತಾಯಿಯರ ಮೇಲೆ ಒತ್ತಾಯ ತರಬೇಕೆಂದರು. ಪ್ರಾಥಮಿಕ ಹಾಗೂ ಲೋಯರ್ ಸೆಕೆಂಡರಿ ಮಟ್ಟದ ವರೆಗೆ ವಿದ್ಯಾಭ್ಯಾಸವನ್ನು ಕಡ್ಡಾಯ ಮಾಡಬೇಕೆಂದು ಇತರೆ ಸದಸ್ಯರು ಒತ್ತಾಯ ಪಡಿಸಿದರು. ಪ್ರಾಥಮಿಕ ಶಾಲೆಗಳಲ್ಲಿ ಶುಲ್ಕವನ್ನು ರದ್ದುಗೊಳಿಸಿ ಪ್ರಾಯೋಗಿಕವಾಗಿ ಮೈಸೂರು ನಗರದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿ ಮಾಡಬೇಕೆಂಬ ಒತ್ತಾಯವು ಬಂದಿತು. ಈ ಎಲ್ಲಾ ಬೇಡಿಕೆಗಳ ಬಗ್ಗೆ ಸರ್ಕಾರ ಉತ್ತರವಿತ್ತು, ಶಿಕ್ಷಣವನ್ನು ವಿಸ್ತರಿಸಬೇಕೆಂಬ ಬಗ್ಗೆ ಯಾವುದೇ ಅಭಿಪ್ರಾಯ ಬೇಧವಿಲ್ಲ ಎಂದಿತು. ಸದಸ್ಯರ ಕಾತುರವನ್ನು ಸರ್ಕಾರ ಪೂರ್ಣವಾಗಿ ಅರ್ಥಮಾಡಿಕೊಂಡಿತು, ರಾಜ್ಯದ ಎಲ್ಲಾ ವರ್ಗದ ಮಕ್ಕಳಿಗೂ ಪ್ರಾಥಮಿಕ ವಿದ್ಯಾಭ್ಯಾಸದ ಲಾಭ ದೊರೆಯಬೇಕು, ಆದರೆ ಇದನ್ನು ಅನುಷ್ಠಾನಕ್ಕೆ ತರುವ ಕಾರ್ಯ ಸಂಪನ್ಮೂಲಗಳನ್ನವಲಂಭಿಸಿತ್ತು, ಆದ್ದರಿಂದ ಶೀಘ್ರವೇ ಎಚ್ಚರಿಕೆಯಿಂದ ಪರಿಶೀಲಿಸಲಾಗುವುದೆಂಬ ಭರವಸೆಯನ್ನು ಕೊಡಲಾಯಿತು.[೧೧] ಉತ್ತಮ ಪೌರತ್ವ ಹಾಗೂ ಬೌದ್ಧಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಬೆಂಗಳೂರು ನಗರದಲ್ಲಿ ಒಂದು ಕಾನೂನು ಕಾಲೇಜನ್ನು ಸ್ಥಾಪಿಸಬೇಕೆಂಬ ಸೂಚನೆಯನ್ನು ಸರ್ಕಾರ ಕೇವಲ ಗಮನಕ್ಕೆ ದಾಖಲು ಮಾಡಿಕೊಂಡಿತು.

ಜನರಿಗೆ ತಾಂತ್ರಿಕ ಶಿಕ್ಷಣ ಕೊಡಬೇಕೆಂಬ ದಿವಾನ್ ರಂಗಾಚಾರ್ಲುರವರ ಭರವಸೆಯನ್ನು ಕೆಲವರು ಸಭೆಯಲ್ಲಿ ಪ್ರಸ್ತಾಪಿಸಿದರು. ಮೈಸೂರಿನಲ್ಲಿ ಒಂದು ಕೈಗಾರಿಕಾ ಶಾಲೆಯನ್ನು ಸ್ಥಾಪಿಸಿದ

ಮಾತ್ರದಿಂದ ಕೈಗಾರಿಕಾ ಶಿಕ್ಷಣವೂ ಹರಡುವುದಿಲ್ಲ ಎಂದರು. ರಾಜ್ಯದವರೆಗೂ ತಾಂತ್ರಿಕ ಶಿಕ್ಷಣ ಪಡೆಯಲು ವಿದ್ಯಾರ್ಥಿ ವೇತನಗಳನ್ನು ಕೊಡಲಾಗುತ್ತದೆ ಎಂದು ಸರ್ಕಾರ ಉತ್ತರವಿತ್ತಿತು. ಸಂಪನ್ಮೂಲವು ಹೆಚ್ಚಿದಂತೆ ಮತ್ತು ಅನುಭವ ಪಡೆದ ಮೇಲೆ ಕಾಲಕ್ರಮದಲ್ಲಿ ಹೆಚ್ಚು ಶಾಲೆಗಳನ್ನು ತೆರೆಯಲಾಗುವುದು ಎಂಬ ಭರವಸೆ ಕೊಡಲಾಗುವುದು.

ಕ್ರಿಶ್ಚಿಯನ್ ಮಿಷನರಿ ಶಾಲೆಗಳಲ್ಲಿ ಓದುವ ಹಿಂದೂಗಳಿಗೆ ಕೊಡುವ ವಿದ್ಯಾಭ್ಯಾಸದ ಬಗ್ಗೆ ಈ ಹಿಂದೆಯೇ ಬೇರೆ ರೀತಿಯಲ್ಲಿ ಪ್ರಸ್ತಾಪಿಸಿದ್ದನ್ನು ಮತ್ತೆ ಎತ್ತಲಾಯಿತು. ಮಾಗಡಿ ಕೃಷ್ಣಮೂರ್ತಿಯವರು ಮಾತನಾಡಿ ಹಿಂದೂ ಯುವಕ ಯುವತಿಯರು ಓದುತ್ತಿರುವ ಮಿಷನರಿ ಶಾಲೆಗಳಿಗೆ ಅನುದಾನ ನೀಡುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದರು. ಮತ್ತೆ ಮತ್ತೆ ಮಿಷನರಿಗಳು ತಮ್ಮಲ್ಲಿರುವ ವಿಶ್ವಾಸವನ್ನ ದುರುಪಯೋಗ ಪಡಿಸಿಕೊಂಡವರೆಂಬುದು ತಿಳಿದ ಸಂಗತಿ. ಹಿಂದೂ ತಂದೆ ತಾಯಿಗಳ ಮುಗ್ಧ ಮಕ್ಕಳು ಅನೇಕ ವೇಳೆ ಬೈಬಲ್ ಮತ್ತು ಚರ್ಚೆಗೆ ಸಂಬಂಧಿಸಿದ ಪುಸ್ತಕಗಳನ್ನು ಮತ್ತು ಅನೇಕ ರೀತಿಯ ಅನಾರೋಗ್ಯಕರ, ಕೊಳಕು ಸಾಹಿತ್ಯವನ್ನು ಓದಲು ಬಲಾತ್ಕರಿಸುತ್ತಾರೆ ಎಂದೂ ಅವರು ಅಪಾದಿಸಿದರು. ಈ ಪುಸ್ತಕಗಳನ್ನು ಖಾಸಗಿಯಾಗಿ ಓದಲು ಉಚಿತವಾಗಿ ಕೊಡಲಾಗುತ್ತಿದೆ ಎಂದು ಮುಂದುವರೆದು ಹೇಳಿದರು.[೧೨] ಕೆಲ ಕನ್ನಡ ಪುಸ್ತಕಗಳನ್ನು ಖಾಸಗಿಯಾಗಿ ಓದಲು ಉಚಿತವಾಗಿ ಕೊಡಲಾಗುತ್ತಿದೆ. ಈ ಪುಸ್ತಕಗಳ ಬಗ್ಗೆ ಸಾರ್ವಜನಿಕ ಗಮನಕ್ಕೆ ತರಲಾಗಿದೆ ಮತ್ತು ಒಂದರಲ್ಲಿ ಇಡೀ ಬ್ರಾಹ್ಮಣ ವರ್ಗವನ್ನೇ ಬೈಯಲಾಗಿದೆ. ಮತ್ತೊಂದು ಪುಸ್ತಕದಲ್ಲಿ ಲಿಂಗಾಯಿತರನ್ನು ಟೀಕಿಸಲಾಗಿದೆ. ಈ ಪುಸ್ತಕಗಳನ್ನು ಓದಿದರೆ, ಇದನ್ನು ಬರೆದ ಲೇಖಕರ ಉದ್ದೇಶಗಳು ಎಷ್ಟು ಕುಚೇಷ್ಟೆಯವು ಮತ್ತು ಕೇಡುಂಟುಮಾಡುವುದಾಗಿದೆ ಎಂಬುದು ಮತ್ತು ಸುಲಭವಾಗಿ ರೂಪಗೊಳ್ಳುವ ಮಕ್ಕಳ ಮೆದುಮನಸ್ಸಿನ ಮೇಲೆ ಎಂತಹ ಕೆಟ್ಟ ಪರಿಣಾಮ ಬೀರುವುದೆಂಬುದು ಮನದಟ್ಟಾಗುತ್ತದೆ ಎಂದರು. ಹಿಂದೂಗಳಿಂದ ಪಡೆದ ತೆರಿಗೆಯನ್ನೇ ಅವರ ವಿರುದ್ಧವೇ ಬಳಸುವುದು ಯೋಗ್ಯವಲ್ಲ ಎಂದು ವಾದಿಸಿದರು. ಆದ್ದರಿಂದ ಈ ಶಾಲೆಗಳಿಗೆ ಅನುದಾನಗಳನ್ನು ಕೊಡಬಾರದೆಂದು ಸೂಚಿಸಿದರು. ಸರ್ಕಾರ ಇದನ್ನು ಸುಮ್ಮನೆ ದಾಖಲು ಮಾಡಿಕೊಂಡಿತು.

ಸದಸ್ಯರು ರೈತರಿಗೆ ಕೃಷಿ ಶಿಕ್ಷಣವನ್ನು ಕೊಡಲು ಹೆಚ್ಚು ಸೌಕರ್ಯಗಳನ್ನು ಒದಗಿಸಬೇಕೆಂದು ಸಲಹೆ ಮಾಡಲಾಯಿತು. ಹಿಂದಿನ ವ್ಯವಸಾಯ ಪದ್ದತಿಯೇ ಮುಂದುವರೆದು ರೈತರು ಬಡವರಾಗುತ್ತಿದ್ದಾರೆ, ಸುಧಾರಿತ ರೀತಿ ವ್ಯವಸಾಯ ಪದ್ದತಿ ಬಗ್ಗೆ ಸರ್ಕಾರ ಪುಸ್ತಕಗಳನ್ನು ಪ್ರಕಟಿಸಬೇಕೆಂದು ಹೇಳಿದರು. ಈ ಎಲ್ಲಾ ಸಲಹೆಗಳನ್ನೊಳಗೊಂಡ ಕಂದಾಯ ಮತ್ತು ಕೃಷಿ ಗೆಜೆಟ್ಟೊಂದನ್ನು ಪ್ರಕಟಿಸಲಾಗುವುದೆಂದು ಸರ್ಕಾರ ಘೋಷಿಸಿತು. ೧೯೧೭ರಲ್ಲಿ ಚರ್ಚೆ ಕಾಲದಲ್ಲಿ ಬೆಂಗಳೂರು ನಗರದಲ್ಲಿ ಒಂದು ಕಾನೂನು ಕಾಲೇಜು ಪ್ರಾರಂಭಿಸಲು ಕೋರಲಾಯಿತು. ಈ

ಬೇಡಿಕೆಯನ್ನು ಸರ್ಕಾರ ದಾಖಲು ಮಾಡಿಕೊಂಡಿತು. ರಸಾಯನಶಾಸ್ತ್ರದ ಅಧ್ಯಯನಕ್ಕಾಗಿ ವಿದ್ಯಾರ್ಥಿ ಪ್ರತಿನಿಧಿಗಳನ್ನು ಯೂರೋಪಿಗೆ ಕಳುಹಿಸುವ ಸಲಹೆಯನ್ನು ಸರ್ಕಾರ ದಾಖಲು ಮಾಡಿಕೊಂಡಿತು.[೧೩]

೭.೧. ಹಿಂದುಳಿದ ಹಾಗೂ ದಲಿತರ ವಿದ್ಯಾರ್ಥಿ ವೇತನಕ್ಕೆ ೧೯೨೫ನೇ ವಾರ್ಷಿಕ ಆಯವ್ಯಯ

ಮೈಸೂರು ಸಂಸ್ಥಾನದಲ್ಲಿ ೧೯೨೫ ನೇ ವಾರ್ಷಿಕ ಬಜೆಟ್‌ನಲ್ಲಿ ಮಂಡಿಸಿದ ಅಯವ್ಯಯ ಪಟ್ಟಿಯಲ್ಲಿ ಹಿಂದುಳಿದ ಮತ್ತು ನಿಮ್ನವರ್ಗದವರಿಗೆ ವಿದ್ಯಾರ್ಥಿ ವೇತನವನ್ನು ಜನಸಂಖ್ಯೆಗೆ ಅನುಗುಣವಾಗಿ ಮೀಸಲು ಇಡಲಾಯಿತು. ಈ ವಿದ್ಯಾರ್ಥಿವೇತನದ ಉಸ್ತುವಾರಿಯನ್ನು ಆಯಾ ಪ್ರದೇಶದ ಇನ್‌ಸ್ಪೆಕ್ಟರ್ ಆಫ್ ಜನರಲ್ ಎಂಬ ಅಧಿಕಾರಿಗೆ ವಹಿಸಲಾಯಿತು. ೧೯೨೫ರ ವಾರ್ಷಿಕ ಬಜೆಟ್‌ನ ಸರ್ಕಾರಿ ಆದೇಶ ಸಂಖ್ಯೆ H.C. ೮೧-೧೯೨೫-೨೬ ದಿನಾಂಕ ೨೬ ಸೆಪ್ಟಂಬರ್‌ನಲ್ಲಿ ಒಟ್ಟು ೮೦೦೦ ಹಣವನ್ನು ಈ ವಿದ್ಯಾರ್ಥಿವೇತನಕ್ಕೋಸ್ಕರ ನಿಗದಿಪಡಿಸಲಾಯಿತು. ಒಂದು ವೇಳೆ ಆ ವರ್ಷದಲ್ಲಿ ಮೀಸಲಿಟ್ಟ ಹಣವನ್ನು ಮುಂದಿನ ವರ್ಷಕ್ಕೆ ಉಪಯೋಗಿಸಿಕೊಳ್ಳುವ ಅವಕಾಶವನ್ನು ನೀಡಲಾಯಿತು.

ಹಿಂದುಳಿದ ದಲಿತವರ್ಗಗಳ ವಿದ್ಯಾರ್ಥಿವೇತನವನ್ನು ಮೀಸಲಿಟ್ಟ ವಿವರ

೧. ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನ	–	೬೦೭೧
೨. ದಲಿತ ವರ್ಗಗಳ ವಿದ್ಯಾರ್ಥಿ ವೇತನ	–	೧೫೦೨
೩. ಮಹಮದ್ದೀಯರ ವಿದ್ಯಾರ್ಥಿ ವೇತನ	–	೪೨೭
ಒಟ್ಟು	–	**೮೦೦೦**

ಈ ಅನುದಾನವನ್ನು ಪ್ರಾಥಮಿಕ ಮಾಧ್ಯಮಿಕ, ಹೈಸ್ಕೂಲ್ ಕಾಲೇಜುಗಳಲ್ಲಿ ಅಧ್ಯಯನ ಕೈಗೊಂಡಿರುವ ವಿದ್ಯಾರ್ಥಿಗಳಿಗೆ ಮತ್ತು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೈಗೊಂಡಿರುವ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಯುತು. ಈ ಹಣವನ್ನು ಹಂತ ಹಂತವಾಗಿ ವಿದ್ಯಾರ್ಥಿವೇತನವನ್ನೇ ಪಾವತಿಸಲು ಬಳಸಿಕೊಳ್ಳಬಹುದಾಗಿತ್ತು.

ಒಟ್ಟು ಸಂಸ್ಥಾನಕ್ಕೆ ಮೀಸಲಿಟ್ಟ ವಿದ್ಯಾರ್ಥಿ ವೇತನದ ಅನುದಾನವನ್ನೇ ಜಿಲ್ಲೆ ಮತ್ತು ತಾಲ್ಲೂಕು ಕಮಿಟಿಗಳಿಗೆ ಹಂಚಿಕೆ ಮಾಡಲಾಗಿತ್ತು. ಅದರ ಮುಖಾಂತರ ನಿರ್ದಿಷ್ಟ ಸಮುದಾಯ ದಲ್ಲಿ ಅಧ್ಯಯನ ಕೈಗೊಂಡಿರುವ ಅರ್ಹರಾದ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನವನ್ನು ವಿನಿಯೋಗಿಸಬೇಕಾಗಿತ್ತು.

ಸರ್ಕಾರವು ಸಂಸ್ಥಾನದಾದ್ಯಂತ ಇರುವ ಶಾಲಾ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಇರುವಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಯನ್ನು ಗಮನಿಸುತ್ತಿತ್ತು. ಹಿಂದುಳಿದ

ನಿಮ್ನವರ್ಗಗಳು ಮತ್ತು ಮಹಮದೀಯರ ವಿದ್ಯಾರ್ಥಿಗಳ ಪಟ್ಟಿಯನ್ನು ತಯಾರು ಮಾಡುವ ಕಾರ್ಯ ಶಿಕ್ಷಣ ಇಲಾಖೆಗೆ ಸೇರಿದಾಗಿತ್ತು. ಶಿಕ್ಷಣ ಇಲಾಖೆಯು ಅರ್ಹರಾದ ವಿದ್ಯಾರ್ಥಿಗಳ ಪಟ್ಟಿಯನ್ನು ತಯಾರು ಮಾಡಿ ಸರ್ಕಾರಕ್ಕೆ ಸಲ್ಲಿಸಬೇಕಾಗಿತ್ತು.[೧೪]

೧೯೨೫-೨೬ನೇ ಸಾಲಿನ ಹಿಂದುಳಿದ ಮತ್ತು ದಲಿತವರ್ಗಗಳ ವಿದ್ಯಾರ್ಥಿವೇತನ-ಆಡಳಿತಾಂಗದ ವರದಿ

ಸರ್ಕಾರಿ ಆದೇಶ ಪತ್ರದ ಸಂಖ್ಯೆ ಅ. ೩೬೫೭-೨೫-೨೬ ದಿನಾಂಕ ೨೭ ಮಾರ್ಚ್ ೧೯೨೬ ರಂದು ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜುಕೇಷನ್ ರವರು ೧೯೨೫-೨೬ನೇ ಸಾಲಿನ ಹಿಂದುಳಿದ ವರ್ಗಗಳ ಮತ್ತು ನಿಮ್ನವರ್ಗಗಳ ವಿದ್ಯಾರ್ಥಿವೇತನದ ವರದಿಯನ್ನು ಆಡಳಿತಾಂಗದ ಮುಂದೆ ಮಂಡಿಸಿದರು. ಶಿಕ್ಷಣ ವಿಭಾಗದ ಇನ್‌ಸ್ಪೆಕ್ಟರ್ ಜನರಲ್ ಆಗಿದ್ದಂತಹ ಕೆ ಮಾರಥನ್ ರವರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಪಿ.ಜಿ. ಸೊಂಯೋಜ್‌ರವರಿಗೆ ವರದಿ ನೀಡಿದರು. ಹಿಂದುಳಿದ ಮತ್ತು ನಿಮ್ನವರ್ಗಗಳ ವಿದ್ಯಾರ್ಥಿವೇತನವನ್ನು ರಾಜ್ಯದ ಎಲ್ಲಾ ಭಾಗಗಳಿಗೂ ಹಂಚಿಕೆ ಮಾಡಿದ ಮಾಹಿತಿ ಹಾಗೂ ವಿದ್ಯಾರ್ಥಿ ವೇತನವು ಲಭ್ಯವಿರುವ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದರು.

ವಿದ್ಯಾರ್ಥಿ ವೇತನಕ್ಕೆ ಬಂದಿರುವ ಅರ್ಜಿಗಳು ಮತ್ತು ಅರ್ಹತೆಯ ಆಧಾರದ ಮೇಲೆ ಎಷ್ಟು ಅರ್ಜಿಗಳನ್ನ ಪರಿಗಣಿಸಲಾಗಿದೆ ಮತ್ತು ವಿದ್ಯಾರ್ಥಿವೇತನವನ್ನು ನೀಡಲು ಇರುವ ಅವಶ್ಯಕತೆಯನ್ನು ಸರ್ಕಾರದ ಗಮನಕ್ಕೆ ತಂದರು.

ಒಟ್ಟು ಬಿಡುಗಡೆಯಾದ ವಿದ್ಯಾರ್ಥಿವೇತನ ೬೧.೭೯೦ ರೂಪಾಯಿಗಳು ವಾರ್ಷಿಕ ಅನುದಾನ ೫೫೧೦ ರೂ ಮತ್ತು ಹೆಚ್ಚುವರಿ ಅನುದಾನ ೮೦೦೦ ಸೇರಿದಂತೆ ಎಲ್ಲಾ ವಿದ್ಯಾರ್ಥಿ ವೇತನದ ಅನುದಾನವನ್ನೇ ಈ ವರ್ಷ ಬಳಕೆಮಾಡಿಕೊಳ್ಳುವ ಸಂಪೂರ್ಣ ಮಾಹಿತಿಯನ್ನು ಸರ್ಕಾರಕ್ಕೆ ತಮ್ಮ ಆಡಳಿತಾಂಗದ ವರದಿಯಲ್ಲಿ ಮಂಡಿಸಿದರು.[೧೫] ಅನುದಾನ ತೃಪ್ತಿಕರವಾಗಿದ್ದು ಎಲ್ಲ ರೀತಿಯ ಉಚಿತ ವಿದ್ಯಾರ್ಥಿವೇತನ, ಅರೆ ವಿದ್ಯಾರ್ಥಿವೇತನವನ್ನು ನೀಡಲು ಸಹಕಾರಿಯಾಯಿತು.

ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕು ಕಮಿಟಿಗಳಿಗೆ ವಿದ್ಯಾರ್ಥಿವೇತನವನ್ನು ಹಂಚಿಕೆ ಮಾಡಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಯಿತು. ಸರ್ಕಾರದ ಅದಿಸೂಚನೆ ಸಂಖ್ಯೆ ಆ.ಓಔ ೧೦೧-೨೬-೨೭ ದಿನಾಂಕ ೨೧ ಮೇ ೧೯೨೭ ರಂತೆ ಮೈಸೂರು ಸಂಸ್ಥಾನದಾದ್ಯಂತ ಇರುವ ವರ್ನಾಕ್ಯುಲರ್ ಶಾಲೆ, ಇಂಗ್ಲಿಷ್ ಶಾಲೆಗಳು ಮತ್ತು ನಿಮ್ನ ವರ್ಗಗಳ ಶಾಲೆಗಳಲ್ಲಿ ಓದುತ್ತಿರುವ ಅವರ ಜನಸಂಖ್ಯೆಗೆ ಅನುಸಾರವಾಗಿ ವಿದ್ಯಾರ್ಥಿ ವೇತನವನ್ನು ಪಾವತಿಸಲಾಗುತ್ತಿತ್ತು. ಈ ವಿದ್ಯಾರ್ಥಿವೇತನದ ಅವಧಿ ೧೦ ತಿಂಗಳದ್ದಾಗಿತ್ತು. ಜುಲೈಯಿಂದ ಮಾರ್ಚ್ ಕೊನೆಯವರೆಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲ್ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಕೈಗೊಂಡಿರುವ ರಾಜ್ಯಾದ್ಯಂತ ಶಾಲೆಗಳಲ್ಲಿ ಇರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

ಅನ್ವಯವಾಗುತ್ತಿತ್ತು. ಇದರಿಂದಾಗಿ ಎಲ್ಲಾ ಹಿಂದುಳಿದ ಸಮುದಾಯಗಳಿಗೆ ಶಿಕ್ಷಣವನ್ನು ಪಡೆಯಲು ಸಹಕಾರಿಯಾಯಿತು.[೧೬]

ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿವೇತನಗಳು ಮತ್ತು ಅರೆ ವಿದ್ಯಾರ್ಥಿವೇತನಗಳನ್ನು ನೀಡುವ ಮತ್ತು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಒದಗಿಸುವ ಪೂರ್ಣ ಅಧಿಕಾರವನ್ನು ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ವಹಿಸಿಕೊಡಲಾಯಿತು. ಗೋಪಾಲಸ್ವಾಮಿ ಅಯ್ಯರ್ ಅವರು ೧೯೨೨ರ ಸೆಪ್ಟೆಂಬರ್ ೧೮ರಂದು ವಿಧಾನ ಪರಿಷತ್ತಿನಲ್ಲಿ ದಿವಾನರು ಮಾಡಿದ ಭಾಷಣವನ್ನು ಉಚ್ಚರಿಸಿದರು. ಅದರಲ್ಲಿ ದಿವಾನರು ಹೀಗೆ ನುಡಿದಿದ್ದಾರೆ. ಶಾಲೆಯ ದಕ್ಷತೆಗೆ ಶಾಲೆಯ ಮುಖ್ಯೋಪಾಧ್ಯಾಯರು ಜವಾಬ್ದಾರರು ಉಚಿತ ವಿದ್ಯಾರ್ಥಿವೇತನಗಳು ಅರೆ ವಿದ್ಯಾರ್ಥಿ ವೇತನಗಳನ್ನು ನೀಡುವ ಅಧಿಕಾರ ಸಂಪೂರ್ಣವಾಗಿ ಅವರ ವಿವೇಚನೆಗೆ ಬಿಡತಕ್ಕದ್ದು ಶಾಲೆಗಳು ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಮತೀಯ ಆಧಾರದ ಮೇಲೆ ನೀಡತಕ್ಕದಲ್ಲ. ವಿದ್ಯಾರ್ಥಿಗಳ ಅರ್ಹತೆ ಮತ್ತು ಬಡತನದ ಆಧಾರದ ಮೇಲೆ ಉಚಿತ ವಿದ್ಯಾರ್ಥಿವೇತನಗಳನ್ನು ನೀಡತಕ್ಕದ್ದು ಮತ್ತು ಹಿಂದುಳಿದ ನಿಮ್ನವರ್ಗದ ವಿದ್ಯಾರ್ಥಿ ವೇತನಗಳನ್ನು ಜನಾಂಗಗಳ ಆಧಾರದ ಮೇಲೆ ನೀಡತಕ್ಕದ್ದು. ಪ್ರತಿಯೊಂದು ಶಾಲೆಯಲ್ಲಿಯೂ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಬೋಧಕರುಗಳು ಇದ್ದಾರೆ ಮತ್ತು ಈ ಉದ್ದೇಶಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡುವ ಬದಲು ಅವರೇ ಈ ಪ್ರಶ್ನೆಯನ್ನು ತೀರ್ಮಾನಿಸಬಹುದು. ಅರ್ಜಿದಾರರುಗಳ ಸಂಖ್ಯೆ ಹೆಚ್ಚಾಗಿದ್ದು, ಸ್ಥಾನಗಳು ಮಿತಿಯಲ್ಲಿದ್ದಾರೆ ಅಂತಹ ಸಂದರ್ಭಗಳಲ್ಲಿ ವ್ಯವಹಾರಿಕ ತೊಂದರೆಗಳು ಇದ್ದೇ ಇರುತ್ತದೆ ಎಂದು ವಿವರಿಸಿದರು. ಒಂದು ಜನಾಂಗದ ಪ್ರತಿಯೊಬ್ಬ ಸದಸ್ಯನು ತನ್ನ ಜನಾಂಗದ ಹಿತಾಸಕ್ತಿಗಳನ್ನು ಸಾಮಾನ್ಯವಾಗಿ ಕಾಪಾಡುತ್ತಾನೆ ಅಂತಹ ಒಂದು ಸಮಿತಿ ಸಲಹಾ ಸಮಿತಿಯಾಗಿ ಮಾತ್ರ ಉತ್ತಮವಾಗಿರಬಹುದೆ ವಿನಃ ಅಂತಿಮ ತೀರ್ಮಾನವನ್ನು ಶಾಲಾ ಅಥವಾ ಕಾಲೇಜು ಸಮಿತಿಗಳಿಗೆ ನೀಡಬೇಕಾಗಿದೆ. ಸರ್ಕಾರಕ್ಕೆ ಬಾರಿ ವೆಚ್ಚವನ್ನು ಹೊಂದಿದ್ದರೂ ಕೂಡ ಈ ತೊಂದರೆಯನ್ನು ಪರಿಹಾರ ಮಾಡಲು ಮತ್ತು ಶಿಕ್ಷಣವನ್ನು ಸಂಪೂರ್ಣವಾಗಿ ಉಚಿತಗೊಳಿಸುವ ನಿರ್ಧಾರವನ್ನು ಕೈಗೊಂಡರು.[೧೭]

ನಿಮ್ನವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ಬಟ್ಟೆ ನೀಡಲು ವಾರ್ಷಿಕವಾಗಿ ೨೦೦೦ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿತು. ವಿದ್ಯಾರ್ಥಿ ವೇತನಕ್ಕೆ ಅನರ್ಹತೆಯಿಂದ ಆಯ್ಕೆಯಾಗಿಲ್ಲದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ೧೬೦೦ ರೂಗಳನ್ನು ನೀಡಿತು. ಇದರಿಂದಾಗಿ ವಿದ್ಯಾರ್ಥಿವೇತನಕ್ಕೆ ಕೆಲವೊಂದು ಕಾರಣಗಳಿಂದ ಅರ್ಹತೆ ಪಡೆಯದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಸಹ ಅನುಕೂಲವಾಯಿತು. ಸರ್ಕಾರದ ಆದೇಶ ಸಂಖ್ಯೆ ೧೩೬೯೦– ಎಫ್.ಜೆಡ್ ೯೪ ೮೩೪–೨೮–೨ ದಿನಾಂಕ ೨೭ನೇ ಜೂನ್ ೧೯೨೯ ರಂದು ಹೊರಡಿಸಿದ

ಆದೇಶದಲ್ಲಿ ಆದಿಕರ್ನಾಟಕ ಮತ್ತು ಆದಿದ್ರಾವಿಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ನಿರ್ದೇಶನ ನೀಡಿತು. ವಸತಿ ನಿಲಯಗಳನ್ನು ತೆರೆಯಲು ಬೇಕಾದ ಅಗತ್ಯ ಅನುದಾನವನ್ನು ಸರ್ಕಾರ ಮಂಜೂರು ಮಾಡಲಾಗುವುದು ಆದಿಕರ್ನಾಟಕ ಮತ್ತು ಆದಿದ್ರಾವಿಡ ವಿದ್ಯಾರ್ಥಿಗಳ ವೆಚ್ಚಕ್ಕಾಗಿ ಪ್ರತಿ ವಿದ್ಯಾರ್ಥಿಗೆ ೩ ರೂಪಾಯಿಗಳನ್ನು ಊಟದ ವೆಚ್ಚಕ್ಕಾಗಿ ನೀಡಲಾಗುವುದೆಂದು ಆದೇಶವನ್ನು ಹೊರಡಿಸಿತು.

೧೯೨೭ನೇ ಸಾಲಿನಲ್ಲಿ ನೀಡಿರುವ ವಿದ್ಯಾರ್ಥಿವೇತನ ವಿವರ

ವಿದ್ಯಾರ್ಥಿ ವೇತನವನ್ನು ಕಡೂರು ಜಿಲ್ಲೆಯಲ್ಲಿ ೧೯೩೩ರ ವಾರ್ಷಿಕ ಅವಧಿಯಲ್ಲಿ ಪ್ರಾಥಮಿಕ ಶಾಲೆಯಲ್ಲಿನ ನಿಮ್ನವರ್ಗದ ವಿದ್ಯಾರ್ಥಿಗಳಿಗೆ ಬಿಡುಗಡೆಮಾಡಲಾಯಿತು. ವಿದ್ಯಾರ್ಥಿ ವೇತನಕ್ಕೆ ಹಲವಾರು ಅಂಶಗಳನ್ನು ಪರಿಗಣಿಸಲಾಗುತ್ತಿತ್ತು. ವಿದ್ಯಾರ್ಥಿಗಳ ಪ್ರಗತಿಯು ತೃಪ್ತಿದಾಯಕ ವಾಗಿರಬೇಕಾಗಿತ್ತು. ಉತ್ತಮ ನಡವಳಿಕೆಯನ್ನು ಹೊಂದಿರಬೇಕಾಗಿತ್ತು. ವಿದ್ಯಾರ್ಥಿಗಳ ಕೌಟುಂಬಿಕ ಹಿನ್ನೆಲೆ ನಿಯಮಿತವಾದ ಹಾಜರಾತಿ ಮುಂತಾದ ಅಂಶಗಳನ್ನು ವಿದ್ಯಾರ್ಥಿವೇತನ ನೀಡುವುದಕ್ಕೆ ಅರ್ಹತೆಗಳನ್ನಾಗಿ ಪರಿಗಣಿಸಲಾಗುತ್ತಿತ್ತು. ಈ ವಿದ್ಯಾರ್ಥಿ ವೇತನದ ಅವಧಿಯು ೧೦ ತಿಂಗಳದಾಗಿ ರುತ್ತಿತ್ತು. ಜೂನ್ ೧, ೧೯೩೩ ರಿಂದ ಮಾರ್ಚ್ ೧೯೩೪ರವರೆಗೆ ಸರ್ಕಾರಿ ಆದೇಶ ಸಂಖ್ಯೆ ಡಿ.ಟಿ. ೯೭೭ ಆಫ್ ೧೯೩೨-೩೩ ದಿನಾಂಕ ೧೨ ನವೆಂಬರ್ ೧೯೩೩ರಂದು ಅರ್ಹತೆಗೊಂಡಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿತು. ಈ ನಿಮ್ನವರ್ಗಗಳ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಆಧಾರದ ಮೇಲೆ ಅವರ ಪ್ರಗತಿ, ಹಾಜರಾತಿಯನ್ನು ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡುವ ಅಧಿಕಾರ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಆಫ್ ಎಜುಕೇಷನ್ ಡಿಪಾರ್ಟ್‌ಮೆಂಟ್ ನವರ ಕಾರ್ಯವಾಗಿತ್ತು.[೧೮]

ತರಗತಿ	ವಿದ್ಯಾರ್ಥಿ ವೇತನದ ಮೊತ್ತ	ವಿದ್ಯಾರ್ಥಿಗಳ ಸಂಖ್ಯೆ	ಮಂಜೂರಾತಿ ಪ್ರಾಧಿಕಾರ
ಪ್ರಾಥಮಿಕ ಶಾಲೆ	೮ ಪೈ	೩೦೦	ಶಿಕ್ಷಣ ಕಾರ್ಯದರ್ಶಿ
ಒಂದನೇ ವರ್ಷ	೮ ಪೈ	೨೯೦	
ಎರಡನೇ ವರ್ಷ	೨ ರೂ	೨೯೦	
ನಾಲ್ಕನೇ ವರ್ಷ	೨ ರೂ	೨೯೦	
ಐದನೇ ವರ್ಷ	೪ ರೂ	೧೧೩	
ಒಂದನೇ ವರ್ಷ	೩ ರೂ	೧೧೫	ಮಾಧ್ಯಮಿಕ ಶಾಲೆ
ಎರಡನೇ ವರ್ಷ	೫ ರೂ		

ಮೂರನೇ ವರ್ಷ	೫ ರೂ	೧೪೮	
ನಾಲ್ಕನೇ ವರ್ಷ	೩ ರೂ		
ಒಂದನೇ ವರ್ಷ	೧೦ ರೂ	೫೯	ಪ್ರೌಢ ಶಾಲೆ
ಎರಡನೇ ವರ್ಷ	೧೦ ರೂ	೧೩	
ಮೂರನೇ ವರ್ಷ	೧೦ ರೂ		

ಕಡೂರು ಜಿಲ್ಲೆಯ ೧೯೩೩-೩೪ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದ ಆದಿಕರ್ನಾಟಕ ವಿದ್ಯಾರ್ಥಿನಿಯರ ಪಟ್ಟಿ

ಕ್ರಸಂ.	ವಿದ್ಯಾರ್ಥಿ ಹೆಸರು	ಶಾಲೆಯ ಹೆಸರು	ವಿದ್ಯಾರ್ಥಿ ವೇತನದ ವಿವರ
೧.	ಬಿ. ದೊಡ್ಡಮ್ಮ	ಬುದ್ದನಗರ ಆದಿಕರ್ನಾಟಕ ಶಾಲೆ	೮ ಪೈಸೆ
೨.	ಡಿ. ಲಕ್ಷ್ಮಿ	ಹೆಸೆಗಲ್	೮ ಪೈಸೆ
೩.	ಎಸ್. ಸಾವಿತ್ರಮ್ಮ	ಕೆಶವಲಳ್ಳಿ	೮ ಪೈಸೆ
೪.	ಎಂ. ಲಕ್ಕಮ್ಮ	ಲಕ್ಯ	೮ ಪೈಸೆ
೫.	ಡಿ.ಬಿ. ಮಲ್ಲಮ್ಮ	ಚಿಕ್ಕಮಗಳೂರು	೮ ಪೈಸೆ
೬.	ಕೆ. ಯಲ್ಲಮ್ಮ	ಲಕ್ಯ	೮ ಪೈಸೆ
೭.	ಸಿ.ಆರ್. ಭೈರಮ್ಮ	ಪಂದಗೋಡು	೮ ಪೈಸೆ
೮.	ಎಸ್. ಭೈರಮ್ಮ	ಚಂದಗೋಡು	೮ ಪೈಸೆ
೯.	ಅ. ಪಾರ್ವತಿ	ಮಲೆರ	೮ ಪೈಸೆ
೧೦.	ಜೆ. ಭಾಗೀರತಿ	ಮಲೆರ	೮ ಪೈಸೆ
೧೧.	ಸಿದ್ದಿ	ಸಿಂದಗೆರೆ	೮ ಪೈಸೆ
೧೨.	ದೊಡ್ಡವಾರಿ	ಸಿಂದಗೆರೆ	೮ ಪೈಸೆ
೧೩.	ಕೆಂಚ	ಸಿಂದಗೆರೆ	೮ ಪೈಸೆ
೧೪.	ಕರಿಯಮ್ಮ	ಅಜ್ಜಂಪುರ	೮ ಪೈಸೆ

ಎರಡನೇ ವರ್ಷದ ಪ್ರಾಥಮಿಕ ಶಾಲೆ ವಿದ್ಯಾರ್ಥಿನಿಯರು

೧	ಭಾಗೀರತಮ್ಮ	ಚಿಕ್ಕಮಗಳೂರು	೮ ಪೈಸೆ
೨	ಎಲ್. ಸಣ್ಣದೊಡ್ಡಮ್ಮ	ಚಿಕ್ಕಮಗಳೂರು	೮ ಪೈಸೆ
೩	ಎಸ್. ತಿಮ್ಮಮ್ಮ	ಹೀರೆಮಗಳೂರು	೮ ಪೈಸೆ
೪	ಡಿ. ಲಕ್ಕಮ್ಮ	ಹೀರೆಮಗಳೂರು	೮ ಪೈಸೆ

೭.೨. ದಲಿತ ವರ್ಗದವರ ಅಭ್ಯರ್ಥಿಗಳಿಗೆ ಶಿಕ್ಷಕ ಹುದ್ದೆಗೆ ನೇರ ನೇಮಕಾತಿ ಆದೇಶ

ಅಧಿಕೃತ ಜ್ಞಾಪನ **ನಂ:** ೪೦೦೬–೨೫–ಅ–೧೨.೬.೨೫–೩೨–೧ ದಿನಾಂಕ ೨೩ ಡಿಸೆಂಬರ್ ೧೯೩೨ ಸರ್ಕಾರಿ ಆದೇಶ ಸಂಖ್ಯೆ ೪೫೪–೫೫– ಸಿ.ಆರ್. ೬–೧–೨೮–೩ ದಿನಾಂಕ ೧೪ ಜುಲೈ ೧೯೨೮ ರ ನಿರ್ದೇಶನದಂತೆ ಆದಿಕರ್ನಾಟಕ ಶಾಲೆಗಳಲ್ಲಿ ಅರ್ಹತೆಯನ್ನು ಹೊಂದಿದ್ದ ಆದಿಕರ್ನಾಟಕ ಸಮುದಾಯದ ಅಭ್ಯರ್ಥಿಗಳನ್ನು ಯಾವ ಯಾವ ಪ್ರದೇಶಗಳಲ್ಲಿ ಆದಿಕರ್ನಾಟಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರನ್ನು ತುಂಬಲು ಅವಕಾಶ ನೀಡಲಾಯಿತು. ಇದಕ್ಕೆ ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸದೆ ನೇರವಾಗಿ ನೇಮಕ ಮಾಡಿಕೊಳ್ಳಬಹುದಾಗಿತ್ತು.

ಎಲ್ಲಾ ಅಧಿಕಾರಿಗಳಿಗೆ ಶಿಕ್ಷಕರ ನೇಮಕಾತಿ ಮಾಡುವ ಅಧಿಕಾರವನ್ನು ನೀಡಲಾಯಿತು. ಸರ್ಕಾರ ನಿರ್ದೇಶಿಸಿದಂತೆ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ನಿಮ್ನವರ್ಗಗಳ ಶಾಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಬಗ್ಗೆ ಮಾಹಿತಿಯನ್ನು ಸರ್ಕಾರದ ಗಮನಕ್ಕೆ ತರಬೇಕಾಗಿತ್ತು. ನಿಮ್ನವರ್ಗದ ಸಮುದಾಯಗಳಲ್ಲಿ ಅರ್ಹತೆ ಮತ್ತು ಉತ್ತಮ ಪ್ರಾವಿಣ್ಯತೆಯನ್ನು ಹೊಂದಿದಂತಹ ಅಭ್ಯರ್ಥಿಗಳನ್ನ ನೇರವಾಗಿ ಶಿಕ್ಷಕರ ಹುದ್ದೆಗೆ ಭರ್ತಿಮಾಡುವಂತೆ ನಿರ್ದೇಶನ ನೀಡಿತು. ಒಂದು ವೇಳೆ ನಿಮ್ನವರ್ಗದ ಸಮುದಾಯದ ಶಾಲೆಗಳಲ್ಲಿ ಶಿಕ್ಷಕ ಹುದ್ದೆ ಖಾಲಿ ಇಲ್ಲದೆ ಇದ್ದು ಹಾಗೂ ನಿಮ್ನವರ್ಗದಲ್ಲಿ ಶಿಕ್ಷಕ ಹುದ್ದೆಗೆ ಅರ್ಹತೆ ಹೊಂದಿದ್ದ ಅಭ್ಯರ್ಥಿಗಳಿದ್ದರೆ ಅಂತಹ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕಾರ ಮಾಡಿ ಶಿಕ್ಷಕರು ಇದ್ದಾರೆ ಎಂದು ಪತ್ರಿಕಾ ಪ್ರಕಟಣೆ ನೀಡಬೇಕಾಗಿತ್ತು. ಸಂಸ್ಥಾನದ ಯಾವುದೇ ಸ್ಥಳದಲ್ಲಿ ಈ ಅಭ್ಯರ್ಥಿಗಳು ಕಾರ್ಯ ನಿರ್ವಹಿಸಲು ಮುಂದೆ ಬಂದರೆ ಅವರಿಗೆ ಮೊದಲ ಆದ್ಯತೆಯನ್ನು ಕಲ್ಪಿಸಿಕೊಡುವ ಜವಾಬ್ದಾರಿ ಈ ಸ್ಥಳೀಯ ಶಿಕ್ಷಣ ಅಧಿಕಾರಿಗಳ ಕಾರ್ಯವಾಗಿತ್ತು.[೯]

೭.೩. ದಲಿತ ವರ್ಗದವರ ಸಾಮಾಜಿಕ ಹಾಗು ಶೈಕ್ಷಣಿಕ ಸಮಸ್ಯೆಗಳು

೧೮೮೧ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆಯಾದ ಮೊದಲ–೨ ದಶಕಗಳವರೆಗೆ ದಲಿತರ ತೊಂದರೆಗಳು ಸಾಕಷ್ಟು ಗಮನವನ್ನು ಪಡೆಯಲಿಲ್ಲ. ಆ ಜನಾಂಗದ ಒಬ್ಬ ಪ್ರತಿನಿಧಿಯೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಇರಲಿಲ್ಲ ಮತ್ತು ಅವರ ವ್ಯವಹಾರಗಳು ಅವರ ಅನುಪಸ್ಥಿತಿಯಲ್ಲಿ

ನಡೆದವು. ಆದರೆ ಮುಂದಿನ ವರ್ಷಗಳಲ್ಲಿ ಆದಿ ದ್ರಾವಿಡ ಸಂಘದಿಂದ ಒಬ್ಬ ಪ್ರತಿನಿಧಿಯನ್ನು ನಾಮ ನಿರ್ದೇಶನ ಮಾಡುವುದು ಸೂಕ್ತ ಎಂದು ಸರ್ಕಾರ ಭಾವಿಸಿತು ಮತ್ತು ಹಾಗೆ ನಾಮ ನಿರ್ದೇಶನ ಹೊಂದಿದ ವ್ಯಕ್ತಿ ಹಿಂದುಳಿದ ವರ್ಗಗಳ ತೊಂದರೆಗಳು ಮತ್ತು ಸಮಸ್ಯೆಗಳ ಮೇಲೆ ಗಮನವನ್ನು ಕೇಂದ್ರೀಕರಿಸುವಂತೆ ಮಾಡಲು ಪ್ರತಿಯೊಂದು ಸಂದರ್ಭವನ್ನೂ ಉತ್ತಮವಾಗಿ ಉಪಯೋಗಿಸಿಕೊಂಡರು. ಹಾಗೆಯೇ ನಿಧಾನವಾಗಿ ಇತರ ಸದಸ್ಯರುಗಳು ಕೂಡಾ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡರು ಮತ್ತು ಆ ವರ್ಗಗಳ ಉನ್ನತಿಗೆ ಕಾರಣಗಳನ್ನು ಸಮರ್ಥಿಸಿದರು. ಪಂಚಮರುಗಳಿಗೆ ಸಮಾನ ರೀತಿಯ ಉಪಚಾರ ಒದಗಿಸುವ ವಿಚಾರವನ್ನು ಬೆಂಬಲಿಸುವಲ್ಲಿ ಶಕ್ತಿಯುತವಾಗಿ ಮಾತನಾಡಲು ಒಬ್ಬ ಬ್ರಾಹ್ಮಣ ಸದಸ್ಯರಾದ ಶ್ರೀ.ಗೋಪಾಲಸ್ವಾಮಿ ಅಯ್ಯರ್ ಅವರಿಗೆ ಅಧಿಕಾರವನ್ನು ವಹಿಸಿಕೊಡಲಾಯಿತು. ಅವರು ಪಂಚಮ ಬಾಲಕರುಗಳಿಗೆ ಇತರ ಬಾಲಕರುಗಳೊಂದಿಗೆ ಸರ್ಕಾರಿ ಸಂಸ್ಥೆಗಳಲ್ಲಿ ಪ್ರವೇಶ ದೊರಕಿಸಿಕೊಡಲು ಒಂದು ತೀವ್ರ ಹೋರಾಟವನ್ನೇ ನಡೆಸಿದರು.[೨೦] ಇತರ ವರ್ಗಗಳ ಸದಸ್ಯರುಗಳಿಂದ ತೀವ್ರ ಮತ್ತು ನಿರಂತರ ವಿರೋಧಿ ಇದ್ದಾಗ್ಯೂ ಅವರು ತಮ್ಮ ಹೋರಾಟವನ್ನು ನಿಲ್ಲಿಸಲಿಲ್ಲ. ಆದರೆ ಕಾಲಕ್ರಮದಲ್ಲಿ ಸರ್ಕಾರ ಸಮಾನೋಪಚಾರದ ಸೂತ್ರವನ್ನು ಗುರುತಿಸುವ ದಿಸೆಯಲ್ಲಿ ಮುಂದುವರೆಯಿತು ಮತ್ತು ವಿರೋಧಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ತನ್ನ ಸಿದ್ಧಾಂತವನ್ನು ಕಾರ್ಯರೂಪಕ್ಕೆ ಇಳಿಸಿತು.

ಪಂಚಮರ ಮಕ್ಕಳಿಗೆ ಸರ್ಕಾರದ ಖರ್ಚಿನಲ್ಲಿ ಶಿಕ್ಷಣವನ್ನು ಒದಗಿಸತಕ್ಕದ್ದು ಎಂಬ ಒಂದು ಕೋರಿಕೆಯನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ೧೯೧೭ರಲ್ಲಿ ಮಾಡಲಾಯಿತು. ಪಂಚಮರಿಗೆ ಸೌಲಭ್ಯಗಳನ್ನು ಉತ್ತಮಗೊಳಿಸಬೇಕೆಂಬ ಕೋರಿಕೆಯನ್ನು ೧೯೧೯ರಲ್ಲಿ ಮತ್ತೆ ಕೋರಲಾಯಿತು. ರಾಜ್ಯದ ಜನಸಂಖ್ಯೆಯ ಆರನೇ ಒಂದು ಭಾಗವಾಗಿರುವ ಪಂಚಮರ ಹಕ್ಕುಗಳ ಯಥಾರ್ಥತೆಯ ಬಗ್ಗೆ ದಿವಾನರು ಒಪ್ಪಿದರು. ಪಂಚಮರು ಹೀನ ಬಡತನದಲ್ಲಿ ಜೀವಿಸುತ್ತಿದ್ದಾರೆ. ಆಶಾರಹಿತ ಅನಕ್ಷರಸ್ಥರಾಗಿದ್ದಾರೆ ಮತ್ತು ಈಗಿರುವ ತಮ್ಮ ಪರಿಸ್ಥಿತಿಯಿಂದ ಮೇಲೇರಲು ಯಾವುದೇ ಸಕಾರಣವಾದ ಆಕಾಂಕ್ಷೆಯನ್ನು ಹೊಂದಿಲ್ಲ ಎಂಬುದನ್ನು ಅವರು ಒಪ್ಪಿಕೊಂಡರು. ಅನೇಕ ಹುಬ್ಬುಗಳು ಗಂಟ್ಟಿಕ್ಕಿದ್ದನ್ನು ಗಮನಿಸಿದ ದಿವಾನರು ಪಂಚಮರಿಗೆ ವಿಶೇಷ ಗಮನ ನೀಡಬೇಕೆಂದ ಮಾತ್ರಕ್ಕೆ ಅದು ಇತರ ಜನಾಂಗಗಳ ಪ್ರಗತಿಗೆ ತಣ್ಣೀರು ಸುರಿಯುವುದಲ್ಲ ಎಂದು ತಕ್ಷಣ ನುಡಿದರು. ತದನಂತರ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಪಂಚಮ ಬಾಲಕರುಗಳಿಗೆ ಪ್ರವೇಶವನ್ನು ಮುಕ್ತಗೊಳಿಸಲಾಯಿತು. ಈ ಕ್ರಮ ಪ್ರತಿಭಟನೆಗಳ ಸರಣಿಯನ್ನು ಕಂಡರೂ ಕೂಡಾ ಸರ್ಕಾರ ಜಗ್ಗಲಿಲ್ಲ. ಪಂಚಮ ಬಾಲಕರು ಇತರರೊಡನೆ ಪರಸ್ಪರ ಸೇರುವುದರಿಂದ ಅದು ಅವರ ಸಾಮಾಜಿಕ ಅಭಿವೃದ್ಧಿಯನ್ನು ಶೀಘ್ರಗೊಳಿಸುತ್ತದೆ. ಎಂದು ದಿವಾನರು ವಾದ ಮಾಡಿದರು.

೧೯೨೦ರಲ್ಲಿ ಸರ್ಕಾರದ ಕ್ರಮದ ಮೇಲೆ ಒಂದು ದೀರ್ಘ ಚರ್ಚೆ ನಡೆಯಿತು. ಪಂಚಮರು ಸಮಾಜದಲ್ಲಿ ಒಂದು ಅಂತಸ್ತನ್ನು ಹೊಂದುವ ಸಮಯದವರೆಗೆ ಅವರು ಪ್ರತ್ಯೇಕ ಶಾಲೆಗಳನ್ನು ಹೊಂದಿರತಕ್ಕದ್ದು ಎಂದು ಕೆಲವು ಸದಸ್ಯರು ವಾದಿಸಿದರು ಈ ಜಾತಿಭೇದಗಳು ಪ್ರಾಚೀನ ಕಾಲದಿಂದ ಒಬ್ಬರಿಂದ ಒಬ್ಬರಿಗೆ ಬರುತ್ತಿದೆ ಮತ್ತು ಹಿಂದುಳಿದ ವರ್ಗಗಳಿಗೆ ಕೊನೆಯಲ್ಲಿ ತೊಂದರೆ ಉಂಟು ಮಾಡುವ ಯಾವುದೇ ಕ್ರಮಕ್ಕೆ ಸರ್ಕಾರ ದುಡುಕುವುದು ತಕ್ಕದ್ದಲ್ಲ. ಪಂಚಮರು ಶುಭ್ರವಾಗಿಲ್ಲ, ಅನೈರ್ಮಲ್ಯವಂತರು ಮತ್ತು ಅವರ ನಡವಳಿಕೆಗಳು ಮತ್ತು ಸಂಪ್ರದಾಯಗಳು ಅವರನ್ನು ಪ್ರಾಣಿಗಳನ್ನಾಗಿಸಿದೆ. ಎಂದು ಕೆಲವು ಸದಸ್ಯರು ನೇರವಾಗಿಯೇ ತಿಳಿಸಿದರು. ಅವರು ಕಳ್ಳಭಟ್ಟಿ ಸಾರಾಯಿಗಳಿಗೆ ಸೇವಕರಾಗಿದ್ದಾರೆ ಮತ್ತು ಇತರ ಕೆಟ್ಟ ಚಟಗಳಿಗೆ ಬಲಿಯಾಗಿದ್ದಾರೆ. ಜನರ ಸಾಮಾಜಿಕ ವಾಡಿಕೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡತಕ್ಕದ್ದಲ್ಲ ಎಂದು ವಾದ ಮಾಡಲಾಯಿತು. ಭಾರತದಲ್ಲಿನ ಧಾರ್ಮಿಕ ಪದ್ಧತಿಗಳೊಂದಿಗೆ ಹಸ್ತಕ್ಷೇಪ ಮಾಡದೆ ದೂರ ಉಳಿದಿರುವ ಬ್ರಿಟಿಷರಂತೆ ಇರಬೇಕೆಂದರು. ಒಬ್ಬ ಹೊಲೆಯ ಉತ್ತಮವಾಗಿ ವೇಷಭೂಷಣಗಳನ್ನು ಧರಿಸಿ, ವಿದ್ಯಾವಂತನಾಗಿ ಚೊಕ್ಕಟವಾದ ಸ್ವಭಾವಗಳನ್ನು ಹೊಂದಿದ್ದೇ ಆದಲ್ಲಿ ಅಂತಹವನನ್ನು ಸಮಾಜ ಅಂಗೀಕರಿಸುತ್ತದೆ ಎಂದು ಒಬ್ಬ ಸದಸ್ಯರು ನುಡಿದರು, ಶುಭ್ರವಾದ ಮತ್ತು ಉದ್ದೇಶಪೂರಿತ ಜೀವನವನ್ನು ನಡೆಸಲು ಪಂಚಮರುಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುವ ಅವಶ್ಯಕತೆ ಇದೆ ಎಂದರು. ಸಮಾಜದ ಒಂದು ವರ್ಗವನ್ನು ಪ್ರತ್ಯೇಕಿಸುವ ಈ ನಡವಳಿಕೆಯ ವಿರುದ್ಧ ಇತರ ಸದಸ್ಯರು ಪ್ರತಿಭಟನೆ ಸೂಚಿಸಿದರು, ಒಂದು ರೈಲ್ವೇ ಗಾಡಿಯಲ್ಲಾಗಲಿ ಅಥವಾ ಕಾನೂನು ನ್ಯಾಯಾಲಯಗಳಲ್ಲಾಗಲಿ ಪಂಚಮರ ಇರವನ್ನು ಸಹಿಸಿಕೊಳ್ಳುವಾಗ ಸರ್ಕಾರಿ ವೆಚ್ಚದಲ್ಲಿ ಪೋಷಣೆಗೆ ಒಳಪಟ್ಟಿರುವ ಶಾಲೆಗಳಲ್ಲಿ ಅವರನ್ನು ದೂರಸರಿಸತಕ್ಕದ್ದು ಏಕೆ ಎಂದು ಅವರು ಪ್ರಶ್ನಿಸಿದರು. ಒಂದು ದೇಶದ ಪ್ರಜೆಗಳ ನಡುವೆ ಸರ್ಕಾರ ಭೇದಭಾವಗಳನ್ನು ಎಣಿಸುವುದು ತಕ್ಕದ್ದಲ್ಲ ಎಂದರು ಪಂಚಮರ ಬಾಲಕರು ಮತ್ತು ಇತರರು ಬೆರೆಯುವರಿಂದ ಪಂಚಮೇತರ ಬಾಲಕರುಗಳಲ್ಲಿ ಕೆಟ್ಟ ಹವ್ಯಾಸಗಳು ಬೆಳೆಯುವುದಕ್ಕೆ ಕಾರಣವಾಗುತ್ತದೆ. ಆದರೆ ಪಂಚಮರಿಗೆ ಯಾವುದೇ ಪ್ರಯೋಜನ ಇದರಿಂದ ಉಂಟಾಗುವುದಿಲ್ಲ ಎಂದರು ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿ ಪಂಚಮರುಗಳಿಗಾಗಿ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸುವುದು ಅಸಾಧ್ಯ ಆದ್ದರಿಂದ ಬಾಲಕರನ್ನು ಬೆರೆಯಲು ಬಿಡದೇ ಬೇರೆ ದಾರಿ ಇಲ್ಲ ಎಂದು ಮತ್ತೊಬ್ಬ ಸದಸ್ಯರು ನುಡಿದರು. ಅದಲ್ಲದೆ ಅವರೂ ಕೂಡಾ ನಮ್ಮಂತೆಯೇ ಮನುಷ್ಯರು ಮತ್ತು ಸಮಾನ ಉಪಚಾರಕ್ಕೆ ಅರ್ಹರು, ಪಂಚಮರ ರಕ್ಷಣೆಗೆ ಧಾವಿಸಿದ ಒಬ್ಬ ಮುಸಲ್ಮಾನ ಸದಸ್ಯರು, ದೇವರು ಎಲ್ಲ ಮನುಷ್ಯರನ್ನು ಸಮಾನವನ್ನಾಗಿ ಹುಟ್ಟಿಸಿದ್ದಾನೆ ಎಂದು ನುಡಿದರು. ಜನತೆ ಪಂಚಮರನ್ನು ಸಮಾನ ಪ್ರಜೆಗಳಾಗಿ ಒಪ್ಪಲು ಇನ್ನೂ ಸಿದ್ದವಾಗಿಲ್ಲ, ಎಂದು ತಿಳಿಸಿ

ದಿವಾನರು ಈ ಚರ್ಚೆಯನ್ನು ಮುಕ್ತಾಯ ಮಾಡಿದರು. ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ ಮತ್ತು ಆದ್ದರಿಂದ ಸರ್ಕಾರಿ ಸಂಸ್ಥೆಗಳಲ್ಲಿ ಪಂಚಮ ಬಾಲಕರುಗಳಿಗೆ ಸಮಾನ ಉಪಚಾರ ನೀಡಬೇಕೆಂಬ ಆದೇಶವನ್ನು ಹಿಂಪಡೆಯಲು ಸರ್ಕಾರ ಸಿದ್ಧವಾಗಿಲ್ಲ ಎಂದು ನುಡಿದರು. ಬೋಧಕರುಗಳಿಗೆ ಸಂಬಳಗಳನ್ನು ಪಾವತಿ ಮಾಡುವ ಅಥವಾ ಶಾಲೆಗಳ ನಿರ್ಮಾಣದ ವಿಚಾರದಲ್ಲಿ ಪಂಚಮರುಗಳಿಗೆ ವಿಶೇಷ ಸಹಾನುಭೂತಿಯನ್ನು ತೋರಬೇಕೆಂದು ೧೯೧೭ರಲ್ಲಿ ಮಡಿಕೇರಿ ತಾಲ್ಲೂಕಿನ ಶ್ರೀ.ನಂಜುಂಡಶೆಟ್ಟಿ ಕೋರಿದರು. ಈ ಜನಾಂಗದವರ ಮಕ್ಕಳುಗಳಿಗೆ ಸರ್ಕಾರದ ವೆಚ್ಚದಲ್ಲಿ ಶಿಕ್ಷಣ ಒದಗಿಸಬೇಕೆಂದು ಕೋರಿದರು. ಅದನ್ನು ಮಾಡಲಾಗಿದೆ ಎಂದು ಸರ್ಕಾರ ಉತ್ತರಿಸಿತು.

೧೯೧೯ರ ಏಪ್ರಿಲ್ ಅಧಿವೇಶನದಲ್ಲಿ ಶ್ರೀ.ಪದ್ಮಣ್ಣ ಮತ್ತು ಇನ್ನಿತರರು ಮಾತನಾಡಿ ಪಂಚಮರ ಶಿಕ್ಷಣಕ್ಕೆ ಒದಗಿಸಿರುವ ಸೌಲಭ್ಯಗಳು ಸಾಲದು ಎಂದು ಗುರುತಿಸಿ ಹೇಳಿದರು. ಸರ್ಕಾರಕ್ಕೆ ಪರಿಸ್ಥಿತಿಯ ಬಗ್ಗೆ ಅರಿವಿದೆ ಎಂದು ತಿಳಿಸಿದ ದಿವಾನರು ಅದರ ಕೈಲಾದಷ್ಟು ಮಾಡುತ್ತಾ ಇದೆ ಎಂದರು. ಈ ವಿಷಯದ ಮೇಲೆ ಮನವಿ ಮಾಡಲು ಶ್ರೀ.ವೆಂಕಟಸ್ವಾಮಯ್ಯ ಒತ್ತಾಯಿಸಿದಾಗ, ಈ ವಿಷಯ ಚರ್ಚಿಸುವ ವಿಚಾರದಲ್ಲಿ ಒತ್ತಾಯ ಬೇಡವೆಂದು ಆ ಸದಸ್ಯರಿಗೆ ದಿವಾನರು ಸಲಹೆ ಮಾಡಿದರು. ಅವರಿಗಾಗಿ ಉದ್ದೇಶಿಸಲಾದ ಶಾಲೆಗಳಲ್ಲಿ ಪಂಚಮರುಗಳಿಗೆ ಶಿಕ್ಷಣಕ್ಕಾಗಿ ಹೆಚ್ಚು ಸೌಲಭ್ಯಗಳನ್ನು ಸರ್ಕಾರ ರಚಿಸಿದಲ್ಲಿ ಮಾತ್ರ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಶ್ರೀ.ವೆಂಕಟಸ್ವಾಮಯ್ಯ ಮತ್ತೆ ಒತ್ತಿ ಹೇಳಿದರು. ಸಾಮಾಜಿಕವಾಗಿ ಉತ್ತಮಗೊಳ್ಳಲು ಸಹಾಯಕ್ಕೆ ಹೆಚ್ಚು ಅರ್ಹರಾದ ವರ್ಗ ಎಂದರೆ ಪಂಚಮರೆಂದು ಕರೆಸಿಕೊಳ್ಳುವ ಜನಾಂಗ ಮತ್ತು ಮೈಸೂರು ರಾಜ್ಯದಲ್ಲಿ ಈ ವರ್ಗದ ಜನರಿಗಿಂತ ಅರ್ಹರು ಆ ದಿಸೆಯಲ್ಲಿ ಇಲ್ಲ ಎಂದು ದಿವಾನರು ೧೯೧೯ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ತಮ್ಮ ದಸರಾ ಅಧಿವೇಶನದ ಭಾಷಣದಲ್ಲಿ ಉದ್ಗರಿಸಿದರು. ಈ ಜನಾಂಗದ ಜನಸಂಖ್ಯೆ ಸುಮಾರು ೧೦ ಲಕ್ಷಗಳು ಅಥವಾ ಹೆಚ್ಚು ಮತ್ತು ಒಟ್ಟು ಜನಸಂಖ್ಯೆಯ ಆರನೆ ಒಂದು ಭಾಗದಷ್ಟಿದೆ. ಪಂಚಮರು ಹೀನ ಬಡತನದಲ್ಲಿ ಮುಳುಗಿದ್ದಾರೆ, ಆಶಾರಹಿತವಾಗಿ ಅನಕ್ಷರಸ್ಥರಾಗಿದ್ದಾರೆ ಮತ್ತು ಈಗಿನ ಪರಿಸ್ಥಿತಿಯಿಂದ ಮೇಲೇರಲು ಬೇಕಾದ ಮೂಲ ಸಂಪತ್ತನ್ನಾಗಲಿ ಅಥವಾ ಅಭಿಲಾಷೆಯನ್ನಾಗಲಿ ಹೊಂದಿರುವುದಿಲ್ಲ. ಈ ಪರಿಸ್ಥಿತಿಯನ್ನು ಒಂದು ಬದಿಗೆ ಇಟ್ಟರೂ ಅವರ ಸಂಖ್ಯೆಯನ್ನು ಹಾಗೆಯೇ ಪರಿಗಣಿಸಿದರೂ ಕೂಡಾ ಅದು ರಾಜ್ಯಕ್ಕೆ ಒಂದು ಬಾರಿ ಆರ್ಥಿಕ ನಷ್ಟವಾಗಿದೆ ಎಂಬುದನ್ನು ದಿವಾನರು ಅಂಗೀಕರಿಸಿದರು.[೨೦] ಕಳೆದ ಕೆಲವು ವರ್ಷಗಳಲ್ಲಿ ಅವರಿಗೆ ಶಿಕ್ಷಣಕ್ಕೆ ಸೌಲಭ್ಯಗಳನ್ನು ಉಂಟು ಮಾಡಲು ಭಾರಿ ಪಯತ್ನಗಳನ್ನು ಮಾಡಲಾಗಿದೆ ಮತ್ತು ರಾಜ್ಯದ ಎಲ್ಲ ಭಾಗಗಳಲ್ಲಿ ಸಾರ್ವಜನಿಕ ಶಾಲೆಗಳನ್ನು ಅವರಿಗಾಗಿ ಇತ್ತೀಚೆಗೆ ತೆಗೆದುಬಿಡಲಾಗಿದೆ. ಹಾಗಿದ್ದರೂ ಶಿಕ್ಷಣಕ್ಕೆ ಕೇವಲ ಸೌಲಭ್ಯಗಳಲ್ಲದೆ ಇನ್ನೂ ಹೆಚ್ಚಿನ ಅವಶ್ಯಕತೆಗಳು ಇವೆ. ಈಗಿನ ವಿದ್ಯಾರ್ಥಿಗಳು ಸಮಾಜದಲ್ಲಿ

ಗಳಿಸುವ ಸದಸ್ಯರುಗಳಾಗಿ ನೆಲೆನಿಲ್ಲಬೇಕಾದಲ್ಲಿ ಸ್ವಲ್ಪ ಕಾಲದ ಅವಶ್ಯಕತೆ ಇದೆ. ಪಂಚಮರುಗಳ ಸ್ಥಿತಿಯನ್ನು ಉತ್ತಮಗೊಳಿಸುವ ಆಶಯವನ್ನು ಈಗಾಗಲೇ ಸಾಮಾಜಿಕ ಹಂತದಲ್ಲಿ ಸ್ವಪ್ರಯತ್ನದಿಂದ ಮೇಲೇರಿರುವ ಯಾವುದೇ ಇತರ ಹೆಚ್ಚು ಅದೃಷ್ಟಶಾಲಿ ಜನಾಂಗದ ಪ್ರಗತಿಗೆ ತಣ್ಣೀರೆರಚುವ ದುರುದ್ದೇಶವೆಂದು ಪರಿಗಣಿಸತಕ್ಕದ್ದಲ್ಲ ಎಂದು ದಿವಾನರು ಎಚ್ಚರಿಕೆ ನೀಡಿದರು. ಈ ವಿಷಯದ ಮೇಲಿನ ಚರ್ಚೆಗಳಲ್ಲಿ ಭಾರತದ ಇತರ ಭಾಗಗಳಲ್ಲಿ ದುರುದೃಷ್ಟದಿಂದಾಗಿ ಭಾವೋದ್ರೇಕಗಳು ಒಳಹೊಕ್ಕಿವೆ ಮತ್ತು ಈ ಜನಾಂಗದ ವಿಶೇಷ ಅವಶ್ಯಕತೆಗಳ ಬಗ್ಗೆ ಉಲ್ಲೇಖಿಸಿದ ಪ್ರತಿಯೊಬ್ಬನನ್ನು ಈ ಗುಂಪಿಗೆ ಅಥವಾ ಆ ಗುಂಪಿಗೆ ಸೇರಿದವನೆಂದು ಪಟ್ಟಿ ಕಟ್ಟಲಾಗುತ್ತಿದೆ. ಆದರೆ ಮೈಸೂರಿನಲ್ಲಿ ಈ ಪ್ರಶ್ನೆಗಳು ಮಹಾರಾಜರ ಪ್ರಜೆಗಳ ನಡುವೆ ಒಡಕು ಉಂಟುಮಾಡಲು ಉಪಯೋಗಿಸುವುದಕ್ಕೆ ಕ್ಷಮೆ ಇರುವುದಿಲ್ಲ. ಕಳೆದ ವರ್ಷದ ಜೂನ್ ತಿಂಗಳಿನಲ್ಲಿ ಮಹಾರಾಜರು ಒಂದು ಬ್ರಾಹ್ಮಣೇತರ ನಿಯೋಗವನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅವರು ಉಚ್ಚರಿಸಿದ ವಿವೇಕಭರಿತ, ಅಮೂಲ್ಯ ಪದಗಳನ್ನು ದಿವಾನರು ಜ್ಞಾಪಕ ಪಡಿಸಿದರು, ಮಹಾರಾಜರು ಹೇಳಿದರು, "ವಿವಿಧ ಜಾತಿಗಳ ನಡುವೆ ನ್ಯಾಯ ಮತ್ತು ಧರ್ಮಗಳಿಂದ ಕೂಡಿದ ನೀತಿಯನ್ನು ಅನುಸರಿಸುವುದು ನನ್ನ ಉದ್ದೇಶವಾಗಿದೆ, ಅನವಶ್ಯಕವಾಗಿ ಹೆಚ್ಚು ಆದರ ತೋರಿಸುವುದಾಗಲೀ ಅಥವಾ ಯಾವುದೇ ಒಂದನ್ನು ದಮನ ಮಾಡುವುದಾಗಲೀ ಇಲ್ಲದೆ ರಾಜ್ಯದ ಶಾಶ್ವತ ಒಳಿತಿಗಾಗಿ ಎಲ್ಲರನ್ನು ಮೇಲೆತ್ತಲು ಪ್ರಯತ್ನಿಸುವುದೇ ನಮ್ಮ ಗುರಿ". ಈ ವಾಕ್ಯವನ್ನು ಪ್ರತಿಯೊಬ್ಬ ಮೈಸೂರಿನಲ್ಲಿರುವ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರುಗಳಿಗೆ ಸಮರ್ಪಿಸಲು ದಿವಾನರು ಪ್ರಯತ್ನಿಸಿದರು. ಒಂದೇ ಮಾತೃಭೂಮಿಯನ್ನು ಹೊಂದಿರುವ ಎಲ್ಲಾ ಜನಾಂಗಗಳೂ ಅವರ ಆರ್ಥಿಕ ಮತ್ತು ಸಾಮಾಜಿಕ ಬಿಡುಗಡೆಗಾಗಿ ಸೌಹಾರ್ದಯುತವಾಗಿ ಕಾರ್ಯ ನಿರ್ವಹಿಸಲು ಒಂದು ಯೋಜನೆಯನ್ನು ರೂಪಿಸುವ ಮೂಲಕ ಮೈಸೂರು ಭಾರತದ ಉಳಿದ ಭಾಗಗಳಿಗೆ ಸೇವೆಯನ್ನು ಸಲ್ಲಿಸುತ್ತದೆ ಎಂಬ ನಂಬಿಕೆಯನ್ನು ದಿವಾನರು ವ್ಯಕ್ತಪಡಿಸಿದರು.

೧೯೧೯ರ ದಸರಾ ಅಧಿವೇಶನದಲ್ಲಿ ಪಂಚಮರು ಬೆಂಗಳೂರಿನ ಶ್ರೀ.ಗೋಪಾಲಸ್ವಾಮಿ ಅಯ್ಯರ್ ರವರಲ್ಲಿ ಒಬ್ಬ ದಕ್ಷ ಪ್ರತಿಪಾದಕರನ್ನು ಕಂಡರು. ವಿದ್ಯಾಭ್ಯಾಸದ ಬೆಲೆಯನ್ನು ಪಂಚಮರು ಈಗ ಚೆನ್ನಾಗಿಯೇ ಅರಿತಿದ್ದಾರೆ ಎಂದು ಅವರು ನುಡಿದರು. ಮೈಸೂರಿನ ಕೇಂದ್ರೀಯ ಪಂಚಮ ಶಾಲೆಯಲ್ಲಿ ವಸತಿ ಅಭಾವದ ಕಾರಣ ೨೦೦ ರಷ್ಟು ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನಿರಾಕರಿಸಲಾಯಿತು ಎಂದು ತಿಳಿಸಿದರು. ಈ ವರ್ಗದ ಭಾಗಗಳಾದ ಹೊಲೆಯರು ಮತ್ತು ಮಾದಿಗರುಗಳ ಪೈಕಿ ಹೊಲೆಯರು ಹೆಚ್ಚಾಗಿ ಮುಂದೆ ಬರುತ್ತಿದ್ದಾರೆ ಮತ್ತು ಶಾಲೆಗಳಿಗೆ ಹಾಜರಾಗಲು ಅವರನ್ನು ಪ್ರಚೋದಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರು. ಬೆಂಗಳೂರು ನಗರದಲ್ಲಿ ಒಂದು ಮಾದಿಗರ ಪಾಳ್ಯ ಇದೆ ಮತ್ತು ಅಲ್ಲಿ ಒಂದು ಸರ್ಕಾರಿ ಶಾಲೆಯನ್ನು ತೆರೆಯಬೇಕೆಂದು ಅವರು ಕೋರಿದರು. ಪಂಚಮರುಗಳಲ್ಲಿ ಕೆಲವರು ತಮಿಳು ಮಾತನಾಡುತ್ತಾರೆ,

ಇತರರು ತೆಲುಗು ಮತ್ತು ಇನ್ನಿತರರು ಕನ್ನಡ ಮಾತನಾಡುತ್ತಾರೆ ಎಂದು ಶ್ರೀ ಗೋಪಾಲಸ್ವಾಮಿ ಅಯ್ಯರ್ ಮುಂದುವರೆದು ತಿಳಿಸಿದರು. ಮಕ್ಕಳಿಗೆ ಶಿಕ್ಷಣವನ್ನು ದೇಶಿಭಾಷೆಯ ಮಾಧ್ಯಮದ ಮುಖಾಂತರ ಪಾಠ ಮಾಡಬೇಕೆಂಬುದು ಸರ್ಕಾರದ ಆಲೋಚನೆಯಾಗಿದ್ದಲ್ಲಿ ಪಂಚಮರ ವಿಚಾರದಲ್ಲಿ ಕೂಡಾ ಅಂತಹುದೇ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಎಂದರು. ಪಂಚಮರ ಶಾಲೆಗಳಿಗೆ ಬೋಧಕರುಗಳನ್ನು ಹೊಂದಿಸುವುದು ಕಷ್ಟವಾಗಿದೆ, ಹೆಚ್ಚಿನ ಸಂಬಳಗಳನ್ನು ಪಾವತಿ ಮಾಡದಿದ್ದರೆ ಅವರು ಲಭ್ಯವಿರುವುದಿಲ್ಲ ಸುಮಾರು ೨೦೦೦ ಪಂಚಮ ಬಾಲಕರು ಶಾಲೆಗೆ ಹಾಜರಾಗುವ ಕಾರಣ ಅವರಿಗೆ ಒಂದು ಅವಾಸ ಪಾಠಶಾಲೆ ಇಡತಕ್ಕದ್ದು ಎಂದರು. ಒಬ್ಬ ಪಂಚಮ ಶಾಲೆಗೆ ಪ್ರವೇಶಿಸಿದನೆಂದರೆ ಅವನ ತಂದೆ ತಾಯಿಗಳು ತಿಂಗಳಿಗೆ ಸುಮಾರು ರೂ.೪ ರಿಂದ ೨೦ನ್ನು ಕಳೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಪರಿಹಾರ ಒದಗಿಸಲು ವಿದ್ಯಾರ್ಥಿ ವೇತನಗಳ ಹಣದ ಪ್ರಮಾಣವನ್ನು ಹೆಚ್ಚಿಸುವುದರ ಮೂಲಕ ಆ ಬಾಲಕರ ತಂದೆ ತಾಯಿಗಳಿಗೆ ಹಣವನ್ನು ಹಿಂದಿರುಗಿಸಬಹುದು ಪಂಚಮರ ಶಿಕ್ಷಣಕ್ಕಾಗಿ ಹೆಚ್ಚಿನ ಸೌಲಭ್ಯಗಳನ್ನು ಉಂಟು ಮಾಡುವ ಪ್ರಶ್ನೆ ಸರ್ಕಾರದ ಗಮನವನ್ನು ಪಡೆಯುತ್ತಿದೆ ಎಂದು ಸರ್ಕಾರ ಜವಾಬು ನೀಡಿತು. ಆವಾಸ ಪಾಠಶಾಲಾ ಸಂಸ್ಥೆಗಳಲ್ಲಿ ಕೇವಲ ಒಂದು ಸಣ್ಣ ಗುಂಪಿನ ಪಂಚಮರುಗಳಿಗೆ ಶಿಕ್ಷಣ ಒದಗಿಸುವ ಕಾರಣ ಅದರ ಮೇಲೆ ಗಮನ ಹರಿಸುವ ಬದಲು ಗ್ರಾಮಗಳಲ್ಲಿ ಪಂಚಮರ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದು ಉತ್ತಮ ಎಂದು ಸರ್ಕಾರ ತೀರ್ಮಾನಿಸಿದೆ ಎಂದು ೧೯೨೦ ರಲ್ಲಿ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದ ಭಾಷಣದಲ್ಲಿ ದಿವಾನರು ತಿಳಿಸಿದರು. ಕೇವಲ ೨೦ ವಿದ್ಯಾರ್ಥಿಗಳು ಮುಂದೆ ಬಂದರೂ ಕೂಡಾ ಪಂಚಮರ ಶಾಲೆಯನ್ನು ತೆರೆಯ ಬೇಕೆಂದು ಸೂಚನೆಗಳನ್ನು ನೀಡಲಾಗಿದೆ ಎಂದರು. ಮೈಸೂರು, ತುಮಕೂರು ಮತ್ತು ಚಿಕ್ಕಮಗಳೂರುಗಳಲ್ಲಿರುವ ಆವಾಸ ಸಂಸ್ಥೆಗಳನ್ನು ಅಭಿವೃದ್ಧಿಗೊಳಿಸಲಾಗುವುದು. ಅವು ಗ್ರಾಮೀಣ ಪ್ರದೇಶಗಳಲ್ಲಿನ ಪಂಚಮರ ಶಾಲೆಗಳಿಗೆ ಬೋಧಕರುಗಳನ್ನು ಒದಗಿಸುವುದು ಎಂದರು. ಎಲ್ಲ ಸರ್ಕಾರಿ ಮತ್ತು ಅನುದಾನ ಹೊಂದಿದ ಶಾಲೆಗಳನ್ನು ಹಿಂದುಳಿದ ವರ್ಗಗಳಿಗೆ ತೆರೆದ ಕಾರಣ ಸಂಪೂರ್ಣ ಪರಿಣಾಮಕಾರಿಯಾಗಿ ಪರಿಣಮಿಸಿದೆ ಎಂದು ದಿವಾನರು ಮುಂದುವರೆದು ತಿಳಿಸಿದರು. ಈ ದುರದೃಷ್ಟ ಜನಾಂಗದ ಸದಸ್ಯರು ಇತರ ಜನಾಂಗಗಳೊಂದಿಗೆ ಪರಸ್ಪರ ಬೆರೆಯುವುದರಿಂದ ಭವಿಷ್ಯದಲ್ಲಿ ಪ್ರಯೋಜನಗಳನ್ನು ಪಡೆಯುತ್ತಾರೆ ಮತ್ತು ಅವರ ಸಾಮಾಜಿಕ ಅಭಿವೃದ್ಧಿಯನ್ನು ಶೀಘ್ರಗೊಳಿಸುತ್ತದೆ ಎಂಬ ನಂಬಿಕೆಯನ್ನು ವ್ಯಕ್ತಪಡಿಸಲು ಅವರು ಪ್ರಯತ್ನಿಸಿದರು ಇಂಗ್ಲಿಷ್ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪಂಚಮರುಗಳಿಗೆ ಉದಾರವಾದ ವಿದ್ಯಾರ್ಥಿ ವೇತನಗಳನ್ನು ಮಂಜೂರು ಮಾಡಲಾಗಿದೆ.

ಹಿಂದುಳಿದ ವರ್ಗಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ಪ್ರಶ್ನೆಯ ಬಗ್ಗೆ ದಿವಾನರು ಉಲ್ಲೇಖಿಸಿದರು. ಒಂದು ರೀತಿಯ ಸರ್ಕಾರಿ ಕ್ರಮದ ಅವಶ್ಯಕತೆ ಇದ್ದರೂ ಕೂಡ ಈ ಪ್ರಶ್ನೆ

ತೊಂದರೆಗಳಿಂದ ಮುಕ್ತವಾಗಿಲ್ಲ ಎಂಬುದನ್ನು ಅವರು ಒಪ್ಪಿದರು. ಹಿಂದುಳಿದ ವರ್ಗಗಳು ಸ್ವಯಂ ಸಹಾಯಕ್ಕೆ ಅಧ್ಯಕ್ಷರು ಮತ್ತು ಅಸಂಖ್ಯಾತ ಸರ್ಕಾರಿ ಇಲಾಖೆಗಳ ಕಾರ್ಯದಲ್ಲಿ ಸಹಕರಿಸಲು ಖಾಸಗಿ ಸಂಸ್ಥೆಗಳು ಮುಂದೆ ಬರುವುದಿಲ್ಲ ಎಂದು ಅವರು ತಿಳಿಸಿದರು. ಅವರಿಗೆ ಸೂಕ್ತವಾದ ನೌಕರಿಗಳನ್ನು ನೀಡುವುದರ ಮೂಲಕ ಒಂದು ದೊಡ್ಡ ಜನಾಂಗದ ಸದಸ್ಯರುಗಳನ್ನು ಅವರ ಸಾಂಪ್ರದಾಯಿಕ ಕೆಲಸಗಳಿಂದ ಹಿಂದೆ ಸರಿಯುವಂತೆ ಮಾಡುವುದು ಅವರ ಮನಸ್ಸುಗಳನ್ನು ಕೆಡಿಸಬಹುದು, ಮತ್ತು ಅದು ಅಪಾಯಕಾರಿ ಕೂಡಾ ಆಗಬಹುದು. ಒಂದು ಸರ್ಕಾರಿ ಸಂಸ್ಥೆ ಅದು ಎಷ್ಟೇ ಸುವ್ಯವಸ್ಥಿತವಾಗಿದ್ದರೂ ಕೂಡಾ, ಬಡತನ ಮತ್ತು ಅಜ್ಞಾನದಲ್ಲಿ ಮುಳುಗಿರುವ ಜನಸಂಖ್ಯೆಯ ಆರನೇ ಒಂದು ಭಾಗದ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ಪ್ರಶ್ನೆಯನ್ನು ಎದುರಿಸುವುದು ಬೃಹತ್ ಪ್ರಮಾಣದ ಕಾರ್ಯ ಎಂದು ದಿವಾನರು ನುಡಿದರು. ಈ ವಿಚಾರವನ್ನು ಒಂದು ಸಮಿತಿಗೆ ಒಪ್ಪಿಸಲಾಗಿದೆ ಎಂದರು. ಪಂಚಮರಿಗಾಗಿ ಶಾಲೆಗಳನ್ನು ತೆರೆಯುವ ಪ್ರಶ್ನೆ ೧೯೨೦ರ ಪ್ರಜಾಪ್ರತಿನಿಧಿ ಸಭೆಯ ಮೇ ಅಧಿವೇಶನದಲ್ಲಿ ಒಂದು ದೀರ್ಘವಾದ ಮತ್ತು ಕುತೂಹಲಕರವಾದ ವಾದ ವಿವಾದಗಳನ್ನು ಉಂಟು ಮಾಡಿತು. ಈ ಚರ್ಚೆಯಲ್ಲಿ ಭಾರಿ ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸಿದರು. ಶ್ರೀ.ಅಂಬಳೆ ಅಣ್ಣಯ್ಯ ಪಂಡಿತರು ಚರ್ಚೆಯನ್ನು ಪ್ರಾರಂಭಿಸಿದರು. ಪಂಚಮರ ಶಿಕ್ಷಣವನ್ನು ನಿರುತ್ಸಾಹಗೊಳಿಸುವುದು ತಮ್ಮ ಉದ್ದೇಶವಲ್ಲ ಎಂದು ಅವರು ತಿಳಿಸಿದರು. ಇಂಗ್ಲಿಷ್ ಮತ್ತು ಕನ್ನಡವನ್ನು ಒಟ್ಟೊಟ್ಟಿಗೆ ಕಲಿಯಲು ಅವರಿಗೆ ಪ್ರತ್ಯೇಕ ವ್ಯವಸ್ಥೆಗಳನ್ನು ಮಾಡಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು. ಆದರೆ ಅವರಿಗೆ ನೀಡುವ ಸಹಾಯದ ಸ್ವರೂಪ ಉನ್ನತ ವರ್ಗಗಳ ವಾಡಿಕೆಗಳು ಮತ್ತು ಭಾವನೆಗಳೊಂದಿಗೆ ಹಸ್ತಕ್ಷೇಪ ಮಾಡತಕ್ಕದ್ದಲ್ಲ ಎಂದರು. ಸದ್ಯಕ್ಕೆ ಪ್ರಾರಂಭದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಬೋಧಕರುಗಳನ್ನು ಹೊಂದಿದ ಪ್ರತ್ಯೇಕ ಶಾಲೆಗಳು ಪಂಚಮರುಗಳಿಗೆ ಇರತಕ್ಕದ್ದು. ಅವರನ್ನು ಸಾಮಾನ್ಯ ಆಂಗ್ಲೋ-ವರ್ನಾಕ್ಯುಲಾರ್ ಶಾಲೆಗಳನ್ನು ಪ್ರವೇಶಿಸುವಂತೆ ಬಲಾತ್ಕಾರ ಮಾಡಿ ಉನ್ನತ ಜಾತಿಗಳ ಬಾಲಕರುಗಳೊಂದಿಗೆ ಪಕ್ಕಪಕ್ಕದಲ್ಲಿ ಕುಳಿತುಕೊಳ್ಳುವಂತೆ ಮಾಡುವುದು ಸರಿಯಲ್ಲ. ಪಂಚಮರುಗಳ ಪ್ರವೇಶಗಳನ್ನು ಅನುಮತಿಸಿದ ಕಾರಣ ಅನೇಕ ವಿದ್ಯಾರ್ಥಿಗಳು ಶಾಲೆಗಳನ್ನು ತೊರೆದಿದ್ದಾರೆ ಎಂದರು. "ಜನ್ಮಾಂತರಗಳಿಂದ ಅಶುಚಿತ್ವ ದುಶ್ಚಟಗಳಿಗೆ ಕುಖ್ಯಾತರಾಗಿರುವ ಜನರೊಂದಿಗೆ ಬೆರೆಯಲು ಈ ವಿದ್ಯಾರ್ಥಿಗಳು ತಮ್ಮ ಮನಸ್ಸುಗಳನ್ನು ಮಾರ್ಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ" ಎಂದು ಆ ಸದಸ್ಯರು ನುಡಿದರು. ಪಂಚಮರು ತಮ್ಮ ಅನೈರ್ಮಲ್ಯ ಪದ್ಧತಿಗಳನ್ನು ಕೈಬಿಡುವವರೆಗೆ ಅವರನ್ನು ಉನ್ನತ ತರಗತಿಗಳಿಗೆ ಸೇರಲು ಅನುಮತಿಸತಕ್ಕದ್ದಲ್ಲ ಎಂದು ಶ್ರೀ.ಅಂಬಳೆ ಅಣ್ಣಯ್ಯ ಪಂಡಿತರು ನುಡಿದರು. ಈಗಿರುವ ಸ್ಥಿತಿಯಲ್ಲಿ ಅವರು ಇತರ ವರ್ಗಗಳೊಂದಿಗೆ ಬೆರೆಯಲು

ಅನರ್ಹರು. ಇವರೊಂದಿಗೆ ಕುಳಿತುಕೊಳ್ಳಲು ಆಕ್ಷೇಪಿಸಿದರು. ಕೇವಲ ಬ್ರಾಹ್ಮಣರು ಮಾತ್ರ ಅಲ್ಲ ಇತರ ವರ್ಗಗಳ ಜನರಾದ ಲಿಂಗಾಯಿತರು, ವಕ್ಕಲಿಗರೂ ಕೂಡಾ ಅಷ್ಟೇ ಜೋರಾಗಿ ಆಕ್ಷೇಪಿಸಿದ್ದಾರೆ. ಆದ್ದರಿಂದ ಪ್ರತ್ಯೇಕ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಅವರ ಚಟಗಳು ಮತ್ತು ವಾಡಿಕೆಗಳನ್ನು ಉತ್ತಮಗೊಳಿಸಿಕೊಳ್ಳದೇ ಪಂಚಮರಿಗೆ ಮುಕ್ತ ಪ್ರವೇಶದ ವಿಚಾರದಲ್ಲಿ ಇಂತಹ ಭಾರಿ ಗುಂಪಿನ ಜನರ ಅಭಿಪ್ರಾಯಗಳನ್ನು ಅವಮಾನಿಸುವುದು ತಕ್ಕದಲ್ಲ ಮತ್ತು ಸರಿಯಲ್ಲ ಎಂದು ಆ ಸದಸ್ಯರು ತಿಳಿಸಿದರು. ಅವರು ಸ್ಪಷ್ಟವಾದ ಅಭಿವೃದ್ಧಿಯನ್ನು ತೋರಿದಾಗ ಉನ್ನತ ತರಗತಿಗಳಲ್ಲಿ ಇತರರೊಂದಿಗೆ ಓದಲು ಅನುಮತಿಸಬಹುದು.

ಶ್ರೀ ವೆಂಕಟಕೃಷ್ಣಯ್ಯನವರು ಈ ವಿಷಯದ ಮೇಲೆ ಒಂದು ಧೀರ್ಘವಾದ ಭಾಷಣವನ್ನು ಮಾಡಿದರು. ಸರ್ಕಾರದ ದೃಷ್ಟಿಯಲ್ಲಿ ಎಲ್ಲ ಪ್ರಜೆಗಳಿಗೂ ಸಮಾನ ಮತ್ತು ಯಾವುದೇ ವ್ಯತ್ಯಾಸಗಳನ್ನು ತೋರಿಸತಕ್ಕದ್ದಲ್ಲ ಎಂಬುದನ್ನು ಅವರು ಒಪ್ಪಿದರು. ಹಾಗೆಯೇ ತಲತಲಾಂತರ ಗಳಿಂದ ಬಂದಿರುವ, ಅಸ್ತಿತ್ವದಲ್ಲಿರುವ ವ್ಯತ್ಯಾಸಗಳನ್ನು ಕೂಡಾ ಸರ್ಕಾರ ಅಲಕ್ಷ್ಯ ಮಾಡುವಂತಿಲ್ಲ ಎಂದರು. ಹಿಂದುಳಿದ ವರ್ಗಗಳು ಉನ್ನತ ವರ್ಗಗಳೊಂದಿಗೆ ಸೇರಲು ಸಮರ್ಥರನ್ನಾಗುವಂತೆ ಮಾಡಲು, ಸರ್ಕಾರ ಅವರ ಉನ್ನತಿಗಾಗಿ ವಿಶೇಷ ವ್ಯವಸ್ಥೆಗಳನ್ನು ಮಾಡತಕ್ಕದ್ದು ಎಂದರು. ಆದರೆ ಅಂತಹ ವ್ಯವಸ್ಥೆಗಳನ್ನು ಅತೀ ಕಡಿಮೆ ತಿಕ್ಕಾಟದೊಂದಿಗೆ ಮಾಡತಕ್ಕದ್ದು. ಕೆಲವೇ ಜನರಿಗೆ ಸಹಾಯ ಮಾಡುವ ಉದ್ದೇಶದಿಂದ ಒಂದು ಭಾರಿ ಗುಂಪಿನ ಇತರರನ್ನು ಅತೃಪ್ತಿಪಡಿಸುವುದು ನ್ಯಾಯವಲ್ಲ. ನಾಗರೀಕ ಜಗತ್ತಿನ ರೂಢಿಗೆ ವಿರುದ್ದವಾಗಿ ಹೋಗುವ ಕಾರಣ ಸರ್ಕಾರದ ಈಗಿನ ಪ್ರಯತ್ನಗಳು ಪಂಚಮರುಗಳಿಗೆ ನಿಜವಾಗಿ ಸಹಾಯಕವಾಗುವುದೇ ಎಂದು ಅವರು ಆಶ್ಚರ್ಯಪಟ್ಟರು. ಪ್ರಪಂಚದ ಯಾವ ಭಾಗಕ್ಕೆ ಹೋದರು ಅಲ್ಲಿ ಸಾಮಾಜಿಕ ವ್ಯತ್ಯಾಸಗಳು ಇವೆ. ಆದರೆ ಈ ವ್ಯತ್ಯಾಸಗಳನ್ನು ನಿವಾರಿಸುವುದು ಸರ್ಕಾರದ ಕರ್ತವ್ಯ ಆದರೆ ಅಂತಹ ಸುಧಾರಣೆ ಮಾಡುವಾಗ ಜಾಗರೂಕತೆಯಿಂದ ಮುಂದುವರೆಯಬೇಕು ಮತ್ತು ಎಲ್ಲವನ್ನು ಎಚ್ಚರಿಕೆಯಿಂದ ಪರೀಕ್ಷಿಸಬೇಕು. ವಿಚಾರಗಳನ್ನು ಹೆಪ್ಪುಗಟ್ಟಲು ಬಿಡತಕ್ಕದ್ದಲ್ಲ. ಸಾವಿರಾರು ವರ್ಷಗಳಿಂದ ಮುಂದುವರೆದ ಜನಾಂಗಗಳು ಮಾತ್ರವೇ ಪಂಚಮರುಗಳ ಉನ್ನತಿಗೆ ಕಾರಣ ಕರ್ತರು. ಆದರೆ ಅವರ ಸದ್ಯದ ಪರಿಸ್ಥಿತಿ ವ್ಯಥೆಪಡುವಂತಿದೆ ಮತ್ತು ಅಭಿವೃದ್ಧಿಪಡಿಸಬೇಕಾಗಿದೆ. ಪಂಚಮರನ್ನು ಮೇಲೆತ್ತುವ ಬಗ್ಗೆ ಜನ ತಡೆಯಿಲ್ಲದೆ. ಮಾತನಾಡುತ್ತಾರೆ. ಆದರೆ ಅವರಲ್ಲಿ ಕೆಲವರು ಮಾತ್ರ ನಿಜವಾಗಿ ಕೆಲಸಮಾಡಲು ತಯಾರಾಗಿದ್ದಾರೆ. ಈ ಎಲ್ಲ ಪ್ರಯತ್ನಗಳು ನಡೆದಿದ್ದರೂ ಕೂಡಾ ಪಂಚಮರು ಅತ್ಯಂತ ಅಶುಭ್ರರಾಗಿಯೇ ಮುಂದುವರೆದಿದ್ದಾರೆ ಮತ್ತು ನೈತಿಕವಾಗಿ ಮತ್ತು ಐಹಿಕವಾಗಿ ಕೆಟ್ಟು ಹೋಗಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ಅವರು ಸಾಮಾನ್ಯ ಶಾಲೆಗಳಲ್ಲಿ ಸೇರುವುದಕ್ಕೆ ಅರ್ಹರಲ್ಲ. ಆವಾಸ ಪಾಠಶಾಲೆಗಳಲ್ಲಿ ವಿವಿಧ ಜನಾಂಗಗಳಿಗೆ

ಸೇರಿದ ಜನ ಒಟ್ಟಾಗಿ ಕುಳಿತುಕೊಳ್ಳುತ್ತಾರೆ. ಆದರೆ ಪಂಚಮರುಗಳ ವಿಚಾರದಲ್ಲಿ ಕಾಲ ಪಕ್ವವಾಗಿಲ್ಲ. ಉನ್ನತ ವರ್ಗಗಳೊಂದಿಗೆ ಸೇರಲು ಅವರೇ ಇನ್ನೂ ಸಿದ್ಧರಾಗಿಲ್ಲ. ಅವರು ಒಂದು ಇಕ್ಕಟ್ಟಿನಲ್ಲಿದ್ದಾರೆ ಮತ್ತು ಅವರನ್ನು ಅವರ ಬಯಕೆಗಳ ವಿರುದ್ಧ ಒತ್ತಾಯಪಡಿಸುವುದು ತಕ್ಕದ್ದಲ್ಲ ಎಂದರು. ಆದ್ದರಿಂದ ಆ ಜನಾಂಗಕ್ಕೆ ವಿಶೇಷ ಶಾಲೆಗಳನ್ನು ಒದಗಿಸುವ ಆಲೋಚನೆಯನ್ನು ಪ್ರಾರಂಭಿಸಿದ್ದಾಗಿ ಅವರು ತಿಳಿಸಿದರು. ಅಭಿವೃದ್ಧಿ ಕಾರ್ಯ ನಿಧಾನವಾಗಿ ಕೆಲಸ ಮಾಡುತ್ತದೆ. ಆದರೆ ಅದು ಇತರ ಜನರ ಸುಲಭ ವೇದನೀಯತೆಗಳನ್ನು ನೋವು ಮಾಡತಕ್ಕದ್ದಲ್ಲ.

ಕೆ.ಟಿ. ಶೇಷಯ್ಯನವರು ಹಿಂದಿನ ಎರಡು ಭಾಷಣಕಾರರುಗಳನ್ನು ಬೆಂಬಲಿಸಿದರು ಮತ್ತು ಪಂಚಮರ ಸ್ಥಿತಿಗತಿಯನ್ನು ಉತ್ತಮಗೊಳಿಸಲು ಮುಂದುವರೆದ ಜನಾಂಗಗಳು ಅವುಗಳ ಕೈಲಾದ ಉತ್ತಮ ಪ್ರಯತ್ನವನ್ನು ಮಾಡುತ್ತಿವೆ ಎಂದರು. ಆದರೆ ವಿಚಾರಗಳಲ್ಲಿ ದುಡುಕುವುದು ಬುದ್ಧಿವಂತಿಕೆಯಲ್ಲ ಎಂದರು. ಸಾರ್ವಜನಿಕ ಅಭಿಪ್ರಾಯವನ್ನು ಸಿದ್ಧಪಡಿಸಿಕೊಳ್ಳತಕ್ಕದ್ದು, ಬ್ರಾಹ್ಮಣರುಗಳ ಇತರ ನ್ಯೂನತೆಗಳು ಏನೇ ಇದ್ದರೂ, ಅವರು ಒಳ್ಳೆಯ ವಿದ್ಯಾವಂತರು ಮತ್ತು ಸಹಿಷ್ಣುಪರರು ಪಂಚಮರು ಶುಭ್ರರಾಗತಕ್ಕದ್ದು, ಅವರಾಗಿಯೇ ನೈತಿಕವಾಗಿ ಸುಧಾರಿಸತಕ್ಕದ್ದು, ಕಳ್ಳಭಟ್ಟಿ ಸಾರಾಯಿಗಳನ್ನು ಬಿಡಬೇಕು ಮತ್ತು ಅವರ ನಡುವೆ ಅಸ್ತಿತ್ವದಲ್ಲಿ ಇರುವ ಭಾರಿ ಸಂಖ್ಯೆಯ ಇತರ ದುಶ್ಚಟಗಳನ್ನು ಕೂಡಾ ಕೈಬಿಡತಕ್ಕದ್ದು "ಒಬ್ಬ ಹೊಲೆಯ ಚೆನ್ನಾಗಿ ಅಲಂಕಾರ ಮಾಡಿಕೊಂಡದ್ದೇ ಆದಲ್ಲಿ, ಉತ್ತಮ ವಿದ್ಯಾಭ್ಯಾಸವನ್ನು ಹೊಂದಿದ್ದಲ್ಲಿ ಮತ್ತು ಒಳ್ಳೆಯ ಅಭ್ಯಾಸಗಳನ್ನು ಆಚರಿಸುತ್ತಿದ್ದಲ್ಲಿ ಅವನೊಡನೆ ಕುಳಿತುಕೊಳ್ಳಲು ಯಾರೂ ನಿರಾಕರಿಸುವುದಿಲ್ಲ" ಎಂದು ಆ ಸದಸ್ಯರು ನುಡಿದರು. ಈಗಿನ ಕಾಲದಲ್ಲಿ ಕೂಡಾ ಅಂತಹ ವಿಚಾರಗಳು ನಡೆಯುತ್ತಿವೆ, ಆದರೆ ಪಂಚಮರುಗಳನ್ನು ಇತರ ಜನಾಂಗಗಳ ನಡುವೆ ಬಲಾತ್ಕಾರದಿಂದ ಸಾರ್ವಜನಿಕವಾಗಿ ತರುವ ಕಾಲ ಇನ್ನೂ ಬಂದಿಲ್ಲ ಎಂದರು. ಹಿಂದಿನ ಭಾಷಣಕಾರರುಗಳಿಂದ ವ್ಯಕ್ತವಾದ ಅಭಿಪ್ರಾಯಗಳಿಂದ ಭಿನ್ನವಾದ ಒಂದು ಅಭಿಪ್ರಾಯವನ್ನು ಶ್ರೀ ವಾಸುದೇವರಾಯರು ಮುಂದಿಟ್ಟರು. ನಿಜವಾದ ಶಿಕ್ಷಣ ಚಿಕ್ಕ ವಯಸ್ಸಿನಿಂದ ಪ್ರಾರಂಭವಾಗುತ್ತದೆ. ಅಂದರೆ ಸುಮಾರು ೭ನೇ ವರ್ಷದಿಂದ ಎಂದು ಅವರು ನುಡಿದರು. ಅನಾದಿಕಾಲದಿಂದ ಅವರನ್ನು ಪ್ರತ್ಯೇಕವಾಗಿ ಇರಿಸಿದ್ದರೂ ಕೂಡಾ ಅವರು, ಇತರರಿಂದ ಖಂಡಿತವಾಗಿ ಭಿನ್ನರಾದವರು ಅಲ್ಲ ಎಂಬುದನ್ನು ಪಂಚಮರಿಗೆ ಬಾಲ್ಯದಿಂದಲೇ ಬೋಧಿಸತಕ್ಕದ್ದು ಅವರನ್ನು ಇತರ ಜನರೊಡನೆ ಸಾಮಾನ್ಯ ಶಾಲೆಗಳಲ್ಲಿ ಬೆರೆಯಲು ಅನುಮತಿ ನೀಡಿದಲ್ಲಿ ಮಾತ್ರ ಅವರು ಐಕ್ಯತೆಯನ್ನು ಕಲಿಯಲು ಸಾಧ್ಯ ಎಂದರು. ಪಂಚಮರ ವಾಡಿಕೆಗಳು ಭಿನ್ನವಾದದ್ದು ಮತ್ತು ಅವರ ಜೀವನಶೈಲಿ ಅಸಹ್ಯಕರ ಎಂಬುದನ್ನು ಅವರು ಒಪ್ಪಿಕೊಂಡರು. ಆದರೆ ಅವರು ಹೇಗೆ ತಾನೆ ತಾವಾಗಿಯೇ ಸುಧಾರಣೆ ಹೊಂದಲು ಸಾಧ್ಯ? ಅವರನ್ನು ಇತರ ಜನಾಂಗಗಳ ಹತ್ತಿರಕ್ಕೆ ಸೆಳೆದುಕೊಳ್ಳುವುದು

ಮೊದಲನೆಯ ಹಂತವಾಗುತ್ತದೆ. ನಂತರ ಅವರು ಅವರ ವೇಷಭೂಷಣಗಳನ್ನು ಉತ್ತಮಗೊಳಿಸಿ ಕೊಳ್ಳುತ್ತಾರೆ. ಸಹವಾಸ ಮತ್ತು ಗೆಳೆತನ ಒಬ್ಬ ಮನುಷ್ಯನನ್ನು ಅಭಿವೃದ್ಧಿ ಹೊಂದಲು ಪ್ರೋತ್ಸಾಹ ನೀಡುತ್ತದೆ. ಎಂದು ಆ ಸದಸ್ಯರು ತಿಳಿಸಿದರು.[೨೨] ಚಿಕ್ಕಮಗಳೂರಿನಲ್ಲಿ ಒಂದು ಶಾಲೆಯಲ್ಲಿ ಒಬ್ಬ ಹೊಸ ಬೋಧಕನನ್ನು ನೇಮಕ ಮಾಡಲಾಯಿತು ಮತ್ತು ಅತಿ ಶೀಘ್ರದಲ್ಲಿ ಬಾಲಕರು ತಮ್ಮ ಚಹರೆಯಲ್ಲಿ ಹಾಗೂ ನಡವಳಿಕೆಯಲ್ಲಿ ಈ ಎರಡರಲ್ಲೂ ಮಾರ್ಪಾಡು ಹೊಂದಿದರು. ಅವಕಾಶಗಳನ್ನು ಒದಗಿಸಿದ್ದಲ್ಲಿ ಅಂತಹ ಅಭಿವೃದ್ಧಿಗಳು ಸಾಧ್ಯ. ಪಂಚಮರು ತಾವಾಗಿಯೇ ಇತರರನ್ನು ಸಮೀಪಿಸಲು ಹೆದರುತ್ತಾನೆ ಆದರೆ ಉತ್ತೇಜನ ನೀಡಿದರೆ ಅವರ ಹೆದರಿಕೆಗಳು ಮಾಯವಾಗುತ್ತವೆ. "ಅವನು ಸತ್ತ ದನವನ್ನು ತಿನ್ನಬಹುದು, ಅವನು ಕಳ್ಳಭಟ್ಟಿ ಸಾರಾಯಿಗಳನ್ನು ಕುಡಿಯಬಹುದು. ಆದರೆ ಯಾರು ತಾನೆ ಅದನ್ನು ಮಾಡುವುದಿಲ್ಲ? ಉನ್ನತ ವರ್ಗಗಳ ನಡುವೆ ಕೂಡಾ ಅಂತಹ ದುಶ್ಚಟಗಳು ಪ್ರಬಲವಾಗಿದೆ. ಆದರೆ ಅವರನ್ನು ಬೇರೆಯಾಗಿ ಇಟ್ಟಿರುವುದಿಲ್ಲ" ಹಾಗೆಯೇ ಮುಂದುವರೆದ ಶ್ರೀ.ವಾಸುದೇವರಾಯರು ಜನ ಪ್ರತಿದಿನ ಪಂಚಮರೊಂದಿಗೆ ಸಂಪರ್ಕ ಸಾಧಿಸುತ್ತಾರೆ ಮತ್ತು ವಿಶಿಷ್ಟವಾಗಿ ಮಲೆನಾಡಿನಲ್ಲಿ ಜನ ಅವರಿಲ್ಲದೆ ಏನನ್ನೂ ಮಾಡಲು ಅಸಾಧ್ಯ ಎಂದು ನುಡಿದರು. ತೋಟಗಳಲ್ಲಿ ಕೆಲಸ ಮಾಡಲು ಪಂಚಮರ ಅವಶ್ಯಕತೆ ಇದೆ. ಅವರ ಸಹಾಯದ ಅವಶ್ಯಕತೆ ಅನೇಕ ಕಾರ್ಯಗಳಿಗೆ ಬೇಕಾಗಿದೆ. ಆದರೆ ಅವರ ಪರಿಸ್ಥಿತಿ ಎಲ್ಲ ಕಾಲಕ್ಕೂ ಹಾಗೆಯೇ ಇರತಕ್ಕದ್ದೇ? ಅವರು ದನದ ಮಾಂಸವನ್ನು ತಿನ್ನುತ್ತಾರೆಂದರೆ ಯುರೋಪಿಯನ್ನರು ಕೂಡಾ ಅದನ್ನೆ ಮಾಡುತ್ತಾರೆ ಮತ್ತು ಯುರೋಪಿಯನ್ನ ರೊಡನೆ ಕುಳಿತುಕೊಳ್ಳಲು ಯಾರು ತಾನೆ ಇಚ್ಛಿಸುವುದಿಲ್ಲ? ನಮ್ಮ ಹೊಲೆಯರನ್ನು ಹೋಲುವ ಜನ ಜಪಾನಿನಲ್ಲಿ ಕೂಡಾ ಇದ್ದಾರೆ. ಮುಸಲ್ಮಾನರುಗಳಲ್ಲಿ ಕೂಡಾ ಹೊಲೆಯರು ಇದ್ದಾರೆ. ಆದರೆ ಅವರನ್ನು ಮಸೀದಿಗಳಲ್ಲಿ ಬೇರೆಯಾಗಿ ಇಟ್ಟಿರುವುದಿಲ್ಲ ಮತ್ತು ಭೇದಭಾವ ಮಾಡುವುದಿಲ್ಲ. ಬ್ರಾಹ್ಮಣನ ಕರ್ತವ್ಯ ಪ್ರತಿಯೊಬ್ಬ ಮನುಷ್ಯನನ್ನೂ ಬ್ರಾಹ್ಮಣನನ್ನಾಗಿ ಮಾಡುವುದೇ ಆಗಿದೆ. ಪಂಚಮರುಗಳನ್ನು ಓಡಿಸಿದ್ದೇ ಆದಲ್ಲಿ ಅವರು ಕ್ರಿಶ್ಚಿಯನ್ನರಾಗುವ ಸಾಧ್ಯತೆ ಇದೆ ಮತ್ತು ಅವರನ್ನು ಅವರು ತೆರೆದ ಬಾಹುಗಳಿಂದ ಸ್ವಾಗತಿಸುತ್ತಾರೆ. ಇದು ಹಿಂದೂಗಳ ಸಂಖ್ಯಾ ಬಲವನ್ನು ತಗ್ಗಿಸುತ್ತದೆ. ಈ ಸಹಿಷ್ಣುತೆಯ ಕಾರಣದಿಂದ ಹಿಂದೂ ಧರ್ಮವನ್ನು ಬಹುಕಾಲದಿಂದ ಕಾಪಾಡಲಾಗಿದೆ. ಪಂಚಮರು ಕೂಡಾ ಹಿಂದೂಗಳು. ಈ ಕಾರಣಗಳಿಗಾಗಿ ಆಂಗ್ಲೋ-ವರ್ನ್ಯಾಕ್ಯುಲಾರ್ ಶಾಲೆಗಳನ್ನು ತೆರೆದು ಪಂಚಮರುಗಳಿಗೆ ಕೂಡಾ ಅಲ್ಲಿ ಪ್ರವೇಶ ದೊರಕಿಸಿ ಕೊಡಬೇಕೆಂದು ಅವರು ಬಲವಾಗಿ ವಾದ ಮಾಡಿದರು. ಪಂಚಮರು ಶಿಕ್ಷಣದಲ್ಲಿ ಒಂದು ನಿರ್ದಿಷ್ಟ ಹಂತವನ್ನು ಮುಟ್ಟುವವರೆಗೆ ಅವರು ಉನ್ನತ ತರಗತಿಗಳಲ್ಲಿನ ಬಾಲಕರೊಡನೆ ಕುಳಿತುಕೊಳ್ಳುವುದನ್ನು ಶ್ರೀ.ಕಾಮಶೆಟ್ಟಪ್ಪ ಇಷ್ಟಪಡಲಿಲ್ಲ. ಈಗಿರುವ ಪರಿಸ್ಥಿತಿಯಲ್ಲಿ ಪಂಚಮರ

ಸಹವಾಸದಿಂದ ಇತರ ಬಾಲಕರು ಕೆಟ್ಟು ಹೋಗುತ್ತಾರೆ ಎಂದರು. ಪಂಚಮರಲ್ಲದ ಬಾಲಕರು ದುಶ್ಚಟಗಳಿಗೆ ಸಿಲುಕುವ ಸಾಧ್ಯತೆ ಇದೆ ಎಂದರು. ಈ ಸರ್ಕಾರಿ ಆದೇಶವನ್ನು ರದ್ದುಗೊಳಿಸ ಬೇಕೆಂದು ಕೋರಿದರು.

ಪಂಚಮ ಬಾಲಕರಿಗೆ ಸಾಮಾನ್ಯ ಶಾಲೆಗಳಲ್ಲಿ ಪ್ರವೇಶಾನುಮತಿ ನೀಡುವುದರ ವಿರುದ್ಧ ಈ ಕೂಗಾಟಕ್ಕೆ ಅವಶ್ಯಕತೆ ಇದೆಯೇ ಎಂದು ಶ್ರೀ.ಪುರುಷೋತ್ತಮ ಆನಂದಗಿರಿ ಗೋಸಾಯಿ ಆಶ್ಚರ್ಯ ವ್ಯಕ್ತಪಡಿಸಿದರು. ರೈಲು ಪ್ರಯಾಣದಲ್ಲಿ ಒಂದೇ ಪೀಠದಲ್ಲಿ ಪಂಚಮರೊಂದಿಗೆ ಕುಳಿತುಕೊಳ್ಳುವುದನ್ನು ಬ್ರಾಹ್ಮಣ ಆಕ್ಷೇಪಣೀಯ ಎಂದು ಪರಿಗಣಿಸಿಲ್ಲ ಆಸ್ಪತ್ರೆಗಳಲ್ಲಿ ಬ್ರಾಹ್ಮಣರು ಮತ್ತು ಪಂಚಮರು ಈ ಎರಡೂ ವರ್ಗದವರನ್ನು ಒಟ್ಟಾಗಿ ಕುಳಿತುಕೊಳ್ಳುತ್ತಾರೆ. ಪಂಚಮರುಗಳು ಕಾನೂನು ನ್ಯಾಯಾಲಯಗಳಿಗೆ ಹೋಗುವುದನ್ನು ನಿಷೇಧಿಸಲಾಗಿಲ್ಲ. ಹೀಗಿರುವಲ್ಲಿ ಈ ವಾದ ವಿವಾದ ನ್ಯಾಯವಲ್ಲ ಎಂದರು. ಪಂಚಮರುಗಳನ್ನು ಅವರ ಖಾಸಗಿ ಮನೆಗಳೊಳಗೆ ಬರಲು ಅನುಮತಿಸಲು ಅವರು ನಿರಾಕರಿಸಬಹುದು. ಆದರೆ ಸರ್ಕಾರದ ದೃಷ್ಟಿಯಲ್ಲಿ ಎಲ್ಲ ಪ್ರಜೆಗಳಿಗೂ ಸಮಾನರು ಮತ್ತು ಸಹಾಯಕ್ಕೆ ಸಮನಾಗಿ ಅರ್ಹರು. ಪಂಚಮರು ತೆರಿಗೆದಾರನಾಗಿರುವ ಕಾರಣ ಅವನಿಗೆ ಸೇರಬೇಕಾದ ಹಕ್ಕುಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ಆದ್ದರಿಂದ ಸಾಮಾನ್ಯ ಶಾಲೆಗಳಲ್ಲಿ ಪ್ರವೇಶಕ್ಕೆ ಸಂಬಂಧಿಸಿದಂತೆ ಪಂಚಮರು ಮತ್ತು ಇತರ ಬಾಲಕರುಗಳ ನಡುವೆ ಯಾವುದೇ ವ್ಯತ್ಯಾಸಗಳು ಇರತಕ್ಕದ್ದಲ್ಲ ಎಂದು ತಮ್ಮ ಖಂಡಿತವಾದ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಶ್ರೀ. ಶಾಮಯ್ಯಂಗಾರರು ಈ ವಿವಾದಕ್ಕೆ ಒಂದು ಹೊಸ ವಿಷಯವನ್ನು ಪರಿಚಯಿಸಿದರು. ಪಂಚಮರಲ್ಲಿ ಎರಡು ವಿಭಾಗಗಳು ಇವೆ ಎಂದು ಅವರು ಗುರುತಿಸಿ ಹೇಳಿದರು. ಎಡಗೈ ಮತ್ತು ಬಲಗೈ ಒಂದು ಭಾಗ. ಆದರೆ ಮಾದಿಗರು ಮತ್ತು ಹೊಲೆಯರು ಮತ್ತೊಂದು ಭಾಗ. ಅವರ ನಡುವೆ ಮಹತ್ತರವಾದ ವ್ಯತ್ಯಾಸಗಳು ಇವೆ. ಹೊಲೆಯರಿಗಾಗಿ ಉದ್ದೇಶಿಸಲಾದ ಶಾಲೆಗೆ ಹಾಜರಾಗಲು ಮಾದಿಗನಿಗೆ ಅನುಮತಿ ಇಲ್ಲ. ಇಂತಹ ಒಂದು ಪ್ರಕರಣ ಸೋಸಲೆಯಲ್ಲಿ ನಡೆಯಿತು. ಅಲ್ಲಿ ಮಾದಿಗರು ಅವರಿಗಾಗಿ ಒಂದು ಪ್ರತ್ಯೇಕ ಶಾಲೆಯನ್ನು ಕೋರಿದರು. ಆದರೆ ಈ ಕೋರಿಕೆಯನ್ನು ಮಾನ್ಯ ಮಾಡದ ಕಾರಣ ಅವರು ಸಂಖ್ಯೆಯಲ್ಲಿ ಕೇವಲ ೮ ಮಾತ್ರ ಇದ್ದರೂ ಕೂಡಾ ಮಾದಿಗರು ಆಂಗ್ಲೋ-ವರ್ನಾಕ್ಯುಲಾರ್ ಶಾಲೆಗೆ ಸೇರಿದರು. ಅದರ ಪರಿಣಾಮ, ೨೦೦ ಇತರ ಬಾಲಕರು ಶಾಲೆಯಿಂದ ಹೊರಬಂದರು. ಸಾಮಾನ್ಯ ಶಾಲೆಗಳಿಗೆ ಪಂಚಮರ ಪ್ರವೇಶದ ವಿರುದ್ಧ ಇಷ್ಟು ಹೆಚ್ಚು ಸ್ಥಳೀಯ ಭಾವನೆಗಳು ಇರುವ ಕಾರಣ ಬಲಾತ್ಕಾರದ ಪ್ರವೇಶಾನುಮತಿ ಭವಿಷ್ಯದಲ್ಲಿ ಪ್ರತಿಕೂಲ ಪರಿಣಾಮಗಳಿಗೆ ಕಾರಣವಾಗುವ ಸಾಧ್ಯತೆ ಇದೆ. ಪಂಚಮರು ಭಿನ್ನಾಭಿಪ್ರಾಯಗಳನ್ನು ಅವರ ನಡುವೆಯೇ ಪರಿಹರಿಸಿಕೊಳ್ಳಬೇಕು ಅವರು ಬೇಡವಾಗಿರುವ ಸ್ಥಳಗಳಲ್ಲಿ ಅವರನ್ನು ಸೇರಿಸುವ ಅವಶ್ಯಕತೆಯಾದರು

ಏನು? ಮತ್ತು ಅವರ ಇರುವನ್ನು ಸಹಿಸದೆ ಇರುವ ಜಾಗದಲ್ಲಿ ಅವರನ್ನು ಯಾಕೆ ಪರಿಚಯಿಸತಕ್ಕದ್ದು. ಟಿ. ನರಸೀಪುರದಲ್ಲಿ ಮಾದಿಗ ಬಾಲಕರು ಮಾತ್ರ ಪಂಚಮರ ಶಾಲೆಗೆ ಹಾಜರಾಗುತ್ತಿದ್ದಾರೆ ಮತ್ತು ಒಬ್ಬ ಹೊಲೆಯ ಕೂಡಾ ಅವರ ಮಕ್ಕಳನ್ನು ಅಲ್ಲಿಗೆ ಸೇರಿಸಲು ಬಯಸುತ್ತಿಲ್ಲ ಎಂದು ಆ ಸದಸ್ಯರು ಮುಂದುವರೆದು ನುಡಿದರು. ಒಬ್ಬ ಮುಸಲ್ಮಾನ ಬೋಧಕರ ಸುಪರ್ದಿಯಲ್ಲಿ ಕೇವಲ ಮೂರು ಮಾದಿಗ ಬಾಲಕರು ಇದ್ದಾರೆ. ಆಸ್ಪತ್ರೆ ಮತ್ತು ರೈಲ್ವೇ ಗಾಡಿಗಳಲ್ಲಿ ಪಂಚಮರುಗಳೊಂದಿಗೆ ಸ್ಥಾನಗಳನ್ನು ತೆಗೆದುಕೊಳ್ಳಲು ಅವರನ್ನು ಒತ್ತಾಯಿಸಲಾಗುತ್ತದೆ. ಗ್ರಾಮಗಳಲ್ಲಿ ನಾಗರೀಕತೆ ಆ ಮಟ್ಟಕ್ಕೆ ಮುಂದುವರೆದಿಲ್ಲ ಮತ್ತು ತಕ್ಷಣದ ಸುಧಾರಣೆಗಳನ್ನು ಜಾರಿಗೊಳಿಸಲು ಕಾಲ ಪಕ್ವವಾಗಿಲ್ಲ ಎಂದು ಶ್ರೀ. ಶಾಮಯ್ಯಂಗಾರ್ ನುಡಿದರು.

ಪಂಚಮರುಗಳನ್ನು ಇತರ ಬಾಲಕರೊಂದಿಗೆ ಬೆರೆಯಲು ಅನುಮತಿಸುವುದರಿಂದ ಇತರ ಬಾಲಕರು ಪಂಚಮರ ಕೆಟ್ಟ ಮತ್ತು ಅನೈರ್ಮಲ್ಯ ಚಟಗಳನ್ನು ಕಲಿಯುತ್ತಾರೆ ಎಂದು ಅವರು ನುಡಿದರು, ಚಿಕ್ಕ ಹುಡುಗರಿಗೆ ವಿವೇಚನಾ ಶಕ್ತಿ ಇರುವುದಿಲ್ಲ. ಪಂಚಮರುಗಳಿಗೆ ಪ್ರವೇಶ ಒದಗಿಸಿದ ಕಾರಣ ಇತರ ಬಾಲಕರು ಶಾಲೆಯನ್ನು ತೊರೆದರು. ಸರ್ಕಾರ ಅನವಶ್ಯಕವಾಗಿ ಶಾಲೆಯ ಮೇಲೆ ವೆಚ್ಚ ಮಾಡುತ್ತಿದೆ. ಪಂಚಮರು ಆವಾಸ ಪಾಠಶಾಲೆಗಳಲ್ಲಿ ಸ್ವಲ್ಪ ಶಿಕ್ಷಣವನ್ನು ಪಡೆಯುತ್ತಾರೆ. ಮತ್ತು ಅವರು ತಮ್ಮ ಚಟಗಳನ್ನು ಉತ್ತಮಗೊಳಿಸಿಕೊಂಡ ನಂತರ ಅವರನ್ನು ಸಾಮಾನ್ಯ ಶಾಲೆಗಳಲ್ಲಿ ಉನ್ನತ ತರಗತಿಗಳಿಗೆ ಸೇರಲು ಅನುಮತಿಸಬಹುದು. ಪಂಚಮರ ಶಿಕ್ಷಣವನ್ನು ನಿರುತ್ಸಾಹಗೊಳಿಸುವುದು ಅವರ ಉದ್ದೇಶ ಅಲ್ಲ. ಆದರೆ ಅದಕ್ಕೆ ಕಾಲ ಇನ್ನೂ ಪಕ್ವವಾಗಿಲ್ಲ ಎಂದರು. ಎಲ್ಲ ಜನ ಹುಟ್ಟಿನಿಂದ ಬ್ರಾಹ್ಮಣರು. ಆದರೆ ಅಭ್ಯಾಸಗಳು ಮತ್ತು ಜೀವನ ಶೈಲಿಗಳ ವ್ಯತ್ಯಾಸಗಳ ಕಾರಣದಿಂದ ಮಾತ್ರ ವಿವಿಧ ಜನಾಂಗಗಳು ಅಸ್ತಿತ್ವಕ್ಕೆ ಬಂದವು ಎಂಬ ವಿಚಾರವನ್ನು ಅವರು ಶಾಸ್ತ್ರಗಳಿಂದ ಕಲಿತಿದ್ದಾರೆ ಎಂಬ ವಾದವನ್ನು ಶ್ರೀ ಕೃಷ್ಣಮೂರ್ತಿ ಆಚಾರ್ ದೃಢೀಕರಿಸಿದರು. ಅಂತಹ ಪರಿಸ್ಥಿತಿಯಲ್ಲಿ ಅವರ ಅನೈರ್ಮಲ್ಯ ಅಭ್ಯಾಸಗಳು ಮತ್ತು ಪದ್ಧತಿಗಳು ಮಾಯವಾಗುವ ತನಕ ಅಂದರೆ ಸ್ವಲ್ಪ ಕಾಲದವರೆಗೆ ಪಂಚಮರನ್ನು ಇತರರಿಂದ ಭಿನ್ನವಾಗಿ ಪರಿಗಣಿಸಬೇಕಾಗುತ್ತದೆ ಎಂದರು. ಅವರನ್ನು ಪ್ರತ್ಯೇಕವಾಗಿ ಇಡುವುದರಿಂದ ಪಂಚಮರುಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸಬಹುದು ಎಂದು ಶ್ರೀ.ಪರಮಶಿವಯ್ಯ ಭಾವಿಸಲಿಲ್ಲ. ಅವರಿಗೂ ಮತ್ತು ಇತರರಿಗೂ ನಡುವೆ ಒಂದು ದೊಡ್ಡ ಕಮರಿ ಇದೆ ಎಂದು ಪಂಚಮರು ನಂಬುವಂತೆ ಮಾಡಲು ಪ್ರಯತ್ನಿಸುವುದು ಸರಿಯಲ್ಲ ಎಂದರು. ಒಂದೆರೆಡು ವಿದ್ಯಾರ್ಥಿಗಳು ಮಾತ್ರ ಇರುವಾಗ ಕೂಡಾ, ಎಲ್ಲೆಡೆ ಪಂಚಮರ ಶಾಲೆಯನ್ನು ತೆರೆಯಲು ಸಾಧ್ಯವಿಲ್ಲ ಎಂದರು. ಶಿಕ್ಷಣ ಯಾವುದೇ ಒಂದು ವರ್ಗದ ಖಾಸಗಿ ಮತ್ತು ಪ್ರತ್ಯೇಕ ಆಸ್ತಿಯಲ್ಲ. ಅವರಿಗೆ ಎಲ್ಲ ವಿಧದ ಕೆಲಸಗಳಿಗೆ ಪಂಚಮರು ಬೇಕು ಆದರೆ ಶಿಕ್ಷಣದ ವಿಚಾರದಲ್ಲಿ ಅವರಿಗೆ ಸಮಾನ

ಸೌಲಭ್ಯಗಳನ್ನು ನೀಡುವುದನ್ನು ಅವರು ಇಷ್ಟಪಡುವುದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಪಂಚಮರಿಗೆ ಪ್ರವೇಶ ನೀಡಿದ ಶಾಲೆಗಳಿಂದ ಇತರ ಬಾಲಕರು ಹೊರಬಂದರೂ ತದನಂತರದಲ್ಲಿ ಪರಿಸ್ಥಿತಿಗಳು ಬದಲಾವಣೆ ಹೊಂದಿದ್ದವು. ಸಾಮಾನ್ಯ ಶಾಲೆಗಳಿಗೆ ಪಂಚಮರ ಪ್ರವೇಶದ ವಿರುದ್ದ ಎದ್ದಿರುವ ಕೂಗಾಟ ಕೆಲವೇ ಕಾಲದಲ್ಲಿ ತಾನಾಗಿಯೇ ಸಾಯುತ್ತದೆ.

ಪಂಚಮರನ್ನು ಸಾಮಾನ್ಯ ಶಾಲೆಗಳಿಗೆ ಸೇರುವಂತೆ ಬಲಾತ್ಕಾರ ಮಾಡುತ್ತಿರುವುದು ಸರ್ಕಾರ ಎಂದು ಮತ್ತೊಬ್ಬ ಸದಸ್ಯರು ಹೇಳಿಕೆ ನೀಡಿದರು. ಪ್ರಾಚೀನ ಕಾಲಗಳಿಂದ ಅವರನ್ನು ಬೇರೆಯಾಗಿಯೇ ಇಡಲಾಗಿತ್ತು ಮತ್ತು ಅವರನ್ನು ಪ್ರತ್ಯೇಕವಾಗಿ ಇಡತಕ್ಕದ್ದು ಎಂಬ ವಿಚಾರ ಶಾಸ್ತ್ರಗಳ ಸಮ್ಮತಿ ಹೊಂದಿದೆ ಎಂದರು. ಹಾಗೆ ಅವಶ್ಯಕತೆ ಬಿದ್ದಲ್ಲಿ ಸದಸ್ಯರುಗಳ ಅಭಿಪ್ರಾಯಗಳನ್ನು ಮತಯಾಚನೆಯ ಮೂಲಕ ತಿಳಿಯಬಹುದು ಎಂದು ಅವರು ಬಯಸಿದರು.[೩] ಕಳೆದ ವರ್ಷ ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ವಿಷಯದ ಮೇಲೆ ನಡೆದ ಚರ್ಚೆಯನ್ನು ಶ್ರೀ.ಕೃಷ್ಣಶಾಸ್ತ್ರೀ ಉಲ್ಲೇಖಿಸಿದರು, ಸರ್ಕಾರ ನಿಷ್ಪಕ್ಷಪಾತಿಯಾಗಿರಬೇಕು ಮತ್ತು ಸರ್ಕಾರಿ ಆದೇಶಗಳನ್ನು ಜಾರಿಗೊಳಿಸತಕ್ಕದ್ದು ಎಂಬುದನ್ನು ಅವರು ಒಪ್ಪಿದರು. ಆದರೆ ಅಂತಹ ಸುಧಾರಣೆಯನ್ನು ಮಾಡಲು ದೇಶ ಇನ್ನೂ ಅರ್ಹವಾಗಿಲ್ಲ ಎಂಬುದೇ ಇದರಲ್ಲಿರುವ ತೊಂದರೆ ಎಂದರು. ಪಂಚಮರುಗಳ ನಡುವೆ ತಿಳುವಳಿಕೆ ಇರತಕ್ಕದ್ದು ಎಂದು ಶ್ರೀ ಕೃಷ್ಣಶಾಸ್ತ್ರಿ ನುಡಿದರು ಆಗ ಇತರ ಜಾತಿಯವರು ಪಂಚಮರೊಂದಿಗೆ ಕುಳಿತುಕೊಳ್ಳಲು ತಯಾರಾಗಬಹುದು. ಆದರೆ ಅವರು ಸಮಾನ ಹಕ್ಕುಗಳಿಗಾಗಿ ಹೋರಾಟ ನಡೆಸಿದರೆ ಮಾತ್ರ ಪಂಚಮರ ಸ್ಥಿತಿಗತಿಗಳ ಅಭಿವೃದ್ದಿ ಸಾಧ್ಯ ಇತರ ಜಾತಿಯವರನ್ನು ಬಲಾತ್ಕರಿಸುವುದು ತಕ್ಕದ್ದಲ್ಲ. ಹಿಂದೂಗಳ ನಡುವೆ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳು ಒಂದಾಗಿದೆ. ಈ ಬಹುಕಾಲದ ಸಾಮಾಜಿಕ ವಾಡಿಕೆಯೊಂದಿಗೆ ಸರ್ಕಾರ ಹಸ್ತಕ್ಷೇಪ ನಡೆಸುವುದು ಸರಿಯಲ್ಲ. ಈ ವಿಚಾರವನ್ನು ಹೇರಬೇಕೆಂದು ಸರ್ಕಾರ ಬಯಸಿದ್ದೇ ಆದಲ್ಲಿ ಅದು ಒಂದು ಕಾನೂನನ್ನು ಹೊರಡಿಸತಕ್ಕದ್ದು ಮತ್ತು ಒಂದು ಕಾರ್ಯಾಂಗ ಆದೇಶವನ್ನು ಹೊರಡಿಸುವ ಮೂಲಕ ಜನತೆಯ ಮೇಲೆ ಸಾಮಾಜಿಕ ತಿರಸ್ಕಾರವನ್ನು ಹೇರತಕ್ಕದ್ದಲ್ಲ. ಅನೇಕ ವರ್ಷಗಳ ಒಳ್ಳೆಯ ಕಾರ್ಯಗಳು ಮತ್ತು ಒಳ್ಳೆಯ ನಡತೆಗಳ ಮೂಲಕ ಜನ ಮುಂದೆ ಬರತಕ್ಕದ್ದು. ಹಿಂದೂಗಳು, ಮುಸಲ್ಮಾನರು ಮತ್ತು ಕ್ರೈಸ್ತರು ಪೂರ್ವದಲ್ಲಿ ಅನೇಕ ಬದಲಾವಣೆಗಳ ಮೂಲಕ ಹಾದು ಬಂದು, ಮಾನ್ಯತೆ ಪಡೆದ ಜನಾಂಗಗಳೆಂದು ಇಂದು ಪರಿಗಣಿಸಲಾಗಿದ್ದಾರೆ. ಹಿಂದೂಗಳ ನಡುವೆ ಪಂಚಮರು ಒಂದು ಸಣ್ಣ ಉಪ ಪಂಗಡ. ಅವರನ್ನು ಹಿಂದಿನ ಕಾಲದಿಂದ ಪ್ರತ್ಯೇಕವಾಗಿ ಇಡಲಾಗಿದೆ. ಜಾತಿ ಭೇದಗಳು ಹಿಂದೂಗಳಿಗೆ ವಿಚಿತ್ರವಾದ ವಿಷಯ ಅಲ್ಲ. ಯುರೋಪಿಯನ್ನರಿಗೆ ಪ್ರತಿಯೊಂದು ರೈಲಿನಲ್ಲಿ ಮುಂಗಡ ಕಾಯ್ದಿರಿಸುವಿಕೆಗೆ ಅವಶ್ಯಕತೆಯಾದರೂ ಏಕೆ? ಒಬ್ಬ ಯುರೋಪಿಯನ್ ಅಪರಾಧವನ್ನು ಮಾಡಿದರೆ ಕಾನೂನು ಅವನನ್ನು ಯುರೋಪಿಯನ್ ಬ್ರಿಟಿಷ್ ಪ್ರಜೆಯಾಗಿ ವಿಚಾರಣೆ ಮಾಡಲು

ಬಯಸುತ್ತದೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲ ಜನರು ಸಮಾನರಲ್ಲವೆ? ಎಲ್ಲ ಜನಾಂಗಗಳಲ್ಲಿ "ಪ್ರಾಶಸ್ತ್ಯ" ಎಂಬ ಒಂದು ವಿಚಾರ ಇದೆ. ಅದು ಜನಾಂಗವನ್ನು ಇತರ ಜನಾಂಗಗಳು ಅಥವಾ ವರ್ಗಗಳಿಗಿಂತ ಮೇಲೆ ಇರಿಸುತ್ತದೆ ಎಂದು ಶ್ರೀ. ಕೃಷ್ಣಶಾಸ್ತ್ರೀ ತಿಳಿಸಿದರು. ಕ್ರೈಸ್ತರಲ್ಲಿ ಪ್ರಾಟೆಸ್ಟೆಂಟ್ ಮತ್ತು ಕ್ಯಾಥೋಲಿಕ್ಸ್ ಎಂಬ ಎರಡು ಪಂಗಡಗಳಿವೆ ಮತ್ತು ಬಹುತೇಕವಾಗಿ ಕ್ಯಾಥೋಲಿಕ್ಕರು ಪ್ರಾಟೆಸ್ಟೆಂಟ್ ಶಾಲೆಗಳನ್ನು ಸೇರುವುದಿಲ್ಲ ಮತ್ತು ಪ್ರಾಟೆಸ್ಟೆಂಟರು ಕ್ಯಾಥೋಲಿಕ್ ಶಾಲೆಗಳಿಗೆ ಹೋಗುವುದಿಲ್ಲ. ಮಾಂಸ ತಿನ್ನುವುದು ಮತ್ತು ಸಾರಾಯಿ ಕುಡಿಯುವ ಸುತ್ತ ಗೂಳಿಗಳನ್ನು, ನಾವು ಬಹುಮಟ್ಟಿಗೆ ಅವುಗಳನ್ನು ಗಮನಿಸುವುದಿಲ್ಲ. ಇದು ಪಂಚಮರುಗಳ ವರ್ಗಕ್ಕೆ ಒಂದು ಪಾಠವಾಗಿರತಕ್ಕದ್ದು. ಅವರಗಳನ್ನು ಅವರೇ ಮೊದಲು ಉತ್ತಮಗೊಳಿಸಿಕೊಳ್ಳಲಿ. ಅವರಿಗೆ ಎಲ್ಲ ಸೌಲಭ್ಯಗಳನ್ನು ನೀಡಿ ಅವರ ಬಗ್ಗೆ ವಿಶೇಷ ಗಮನಹರಿಸಿ ಅದು ಪಂಚಮರುಗಳಿಗೆ ಒಳ್ಳೆಯ ಕಾಲಕ್ಕೆ ಅನುವು ಮಾಡಿಕೊಡುತ್ತದೆ ಎಂದು ಸದಸ್ಯರು ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರು. ಪಂಚಮರುಗಳೊಂದಿಗೆ ಸೇರಲು ಜನ ಸಿದ್ಧರಾಗಿಲ್ಲ ಎಂದು ಶ್ರೀ.ಕುಪ್ಪನಹಳ್ಳಿ ರಾಮಣ್ಣ ತಿಳಿಸಿದರು. ಈ ವಿಷಯದ ಮೇಲೆ ಜನರ ಅಭಿಪ್ರಾಯಗಳು ಏನೇ ಆಗಿರಲಿ, ಗ್ರಾಮಗಳಲ್ಲಿ ಪಂಚಮರುಗಳನ್ನು ಶಾಲೆಗಳಿಗೆ ಅನುಮತಿಸಿರುವ ವಿರುದ್ಧ ತೀವ್ರ ಸ್ವರೂಪದ ಭಾವನೆಗಳು ವ್ಯಕ್ತವಾಗಿವೆ. ಈ ವಿಚಾರದಲ್ಲಿ ಸರ್ಕಾರ ಜನರನ್ನು ಬಲಾತ್ಕಾರ ಮಾಡಿದಲ್ಲಿ ಅದು ಜನರ ನಡುವೆ ಭಿನ್ನಾಭಿಪ್ರಾಯಗಳನ್ನು ಉಂಟುಮಾಡುತ್ತದೆ. ಹಿಂದೆ, ಒಂದು ರೈಲು ಪ್ರಯಾಣದ ನಂತರ ಜನ ಸ್ನಾನ ಮಾಡುತ್ತಿದ್ದರು, ಆದರೆ ಈಗ ಅವರು ಒಂದು ರೈಲುಗಾಡಿಯ ಒಳಗಡೆ ಊಟ ಕೂಡಾ ಮಾಡುತ್ತಾರೆ. ವಾಡಿಕೆಗಳು ವೇಗವಾಗಿ ಬದಲಾಯಿಸುತ್ತದೆ ಮತ್ತು ಜನ ಪಂಚಮರೊಂದಿಗೆ ಸಂಪರ್ಕ ಹೊಂದಲು ಸಿದ್ಧರಾಗುವ ಸಮಯ ನಿಶ್ಚಯವಾಗಿ ಬರುತ್ತದೆ ಎಂದರು. ಆದ್ದರಿಂದ ಈ ವಿಚಾರವನ್ನು ಜನರಿಗೇ ಬಿಡತಕ್ಕದ್ದು ಮತ್ತು ಸರ್ಕಾರ ಹಸ್ತಕ್ಷೇಪ ಮಾಡುವುದು ತಕ್ಕದ್ದಲ್ಲ.

ಸಂಪೂರ್ಣವಾದ ಭರತ ಖಂಡದಲ್ಲಿ ಕರ್ನಾಟಕವನ್ನು ಅತ್ಯಂತ ಶುದ್ಧ ಎಂದು ಹೇಳಲಾಗಿದೆ ಮತ್ತು ಕರ್ನಾಟಕದಲ್ಲಿ ಮೈಸೂರು ಅದರ ಧರ್ಮಕ್ಕೆ ಪ್ರಸಿದ್ಧವಾಗಿದೆ ಎಂದು ಶ್ರೀ.ದೊರೆಸ್ವಾಮಿ ಅಯ್ಯಂಗಾರ್ ನುಡಿದರು. ಮಹಾರಾಜರು ಬ್ರಾಹ್ಮಣರುಗಳಿಗೆ ಇನಾಂತಿಗಳನ್ನು ನೀಡಿ ಅವರನ್ನು ರಕ್ಷಿಸಿದ್ದಾರೆ. ಅದನ್ನು ಮಾಡದೇ ಹೋಗದಿದ್ದಲ್ಲಿ ಅವರೂ ಕೂಡಾ ಪಂಚಮರು ಗಳಂತೆಯೇ ಆಗುತ್ತಿದ್ದರು. ಧರ್ಮವನ್ನು ಸಾಧ್ಯವಾದ ಎಲ್ಲ ರೀತಿಯಿಂದಲೂ ಕಾಪಾಡತಕ್ಕದ್ದು. ಕಳೆದ ಒಂದು ವರ್ಷದಿಂದ ಇತರ ಜನರ ಭಾವನೆಗಳು ಮತ್ತು ಅಭಿಪ್ರಾಯಗಳ ವಿರುದ್ಧ ಪಂಚಮರುಗಳನ್ನು ಅವರ ಮೇಲೆ ಹೇರಲಾಗಿದೆ. ಈ ಅವಧಿಯಲ್ಲಿ ಇತರ ಬಾಲಕರು ಶಾಲೆ ಗಳಿಗೆ ಹೋಗಿಲ್ಲ ಮತ್ತು ಶಿಕ್ಷಣವನ್ನು ಪಡೆದಿಲ್ಲ. ಆದ್ದರಿಂದ ಪಂಚಮರ ಶಿಕ್ಷಣಕ್ಕೆ ಪ್ರತ್ಯೇಕ ವ್ಯವಸ್ಥೆಗಳನ್ನು ಮಾಡಬೇಕೆಂದು ಆ ಸದಸ್ಯರು ಕೋರಿದರು. ಪಂಚಮರು ಪ್ರತ್ಯೇಕ ಶಾಲೆಗಳನ್ನು

ಹೊಂದಿರತಕ್ಕದ್ದು ಎಂಬ ಅಭಿಪ್ರಾಯಕ್ಕೆ ಶ್ರೀ.ಮಾಲಹಳ್ಳಿ ವೆಂಕಟರಾಮಯ್ಯ ಸಮ್ಮತಿ ಸೂಚಿಸಿದರು. ಜನ ಪಂಚಮರುಗಳೊಂದಿಗೆ ಕೆಲಸ ಮಾಡುತ್ತಾರೆ. ಮತ್ತು ಅವರಿಲ್ಲದೆ ಕಾಫಿ ತೋಟಗಳನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂಬುದನ್ನು ಅವರು ಒಪ್ಪಿದರು. ಆದರೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರುಗಳಿಂದ ವ್ಯಕ್ತವಾದ ಅಭಿಪ್ರಾಯಗಳು ಗ್ರಾಮಗಳಲ್ಲಿನ ಜನರ ಭಾವನೆಗಳೊಂದಿಗೆ ಹೊಂದುವುದಿಲ್ಲ. ಅಲ್ಲಿ ಪಂಚಮರ ಪ್ರವೇಶದ ವಿರುದ್ಧ ಬಲವಾದ ಅಭಿಪ್ರಾಯಗಳಿವೆ. ಹೀಗಿದ್ದರೂ ಪಂಚಮರುಗಳನ್ನು ಗ್ರಾಮದ ಹೊರವಲಯದಲ್ಲಿ ಇಡಲಾಗಿದೆ ಮತ್ತು ಗ್ರಾಮದ ಒಳಗಡೆ ಹೊಂದಲು ಜನ ಇಚ್ಛಿಸುವುದಿಲ್ಲ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಪಂಚಮರುಗಳಿಗೆ ಶಿಕ್ಷಣ ಒದಗಿಸುವುದೇ ಆದಲ್ಲಿ ಅವರು ದಿನದ ಎಲ್ಲ ವೇಳೆಗಳಲ್ಲಿ ಕೆಲಸಕ್ಕೆ ದೊರಕುವುದಿಲ್ಲ. ಪಂಚಮರೆಂದೇ ಒಟ್ಟಾಗಿ ಕರೆಯಲಾದರೂ ಕೂಡಾ ಮಾದಿಗರು ಮತ್ತು ಹೊಲೆಯರು ಪರಸ್ಪರ ಒಬ್ಬರೊಂದಿಗೆ ಒಬ್ಬರು ಬೆರೆಯುವುದಿಲ್ಲ ಎಂದು ಶ್ರೀ.ಹೆಬ್ಬೂರು ರಾಮಣ್ಣ ತಿಳಿಸಿದರು. ಒಬ್ಬ ಬ್ರಾಹ್ಮಣ ಒಬ್ಬ ಮಾದಿಗನನ್ನು ಹತ್ತಿರಕ್ಕೆ ಬರಲು ಕರೆದಾಗ ಕೂಡಾ ಮಾದಿಗ ಬರಲು ಹಿಂಜರಿಯುತ್ತಾನೆ. ಪರಿಸ್ಥಿತಿ ಹೀಗಿರುವಾಗ ಪಂಚಮರ ಬಾಲಕರನ್ನು ಇತರರೊಂದಿಗೆ ಕುಳಿತುಕೊಳ್ಳುವಂತೆ ಒತ್ತಾಯ ಪಡಿಸುವ ಅಗತ್ಯವಾದರೂ ಏಕೆ ಇರತಕ್ಕದ್ದು ಎಂದು ಅವರು ಪ್ರಶ್ನಿಸಿದರು. ಮದರಾಸು ಮೈಲ್ ದಿನಪತ್ರಿಕೆಯಲ್ಲಿ ವರದಿಯಾದಂತೆ, ಅಲ್ಲಿನ ವಿಧಾನ ಪರಿಷತ್ತಿನಲ್ಲಿ ಒಂದು ಪ್ರಶ್ನೆಗೆ ಮದರಾಸು ಸರ್ಕಾರ ನೀಡಿದ ಜವಾಬನ್ನು ನಮ್ಮ ಸರ್ಕಾರ ಪರಾಮರ್ಶಿಸ ಬೇಕೆಂದು ಶ್ರೀ.ಸಿ.ನರಸಿಂಹಯ್ಯ ಕೋರಿದರು ಪಂಚಮ ಬಾಲಕರ ಪ್ರವೇಶವನ್ನು ಸಾಮಾನ್ಯ ಶಾಲೆಗಳಿಗೆ ಬಲಾತ್ಕಾರ ಮಾಡಿರುವುದೇ ಆದರೆ ಅದು ಈ ವಿಷಯವನ್ನು ಸರಿಯಾಗಿ ಪರಿಶೀಲಿಸಿಲ್ಲ ಎಂದರು. ಮಧ್ಯೆ ಪ್ರವೇಶಿಸಿ ಮಾತನಾಡಿದ ಶಿಕ್ಷಣ ಮಹಾನಿರೀಕ್ಷಕರು ಮದರಾಸಿನಲ್ಲಿ ನಡೆದ ವಿಷಯವನ್ನು ತಿಳಿಸಿದರು, ಪಂಚಮ ಬಾಲಕರಿಗೆ ಪ್ರವೇಶವನ್ನು ನಿರಾಕರಿಸಿದ ಶಾಲೆಗಳಿಗೆ ಅನುದಾನವನ್ನು ನೀಡಬಾರದೆಂದು ಗೌರವಾನ್ವಿತ ಸದಸ್ಯರಾದ ಶ್ರೀ.ರಾಜನ್ ಮಂಡಿಸಿದರು. ಆದರೆ ಹಾಗೆ ಮಾಡಲು ಮದರಾಸು ಸರ್ಕಾರ ನಿರಾಕರಿಸಿತು. ಪಂಚಮರು ಹಿಂದೂಗಳ ಒಂದು ಭಾಗವಾಗಿದ್ದಾರೆ ಮತ್ತು ಅವರನ್ನು ಸಮನಾಗಿ ಪರಿಗಣಿಸತಕ್ಕದ್ದು ಎಂದು ಶ್ರೀ. ನಾರಾಯಣ ರೆಡ್ಡಿ ಅಭಿಪ್ರಾಯಪಟ್ಟರು. ಪಂಚಮರುಗಳಿಗಾಗಿ ಪ್ರತ್ಯೇಕ ಶಾಲೆಗಳ ಮೇಲೆ ಭಾರಿ ಮೊತ್ತದ ಹಣವನ್ನು ವೆಚ್ಚ ಮಾಡಲು ಸರ್ಕಾರಕ್ಕೆ ತೊಂದರೆ ಇದೆ. ಹಿಂದೂಗಳು ಅವರನ್ನು ಸರಿಯಾಗಿ ಗಮನಿಸದೆ ಹೋದಲ್ಲಿ ಅವರು ಅವರನ್ನು ತೊರೆದು ಕ್ರೈಸ್ತರನ್ನು ಸೇರುತ್ತಾರೆ.

ಪಂಚಮರು ಉತ್ತಮರಾಗುವುದಕ್ಕೆ ನಮ್ಮ ವಿರೋಧವಿಲ್ಲ ಎಂದು ಮತ್ತೊಬ್ಬ ಸದಸ್ಯರು ನುಡಿದರು. ಆದರೆ ಅವರು ಕೊಳಕರಾಗಿ ಮುಂದುವರೆದಷ್ಟು ಕಾಲ ಅವರನ್ನು ಇತರರೊಡನೆ ಕುಳಿತುಕೊಳ್ಳಲು ಅನುಮತಿಸುವುದಕ್ಕೆ ಅವರು ವಿರೋಧ ಹೊಂದಿದ್ದಾರೆ. ಶ್ರೀ.ಗೋಪಾಲಸ್ವಾಮಿ

ಅಯ್ಯರ್ ಈ ವಿಷಯದ ಮೇಲೆ ಒಂದು ದೀರ್ಘವಾದ ಭಾಷಣ ಮಾಡಿದರು. ಪಂಚಮರು ಇತರ ಜಾತಿಯವರೊಡನೆ ಬೆರೆಯುವುದರ ವಿರುದ್ಧ ಎರಡು ವಾದಗಳಿವೆ ಎಂದು ಅವರು ನುಡಿದರು. ಮೊದಲನೆಯ ವಾದ ಪಂಚಮರು ಶುಭ್ರರಾಗಿಲ್ಲ, ಅವರು ದನದ ಮಾಂಸ ತಿನ್ನುತ್ತಾರೆ ಮತ್ತು ಕಳ್ಳಭಟ್ಟಿ ಸಾರಾಯಿ ಕುಡಿಯುತ್ತಾರೆ, ಎರಡನೆಯ ವಾದ ಅವರು ಸುಧಾರಿಸುವವರೆಗೆ ಅವರನ್ನು ಇತರರೊಂದಿಗೆ ಸಮಾನರನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ. ಪಂಚಮರು ಮಾಂಸವನ್ನು ತಿನ್ನುತ್ತಾರೆ ಎಂಬ ವಾದವನ್ನು ಅವರು ತಳ್ಳಿಹಾಕಿದರು ಮತ್ತು ಎಲ್ಲ ಜನರನ್ನು ಶಾಖಾಹಾರಿಗಳು ಮತ್ತು ಮಾಂಸಾಹಾರಿಗಳು ಎಂದು ವಿಭಜನೆ ಮಾಡಿದ್ದೇ ಆದರೆ, ಮಾಂಸಾಹಾರಿಗಳನ್ನು ಇತರರಿಂದ ಪ್ರತ್ಯೇಕವಾಗಿ ಇಡಲು ಸಾಧ್ಯವಾಗುವುದೇ ಎಂದು ಅವರು ಪ್ರಶ್ನಿಸಿದರು. ಪಂಚಮರ ಸುಧಾರಣೆಯ ವಿಚಾರದಲ್ಲಿ ಯಾವುದೇ ಕಾಲಾವಧಿಯನ್ನು ನಿಗಧಿಪಡಿಸುವುದು ತಕ್ಕದ್ದಲ್ಲ ಎಂದರು. ಪಂಚಮರ ವಿರುದ್ಧ ಇದ್ದ ಈ ಎರಡೂ ವಾದಗಳನ್ನು ಅವರು ತಿರಸ್ಕರಿಸಿದರು ಪಂಚರು ಯಾವುದೇ ಕಾಲದಲ್ಲಿ ಆಳ್ವಿಕೆ ನಡೆಸಿದವರಲ್ಲ ಎಂಬ ವಾದವನ್ನು ವಿರೋಧಿಸುತ್ತಾ ಶ್ರೀ.ಗೋಪಾಲಸ್ವಾಮಿ ಅಯ್ಯರ್ ಅಧಿಕಾರಯುತವಾಗಿ ಹೀಗೆ ತಿಳಿಸಿದರು. ಆದಿ ದ್ರಾವಿಡರು ಪೂರ್ವದಲ್ಲಿ ದೊರೆಗಳಾಗಿದ್ದವರು ಮತ್ತು ಅವರ ಹಿಂದೆ ಒಂದು ಬಹಳ ಒಳ್ಳೆಯ ಚರಿತ್ರೆ ಇದೆ ಎಂದು ಆದಿ ದ್ರಾವಿಡ ಸಂಘ ಒತ್ತಾಯಿಸುತ್ತಲೇ ಬಂದಿದೆ ಎಂದರು. ಇತರ ಜಾತಿಯ ಬಾಲಕರು ಪಂಚಮರ ಸಹವಾಸದಿಂದ ಅನೈರ್ಮಲ್ಯ ಅಭ್ಯಾಸಗಳಿಗೆ ಬಲಿಯಾಗುತ್ತಾರೆ ಎಂಬುದು ಎಲ್ಲ ಕಾಲದಲ್ಲೂ ಸರಿಯಲ್ಲ ಎಂದು ಅವರು ನುಡಿದರು. ಹುಡುಗರ ಬಗ್ಗೆ ಶಾಲೆಯಲ್ಲಿ ಸರಿಯಾದ ಗಮನ ಹರಿಸಿದರೆ ಇಂತಹ ಅಪಾಯ ಇರುವುದಿಲ್ಲ ಎಂದರು, ಸರ್ಕಾರ ಎರಡು ವಿಧದ ಶಾಲೆಗಳನ್ನು ತೆರೆಯಬಹುದು, ಶಾಖಾಹಾರಿಗಳಿಗಾಗಿ ಒಂದು ಶಾಲೆ ಮತ್ತು ಮಾಂಸಾಹಾರಿಗಳಿಗೆ ಮತ್ತೊಂದು, ಇಲ್ಲದಿದ್ದರೆ ಪ್ರತಿಯೊಂದು ಗ್ರಾಮದಲ್ಲಿ ಒಂದು ಗ್ರಾಮ ಸಮಿತಿ ಇದ್ದು ಅದು ಪಂಚಮರನ್ನು ಶಾಲೆಗಳಿಗೆ ಅನುಮತಿಸಬಹುದೇ ಎಂಬುದನ್ನು ತೀರ್ಮಾನಿಸಬಹುದು ಈ ಪ್ರಶ್ನೆಯನ್ನು ಪರಿಗಣಿಸುವಲ್ಲಿ ಅನಿರ್ದಿಷ್ಟ ಕಾಲದವರೆಗೆ ತಳ್ಳಿಹಾಕುವ ಬದಲು ಧೈರ್ಯವಾಗಿ ಎದುರಿಸತಕ್ಕ ಕಾಲ ಬಂದಿದೆ. ಇತರ ಜಾತಿಗಳು ಪಂಚಮರುಗಳನ್ನು ಸಮಾಜದ ಒಳಗೆ ಸೇರಿಸಿಕೊಳ್ಳಲು ತಯಾರಿಲ್ಲದೆ ಇರುವಾಗ, ಅವರ ಸುಧಾರಣೆಗೆ ಸಾಮಾಜಿಕ ಸಂಸ್ಥೆಗಳು ಏನು ತಾನೆ ಮಾಡಬಲ್ಲವು ಎಂಬುದನ್ನು ಅರಿಯೆ ಎಂದರು. ಎಲ್ಲ ಪಂಚಮ ಬಾಲಕರನ್ನು ಒಂದೇ ಕೇಂದ್ರ ಆವಾಸ ಪಾಠಶಾಲೆಗೆ ಸೇರಿಸಿಕೊಳ್ಳಲು ಸಾಧ್ಯವಿಲ್ಲ. ಮೈಸೂರಿನಲ್ಲಿ ವಸತಿ ಅಭಾವದಿಂದ ೨೦೦ ಬಾಲಕರುಗಳಿಗೆ ಪ್ರವೇಶವನ್ನು ನಿರಾಕರಿಸಲಾಯಿತು. ಪಂಚಮರುಗಳನ್ನು ಸಾಮಾನ್ಯ ಶಾಲೆಗೆ ಸೇರಲು ಅನುಮತಿಸತಕ್ಕದ್ದು ಎಂಬುದಕ್ಕೆ ಅದೇ ಕಾರಣ ಪಂಚಮರು ಆವಾಸ ಪಾಠಶಾಲೆಗಳಿಗೆ ಪ್ರವೇಶಿಸಲು ಸಾಧ್ಯವಿಲ್ಲ ದಿರುವಾಗ ಮತ್ತು ಸಾಮಾನ್ಯ ಶಾಲೆಗಳಿಗೆ ಹೋಗಲು ಅನುಮತಿ ಇಲ್ಲದಿರುವಾಗ, ಅವರು ಹೇಗೆ ತಾನೆ ಶಿಕ್ಷಣ ಪಡೆಯಲು ಸಾಧ್ಯ ಎಂದು ಅವರು ಪ್ರಶ್ನಿಸಿದರು.

ಇದುವರೆವಿಗೂ ಸಾಮಾನ್ಯ ಶಾಲೆಗಳು ಎಲ್ಲ ಜನಗಳಿಗಾಗಿ ಉದ್ದೇಶಿಸಲಾಗಿತ್ತು ಮತ್ತು ಪಂಚಮರನ್ನು ಹೊರತುಪಡಿಸಿ ಇತರ ಜನಾಂಗಗಳಿಗೆ ಅಲ್ಲ ಎಂದು ಅವರು ವಾದ ಮಂಡಿಸಿದರು. ಪಂಚಮರನ್ನು ಉನ್ನತ ವರ್ಗಗಳ ಬಾಲಕರ ಜೊತೆಯಲ್ಲಿ ಕೆಳಗಿನ ತರಗತಿಗಳಿಗೆ ಅನುಮತಿಸತಕ್ಕದ್ದಲ್ಲ ಆದರೆ ಪದವಿ ತರಗತಿಗಳಲ್ಲಿ ಅವರನ್ನು ಅನುಮತಿಸಲು ಯಾವುದೇ ಆಕ್ಷೇಪಣೆ ಇಲ್ಲ ಎಂಬ ಒಬ್ಬ ಸದಸ್ಯರ ವಾದವನ್ನು ಶ್ರೀ ಅಯ್ಯರ್ ಉಲ್ಲೇಖಿಸಿದರು. ಆದರೆ ಕೆಳಗಿನ ತರಗತಿಗಳಿಗೆ ಹೇಗೆ ಹೋಗಲು ಸಾಧ್ಯ ಎಂದು ಅವರು ಪ್ರಶ್ನಿಸಿದರು. ಮದರಾಸು ವಿಧಾನ ಪರಿಷತ್ತಿನಲ್ಲಿ ನಡೆದ ಪ್ರಶ್ನೋತ್ತರದ ಬಗ್ಗೆ ಉಲ್ಲೇಖಿಸುತ್ತಾ, ಆ ಪ್ರಶ್ನೆ ಖಾಸಗಿ ಅನುದಾನಿತ ಶಾಲೆಗಳಿಗೆ ಪಂಚಮರ ಪ್ರವೇಶಕ್ಕೆ ಸಂಬಂಧಿಸಿದ್ದಾಗಿದೆ ಎಂದರು. ಪಂಚಮರಿಗೆ ಪ್ರವೇಶ ನೀಡಲಿಲ್ಲ ಎಂಬ ಕಾರಣದ ಮೇಲೆ ಅನುದಾನವನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಸರ್ಕಾರ ತಿಳಿಸಿದೆ. ಆದರೆ ಪಂಚಮರಿಗೆ ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ನೀಡುವುದಕ್ಕೆ ಯಾವುದೇ ಅಭ್ಯಂತರ ಇಲ್ಲ. ಒಬ್ಬ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಿದರೆ, ಅತಿಯಾದ ಸರ್ಕಾರಿ ವಿಳಂಬ ನೀತಿಯಿಂದ ಮಂಜೂರಾತಿ ಪಡೆಯಲು ಒಂದು ವರ್ಷದಷ್ಟು ದೀರ್ಘಕಾಲ ಕಾಯಬೇಕಾಗುತ್ತದೆ ಎಂಬುದು ನನ್ನ ಅನುಭವ ದಿಂದ ನಾನು ಕಂಡುಕೊಂಡಿದ್ದೇನೆ ಎಂದರು. ವರ್ಷದ ಕೊನೆಯಲ್ಲಿ ಹುಡುಗ ಶಾಲೆಗೆ ಹೋಗಲು ಇಚ್ಛಿಸುವುದಿಲ್ಲ ಅಥವಾ ಅವನ ತಂದೆ ತಾಯಿಗಳು ಅವನಿಗಾಗಿ ಬೇರೆ ಕೆಲಸ ಇಟ್ಟಿರುತ್ತಾರೆ. ಪಂಚಮರಿಗೆ ಅವನ ಶಿಕ್ಷಣಕ್ಕಾಗಿ ಯಾವ ಸೌಲಭ್ಯಗಳು ಲಭ್ಯವಿದೆ ಎಂದು ತಿಳಿಯದ ಕಾರಣ, ಪಂಚಮರನ್ನು ಶಿಕ್ಷಣ ಹೊಂದುವಂತೆ ಪ್ರಚೋದಿಸಲು ಸ್ವಲ್ಪ ಪ್ರಚಾರ ಇರತಕ್ಕದ್ದು.[೨೪]

ಮಾದಿಗರು ಮತ್ತು ಹೊಲೆಯರ ನಡುವೆ ಅಸ್ತಿತ್ವದಲ್ಲಿರುವ ಭಿನ್ನಾಭಿಪ್ರಾಯಗಳು ವಿದ್ಯಾವಂತ ವರ್ಗಗಳಲ್ಲಿ ಕೂಡಾ ಸಾಧ್ಯವಾದ ಮಟ್ಟಕ್ಕೆ ಅಸ್ತಿತ್ವದಲ್ಲಿದೆ ಎಂದು ಶ್ರೀ.ಗೋಪಾಲಸ್ವಾಮಿ ಅಯ್ಯರ್ ಮುಂದುವರೆದು ತಿಳಿಸಿದರು. ಸಾಮಾಜಿಕ ಕೆಡುಕುಗಳ ಮೇಲೆ ಶಿಕ್ಷಣ ಸುಧಾರಿಸುವ ಪ್ರಭಾವ ಹೊಂದಿದೆ. ಶಿಕ್ಷಣದಿಂದ ಪಂಚಮರು ನಿಶ್ಚಯವಾಗಿ ಸಾಮಾಜಿಕ ಕೆಡಕುಗಳನ್ನು ದೂರ ಸರಿಸುತ್ತಾರೆ. ಆದ್ದರಿಂದ ಈಗ ಇಷ್ಟು ಧೈರ್ಯದಿಂದ ಅನುಸರಿಸಿರುವ ಪ್ರಗತಿಪರ ನೀತಿಯ ಹೆಜ್ಜೆಗಳನ್ನು ಸರ್ಕಾರ ಹಿಂತೆಗೆಯಬಾರದೆಂದು ಅವರು ಕೋರಿದರು. ಪಟ್ಟಭದ್ರ ಹಿತಾಸಕ್ತಿಗಳು ಅವರನ್ನು ಕುರುಡರನ್ನಾಗಿಸಿದೆ ಎಂದು ಶ್ರೀ.ಗೋಪಾಲಸ್ವಾಮಿ ಅಯ್ಯರ್ ತಮ್ಮ ವಾದವನ್ನು ಮುಂದುವರೆಸಿದರು. ಪಂಚಮರಿಗೆ ಶಿಕ್ಷಣವನ್ನು ಕಲಿತರೆ ಕೂಲಿಗಳಾಗಿ ಕೆಲಸ ಮಾಡಲು ಅವರು ದೊರಕುವುದಿಲ್ಲ ಎಂದು ಕೆಲವು ಜನರು ವಾದಿಸುವುದು ವಿಚಿತ್ರವಾಗಿದೆ. ಪಂಚಮರ ಶಿಕ್ಷಣಕ್ಕೆ ವಿರೋಧಿಸುವುದರಲ್ಲಿ ಕೇವಲ ಈ ಸೂತ್ರ ಮಾತ್ರ ಕಾರಣವೇ? ಎಂದು ಅವರು ಪ್ರಶ್ನಿಸಿದರು. ಅವಿದ್ಯಾವಂತ ಪಂಚಮ ಒಂದು ದಿನದ ಕೆಲಸಕ್ಕೆ ೪ ಆಣೆಗಳನ್ನು ಪಡೆದರೆ, ಶಿಕ್ಷಣ ಪಡೆದ ನಂತರ ೮ ಆಣೆಗಳಿಗೆ ಒತ್ತಾಯಿಸಬಹುದು ಎಂಬ ವಿಷಯ ಸತ್ಯಕ್ಕೆ ದೂರವಲ್ಲ.

ಆದರೆ ಅದರಲ್ಲಿ ಕೂಡಾ ಒಂದು ಪ್ರಯೋಜನವಿದೆ. ವಿದ್ಯಾವಂತ ಪಂಚಮನಲ್ಲಿ ಉತ್ತಮ ಕರ್ತವ್ಯ ಪ್ರಜ್ಞೆ ಇರುತ್ತದೆ ಮತ್ತು ಈಗಿನಂತೆ ಅತಿ ಸೂಕ್ಷ್ಮವಾದ ಮೇಲ್ವಿಚಾರಣೆ ಅನಗತ್ಯವಾಗುತ್ತದೆ. ಶಿಕ್ಷಣದ ಅಭಾವ ಸಮಾಜಕ್ಕೆ ಒಂದು ಕಂಟಕ ಎಂದು ಹೇಳುತ್ತಾ ಶ್ರೀ.ಗೋಪಾಲಸ್ವಾಮಿ ಅಯ್ಯರ್ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಅವರ ಆತ್ಮರಕ್ಷಣೆಗೋಸ್ಕರವಾಗಿಯಾದರೂ ಪಂಚಮರಿಗೆ ಶಿಕ್ಷಣ ನೀಡುವುದು ಉತ್ತಮ. ಅದರಿಂದ ಅವರು ಸಮಾಜದ ಗೌರವಾನ್ವಿತ ಸದಸ್ಯರಾಗಬಹುದು ಎಂದರು. ಪಂಚಮರನ್ನು ಹೊರಗೆ ಇರಿಸುವುದರ ಮೂಲಕ ನಾವು ಕೇವಲ ಪಾಶ್ಚಿಮಾತ್ಯ ದೇಶಗಳ ಸೂತ್ರಗಳನ್ನು ಅನುಸರಿಸುತ್ತಿದ್ದೇವೆ ಎಂಬ ಅಭಿಪ್ರಾಯವನ್ನು ಶ್ರೀ.ಕರಣಿಕ ಕೃಷ್ಣಮೂರ್ತಿ ರಾಯರು ವ್ಯಕ್ತಪಡಿಸಿದರು. ಉದಾಹರಣೆಗೆ ಬೆಂಗಳೂರಿನ ಸೈಂಟ್ ಜೋಸೆಫ್‌ರ ಶಾಲೆಯಲ್ಲಿ ಹಿಂದೂ ಬಾಲಕರು ಯುರೋಪಿಯನ್ನರ ಸಾರ್ವಜನಿಕ ಊತಣಕೂಟ ಗಳಲ್ಲಿ ಕೆಳಹಂತದ ಒಬ್ಬ ವ್ಯಕ್ತಿಯನ್ನು ಕುಳಿತುಕೊಳ್ಳಲು ಅನುಮತಿಸುವುದಿಲ್ಲ. ಹಿಂದೂಗಳ ಧಾರ್ಮಿಕ ಭಾವನೆಗಳೊಂದಿಗೆ ಬ್ರಿಟಿಷ್ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲವೆಂದು ದಿವಂಗತರಾದ ವಿಕ್ಟೋರಿಯ ಮಹಾರಾಣಿಯವರು ಕ್ರಮಬದ್ಧ ಆಶ್ವಾಸನೆ ನೀಡಿದ್ದರು. ಉನ್ನತ ಜಾತಿಯ ಮಧ್ಯದಲ್ಲಿ ಪಂಚಮರಿಗೆ ಪ್ರವೇಶ ನೀಡುವುದು ತೀವ್ರ ಅಸಮಾಧಾನವನ್ನು ತರುತ್ತದೆ ಮತ್ತು ದಿವಂಗತ ಮಹಾರಾಣಿಯವರು ನೀಡಿದ ಆಶ್ವಾಸನೆಯ ಉಲ್ಲಂಘನೆಯಾಗುತ್ತದೆ. ಎರಡನೆಯ ಬಾರಿ ಮಾತನಾಡಿದ ಕೃಷ್ಣಶಾಸ್ತ್ರೀಗಳು ಕಳೆದ ವರ್ಷ ಎತ್ತಿಕೊಂಡ ಮುಜರಾಯಿ ವಿಚಾರಗಳ ಮೇಲಿನ ಚರ್ಚೆಯಲ್ಲಿ ಅಧ್ಯಕ್ಷರಾಗಿದ್ದ ಬ್ಯಾನರ್ಜಿಯವರು ಉನ್ನತ ಪ್ರಜಾಪ್ರಭುತ್ವ ಸೂತ್ರಗಳನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸುವುದು ತಕ್ಕದ್ದಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಪಂಚಮರ ಪ್ರಶ್ನೆ ಅಂತಹದುರಲ್ಲಿ ಒಂದಾಗಿದೆ. ಮೈಸೂರು ಅತಿಷಯವಾಗಿ ಸಂಪ್ರದಾಯಬದ್ಧ ದೇಶ. ಅದು ತನ್ನ ಸಂಪ್ರದಾಯ ಬದ್ಧತೆಯನ್ನು ಸ್ವಲ್ಪ ಸ್ವಲ್ಪವಾಗಿ ಬಿಡುತ್ತಾ ಬರುತ್ತಿರುವುದರಲ್ಲಿ ಸಂಶಯವಿಲ್ಲ ಮತ್ತು ಈಗಿನ ಕಾಲದಲ್ಲಿ ಸಂಪ್ರದಾಯಬದ್ಧ ಜನರ ಗಂಡು ಮಕ್ಕಳುಗಳು ಕೂಡಾ ಆಕ್ಷೇಪಣೆಯಿಲ್ಲದೆ ಇಂಗ್ಲೆಂಡ್ ಮತ್ತು ಅಮೆರಿಕಾಗಳಿಗೆ ಹೋಗುತ್ತಿದ್ದಾರೆ. ಕಾಲ ಮುಂದುವರೆದಂತೆ ಅದು ಜನರ ಮನಸ್ಸುಗಳಲ್ಲಿ ಹೊಸ ಆಲೋಚನೆಗಳನ್ನು ನಿಧಾನವಾಗಿ ಮತ್ತು ನಿಶ್ಚಯವಾಗಿ ತರುತ್ತಿದೆ. ಹಾಗೆಯೇ ಪಂಚಮರ ಬಗ್ಗೆ ಅಭಿಪ್ರಾಯ ಕೂಡಾ ಬದಲಾಯಿಸುತ್ತದೆ ಮತ್ತು ಅದು ಹಾಗೆ ಮಾರ್ಪಾಡು ಆಗಿಯೇ ತೀರುತ್ತದೆ. ಆದರೆ ಅವರು ಅದಕ್ಕಾಗಿ ಸಿದ್ಧರಿಲ್ಲದೆ ಇರುವಾಗ ಒಂದೇ ಬಾರಿಗೆ ಸುಧಾರಣೆಯಾಗಬೇಕೆಂದು ಜನರನ್ನು ಬಲಾತ್ಕಾರಪಡಿಸುವುದರಿಂದ ಯಾವುದೇ ಪ್ರಯೋಜನ ಇಲ್ಲ.

ಪಂಚಮರುಗಳಿಗೆ ಶಿಕ್ಷಣ ಒದಗಿಸಲು ಕಳೆದ ೩೫ವರ್ಷಗಳಿಂದ ಪ್ರಯತ್ನ ಮಾಡಲಾಗುತ್ತಿದೆ ಎಂದು ಶ್ರೀ.ಮೇಲುಕೋಟೆ ಶಾಮಯ್ಯಂಗಾರ್ ಹೇಳಿದರು, ಈ ಯೋಚನೆಯನ್ನು ಮೊದಲಿಗೆ

ಬೆಂಗಳೂರಿನಲ್ಲಿ ಕಾರ್ಯರೂಪಕ್ಕೆ ತರಲಾಯಿತು. ಮತ್ತು ಪಂಚಮರಿಗೆ ಶಿಕ್ಷಣ ನೀಡುವುದು ಹಿಂದೂ ಸಮಾಜದ ವಿರುದ್ಧವಾಗಿ ಕೆಲಸ ಮಾಡಬಹುದು ಎಂಬ ಯೋಚನೆಯಿಂದ ಕೆಲವು ಜನ ಅದನ್ನು ವಿರೋಧಿಸಿದರು. ಇದಕ್ಕೆ ಜವಾಬು ನೀಡಿದ ಶ್ರೀ.ರೈಸ್‌ರವರು, ಪಂಚಮರಿಗೆ ಉನ್ನತ ಶಿಕ್ಷಣವನ್ನು ನೀಡುವ ಅವಶ್ಯಕತೆ ಇಲ್ಲ. ಆದರೆ ಅವರು ಪ್ರಾಥಮಿಕ ಹಂತದವರೆಗೆ ಹೋಗಬಹುದು ಎಂದು ನುಡಿದರು. ಪಂಚಮರ ವಿದ್ಯಾಭ್ಯಾಸಕ್ಕಾಗಿ ಎರಡು ಧರ್ಮ ಪ್ರಚಾರಕ ಮಂಡಳಿ ಶಾಲೆಗಳನ್ನು ಪ್ರಾರಂಭಿಸಲಾಯಿತು. ಆದರೆ ಆ ಕಾಲದಲ್ಲಿ ಈ ಧರ್ಮಪ್ರಚಾರಕ ಮಂಡಲಿಗಳು ಪಂಚಮರುಗಳನ್ನು ಕ್ರೈಸ್ತರುಗಳನ್ನಾಗಿ ಪರಿವರ್ತಿಸುವ ಭಯ ಇದ್ದಿತು. ಆದ ಕಾರಣ ೧೮೮೧ರಿಂದ ಈಚೆಗೆ ಹಿಂದೂಗಳೇ ಕೆಲವು ಪ್ರದೇಶಗಳಲ್ಲಿ ತಾವಾಗಿಯೇ ಪಂಚಮರ ಶಾಲೆಗಳನ್ನು ಪ್ರಾರಂಭಿಸಿದರು. ಶೀಘ್ರದಲ್ಲಿಯೇ ಮೈಸೂರಿನಲ್ಲಿ ೩೦ ಪಂಚಮರ ಶಾಲೆಗಳಾದವು ಆ ರೀತಿಯ ಕೆಲಸವನ್ನು ನಿಶ್ಯಬ್ದವಾಗಿ ಮತ್ತು ಗಲಾಟೆಯಿಲ್ಲದೆ ನಡೆಸಲಾಯಿತು. ಮೇಲುಕೋಟೆಯಲ್ಲಿ ವರ್ಷದಲ್ಲಿ ಒಂದು ನಿರ್ದಿಷ್ಟ ದಿನದಂದು ದೇವರನ್ನು ಪೂಜಿಸುವಲ್ಲಿ ಕೆಲವು ವಿಶೇಷ ಹಕ್ಕುಗಳನ್ನು ಪಂಚಮರು ಬಹಳ ಕಾಲದಿಂದ ಅನುಭವಿಸುತ್ತಾ ಬಂದಿದ್ದಾರೆ. ಶ್ರೀ.ವೈಷ್ಣವ ಮಠಗಳು ಪಂಚಮರನ್ನು ಆದರದಿಂದ ಕಾಣುತ್ತದೆ. ಆದರೆ ಅಲ್ಪಸ್ವಲ್ಪ ಶಿಕ್ಷಣದ ಕಾರಣ ಪಂಚಮರು ಬ್ರಾಹಣರ ವಿರುದ್ಧ ಸಂದೇಹಾಸ್ಪದ ನಡುವಳಿಕೆಯನ್ನು ತೋರಿಸಲು ಪ್ರಾರಂಭಿಸಿದ ಕಾರಣ ಅದು ಅವರನ್ನು ದೂರಸರಿಸಲು ಕಾರಣವಾಯಿತು ಎಂದರು. ಪಂಚಮರನ್ನು ಸಮಾಜದೊಳಗೆ ಅನುಮತಿಸುವುದು ಹಿಂದೂ ಧರ್ಮದ ಎಲ್ಲ ಅಂಗೀಕೃತ ಸಿದ್ಧಾಂತಗಳಿಗೆ ವಿರೋಧವಾಗಿದೆ, ಈ ಸಿದ್ಧಾಂತಗಳನ್ನು ಕೈಬಿಟ್ಟಲ್ಲ ಹಿಂದೂ ಸಮಾಜ ನಿಶ್ಚಯವಾಗಿ ಹಾಳಾಗುತ್ತದೆ. ಮೈಸೂರು ಧರ್ಮಕ್ಕೆ ಹೆಸರಾದ ಸರ್ವೋತ್ಕೃಷ್ಟ ದೇಶ ಮತ್ತು ಧರ್ಮವನ್ನು ಎಲ್ಲ ಆಕ್ರಮಣಗಳ ವಿರುದ್ಧ ಕಾಪಾಡಬೇಕಾಗಿದೆ. ಪಂಚಮರ ಶಿಕ್ಷಣವನ್ನು ಶಾಸ್ತ್ರಗಳು ನಿಷೇಧಿಸಿಲ್ಲ ಆದರೆ ಅವರು ತಮ್ಮದೇ ಆದ ಶಾಲೆಗಳನ್ನು ಹೊಂದಿರತಕ್ಕದ್ದು ಎಂದರು. ಚಾಮರಾಜನಗರದಲ್ಲಿ ಪಂಚಮರ ಬಾಲಕರು ಶಾಲೆಗೆ ಸೇರಲು ಪ್ರಾರಂಭಿಸಿದ ತಕ್ಷಣ ಮುಸಲ್ಮಾನರುಗಳು ಕೂಡಾ ತಮ್ಮ ಮಕ್ಕಳನ್ನು ಶಾಲೆಯಿಂದ ಹಿಂತೆಗೆದುಕೊಂಡರು ಎಂದು ಶ್ರೀ.ವೆಂಕಟಶಾಮಯ್ಯ ನುಡಿದರು. ವೈಯಕಿಕ ಸದಸ್ಯರುಗಳ ಅಭಿಪ್ರಾಯವನ್ನು ಸರ್ಕಾರದ ಮೇಲಿನ ಕಟ್ಟಳೆಯನ್ನಾಗಿ ತೆಗೆದುಕೊಳ್ಳತಕ್ಕದ್ದಲ್ಲ ಎಂಬ ಅಭಿಪ್ರಾಯವನ್ನು ಶ್ರೀ.ಉಸ್ಮಾನ್ ಖಾನ್ ವ್ಯಕ್ತಪಡಿಸಿದರು. ಸರ್ಕಾರದ ದೃಷ್ಟಿಯಲ್ಲಿ ಎಲ್ಲ ಜನರನ್ನು ಸಮಾನರನ್ನಾಗಿ ಕಾಣತಕ್ಕದ್ದು. ಪಂಚಮರು ಬಡವರು ಎಂಬ ವಿಚಾರದಲ್ಲಿ ಯಾವುದೇ ಸಂಶಯವಿಲ್ಲ ಆದರೆ ಅಷ್ಟು ಮಾತ್ರಕ್ಕೆ ಅವರನ್ನು ಪ್ರತ್ಯೇಕವಾಗಿ ಇಡುವುದು ಸರಿಯಲ್ಲ. ಅದಕ್ಕೆ ಬದಲಾಗಿ ಅವರಿಗೆ ಶಿಕ್ಷಣ ಒದಗಿಸತಕ್ಕದ್ದು ಮತ್ತು ಅವರನ್ನು ಇತರರ ಮಟ್ಟಕ್ಕೆ ತಂದು ಒಂದು ಸುಖವಾದ ಜೀವನ ನಡೆಸಲು ಅನುವುಮಾಡಿಕೊಡತಕ್ಕದ್ದು. ಪಂಚಮರು ಗಳನ್ನು ವ್ಯಾಪಾರಿಗಳು, ಭೂಮಾಲೀಕರು, ಸರ್ಕಾರಿ ನೌಕರರು ಮುಂತಾದವರುಗಳನ್ನಾಗಿ

ಮಾಡತಕ್ಕದ್ದು ಪಂಚಮರನ್ನು ಶಾಲೆಗಳಲ್ಲಿ ಪ್ರತ್ಯೇಕವಾಗಿ ಇಡತಕ್ಕದ್ದು ಎಂಬುದಾದರೆ ಅವರನ್ನು ನೇಮಕ ಮಾಡಲಾಗಿರುವ ಸರ್ಕಾರಿ ಕಛೇರಿಗಳಲ್ಲಿ ಕೂಡಾ ಅವರಿಗೆ ಪ್ರತ್ಯೇಕವಾದ ಅನುಕೂಲಗಳು ಇರತಕ್ಕದ್ದೇ ಎಂದು ಅವರು ಪ್ರಶ್ನಿಸಿದರು. ತಾಲ್ಲೂಕು ಮತ್ತು ಜಿಲ್ಲಾ ಮಂಡಳಿಗಳಲ್ಲಿ ಪಂಚಮರು ಇದ್ದಾರೆ ಅವರಿಗೆ ಸಭೆಗಳಲ್ಲಿ ಪ್ರತ್ಯೇಕವಾದ ಅನುಕೂಲಗಳನ್ನು ನೀಡಬೇಕೆ? ಇತರರು ಅವರೊಂದಿಗೆ ಕುಳಿತುಕೊಳ್ಳುತ್ತಿಲ್ಲವೆ? ಹಾಗಿರುವಾಗ ಶಾಲೆಗಳಲ್ಲಿ ಯಾಕೆ ಪಂಚಮರೊಂದಿಗೆ ಕುಳಿತುಕೊಳ್ಳುವುದು ತಕ್ಕದ್ದಲ್ಲ ಎಂದು ಶ್ರೀ.ಉಸ್ಮಾನ್ ಖಾನ್ ಪ್ರಶ್ನಿಸಿದರು. ಇತರ ಜಾತಿಗಳು ಇಷ್ಟಪಡದೇ ಹೋದಲ್ಲಿ ಅವರು ಪಂಚಮರೊಂದಿಗೆ ಭೋಜನ ಮಾಡದೆ ಹೋಗಲಿ, ಆದರೆ ಅವರೊಂದಿಗೆ ಕುಳಿತುಕೊಳ್ಳಲು ನಿರಾಕರಿಸುವುದಾದರು ಏಕೆ? ಎಲ್ಲ ವಿಚಾರಗಳನ್ನು ಪರಿಶೀಲಿಸಿದ ನಂತರ ಸರ್ಕಾರ ಆದೇಶಗಳನ್ನು ಹೊರಡಿಸಿದೆ. "ಪಂಚಮರು ಬಡವರಾಗಿದ್ದ ಮಾತ್ರಕ್ಕೆ ಅವರನ್ನು ಸದಾ ತುಳಿತಕ್ಕೆ ಒಳಗಾಗಿಸತಕ್ಕದ್ದೆ" ಎಂದು ಶ್ರೀ ಉಸ್ಮಾನ್ ಖಾನ್ ಪ್ರಶ್ನಿಸಿದರು. ಅವರು ಕೂಡಾ ನಮ್ಮ ಮಟ್ಟಕ್ಕೆ ಬೆಳೆಯಲು ಮತ್ತು ಅಭಿವೃದ್ಧಿ ಹೊಂದಲು ಪೂರ್ಣಾವಕಾಶವನ್ನು ನೀಡೋಣ ಎಂದರು. "ಸರ್ಕಾರ ಆದೇಶವನ್ನು ರದ್ದುಗೊಳಿಸುವುದಕ್ಕೆ ಯಾವುದೇ ಕಾರಣ ಇಲ್ಲ" ಎಂದು ಅವರು ಮುಕ್ತಾಯ ಹೇಳಿದರು.[೨೫]

ದೀರ್ಘವಾದ ಮತ್ತು ವಿವಾದಾತ್ಮಕವಾದ ಚರ್ಚೆಗೆ ಜವಾಬು ನೀಡಿದ ದಿವಾನರು ತಮ್ಮ ಮುಕ್ತಾಯ ಹೇಳಿಕೆಯಲ್ಲಿ, ಈ ಪ್ರಶ್ನೆಯನ್ನು ಅತ್ಯಂತ ಸಮರ್ಥವಾಗಿ ಮತ್ತು ಸಂವೇದನೆಯೊಂದಿಗೆ ಚರ್ಚಿಸಲಾಗಿದೆ ಎಂದು ತಿಳಿಸಿದರು. ಸಾರ್ವಜನಿಕವಾಗಿ ಅಭಿಪ್ರಾಯದ ಅಸಿದ್ಧತೆ ಮತ್ತು ಆದೇಶಗಳನ್ನು ಜಾರಿಗೊಳಿಸುವಲ್ಲಿ ಉಂಟಾದ ವಿಹಿತ ಈ ವಿರೋಧಕ್ಕೆ ಮೂಲ ಕಾರಣವಾಗಿರಬಹುದು ಎಂದು ಅವರು ಅಭಿಪ್ರಾಯಪಟ್ಟರು. ಈ ವಿಷಯದ ಮೇಲೆ ಮಾತನಾಡಿದ ಪ್ರತಿಯೊಬ್ಬ ಸದಸ್ಯನು ಈ ಆದೇಶದ ಮೂಲ ಆಧಾರದ ಸಾಮಾಜಿಕ ನ್ಯಾಯದ ಸೂತ್ರಗಳನ್ನು ಒಪ್ಪಿದ್ದಾರೆ, ಸಾರ್ವಜನಿಕ ಅಭಿಪ್ರಾಯಕ್ಕೆ ತಿಳುವಳಿಕೆ ಮೂಡಿಸುವುದು ಸರ್ಕಾರದ ಕರ್ತವ್ಯವಾಗಿದೆ ಎಂದು ಅದು ಭಾವಿಸಿದೆ ಮತ್ತು ಅದು ತೆಗೆದುಕೊಳ್ಳಬೇಕಾಗಿ ಬಂದ ನಡವಳಿಕೆಯಿಂದ ಹಿನ್ನಡೆಯುವುದು ಸಾಧ್ಯವಿಲ್ಲವಾಗಿದೆ. ಶಿಕ್ಷಣ ಮಹಾನಿರೀಕ್ಷಕರ ಪರಿಪತ್ರದ ೨ನೇ ಕಂಡಿಕೆಗೆ ಗಮನ ಸೆಳೆಯುತ್ತಾ ಅವರು ಅದು ಹೀಗೆ ಹೇಳುತ್ತದೆ ಎಂದರು."ರಾಜ್ಯದಲ್ಲಿ ಯಾವುದೇ ವರ್ಗದ ಜನ ಸಾಂಪ್ರದಾಯಿಕ ಪ್ರಜ್ಞೆಯ ಕಾರಣ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸಲು ಬಯಸುತ್ತಾರೋ ಆಗ ಅಂತಹ ಶಾಲೆಗಳನ್ನು ಪರೀಕ್ಷೆಯ ಉದ್ದೇಶಗಳಿಗೆ ಪರಿಗಣಿಸಲಾಗುವುದು ಆದರೆ ಅವು ಅಗತ್ಯವಾದ ಗುಣಹಂತಗಳಿಗೆ ಸರಿಹೊಂದಿರಬೇಕು. ಇಂತಹ ಶಾಲೆಗಳಿಗೆ ಸರ್ಕಾರ ಸಾಮಾನ್ಯವಾಗಿ ಆರ್ಥಿಕ ಸಹಾಯವನ್ನು ನೀಡುವುದಿಲ್ಲ". ವಿಶೇಷ ಸಂದರ್ಭಗಳಲ್ಲಿ ಖಾಸಗಿ ಸಂಸ್ಥೆಗಳಿಂದ ಸ್ಥಾಪಿತವಾದ ಹೊಸ ಶಾಲೆಗಳಿಗೆ ಸಾಂಪ್ರದಾಯಿಕ ಪ್ರಜ್ಞಾಧಾರಿತವಾದ್ದರಿಂದ ಅನುದಾನ ನೀಡುವ ಅಧಿಕಾರವನ್ನು ಸರ್ಕಾರ ಇರಿಸಿಕೊಂಡಿದೆ ಎಂದು ದಿವಾನರು ತಿಳಿಸಿದರು.

ಈಗ ಪ್ರಗತಿಯಲ್ಲಿರುವ ಅನುದಾನ ಸಂಹಿತೆಯ ಪರಿಷ್ಕರಣದಲ್ಲಿ, ಅನುದಾನವನ್ನು ಅನುಭವಿಸುತ್ತಿದ್ದು ವಿವಿಧ ವರ್ಗಗಳ ಜನಾಂಗದಿಂದ ಪ್ರಾರಂಭಿಸಲಾದ ಶಾಲೆಗಳು, ಕೇವಲ ಇತರೇ ಕಾರಣಗಳಿಂದ ಅರ್ಹವಾಗಿದ್ದಲ್ಲಿ ಅವುಗಳನ್ನು ಕೂಡ ಹೊರಹಾಕದೆ ಇರುವಂತಹ ವ್ಯವಸ್ಥೆಗಳನ್ನು ಸಂಹಿತೆಯಲ್ಲಿ ಸೇರಿಸಲು ಸರ್ಕಾರ ಉದ್ದೇಶಿಸಿದೆ. ಜವಾಬ್ದಾರಿಯುತರಾದವರಿಂದ ಹೆಚ್ಚಿನ ಸಹಾನುಭೂತಿ ಮತ್ತು ಸಮಯೋಚಿತ ಜಾಣ್ಮೆ ಈ ವಿಷಯದಲ್ಲಿ ವ್ಯಕ್ತವಾದಲ್ಲಿ ಈ ಪರಿಪತ್ರವನ್ನು ಜಾರಿಗೊಳಿಸುವುದರಿಂದ ಉಂಟಾಗುವ ಅಸಮಾಧಾನವನ್ನು ತಪ್ಪಿಸಬಹುದು ಎಂದು ದಿವಾನರು ನುಡಿದರು. ಉನ್ನತ ವರ್ಗದ ಜನರೊಂದಿಗೆ ಪಂಚಮರ ಬಾಲಕರ ಪ್ರವೇಶಾವಕಾಶವನ್ನು ಅನುಮತಿಸಿದ ಶಾಲೆಗಳ ಸಂಖ್ಯೆಯ ಬಗ್ಗೆ ತಿಳಿಯಲು ೧೯೨೦ರ ಮೊದಲ ಅಧಿವೇಶನದಲ್ಲಿ ಶ್ರೀ ವೆಂಕಟಶಾಮಯ್ಯ ಮತ್ತು ಶ್ರೀ ದೊರೆಸ್ವಾಮಿ ಅಯ್ಯಂಗಾರ್ ಹಾಗೂ ಇನ್ನಿಬ್ಬರು ಸದಸ್ಯರು ಕೋರಿದರು. ಈಗಿನ ಪದ್ಧತಿ ಜಾರಿಗೊಳಿಸುವುದಕ್ಕೆ ಮುನ್ನ ಮತ್ತು ನಂತರದಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯಾ ಬಲವನ್ನು ಅವರು ತಿಳಿಯಬಯಸಿದರು. ಆದರೆ ಈ ಸಮಾಚಾರಕ್ಕಾಗಿ ಕರೆಕಳುಹಿಸಲಾಗಿದೆ ಮತ್ತು ಅದನ್ನು ಸದಸ್ಯರುಗಳಿಗೆ ನಂತರ ಒದಗಿಸಲಾಗುವುದು ಎಂದು ಸರ್ಕಾರ ಜವಾಬು ನೀಡಿತು. ೧೯೨೧ರ ದಸರಾ ಅಧಿವೇಶನದಲ್ಲಿ ಶ್ರೀ ಪಿ. ಮುರುಗೇಶಂ ಪಿಳ್ಳೆಯವರಿಂದ ಕೇಳಲಾದ ಒಂದು ಪ್ರಶ್ನೆಗೆ ಜವಾಬು ನೀಡಿದ ಕಂದಾಯ ಕಾರ್ಯದರ್ಶಿಗಳು ಪಂಚಮರು ವಾಸಿಸುತ್ತಿರುವ ಸ್ಥಳಗಳ ಅಭಿವೃದ್ಧಿಗಾಗಿ ಬೆಂಗಳೂರು ಮತ್ತು ಮೈಸೂರು ನಗರಾಭಿವೃದ್ಧಿ ಮಂಡಳಿಗಳು ರೂ.೭೩,೩೫೨/- ಮೊತ್ತವನ್ನು ವೆಚ್ಚಮಾಡಿದೆ ಎಂದು ತಿಳಿಸಿದರು. ಪಂಚಮರ ಮನೆಗಳನ್ನು ಸ್ವಾಧೀನಪಡಿಸಿಕೊಂಡಿರುವೆಡೆಯಲ್ಲಿ ಅವರಿಗೆ ಬದಲಿ ನಿವೇಶನಗಳನ್ನು ಒದಗಿಸಲಾಗಿದೆ ಎಂದರು. ೧೯೨೧ರ ಜೂನ್ ಅಧಿವೇಶನದಲ್ಲಿ ಹಿಂದುಳಿದ ವರ್ಗಗಳ ಸ್ಥಿತಿಗತಿಗಳ ಸುಧಾರಣೆಯ ಮೇಲಿನ ಚರ್ಚೆಗಳನ್ನು ತಮ್ಮ ಮುಕ್ತಾಯ ಹೇಳಿಕೆಗಳಲ್ಲಿ ಉಲ್ಲೇಖಿಸಿದರು. ಕಡಿಮೆ ದರಗಳಲ್ಲಿ ಮತ್ತು ಒಂದು ವಿಶೇಷ ಅವಧಿಯ ಮೇಲೆ ನೀಡಲಾದ ಭೂಮಿಗಳಲ್ಲಿ ಪಾಳ್ಯಗಳಲ್ಲಿ ನೆಲೆಸುವಂತೆ ಪಂಚಮರನ್ನು ಮಾಡತಕ್ಕದ್ದು ಅವರಿಗೆ ಉದಾರವಾದ ಸಾಲಗಳನ್ನು ನೀಡತಕ್ಕದ್ದು. ಈ ಜನಾಂಗದ ಶಿಕ್ಷಣಕ್ಕೆ ಮತ್ತು ವೈದ್ಯಕೀಯ ಸಹಾಯಕ್ಕೆ ಹೆಚ್ಚಿನ ಸೌಲಭ್ಯಗಳ ವ್ಯವಸ್ಥೆಯನ್ನು ಸರ್ಕಾರ ಪರಿಶೀಲಿಸುತ್ತಿದೆ. ಒಂದು ಹಿಂದುಳಿದ ವರ್ಗಗಳ ಮಂಡಳಿಯನ್ನು ರಚಿಸಲಾಗುವುದು.

ಸಾರ್ವಜನಿಕ ಸೇವೆಗಳಲ್ಲಿ ಮತ್ತು ಸಾರ್ವಜನಿಕ ಮಂಡಳಿಗಳಲ್ಲಿ ಪಂಚಮರುಗಳ ಪ್ರಾತಿನಿಧ್ಯದ ಪರಿಸ್ಥಿತಿಯ ಬಗ್ಗೆ ೧೯೨೧ರಲ್ಲಿ ಆದಿ ದ್ರಾವಿಡ ಅಬಿವೃದ್ಧಿ ಸಂಘದ ಶ್ರೀ.ಮುರುಗೇಶಮ್ ಪಿಳ್ಳೈಯವರು ಪ್ರಶ್ನೆಗಳ ಸರಣಿಯನ್ನೇ ಹಾಕಿದರು. ಇದಕ್ಕೆ ಜವಾಬು ನೀಡಿದ ಮುಖ್ಯ ಕಾರ್ಯದರ್ಶಿಗಳು ೧೯೨೦ರ ಡಿಸೆಂಬರ್ ೩೧ರಲ್ಲಿ ಇದ್ದಂತೆ ಸರ್ಕಾರದ ಉನ್ನತ ಸೇವೆಯಲ್ಲಿ ೭೨ ಪಂಚಮರು ಎಸ್.ಎಸ್.ಎಲ್.ಸಿ ಮತ್ತು ಕಿರಿಯ ಮಾಧ್ಯಮಿಕ ಪರೀಕ್ಷೆಗಳಲ್ಲಿ

ಉತ್ತೀರ್ಣರಾಗಿದ್ದಾರೆ ಎಂದು ತಿಳಿಸಿದರು. ೧೯೧೯ರಲ್ಲಿ ೧೩ ಮಂದಿ ಉತ್ತೀರ್ಣರಾಗಿದ್ದಾರೆ. ೧೯೨೦ ರಲ್ಲಿ ೨೦ ಮಂದಿ ಉತ್ತೀರ್ಣರಾಗಿದ್ದಾರೆ ೧೯೨೧ರಲ್ಲಿ ೪೫ ಮಂದಿ ತೇರ್ಗಡೆಯಾಗಿದ್ದಾರೆ. ಆದರೆ ೧೯೨೧ರಲ್ಲಿ ಕೇವಲ ೩ ಪಂಚಮರು ನೋಂದಾಯಿಸಿಕೊಂಡರು ಮತ್ತು ಒಬ್ಬರು ಮಾತ್ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅದಕ್ಕೆ ಹಿಂದಿನ ವರ್ಷಗಳಲ್ಲಿ ಯಾವುದೇ ಪಂಚಮರು ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆ ಹೊಂದಿಲ್ಲ. ಅಲ್ಲದೆ ಯಾವ ಪಂಚಮರೂ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ನೋಂದಾಯಿಸಿಕೊಂಡಿಲ್ಲ. ಹಾಗೆಯೇ ಮುಂದುವರೆದ ಮುಖ್ಯ ಕಾರ್ಯದರ್ಶಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಒಬ್ಬ ಪಂಚಮರು ಇದ್ದಾರೆ, ವಿಧಾನ ಪರಿಷತ್ತು, ಆರ್ಥಿಕ ಅಭಿವೃದ್ಧಿ ಮಂಡಳಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ ಒಬ್ಬರೂ ಇಲ್ಲ ಎಂದು ತಿಳಿಸಿದರು. ಪಂಚಮರ ಮೇಲೆ ಯಾವುದೇ ಆದೇಶಗಳನ್ನು ಹೊರಡಿಸಿರುವುದನ್ನು ಮುಖ್ಯ ಕಾರ್ಯದರ್ಶಿಗಳು ಅಲ್ಲಗಳೆದರು. ಪ್ರತ್ಯೇಕ ನೋಂದಣಿ ಪುಸ್ತಕಗಳು ಇಲ್ಲದಿರುವ ಕಾರಣ ಪಂಚಮರುಗಳಿಂದ ದರಖಾಸ್ತಿಗಾಗಿ ಬಂದಿರುವ ಅರ್ಜಿಗಳ ಬಗ್ಗೆ ವಿವರಗಳನ್ನು ಒದಗಿಸಲು ಸಾಧ್ಯವಿಲ್ಲ ಎಂದು ಅವರು ನಂತರ ತಿಳಿಸಿದರು. ಪಂಚಮರುಗಳ ಸ್ಥಿತಿಗತಿಗಳ ಸುಧಾರಣೆಯ ಪ್ರಶ್ನೆಯ ಮೇಲೆ ಬೆಂಗಳೂರಿನ ಆದಿ ದ್ರಾವಿಡ ಅಭಿವೃದ್ಧಿ ಸಂಘದ ಶ್ರೀ.ಪಿ.ಮುರುಗೇಶಮ್ ಪಿಳ್ಳೈ ಒಂದು ದೀರ್ಘವಾದ ಮನವಿ ಮಾಡಿದರು. ಸಾರ್ವಜನಿಕ ಸಂಸ್ಥೆಗಳಾದ ವಿಧಾನ ಪರಿಷತ್ ಕೇಂದ್ರ ನೇಮಕಾತಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್, ಕೃಷಿ ಮಂಡಳಿ, ಶಿಕ್ಷಣ ಮಂಡಳಿ, ಪುರಸಭಾ ಪರಿಷತ್ ಮತ್ತು ಸ್ಥಳೀಯ ಮಂಡಳಿಗಳು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ ಮತ್ತು ವಿದ್ಯಾರ್ಥಿ ವೇತನ ಸಮಿತಿ ಇವುಗಳಲ್ಲಿ ಪಂಚಮರುಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು ಅವರು ಕೋರಿದರು. ಈ ಮಂಡಳಿಗಳ ಹಾಲಿ ರಚನೆಯನ್ನು ಪರಸ್ಕರಿಸಲು ತಕ್ಷಣದಲ್ಲಿ ಸಾಧ್ಯವಿಲ್ಲ ಎಂದು ತಿಳಿಸಿದ ದಿವಾನರು, ಮಹತ್ವದ ರಾಜಕೀಯ ಮತ್ತು ಸ್ಥಳೀಯ ಪ್ರಜಾಧಿಕಾರಿ ಮಂಡಳಿಗಳಲ್ಲಿ ಪಂಚಮರಿಗೆ ಪ್ರಾತಿನಿಧ್ಯ ಒದಗಿಸುವ ಕೋರಿಕೆಯನ್ನು ಗುರುತಿಸಿಕೊಂಡರು. ಕ್ರೈಸ್ತರ ಅನಾಥಾಲಯಗಳ ರೀತಿಯಲ್ಲಿ ನಿರ್ಗತಿಕ ಅನಾಥರನ್ನು ಗಮನಿಸಲು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಅನಾಥಾಲಯಗಳನ್ನು ತೆರೆಯುವಂತೆ ಶ್ರೀ.ಮುರುಗೇಶಮ್ ಪಿಳ್ಳೈ ಪ್ರಾರ್ಥಿಸಿದರು. ಪಂಚಮರ ವಿದ್ಯಾರ್ಥಿ ವೇತನಗಳ ಮೇಲೆ ವೆಚ್ಚಮಾಡದ ಹಣವನ್ನು ಈ ಉದ್ದೇಶಕ್ಕಾಗಿ ಬಳಸಬಹುದು ಎಂದರು. ಕಿರಿಯ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೆ ಹಾಜರಾಗುತ್ತಿರುವ ಪಂಚಮ ಬಾಲಕರುಗಳಿಗಾಗಿ ಪ್ರತಿಯೊಂದು ಜಿಲ್ಲಾ ಕೇಂದ್ರಸ್ಥಾನಗಳಲ್ಲಿ ವಿಶೇಷ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಕೋರಿದರು. ಕೃಷಿ ಮತ್ತು ಕೈಗಾರಿಕಾ ಕಾರ್ಮಿಕರುಗಳಿಗಾಗಿ ಕನಿಷ್ಠ ಜೀವನ ನಿರ್ವಹಣಾ ವೇತನಗಳನ್ನು ನಿಗದಿಪಡಿಸಲು ಮತ್ತು ಪಂಚಮ ಕಾರ್ಮಿಕರುಗಳ ಶೋಷಣೆಗೆ ಶಿಕ್ಷೆ ನೀಡುವಂತಹ ವಿಶೇಷ ಕಾನೂನಿಗೆ ಕೂಡಾ ಅವರು ಪ್ರಾರ್ಥಿಸಿದರು. ಪಂಚಮರ ವಾಸದ ಮನೆಗಳನ್ನು

ಸ್ವಾಧೀನಪಡಿಸಿಕೊಳ್ಳುವುದನ್ನು ನಿಷೇಧಿಸಲು ಭೂಸ್ವಾಧೀನ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ತರಬೇಕೆಂದು ಬಯಸಿದರು. ಬೆಂಗಳೂರು ನಗರದಲ್ಲಿ ಕಾರ್ಮಿಕ ವರ್ಗಗಳ ವಾಸದ ಪರಿಸ್ಥಿತಿಗಳನ್ನು ತನಿಖೆ ಮಾಡಲು ಒಂದು ಉಪ ಸಮಿತಿಯನ್ನು ನೇಮಕ ಮಾಡಬೇಕೆಂದರು ಹಿಂದುಳಿದ ವರ್ಗಗಳಿಗೆ ವಸತಿ ಸೌಕರ್ಯ ಒದಗಿಸಲು ಮಾದರಿ ಪಾಳ್ಯಗಳನ್ನು ನಿರ್ಮಿಸಬಹುದು ಎಂದರು. ಆರು ಪಂಚಮ ವಿದ್ಯಾರ್ಥಿಗಳನ್ನು ನೈರ್ಮಲ್ಯ ನಿರೀಕ್ಷಕರುಗಳನ್ನಾಗಿ ತರಬೇತಿ ನೀಡಿ ಪಂಚಮರ ಪ್ರದೇಶಗಳಿಗೆ ನೇಮಕ ಮಾಡತಕ್ಕದ್ದು. ವಯಸ್ಕರ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಮೂರು ಮತ್ತು ಎರಡನೇ ತರಗತಿಗಳನ್ನು ಪ್ರಾಥಮಿಕ ನೈರ್ಮಲ್ಯ ಮತ್ತು ಆರೋಗ್ಯ ಕಡ್ಡಾಯ ವಿಷಯವಾಗಿರತಕ್ಕದ್ದು.[೨೬] ಪಂಚಮ ಜಾತಿಯ, ವಾದಿಗಳು, ಅರ್ಜಿದಾರರು ಅಥವಾ ಸಂದರ್ಶಕರುಗಳ ಬಗ್ಗೆ ಸಹಾನುಭೂತಿಯಿಂದ ಮತ್ತು ವಿನಯದಿಂದ ನಡೆಯುವಂತೆ ಎಲ್ಲ ಅಧಿಕಾರಿಗಳಿಗೂ ಸೇರಿದಂತೆ ಒಂದು ಪರಿಪತ್ರವನ್ನು ಸರ್ಕಾರ ಹೊರಡಿಸತಕ್ಕದ್ದು ಮತ್ತು ಎಲ್ಲ ಪ್ರಕರಣಗಳಲ್ಲಿ ಅನಾಗರೀಕ ನಡವಳಿಕೆ ಮತ್ತು ಕೆಟ್ಟ ಭಾಷೆಯ ಪ್ರಯೋಗವನ್ನು ಗಮನಿಸತಕ್ಕದ್ದು. ಪಂಚಮ ಮತದಾರರುಗಳಿಗೆ ಆಸ್ತಿ ಅರ್ಹತೆಯ ಮಟ್ಟದಲ್ಲಿ ಕಡಿತಮಾಡಬೇಕೆಂದು ಮುರುಗೇಶಮ್ ಪಿಳ್ಳೈ ಕೋರಿದರು. ಭೂಕಂದಾಯ ವಿಚಾರದಲ್ಲಿ ರೂ.೫ ಮತ್ತು ಮನೆ ಕಂದಾಯದ ವಿಚಾರದಲ್ಲಿ ರೂ.೨ ಇರತಕ್ಕದ್ದು. ಈ ಎಲ್ಲ ಪ್ರಶ್ನೆಗಳನ್ನು ಒಬ್ಬ ವಿಶೇಷ ಅಧಿಕಾರಿಗೆ ವಹಿಸುವುದಾಗಿ ದಿವಾನರು ಆಶ್ವಾಸನೆ ನೀಡಿದರು.

೧೯೨೧ರ ಜೂನ್ ಅಧಿವೇಶನದಲ್ಲಿ ಬೆಂಗಳೂರಿನ ಆದಿ ದ್ರಾವಿಡ ಅಭಿವೃದ್ಧಿ ಸಂಘದ ಮುರುಗೇಶಮ್ ಪಿಳ್ಳೈ ಪಂಚಮರುಗಳಿಗೆ ನೀಡಲಾಗಿರುವ ಭೂಮಿಗಳ ಪರಭಾರೆಯನ್ನು ನಿಷೇಧಿಸಬೇಕೆಂದು ಕೋರಿದರು. ಕೃಷಿ ಉಪಕರಣಗಳು, ಎತ್ತುಗಳು ಮುಂತಾದವುಗಳನ್ನು ಪಡೆಯಲು ಬಡ್ಡಿರಹಿತ ಸಾಲಗಳನ್ನು ನೀಡಬೇಕೆಂದು ಕೂಡಾ ಅವರು ಕೋರಿದರು. ಆದರೆ ಪರಿಷತ್‌ನ ಎರಡನೇ ಸದಸ್ಯರು ಮಧ್ಯೆ ಪ್ರವೇಶಿಸಿ ಮಾತನಾಡಿ ಪಂಚಮರುಗಳಿಗೆ ಎತ್ತುಗಳನ್ನು ಖರೀದಿಸಲು ಸಾಲಗಳನ್ನು ನೀಡಿದ್ದೇ ಆದಲ್ಲಿ ಅವರು ಅವುಗಳನ್ನು ಮಾರಿಬಿಡುತ್ತಾರೆ ಮತ್ತು ಅವರ ಸ್ಥಿತಿಗತಿಗಳು ಇದ್ದಂತೆಯೆ ಇರುತ್ತದೆ ಎಂದರು. ಕರಾರು ಅಧಿನಿಯಮ ಉಲ್ಲಂಘನೆ ಕಾನೂನಿನ ಅಡಿಯಲ್ಲಿ ಪ್ಲಾಂಟರುಗಳು ಪಂಚಮರುಗಳನ್ನು ದಾಸ್ಯದಲ್ಲಿ ಹಿಡಿದಿಟ್ಟಿದ್ದಾರೆ ಎಂದು ಶ್ರೀ.ಮುರುಗೇಶಮ್ ಪಿಳ್ಳೈ ಮುಂದುವರೆದು ತಿಳಿಸಿದರು. ಬ್ರಿಟಿಷ್ ಇಂಡಿಯಾದ ಕಾರ್ಮಿಕ ಕಾನೂನನ್ನು ಈ ಜನರಿಗೂ ಅನ್ವಯಿಸುವಂತೆ ವಿಸ್ತರಿಸಬೇಕೆಂದರು. ಕರಾರು ಅಧಿನಿಯಮ ಉಲ್ಲಂಘನೆ ಕಾನೂನನ್ನು ರದ್ದುಪಡಿಸಲು ಸಾಧ್ಯವಿಲ್ಲದೆ ಹೋದರೂ ಕೂಡಾ ಈ ವಿಚಾರವನ್ನು ಪರಿಶೀಲಿಸುವುದಾಗಿ ದಿವಾನರು ತಿಳಿಸಿದರು. ಹಿಂದುಳಿದ ವರ್ಗಗಳಿಗೆ ಸಾಲಗಳನ್ನು ನೀಡುವ ವಿಚಾರದಲ್ಲಿ ಕೃಷಿ ಮಂಡಳಿ ಶಿಫಾರಸ್ಸುಗಳನ್ನು ಕಳುಹಿಸಿದೆ. ಜಿಲ್ಲಾ ವೈದ್ಯಕೀಯ ಸಂಸ್ಥೆಗಳಲ್ಲಿ ೫ ಹಾಸಿಗೆಗಳು ಮತು ಹೆರಿಗೆ ಆಸ್ಪತ್ರೆಗಳಲ್ಲಿ ೨ ಹಾಸಿಗೆಗಳನ್ನು ಹಿಂದುಳಿದ ವರ್ಗಗಳ

ವೈದ್ಯಕೀಯ ಉಪಚಾರಗಳಿಗಾಗಿ ಅವರಿಗೋಸ್ಕರವೇ ಮೀಸಲಾಗಿಡಬೇಕೆಂದು ಶ್ರೀ.ಮುರುಗೇಶಮ್ ಪಿಳ್ಳೈ ಕೋರಿದರು. ಪಂಚಮರ ಪರವಾಗಿ ಕೆಲವು ವಿಶೇಷ ಅನುಕೂಲಗಳಿಗಾಗಿ ಅವರು ಪ್ರಾರ್ಥಿಸಿದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಹಿಂದುಳಿದವರು ಮತ್ತು ಹಿಂದುಳಿದೇತರರ ನಡುವೆ ಯಾವುದೇ ಭೇದಭಾವಗಳನ್ನು ತೋರಿಸುವುದಿಲ್ಲ ಎಂದು ಹಿರಿಯ ಶಸ್ತ್ರ ವೈದ್ಯರು ಒತ್ತಿ ಹೇಳಿದರು. ಮೊದಲು ಬಂದವರಿಗೆ ಮೊದಲು ಸೇವೆ ಎಂಬ ಸೂತ್ರದಂತೆ ನಡೆಯುತ್ತದೆ ಮತ್ತು ವೈದ್ಯಕೀಯ ಸಂಸ್ಥೆಗಳನ್ನು ಜಾತಿ, ವರ್ಣ ಅಥವಾ ಮತಗಳ ಭೇದಗಳಿಲ್ಲದೆ ಬಡವರು ಮತ್ತು ಅಗತ್ಯವಿದ್ದವರ ಅನುಕೂಲಕ್ಕಾಗಿ ಪೋಷಿಸಲಾಗುತ್ತದೆ ಎಂದರು. ಹಿಂದುಳಿದ ವರ್ಗದ ಒಬ್ಬ ಸದಸ್ಯನಿಂದ ಒಂದು ಅರ್ಜಿಯನ್ನು ನಿರೀಕ್ಷಿಸುತ್ತಾ ಒಂದು ಖಾಲಿ ಹಾಸಿಗೆಯನ್ನು ಹಿಂದುಳಿದೇತರ ವರ್ಗಗಳ ಒಬ್ಬ ರೋಗಿಗೆ ವಸತಿ ನಿರಾಕರಣೆ ಮಾಡಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದರು. ಯಾವುದೇ ಪಂಚಮರಿಗೆ ಪ್ರವೇಶವನ್ನು ನಿರಾಕರಿಸಲಾಗಿದೆಯೇ ಎಂಬ ಪರಿಷತ್‌ನ ಎರಡನೇ ಸದಸ್ಯರ ಪ್ರಶ್ನೆಗೆ ಎರಡು ರೋಗಿಗಳು ಇದ್ದು ಅದರಲ್ಲಿ ಒಬ್ಬರು ಪಂಚಮನಾಗಿದ್ದು ಮತ್ತು ಮತ್ತೊಬ್ಬ ಪಂಚಮೇತರಾಗಿದ್ದು ಆ ಇಬ್ಬರೂ ಒಂದೇ ಸಮಯದಲ್ಲಿ ಆಸ್ಪತ್ರೆಗೆ ಭೇಟಿ ನೀಡಿದ್ದಲ್ಲಿ ಪ್ರಾಮುಖ್ಯತೆಯನ್ನು ಹೇಗೆ ಮತ್ತು ಯಾರಿಗೆ ನೀಡಲಾಗುತ್ತದೆ ಎಂದು ಶ್ರೀ.ಸುಬ್ಬಯ್ಯ ಕೇಳಿದರು. ಆಸ್ಪತ್ರೆಯ ವಹಿವಾಟಿನ ಜವಾಬ್ದಾರಿ ಹೊತ್ತಿರುವ ಅಧಿಕಾರಿ ಅಂತಹ ಪ್ರಕರಣದಲ್ಲಿ ತನ್ನ ವಿವೇಚನೆಯನ್ನು ಪ್ರಯೋಗಿಸತಕ್ಕದ್ದು ಎಂದು ಪರಿಷತ್‌ನ ಎರಡನೇ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಆರ್ಥಿಕ ಸಮಾವೇಶದಡಿಯಲ್ಲಿ ರಚಿತವಾದ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕೆಂದು ಮುರುಗೇಶಮ್ ಪಿಳ್ಳೈ ಬಯಸಿದಾಗ, ಈ ಪ್ರಶ್ನೆಯ ಪರಿಶೀಲನೆಯನ್ನು ಹಣದ ಅಭಾವದ ಕಾರಣ ಒಂದು ವರ್ಷದವರೆಗೆ ಹಾಗೆಯೇ ಇಡಲು ಸರ್ಕಾರ ತೀರ್ಮಾನ ಕೈಗೊಂಡಿದೆ ಎಂದು ದಿವಾನರು ನುಡಿದರು. ಪಂಚಮ ವಿದ್ಯಾರ್ಥಿಗಳಿಗೆ ಇರುವ ವಿದ್ಯಾರ್ಥಿ ವೇತನಗಳನ್ನು ಪ್ರಾಥಮಿಕ ಮತ್ತು ಎಲಿಮೆಂಟರಿ ತರಗತಿಗಳ ಬಾಲಕರುಗಳಿಗೆ ವಿಸ್ತರಿಸಬೇಕೆಂದು ಶ್ರೀ ಮುರುಗೇಶಮ್ ಪಿಳ್ಳೈ ಕೋರಿದರು. ನೀಡಲಾಗಿರುವ ವಿದ್ಯಾರ್ಥಿ ವೇತನಗಳ ಸಂಖ್ಯೆ ಬಹಳ ಕಡಿಮೆ ಮತ್ತು ಪರಿಹಾರದ ಪ್ರಮಾಣ ಸಾಲುವುದಿಲ್ಲ ಎಂದು ಅವರು ನುಡಿದರು. ಪ್ರೌಢಶಾಲಾ ವಿದ್ಯಾರ್ಥಿ ವೇತನಗಳ ಮೊತ್ತದಲ್ಲಿ ಸ್ವಲ್ಪ ಹೆಚ್ಚಳ ಮಾಡುವ ಅವಶ್ಯಕತೆ ಇದೆ ಎಂದು ಶಿಕ್ಷಣ ಮಹಾನಿರೀಕ್ಷಕರು ಒಪ್ಪಿದರು. ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದರು. ಪಂಚಮರು ವಾಸಮಾಡುವ ಸ್ಥಳಗಳ ಅಭಿವೃದ್ಧಿಗಾಗಿ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ನಗರಾಭಿವೃದ್ಧಿ ಸಮಿತಿಯಿಂದ ಒಂದು ನಿಗದಿತ ಮೊತ್ತವನ್ನು ಪ್ರತ್ಯೇಕವಾಗಿಡಬೇಕೆಂದು ಮುರುಗೇಶಮ್ ಪಿಳ್ಳೈ ಕೋರಿದರು. ಜಿಲ್ಲಾ ಮತ್ತು ತಾಲ್ಲೂಕು ಮಂಡಳಿಗಳಿಗೆ ಕೂಡಾ ಅಂತಹ ಹಣವನ್ನ ಒದಗಿಸಬೇಕೆಂದರು ಈ ಪ್ರಶ್ನೆ

ಸ್ಥಳೀಯ ಮಂಡಳಿಗಳು ಪರಿಶೀಲಿಸುವ ವಿಚಾರವಾಗಿದೆ ಎಂದು ದಿವಾನರು ನುಡಿದರು. ಪಂಚಮರು ವಾಸಮಾಡುತ್ತಿರುವ ಸ್ಥಳಗಳ ಅಭಿವೃದ್ಧಿಯ ಉದ್ದೇಶಕ್ಕಾಗಿ ಒಂದು ನಿರ್ಧಿಷ್ಟ ಮೊತ್ತದ ಹಣವನ್ನು ಮಂಜೂರು ಮಾಡುವಂತೆ ಸಮಿತಿಗಳನ್ನು ಕೋರಲಾಗುವುದು ಎಂದರು.

ಪಂಚಮ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಗಳ ಪ್ರಮಾಣವನ್ನು ಈಗಿರುವ ರೂ.೨ ರಿಂದ ಹೆಚ್ಚಿಸಬೇಕೆಂದು ಮುರುಗೇಶಮ್ ಪಿಳ್ಳೈ ಕೋರಿದರು. ಪ್ರಾಥಮಿಕ ಶಾಲೆಗಳಲ್ಲಿರುವ ಪಂಚಮರುಗಳಿಗೆ ಇದನ್ನು ನೀಡಲು ಸಾಧ್ಯವಿಲ್ಲ ಎಂದು ಶಿಕ್ಷಣ ಮಹಾನಿರೀಕ್ಷಕರು ಉತ್ತರಿಸಿದರು. ಆದರೂ ಆ ಪ್ರಮಾಣವನ್ನು ಹೆಚ್ಚಿಸಿದಲ್ಲಿ ಅದು ಪಂಚಮರ ಬಾಲಕರುಗಳಿಗೆ ಪ್ರಯೋಜನ ವಾಗುತ್ತದೆ. ಎಂದು ಶ್ರೀ.ಪಿಳ್ಳೈ ಮುಂದುವರೆದು ನುಡಿದರು. ಕಿರಿಯ ಮಾಧ್ಯಮಿಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ಪಂಚಮರಿಗಾಗಿ ಬೆಂಗಳೂರಿನಲ್ಲಿ ಒಂದು ಆವಾಸ ಪಾಠಶಾಲೆಯನ್ನು ತೆರೆಯುವಂತೆ ಸಲಹೆ ಮಾಡಿದರು ಮತ್ತು ಮೈಸೂರು ಶಾಲೆಯ ವಿದ್ಯಾರ್ಥಿಗಳನ್ನು ಬೆಂಗಳೂರಿನಲ್ಲಿ ಸೇರಿಸಿಕೊಳ್ಳಬಹುದು ಎಂದರು. ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಇತರರಿಂದ ಪ್ರತ್ಯೇಕ ಮಾಡುವ ಅವಶ್ಯಕತೆ ಇದೆ ಎಂದು ಶಿಕ್ಷಣ ಮಹಾನಿರೀಕ್ಷಕರು ತಿಳಿಸಿದರು. ಮೈಸೂರಿನ ಪಂಚಮ ಇನ್ಸಿಟಿಟ್ಯೂಟ್‌ನಲ್ಲಿ ಸರಿಯಾದ ದೀಪದ ವ್ಯವಸ್ಥೆಯಿಲ್ಲ ಎಂದು ಮುರುಗೇಶಮ್ ಪಿಳ್ಳೈ ಆರೋಪಿಸಿದರು. ಪಂಚಮರಿಗೆ ಕುಡಿಯುವ ನೀರನ್ನು ಒದಗಿಸಲು ಹಂಚಿಕೆ ಮಾಡಿರುವ ಹಣವನ್ನು ಜಿಲ್ಲಾಮಂಡಳಿಗಳು ವೆಚ್ಚ ಮಾಡಬೇಕೆಂದರು. ಹಿಂದುಳಿದ ಜನಾಂಗಗಳಲ್ಲಿ ಅನೇಕ ಜನಾಂಗಗಳನ್ನು ಸೇರಿಸಿರುವುದರಿಂದ ಪಂಚಮ ಜನಾಂಗಕ್ಕೆ ಕೆಲವು ನೇಮಕಾತಿಗಳನ್ನು ಪ್ರತ್ಯೇಕವಾಗಿಡಬೇಕೆಂದು ಅವರು ಸಲಹೆ ಮಾಡಿದರು. ಪಂಚಮ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ನೀಡಬೇಕೆಂದು ಅವರು ಕೋರಿದಾಗ ಆ ಉದ್ದೇಶಕ್ಕಾಗಿ ರೂ.೫೦೦೦/–ದ ಮೊತ್ತವನ್ನು ಹಂಚಿಕೆ ಮಾಡಿರುವುದಾಗಿ ಶಿಕ್ಷಣ ಮಹಾನಿರೀಕ್ಷಕರು ತಿಳಿಸಿದರು ಪಂಚಮ ಬಾಲಕಿಯರಿಗಾಗಿ ಶ್ರೀ.ಪಿಳ್ಳೈಯವರು ಆವಾಸ ಪಾಠಶಾಲೆಗಳನ್ನು ಸಲಹೆ ಮಾಡಿದಾಗ, ಈ ವಿಚಾರ ಹಣದ ಲಭ್ಯತೆಗೆ ಸಂಬಂಧಿಸಿದ್ದು ಎಂದು ಎರಡನೇ ಸದಸ್ಯರು ನುಡಿದರು. ಪಂಚಮ ಬಾಲಕರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಸೂಕ್ತವಾದ ಪ್ರಚಾರಬೇಕೆಂದು ಪಿಳ್ಳೈ ಕೋರಿದರು. ಪಂಚಮರಿಗೆ ವಿದ್ಯಾರ್ಥಿ ವೇತನದ ಪ್ರಮಾಣವನ್ನು ಹೆಚ್ಚಿಸಬೇಕೆಂದು ಶ್ರೀ.ಅನಂತಯ್ಯ ಶೆಟ್ಟಿ ಕೋರಿದರು. ಪ್ರತಿಯೊಂದು ಜಿಲ್ಲೆಯಲ್ಲಿ ಪಂಚಮರ ವಿದ್ಯಾರ್ಥಿಗಳ ಸಂಖ್ಯೆಗೆ ಅನುಸಾರವಾಗಿ ವಿದ್ಯಾರ್ಥಿ ವೇತನಗಳನ್ನು ಹಂಚಿಕೆ ಮಾಡತಕ್ಕದ್ದು, ಚಿತ್ರದುರ್ಗ ಜಿಲ್ಲೆಯಲ್ಲಿ ಪಂಚಮ ವಿದ್ಯಾರ್ಥಿಗಳು ಕಲಿಯಲು ತಯಾರಾಗಿದ್ದಾರೆ ಆದರೆ ಕೇವಲ ೧೫ ಅಥವಾ ೧೬ ವಿದ್ಯಾರ್ಥಿ ವೇತನವನ್ನು ಒದಗಿಸಲಾಗಿದೆ ಎಂದರು. ೧೯೨೫ರ ದಸರಾ ಅಧಿವೇಶನದಲ್ಲಿ ಮುರುಗೇಶಮ್ ಪಿಳ್ಳೈ ಒಂದು ಪ್ರಶ್ನೆಗೆ ಜವಾಬು ನೀಡಿದ ಮುಖ್ಯ

ಕಾರ್ಯದರ್ಶಿಗಳೂ ೧೯೨೨-೨೩ರಲ್ಲಿ ಹುಡುಗರಿಗಾಗಿ ೫೪೧ ಶಾಲೆಗಳು ಮತ್ತು ಹುಡುಗಿಯರಿಗೆ ೧೩ ಶಾಲೆಗಳು ಇದ್ದವು ಮತ್ತು ವಿದ್ಯಾರ್ಥಿಗಳ ಸಂಖ್ಯೆ-೨೯೧೪ ಇದ್ದಿತು. ಇದಕ್ಕೆ ವಿರುದ್ಧವಾಗಿ ೧೯೨೦-೨೧ರಲ್ಲಿ ಬಾಲಕರಿಗಾಗಿ ೬೭೭ ಶಾಲೆಗಳು ಮತ್ತು ಬಾಲಕಿಯರಿಗಾಗಿ ೧೨ ಶಾಲೆಗಳು ಇದ್ದು ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೨೪೯೪ ಇದ್ದಿತು. ತುಮಕೂರು ಹಾಸನ, ಶಿವಮೊಗ್ಗ ಮತ್ತು ಚಿತ್ರದುರ್ಗಗಳಲ್ಲಿ ಕಳೆದ ೩ ವರ್ಷಗಳಲ್ಲಿ ಪಂಚಮರಿಗೆ ೨೦೦೦ ಎಕರೆಗಳ ಭೂಮಿಯನ್ನು ನೀಡಲಾಗಿದೆ ಎಂದು ಕಂದಾಯ ಕಾರ್ಯದರ್ಶಿಗಳು ತಿಳಿಸಿದರು. ೧೯೨೦-೨೧ರಲ್ಲಿ ೨೪ ಪಂಚಮರುಗಳನ್ನು ಉನ್ನತ ಸೇವೆಗೆ ಮತ್ತು ೬೦ ಮಂದಿಯನ್ನು ಕೆಳದರ್ಜೆ ಸೇವೆಗೆ ನೇಮಕ ಮಾಡಲಾಗಿದೆ ಎಂದು ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು. ೧೯೨೨-೨೩ನೇ ಸಾಲಿಗೆ ೩೫ ಜನರನ್ನು ಉನ್ನತ ಸೇವೆಗೆ ಮತ್ತು ೭೪ ಜನರನ್ನು ಕೆಳದರ್ಜೆ ಸೇವೆಗೆ ನೇಮಕ ಮಾಡಲಾಗಿದೆ.[೨೭]

ಒಟ್ಟಾರೆಯಾಗಿ ಮೇಲಿನ ನ್ಯಾಯ ವಿಧಾಯಕ ಸಭೆಯಲ್ಲಿನ ಚರ್ಚೆಗಳಿಂದ ಕೆಲವು ಸದಸ್ಯರು ಸಮಾಜ ಸುಧಾರಣೆಯ ಬಗ್ಗೆ ಆಸಕ್ತಿ ಹೊಂದಿದವರಿದ್ದಾರೆ, ಕೆಲವು ಸದಸ್ಯರು ಅದಕ್ಕೆ ಆಕ್ಷೇಪವೆತ್ತುವವರಿರುವುದನ್ನು ಗುರ್ತಿಸಬಹುದು. ಮೈಸೂರು ಸಂಸ್ಥಾನ ನಾಲ್ವಡಿಯವರ ಆಡಳಿತದಲ್ಲಿ ದಲಿತ ವರ್ಗದವರ **ಸಾಮಾಜಿಕ-ಧಾರ್ಮಿಕ-ಶೈಕ್ಷಣಿಕ** ಅಭಿವೃದ್ಧಿಗಾಗಿ ಹಲವಾರು ಕಾನೂನುಗಳನ್ನು ಜಾರಿಗೊಳಿಸಿದರು. ಈ ಕಾನೂನುಗಳನ್ನು ಜಾರಿಗೊಳಿಸುವ ಸಂದರ್ಭದ ಚರ್ಚೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಬಳಸಿಕೊಳ್ಳಲಾಗಿದೆ. ಹಾಗೆಯೇ ಅಂತಿಮವಾಗಿ ಯಾವುದೇ ಜಾತಿ, ವರ್ಗ, ಲಿಂಗ ತಾರತಮ್ಯವಿಲ್ಲದೆ ಎಲ್ಲಾ ಸಾರ್ವಜನಿಕ ಸ್ಥಳಗಳಿಗೆ ಮುಕ್ತಾವಕಾಶ ಕಲ್ಪಿಸಿದ್ದು, ಮುಜರಾಯಿ ಆಡಳಿತಕ್ಕೆ ಹಲವಾರು ದೇವಾಲಯಗಳನ್ನು ಒಳಪಡಿಸಿದ್ದು ಸಂಸ್ಥಾನದಲ್ಲಿನ ಹಿಂದುಳಿದ ವರ್ಗಗಳು ಮತ್ತು ದಲಿತ, ಶೋಷಿತ ಸಮುದಾಯಗಳ ಸಾಮಾಜಿಕ-ಧಾರ್ಮಿಕ-ಶೈಕ್ಷಣಿಕ ಅಭಿವೃದ್ಧಿಗೆ ಮುಂದಾದರು.

ಅಡಿಟಿಪ್ಪಣಿಗಳು

೧. ಮೈಸೂರು ಸಂಸ್ಥಾನದಲ್ಲಿ ವಿಧಾನ ಮಂಡಲ ಇತಿಹಾಸ. ಮೈಸೂರು ಪ್ರಜಾಪ್ರತಿನಿಧಿ ಸಭೆ, ಸಂಪುಟ-೧, ಭಾಗ-೧, ೧೮೮೧-೧೯೦೨.

೨. ಅದೇ. ಪುಟ. ೨೧೩.

೩. ಅದೇ. ಪುಟ. ೨೧೮.

೪. ಅದೇ. ಪುಟ. ೨೨೨.

೫. ಅದೇ. ಪುಟ. ೨೨೫.

೬. ಅದೇ. ಪುಟ. ೨೨೮.

೭. ಸ್ಟೇಟ್ ಫಾರ್ ಎನ್ಕರೆಜಿಂಗ್ ಎಜಕೇಷನ್ ಅಮಾಂಗ್ ದಿ ಡಿಫೈನಸ ಕ್ಲಾಸ್ ಕಡತ ನಂ.೨,೧೧೮೭೦.ವಿ.ಪಿ- ೧-೪೧-೧೯೩೧ ಪುಟ ೮೪.

೮. ಅದೇ. ಪುಟ.೯೨.

೯. ಎಜುಕೇಷನ್ ಫೈಲ್ ನಂ. ೪೫೪-೧೩-ಎನ್.ಒ.ಸಿ. ೧-೭-೧೯೧೩-೧೪. ಪುಟ-೧೯೮.

೧೦. ಅದೇ. ಪುಟ. ೨೦೮

೧೧. ಅದೇ. ಪುಟ. ೨೨೫.

೧೨. ವಿಧಾನ ಮಂಡಲ ಇತಿಹಾಸ, ಪುಟ. ೨೨೫.

೧೩. ಅದೇ. ಪುಟ. ೨೨೭.

೧೪. ಡಾಕ್ಯೂಮೆಂಟ್ ಸಂಖ್ಯೆ ಹೆಚ್.ಸಿ.೮೧-೧೯೨೫-೨೬. ದಿನಾಂಕ ೨೬ ಸೆಪ್ಟಂಬರ್.

೧೫. ಡಾಕ್ಯೂಮೆಂಟ್ ಸಂಖ್ಯೆ, ಸಿ- ೩೬೫೭-೨೫-೨೬, ದಿನಂಕ ೨೭ ಮಾರ್ಚ ೧೯೨೬.

೧೬. ಡಾಕ್ಯೂಮೆಂಟ್ ಸಂಖ್ಯೆ ೧೦೧-೨೬-೨೭, ದಿನಾಂಕ ೨೧ ಮೇ.೧೯೨೭.

೧೭. ವಿಧಾನ ಮಂಡಲ ಪುಟ. ೧೦೧೮.

೧೮. ಕಡತ ಸಂಖ್ಯೆ-೯೭೭ ಆಫ್ ೧೯೩೨-೩೪. ದಿನಾಂಕ ೧೨ ನವೆಂಬರ್ ೧೯೩೩.

೧೯. ಡಾಕ್ಯೂಮೆಂಟ್ ಸಂಖ್ಯೆ-೪೦೦೬-೨೫-ಸಿ-೧೨ ಬಿ-೨೫-೩೨-೧ ದಿನಾಂಕ ಡಿಸೆಂಬರ್ ೧೯೩೨.

೨೦. ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು .೧೯೧೮-೧೯. ಪುಟ.೧೪೪-೧೪೫.

೨೧. ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು .೧೯೨೦-೨೧. ಪುಟ.೮೦-೮೧

೨೨. ಅದೇ ಪುಟ. ೯೦-೯೨.

೨೩. ವಿಧಾನ ಮಂಡಲ ಇತಿಹಾಸ, ಮೈಸೂರು ಪ್ರಜಾಪ್ರತಿನಿಧಿ ಸಭೆ. ಸಂ.೧. ಭಾಗ.೧ (೧೮೮೨-೧೯೦೭)ವಿಧಾನ ಮಂಡಲದ ಕಛೇರಿ ಬೆಂಗಳೂರು, ಪುಟ ೨೭೭.

೨೪. ಅದೇ ಪುಟ ೨೮೦.

೨೫. ಅದೇ ಪುಟ. ೨೮೩.

೨೬. ಅದೇ ಪುಟ ೨೮೬.

೨೭. ಅದೇ ಪುಟ ೨೯೨.

ಅಧ್ಯಾಯ: ಎಂಟು

ಸಮಾರೋಪ

ಅಧ್ಯಾಯ: ಎಂಟು

ಸಮಾರೋಪ

ಭಾರತದಲ್ಲಿರುವ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿ ವೈದಿಕರು ಹಾಗು ಸವರ್ಣೀಯರಲ್ಲಿ ಆಳವಾಗಿ ಅವರ ಮೆದುಳಿನಲ್ಲಿ ಬೇರೂರಿರುವ ಸಾಮಾಜಿಕ ಕಟ್ಟುಪಾಡು ಹಾಗು ದಲಿತ ವರ್ಗದವರ ಮೇಲೆ ಹೇರಿರುವ ಅಮಾನವೀಯ ಆಚರಣೆಗಳ ಕಟ್ಟುಪಾಡುಗಳನ್ನು ಸರ್ಕಾರದ ಕಾನೂನು ಕಾಯ್ದೆಗಳಿಂದ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಆದರೆ; ಅವರ ಪರಿವರ್ತನೆಗೆ ಅನೇಕ ದಾರಿಗಳಿವೆ. ಈ ಹಂತದಲ್ಲಿ ಅನೇಕ ಪ್ರಯತ್ನವೂ ನಡೆದಿರುವುದಕ್ಕೆ ಚರಿತ್ರೆಯಲ್ಲಿ ದಾಖಲೆಯಿದೆ. ಆ ಪ್ರಯತ್ನ ಹಾಗು ದಾರಿಯಲ್ಲಿ ಮುನ್ನೆಡೆದ ಮೈಸೂರು ಸಂಸ್ಥಾನದ ಇಪ್ಪತ್ತೈದು ದೊರೆಗಳಲ್ಲಿ ಇಪ್ಪತ್ತು ನಾಲ್ಕನೆಯ ಏಕೈಕ ದೊರೆಯೇ **ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು** ಅವರು. ಅವರು ಅರಸರಾದ ಸಂದರ್ಭವೇ ಒಂದು ಅರ್ಥದಲ್ಲಿ ಬ್ರಿಟೀಷರಿಂದ ದಲಿತರಿಗೆ ಶಿಕ್ಷಣ ನೀಡಲು ಮುಂದಾದದ್ದು, ದಲಿತರು ಕ್ರೈಸ್ತ ಮತ ಸ್ವೀಕಾರದಿಂದ ಉಂಟಾಗಿದ್ದ ಸಾಂಸ್ಕೃತಿಕ ಪ್ರಜ್ಞೆ ಒಂದಾದರೆ, ದಕ್ಷಿಣ ಹಾಗು ಉತ್ತರ ಭಾರತದಲ್ಲಿ ಉದಯಿಸಿದ್ದ ಸಾಮಾಜಿಕ ಸುಧಾರಕರ ಪ್ರಭಾವ, ಇವುಗಳನ್ನು ಪ್ರಬಲವಾಗಿ ಜನರ ಬಳಿ ತಲುಪಿಸುವ ಮುದ್ರಣ ಮಾಧ್ಯಮಗಳ ಸಮರ್ಪಕ ಕೆಲಸಗಳಿಂದಾಗಿ ಈ ಕಾನೂನುಗಳು ಒಂದಷ್ಟು ಸಫಲವೂ ಆಗಿರಬಹುದು.

ಆದರೆ ಭಾರತದ ಸಾಮಾಜಿಕ ಸಂರಚನೆಯ ಕಟ್ಟುಪಾಡುಗಳು, ಸಂವಿಧಾನದ ನೀತಿ, ನಿಯಮ, ಕಾನೂನುಗಳಿಂದ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಎಂಬುವುದು ಅಂದಿನಿಂದ ಇಂದಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿಯೂ ಸಾಬೀತಾಗಿರುವುದೇ ಆಗಿದೆ. ಆದರೆ ಒಂದಷ್ಟು ತಡೆಗಟ್ಟಬಹುದಷ್ಟೇ. ಇದು ನಿರ್ಮೂಲನೆ ಮಾಡಲು ಸವರ್ಣೀಯರು ತಮ್ಮ ಮಿದುಳಿನಲ್ಲಿ ಬರೆದುಕೊಂಡಿರುವ ಅಳಿಸಬಹುದಾದ 'ಜಾತಿ', 'ಮೇಲು-ಕೀಳು' ಎಂಬ ಲಿಪಿಯನ್ನು ಸಂಪೂರ್ಣವಾಗಿ

ಅಳಿಸಿ ನವಸಮಾಜದ ನಿರ್ಮಾಣದ ತತ್ತ್ವಗಳಾದ ಬುದ್ಧ, ಬಸವ, ಅಂಬೇಡ್ಕರ್ ಅವರು ಬೋಧಿಸಿದ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಸಮಾನತೆಯ ಲಿಪಿಯನ್ನು ಬರೆದುಕೊಂಡು ದೇಶ ಹಾಗು ದೇಶದ ಸಾಂಸ್ಕೃತಿಕ ಪ್ರಗತಿಗೆ ಅಣಿಯಾಗಬೇಕಾಗಿದೆ. ಇದು ಸಾಧ್ಯವಾಗುವುದೇ? ಎಂಬ ಪ್ರಶ್ನೆಗೆ ಉತ್ತರವು ಸಹ ಪ್ರಶ್ನೆಯಾಗಿಯೇ ಉಳಿಯುತ್ತದೆ. ಭಾರತ ಇಂದು ಅನೇಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರಪಂಚದಲ್ಲಿ ಹಿಂದುಳಿದಿರುವುದಕ್ಕೆ ಬಡತನ, ಅಸಾಕ್ಷರತೆ, ಜನಸಂಖ್ಯೆ ಹೆಚ್ಚಳ, ತಂತ್ರಜ್ಞಾನದ ಕೊರತೆ, ಗ್ರಾಮೀಣ ಬದುಕು ಈ ಎಲ್ಲಾ ಅಂಶಗಳು ಕಾರಣವಾಗಿದ್ದರೂ, ಬಹಳ ಮುಖ್ಯವಾದ ಭಾಗ **ಜಾತೀಯತೆ** ಎಂಬುದನ್ನು ಮರೆಯಬಾರದು. ಈ ಅಂಶವನ್ನು ಮನಗಂಡಿದ್ದ ಪ್ರಗತಿಪರ ಅರಸ ನಾಲ್ವಡಿ ಕೃಷ್ಣರಾಜ ಒಡೆಯರು ಆ ಸಂದರ್ಭದ ರಾಜಕೀಯ ಬೆಳವಣಿಗೆಗಳಿಂದಾಗಿ ದಲಿತರ ಅಭಿವೃದ್ಧಿಗೆ ಮುಂದಾದರು. ಈ ಕಾರ್ಯದಿಂದ ಅವರು ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಿಂದ ಅನುಭವಿಸಿದ ಇಕ್ಕಟ್ಟು-ಬಿಕ್ಕಟ್ಟುಗಳ ಚರ್ಚೆ ಈ ಭಾಗದ ಮುಖ್ಯ ಉದ್ದೇಶ.

ನಮ್ಮ ಸಂಸ್ಥಾನವು ವ್ಯಾವಸಾಯಿಕ ದೇಶ. ಹಳ್ಳಿಗಳೇ ಇಲ್ಲಿಯ ಐಶ್ವರ್ಯದ ಆಧಾರ. ರೈತನೇ ಹಳ್ಳಿಗಳ ಮತ್ತು ರಾಷ್ಟ್ರದ ತಳಹದಿ. ಅವನ ಸಂಪತ್ತೇ ದೇಶದ ಸಂಪತ್ತು. ಅವನ ಭಾಗ್ಯವೇ ದೇಶದ ಭಾಗ್ಯ. ಅವನ ಉದ್ಧಾರವೇ ದೇಶೋದ್ಧಾರ. ಸಂಸ್ಥಾನದ ಗ್ರಾಮೀಣ ಜನರಲ್ಲಿ ಸುಖ ಸಂಪತ್ತು ಸಮೃದ್ಧಿ ಯಾಗಿದ್ದರೆ ದೇಶದಲ್ಲಿ ನೆಲವೂ, ಬಲವೂ, ಸಂಪತ್ತೂ ನದಿಯಂತೆ ಅವಿಚ್ಛಿನ್ನವಾಗಿ ಹರಿಯುತ್ತದೆ ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪ್ರಜಾಪ್ರತಿನಿಧಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಆಡಿದ ಮಾತುಗಳು. ಈ ದಲಿತಪರ ಮಾತುಗಳಿಂದಲೇ ಅರಸರು ರೈತರ, ಶೋಷಿತ ಹಾಗೂ ಗ್ರಾಮಗಳ ಬಗ್ಗೆ ಇಟ್ಟುಕೊಂಡಿದ್ದಂತಹ ಅಭಿಲಾಷೆಯನ್ನು ಗ್ರಹಿಸಬಹುದಾಗಿದೆ.

ಭರತಖಂಡದಲ್ಲಿದ್ದಂತೆಯೇ ಮೈಸೂರು ಸಂಸ್ಥಾನದಲ್ಲಿಯೂ ದಲಿತವರ್ಗದವರು ಮೇಲ್ವರ್ಗದವರ ಸೇವೆ ಹಾಗೂ ಕೃಷಿ ದುಡಿಮೆಯಲ್ಲಿ ನಿರತರಾದ ಜಾತಿಗಳಿಗೆ ಸೇರಿದವರಾಗಿದ್ದರು. ಪಾರಂಪರಿಕವಾಗಿ ಚರ್ಮ ಕೈಗಾರಿಕೆ, ಗ್ರಾಮನೈರ್ಮಲ್ಯವನ್ನು ನೋಡಿಕೊಳ್ಳುವ, ಸತ್ತ ಜಾನುವಾರುಗಳನ್ನು ಹೊರಗೆ ಹಾಕುವ ಜೀತಗಾರಿಕೆಯ ಕೆಲಸದಲ್ಲಿ ಅವರು ನಿರತರಾಗಿದ್ದರು. ಗ್ರಾಮಕ್ಕೆ ಹಾಗೂ ಸರ್ಕಾರದ ಇತರ ಅಧಿಕಾರಿಗಳಿಗೆ ಅವರು ಅವಶ್ಯಕವಾದ ಕೆಲಸಗಳನ್ನು ಮಾಡಿಕೊಡಬೇಕಾಗಿತ್ತು. ವಸಾಹತು ಕಾಲದಲ್ಲಿ ಭೂಮಿಯ ಖಾಸಗೀಕರಣ ಹಾಗೂ ವಾಣಿಜ್ಯೀಕರಣದ ಹೆಚ್ಚಳದಿಂದ ದಲಿತರು ಅತ್ಯಂತ ದಯನೀಯ ಸ್ಥಿತಿಗೆ ದೂಡಲ್ಪಟ್ಟರು. ಆದರೆ ಕರ್ನಾಟಕದ ಖುಷ್ಕಿ ಪ್ರದೇಶದಲ್ಲಿ ಮಾತ್ರ ಅವರು ಸ್ವಲ್ಪ ಭೂಮಿಯನ್ನು ಕಾಣಿಕೆಯ ರೂಪದಲ್ಲಿ ಹೊಂದಿದ್ದರು. ಖಾಸಗೀಕರಣದಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿ ಭೂ-ಮಾಲೀಕರು ಹೆಚ್ಚು ಬಲವಾಗತೊಡಗಿದಂತೆ, ಅಸ್ಪೃಶ್ಯರು ಇತರ

ಕುಲಕಸುಬುದಾರರಂತೆಯೇ ಭೂಮಿಯ ಮೇಲಿನ ತಮ್ಮ ಪಾರಂಪರಿಕವಾದ ಹಕ್ಕನ್ನು ಕಳೆದುಕೊಂಡರು. ಕಾನೂನಿನ ದೃಷ್ಟಿಯಲ್ಲಿ ಜಾತಿ ಜಾತಿಗಳ ನಡುವೆ ಯಾವ ಅಂತರವಿಲ್ಲದಿದ್ದರೂ ಸಾಮಾಜಿಕ, ಧಾರ್ಮಿಕ ಆಚರಣೆಗಳ ವಿಷಯದಲ್ಲಿ ಮಧ್ಯೆ ಪ್ರವೇಶಿಸಬಾರದೆಂಬ ಸರ್ಕಾರದ ನೀತಿಯಿಂದಾಗಿ ಈ ಕಾನೂನು ನಿಷ್ಪ್ರಯೋಜಕವಾಯಿತು.

ಮೊದಲೇ ತಿಳಿಸಿರುವ ಹಾಗೆ ಸಂಸ್ಥಾನದ ಆರ್ಥಿಕ ಬೆನ್ನೆಲುಬು ಕೃಷಿ. ಅದರ ಆಧಾರವೇ ದಲಿತರು ಹಾಗು ರೈತರು. ಇಂದಿಗೂ ಸಹ ನಮ್ಮ ದೇಶದ ಜನರ ಪ್ರಧಾನವೃತ್ತಿ ಕೃಷಿಯೇ ಆಗಿದ್ದು, ಈ ಕ್ಷೇತ್ರವು ಬಹುಸಂಖ್ಯಾತ ಜನರಿಗೆ ಉದ್ಯೋಗವನ್ನೊದಗಿಸಿದೆ. ದಲಿತ ಜನತೆಯು ಇಂದಿಗೂ ಸಹ ೯೦% ರಷ್ಟು ಕೃಷಿಯನ್ನೇ ನಂಬಿ ಜೀವನ ನಡೆಸುತ್ತಿರುವುದು ಅನೇಕ ಸಮೀಕ್ಷೆಗಳ ಮೂಲಾಧಾರಗಳಿಂದ ಕಂಡುಬರುತ್ತದೆ. ದಲಿತರು ಕೃಷಿ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚಾಗಿ ಅವಲಂಬಿಗಳಾದಂತೆ ಸಮಸ್ಯೆಗಳು ಅಷ್ಟೇ ಹೆಚ್ಚಾದವು. ಇಂತಹವುಗಳಲ್ಲಿ ಪ್ರಮುಖವಾದುದೆಂದರೆ ಕೃಷಿಗೆ ಬೇಕಾದ ಬಂಡವಾಳದ ಕೊರತೆ. ಈ ಕೊರತೆಯನ್ನು ನೀಗಿಸಲು ನಾಲ್ವಡಿ ಅವರು **ಆರ್ಥಿಕ ಪರಿಷತ್ತನ್ನು** ಸ್ಥಾಪಿಸಿದರು.

ಆರ್ಥಿಕ ಪರಿಷತ್ತು ಮತ್ತು ದಲಿತರು

ಈ ಪರಿಷತ್ತಿನ ಸ್ಥಾಪನೆಯಿಂದಾಗಿ ಅದರ ಅಂಗವಾಗಿದ್ದಂತಹ ವ್ಯವಸಾಯ ಸಮಿತಿಯು ಅಸ್ತಿತ್ವಕ್ಕೆ ಬಂದಿತು. ಅದು ಸಂಸ್ಥಾನದಲ್ಲಿ ಕಬ್ಬು ಬೆಳೆ ಅಭಿವೃದ್ಧಿ, ರೇಷ್ಮೆ ಕೃಷಿ ವಿಸ್ತರಣೆ, ಕೆರೆಗಳ ಅಭಿವೃದ್ಧಿ, ಖಾಯಂ ನೀರಾವರಿಗೆ ಅಂತರ್ಜಲ ಬಳಕೆ, ಗ್ರಾಮೀಣ ಕೈಗಾರಿಕೆಗಳ ಸ್ಥಾಪನೆ, ವ್ಯವಸಾಯದ ಶಿಕ್ಷಣದ ವಿಸ್ತರಣೆ ಇವುಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ರೈತರಿಗೆ ತರಬೇತಿ ನೀಡಿ, ಮುಂದೆ ಈ ಕೆಲಸಕ್ಕಾಗಿಯೇ ಪ್ರತ್ಯೇಕ ಸರ್ಕಾರಿ ಇಲಾಖೆಯನ್ನು ತೆರೆಯಿತು. ೧೯೧೨ರಲ್ಲಿ ವ್ಯವಸಾಯ ಇಲಾಖೆಯು ಅಸ್ತಿತ್ವಕ್ಕೆ ಬಂದಿತು. ಈ ಇಲಾಖೆಯಿಂದ ಅಸಂಖ್ಯಾತ ದಲಿತರು ಆರ್ಥಿಕ ನೆರವು ಪಡೆದು ತಮಗೆ ಇದ್ದಂತಹ ಬಂಜರು ಭೂಮಿಯನ್ನೇ ಹಸನು ಮಾಡಿಕೊಂಡು ವ್ಯವಸಾಯ ಮಾಡುವಂತೆ ಅನುಕೂಲ ಮಾಡಿಕೊಡಲಾಯಿತು.

ಮೈಸೂರು ಸಂಸ್ಥಾನವು ೧೮೯೪ರಲ್ಲೇ ಕೃಷಿ ಬ್ಯಾಂಕನ್ನು ಸ್ಥಾಪಿಸುವುದರ ಮೂಲಕ ಕೃಷಿಕರಿಗೆ ಕಡಿಮೆ ಬಡ್ಡಿದರದಲ್ಲಿ ಮತ್ತು ಬಹು ಸುಲಭವಾಗಿ ಸಾಲ ದೊರೆಯುವಂತೆ ಮಾಡಿತು. ಆದರೆ ಕೃಷಿ ಬ್ಯಾಂಕುಗಳಲ್ಲಿದ್ದಂತಹ ಅನೇಕ ದೋಷಗಳು ಅವರ ನೈಜ ಉದ್ದೇಶಗಳನ್ನು ಹಾಳುಗೆಡವಿ ಬ್ಯಾಂಕುಗಳನ್ನು ಮುಚ್ಚುವಂತೆ ಮಾಡಿದವು. ನಾಲ್ವಡಿ ಅವರ ಸರ್ಕಾರ ರೈತರಿಗೆ ಅವಶ್ಯವಾದಂತಹ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಿ ೧೯೦೫ರಲ್ಲಿ ಸಹಕಾರಿ ಸೊಸೈಟಿಗಳ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆಯ ಆಧಾರದ ಮೇಲೆ ಅನೇಕ ಸದಸ್ಯರು ಒಗ್ಗೂಡಿ ಷೇರು ಬಂಡವಾಳವನ್ನು ತೊಡಗಿಸಿ ಮತ್ತು ಸರ್ಕಾರದ ಸಹಾಯಧನವನ್ನು ಉಪಯೋಗಿಸಿಕೊಂಡು

ಅನೇಕ ಸಹಕಾರಿ ಬ್ಯಾಂಕುಗಳ ಸ್ಥಾಪನೆ ಮಾಡಿದರು. ಸಹಕಾರಿ ಸಂಘಗಳನ್ನು ಇಂದು ಗುರುತಿಸುವ ಹಾಗೇ ಸಂಸ್ಥಾನದ ಪರಿಶಿಷ್ಟವರ್ಗ ಹಾಗೂ ಪರಿಶಿಷ್ಟಜಾತಿಯ ಜನಾಂಗದವರೂ ಸಹ ಸ್ಥಾಪಿಸಿದರು. ೧೯೧೫ರಲ್ಲಿ ಪರಿಶಿಷ್ಟರ ಈ ರೀತಿಯ ಸಹಕಾರಿ ಬ್ಯಾಂಕುಗಳ ಸಂಖ್ಯೆ ೬ಕ್ಕೆ ಏರಿತು. ಇದರಲ್ಲಿ ಪ್ರಮುಖವಾಗಿ ೧೯೦೮ರಲ್ಲಿಯೇ ಸ್ಥಾಪನೆಯಾದ **ಮಳವಳ್ಳಿಯ ಆದಿಕರ್ನಾಟಕದ ಸಹಕಾರ ಸಂಘವೂ** ಒಂದು. ಈ ಸಹಕಾರಿ ಸೊಸೈಟಿಗಳು ಕೃಷಿಗೆ ಬೇಕಾದ ಆಧುನಿಕ ಕೃಷಿ ಸಲಕರಣೆಗಳು, ಉತ್ತಮ ತಳಿಯ ರಾಸುಗಳು, ಬಿತ್ತನೆ ಬೀಜಗಳು, ರಾಸಾಯನಿಕ ಗೊಬ್ಬರ, ಕಬ್ಬು ಅರೆಯುವ ಯಂತ್ರಗಳು, ಹೆಚ್ಚುಹೆಚ್ಚಾಗಿ ಇಳುವರಿ ನೀಡುವ ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಮುಂತಾದವುಗಳನ್ನು ಒದಗಿಸುತ್ತಿದ್ದವು. ಇಷ್ಟೇ ಅಲ್ಲದೆ ಈ ಸೊಸೈಟಿಗಳು ವ್ಯವಸಾಯಕ್ಕೆ ಮುನ್ನವೇ ರೈತರಿಗೆ ಮುಂಗಡ ಹಣ ನೀಡಿ ಅವರು ವ್ಯವಸಾಯದಲ್ಲಿ ತೊಡಗಿಕೊಳ್ಳಲು ಅನುವು ಮಾಡಿಕೊಡುತ್ತಿದ್ದವು. ಈ ಎಲ್ಲ ಸರ್ಕಾರದ ಸೌಲಭ್ಯಗಳಿಂದಾಗಿ ದಲಿತರು ಆರ್ಥಿಕವಾಗಿ ಸಬಲರಾಗಲು ಪ್ರಯತ್ನಿಸುವಂತಾಯಿತು. ಇಷ್ಟು ಪ್ರಗತಿದಾಯಕ ಕಾರ್ಯ ನಡೆದರೂ ಸಹ ಸಂಸ್ಥಾನದಲ್ಲಿ ಕೃಷಿ ಆಧಾರಿತ ದಲಿತ ಪುರುಷ ಹಾಗೂ ಮಹಿಳೆಯ ಸ್ಥಿತಿ ಶೋಚನೀಯವಾಗಿತ್ತೆಂದು ಹೇಳಬಹುದು. ಉದಾಹರಣೆಗೆ,

ವೇತನದಲ್ಲಿ ತಾರತಮ್ಯ: ಉದ್ಯೋಗ, ಕೂಲಿ ಹಾಗೂ ಹುದ್ದೆಗಳಿಗೆ ಸಂಬಂಧಿಸಿದಂತೆ ದಲಿತ ಮಹಿಳೆಯರು ಅಂದಿನಿಂದ ಆರಂಭವಾಗಿ ಇಂದಿಗೂ ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಇದಕ್ಕೆ ಪೂರಕವಾದಂತೆ.... ವೇತನದಲ್ಲಿಯ ಲಿಂಗಸಂಬಂಧಿ ತಾರತಮ್ಯವು ಅತ್ಯಂತ ಸ್ಪಷ್ಟವಾಗಿ ಕಂಡು ಬರುತ್ತದೆ. ಕೃಷಿ ಕ್ಷೇತ್ರದಲ್ಲಿ ಕೆಲವು ಬಗೆಯ ಕೆಲಸಗಳನ್ನು ಮಹಿಳೆಯರಿಗೆ ಮಾತ್ರ ಮೀಸಲಿಡಲಾಗಿದೆ. ಉದಾಹರಣೆಗೆ: ಸಸಿ ನೆಡುವುದು, ಕಳೆ ತೆಗೆಯು ವುದು, ಪೈರು ಕಟಾವು ಮಾಡುವುದು, ನೀರು ಹಾಕುವುದು ಇತ್ಯಾದಿ ಕೆಲಸಗಳು ಮಹಿಳೆಯರಿಗೆ ನಿರ್ದಿಷ್ಟಪಡಿಸಿದ ಕೆಲಸಗಳಾಗಿವೆ. ಇಲ್ಲಿ ಸಂಪನ್ಮೂಲಗಳ ನಿರ್ವಹಣೆ, ನಿರ್ಣಯ ತೆಗೆದುಕೊಳ್ಳುವ ಕಾರ್ಯ, ಮಾರುಕಟ್ಟೆ ಸಂಬಂಧಿ ಕೆಲಸಗಳನ್ನು ಮಾತ್ರ ಪುರುಷರಿಗೆ ಮೀಸಲಿಡಲಾಗಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ತಾರತಮ್ಯವಿರುವುದನ್ನು ಸ್ತ್ರೀ ಪುರುಷರ ನಡುವೆ ವರಮಾನ ಹಾಗೂ ವೇತನದಲ್ಲಿ ತಾರತಮ್ಯವಿರುವುದನ್ನು ಅಂದಿನಿಂದ ಇಂದಿನವರೆಗೂ (ಸರ್ಕಾರಿ ಕೆಲಸವನ್ನು ಹೊರತುಪಡಿಸಿ) ಕಾಣಬಹುದಾಗಿದೆ ಎಂದು ಆರ್ಥಿಕ ತಜ್ಞರಾದ ಡಾ. ಟಿ.ಆರ್. ಚಂದ್ರಶೇಖರ್ ಅವರು ಅಭಿಪ್ರಾಯಪಡುತ್ತಾರೆ.

ಸಂಸ್ಥಾನದಲ್ಲಿ ಕೈಗಾರಿಕಾ ಕಚೇರಿಗಳಿಗೆ ಸಂಬಂಧಿಸಿದಂತೆಯೂ ಲಿಂಗಸಂಬಂಧಿ ಪ್ರತ್ಯೇಕೀಕರಣ ಹಾಗೂ ತಾರತಮ್ಯಗಳು ಆಚರಣೆ ಯಲ್ಲಿರುವುದನ್ನು ನೋಡಬಹುದಾಗಿದೆ. ನಾಲ್ವಡಿ ಅವರ ಪ್ರಗತಿಪರ ಚಿಂತನೆಗಳ ಕಾನೂನಿನಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನವೆಂಬ ನಿಯಮವಿದ್ದರೂ, ವಾಸ್ತವದಲ್ಲಿ ಇದು ಆಚರಣೆಯಲ್ಲಿರಲಿಲ್ಲ. ಕೈಗಾರಿಕೆ ಮತ್ತು ಕಚೇರಿಗಳಲ್ಲಿ ಕೆಳಸ್ತರದ ಹುದ್ದೆಗಳಿಗೆ ಮಾತ್ರ ಮಹಿಳೆಯರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಮ್ಯಾನೇಜ್‌ಮೆಂಟ್ ಮಟ್ಟದಲ್ಲಿ ದಲಿತ ಮಹಿಳೆಯರು ದುಡಿಯುವುದು ನನ್ನ ಮಟ್ಟಿಗೆ ಯಾವ ದಾಖಲೆಯಿಂದಲೂ ತಿಳಿಯುವುದಿಲ್ಲ.

ಮೈಸೂರು ಸಂಸ್ಥಾನದಲ್ಲಿ ದಲಿತ ಮಹಿಳಾ ಕೂಲಿಗಾರ ಜನರ ಕೆಲಸಗಳಿಗೆ ನೀಡುವ ವೇತನದಲ್ಲಿನ ತಾರತಮ್ಯಕ್ಕೆ ಅನೇಕ ಕಾರಣಗಳನ್ನು ಗುರುತಿಸಬಹುದು. ಕೃಷಿಗೆ ಸಂಬಂಧಿಸಿದ ವೇತನ ತಾರತಮ್ಯಕ್ಕೆ ಮುಖ್ಯ ಕಾರಣವೆಂದರೆ...

ಅ. ಬಡತನ, ಅನಕ್ಷರತೆ, ಅಸ್ಪೃಶ್ಯತೆಯ ಭಯಾನಕ ರೂಪ.

ಆ. ಮಹಿಳಾ ದುಡಿಮೆಗಾರರ ಅಸಂಘಟಿತ ಸ್ವರೂಪ.

ಇ. ಕೃಷಿಯಲ್ಲಿ ದುಡಿಮೆಯು ಋತುಮಾನಕ್ಕನುಗುಣವಾಗಿ ಬದಲಾಗುತ್ತಿರುವುದು.

ಈ. ಮಹಿಳಾ ನಿರ್ದಿಷ್ಟ ಕೆಲಸಗಳಿಗೆ ಸಾಮಾನ್ಯವಾಗಿ ಕೂಲಿ ಕಡಿಮೆ ಇರುತ್ತದೆ. ಉದಾಹರಣೆಗೆ, ಬಟ್ಟೆ ಹೊಲಿಯುವುದು, ಕಳೆ ತೆಗೆಯುವುದು, ಸಸಿ ನೆಡುವುದು, ಕಾಳು ಒಕ್ಕಣೆ ಮಾಡುವುದು ಇತ್ಯಾದಿ...

ಉ. ಗ್ರಾಮೀಣ ಪ್ರದೇಶದಲ್ಲಿರುವ ಭೂರಹಿತ ಕೃಷಿ ಕಾರ್ಮಿಕರಿಗೆ ದುಡಿಮೆಯ ಅವಕಾಶ ಗಳು ಬಹಳ ಸೀಮಿತವಾಗಿರುತ್ತವೆ. ಇದರಿಂದಾಗಿ ಮಹಿಳೆಯರು ಕಡಿಮೆ ಕೂಲಿಗಾಗಿ ದುಡಿಯಬೇಕಾಗುತ್ತದೆ. ಇದನ್ನು ಮಾಡದಿದ್ದರೆ ಅವರು ಉಪವಾಸದಿಂದ ಇರಬೇಕಾ ಗುತ್ತದೆ.

ಊ. ಸಾಂಪ್ರದಾಯಿಕ ಕಸಬುಗಳು, ಕರಕುಶಲ ಕಲೆಗಳು ನಾಶವಾಗಿ ಹೋಗಿರುವುದರಿಂದ ಗ್ರಾಮೀಣವಾಸಿ ಮಹಿಳೆಯರು ಅಕುಶಲ ಕೆಲಸಗಾರರಾಗಿದ್ದಾರೆ. ಸಹಜವಾಗಿ ಅಕುಶಲ ಕೆಲಸಗಾರರಿಗೆ ಕೂಲಿ ಕಡಿಮೆ.

ಋ. ಗ್ರಾಮೀಣ ಪ್ರದೇಶದಲ್ಲಿ ಜಮೀನ್ದಾರರು ಭೂರಹಿತ ಕೃಷಿ ಕಾರ್ಮಿಕರನ್ನು ಜೀತದಾಳು ಗಳನ್ನಾಗಿ ಇಟ್ಟುಕೊಳ್ಳುವುದು ಸಾಮಾನ್ಯ. ಕುಟುಂಬದ ಪುರುಷ ಸದಸ್ಯರು ಜೀತದಾಳು ಗಳಾಗಿ ಜಮೀನ್ದಾರರ ಮನೆಗಳಲ್ಲಿ ದುಡಿಯುವ ಸಂದರ್ಭಗಳಲ್ಲಿ ಮಹಿಳೆಯರು ಕೆಲಸ ಹುಡುಕಿಕೊಂಡು ವಲಸೆ ಹೋಗುವುದು ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯ ಕೂಲಿ ಕನಿಷ್ಠವಿರುತ್ತದೆ. ವೇತನ ತಾರತಮ್ಯಕ್ಕೆ ಶತಶತಮಾನದಿಂದ ಜೀವಂತವಾಗಿರುವ ಜೀತ ಹಾಗೂ ಸಾಲವು ಕಾರಣವಾಗಿರುತ್ತದೆ ಎನ್ನಿಸುತ್ತಿದೆ. ಇದು ಇಂದಿಗೂ ಸಹ ಹೆಚ್ಚಿನ ಪ್ರಮಾಣದಲ್ಲಿ ಜಾರಿಯಲ್ಲಿರುವುದನ್ನು ಕಾಣಬಹುದು.

ಇದನ್ನು ನಿರ್ವಹಿಸಲು ನಾಲ್ವಡಿ ಅವರು ಸೂಕ್ತ ಕಾನೂನುಗಳನ್ನು ಜಾರಿಗೆ ತಂದರು. ನಾಲ್ವಡಿ ಅವರ ಸರ್ಕಾರ ಮಹಿಳೆ ಹಾಗೂ ಪುರುಷರಿಗೆ ಸಮಾನವಾದ ಕೂಲಿ ದೊರಕಿಸುವ ಕಾನೂನನ್ನು ಜಾರಿಗೊಳಿಸಿದರು. ಈ ಕಾಲದ ಭಾರತೀಯ ಸಮಾಜವೂ ಅಸ್ಪೃಶ್ಯತಾ ಸಮಸ್ಯೆಯಿಂದ ಮುಕ್ತವಾಗಿಲ್ಲ ಎಂಬುದು ನಿಜ. ಆದರೂ ದಲಿತರ ವಿದ್ಯಾಭ್ಯಾಸಕ್ಕೂ, ಅವರ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳನ್ನು ಉತ್ತಮಪಡಿಸುವುದಕ್ಕೂ ಮೈಸೂರು ಸಂಸ್ಥಾನ ನೀಡಿದ ಪ್ರೋತ್ಸಾಹ,

ಮಾಡಿದ ಸಹಾಯ, ಕೈಗೊಂಡ ಕಾರ್ಯಕ್ರಮ, ತೋರಿದ ಕಳಕಳಿ ಸ್ತುತ್ಯಾರ್ಹವಾದುವು ಎಂಬುದು ಅಷ್ಟೇ ನಿಜವಾದುದು.

ಹಿಂದಿನ ಅಧ್ಯಯನದಲ್ಲಿ ಚರ್ಚಿಸಿರುವಂತೆ ದಲಿತರಿಗಾಗಿ ಮೊದಲು ಹೈಸ್ಕೂಲು ಹಾಗೂ ಎರಡು ಸರ್ಕಾರಿ ಶಾಲೆಗಳನ್ನು ನರಸಾಪುರದಲ್ಲಿ ಪ್ರಥಮವಾಗಿ ತೆರೆಯಲಾಯಿತು. ಅನಂತರ ಮೈಸೂರು, ಆನೇಕಲ್ಲು ಹಾಗೂ ಹಾಸನಗಳಲ್ಲಿ ಅನುದಾನರಹಿತ ಶಾಲೆಗಳನ್ನು ಆರಂಭಿಸಲಾಯಿತು. ಸಾರ್ವಜನಿಕ ಶಾಲೆಗಳಲ್ಲಿ ದಲಿತರ ಮಕ್ಕಳು ಹೊರಗಿನ ವರಾಂಡದಲ್ಲಿ ಕುಳಿತು ಪಾಠ ಕಲಿಯಬೇಕಾಗಿತ್ತು. ಕಾರಣ, ದೇಶದ ಸವರ್ಣೀಯರಲ್ಲಿ ಮಾಡುತ್ತಲಿದ್ದ ಜಾತಿ ನಿಷೇಧಗಳು. ಆದರೆ ಕಾಲಕ್ರಮೇಣ ದಲಿತರಿಗಾಗಿಯೇ(ಅಸ್ಪೃಶ್ಯರಿಗಾಗಿಯೇ) ನಾಲ್ವಡಿ ಅವರ ಸರ್ಕಾರದಿಂದ ಹಲವಾರು ಶಾಲೆಗಳನ್ನು ಪ್ರಾರಂಭಿಸಲಾಯಿತು. ೧೯೧೪-೧೫ರ ವರದಿಯಲ್ಲಿ ಶಿಕ್ಷಣಾಧಿಕಾರಿಯು ಸಮುದಾಯದ ಮೇಲ್ವರ್ಗದವರಲ್ಲಿ ದಲಿತರ ಬಗ್ಗೆ ಇದ್ದ ಮನೋಭಾವನೆಗಳಲ್ಲಿ ಬದಲಾವಣೆ ಯಾಗಿದ್ದುದನ್ನು ಗುರುತಿಸಿದರು. ಈ ಬೆಳವಣಿಗೆಗಳೇ ಮೈಸೂರು ಸಂಸ್ಥಾನದ ಬ್ರಾಹ್ಮಣೇತರ ಚಳುವಳಿಯಲ್ಲಿ ಬ್ರಾಹ್ಮಣೇತರರೇ ದಲಿತರನ್ನು ಕಡೆಗಣಿಸಿ ತಮ್ಮ ಇಚ್ಛಾಶಕ್ತಿಯನ್ನು ಮೆರೆದಿದ್ದು.

ನಾಲ್ವಡಿ ಅವರ ದಲಿತರಪರ ಸರ್ಕಾರದಲ್ಲಿ ದಲಿತರಿಗೆ ಸಾಮಾನ್ಯ ವಿದ್ಯಾಭ್ಯಾಸ ಮಾತ್ರವಲ್ಲದೆ ವೃತ್ತಿಪರ ಶಿಕ್ಷಣ ಕೂಡ ನೀಡಲು ವ್ಯವಸ್ಥೆ ಮಾಡಲಾಗಿದ್ದಿತು. ಅವರಿಗಾಗಿ ಮೈಸೂರು, ತುಮಕೂರು, ಚಿಕ್ಕಮಗಳೂರು ಹಾಗೂ ಬೆಂಗಳೂರು ಮುಂತಾದ ಕಡೆಗಳಲ್ಲಿ ವಸತಿ ಶಾಲೆಗಳನ್ನು ತೆರೆಯಲಾಯಿತು. ೧೯೧೮-೧೯ರ ವೇಳೆಗೆ ಅವರನ್ನು ಸಾರ್ವಜನಿಕ ಶಾಲೆಗಳಿಗೆ ಸೇರಲು ಅವಕಾಶ ಮಾಡಿಕೊಡಲಾಯಿತು. ಸರ್ಕಾರವು ತನ್ನ ಆದೇಶದಲ್ಲಿ ಜಾತಿಯ ಆಧಾರದ ಮೇಲೆ ವ್ಯಕ್ತಿಗಳಿಗೆ ಶಾಲೆಗೆ ಪ್ರವೇಶ ನಿರಾಕರಿಸುವುದನ್ನು ಒಪ್ಪಲಾಗುವುದಿಲ್ಲ. ಈ ಬಗೆಯ ಅನ್ಯಾಯಕರವಾದ ಸಾಮಾಜಿಕ ಪೂರ್ವಗ್ರಹಗಳಿಂದ ಸಮಾಜದ ಪ್ರಗತಿ ಕುಂಠಿತವಾಗುತ್ತದೆ ಎಂಬುದನ್ನು ಸ್ಪಷ್ಟವಾಗಿಯೇ ತಿಳಿಸಿತು. ಈ ಸಮಾಜಮುಖಿ ಕಾರ್ಯಗಳು ಸವರ್ಣೀಯರಿಗೆ ಇಷ್ಟವಾಗಲಿಲ್ಲ. ಇವರು ನಾಲ್ವಡಿ ಅವರ ವಿರುದ್ಧ ಹಾಗು ಗಾಂಧಿ ಅವರ ಕಾಂಗ್ರೆಸ್ ಪರವಾಗಿ ಕೆಲಸ ಮಾಡಲು ಆರಂಭಿಸಿದರು.(ನೋಡಿ: ನಾಲ್ವಡಿ ಕೃಷ್ಣನ ಮೈಸೂರು, ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫)

ಈ ಧೋರಣೆಗೆ ಅನುಗುಣವಾಗಿ ದಲಿತರ ಮಕ್ಕಳಿಗೆ ವಿದ್ಯಾರ್ಥಿವೇತನಗಳನ್ನು, ಉಚಿತ ಭೋಜನ, ವಸತಿ ಸೌಕರ್ಯಗಳನ್ನು ಮತ್ತು ಉಚಿತವಾಗಿ ಪುಸ್ತಕ-ಉಡುಪುಗಳನ್ನು ಒದಗಿಸಿಕೊಡಲಾಗುತ್ತಿದ್ದಿತು. ಶಾಲೆಗಳಿಗೆ ಕಳುಹಿಸುವಂತೆ ಮನವೊಲಿಸುವುದಕ್ಕಾಗಿ ಅವರ ತಂದೆ ತಾಯಂದಿರಿಗೆ ಹಣಕಾಸಿನ ಸಹಾಯವನ್ನು ಮಾಡಲಾಗುತ್ತಿದ್ದಿತು. ಅವರಿಗೆ ಪರೀಕ್ಷಾ ಶುಲ್ಕವನ್ನು ಮನ್ನಾ ಮಾಡಲಾಗಿತ್ತು. ಇಂಗ್ಲಿಷ್ ಭಾಷೆಯನ್ನು ಕಲಿಸಲು ತಕ್ಕ ವ್ಯವಸ್ಥೆ ಮಾಡಿ ಶಾಲೆಗೆ ಸೇರಲು

ಉಚಿತ ಅವಕಾಶವನ್ನು ಮಾಡಿಕೊಡಲಾಗಿದ್ದಿತು. ಇಷ್ಟು ಮಾತ್ರವಲ್ಲದೆ, ವ್ಯವಸಾಯ ಮಾಡಲು ರಿಯಾಯಿತಿ ದರದಲ್ಲಿ ಭೂಮಿಯನ್ನು ಮಂಜೂರು ಮಾಡುವ ವ್ಯವಸ್ಥೆಯನ್ನು ಕಾನೂನಾತ್ಮಕವಾಗಿ ಜಾರಿಗೆ ತರಲಾಯಿತು. ಪ್ರತ್ಯೇಕ ಬಡಾವಣೆ ಹಾಗೂ ಸಹಕಾರಿ ಸಂಘ ಇತ್ಯಾದಿ ಸೌಲಭ್ಯಗಳನ್ನು ನೀಡಲಾಯಿತು. ಇದರೊಂದಿಗೆ ಸರ್ಕಾರಿ ಉದ್ಯೋಗಗಳಿಗೆ ವಿದ್ಯಾವಂತರಾಗಿದ್ದ ದಲಿತರನ್ನು ಆದ್ಯತೆಯ ಮೇರೆಗೆ ನೇಮಿಸಿಕೊಳ್ಳಲಾಗುತ್ತಿದ್ದಿತು. ಪೌರಸಭೆ, ಜಿಲ್ಲಾ ಮಂಡಲಿ, ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆ ಮುಂತಾದವುಗಳಲ್ಲಿ ದಲಿತ ಸದಸ್ಯರಿಗೆ ವಿಶೇಷ ಸೌಕರ್ಯವನ್ನು ಮಾಡಿಕೊಡಲಾಯಿತು. ಎಲ್ಲಕ್ಕಿಂತ ಹೆಚ್ಚಾಗಿ, ದಲಿತರು ಸಾರ್ವಜನಿಕ ಮೂಲಗಳ (ಜಲಾಶಯಗಳ) ನೀರನ್ನು ಬಳಸುವ ಹಕ್ಕನ್ನು ಪಡೆದುಕೊಂಡರು. ಈ ಎಲ್ಲಾ ಕಾರಣ ಗಳಿಂದಾಗಿ ಸವರ್ಣೀಯರು ಪ್ರಭುತ್ವದ ವಿರುದ್ಧ ನಿಂತರು. ದಲಿತರು ತಲ ತಲಾಂತರದಿಂದ ಅವರ ಜೀತದಾಳುಗಳಾಗಿ, ತತ್ತುಗಳಾಗಿ, ಆಳುಮಕ್ಕಳಾಗಿ, ಇಟ್ಟಿಬಿಟ್ಟಿ ಚಾಕರಿ ಮಾಡುವವರಾಗಿ, ಬಹುಮುಖ್ಯವಾಗಿ ಸವರ್ಣೀಯರ ಮೋಜಿಗಾಗಿ ಮಾಡಲೇ ಬೇಕಾದ ಅಮಾನವೀಯ ಆಚರಣೆಯ ಕಟ್ಟುಪಾಡುಗಳು ಚರ್ಚೆಗೆ ಒಳಗಾಗಿದ್ದರಿಂದ ಸವರ್ಣೀಯರು ನಾಲ್ವಡಿ ಅವರ ವಿರುದ್ಧ ಜನಾಭಿಪ್ರಾಯಕ್ಕೆ ಮುಂದಾದರು.

ಸ್ವಾಮಿ ವಿವೇಕಾನಂದರಿಂದ ವಿಶೇಷವಾಗಿ ಪ್ರಭಾವಗೊಂಡ ಹಿಂದೂ ಪುನಃಶ್ಚೇತನ ಚಳುವಳಿಗಳು ಮೈಸೂರು ಸಂಸ್ಥಾನಕ್ಕೆ ಪ್ರೇರಣೆ ನೀಡಿದ ಫಲವಾಗಿ, ೧೯೦೦ರ ದಶಕ ದಲ್ಲಿಯೇ ಅಸ್ಪೃಶ್ಯರಿಗೆ ವಿಶೇಷವಾದ ಶಾಲೆಗಳನ್ನು ತೆರೆಯುವುದರ ಮೂಲಕ ಶೈಕ್ಷಣಿಕ ಸೌಲಭ್ಯವನ್ನು ದೊರಕಿಸಿಕೊಳ್ಳುವಂತಾಯಿತು ಎಂಬುದುವುದ ಒಂದು ವಾದ. ಸರ್ಕಾರ ಬ್ರಾಹ್ಮಣೇತರರನ್ನು ತೃಪ್ತಿಪಡಿಸಲು ೧೯೧೮ರಲ್ಲಿ ಹಿಂದುಳಿದ ವರ್ಗದವರಿಗೆ ೧ ಲಕ್ಷ ರೂಪಾಯಿಗಳ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿತು. ಅದರಲ್ಲಿ ಅಸ್ಪೃಶ್ಯರಿಗೆ ೧೫,೦೦೦ ರೂಪಾಯಿಗಳನ್ನು ಹಂಚಲಾಯಿತು. ಮಿಲ್ಲರ್ ಸಮಿತಿಯು ಹಿಂದುಳಿದ ವರ್ಗಗಳ ವರದಿಯನ್ನು ಹೊರಡಿಸಿದಾಗ ಅಸ್ಪೃಶ್ಯರನ್ನೂ ಅದರಲ್ಲಿ ಸೇರ್ಪಡೆ ಮಾಡಲಾಯಿತು. ತನ್ನ ನೌಕರಿ ನೀಡಿಕೆಯಲ್ಲಿ ಸರ್ಕಾರ ಸಣ್ಣಪುಟ್ಟ ಉದ್ಯೋಗಗಳಿಗಾಗಿ ಅಸ್ಪೃಶ್ಯರನ್ನು ಸೇರಿಸಿಕೊಳ್ಳತೊಡಗಿದಾಗ ಬ್ರಾಹ್ಮಣರನ್ನುಳಿದು ಬೇರೆಲ್ಲ ಬ್ರಾಹ್ಮಣೇತರ ಗುಂಪೆಂದು ಸಾರಿಕೊಂಡಿದ್ದ ಬ್ರಾಹ್ಮಣೇತರ ನಾಯಕರೂ ಸೇರಿದಂತೆ ಎಲ್ಲರೂ ಸರ್ಕಾರದ ನೀತಿಯನ್ನು ವಿರೋಧಿಸಿದರು. ಹಾಗೆಯೇ ಮೈಸೂರಿನಲ್ಲಿ ಕಾಂಗ್ರೆಸ್ಸಿನ ಘಟಕವೊಂದನ್ನು ಸ್ಥಾಪಿಸಲು ಪ್ರಯತ್ನಿಸಿದವರೂ ಇವರೇ. ವ್ಯಂಗ್ಯವೆಂದರೆ ಇದೇ ಜನರು ರಾಷ್ಟ್ರೀಯ ಶಾಲೆಗಳೆಂಬ ಶಿರೋನಾಮೆಯನ್ನು ಹೊತ್ತ ಶಾಲೆಗಳನ್ನು ತೆರೆದರು. ಆದರೆ ಏಕಕಾಲದಲ್ಲಿ ತಮ್ಮ ಮಕ್ಕಳು ಕೊಳಕು, ನೀಚರ ಶಾಲೆಗಳಲ್ಲಿ ಕೊರಗಬೇಕಾದ ಸನ್ನಿವೇಶವನ್ನು ಪ್ರತಿಭಟಿಸಿದರು (ಈ ಕುರಿತು ಹೆಚ್ಚಿನ ಓದಿಗಾಗಿ ಡಾ. ಎಸ್. ಚಂದ್ರಶೇಖರ್ ಅವರ **ಆಧುನಿಕ ಕರ್ನಾಟಕದ ಆಂದೋಲನಗಳು** ಮತ್ತು **ದಕ್ಷಿಣ ಭಾರತದ ವಸಾಹತುಶಾಹಿ ರಾಷ್ಟ್ರೀಯತೆ** ಹಾಗೂ **ಸಂಘರ್ಷ** ಎಂಬ ಕೃತಿಗಳನ್ನು ನೋಡಬಹುದು). ದಲಿತ

ಜನಾಂಗದ ಒತ್ತಾಯಕ್ಕೆ ಮಣಿದು ನಾಲ್ವಡಿ ಕೃಷ್ಣರಾಜರ **ಮೀಸಲಾತಿ** ಎಂಬ **ಹೊಸ ಕಲ್ಪನೆ ಮೈಸೂರು ಸಂಸ್ಥಾನದಲ್ಲಿ ಪ್ರತಿಧ್ವನಿಸಿದಾಗ ಅಂದಿನ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ಇದನ್ನು ವಿರೋಧಿಸಿದರು.** ಇದನ್ನು ಖ್ಯಾತ ರಂಗಕರ್ಮಿ, ಸಾಂಸ್ಕೃತಿಕ ಚಿಂತಕರಾದ ಕೆ.ವಿ. ಸುಬ್ಬಣ್ಣನವರು ಈ ರೀತಿ ಅರ್ಥೈಸುತ್ತಾರೆ,

ನನ್ನ ನನ್ನಂಥವರ ಮಾತಿರಲಿ, ಇಂಡಿಯಾದ ಈ ಶತಮಾನದ ಅತ್ಯುನ್ನತರಲ್ಲಿ ಒಬ್ಬರು, ನಿಸ್ಸಂದೇಹವಾಗಿ; ಅಂಥ ಸರ್ ಎಂ. ವಿಶ್ವೇಶ್ವರಯ್ಯನವರೇ ಶ್ರೇಷ್ಠತೆಯ ಪರಮಮೌಲ್ಯಕ್ಕೆ ಪ್ರತಿಯಾಗಿ ಹೊಸದಾಗಿ ಮೂಡಿಬಂದ 'ಮೀಸಲಾತಿ' ಎಂಬ ಕಲ್ಪನೆಗೆ, ಅದರ ನ್ಯಾಯಕ್ಕೆ ಸ್ಪಂದಿಸಲಾರದೆ ಹೋದರು ಎನ್ನುವ ಅವರ ಮಾತಿನಲ್ಲಿ ಚರಿತ್ರೆಯನ್ನು ಪುನರ್‌ಮೌಲ್ಯೀಕರಿಸುವ ಸೂತ್ರವಿದೆ; ವ್ಯವಸ್ಥೆಯ ಬಗ್ಗೆ ಆಕ್ರೋಶವಿದೆ ಎಂಬುವುದನ್ನು ಮನಗಾಣಬಹುದಾಗಿದೆ.

ದಲಿತರಿಗೆ ಶಿಕ್ಷಣ ನೀಡಲು ಮುಂದಾಗಿ ನಾಲ್ವಡಿ ಅವರು ಎದುರಿಸಿದ ಇಕ್ಕಟ್ಟು-ಬಿಕ್ಕಟ್ಟುಗಳು

ಅನಾದಿ ಕಾಲದಿಂದಲೂ ವಿದ್ಯೆ ಅಸ್ಪೃಶ್ಯರ ಬಳಿಗೆ ಬಂದಿರಲಿಲ್ಲ. ಅವರು ತಾವಾಗಿಯೇ ವಿದ್ಯೆ ಕಲಿಯಲು ಸಮಾಜದ ಸಮ್ಮತಿಯು ಇರಲಿಲ್ಲ. ಇಂದಿನ ಅಧ್ಯಯನದಲ್ಲಿ ಚರ್ಚಿಸಿರುವಂತೆ ಈ ಘೋರವಾದ ಪರಿಸ್ಥಿತಿಯನ್ನು ನಿವಾರಿಸಲು ಸರ್ಕಾರವು ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಹಾಗೂ ೨೦ನೇ ಶತಮಾನದ ಮೊದಲಲ್ಲಿ ಅಸ್ಪೃಶ್ಯರಿಗಾಗಿಯೇ ಪ್ರತ್ಯೇಕ ಶಾಲೆಗಳನ್ನು ತೆರೆಯಿತು. ಈ ಶಾಲೆಗಳು ಪಂಚಮ ಶಾಲೆಗಳೆಂದು ಹೆಸರಾದವು. ೨೦ನೇ ಶತಮಾನದ ಪ್ರಾರಂಭದ ಹೊತ್ತಿಗೆ ಸರ್ಕಾರಿ ಶಾಲೆಗಳಲ್ಲಿ ಪಂಚಮರನ್ನು ಸೇರಿಸಲು ಸರ್ಕಾರ ದೃಢನಿರ್ಧಾರ ಮಾಡಿತು. ಈ ಕ್ರಮವು ಸವರ್ಣೀಯ ಸಮಾಜದವರಿಗೆ ಸರಿ ಕಾಣದಿದ್ದರಿಂದ ಸಂಸ್ಥಾನದಲ್ಲಿ ಜಾತಿಗಲಭೆ ಸಂಭವಿಸಬಹುದೆಂದು ಪೊಲೀಸರ ನೆರವನ್ನು ಪಡೆಯಬೇಕಾಯಿತು. ಈ ನಿಟ್ಟಿನಲ್ಲಿಯೂ ನಾಲ್ವಡಿ ಅವರ ಸರ್ಕಾರ ಇತರ ಹಿಂದುಳಿದ ವರ್ಗದವರ ವಿದ್ಯಾಭ್ಯಾಸಕ್ಕೆ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡು ಜಾರಿಗೆ ತಂದು ಯಶಸ್ವಿಗೊಳಿಸಿತು. ಜೊತೆಗೆ ಸವರ್ಣೀಯರು ಮತ್ತು ಬ್ರಾಹ್ಮಣರ ಕೋಪಕ್ಕೆ ತುತ್ತಾಯಿತು.

ಕಡ್ಡಾಯ ಶಿಕ್ಷಣ ವ್ಯವಸ್ಥೆಯನ್ನು ಭರತಖಂಡದಲ್ಲಿ ಜಾರಿಗೆ ತಂದ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನ ಎರಡನೆಯದು. ಮೊದಲನೆಯದು ಬರೋಡ ಸಂಸ್ಥಾನ. ಬರೋಡದಲ್ಲಿ ೧೯೦೬-೦೭ನೇ ಸಾಲಿನಲ್ಲಿಯೇ ಈ ಪದ್ಧತಿಯು ಜಾರಿಗೆ ಬಂದಿತ್ತು. ಮೈಸೂರು ೧೯೧೯ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿತು. ಈ ಕಾನೂನಿನಲ್ಲಿಯೇ ನಾಲ್ವಡಿ ಕೃಷ್ಣರಾಜ ಒಡೆಯರು ಅವರು ದಲಿತರಿಗೂ ಸಹ ಕಡ್ಡಾಯ ಶಿಕ್ಷಣದ ವ್ಯವಸ್ಥೆ ಯನ್ನು ಜಾರಿಗೆ ತಂದರು. ಇದಕ್ಕಾಗಿ ಗ್ರಾಮದ ಶಾಲಾ ಸಮಿತಿಗಳ ರಚನೆ ನಡೆಯಿತು. ಈ ಸಮಿತಿಯು ಶಾಲೆಯ ಉಸ್ತುವಾರಿಯ ಹೊಣೆ ಹೊರುವುದಾಗಿತ್ತು. ಈ ಸಮಿತಿಗಳಿಗೆ ಗ್ರಾಮನಿಧಿಯಿಂದ ಹಣವು ಸಂದಾಯವಾಗುತ್ತಿತ್ತು.'

ಗ್ರಾಮದ ಆಸ್ತಿಯನ್ನು ತನ್ನದಾಗಿಸಿ ಕೊಂಡಿದ್ದ ಸವರ್ಣೀಯರು 'ಕೇರಿಯ ಕೆಲಸಕ್ಕೆ ಗ್ರಾಮದ ಹಣವನ್ನು ಬಳಸಲಿಕ್ಕೆ ವಿರೋಧ ವ್ಯಕ್ತಪಡಿಸಿತು. ಈ ಇಕ್ಕಟ್ಟುಗಳೇ ಒಡೆಯರು ಅವರಿಗೆ ದೊಡ್ಡ ನೋವಾಗಿ ಕಂಡುಬಂದಿತು.'

ಅಸ್ಪೃಶ್ಯರು ಸಾರ್ವಜನಿಕ ಶಾಲೆಗಳಲ್ಲಿ ವಿದ್ಯೆ ಕಲಿಯಲು ಸರ್ಕಾರ ತಾತ್ವಿಕವಾಗಿ ಒಪ್ಪಿಗೆ ಕೊಟ್ಟಿತ್ತಾದರೂ ಸಮಾಜದ ವಿವಿಧ ವಲಯಗಳಲ್ಲಿ ಅದಕ್ಕೆ ಸಾಕಷ್ಟು ವಿರೋಧವಿತ್ತು. ಇದರಿಂದಾಗಿ ಸರ್ಕಾರವು ಪಂಚಮ ಶಾಲೆಗಳೆಂಬ ಪ್ರತ್ಯೇಕ ಶಾಲೆಗಳನ್ನು ತೆರೆಯುವತ್ತ ಹೆಚ್ಚು ಒಲವು ತೋರಿಸಿತು. ಅನೇಕ ಪಂಚಮ ಶಾಲೆಗಳು **ಕ್ರೈಸ್ತ ಮಿಷನ್** ಸಂಸ್ಥೆಗಳ ಆಶ್ರಯದಲ್ಲಿ ನಡೆಯುತ್ತಿದ್ದವು. ೧೯೧೩ರಲ್ಲಿ **ವಿ.ಎಸ್. ನರಸಿಂಹ ಅಯ್ಯಂಗಾರ್** ಅವರ ಶ್ರಮದಿಂದಾಗಿ **ದಲಿತ ಶಿಕ್ಷಣ ಮಿಷನ್** ಎಂಬ ಸಂಸ್ಥೆ ಸ್ಥಾಪಿತವಾಯಿತು. ೧೯೧೫ರ ಹೊತ್ತಿಗೆ ಅದು ೧೫ ಶಾಲೆಗಳನ್ನು ನಡೆಸುತ್ತಿತ್ತು. ಈ ಸಂಸ್ಥೆಗೆ ಸ್ವತಃ ಮಹಾರಾಣಿ ವಾಣಿವಿಲಾಸ ಸನ್ನಿಧಾನದವರು ಮಹಾ ಪೋಷಕರಾಗಿದ್ದರು. ೧೯೧೫ರಲ್ಲಿ ಸರ್ಕಾರ ಒಂದು ಸಾರ್ವಜನಿಕ ಸುತ್ತೋಲೆ ಹೊರಡಿಸಿ ಯಾರನ್ನೂ ಸಾಮಾಜಿಕ ಅಥವಾ ಧಾರ್ಮಿಕ ನಿರ್ಬಂಧದ ಆಧಾರದ ಮೇಲೆ ಸಾರ್ವಜನಿಕ ಶಾಲೆಗಳಿಗೆ ಸೇರುವುದನ್ನು ನಿಷೇಧಿಸಕೂಡದು ಎಂದು ತಿಳಿಸಿತು. ಸರ್ಕಾರ ಈ ನಿಟ್ಟಿನಲ್ಲಿಯೇ ಹೆಚ್ಚು ಹೆಚ್ಚು ಪಂಚಮ ಶಾಲೆಗಳನ್ನು ಪ್ರಾರಂಭಿಸಿತು. ೧೯೧೦–೧೯೧೧ರಲ್ಲಿ ಪಂಚಮರಿಗಾಗಿ ೬೭ ಸರ್ಕಾರಿ ಶಾಲೆಗಳು, ೩೭ ಅನುದಾನಿತ ಶಾಲೆಗಳು ಹಾಗೂ ೪ ಅನುದಾನರಹಿತ ಶಾಲೆಗಳಿದ್ದರೆ, ೧೯೧೫–೧೬ ರಲ್ಲಿ ೧೭೧ ಸರ್ಕಾರಿ ಶಾಲೆಗಳು, ೧೦೮ ಅನುದಾನಿತ ಶಾಲೆಗಳು ಮತ್ತು ೮೮ ಅನುದಾನ ರಹಿತ ಶಾಲೆಗಳು ಅಸ್ತಿತ್ವದಲ್ಲಿದ್ದವು. ಮೈಸೂರು, ಕೋಲಾರ, ಬೆಂಗಳೂರು, ಚಿತ್ರದುರ್ಗ, ದಾವಣಗೆರೆ, ತುಮಕೂರು, ಚಿಕ್ಕಮಗಳೂರು, ಹಾಸನ, ಚಾಮರಾಜನಗರ, ಮಳವಳ್ಳಿ ಹಾಗೂ ಚನ್ನಪಟ್ಟಣಗಳಲ್ಲಿ ಪಂಚಮ ವಿದ್ಯಾರ್ಥಿಗಳಿಗೆ ಶಿಕ್ಷಣದ ಅವಕಾಶವನ್ನು ನೀಡಿ ಅವರಲ್ಲಿ ಅಕ್ಷರಜ್ಞಾನ ಉಂಟುಮಾಡಲು ಶ್ರಮಿಸಿದರು. ಇದು ದಲಿತರಿಗೆ ಸಹಕಾರಿಯಾದರೆ ದಲಿತರ ದುಡಿಮೆಯನ್ನೇ ನಂಬಿಕೊಂಡು ಶ್ರೀಮಂತಿಕೆ ಘೋಷಿಸಿಕೊಂಡಿದ್ದ ಸವರ್ಣೀಯರಿಗೆ ಸಹಿಸಲಾರದ ಸಂದರ್ಭವಾಯಿತು. ಒಂದರ್ಥದಲ್ಲಿ ಟಿಪ್ಪುವಿಗೆ ಬ್ರಿಟೀಷರು ನೇರ ವೈರಿಗಳಾಗಿದ್ದರು. ಆದ್ದರಿಂದ ಟಿಪ್ಪು ಅವರ ವಿರುದ್ಧ ಪ್ರಾಣವನ್ನೇ ತ್ಯಾಗ ಮಾಡಿದ. ಆದರೆ ನಾಲ್ವಡಿ ಅವರಿಗೆ ವೈರಿಗಳು ತನ್ನ ಮನೆ ಮತ್ತು ಮಗ್ಗಳಲ್ಲೇ ಇದ್ದರು. ಯುದ್ಧ ಸಲೀಸಾಗಿರಲಿಲ್ಲ. ಈ ತಂತ್ರಗಾರಿಕೆಯಲ್ಲಿ ನಾಲ್ವಡಿಯವರು ಸಹ ಸೋತರು. ಈ ಸೋಲಿಗೆ ಪ್ರಮುಖ ಕಾರಣ ಜಾತಿ ಎಂಬ ಬ್ರಹ್ಮಾಸ್ತ್ರ.

ಅಸ್ಪೃಶ್ಯರು ಸರ್ಕಾರಿ ಅಥವಾ ಖಾಸಗಿ ಶಾಲೆಗಳಲ್ಲಿ ಸವರ್ಣೀಯರೊಂದಿಗೆ ವಿದ್ಯೆ ಕಲಿಯಲು ಸಾಕಷ್ಟು ಸಾಮಾಜಿಕ ಪ್ರತಿರೋಧವಿತ್ತು. ಹೀಗೆ ವಿರೋಧಿಸುತ್ತಿದ್ದವರಲ್ಲಿ ಎಲ್ಲ ಸವರ್ಣೀಯ ಜಾತಿಗಳವರೂ ಸೇರಿರುತ್ತಿದ್ದರು. ವಿಶೇಷವಾಗಿ ಬ್ರಾಹ್ಮಣರು, ಮುಸಲ್ಮಾನರು ಲಿಂಗಾಯಿತ ಹಾಗೂ

ಒಕ್ಕಲಿಗರು ಅಸ್ಪೃಶ್ಯರೊಂದಿಗೆ ತಮ್ಮ ಮಕ್ಕಳು ವ್ಯಾಸಂಗ ಮಾಡುವುದನ್ನು ಸಹಿಸುತ್ತಿರಲಿಲ್ಲ. ಅವರ ಈ ಮನೋಭಾವನೆಗೆ ಶತಶತಮಾನ ಗಳಿಂದಲೂ ಅವರು ಬೆಳೆಸಿಕೊಂಡು ಬಂದಿದ್ದ ಪ್ರತ್ಯೇಕ ಸಾಂಸ್ಕೃತಿಕ ಆವರಣ ಮತ್ತು ಪಂಚಮರ ಬಗ್ಗೆ ಸಮಾಜ ಹೊಂದಿದ್ದ ಕೀಳುಭಾವನೆಗಳು ಕಾರಣವಾಗಿದ್ದವು. ೧೯೧೬ರಲ್ಲಿ ಸರ್ಕಾರ ಹೊರಡಿಸಿದ್ದ ಶಾಲೆಗಳನ್ನು ಎಲ್ಲ ವರ್ಗದವರಿಗೂ ತೆರೆದಿಡುವ ಸುತ್ತೋಲೆಗೆ ಶೃಂಗೇರಿಯಲ್ಲಿ ಪ್ರಬಲ ವಿರೋಧ ಕಂಡುಬಂದಿತು(ಇದೇ **ಶೃಂಗೇರಿ ಆಜ್ಞೆ** ಎಂದು ಪ್ರಸಿದ್ಧಿ ಪಡೆದುಕೊಂಡಿದೆ). ಏಕೆಂದರೆ ಅಲ್ಲಿನ ವರ್ನಾಕ್ಯೂಲರ್ ಶಾಲೆಗೆ ಒಬ್ಬ ದಲಿತ ವಿದ್ಯಾರ್ಥಿಯನ್ನು ಸೇರಿಸಲಾಗಿತ್ತು. ಅದನ್ನು ಪ್ರತಿಭಟಿಸಿ ೪೦೦ ವೈದಿಕ ಬ್ರಾಹ್ಮಣರು ಒಂದು ಸಮಿತಿ ರಚಿಸಿಕೊಂಡು ಸರ್ಕಾರಕ್ಕೆ ಅಹವಾಲು ಸಲ್ಲಿಸಿದರು. ಈ ಬಗ್ಗೆ ಶೃಂಗೇರಿ ಜಹಗೀರಿನ ಏಜೆಂಟರು ಹಾಗೂ ಸರ್ಕಾರದ ಇನ್ಸ್‌ಪೆಕ್ಟರ್ ಜನರಲ್‌ರ ನಡುವೆ ಅನೇಕ ಪತ್ರ ವ್ಯವಹಾರಗಳು ನಡೆದವು. **ಎಂ. ಶಾಮರಾವ್** ಅವರು ಶಿಕ್ಷಣ ಇಲಾಖೆಯ **ಇನ್ಸ್‌ಪೆಕ್ಟರ್ ಜನರಲ್** ಆಗಿದ್ದಾಗ ಪ್ರಾರಂಭವಾದ ಈ ವಿವಾದ ೧೯೧೬ರ ಮಧ್ಯಾವಧಿಯಲ್ಲಿ **ಸಿ.ಆರ್. ರೆಡ್ಡಿ** ಅವರು ಆ ಹುದ್ದೆಗೆ ಬಂದಾಗಲೂ ಮುಂದುವರೆದಿತ್ತು. ಸರ್ಕಾರ ಈ ಸುತ್ತೋಲೆಯನ್ನು ಹಿಂದಕ್ಕೆ ಪಡೆಯಲು ಒಪ್ಪಲಿಲ್ಲ. ಕೊನೆಗೆ ಜಹಗೀರ್‌ದಾರರು ಪ್ರತ್ಯೇಕ ಆಂಗ್ಲೋ ವರ್ನಾಕ್ಯೂಲರ್ ಶಾಲೆಯನ್ನು ಸ್ಥಾಪಿಸಿಕೊಳ್ಳಲು ಸರ್ಕಾರದ ಅನುಮತಿ ಕೇಳಿದರು. ಅದಕ್ಕೆ ಸರ್ಕಾರ ಕೆಲವು ಷರತ್ತುಗಳ ಮೇಲೆ ಅನುಮತಿ ನೀಡಿತು. ಅಂದರೆ ಈ ಶಾಲೆಗೆ ಸರ್ಕಾರ ಅನುದಾನ ನೀಡಲಿಲ್ಲ. ಸರ್ಕಾರ ಈ ಬಗ್ಗೆ ೧೯೧೮ ನವೆಂಬರ್ ೨೯ರಂದು ಒಂದು ಆದೇಶ ಹೊರಡಿಸಿ ರೈಲು ಆಸ್ಪತ್ರೆ ನ್ಯಾಯಾಲಯಗಳಂತೆಯೇ ಶಾಲೆಗಳೂ ಸಾರ್ವಜನಿಕ ಸಂಸ್ಥೆ ಗಳೆಂದು ಘೋಷಿಸಿತು. ಈ ರೀತಿ ಸರ್ಕಾರ ಅಸ್ಪೃಶ್ಯರು ವಿದ್ಯೆ ಕಲಿಯುವ ಹಕ್ಕನ್ನು ಎತ್ತಿಹಿಡಿಯಿತು.

ಅಸ್ಪೃಶ್ಯತೆ ಎನ್ನುವ ಪಿಡುಗು ಕೇವಲ ವೃತ್ತಿಗಳ ಕಾರಣದಿಂದ ಬಂದದ್ದಾಗಿರದೆ ಪರಂಪರಾನುಗತ ಪೂರ್ವಗ್ರಹ ಭಾವನೆಯಿಂದ ಬಂದುದಾಗಿದೆ. ಆದ್ದರಿಂದ ಆಗ ಬ್ರಾಹ್ಮಣೇತರ ಚಳವಳಿ ಒಂದು ಕಡೆ ಬಿರುಸಾಗಿದ್ದರೂ ಸಹ ಅಸ್ಪೃಶ್ಯರ ಶಿಕ್ಷಣದ ವಿಷಯದ ಬಗ್ಗೆ ಕೆಲವು ಬ್ರಾಹ್ಮಣರಲ್ಲದೆ ಇತರ ಶೂದ್ರ, ಸವರ್ಣೀಯ ಜಾತಿಗಳವರೂ ವಿರೋಧ ವ್ಯಕ್ತ ಪಡಿಸಿರುವುದಕ್ಕೆ ಅನೇಕ ಆಧಾರಗಳಿವೆ.[೨೦] ೧೯೧೮-೧೯೧೯ರಲ್ಲಿ ಚಿತ್ರದುರ್ಗದ ಆಂಗ್ಲೋ ವರ್ನಾಕ್ಯೂಲರ್ ಶಾಲೆಗೆ ಮಾದಿಗರ ಹುಡುಗನೊಬ್ಬನನ್ನು ಮುಖ್ಯೋಪಾಧ್ಯಾಯರು ಒತ್ತಾಸೆ ನೀಡಿ ಸೇರಿಸಿದಾಗಲೂ ಇದೇ ರೀತಿ ಪ್ರತಿಭಟನೆ ವ್ಯಕ್ತವಾಯಿತು. ಈ ಸಮಯದಲ್ಲಿ ಬಹುತೇಕ ಸವರ್ಣೀಯರು ಈ ಪ್ರತಿಭಟನೆಯಲ್ಲಿ ಸೇರಿದ್ದರು. ಈ ಪ್ರತಿಭಟನೆಗಳಿಗೆ ಹೆದರದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸರ್ಕಾರವು ಅಸ್ಪೃಶ್ಯರು ಸಾರ್ವಜನಿಕ ಶಾಲೆಗಳಿಗೆ ಸೇರುವ ಹಕ್ಕನ್ನು ಮಾನ್ಯ ಮಾಡಿತು. ನಂತರ ಪ್ರತಿಭಟನೆಗಳು ಹೆಚ್ಚಾಗಿ ನಡೆಯದೆ ತಮ್ಮಲ್ಲಿಯೇ ಈ ಕ್ರಮದ ಬಗ್ಗೆ ಮನವರಿಕೆ ಮಾಡಿಕೊಂಡು ಸುಮ್ಮನಾಗಬೇಕಾಯಿತು.

ಕ್ರಿ.ಶ. ೧೮೩೦ ರಿಂದ ೧೮೮೧ ರವರೆಗೆ ಅಸ್ತಿತ್ವದಲ್ಲಿದ್ದ ಕಮೀಷನರ್ ಆಡಳಿತದ ಕಾಲವು ಮೈಸೂರಿನ ಆಧುನಿಕ ಇತಿಹಾಸದಲ್ಲಿ ಒಂದು ಹೊಸ ಆಯಾಮವನ್ನು ಕಂಡಿತು. ಅದು ಮುಗಿಯುವ ವೇಳೆಗೆ ಮೈಸೂರು ಸಂಸ್ಥಾನವು ಒಂದು ಕ್ರಮಬದ್ಧ, ಶಾಂತ ಹಾಗೂ ಜವಾಬ್ದಾರಿ ಆಡಳಿತದೊಂದಿಗೆ ಹೊರಬಂದಿತು ಎಂದು ಇತಿಹಾಸಕಾರರು ಹೇಳುತ್ತಾರೆ. ದಲಿತರ ಪಾಲಿಗೆ ಇದು ಸತ್ಯವೂ ಕೂಡ.

ಮೈಸೂರು ರಾಜ್ಯದಲ್ಲಿ ಆಧುನಿಕ ಶಿಕ್ಷಣವು ಕ್ರಮಬದ್ಧವಾಗಿ ಬೆಳೆಯಲು ಆರಂಭಿಸಿದ್ದು ಹೇಗೆ ಎಂದರೆ, ಈಸ್ಟ್ ಇಂಡಿಯಾ ಕಂಪನಿಯ ಡೈರೆಕ್ಟರುಗಳು ಭಾರತದಾದ್ಯಂತ ಪಾಶ್ಚಾತ್ಯ ಮಾದರಿಯಲ್ಲಿ ಶಿಕ್ಷಣ ಕ್ರಮವನ್ನು ಸ್ಥಾಪಿಸುವ ಉದ್ದೇಶದಿಂದ **ಹ್ಯಾಲಿಫಾಕ್ಸ್** ನಿಯೋಗವನ್ನು ೧೮೫೪ರಲ್ಲಿ ರೂಪಿಸಿತು. ಈ ನಿಯೋಗವು ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾನಿಲಯ ದವರೆಗೂ ಶಿಕ್ಷಣವನ್ನು ಸಾರ್ವತ್ರೀಕರಿಸಿ ಬ್ರಿಟಿಷ್ ಮಾದರಿಯಲ್ಲಿ ಒದಗಿಸಬೇಕೆಂದು ಶಿಫಾರಸ್ಸು ಮಾಡಿತು. ಅದೇ ಪ್ರಕಾರ ಅಂದಿನ ಜ್ಯುಡಿಷಿಯಲ್ ಕಮೀಷನರ್ **ಮಿಸ್ಟರ್ ಡೆವೆರೋಕ್ಸನು** ಒಂದು ಯೋಜನೆಯನ್ನು ಸಿದ್ಧಗೊಳಿಸಿ **ಡೈರೆಕ್ಟೋ ರೇಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್** ಎಂಬ ಇಲಾಖೆಯನ್ನು ಸ್ಥಾಪಿಸಿ ಅದರಲ್ಲಿ ಒಬ್ಬ ಡೈರೆಕ್ಟರ್, ಇಬ್ಬರು ಶಾಲಾ ಇನ್ಸ್‌ಪೆಕ್ಟರ್, ನಾಲ್ಕು ಡೆಪ್ಯುಟಿ ಹಾಗೂ ಇಪ್ಪತ್ತು ಜನ ಕಿರಿಯ ಅಧಿಕಾರಿಗಳು ಇರಬೇಕೆಂದು ಸೂಚಿಸಿದನು.

ಹೋಬಳಿ ಶಾಲೆ ಸ್ಥಾಪನೆ ಹಾಗು ದಲಿತ ಶಿಕ್ಷಣ ವ್ಯವಸ್ಥೆ

ಮೈಸೂರು ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಮೊಟ್ಟಮೊದಲಿಗೆ ೧೮೫೪ರಲ್ಲಿ **ಕಬ್ಬನ್**‌ನಿಂದ ಸ್ಥಾಪಿಸಲ್ಪಟ್ಟಿತು. ೧೮೬೪ರ ವೇಳೆಗೆ ನಾಲ್ಕು ತಾಲ್ಲೂಕುಗಳಲ್ಲಿ ೧೮ ಸರ್ಕಾರಿ ಶಾಲೆಗಳೂ, ೩೦ ಗ್ರಾಂಟ್–ಇನ್–ಏಡ್(ಅನುದಾನ ಪಡೆದ) ಶಾಲೆಗಳೂ ನಡೆಯುತ್ತಿದ್ದವು. ಇಲಾಖೆಯ ವಾರ್ಷಿಕ ಖರ್ಚು ೧,೨೫,೦೦೦ ರೂಪಾಯಿಗಳಾಗಿತ್ತು. ಪ್ರಾಥಮಿಕ ಮಟ್ಟದಲ್ಲಿ ಕನ್ನಡ, ಪ್ರೌಢಮಟ್ಟದಲ್ಲಿ ಇಂಗ್ಲಿಷ್ ಬೋಧನಾ ಮಾಧ್ಯಮಗಳಾಗಿದ್ದವು. ಆದರೆ ಪ್ರಗತಿಯು ನಿಧಾನವೆಂದು ಕಂಡುಬಂದಿದ್ದರಿಂದ ೧೮೬೮ರಲ್ಲಿ **ಬಿ.ಎಲ್. ರೈಸ್** ಅವರ ಶಿಫಾರಸ್ಸಿನ ಮೇರೆಗೆ **ಹೋಬಳಿ ಶಾಲೆ** ಯೋಜನೆ ಯನ್ನು ಜಾರಿಗೆ ತರಲಾಯಿತು. ಗ್ರಾಮಾಂತರ ಒಳ ಪ್ರದೇಶದ ಮಕ್ಕಳಿಗೂ ಶಿಕ್ಷಣವನ್ನು ತಲುಪಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಹೋಬಳಿಗಳಲ್ಲೂ ಒಂದೊಂದು ಕನ್ನಡ ಪ್ರಾಥಮಿಕ ಶಾಲೆಯನ್ನು ಕ್ರಮೇಣ ತೆರೆಯಲಾಯಿತು. ಸರ್ಕಾರ ಕೈ ಬದಲಾಯಿಸುವುದ ರೊಳಗಾಗಿ(ಕ್ರಿ.ಶ. ೧೮೮೧) ಈ ಯೋಜನೆಯು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವ್ಯಾಪಿಸಿ, ಸಂಸ್ಥಾನದಾದ್ಯಂತ ಒಟ್ಟು(ಪ್ರಾಥಮಿಕ ಹಾಗೂ ಮಾಧ್ಯಮಿಕ) ೨,೦೮೭ ಶಾಲೆಗಳಿದ್ದವು. ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ೫೭,೬೫೭ ಆಗಿತ್ತು. ಸಾರ್ವಜನಿಕ ಶಿಕ್ಷಣವು ಉಚಿತ ವಾದುದರಿಂದ ಖರ್ಚನ್ನು ಭರಿಸಲು ಭೂ–ಕಂದಾಯದ ಮೇಲೆ ಸಣ್ಣ ಪ್ರಮಾಣದ ಎಜ್ಯುಕೇಷನ್ ಸೆಸ್‌ಅನ್ನು ವಿಧಿಸಲಾಯಿತು. ಅಂದು

ವಿಧಿಸಿದ **ಲೋಕಲ್ ಸೆಸ್, ಎಜ್ಯುಕೇಶನ್ ಸೆಸ್** ಮತ್ತು **ಹೆಲ್ತ್ ಸೆಸ್‌ಗಳು** ಇಂದಿಗೂ ವಿವಿಧ ರೂಪದಲ್ಲಿ ಚಾಲ್ತಿಯಲ್ಲಿವೆ.

೧೮೭೫ರಲ್ಲಿ ಬೆಂಗಳೂರಿನ ಹೈಸ್ಕೂಲನ್ನು ಸೆಂಟ್ರಲ್ ಕಾಲೇಜ್ ಆಗಿ ಪರಿವರ್ತಿಸಿ ಮದರಾಸು ವಿಶ್ವವಿದ್ಯಾನಿಲಯಕ್ಕೆ ಸೇರಿಸಲಾಯಿತು. ಬೆಂಗಳೂರು, ಶಿವಮೊಗ್ಗ, ಹಾಸನ ಮತ್ತು ಮೈಸೂರುಗಳಲ್ಲಿದ್ದ ನಾಲ್ಕು ಹೈಸ್ಕೂಲುಗಳು ಎಫ್.ಎ. ಮಟ್ಟದವರೆಗೆ ಬೋಧಿಸುತ್ತಿ ದ್ದವು. ಎಂಜಿನಿಯರಿಂಗ್ ಮತ್ತು ಪ್ರಕೃತಿ ವಿಜ್ಞಾನದ ಶಾಲೆಯೊಂದನ್ನು ಬೆಂಗಳೂರಿನಲ್ಲಿ ಅದೇ ವರ್ಷ ಸ್ಥಾಪಿಸಲಾಯಿತು. ಆದರೆ ೧೮೭೭ರ ಭೀಕರ ಕ್ಷಾಮ ಹಾಗು ಪ್ರಬಲ ಕೋಮಿನವರ ವಿರೋಧದಿಂದ ನಂತರ ಅನಿವಾರ್ಯವಾಗಿ ಎಲ್ಲಾ ಅನುದಾನಿತ ಶಾಲೆಗಳನ್ನು ಮುಚ್ಚಲಾಯಿತು.

ಸಾಮಾಜಿಕ ಇಕ್ಕಟ್ಟು-ಬಿಕ್ಕಟ್ಟುಗಳ ನೋಟ

ಮೈಸೂರು ಸಂಸ್ಥಾನವು ೧೩೯೯ರಲ್ಲಿ ಸ್ಥಾಪನೆಯಾಗಿ ಭಾರತಕ್ಕೆ ಬ್ರಿಟಿಷರಿಂದ ಸ್ವಾತಂತ್ರ್ಯ ಬರುವವರೆವಿಗೂ, ಅಂದರೆ ೧೯೪೭ ಆಗಸ್ಟ್ ೧೫ರವರೆವಿಗೂ ಆಳ್ವಿಕೆ ನಡೆಸಿದರೂ ಸಹ, ಸಾಮಾಜಿಕ ಬೆಳವಣಿಗೆಯ ದೃಷ್ಟಿಯಿಂದ ೧೮೮೧ರಿಂದ ೧೯೪೦ರವರೆಗೆ ಸುಮಾರು ೪೫ ವರ್ಷಗಳ ಸುದೀರ್ಘಾವಧಿಯ ಆಳ್ವಿಕೆ ನಡೆಸಿದ ದಲಿತರ ಬಂಧುಗಳೆಂದೇ ಹೆಸರಾಗಿರುವ ೧೦ನೇ ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಜಯಚಾಮರಾಜೇಂದ್ರ ಒಡೆಯರು ಅವುಗಳ ಜನಪರ ಆಳ್ವಿಕೆಯು ಮಹತ್ವದ್ದಾಗಿ ಬರೆದಿಡಲೇಬೇಕಾದ ಕಾಲವೆಂದೇ ಹೇಳಬಹುದು. ಶತಶತಮಾನಗಳಿಂದ ಪಶುಗಳಿಗಿಂತಲೂ ಹೀನಾಯವಾಗಿ ಕಡೆಗಣಿಸಲಾಗಿದ್ದ ದಲಿತರ ಪುನಶ್ಚೇತನದ ದೃಷ್ಟಿಯಿಂದ ಇದು ತುಂಬ ಮಹತ್ವದ ಕಾಲ. ಈ ಕಾಲದಲ್ಲಿಯೇ ಅಸ್ಪೃಶ್ಯರಿಗೆ ಶಾಲೆಗಳಲ್ಲಿ ಮುಕ್ತ ಪ್ರವೇಶ ದೊರೆಯಿತು. ಅವರ ನೋವಿನ ಬಗ್ಗೆ, ಅವರ ಬವಣೆಯ ಕಡೆಗೆ, ಆ ನೋವಿನ ಸಮಾಜದ ಕಡೆಗೆ ಗಮನಹರಿಸುವ ಪ್ರಯತ್ನಗಳು ಈ ಕಾಲದಲ್ಲಿ ಹೆಚ್ಚಾಗಿ ನಡೆದವು. ಈ ಪ್ರೋತ್ಸಾಹದಿಂದಾಗಿ ಹೊಸ ಶಿಕ್ಷಣ, ಉದ್ಯೋಗ, ಎಲ್ಲಕ್ಕಿಂತಲೂ ಮಿಗಿಲಾಗಿ ಸಾಮಾಜಿಕವಾಗಿ ಶತಶತಮಾನಗಳಿಂದಲೂ ಸವರ್ಣೀಯರು ಮೆತ್ತಿದ್ದಂತಹ ಕಪ್ಪು ಕಳಂಕವನ್ನು ತೆಗೆದುಹಾಕಲು ವಿವಿಧ ಸಾಮಾಜಿಕ ಸಮುದಾಯಗಳು ಸಂಘಟಿತವಾದವು. ದಲಿತ ಯುವಕರು/ಯುವತಿಯರು ಶಿಕ್ಷಣ ಪಡೆದು ತಮ್ಮ ಹಕ್ಕುಬಾಧ್ಯತೆ ಗಳಿಗಾಗಿ ಧ್ವನಿ ಎತ್ತಿದ್ದರು. ಶತಮಾನಗಳಿಂದಲೂ ಆಚರಣೆಯಲ್ಲಿದ್ದಂತಹ ಸಾಮಾಜಿಕ ಅನಿಷ್ಟಗಳು ಮತ್ತು ಮೂಢನಂಬಿಕೆಗಳು ಹೆಚ್ಚು ಹೆಚ್ಚಾಗಿ ವಿಮರ್ಶೆಗೊಳಗಾದವು. ಈ ಬೆಳವಣಿಗೆಗೆ ಮೂಲಪುರುಷರೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದೇ ಹೇಳಬೇಕು.

ಇಂದು ನಮ್ಮ ಕಾಲದಲ್ಲಿ ದಲಿತರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲು ಗಳು ವಿಭಿನ್ನವಾಗಿವೆ. ಇದಕ್ಕೆ ಪ್ರಮುಖ ಕಾರಣವೆಂದರೆ ನಾವು ಬದುಕುತ್ತಿರುವ ಕಾಲ. ಜಾಗತೀಕರಣ,

ಖಾಸಗೀಕರಣ, ಕೈಗಾರೀಕರಣ, ದಲಿತೀಕರಣ ಹಾಗೂ ನಗರೀಕರಣಗಳಂತಹ ಭೂತಗಳು ದಲಿತ ವರ್ಗವು ಈ ಕಾಲದಲ್ಲಿಯೂ ಒಂದು ರೀತಿಯ ಆಧುನಿಕ ಅಸ್ಪೃಶ್ಯತೆಗೆ ಎಡೆಯಾಗಲು ಅನುವು ಮಾಡಿ ಕೊಡುತ್ತಿವೆ. ಏಕೆಂದರೆ ನಮ್ಮ ಚರಿತ್ರೆ ಏಕಕಾಲದಲ್ಲಿ ಅನೇಕ ಕಾಲಗಳು ಜೀವಂತವಾಗಿರಿಸುವ ಚರಿತ್ರೆಯಾಗಿದೆ. ನಮ್ಮಲ್ಲಿ ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡುತ್ತಿರುವ ಮನುಷ್ಯರಿದ್ದಾರೆ. ಇಪ್ಪತ್ತನೆಯ ಶತಮಾನದ ಆರಂಭದ ಮನಃಸ್ಥಿತಿಯ ಮನುಷ್ಯರೂ ಇದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು ಎಂಬುವುದರ ಜೊತೆಗೆ ಇದಕ್ಕಿಂತ ವಿಭಿನ್ನ ಸ್ಥಿತಿಯೆಂದರೆ, ಅನೇಕ ಶತಮಾನದ ಹಿಂದಿನ ಜೀವನ ಕ್ರಮದ ಜನರು ಕಾಡುಮೇಡುಗಳಲ್ಲಿ ವಾಸಿಸುತ್ತಿದ್ದಾರೆ. ಊರಂಚಿನಲ್ಲಿ ಇಂದಿಗೂ ಜೀವಿಸುತ್ತಿರುವ ದಲಿತರ (**ಊರಿನಿಂದ ಆಚೆ ಹೊಲಗೇರಿ** ಹಾಗೂ **ಊರು ಹೊಲಗೇರಿ ಒಂದ್ ಮಾಡಿಬಿಟ್ಟ** ಎಂಬ ಎರಡು ಪ್ರಾಚೀನ ಗಾದೆಗಳೇ ಸಾಕ್ಷಿ) ಪಾಡು ಇದೇ ಆಗಿದೆ. ಈ ರೀತಿಯಾಗಿ ಎಷ್ಟೋ ರಾಜಮಹಾರಾಜರು ಹಾಗೂ ಇಂದಿನ ಪ್ರಜೆಗಳ ಸರ್ಕಾರ ಅನೇಕ ಸಂವಿಧಾನಗಳನ್ನು ನಿರ್ಮಿಸಿಕೊಂಡು ಏನೇ ಕಾನೂನುಗಳನ್ನು ಸೃಷ್ಟಿಸಿದರೂ ಸಹ ದಲಿತರನ್ನು ಭಾರತೀಯ ಸವರ್ಣೀಯರು ಸಮಾನದೃಷ್ಟಿಯಿಂದ ಕಾಣುವುದು ಕಷ್ಟ ಎನ್ನಬಹುದು. ಏಕೆಂದರೆ ಈ ಆಧುನಿಕ ಶತಮಾನವೂ ಸಹ ಅನೇಕ ಶತಮಾನಗಳು ಮೇಳೈಸಿರುವ ಕಾಲವೇ ಆಗಿದೆ. ಆದ್ದರಿಂದ ಈ ಶತಮಾನದ ಸಂಕಟ ಮತ್ತು ಸಂಭ್ರಮಗಳು ಮನುಷ್ಯರನ್ನು ರೂಪಿಸುತ್ತಿರುವ ಬಗೆಯೇ ಬೇರೆ ಆಗಿದೆ.

ಚರಿತ್ರೆಯಲ್ಲಿ ಕಾಣುವ ಒಂದು ಮುಖ್ಯ ಗುಣಲಕ್ಷಣವೆಂದರೆ, ವಿವಿಧ ಕಾಲಘಟ್ಟಗಳಲ್ಲಿ ಚರಿತ್ರಕಾರರು ಹಾಗೂ ಸಾಹಿತಿಗಳು ಕಂಡ ಮನುಷ್ಯನ ಕಲ್ಪನೆ. ಇದು ಪ್ರಾಕ್ತನ ಶಾಸ್ತ್ರದಿಂದ ಹಿಡಿದು ವಿವಿಧ ಚರಿತ್ರೆಯ ಕಾಲಘಟ್ಟಗಳನ್ನು ದಾಟಿಕೊಂಡು ಇಂದಿನ ನಮ್ಮ ನವಚರಿತ್ರೆಯ ವರೆವಿಗೂ ಒಡಮೂಡಿರುವುದು ಕಂಡುಬರುತ್ತದೆ. ಉದಾಹರಣೆಗೆ, ಅಂಬೇಡ್ಕರ್ ಅವರೇ ಕೆಲವು ಭಾರತೀಯರು ತಮ್ಮ ಮೂಲಸಂಸ್ಕೃತಿಯು ಇಡೀ ಪ್ರಪಂಚಕ್ಕೆ ಮಾದರಿ ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡು, ಆ ಸಂಸ್ಕೃತಿಯ ಹೊರಗೆಯೇ ಪ್ರಪಂಚದ ಇತರ ಸಂಸ್ಕೃತಿಯ ಮುಂದೆ ತಲೆತಗ್ಗಿಸುವಂತಹ ಅಸ್ಪೃಶ್ಯತೆಯನ್ನು ಆಚರಿಸಿಕೊಂಡು ಬರುತ್ತಿರುವುದು ಇಂದಿಗೂ ನಮ್ಮ ಮುಂದೆ ಗೋಚರಿಸುವ ಸಂದರ್ಭವಾಗಿದೆ ಎಂದು ಹೇಳಿರುವುದು ಭಾರತದ ಜಾತಿ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ನಮ್ಮ ಈ ಸಂದರ್ಭದಲ್ಲಿಯೂ ಚರ್ಮಕ್ಕೆ ಒಂದು ಸಾಮಾಜಿಕ ಚರಿತ್ರೆಯಿರುವುದರಿಂದ ಅದು ಸಾಹಿತ್ಯಕ್ಕೂ ಹಾಗೂ ಚರಿತ್ರೆಗೂ ಹೆಚ್ಚಿನ ಪ್ರೇರಣೆ ನೀಡಿದೆ ಅನ್ನಿಸುತ್ತದೆ.

ಚರ್ಮ ಕಪ್ಪಾಗಿರಬಹುದು, ಕೆಂಪಾಗಿರಬಹುದು, ಎಣ್ಣೆಗೆಂಪಾಗಿರಬಹುದು, ಆದರೆ ಕಪ್ಪುಚರ್ಮಕ್ಕೆ ಕರಾಳ ಚರಿತ್ರೆಯನ್ನು ಕೊಟ್ಟ ಭಾರತೀಯ ಅಸಮಾನತೆ ಸಮಾಜ ನಮ್ಮದು. ಹುಣ್ಣಿಮೆ ಹಾಗೂ ಅಮಾವಾಸ್ಯೆಯ ಬಗ್ಗೆ ಇಂದಿನ ಜನರಿಗೆ ಇರುವ ಪರಿಕಲ್ಪನೆಯೂ ಇದಕ್ಕೆ ಹೊರತಾದುದಲ್ಲ.

ಸುಂದರವಾದ ವರ್ಣನಾತ್ಮಕ ಸನ್ನಿವೇಶವನ್ನು(ಅದು ಪುರಾಣದಲ್ಲಾಗಲೀ ಅಥವಾ ವಾಸ್ತವತೆಯಲ್ಲಿಯೇ ಆಗಲಿ)ಹುಣ್ಣಿಮೆಗೆ ಹೋಲಿಸಿಕೊಂಡು ಸಂತೋಷಪಟ್ಟರೆ, ಇದೇ ಅಮಾವಾಸ್ಯೆಗೆ ಅನಿಷ್ಟಕರ ಸನ್ನಿವೇಶಗಳನ್ನು, ಭಯಾನಕ ರೂಪಗಳನ್ನು ಹಾಗೂ ದೇವತೆ ಗಳಲ್ಲಿಯೇ ಕೆಟ್ಟ, ವಿಕಾರರೂಪದ ದೇವತೆಗಳನ್ನು ಉದಾಹರಿಸಿ ಇಂದಿನ ಪೀಳಿಗೆಗೂ ತಿಳಿಹೇಳುವ ರೀತಿಯಲ್ಲಿ ಕಪ್ಪು ಎನ್ನುವ ಬಣ್ಣವನ್ನು ವಿಕಾರಗೊಳಿಸಿದ್ದಾರೆ. 'ಕಪ್ಪಿಟ್ಟ ಮುಖ' ಎಂಬ ಕಲ್ಪನೆ ಈ ಕರಾಳ ಚರಿತ್ರೆಯ ಕೊಡುಗೆಯಾಗಿಯೇ ಬಂದಿದೆ ಎಂದು ಕವಿಗಳಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಆತ್ಮಕಥೆ **ಊರುಕೇರಿ**ಯಲ್ಲಿ ದಾಖಲಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಚರ್ಮಕ್ಕೆ ಸ್ಪರ್ಶದ ಸಮಸ್ಯೆಯೂ ಇದೆ. ಈ ಸಮಾಜದಲ್ಲಿ ಅನೇಕರ ಚರ್ಮವನ್ನು ಮುಟ್ಟದೆ ಮೂಗು ಮುಚ್ಚಿಕೊಂಡು ಮಾರುದ್ದ ಹಾರುವ ಮನುಷ್ಯರು ನಮ್ಮ ನಡುವೆಯೇ ಇದ್ದಾರೆ. ಈ ಸಂದರ್ಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನದಲ್ಲಿ ಸಂಭವಿಸಿದ ಒಂದು ಘಟನೆಯನ್ನು ತಿಳಿಸಿದರೆ ಸೂಕ್ತವೆನ್ನಿಸುತ್ತದೆ.

ಅಂಬೇಡ್ಕರ್ ಈ ದೇಶದ ಚರಿತ್ರೆಯಲ್ಲಿಯೇ ದಲಿತರ ಸ್ಫೂರ್ತಿಯ ಬಿಂದುವಾಗಿ ಬಿಟ್ಟಿದ್ದಾರೆ ಎನ್ನುವುದು ತಿಳಿಯದಿರುವ ಅಂಶವೇನಲ್ಲ. ಇವರ ಗೆಳೆಯರಾಗಿದ್ದಂತಹ **ಸೋಹಾನ್‌ಲಾಲ್ ಶಾಸ್ತ್ರಿ** ಎಂಬುವರು **ಅಂಬೇಡ್ಕರ್ ಅವರೊಂದಿಗೆ ಇಪ್ಪತ್ತೈದು ವರ್ಷಗಳು** ಎಂಬ ಗ್ರಂಥವನ್ನು ಬರೆದು ಓದುಗರ ಮುಂದಿಟ್ಟಿದ್ದಾರೆ. ಈ ಗ್ರಂಥದ ಒಂದು ಘಟನೆ ಯನ್ನು ವಿವರಿಸುವುದರ ಮುಖಾಂತರ ಅಂಬೇಡ್ಕರ್ ಅವರು ಕಪ್ಪುಚರ್ಮಕ್ಕೆ ಸಂಬಂಧಿಸಿ ದಂತೆ ರಾಷ್ಟ್ರನಾಯಕ ಅನ್ನಿಸಿಕೊಂಡಿದ್ದಂತಹವರ ಅವಹೇಳನಕಾರಿ ಪ್ರಶ್ನೆಗೆ ನೀಡಿದ ಉತ್ತರವನ್ನು ತಿಳಿಸಬಯಸಿದ್ದಾರೆ. **ಮದನಮೋಹನ ಮಾಳವೀಯರು** (ಬನಾರಸ್ ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ, ಶಿಕ್ಷಣ ತಜ್ಞರೆಂದು ಹಿಂದೂಗಳಿಂದ ಖ್ಯಾತಿಯಾಗಿರುವರು) ಒಮ್ಮೆ ಅಂಬೇಡ್ಕರ್ ಅವರಿಗೆ ಹೇಳಿದ ಮಾತು:

ನೋಡಿ ಮಿಸ್ಟರ್ ಅಂಬೇಡ್ಕರ್, ನಿಮ್ಮವರೆಲ್ಲಾ ಕಪ್ಪಾಗಿರುವುದರಿಂದ ಸವರ್ಣೀಯ ಹಿಂದೂಗಳ ತಿರಸ್ಕಾರಕ್ಕೆ, ಅಸಹ್ಯಕ್ಕೆ ಗುರಿಯಾಗಿದ್ದಾರೆ. ನನಗೊಂದು ಉಪಾಯ ಹೊಳೆದಿದೆ, ನಿಮ್ಮ ಹೆಂಗಸರೆಲ್ಲಾ ಗರ್ಭವತಿಯರಾದಾಗ ಜಾಲಿಕಾಯಿ ಸಿಪ್ಪೆಯ ಪೌಡರ್ ಮಾಡಿಸಿ ತಿನ್ನಲು ಕೊಟ್ಟರೆ ಹುಟ್ಟುವವರೆಲ್ಲ ಬೆಳ್ಳಗಿರುತ್ತಾರೆ. ಆಗ ಸವರ್ಣೀಯರು ಅಸಹ್ಯಪಡುವುದಿಲ್ಲ. ಅವರ ಅಸಂಬದ್ಧ ಈ ಸಲಹೆಗೆ ಭಾರತದ ಸಾಂಸ್ಕೃತಿಕ ಸಂದರ್ಭದ ಸೂಕ್ಷ್ಮಮತಿಗಳಾದ ಬಾಬಾಸಾಹೇಬ್ ಅಂಬೇಡ್ಕರ್ ಕೂಡಲೇ ಉತ್ತರಿಸಿದರು:

ದಕ್ಷಿಣ ಭಾರತದ ಆಂಧ್ರ, ಮೈಸೂರು, ಕೇರಳ, ಮದ್ರಾಸು ಪ್ರಾಂತ್ಯಗಳಲ್ಲಿ ಬ್ರಾಹ್ಮಣರು ನಮ್ಮ ಜನರಿಗಿಂತಲೂ ಕಪ್ಪಾಗಿದ್ದಾರೆ. ಆದ್ದರಿಂದ ತಾವು ತಮ್ಮ ಜನಾಂಗದ ಗರ್ಭವತಿಯರಿಗೆ ಈ ಪೌಡರ್ ಕೊಟ್ಟು ಏಕೆ ಮೊದಲು ಪ್ರಯೋಗ ಮಾಡಬಾರದು? ಎಂದು. ಇಲ್ಲಿ ಯಾವುದೇ

ವೈಜ್ಞಾನಿಕ ಕಾರಣವಿಲ್ಲದೆ ಅಸ್ಪೃಶ್ಯತೆಯನ್ನು ಆಚರಿಸಿಕೊಂಡು ಬರುತ್ತಿರುವ, ಆ ಅಸ್ಪೃಶ್ಯತೆಗೆ ಒಂದು ಕುಂಟುನೆಪವನ್ನು ನೀಡಲು ಹೊರಟವರಿಗೆ ಅಂಬೇಡ್ಕರ್ ಕೊಟ್ಟ ಉತ್ತರದಲ್ಲಿ ವ್ಯಂಗ್ಯವಿದೆ. ಪ್ರಮುಖವಾಗಿ ತನ್ನ ಜನಾಂಗದ ಜೊತೆ ತನ್ನನ್ನು ಗುರ್ತಿಸಿಕೊಳ್ಳುವ ಕಳಕಳಿಯಿದೆ. ಈ ಮಾತಿನ ಮೂಲಕ ತನ್ನ ಜನಾಂಗಕ್ಕೆ ಯುಗಯುಗಗಳಿಂದಲೂ ಆಗಿರುವ, ಆಗುತ್ತಿರುವ ಅನ್ಯಾಯಕ್ಕಾಗಿ ವೇದನೆ ಪಡುತ್ತಾ ನ್ಯಾಯಕ್ಕಾಗಿ ಆಗ್ರಹಪಡಿಸುವಂಥ ನ್ಯಾಯವಾದಿಯ ಒಟ್ಟು ಧೋರಣೆ ಈ ಮಾತುಗಳಲ್ಲಿ ಎದ್ದುಕಾಣುತ್ತದೆ. ಈಥರದ ಧೋರಣೆಗಳೇ ಇಂದು ಪುನರ್‌ಮೌಲ್ಯೀಕರಣಗೊಳ್ಳುತ್ತಿರುವ ಸಮಾಜ ಹಾಗೂ ಚರಿತ್ರೆಯ ಕುರಿತು ರಚಿಸಿರುವ ಜನಮುಖಿ.

ಈ ಹಂತದಲ್ಲಿ ನಿಜವಾದ ಕೆಲಸವನ್ನು ಗಮನಿಸಿ ಹೇಳುವುದಾದರೆ ಮೈಸೂರಿನ ಅಸ್ಪೃಶ್ಯರಿಗೆ ಕಾನೂನಿನ ಮೂಲಕ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಮೂಲಕ ಅವರಲ್ಲಿ ನವಚೈತನ್ಯವನ್ನುಂಟು ಮಾಡಿತ್ತು. ಮೈಸೂರು ಸಂಸ್ಥಾನದ ನಾಲ್ವಡಿ ಅವರ ಸರ್ಕಾರಕ್ಕೆ ಆ ಕೀರ್ತಿ ಸಲ್ಲಬೇಕು. ಈ ಹಂತದಲ್ಲಿ ಅಸ್ಪೃಶ್ಯರ ಸಮಸ್ಯೆಯನ್ನು ಬಗೆಹರಿಸುವ ದಿಶೆಯಲ್ಲಿ ಸರ್ಕಾರ ಅಷ್ಟೋ ಇಷ್ಟೋ ಕ್ರಮಗಳನ್ನು ಕೈಗೊಂಡಿದ್ದನ್ನು ನಾವು ಈ ಅಧ್ಯಯನದಲ್ಲಿ ಕಂಡಿದ್ದೇವೆ. ಸರ್ಕಾರದ ವಿರುದ್ಧ ಎಲ್ಲಾ ಬಲಾಢ್ಯ ಜಾತಿಯವರು ನಿಂತ ಸನ್ನಿವೇಶದಲ್ಲಿ ನಾಲ್ವಡಿ ಅವರು ಸ್ವತಃ ತಮ್ಮ ಹಾಗು ದಲಿತರ ಹಿತದೃಷ್ಟಿಯಿಂದಲೇ ಸರ್ಕಾರವು ಕೆಲವು ಕ್ರಮಗಳನ್ನು ಕೈಗೊಂಡು ಅಸ್ಪೃಶ್ಯರನ್ನು ಬಹುವಿಧದ ಶೋಷಣೆಯಿಂದ ಪಾರು ಮಾಡಲು ಪ್ರಯತ್ನಿಸಿದರು. ಏಕೆಂದರೆ ೧೯೨೦ ರಿಂದ ೨೯೩೦ರ ಸಂದರ್ಭದಲ್ಲಿ ದಲಿತರ ಸಮಸ್ಯೆ ಎಲ್ಲಾ ಸಮಸ್ಯೆಗಳಿಗಿಂತಲೂ ಅತ್ಯಂತ ಕಠಿಣವಾದ ಸಮಸ್ಯೆಯಾಗಿತ್ತು. ಅಧಿಕಾರಶಾಹಿಗಳ ದಬ್ಬಾಳಿಕೆ ಹಾಗೂ ಕುತಂತ್ರದ ವಿರುದ್ಧ ಅವರು ಪ್ರಶ್ನಿಸುವ ಪ್ರಯತ್ನದಲ್ಲಿದ್ದರು. ಸಹಸ್ರಾರು ವರ್ಷಗಳಿಂದ ತಮ್ಮ ಕೀಳು ವ್ಯಕ್ತಿತ್ವವನ್ನು ಮೂಕವಾಗಿ ಪಾಲಿಸಿಕೊಂಡು ಬರುತ್ತಿದ್ದ ಲಕ್ಷಾಂತರ ಜನರ ಧ್ವನಿ ಮೆಲ್ಲಮೆಲ್ಲಗೆ ಕೇಳತೊಡಗಿತು. ನಾಲ್ವಡಿ ಅವರ ಕೆಲವು ಸುಧಾರಣಾ ಕ್ರಮಗಳು ದಲಿತರನ್ನು ಸವರ್ಣೀಯರ ಕ್ರೂರ ಮತ್ತು ಅಸಮರ್ಥನೀಯ ರೂಢಿ ಮತ್ತು ಪರಂಪರೆಗಳಿಂದ ಹೊರಬರಲು ಪ್ರಯತ್ನಿಸುವಂತೆ ಮಾಡಿತು. ಆದರೆ ಒಂದು ಅರ್ಥದಲ್ಲಿ ಈ ರಾಷ್ಟ್ರದ ಮೂಲನಿವಾಸಿಗಳಾದ ದಲಿತರಿಗೆ ಅದು ಯಾವಾಗಲೂ ನಿರಾಶೆಯ ಕರಾಳ ಸನ್ನಿವೇಶವೇ ಆಗಿರುತ್ತಿತ್ತು. ಏಕೆಂದರೆ ಅವರ ಕೂಗಿಗೆ ಸರ್ಕಾರ ಸ್ಪಂದಿಸಿದರೂ ಸಹ ದಬ್ಬಾಳಿಕೆ ಸ್ವಭಾವದ ಸವರ್ಣೀಯರಿಂದಾಗಿ ಈ ಜನರ ಅಭಿವೃದ್ಧಿಗೆ ಸರ್ಕಾರ ಸವಾಲಾಗಿ ನಿಲ್ಲುವ ಧೈರ್ಯ ಮಾಡುತ್ತಿರಲಿಲ್ಲ. ದಲಿತ ಮಹಿಳೆಯರ ಸ್ಥಿತಿಯಲ್ಲಿ ಯಾವ ಬದಲಾವಣೆಯನ್ನೂ ಕಾಣಲಾಗಲಿಲ್ಲ. ಅನೇಕ ಸಂದರ್ಭದಲ್ಲಿ ಅವರು ಅಸ್ಪೃಶ್ಯತೆಯ ಜೊತೆಗೆ ಮಹಿಳೆ ಎಂಬ ತಾರತಮ್ಯವನ್ನು ಅನುಭವಿಸಿತು ಎಂಬುದಕ್ಕೆ ಚರಿತ್ರೆಯೇ ಸಾಕ್ಷಿಯಾಗಿದೆ.

೧೮೮೧ರಲ್ಲಿ ೧೦ನೇ ಚಾಮರಾಜ ಒಡೆಯರ್ ಅವರು ಮದ್ರಾಸ್ ಮೂಲದ ಬ್ರಾಹ್ಮಣನಾದ ಸರ್ ಸಿ. ರಂಗಾಚಾರ್ಲು ಅವರನ್ನು ಸಂಸ್ಥಾನದ ದಿವಾನರನ್ನಾಗಿ ನೇಮಿಸಿದರು. ಇವರ ನಂತರವೂ

ಸಹ ಮದ್ರಾಸ್ ಮೂಲದ ಬ್ರಾಹ್ಮಣನಾದ ಸರ್ ಕೆ. ಶೇಷಾದ್ರಿ ಅಯ್ಯರ್ ಅವರು ದಿವಾನರಾದರು. ಇದು ಮೈಸೂರಿನ ಬ್ರಾಹ್ಮಣರಿಗೆ ಸಹಿಸಲಾಗಲಿಲ್ಲ. ಇದರಿಂದಾಗಿ ಮೈಸೂರು ಬ್ರಾಹ್ಮಣರು ಹಾಗೂ ಮದ್ರಾಸಿ ಬ್ರಾಹ್ಮಣರಿಗೆ ಆಂತರಿಕ ಕಚ್ಚಾಟ ಪ್ರಾರಂಭವಾಗಿ, ನಾಲ್ವಡಿ ಅವರಿಗೆ ತಮ್ಮ ಬೇಡಿಕೆಯ ನಿವಾರಣೆಗಾಗಿ ಮೈಸೂರು ಬ್ರಾಹ್ಮಣರು ಅಹವಾಲನ್ನು ಸಲ್ಲಿಸಿದರು. ಇದನ್ನು ಮನಗಂಡ ನಾಲ್ವಡಿ ಅವರು ಮೈಸೂರಿನ ಬ್ರಾಹ್ಮಣರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದರು. **ಇವರು ಪ್ರಥಮ ಮೈಸೂರು ಸಂಸ್ಥಾನದ ಬ್ರಾಹ್ಮಣ ದಿವಾನರಾಗಿ ೧೯೧೨ರಲ್ಲಿ ಅಧಿಕಾರ ವಹಿಸಿಕೊಂಡರು**. ಈ ಮೇಲಿನ ಹೋರಾಟವೇ ಸಂಸ್ಥಾನದ ಬ್ರಾಹ್ಮಣೇತರರಲ್ಲಿ ಪ್ರಜ್ಞೆಯನ್ನು ಮೂಡಿಸಲು ಕಾರಣವಾಯಿತು. ಇದರಿಂದ ಬ್ರಾಹ್ಮಣೇತರರು ಅಂದರೆ, ಅಂದು ಅಸ್ಪೃಶ್ಯರನ್ನು ಹೊರತು ಪಡಿಸಿ ಮಿಕ್ಕೆಲ್ಲ ವರ್ಗದ ಜನರೆಲ್ಲರೂ ಸಹ ಬ್ರಾಹ್ಮಣೇತರ ಗುಂಪಿಗೆ ಸೇರಿದ್ದರು. ೧೯೦೬ ರಲ್ಲಿ **ಒಕ್ಕಲಿಗರ ಸಂಘ**(ಇವರ ಜನಸಂಖ್ಯೆ ಶೇಕಡ ೨೧%), ೧೯೦೫ರಲ್ಲಿ **ಲಿಂಗಾಯತ್ ಎಜ್ಯುಕೇಷನ್ ಅಂಡ್ ಅಸೋಸಿಯೇಷನ್**(ಇವರ ಜನಸಂಖ್ಯೆ ಶೇ. ೧೨%), **ಸೆಂಟ್ರಲ್ ಮಹಮಡನ್ ಅಸೋಸಿಯೇಷನ್**-೧೯೦೯(ಇವರ ಜನಸಂಖ್ಯೆ ಶೇ. ೬%) ಮುಂತಾದ ಬ್ರಾಹ್ಮಣೇತರ ಸಂಘಗಳು ಪ್ರಾರಂಭಗೊಂಡವು. ಈ ಪ್ರಮುಖ ಸಂಘಗಳ ಮೂಲಕ ಸಂಸ್ಥಾನದಲ್ಲಿ ಪ್ರಬಲ ಜಾತಿಯ ಬ್ರಾಹ್ಮಣೇತರರು ತಮ್ಮ ಹಕ್ಕುಗಳಿಗಾಗಿ ಒತ್ತಾಯಿಸತೊಡಗಿದರು. ಸಂಸ್ಥಾನಕ್ಕೆ ಬ್ರಾಹ್ಮಣೇತರರನ್ನು ದಿವಾನರನ್ನಾಗಿ ಮಾಡಲೇಬೇಕೆಂದಿರುವುದು ಇವರ ಪ್ರಮುಖ ಬೇಡಿಕೆಯಾದರೆ, ನಂತರದ್ದು ಉದ್ಯೋಗ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ಸೌಲಭ್ಯ ದೊರೆಯಬೇಕೆಂಬುವುದಾಗಿತ್ತು. ಚಳುವಳಿಯ ತೀವ್ರತೆಯನ್ನು ಮನಗಂಡ ನಾಲ್ವಡಿ ಅವರು ತಮ್ಮ ಹತ್ತಿರದ ಸಂಬಂಧಿ ಸರದಾರ್ ಎಂ. ಕಾಂತರಾಜ ಅರಸ್ ಅವರನ್ನು ೧೯೧೯ರಲ್ಲಿ ಸಂಸ್ಥಾನದ ದಿವಾನರನ್ನಾಗಿ ನೇಮಿಸಿದರು. ಇವರು **ಮೈಸೂರು ಸಂಸ್ಥಾನದ ಪ್ರಥಮ ಬ್ರಾಹ್ಮಣೇತರ ದಿವಾನರು**. ಇವರ ಕಾಲದಲ್ಲಿಯೇ **ಮಿಲ್ಲರ್ ಕಮಿಟಿ** (ದೇಶದಲ್ಲಿಯೇ ಮೊಟ್ಟಮೊದಲು ಹಿಂದುಳಿದ ವರ್ಗಗಳ ಆಯೋಗ ಎಂದು ಖ್ಯಾತಿಯಾಗಿದೆ) ನೇಮಿಸಿ ಅದರ ಮೂಲಕ ಮೀಸಲಾತಿ ಪದ್ಧತಿ ಅಧಿಕೃತವಾಗಿ ಜಾರಿಗೆ ಬಂದದ್ದು.

ಅಸ್ಪೃಶ್ಯರು ಅಲ್ಪಸ್ವಲ್ಪ ಶಿಕ್ಷಣ ಪಡೆದು ಮೇಲಿನ ಚಳುವಳಿಯಿಂದ ಪ್ರಭಾವಿತರಾಗಿ ತಾವೂ ಸಹ ತಮ್ಮ ಹಕ್ಕು ಹಾಗೂ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮುಂದಾ ದರು.[೨] ೧೯೦೬ರಲ್ಲಿ ರಾಷ್ಟ್ರಮಟ್ಟದಲ್ಲಿ **ಡಿಪ್ರೆಸ್ಡ್ ಕ್ಲಾಸಸ್ ಮಿಷನ್ ಸೊಸೈಟಿ**ಯು ಸ್ಥಾಪನೆ ಯಾಯಿತು. ಕುದ್‌ಮಲ್ ರಂಗರಾಯರ ಜೊತೆಗೆ ವಿ.ಆರ್. ಶಿಂಧೆ, ನಾರಾಯಣ ಚಂದಾವರ್‌ಕರ್ ಮುಂತಾದ ನಾಯಕರು ಈ ಸಂಘಟನೆಯಲ್ಲಿ ಕ್ರಿಯಾಶೀಲರಾಗಿದ್ದರು. ಇವರಲ್ಲಿ ನಾರಾಯಣ ಚಂದಾವರ್‌ಕರ್ ಹಾಗೂ ಕುದ್ಮುಲ್ ರಂಗರಾವ್ ಅವರು ಕರ್ನಾಟಕದವರು. ನಂತರ ಕಾಂಗ್ರೆಸ್ ಬೆಂಬಲಿಗರು ಒಂದುಗೂಡಿ **'ಮೈಸೂರು ರಾಜ್ಯ ಅಸ್ಪೃಶ್ಯತಾ ವಿರೋಧಿ ಒಕ್ಕೂಟ'**(Mysore State Anti-Untouchability

League)ವನ್ನು ರಚಿಸಿಕೊಂಡರು. ಒಕ್ಕೂಟದ ಹನ್ನೊಂದು ಜನರ ಪೈಕಿ ಒಬ್ಬರು ಅಸ್ಪೃಶ್ಯರಿದ್ದರು. ಇಬ್ಬರು ಬ್ರಾಹ್ಮಣರು, ಉಳಿದವರು ಬ್ರಾಹ್ಮಣೇತರರಾಗಿರುತ್ತಿದ್ದರು. ಈ ಎಲ್ಲಾ ಬೆಳವಣಿಗೆಯನ್ನು ಗಮನಿಸಿದ ಸರ್ಕಾರವು ಅಸ್ಪೃಶ್ಯರ ಏಳಿಗೆಗೆ ಶಾಸನಗಳ ಮೂಲಕ ಸೌಲಭ್ಯಗಳನ್ನು ಒದಗಿಸಲು ಮುಂದಾಯಿತು. ನಾಲ್ವಡಿ ಕೃಷ್ಣರಾಜರ ಈ ಎಲ್ಲಾ ಸಾಧನೆಯಲ್ಲಿ ಅವರ ಅಧೀನದಲ್ಲಿ ದಿವಾನರಾಗಿ ಕಾರ್ಯನಿರ್ವಹಿಸಿದ ಜನಪರ ಚಿಂತನೆಯ ಸರ್ ಮಿರ್ಜಾ ಇಸ್ಮಾಯಿಲ್, ಸರ್ ಕಾಂತರಾಜ ಅರಸ್ ಅವರ ಅಪರಿಮಿತ ಶ್ರಮ ಇರುವುದನ್ನು ತಳ್ಳಿಹಾಕುವಂತಿಲ್ಲ.

ಸಂಶೋಧನೆಯಿಂದ ಕಂಡುಕೊಂಡ ಫಲಿತಗಳು

೧. ಕರ್ನಾಟಕ ಚರಿತ್ರೆಯಲ್ಲಿ ಮೈಸೂರು ಚರಿತ್ರೆಗೆ ಸಾಂಸ್ಕೃತಿಕವಾಗಿ ಯಾವ ಯಾವ ಪ್ರಾಮುಖ್ಯತೆ ದೊರಕಿತು ಎಂಬ ಸಾಂಸ್ಕೃತಿಕ ಹಿನ್ನೆಲೆಯ ಚರಿತ್ರೆಯನ್ನು ವಸ್ತುನಿಷ್ಠವಾಗಿ ನೋಡಿರುವುದು ನನ್ನ ಅಧ್ಯಯನ ಫಲಿತವಾಗಿದೆ.

೨. ವಿಜಯನಗರ ಪೂರ್ವದಲ್ಲಿ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿದ್ದ ಮೈಸೂರು ಸಂಸ್ಥಾನದ ಗ್ರಾಮಾಡಳಿತ, ವಿಜಯನಗರ ಪತನನಂತರ ಮೈಸೂರು ಸಂಸ್ಥಾನಕ್ಕೆ ಇಲ್ಲಿನ ವೈದಿಕರು(ಅಗ್ರಹಾರ ವಾಸಿಗಳು) ಹೆಚ್ಚಿನ ಸಂಖ್ಯೆಯಲ್ಲಿ ಫಲಾಯನ ಮಾಡಿದ ನಂತರ ಉಂಟಾದ ಗ್ರಾಮಾಡಳಿತದಲ್ಲಿ ದಲಿತ ಜನಾಂಗದಲ್ಲಾದ ಆಡಳಿತಾತ್ಮಕ ಪಲ್ಲಟಗಳನ್ನು ಚಾರಿತ್ರಿಕ ಮತ್ತು ವಸ್ತುನಿಷ್ಠವಾಗಿ ಚರ್ಚಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೩. ಹೈದರ್ ಮತ್ತು ಟಿಪ್ಪು ಆಳ್ವಿಕೆ ಕಾಲದಲ್ಲಿ ದಲಿತ ಜನಾಂಗದಲ್ಲಾದ ಆರ್ಥಿಕ, ಸಾಮಾಜಿಕ ಹಾಗೂ ಆಡಳಿತಾತ್ಮಕ ಬದಲಾವಣೆಗಳನ್ನು ಚರ್ಚಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೪. ಈ ಮೇಲಿನ ವಿಷಯಗಳಿಗೆ ಪ್ರಾಥಮಿಕ ಆಕರಗಳ ಜೊತೆಗೆ ಹೆಚ್ಚಿನ ಪ್ರಮಾಣದ ಮೌಖಿಕ ಆಕರಗಳನ್ನು ಬಳಸಿಕೊಂಡಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೫. ಮೈಸೂರು ಸಂಸ್ಥಾನದ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ಇಂದಿಗೂ ಜಾರಿಯಲ್ಲಿರುವ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯ ಕಸುಬು ಮತ್ತು ಆ ಕಸುಬಿನ ಆಧಾರದ ಮೇಲೆ ನಿರ್ಮಾಣಗೊಂಡ ಗ್ರಾಮಾಡಳಿತ ಚರಿತ್ರೆಯನ್ನು ವಸ್ತುನಿಷ್ಟವಾಗಿ ಚರ್ಚಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೬. ಮೈಸೂರು ಸಂಸ್ಥಾನದಲ್ಲಿ ದಲಿತ ಜನಾಂಗದವರಿಗೆ ಕೃಷಿ ಭೂಹಂಚಿಕೆ ಅದರ ನಿರ್ವಹಣೆ ಹಾಗೂ ಮತಮಾನ್ಯಗಳೊಂದಿಗೆ ಈ ಭೂಒಡೆಯರ ಸಂಬಂಧಗಳ ಕುರಿತು ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯಿಂದ ಚರ್ಚಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೭. ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದ ದಲಿತ ಜನಾಂಗದವರ "ಗಡಿಮನೆ", "ಕಟ್ಟೆಮನೆ", ನ್ಯಾಯ ಪದ್ಧತಿ ಮತ್ತು ಫಲಿತಗಳನ್ನು ಚರ್ಚಿಸಿರುವುದರ ಜೊತೆಗೆ

ಇದಕ್ಕೆ ಸ್ಪೃಶ್ಯ ಸಮಾಜದವರ ನ್ಯಾಯ ನೀತಿಗಳ ಏರುವಿಕೆಯನ್ನು ಕ್ಷೇತ್ರಕಾರ್ಯದ ಅಂಶಗಳೊಂದಿಗೆ ಸಮೀಕರಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೮. ಭಾರತದಲ್ಲೇ ಪ್ರಥಮವಾಗಿ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಸ್ಥಾಪನೆಗೊಂಡ ಪ್ರಜಾ ಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧೇಯಕ ಸಭೆಯಲ್ಲಿ ದಲಿತ ವರ್ಗದವರ ಆಡಳಿತಾತ್ಮಕ ಕ್ರಮಗಳನ್ನು ಚರ್ಚಿಸಲಾಗಿದೆ.

೯. ಮೈಸೂರು ಸಂಸ್ಥಾನದಲ್ಲಿ ಕಂದಾಯ ವಸೂಲಿ, ಕೆರೆ ಮತ್ತು ನದಿ ನೀರಿಗೆ ಸಂಬಂಧಪಟ್ಟಂತೆ ದಲಿತರು ಅನುಸರಿಸುತ್ತಿದ್ದ ಪಾರಂಪರಿಕ ಆಡಳಿತ ವ್ಯವಸ್ಥೆಯನ್ನು ಚಾರಿತ್ರಿಕ ದೃಷ್ಟಿಕೋನದಲ್ಲಿ ವಿಶ್ಲೇಷಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧೦. ಮೈಸೂರು ಸಂಸ್ಥಾನದಲ್ಲಿ ಪಾರಂಪರಿಕವಾಗಿ ನಡೆದು ಬರುತ್ತಿದ್ದ ಗ್ರಾಮದೇವತೆಗಳ ಹಬ್ಬ, ಉತ್ಸವ ಮತ್ತು ರಥೋತ್ಸವ ಕಾರ್ಯಗಳಲ್ಲಿ ದಲಿತ ಜನಾಂಗ ಅನುಸರಿಸಬೇಕಾದ ಆಡಳಿತದ ವಿವಿಧ ಮಜಲುಗಳನ್ನು ಸಾಮಾಜಿಕ ಸಂರಚನೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೧೧. ಮೈಸೂರು ಸಂಸ್ಥಾನವು ಕಾಲಕಾಲಕ್ಕೆ ಜಾರಿಗೆ ತಂದ ಅಮಾನವೀಯ ಆಚರಣೆಗಳ ನಿರ್ಮೂಲನೆ ಮತ್ತು ಶೈಕ್ಷಣಿಕ ಕ್ಷೇತ್ರದ ಪ್ರೋತ್ಸಾಹದಿಂದಾಗಿ ಉಂಟಾದ ಮೂಲ ಆಡಳಿತದ ಜಾಗೃತಿಯ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿರುವುದು ಬಹುಮುಖ್ಯ ಫಲಿತವಾಗಿದೆ.

೧೨. ಆಧುನಿಕ ಮೈಸೂರು ಸಂಸ್ಥಾನದಲ್ಲಿ ಶತಮಾನಗಳಿಂದ ಒಪ್ಪಿತವಾಗಿದ್ದ ದೇವಾಲಯಗಳಿಗೆ ದಲಿತರ ಪ್ರವೇಶ ಕುರಿತು ಅಲಿಖಿತ ನಿರ್ಬಂಧವನ್ನು ಹಾಗೂ ಸಾಮಾಜಿಕ ಸ್ಥಳಗಳಾದ ಹೋಟೆಲ್, ಕೆರೆ, ಬಾವಿಗಳಲ್ಲಿ ನೀರನ್ನು ಮುಟ್ಟಬಾರದು ಎಂಬ ಕಾನೂನು ಜೊತೆಗೆ ಸವರ್ಣೀಯರ ಮುಖ್ಯ ರಸ್ತೆಗಳಲ್ಲಿ ಓಡಾಡಲು ನಿರ್ಬಂಧವಿದ್ದಂತಹ ಸ್ಪೃಶ್ಯ ವರ್ಗದ ಅಲಿಖಿತ ಸಂವಿಧಾನವನ್ನು ಕಾನೂನಾತ್ಮಕವಾಗಿ ತಡೆ ಹಿಡಿದಾಗ ಗ್ರಾಮೀಣ ಪ್ರದೇಶದ ದಲಿತ ಜನಾಂಗದಲ್ಲಾದ ಆಡಳಿತಾತ್ಮಕ ಜಾಗೃತಿ ಮತ್ತು ಪಲ್ಲಟವನ್ನು ಅಧ್ಯಯನದಲ್ಲಿ ಸೂಕ್ಷ್ಮವಾಗಿ ಪರಿಗಣಿಸಲಾಗಿದೆ.

೧೩. ಮೈಸೂರು ಸಂಸ್ಥಾನವು ಗ್ರಾಮಾಡಳಿತದಲ್ಲಿ ದಲಿತರನ್ನು ತೊಡಗಿಸಿಕೊಳ್ಳಲು ಪರಿಸರ ನೈರ್ಮಲ್ಯ, ಆರೋಗ್ಯ, ಶಿಕ್ಷಣ ಇವುಗಳ ಅಭಿವೃದ್ಧಿಯ ಜೊತೆ ಗ್ರಾಮೀಣಾಭಿವೃದ್ಧಿಗೆ ಕೊಟ್ಟಂತಹ ಪ್ರೋತ್ಸಾಹಗಳಿಂದಾದ ಗ್ರಾಮಾಡಳಿತದಲ್ಲಿ ದಲಿತರ ಪಲ್ಲಟಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

೧೪. ಸಂಸ್ಥಾನದಲ್ಲಿ ಅಸ್ಪೃಶ್ಯರಿಗೆ ೧೮೯೪ರ ಅಧಿನಿಯಮದಂತೆ ಭೂಸ್ವಾಧೀನ ಪ್ರಕ್ರಿಯೆ ನಂತರ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ಉಂಟಾದ ಆಡಳಿತಾತ್ಮಕ ಅಂಶಗಳನ್ನು ಸಮಕಾಲೀನ

ಸಂದರ್ಭದೊಂದಿಗೆ ಹೋಲಿಸಿ ಇಂದಿನ ಭೂಸುಧಾರಣೆಯ ಪ್ರಕ್ರಿಯೆ ಹಾಗು ತದನಂತರ ಇದರಿಂದಾದ ಪರಿಣಾಮಗಳೊಂದಿಗೆ ಸಮೀಕರಿಸಲಾಗಿದೆ.

೧೫. ಮೈಸೂರು ಸಂಸ್ಥಾನದಲ್ಲಿ ದಲಿತ ಜನಾಂಗದ(ಅಸ್ಪೃಶ್ಯರ)ಲ್ಲಿರುವ ಎಡ-ಬಲ(ಹೊಲೆಯ-ಮಾದಿಗ) ಪಂಗಡವನ್ನು ಮೂಲನಿವಾಸಿಗಳಿಗೆ ಹೆಸರಾದ ಆದಿಕರ್ನಾಟಕ ಮತ್ತು ಆದಿದ್ರಾವಿಡ ಎಂಬ ಹೆಸರಿನಿಂದ ಕರೆದ ಸಾಂದರ್ಭಿಕ ವಿಶ್ಲೇಷಣೆಯನ್ನು ಮೂಲ ದಾಖಲೆಗಳೊಂದಿಗೆ ಮಾಹಿತಿ ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೧೬. ಮೈಸೂರು ಸಂಸ್ಥಾನದಲ್ಲಿ ದಲಿತ ಜನಾಂಗದವರ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪ್ರಗತಿಗೆ ಶ್ರಮಿಸಿದ ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ವರ್ಗದವರ ಪ್ರೋತ್ಸಾಹವನ್ನು ಸಾಮಾಜಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧೭. ಮೈಸೂರು ಸಂಸ್ಥಾನದಲ್ಲಿ ಶೈವ(ಮಲೆಮಾದಪ್ಪನ ಪರಂಪರೆ), ವೈಷ್ಣವ(ಮಂಟೇಸ್ವಾಮಿ ಪರಂಪರೆ) ಹಿನ್ನೆಲೆಯಲ್ಲಿ ರಚನೆಗೊಂಡ ಗ್ರಾಮಾಡಳಿತ ವ್ಯವಸ್ಥೆಗಳನ್ನು ಅಧ್ಯಯನಕ್ಕೆ ಒಳಪಡಿಸಿರುವುದು ಈ ಹಂತದಲ್ಲಿ ಪ್ರಥಮ ಪ್ರಯತ್ನವಾಗಿದೆ.

೧೮. ಮೈಸೂರು ಸಂಸ್ಥಾನದಲ್ಲಿ ದಲಿತ ಜನಾಂಗವು ವೈದಿಕರ ಮತ್ತು ಸ್ಪೃಶ್ಯ ಸಮಾಜದವರ ಸಾಮಾಜಿಕ, ಧಾರ್ಮಿಕ ಹಿನ್ನೆಲೆಯ ಆಡಳಿತಾತ್ಮಕ ತತ್ವಗಳಿಂದ ಪಾಲನೆ ಮಾಡಬೇಕಾಗಿದ್ದ ಅಮಾನವೀಯ ಆಚರಣೆಗಳನ್ನು ದಲಿತ ಜನಾಂಗದ ಸಾಮಾಜಿಕ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೧೯. ಕೃಷಿ ಮತ್ತು ಗೃಹ ಕೈಗಾರಿಕೆಗಳ ಆಧಾರದಲ್ಲಿ ಮೈಸೂರು ಸಂಸ್ಥಾನದಲ್ಲಿ ದಲಿತ ಜನಾಂಗ ಪಾಲಿಸಲೇಬೇಕಾಗಿದ್ದ ಆಡಳಿತಾತ್ಮಕ ವಾದ-ವಿವಾದ ಶ್ರೇಣೀಕೃತ ಉದ್ದೇಶಗಳನ್ನು ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೨೦. ಈ ಎಲ್ಲಾ ಅಧ್ಯಯನಗಳಿಗೂ ಪ್ರಶ್ನಾವಳಿಗಳ ಮೂಲಕ ಮಾಹಿತಿ ಸಂಗ್ರಹ ಮಾಡಿ ಮೂಲಪ್ರಾಥಮಿಕ ಆಕರಗಳೊಂದಿಗೆ ಅಧ್ಯಯನ ಕೈಗೊಂಡಿರುವುದು ಹಾಗೂ ಇದಕ್ಕೆ ಪೂರಕವಾದ, ಮಹತ್ವವಾದ ಅಪ್ರಕಟಿತ ದಾಖಲೆಗಳನ್ನು ಬೆಂಗಳೂರು, ಮೈಸೂರು, ಮದ್ರಾಸ್‌ಗಳಲ್ಲಿರುವ ಪತ್ರಾಗಾರ ಇಲಾಖೆಗಳಲ್ಲಿ ಪ್ರಥಮವಾಗಿ ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೨೧. ಈ ಅಧ್ಯಯನದಲ್ಲಿ ಪ್ರಕಟಿತ ದ್ವಿತೀಯ ಮಾದರಿಯ ಆಕರಗಳ ಪೂರಕವಾಗಿದ್ದರೂ ಸಹ ಸಂದರ್ಶನಾಧಾರಿತ ಮತ್ತು ಕ್ಷೇತ್ರಕಾರ್ಯ ಆಧಾರಿತ ಮಾಹಿತಿಗಳೇ ಹೆಚ್ಚಿನ ಪ್ರಮಾಣದಲ್ಲಿ ಚರ್ಚೆಗೆ ಎಡೆ ಮಾಡಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೨೨.ಮೈಸೂರು ಸಂಸ್ಥಾನದ ಗ್ರಾಮಾಡಳಿತದಲ್ಲಿ ದಲಿತರು : ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ(೧೮೮೧-೧೯೪೭) ಎಂಬ ವಿಷಯಕ್ಕೆ ಸಂಬಂಧಿಸಿದಂತೆ ನಾನು ಕೈಗೊಂಡ ಈ ಅಧ್ಯಯನವು ನಾನು ಅಧ್ಯಯನಕ್ಕೆ ಹಾಕಿಕೊಂಡ ವ್ಯಾಪ್ತಿ ಮತ್ತು ಚೌಕಟ್ಟಿನೊಳಗೆಯೇ ಸಿದ್ಧಗೊಂಡಿದೆ. ಆದರೆ ಇದರಾಚೆಗೂ ವಿವಿಧ ಸ್ಥರಗಳಲ್ಲಿ ಪ್ರಸ್ತುತ ವಿಷಯದ ಅಧ್ಯಯನ ವಿಸ್ತೃತಗೊಳಿಸುವ ಅವಶ್ಯಕತೆ ಇದ್ದೇ ಇದೆ. ಇದು ನನ್ನ ಅಧ್ಯಯನದ ಮಿತಿ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅನುಬಂಧಗಳು

೧. ಸಂದರ್ಶನಗಳು

೨. ಪರಾಮರ್ಶನ ಗ್ರಂಥಗಳು

ಸಂದರ್ಶನಗಳು

ಸಂದರ್ಶದ ದಿನಾಂಕ	:	28-04-2018
ಹೆಸರು	:	ಚಿಕ್ಕಮಾದಯ್ಯ
ವಯಸ್ಸು	:	76
ಲಿಂಗ	:	ಗಂಡು
ಉದ್ಯೋಗ	:	ವ್ಯವಸಾಯ/ಕೂಲಿ
ವಿಳಾಸ	:	ಧರ್ಮಪುರ, ಬೆಳ್ಳಿಕೆರೆ (ಹೋಬಳಿ), ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ.

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

ನಾನೇ ತೀರ್ಮಾನ ತೆಗೆದುಕೊಳ್ಳುತ್ತೇನೆ.

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

ಭೇದ ಭಾವ ಏನಿಲ್ಲಾ ಅವರು ನಮ್ಮಂತೆ

3. **ಬಹುಪತ್ನಿತ್ವ ಇದೆಯೇ(✓), ಇಲ್ಲವೇ(   ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಕೆಲವೊಬ್ಬರು ಮಾಡಿಕೊಂಡಿದ್ದಾರೆ.

4. ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(   ) ಗಂಡು(   )

ಅವರಿಗೆ ಬುದ್ಧಿ ಬಂದ ಮೇಲೆ ಅವರ ಮದುವೆ ಮಾಡ್ಕೊತ್ತಾರೆ

5. ನಿಮ್ಮ ಕುಟುಂಬದ ವರಮಾನ ಎಷ್ಟು? ನಿಮ್ಮ ಕುಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?

ವರ್ಷಕ್ಕೆ 30 ರಿಂದ 50 ಸಾವಿರ, ದಿನಗೂಲಿ

II. ಸುತ್ತ ಮುತ್ತಲಿನ ಜನರೊಡನೆ ನಿಮ್ಮ ಸಂಬಂಧ ಹೇಗಿದೆ?

ನಮ್ಮ ನಮ್ಮವರ ನಡುವೆ ಚೆನ್ನಾಗಿದ್ದೇವೆ, ಬೇರೆ ಜಾತಿ ಮಾಡ್ತಾರೆ(ಅಸ್ಪೃಶ್ಯತೆ ಆಚರಿಸುತ್ತಾರೆ)

1. ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ( )

ಹೌದು

2. ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?

ಆಹಾರವೇ(✓) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ (✓) ನೀವು ಬದುಕುವ ರೀತಿ ನೀತಿಯೇ(✓) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

3. ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ನಮ್ಮೂರಿನ ಮೇಲ್ಜಾತಿಯ ಜನ) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)

ಹಿಂದೆಲ್ಲ ನಾವೆಲ್ಲ ಜೀತ ಮಾಡುತ್ತಿದ್ದೇವು. ಈಗ ಇಲ್ಲಿ ಅಷ್ಟು ಇಷ್ಟು ಭೂಮಿಯಲ್ಲಿ ವ್ಯವಸಾಯ ಮಾಡ್ಕೊಂಡು ಬದುಕುತ್ತಿದ್ದೇವೆ.

4. ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ( )

ಹಿಂದೆ ನಾವೆಲ್ಲ ಜೀತಕ್ಕೆ ಇದ್ದು, ಹಾಗೆ ಇಲ್ಲಿ ಎಸ್ಟೇಟ್, ಇಟಿಗೆ ಫ್ಯಾಕ್ಟರಿ ಅವರಿಗೆ ಸಂಸಾರವೇ ಹೋಗಿ ದುಡಿಯುತ್ತಾರೆ.

5. ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?

ಬಡತನ ಸ್ವಾಮಿ

6. ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)

ಎರಡು ಮೂರು ವರ್ಷದ ಹಿಂದೆ ಆಯ್ತು, ಆ ದಿನ ನಮ್ಮ ಜನರ ಎಣ್ಣೆದ್ದುಗ್ಗೆ ಫೋನ್ ಮಾಡಿ ಅಂಗೆ-ಇಂಗೆ ಅಂದ್ರಂತೆ ಅವಾಗ ಕೇಳಕ್ಕೆ ಹೋದಾಗ ಓಡ್ಡಾಟ ಆಯ್ತು. ಅದಕ್ಕೆ ಅವರೆಲ್ಲ ಅವರ ಮನೆಗೆ ನುಗ್ಗಿದ್ರು, ಈ ಅಂಬೇಡ್ಕರ್ ಕಡೆಯವರು ಬಂದಿದ್ರು,

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

ನಮ್ಮ ಜಾತಿ ಮತ್ತು ಬಡತನ

ನಮಗೆ ಕಾಸು ಇಲ್ಲ. ಅದಕ್ಕೆ ಜೀತಗೀತ ಮಾಡ್ಕೊಂಡು ಬದುಕುತ್ತಾ ಇದ್ದೀವಿ.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿ

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

ಯಲ್ರೂ ಇಲ್ಲೆ ಇದೀವಿ ನಮ್ಮ ತಮ್ಮನ ಸಂಸಾರ ಎಸ್ಟೇಟ್‌ಗೆ ಹೋಗವ್ರೆ

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ(✓) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

ಜೀತಗಾರಿಕೆ. ಇಂದಿಗೂ ಹಾಗೆ ಮುಂದುವರಿಯುತ್ತಿದ್ದ ಅದೇ ರೂಪ ಬದಲಾಗಿದೆ. ಅಷ್ಟೇ, ಮೇಲ್ಜಾತಿಯ ಜನರು.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು( ) ಇಲ್ಲ(✓) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

ನಮ್ಮ ಪಾರಂಪರಿಕ ವೃತ್ತಿ ಬಿಟ್ಟ ಮೇಲೆ ನಮಗೆ ಸಿಕ್ಕಿದ್ದು ಜೀತಗಾರಿಕೆ. ಸ್ಥಳೀಯ ಗೌಡ್ರು, ಪಟೇಲರು, ಶೆಟ್ರು, ಲಿಂಗಾಯಿತರು.

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

ಅದರ ಬಗ್ಗೆ ಗೊತ್ತೆ ಇಲ್ಲ. ಯಾರಾದ್ರು ಬತ್ತರೆ ಅವರು ಹೇಳಿದಾಗ ಹೊಯ್ತೀವಿ. 100, 200 ಕೊಡ್ತಾರೆ.

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

20 ಕುಂಟೆ ಅದೆ, ಹಿಂದಿನಮ್ಮಪ್ಪನ ಕಾಲ್ದೇಲೆ ನಮ್ಮಪ್ಪನಿಗೆ ಸಿಕ್ಕಿತಂತೆ

6. **ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

ವ್ಯವಸಾಯ ಮಾಡಿ ದಿನ ಒಪ್ಪತ್ತು ನೆಮ್ಮದಿಯಾಗಿ ಊಟ ಮಾಡ್ತಾ ಇದ್ದೇ

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ (✓), ಭೂಮಾಲಿಕರು(✓), ಮೇಲ್ಜಾತಿಯವರು(✓) ಅದಕ್ಕೆ ಅವರು ಕೊಟ್ಟ ಕಾರಣವೇನು?**

ಸರ್ಕಾರ ಅರಣ್ಯ ಭೂಮಿ ಅಂತೇಳಿ ಇತ್ತಕೊಂಡಿತು. ಭೂಮಾಲಿಕರು ಅಷ್ಟೋ ಇಷ್ಟು ಕಾಸುಕೊಟ್ಟು, ನಾವು ಅವರತ್ರ ಸಾಲ ಮಾಡಿದ್ದವಲ್ಲ, ಅದೆಲ್ಲಾ ಸೆರ್‍ಕೊಂಡು ಕಿತ್ಕೊಂಡ್ರು

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

ನಾವು ಓದಿಲ್ಲ. ನಮ್ಮ ಮಕ್ಕಳನ್ನು ಶಾಲೆಗೆ ಕಳಸ್ತಾ ಇದೀವಿ. ನಮ್ಮ ಊರಲ್ಲಿ ಶಾಲೆ ಇರುವರೆಗೆ ಓದಿಸ್ತೀವಿ. ಆಮೇಲೆ ಊರಿಂದ ಹೋಗಬೇಕು ಅವಾಗ ಕಲ್ಸೋಕ್ಕಾಗಲ್ಲ

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು( ) ಗಂಡು( )**

ಸರಿಯಾಗಿ ಗೊತ್ತಿಲ್ಲ. ಹೀಗಾಗಿ ಅಲ್ಲೊಬ್ರು ಇಲ್ಲುಬ್ರು ಇರಬೇಕು.

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು( ) ಇಲ್ಲ(✓) ಯಾವ ನೌಕರಿ.**

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ( ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

ಓದಿಕೊಂಡ್ರ ಅಷ್ಟೋ ಇಷ್ಟು ಬುದ್ಧಿ ಬತ್ತದೆ. ನಾಕಾರು ಜನರ ತರ ಮಾತಾಡಂಗೆ ಆಗುತ್ತೆ. ಚೆನ್ನಾಗಿ ಓದ್ಕೊಳ್ಳಿಲಿ ಅದೇ ತಾನೇ ಬೇಕಾಗಿರುವುದು ಇವತ್ತಿನ ಕಾಲಕ್ಕೆ.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ( )**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ( ) ಕಳುಹಿಸದಿದ್ದರೆ ಕಾರಣವೇನು?**

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

ಒಳ್ಳೆ ವ್ಯಕ್ತಿಗಳಾಗಿ ಅವರ ಹಿಟ್ಟು ಅವರು ಹುಟ್ಟಿಸಿಕೊಂಡು ಬದುಕುವಂತಾಗಬೇಕು.

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು(✓) ಇಲ್ಲ ( )**

8. **ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?**

ಗೊತ್ತಿಲ್ಲ ಇವತ್ತಿಗೆ ಓದಿರೊರದೆ ಅಲ್ಪಸ್ವಾಮಿ, ಎಲ್ಲ ವಸಿ ಮಾತುಕತೆ ಕಲಿಕೊತ್ತಾರೆ.

9. **ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?**

ಓಟು ಟೈಮಲ್ಲಿ ನಿಮ್ಮ ಜಾತಿಗೆ ಬಂದರೆ ಅಂತರೆ ಅಷ್ಟೆ. ಅದನ್ನು ಬಿಟ್ರೆ ಅವಾನ ಆವಾಗ ರೇಷನ್‌ಕಾರ್ಡ್ ಫೋಟಾ ಇಸ್ಕೊಂಡು ಅದು ಇದು ಕೊಡ್ತರೆ ಅಷ್ಟೆ.

V. **ನಿಮ್ಮ ಆಚರಣೆಗಳ ವಿಶೇಷತೆಗಳೇನು?**

ಇಗೆಲ್ಲಾ ಇಲ್ಲ ಸ್ವಾಮಿ ಹಿಂದೆ ನಮ್ಮ ಅಪ್ಪನ ಕಾಲದ್ದಲಿ ಮಾಡ್ತಿಇದ್ವಿ ಇಗ ಬದುಕೊದೆ ಸಾಕಾಗಿದೆ.

1. **ನಿಮ್ಮ ಮನೆ ದೇವರು ಯಾವುದು?**

ಗಂಡು ದೇವರು(ಚೌಡಮ್ಮ) ಹೆಣ್ಣು ದೇವರು( )

2. **ಆ ದೇವರ ಮೂಲ ಸ್ಥಳ ಯಾವುದು?**

ಆದಿಚುಂಚನಗಿರಿ, ಸಿಕಂದೂರು

3. **ನಿಮ್ಮ ಒಕ್ಕಲು ಯಾವುದು?**

ಚುಂಚನಗಿರಿ ಒಕ್ಕಲು

4. **ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?**

ಊರೋರು ಮಾಡುವಲ್ಲಿ ಹಬ್ಬನು ಮಾಡ್ತೀವಿ

5. **ನಿಮ್ಮ ಸಮುದಾಯ (ಜಾತಿ)ದವರೇ ಪ್ರತ್ಯೇಕವಾಗಿ ಆಚರಿಸುವ ಹಬ್ಬ ಇದೆಯಾ? ಹೌದು ( ) ಇಲ್ಲ(✓)ಅದು ಯಾವುದು?**

6. **ನಿಮ್ಮ ಕುಲದ ಹೆಸರು (ಆಲದ ಕುಲ)**

ಬೆಳ್ಳಿ ಕುಲ

VI. **ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು(✓) ಇಲ್ಲ( )**

1. **ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?**

2. **ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು(✓) ಇಲ್ಲ( ) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?**

3. **ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು(✓) ಇಲ್ಲ( ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು(✓) ಇಲ್ಲ( )**

ಹೌದು ಸ್ವಾಮಿ ತುಂಬಾ

4. **ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ(✓) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?**

ಯಾಕ್ ಹೇಳ್ಬೇಕುಸ್ವಾಮಿ ನಮ್ಮ ಜನದಲ್ಲಿ ಗೆದ್ದಿರೋರಿಗೆ ಗೊತ್ತಿದ್ರಿ ತಾನೇ ನಮಗೆ ಹಾಳಾರು ಅವರಿಗೆ ಗೊತ್ತಿಲ್ಲ, ನಮ್ಗು ಗೊತ್ತಿಲ್ಲ.

5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು( ) ಇಲ್ಲ( ).

ಈ ಹೆಕ್ಳೂ ಯಾವುದೋ ಸಂಘ ಪಂಗ ಅಂತ ಮಾಡ್ಕೊಂಡವೇ. ಪರವಾಗಿಲ್ಲ ಈ ಸಂಘ ಬಂದ ಮೇಲೆ ನಮಗೂ ಜನ ಹೆದ್ರೂಕತ್ತಾರೆ.

ಸಂದರ್ಶದ ದಿನಾಂಕ	:	04-05-2018
ಹೆಸರು	:	ಶಿವಮಾದಯ್ಯ
ವಯಸ್ಸು	:	60
ಲಿಂಗ	:	ಗಂಡು
ಉದ್ಯೋಗ	:	ವ್ಯವಸಾಯ
ವಿಳಾಸ	:	ದೊಡ್ಡ ಬೆಟ್ಟಹಳ್ಳಿ (ಗ್ರಾಮ), ನಾರಾಯಣಪುರ (ಪೋಸ್ಟ್) ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಅವಿಭಕ್ತ ಕುಟುಂಬ

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

   ಸದ್ಯಕ್ಕೆ ನಾನೇ

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

   ಎಲ್ಲರಂತೆ ಅವಳುವೇ

3. **ಬಹುಪತ್ನಿತ್ವ ಇದೆಯೇ(✓), ಇಲ್ಲವೇ( ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

   ಕೆಲವು ಕಡೆ ಇದೆ.

4. **ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(18) ಗಂಡು(24)**

5. **ನಿಮ್ಮ ಕುಟುಂಬದ ವರಮಾನ ಎಷ್ಟು? ನಿಮ್ಮ ಕುಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?**

   ಕೂಲಿ ಕೆಲಸ ಮಾಡ್ತೀವಿ.

II. ಸುತ್ತ ಮುತ್ತಲಿನ ಜನರೋಡನೆ ನಿಮ್ಮ ಸಂಬಂಧ ಹೇಗಿದೆ?

ಚೆನ್ನಾಗಿದೆ

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ(   )**

ಹೌದು

2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

ಆಹಾರವೇ(✓) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ (✓) ನೀವು ಬದುಕುವ ರೀತಿ ನೀತಿಯೇ(✓) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

ನಮ್ಮ ಜನ ಬಡೂರಲ್ಲಾ ಬಟ್ಟೆ ಬರಿ ನೀಟ ಆಗಿ ಇರಲಿಲ್ಲ. ಪಾಪ ಎನ್ ಮಾಡೋನು

3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಮೇಲ್ಜಾತಿಯ ಎಲ್ಲರೂ) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)**

ನಮ್ಮ ಜನ ಎಲ್ಲಾ ಅವರತ್ರಾನೆ ಕೂಲಿನಾಲಿ ಮಾಡೋದು

4. **ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ(   )**

5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

ಇನ್ನೇನಿದೆ ಬಡತನವೇ, ಊಟದ ಸಮಸ್ಯೆ, ಊಟಕ್ಕಾಗಿ ಜೀತಕ್ಕೆ ಸೇರಿಕೊಂಡಿದ್ದಾರೆ.

6. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

ಏನು ಅಂದ್ರೆ ಭೂಮಿ ಇಲ್ಲ, ಬಡತನ, ಸವಲತ್ತು ಕೊಟ್ರೆ ಬದುಕುತ್ತೀವಿ.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿನಾಲಿ ಮಾಡ್ಕೊಂಡು ಬದುಕ್ತಾ ಇದ್ದೀವಿ

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

ನಾವೆಲ್ಲೂ ಹೋಗಿ ಮೊದ್ಲು ನಾನೇ ಎಸ್ಟೇಟ್‌ಲಿ ಕೆಲಸ ಮಾಡ್ತಾ ಇದ್ದೆ. ಈಗ ಊರಲ್ಲಿ ಇದ್ದೀನಿ ಎಲ್ಲರೂ ಇಲ್ಲೆ ಇದಾರೆ.

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ(✓) ಇಲ್ಲವಾ (   ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

ಯಾರಿಗೆ ಬೇಕಾಂಗಿಲ್ಲ. ಪಾರಂಪರಿಕ ಕುಲಕಸಬನ್ನು ಮಾಡಲು ಇವತ್ತು ಸಾಧ್ಯವಾಗಿದೆಯಾ. ಎಲ್ಲಾ ಪ್ಯಾಟೆ ಗೀಟೆ ನೋಡ್ಕೊಂಡವರೆ.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು( ) ಇಲ್ಲ(✓) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

ಕೂಲಿನಾಲಿ, ಆದೇ ಊರಗೌಡರ ಬಳಿ

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

ಸರ್ಕಾರ ಯೋಜನೆಗಳು ನಮಗೆ ತಲುಪುವ ಮೊದಲೇ ಯಾರ್‍ಯಾರೋ ತಿಂತಾವರೆ ಕೇಳೋರುಯಾರು, ನಮಗೆ ತಿಳುವಳಿಕೆ ಇಲ್ಲ.

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

ನಮ್ಮಪ್ಪನ ಕಾಲದಿಂದ

6. **ಭೂಮಿ ಇದ್ದರೆ ಸದ್ಬಳಿಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

ಮಾಮೂಲಿ ರಾಗಿ ಬೆಳಕ್ಕೋತೀವಿ, ನೀರುಗೀರು ವ್ಯವಸ್ಥೆ ಇತ್ತೀಚೆಗೆ ಮಾಡ್ಕೊಂಡಿದ್ದೀವಿ.

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ (✓), ಭೂಮಾಲಿಕರು(✓), ಮೇಲ್ಜಾತಿಯವರು( ) ಅದಕ್ಕೆ ಅವರು ಕೊಟ್ಟ ಕಾರಣವೇನು?**

ಕಾಡತ್ತಿರ ಸ್ವಲ್ಪ ನಮ್ ತಾತನ ಕಾಲದಿಂದ ಮಾಡ್ಕೊಂಡು ಬದುಕುತ್ತಾ ಇದ್ದೀವಿ. ಅದನ್ನ ಊರಗೌಡ್ರು ಸಾಲದ ನೆಪಕೊಟ್ಟು ಕಿತ್ಕೊಂಡ್ರು. ಇನ್ನು ಸಾಲಪಾಲ ಮಾಡಿದ್ವಲ್ಲ ಇನ್ನೂಳಿದುದ್ದು ಅವರ ಪಾಲಾಯಿತು.

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

ಪರವಾಗಿಲ್ಲ

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(12) ಗಂಡು(4)**

ಸರಿಯಾಗಿ ಗೊತ್ತಿಲ್ಲ. ಹೀಗಾಗಿ ಅಲ್ಲೊಬ್ರು ಇಲ್ಲುಬ್ರು ಇರಬೇಕು.

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು(✓) ಇಲ್ಲ( ) ಯಾವ ನೌಕರಿ.**

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ( ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

ನಮಗೆ ತಿನ್ನೊಕೆ ಅನ್ನ ಇರ್ಲಿಲ್ಲ. ಅಂತದರಲ್ಲಿ 8ನೇ ತರಗತಿವರೆಗೂ ಓದಿದ್ದೇವೆ. ನಮ್ಮ ಮಕ್ಕಳು ಓದಿಕೊಂಡು ಒಳ್ಳೊಳ್ಳೇ ಕೆಲಸ ತಗೋಬೇಕು. ಹತ್ತಾರು ಜನರಂತೆ ಅವರು ಆಗಬೇಕು.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ(,)**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ( ) ಕಳುಹಿಸದಿದ್ದರೆ ಕಾರಣವೇನು?**

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

   ಒಳ್ಳೆ ಕೆಲಸಕ್ಕೆ ಸೇರ್‍ಕೊಂಡು ಎಲ್ಲರಂತೆ ಬದುಕಬೇಕು.

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು(✓) ಇಲ್ಲ ( )**

8. **ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?**

   ಓದಿದೋರು ಬುದ್ದಿವಂತರಲ್ಲವೇ ನಾಲ್ಕು ಮಾತಾಡ್ತಾರೆ. ಕುಸಿ ಆಗುತ್ತೆ.

9. **ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?**

   ನಾವು ಗ್ರಾಮಪಂಚಾಯಿತಿ ಸದಸ್ಯರಾಗಿದ್ದರಿಮದ ಅಷ್ಟು ಇಷ್ಟು ಮಾಹಿತಿ ಇದೆ. ಆದರೆ ನಮಗೆ ಏನನ್ನು ದಕ್ಕಿಸಿಕೊಡುತ್ತಿಲ್ಲ.

V. **ನಿಮ್ಮ ಆಚರಣೆಗಳ ವಿಶೇಷತೆಗಳೇನು?**

ಅಂತಹ ವಿಶೇಷತೆ ಇನ್ನು ಇಲ್ಲ

1. **ನಿಮ್ಮ ಮನೆ ದೇವರು ಯಾವುದು?**

   ಗಂಡು ದೇವರು(ತಿರುಪತಿ ತಿಮ್ಮಪ್ಪ) ಹೆಣ್ಣು ದೇವರು(ಲಕ್ಷ್ಮಿದೇವಿ)

2. **ಆ ದೇವರ ಮೂಲ ಸ್ಥಳ ಯಾವುದು?**

   ಕಲ್ಲಳ್ಳಿ ಮತ್ತು ಸೋಲಿಗೇರಿ

3. **ನಿಮ್ಮ ಒಕ್ಕಲು ಯಾವುದು?**

   ಯಂಟ್ರೋಣ್‌ಸ್ವಾಮಿ ಒಕ್ಕಲು

4. **ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?**

ಊರಿನಲ್ಲಿ ಮಾಡುವ ಎಲ್ಲಾ ಹಬ್ಬ ಮಾಡ್ತೀವೆ.

5. **ನಿಮ್ಮ ಪಾರಂಪರಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದೀರಾ ಹೌದು (✓) ಇಲ್ಲ( ) ಅವು ಯಾವುವು? ಈ ಆಚರಣೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಕಾರಣವೇನು?**

   ಈಗ ಅದಕ್ಕೆಲ್ಲಾ ಬೆಲೆ ಎಲ್ಲಿದೆ ಸ್ವಾಮಿ

6. **ನಿಮ್ಮ ಕುಲದ ಹೆಸರು**

   ಚಿನ್ನದ ಕುಲ

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು(✓) ಇಲ್ಲ( )

1. **ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?**

2. **ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?**

   ನಮ್ಮ ಜನರನ್ನು ಹೀಗೆ ನಡೆಸಿಕೊಳ್ಳುತ್ತಾರೆ ಅಂತ ನಿಮಗೆ ಗೊತ್ತಿಲ್ಲ. ಅಲ್ಲೆಲ್ಲ ಕೆಲವರದ್ದೇ ದರ್ಬಾರು. ಇಲ್ಲಿ ಮೀಸಲಾತಿಯೇ ಬಂದಿಲ್ಲ.

3. **ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು( ) ಇಲ್ಲ( ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು( ) ಇಲ್ಲ( )**

   ಹಿಂದೊಂಮ್ಮೆ ಬಂದಿತ್ತಂತೆ

4. **ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ( ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?**

   ನಾವು ಪಂಚಾಯಿತಿಯ ಸದಸ್ಯರಾದ್ದರಿಂದ ಅಷ್ಟೋ ಇಷ್ಟು ತಿಳಿದಿದೆ.

5. **ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ( ).**

ಸಂದರ್ಶದ ದಿನಾಂಕ : 28-03-2017

ಹೆಸರು : ಮುನಿಯಪ್ಪ

ವಯಸ್ಸು : 32

ಲಿಂಗ : ಗಂಡು

ಉದ್ಯೋಗ : ವ್ಯವಸಾಯ/ಸಂಘಟನೆ

ವಿಳಾಸ : ಎಳೆಗೆಹಳ್ಳಿ ಕಾಲೋನಿ, ಮಾಡಬಾಳ ಹೋಬಳಿ, ಮಾಗಡಿ ತಾಲೂಕು, ರಾಮನಗರ ಜಿಲ್ಲೆ 562 112

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಅವಿಭಕ್ತ ಕುಟುಂಬ ಬೇರೆ ಬೇರೆಯೇ ವಾಸಿಸುತ್ತೇವೆ

1. ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?

ನಮ್ಮ ಅಪ್ಪ ಮೊದಲು ತೆಗೆದುಕೊಳ್ಳುತ್ತಿದ್ದರು. ಈಗ ನಾನೇ ತಗೊಂಡರು ಅವರ ಒಪ್ಪಿಗೆ ಬೇಕು.

2. ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?

ನಮಗೆಂಗೋ ಅವರಿಗೂ ಅಂಗೆನೇ

3. ಬಹುಪತ್ನಿತ್ವ ಇದೆಯೇ(   ), ಇಲ್ಲವೇ(✓) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನಮ್ಮಲ್ಲಿ ಇಲ್ಲ.

4. ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(16) ಗಂಡು(22)

ಹೆಣ್ಣಿಗೆ 16ರಿಂದ 17, ಗಂಡಿಗೆ 22 ರಿಂದ 25ರ ವರೆಗೆ

5. ನಿಮ್ಮ ಕುಟುಂಬದ ವರಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?

ವರ್ಷಕ್ಕೆ 25000, 30,000, ವ್ಯವಸಾಯ, ನಾವೆಲ್ಲ ಒಂದೇ ಕಡೆ ಇದಿವಲ್ಲ. ಜೊತೆಗೆ ಇರ್ತೀವಿ. ಹಬ್ಬ ಹರಿದಿನಗಳಲ್ಲಿ ಒಟ್ಟಿಗೆ ಮಾಡ್ತೀವಿ.

II. ಸುತ್ತ ಮುತ್ತಲಿನ ಜನರೋಡನೆ ನಿಮ್ಮ ಸಂಬಂಧ ಹೇಗಿದೆ?

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ(   )**
2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

   ಆಹಾರವೇ(✓) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ (   ) ನೀವು ಬದುಕುವ ರೀತಿ ನೀತಿಯೇ(✓) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?
3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಒಕ್ಕಲಿಗರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)**

   ನಾವು ಅವರ ಮನೆಗೆ ಕೂಲಿನಾಲಿಗೆ ಹೋಗ್ತೀವಿ. ಹಿಂದೆ ಇದ್ರಂತೆ ಹೀಗ ಇಲ್ಲ.
4. **ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ(   )**

   ಹಿಂದೆ ಇದ್ದ ಹಾಗೆ ಇಲ್ಲ. ದಿನ ಅವರ ಮನೆಗೆ ಕೂಲಿಗೆ ಹೋಗ್ತಾರೆ
5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

   ಬಡತನ ಮತ್ತೇನು ಇಲ್ಲ, ಭೂಮಿ ಇಲ್ಲ.
6. **ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)**

   ದಾಳಿ ಮಾಡಿಲ್ಲ. ನಾವು ಅವರ ಸಹವಾಸಕ್ಕೆ ಹೋಗೋದಿಲ್ಲ.
7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

   ಬಡತನ, ಶಿಕ್ಷಣ ಇಲ್ಲ.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿನಾಲಿ ಮಾಡಿಕೊಂಡು ಬದುಕುತ್ತಾ ಇದ್ದೀವಿ. ನಾನು ಆಫೀಸ್ ಈ ಆಫೀಸು ತಿರುಗುತ್ತಾ ಇದ್ದೀವಿ.

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

   ಎಲ್ಲರೂ ಇಲ್ಲಿ ಇರ್ತಿವಿ.

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ(✓) ಇಲ್ಲವಾ ( ) ಇಲ್ಲವೇ.**

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು( ) ಇಲ್ಲ(✓) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

   ಅದಕ್ಕೆ ಇನ್ನೊಬ್ಬರ ಮನೆಗೆ ಜೀತಕ್ಕೆ ಸೇರಿಕೊಳ್ಳುವಂತಾಯಿತು. ನಮಗೆ ಏನು ಗೊತ್ತು, ಏನು ಇಲ್ಲ, ಬುದ್ಧಿ ಇಲ್ಲ.

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

   ಯೋಜನೆಗಳೇನು ಸರ್ಕಾರ ಮಾಡುತ್ತಿದೆ. ಅದಕ್ಕೆ ಅದನ್ನು ಸಕಾರಗೊಳಿಸುವವರು ಸರಿಯಾಗಿಲ್ಲ.

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

   ನಮ್ಮ ಅಪ್ಪನ ಕಾಲದಲ್ಲಿ ಸ್ವಲ್ಪ ಕಾಡನ್ನು ಕಡೆದು ಮಾಡಿಕೊಂಡಿದ್ದರು. ಹೀಗ ಅದು ಹೋಗಿದೆ.

6. **ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

   ವ್ಯವಸಾಯ ಮಾಡಿಕೊಂಡು, ಸರ್ಕಾರದ ಸೌಲಭ್ಯ ಪಡೆಯಬಹುದಿತ್ತು.

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ (✓), ಭೂಮಾಲಿಕರು(✓), ಮೇಲ್ಜಾತಿಯವರು( ) ಅದಕ್ಕೆ ಅವರು ಕೊಟ್ಟ ಕಾರಣವೇನು?**

   ನಮ್ಮಪ್ಪ ಕುಡಿದು ಕುಡಿದು ಸಾಲ ಮಾಡಿದ್ದ. ಸಾಲಗಾರರು ಅದನ್ನು ಕಿತ್ತುಕೊಂಡಿದ್ದಾರೆ.

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

ಪರವಾಗಿಲ್ಲ

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(1) ಗಂಡು(2)**

   ಸರಿಯಾಗಿ ಗೊತ್ತಿಲ್ಲ. ಹೀಗಾಗಿ ಅಲ್ಲೊಬ್ರು ಇಲ್ಲುಬ್ರು ಇರಬೇಕು.

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು(   ) ಇಲ್ಲ(✓) ಯಾವ ನೌಕರಿ.**

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ(   ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

   ಅವರು ಕಲಿಸಿದ್ದಕ್ಕೆ ಒಳ್ಳೆ ಕೆಲಸಬೇಕು ಅನಿಸುತ್ತದೆ.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ(   )**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ(   ) ಕಳುಹಿಸದಿದ್ದರೆ ಕಾರಣವೇನು?**

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

   ಒಳ್ಳೆ ಕೆಲಸಕ್ಕೆ ಸೇರಿಕೋಬೇಕು, ಎಲ್ಲರಂತೆ ಕಾರುಗೀರು ತಗೋಬೇಕು.

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು(✓) ಇಲ್ಲ (   )**

   ಇದು ಇರಲಿ. ಇವತ್ತಿಗೆ ಆ ಎಲ್ಲ ಬೇಕಾಗಿಲ್ಲ. ಅವನ್ನ ನಂಬಿಕೊಂಡು ನಿಂತೆ ಹೊಟ್ಟೆಗಿರಲ್ಲ. ಕಾಲಕ್ಕೆ ತಕ್ಕಂತೆ ಬದಲಾಗಬೇಕು.

8. **ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?**

   ಶಿಕ್ಷಣವಾಗಬೇಕು. ವಿದ್ಯೆ ಕಲಿತವರು ಬುದ್ದಿವಂತರಲ್ಲವೆ.

9. **ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು(   ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?**

   ನಮ್ಮನ್ನು ಪರಿಶಿಷ್ಟ ಜಾರಿಗೆ ಸೇರಿಸಿದ್ದಾರೆ. ಅದರಲ್ಲಿ 50 ಜಾತಿಗಳು ಬರುತ್ತವೆ. ಇವು ಸಣ್ಣ ಸಮುದಾಯವಾದ್ದರಿಂದ ಬಹುಸಂಖ್ಯಾತರು ಇಡೀ ಮೀಸಲಾತಿಯನ್ನು ಪಡೆದುಕೊಳ್ಳುತ್ತಿದ್ದಾರೆ. ಇದು ಇರಲಿ.

V. **ನಿಮ್ಮ ಆಚರಣೆಗಳ ವಿಶೇಷತೆಗಳೇನು?**

1. **ನಿಮ್ಮ ಮನೆ ದೇವರು ಯಾವುದು?**

   ಗಂಡು ದೇವರು: ನಂಜುಂಡೇಶ್ವರ, ಹೆಣ್ಣು ದೇವರು: ಎಳಿಯಮ್ಮ, ಬರೆಯಮ್ಮ

2. **ಆ ದೇವರ ಮೂಲ ಸ್ಥಳ ಯಾವುದು?**

   ನಂಜನಗೂಡು

3. ನಿಮ್ಮ ಒಕ್ಕಲು ಯಾವುದು?

ನಂಜುಂಡೇಶ್ವರನ ಒಕ್ಕಲು

4. ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?

ಎಲ್ಲರು ಆಚರಿಸುವ ಹಬ್ಬಗಳನ್ನೆಲ್ಲ ಆಚರಿಸುತ್ತೇವೆ.

5. ನಿಮ್ಮ ಕುಲದ ಹೆಸರು (ಬೆಳ್ಳಿಕುಲ)

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು(✓) ಇಲ್ಲ( )

1. ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?
2. ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?
3. ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು( ) ಇಲ್ಲ( ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು( ) ಇಲ್ಲ( )
4. ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ(✓) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?

   ನಾನು ಸರ್ಕಾರಿ ಇಲಾಖೆಗಳ ಕಡೆ ಓಡಾಡುವುದರಿಂದ ಗೊತ್ತಾಯಿತು.
5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ( ).

ಸಂದರ್ಶದ ದಿನಾಂಕ : 29-03-2017

ಹೆಸರು : ಪಾರ್ವತಮ್ಮ

ವಯಸ್ಸು : 29

ಲಿಂಗ : ಹೆಣ್ಣು

ಉದ್ಯೋಗ : ಕೂಲಿ

ವಿಳಾಸ : ನಂ. 396, ಕೆಂಪೇಗೌಡ ರಸ್ತೆ, ಕುಣಿಗಲ್ ಪಟ್ಟಣ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಬೇರೆ ಬೇರೆಯಾಗಿದ್ದೀವಿ

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

   ನಮ್ಮ ಯಜಮಾನ್ರು

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

   ಎಲ್ಲಾದ್ರೆಲೂ ನನ್ನನ್ನು ಕೇಳ್ತಾರೆ. ಇಬ್ರು ದುಡಿತೀವಿ. ಕಾಸುಕರಿಮಣಿಯಲ್ಲ ನನ್ನ ಕೈಲೆ ಕೊಡ್ತಾರೆ.

3. **ಬಹುಪತ್ನಿತ್ವ ಇದೆಯೇ( ), ಇಲ್ಲವೇ(✓) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

   ನಮ್ಮಲ್ಲಿ ಅವೆಲ್ಲ ಇಲ್ಲ

4. **ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(20) ಗಂಡು(36)**

5. **ನಿಮ್ಮ ಕುಟುಂಬದ ವಯೋಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?**

   25000ರಿಂದ 30000 ಇರಬೇಕು. ನಮ್ಮ ಯಜಮಾನ್ರುಗೆ ಗೊತ್ತು. ನಂಗೆ ಗೊತ್ತಿಲ್ಲ.

II. ಸುತ್ತ ಮುತ್ತಲಿನ ಜನರೊಡನೆ ನಿಮ್ಮ ಸಂಬಂಧ ಹೇಗಿದೆ?

ಚೆನ್ನಾಗಿದೆ

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ( )**

2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

   ಆಹಾರವೇ(✓) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ (✓) ನೀವು ಬದುಕುವ ರೀತಿ ನೀತಿಯೇ(✓) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

   ನಮ್ಮೋರಷ್ಟು ಅವರೇನು ಪವಿತ್ರ ಅಲ್ಲ. ಆದ್ರಾ ಶ್ರೇಷ್ಠ ಮಾಡ್ತಾರೆ. ನಮಗೆ ದೇವ್ರು ಬಡನತಕೊಟ್ಟುಕೊಳ್ತನಾ ಕೊಟ್ಟಿದ್ದಾನೆ.

3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಒಕ್ಕಲಿಗರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಮನೆಯಲ್ಲಿ ದುಡಿತ್ತೀವಲ್ಲಾ)**

   ಅವರ ಹೊಲಕ್ಕೆ ಕೂಲಿಗೆ ಹೋಗ್ತೀವಿ.

4. **ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ( )**

   ಹಿಂದೆ ಇದ್ದಾಂಗೆ ಇಲ್ಲ. ಈಗ ದಿನಾಲು ಅವರ ಹೊಲಕ್ಕೆ ಹೋಗಿ ದುಡಿಬೇಕು.

5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

   ಬಡತನ ಮತ್ತೇನು, ನಮಗೂ ಭೂಮಿ ಇದ್ರೆ ನಾವ್ಯಾಕೆ ಇನ್ನೊಬ್ರತ್ರ ಹೋಗ್ಬೇಕು.

6. **ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)**

   ನಡಿತ್ತಾನೆ ಇರ್ತಾವೆ ಸ್ವಾಮಿ ನಾವು ಬಡವರು ನಮ್ಮ ಕಷ ಯಾರು ಕೇಳೋರು. ಬಡವರ ಕೋಪ ದವಡೆಗೆ ಮೂಲ ಅಲ್ವೆ

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

   ನಮಗೆ ಭೂಮಿ ಇಲ್ಲ, ಸಾಲ ಕೊಟ್ಟಿದ್ದೀವಿ ಅಂತ ಹೇಳಿ ಕಿತ್ತುಕೊಂಡಿರುವ ಭೂಮಿಯನ್ನು ನಮಗೆ ಕೊಟ್ರೆ ಸಾಕು.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿನಾಲಿ ಮಾಡಿಕೊಂಡು

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

   ಇಲ್ಲಿರೂ ಇಲ್ಲೇ ಇದ್ದಾರೆ ಕೂಲಿ ಮಡಿಕೊಂಡು

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ( ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

   ಅದಕ್ಕೆಲ್ಲ ಹೀಗೆ ಬೆಲೆ ಎಲ್ಲಿ ಸಿಗಬೇಕು. ಅದಕ್ಕೆ ಎಲ್ಲಾ ಬಿಟ್ಟಿದ್ದೀವಿ.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು( ) ಇಲ್ಲ(✓) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

   ಯಾರಿದ್ದಾರೆ ನಮಗೆ ನಾವೇ ದುಡಿಬೇಕು ನಾವೇ ತಿನ್ನಬೇಕು.

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

   ಎರಡು ಎಕ್ಕರೆ ನಮ್ಮ ಅಜ್ಜನ ಕಾಲದಲ್ಲಿ ಬಂದಿದೆ.

6. **ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

   ವ್ಯವಸಾಯ ಅಥವಾ ಏನಾದ್ರು ಬೆಳೆ ಬೆಳೆದು ಬದುಕುತ್ತಾದ್ವಿ

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ ( ), ಭೂಮಾಲಿಕರು(), ಮೇಲ್ಜಾತಿಯವರು( ) ಅದಕ್ಕೆ ಅವರು ಕೊಟ್ಟ ಕಾರಣವೇನು?**

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(1) ಗಂಡು(1)**

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು( ) ಇಲ್ಲ(✓) ಯಾವ ನೌಕರಿ.**

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ( ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

   ನಾವು ಎಲ್ಲಿ ಕಲಿಯೋದು ನಮ್ಮ ಅಪ್ಪ ಕಳಿಸಲಿಲ್ಲ. ನಾವು 7ನೇ ತರಗತಿವರೆಗೂ ಓದಿಕೊಂಡು ನಂತರ 3ರಿಂದ 4 ಕಿ.ಮೀ.ದೂರ ಹೋಗಬೇಕು ಬಸ್ ಇಲ್ಲ, ರಸ್ತೆ ಇಲ್ಲ ಏನ್ ಮಾಡೋದು.

4. ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ(   )

5. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ(   ) ಕಳುಹಿಸದಿದ್ದರೆ ಕಾರಣವೇನು?

   ಊರಲ್ಲಿ 7ನೇ ತರತಗತಿಯವರೆಗೂ ಇದೆ ನಂತರ ಪಕ್ಕದ ಊರಿಗೆ ಹೋಗಬೇಕು. ಒಪ್ಪಲಿಲ್ಲ. ಸರಿಯಾದ ದಾರಿ ಇಲ್ಲ, ಓಡಾಡಲು ಆಗದಿದ್ದರಿಂದ ಮುಂದೆ ಹೋಗಲು ಸಾಧ್ಯವಾಗಲಿಲ್ಲ.

6. ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?

   ಚೆನ್ನಾಗಿ ಓದಿಕೊಂಡು ಯಾವುದಾದರೂ ಒಳ್ಳೇ ಕೆಲಸಕ್ಕೆ ಹೋಗಿ ಸಂಪಾದಿಸಬೇಕು.

7. ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?

   ಓದಿದೋರು ಒಳ್ಳೆ ಮಾತಾಡೋದನ್ನ ಕಲಿತುಕೊತ್ತಾರೆ ಅಲ್ವ

8. ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು(   ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?

V. ನಿಮ್ಮ ಆಚರಣೆಗಳ ವಿಶೇಷತೆಗಳೇನು?

1. ನಿಮ್ಮ ಮನೆ ದೇವರು ಯಾವುದು?

   ಗಂಡು ದೇವರು: ನರಸಿಂಹಸ್ವಾಮಿ, ಹೆಣ್ಣು ದೇವರು: ಕಾಳಮ್ಮ

2. ಆ ದೇವರ ಮೂಲ ಸ್ಥಳ ಯಾವುದು?

   ಮಾಗಡಿ

3. ನಿಮ್ಮ ಒಕ್ಕಲು ಯಾವುದು?

   ನರಸಿಂಹಸ್ವಾಮಿ

4. ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ(   )ಯಾವ ಯಾವ ಹಬ್ಬ ಆಚರಿಸುತ್ತೀರಿ?

   ಎಲ್ಲಾ ಹಬ್ಬಗಳನ್ನು ಮಾಡ್ತೀವಿ.

5. ನಿಮ್ಮ ಪಾರಂಪರಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದೀರಾ ಹೌದು ( ) ಇಲ್ಲ(✓) ಅವು ಯಾವುವು? ಈ ಆಚರಣೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಕಾರಣವೇನು?

   ಯಾರಿಗೆ ಬೇಕು

7. ನಿಮ್ಮ ಕುಲದ ಹೆಸರು (ಚಿನ್ನದ ಕುಲ)

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು() ಇಲ್ಲ(✓)

1. ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?
2. ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?
3. ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು(✓) ಇಲ್ಲ( ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು(✓) ಇಲ್ಲ( )
4. ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ(✓) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?

   ನಮ್ಮ ಯಜಮಾನರಿಗೆ ಗೊತ್ತು
5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ( ).

ಸಂದರ್ಶದ ದಿನಾಂಕ : 26-03-2017

ಹೆಸರು : ಕೆಂಪಮ್ಮ

ವಯಸ್ಸು : 56

ಲಿಂಗ : ಹೆಣ್ಣು

ಉದ್ಯೋಗ : ಕೂಲಿ

ವಿಳಾಸ : ಕೆಳಗಿನಪುರ, ಹೊಳಲ್‌ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಒಟ್ಟಿಗೆ ಇಲ್ಲ. ಇರೋದು ಬ್ಯಾರ ಬ್ಯಾರೇನೆ

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

   ನನ್ನ ಗಂಡ ಇದ್ದಾಗ ತಗೋತ್ತಿದ್ದ ಈಗ ನಾನೇ

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

   ಅಂಗಂದ್ರೆ ಗೊತ್ತಿಲ್ಲ

3. **ಬಹುಪತ್ನಿತ್ವ ಇದೆಯೇ( ), ಇಲ್ಲವೇ( ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

   ಎರಡುಮೂರು ಮದುವೆ ಆಗಿ ಎನ್ ಮಾಡೋದು. ಅವರಿಗೆ ಶಕ್ತಿ ಇದ್ರೆ ಮಾಡ್ಕೊತ್ತಾರೆ.

4. **ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(16) ಗಂಡು(17)**

5. **ನಿಮ್ಮ ಕುಟುಂಬದ ವರಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?**

   ಎಂಟೊಂಬತ್ತು ಸಾವಿರ ಇರಬೇಕು, ಇನ್ನೇನೂ ಇದೆಸ್ವಾಮಿ, ಭೂಮಿ ಇಲ್ಲ ಗೀಮಿ ಇಲ್ಲ. ಕೂಲನೇ ನಾಲಿನ ಬದುಕು ಗತಿ.

II. ಸುತ್ತ ಮುತ್ತಲಿನ ಜನರೊಡನೆ ನಿಮ್ಮ ಸಂಬಂಧ ಹೇಗಿದೆ?

1. ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ( )

   ಇಲ್ವೆ ಮತ್ತೆ ನಮ್ಮ ಜಾತಿನಾ ಒಳ್ಗೆ ಬಿಟ್ಕೊಳಲ್ಲ ಅವರು

2. ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?

   ಆಹಾರವೇ(✓) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ ( ) ನೀವು ಬದುಕುವ ರೀತಿ ನೀತಿಯೇ(✓) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

   ನಾವು ಬಡೂರು, ಅದಕ್ಕೆ ಅಂಗೆ ಮಾಡ್ತಾರೆ

3. ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಲಿಂಗಾಯಿದ್ದೂ ಎಲ್ಲರೂ) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)

   ಅವರತ್ತಿರ ಕೂಲಿಗೆ ಹೋಗ್ತಿವಲ್ಲ

4. ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ( )

   ಹಿಂದೆ ಇದ್ದಾಂಗೆ ಇಲ್ಲ. ಈಗ ದಿನಾಲು ಅವರ ಹೊಲಕ್ಕೆ ಹೋಗಿ ದುಡಿಬೇಕು.

5. ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?

   ಬಡತನ ಸ್ವಾಮಿ

6. ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)

   ಇಲ್ಲವೇ, ಯಾರಪ್ಪ ಕೇಳೋರು ನಮಗೆ ಹೊಡಿದ್ರು ಕೇಳೋರಿಲ್ಲ ಬಡಿದ್ರು ಕೇಳೋರಿಲ್ಲ.

7. ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.

   ನಾವು ಬಡೂರು ನಮಗೂ ನಮ್ಮ ಭೂಮಿ ಕೊಡಿ ನಾವು ಬದಕೊತ್ತೀವಿ.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿ

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

   ಬಳ್ಳಾರಿ ಒಬ್ಬ ಮಗ ಹೋಗ್ತಾನೆ, ಇನೊಬ್ಬ ಅಲ್ಲಿ ಗೌಡ್ರ ಹೊಲಕ್ಕೆ ಹೋಗ್ತಾ ಅವ್ನೆ

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ(✓) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು(✓) ಇಲ್ಲ( ) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

   ಕೂಲಿ, ಜೀತ, ಇನ್ಯಾರ ಹೊಲಕ್ಕೆ ಹೋಗ್ಲಿ, ಗೌಡ್ರು, ಲಿಂಗಾಯಿತ್ರು ಅತ್ರನೇ

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

   ಎನ್ ಕೊಟ್ಟಾವ್ರೆ ಸ್ವಾಮಿ ಯಾರ ಕೇಳ್ಬೇಕು ನಮ್ನ

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

   ಹಿಂದೆ ಕಾಡಿನ ಕಡ್ದು ವಂಚೂರು ಮಾಡ್ಕೊಂಡಿದ್ವಿ, ಸಾಲ ಮಾಡಿದ್ದಲ್ಲ ಅವ್ನೆ ಕಿತ್ಕೊಂಡು ಬಿಟ್ರು.

6. **ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

   ಇಲ್ವೆ ಭೂಮಿ ಬುಟ್ಟಾರ, ಇನಾದ್ರು ಬೆಳೆ ತೆಗೆತ್ರಿದ್ದೋ

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ ( ), ಭೂಮಾಲಿಕರು(✓), ಮೇಲ್ಜಾತಿಯವರು(✓) ಅದಕ್ಕೆ ಅವರು ಕೊಟ್ಟ ಕಾರಣವೇನು?**

   ನಿಮ್ಮ ಅಪ್ಪ ಸಾಲ ಕೊಡಬೇಕಿತ್ತು ಅಂದ್ರು.

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು( ) ಗಂಡು( )**

   ಯಾರಿದ್ದರೋ ಏನೋ ಒಬ್ರೊ ಇಬ್ರೊ ಇರಬೇಕು.

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು( ) ಇಲ್ಲ(✓) ಯಾವ ನೌಕರಿ.**

   ಇಲ್ಲ ಬಿಡ್ರಿ

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ( ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

ಇತ್ತೀಚೆಗೆ ಎಲ್ಲಾ ಶಾಲೆಗೆ ಹೋಗಕತ್ತಾರೆ.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ( )**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ( ) ಕಳುಹಿಸದಿದ್ದರೆ ಕಾರಣವೇನು?**

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

ಏನಾದರೂ ನಾಲ್ಕು ಮಾತ್ ಕಲಿತುಕೊಳ್ಳಿ ಅಷ್ಟೆ. ನಾಕಾರು ಜನರಂತೆ ಅವರು ಬದುಕಲಿ.

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು( ) ಇಲ್ಲ ( ) ನಿಮ್ಮ ಮಕ್ಕಳು ಕಲಿತು ನಿಮ್ಮ ಪಾರಂಪರಿಕ ನಂಬಿಕೆ, ಜ್ಞಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆತಂಕವೇನಾದರೂ ಇದೆಯಾ? ಹೌದು(✓) ಇಲ್ಲ ( )**

ನಮ್ಮ ತಲೆಗೆ ಎಲ್ಲಾ ಹೋಗ್ತಾ ಇದೆ ಹೋಗ್ಲಿ ಬಿಡ್ರಿ. ಅದನ್ ತಕ್ಕೊಂಡು ಏನ್ ಮಾಡೋದು ಇವತ್ತೆಲ್ಲ ಕಂಪಿಟರ್ ಕಾಲ.

8. **ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?**

ಓದಿದೋನು ಬುದ್ದಿವಂತ ಅಲ್ಲ, ಓದದೆ ಇರೋದನು ದಡ್ಡ ಅಷ್ಟೆ.

9. **ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?**

ಯಾರ್ ಹೇಳಕೊಡಬೇಕು ನಮಗೆ ಯಾರ್‌ಗೆ ಬೇಕಾಗದ್ದೀವಿ ನಾವ್ ಅವರಿಗೆ ಬೇಕಾದಾಗ ಬತ್ತರಾ ನೂರು ಇನ್ನೂರು ಕೊಡ್ತಾರಾ. ನಾವು ಓಟ ಹಾಕ್ತೀವಿ ಅಷ್ಟೆ.

V. **ನಿಮ್ಮ ಆಚರಣೆಗಳ ವಿಶೇಷತೆಗಳೇನು?**

ಅಂಗದ್ರೆ ಗೊತತಿಲ್ಲಪ್ಪ. ವಿಶೇಷ ಗಿಶೇಷ ಇನೂಇಲ್ಲ

1. **ನಿಮ್ಮ ಮನೆ ದೇವರು ಯಾವುದು?**

ಗಂಡು ದೇವರು: ತಿಮ್ಮಪ್ಪ, ಹೆಣ್ಣು ದೇವರು: ಕಬಕ್ಕ

2. **ಆ ದೇವರ ಮೂಲ ಸ್ಥಳ ಯಾವುದು?**

ತಿರುಪತಿ

3. ನಿಮ್ಮ ಒಕ್ಕಲು ಯಾವುದು?

ತಿಮ್ಮಪ್ಪನ ಒಕ್ಕಲು

4. ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?

ಎಲ್ಲ ಹಬ್ಬ ಮಾಡುತ್ತೀವಿ.

5. ನಿಮ್ಮ ಕುಲದ ಹೆಸರು (ಹೂವಿನ ಕುಲ)

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು( ) ಇಲ್ಲ(✓)

1. ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?

2. ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?

3. ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು( ) ಇಲ್ಲ( ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು( ) ಇಲ್ಲ( )

ಅನ್ವಯಿಸುವುದಿಲ್ಲ

4. ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ( ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?

ಯಾರು ಹೇಳಬೇಕು.

5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ( ).

ಇಲ್ಲ. ನಮ್ಮ ಜನರ ಸೇರ್‍ಕೊಂಡು ಮಾಡವ್ರೆ.

ಸಂದರ್ಶದ ದಿನಾಂಕ : 28-03-2017

ಹೆಸರು : ರವಿಕುಮಾರ್

ವಯಸ್ಸು : 24

ಲಿಂಗ : ಗಂಡು

ಉದ್ಯೋಗ : ಇಲ್ಲ

ವಿಳಾಸ : ನಿಡಗಟ್ಟ, ಚಿಕ್ಕ ಅರಸೀಕೆರೆ ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ನಮ್ಮದು ಅಭಿಭಕ್ತ ಕುಟುಂಬವಾಗಿದೆ

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

   ನಮ್ಮ ತಂದೆ

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

   ನಮ್ಮಲ್ಲಿ ಹೆಣ್ಣು ಗಂಡು ಎಂಬ ಭೇದ ಭಾವವಿಲ್ಲ.

3. **ಬಹುಪತ್ನಿತ್ವ ಇದೆಯೇ( ), ಇಲ್ಲವೇ( ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

   ನಮ್ಮಲ್ಲಿ ತುಂಬ ಬಡತನವಿರುವ ಕಾರಣ ಬಹುಪತ್ನಿತ್ವ ಕಡಿಮೆ

4. **ನಿಮ್ಮ ಕುಟುಂಬದಲ್ಲಿ ಮದುವೆಯ ವರಮಾನ ಹೆಣ್ಣು(17) ಗಂಡು(25)**

5. **ನಿಮ್ಮ ಕುಟುಂಬದ ವರಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?**

   ವಾರ್ಷಿಕವಾಗಿ 15 ರಿಂದ 20 ಸಾವಿರ ಇರಬಹುದು. ಕೂಲಿ ಕೆಲಸ ಮಾಡಿಕೊಂಡು ಬದುಕುತ್ತಿದ್ದೇವೆ. ನಮ್ಮಲ್ಲಿ ಸಾಮಾನ್ಯವಾಗಿ ಮದುವೆ ಮಾಡಿಕೊಂಡ ನಂತರ ಬೇರೆ ಮಾಡಿಕೊಂಡು ಬದುಕುತ್ತಾರೆ. ಅವಿಭಕ್ತ ಕುಟುಂಬದ ಕಲ್ಪನೆ ಇಲ್ಲ. ಪ್ರತಿಯೊಬ್ಬ ಸ್ವತಂತ್ರವಾಗಿ ಬದುಕಬೇಕು ಎನ್ನುವ ಉದ್ದೇಶದಿಂದ ಈ ರೀತಿಯ ನಿರ್ಧಾರಗಳನ್ನು ಮಾಡಬೇಕು.

II. ಸುತ್ತ ಮುತ್ತಲಿನ ಜನರೊಡನೆ ನಿಮ್ಮ ಸಂಬಂಧ ಹೇಗಿದೆ?

ಸುತ್ತಮುತ್ತಲಿನೊಡನೆ ಅಂತಹ ಹೇಳಿಕೊಳ್ಳುವಷ್ಟು ಸಂಬಂಧವಿಲ್ಲ

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ( )**

   ಕಂಡಿತಾ ಇದೆ

2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

   ಆಹಾರವೇ(✓) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ (✓) ನೀವು ಬದುಕುವ ರೀತಿ ನೀತಿಯೇ(✓) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

   ಈ ಮೇಲಿನ ಎಲ್ಲ ಕಾರಣಗಳಿಂದಲೂ ನಮ್ಮನ್ನು ಶೋಷಣೆಗೆ ಒಳಪಡಿಸುತ್ತಾರೆ.

3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಗೌಡ್ರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)**

   ಒಕ್ಕಲಿಗ ಮತ್ತು ಲಿಂಗಾಯತರು ಇವರು ನಮ್ಮಲ್ಲಿ ಭೂಮಾಲಿಕರಾಗಿದ್ದರಿಂದ ಅವರ ಹೊಲಗದ್ದೆಗೆ ಕೂಲಿಗೆ ಹೋಗುತ್ತೇವೆ. ಹಿಂದೆ ನಮ್ಮ ಅಪ್ಪರೆಲ್ಲ ಅವರ ಮನೆಯಲ್ಲಿ ಜೀತಕ್ಕಿದ್ದರಂತೆ.

4. **ಜೀತಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ( )**

   ಜೀತಪದ್ಧತಿಯು ಹಿಂದಿನ ರೂಪದಲ್ಲಿ ಇಲ್ಲಿ ರೂಪ ಬದಲಿಸಿಕೊಂಡು ಆಚರಣೆಯಲ್ಲಿದೆ. ಎಸ್ಟೇಟ್, ಇಟ್ಟಿಗೆ ಫ್ಯಾಕ್ಟರಿಗಳಲ್ಲಿ ಕುಟುಂಬ ದುಡಿಯುತ್ತಿರುವುದು ಆಧುನಿಕ ರೀತಿಯ ಜೀತಪದ್ಧತಿ.

5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

   ಬಡತನ, ಅನಕ್ಷರತೆ. ಭೂಮಿ ಇಲ್ಲದೆ ಇರುವುದು, ನಮಲ್ಲಿ ವಿದ್ಯೆ, ಅಧಿಕಾರ ಕಡಿಮೆ.

6. **ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)**

   ನಾವು ಉತ್ತಮವಾಗಿ ಬದುಕುವುದನ್ನು ಸಹಿಸಿಕೊಳ್ಳದೆ ಜನರು ನಮ್ಮ ಮೇಲೆ ನಿರಂತರವಾಗಿ ದೌರ್ಜನ್ಯ ಎಸುಗುತ್ತಲೆ ಇರುತ್ತಾರೆ. ನಮ್ಮ ಸಹಾಯಕ್ಕೆ ಯಾರು ಬಂದಿಲ್ಲ.

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

ನಮ್ಮ ಜಾತಿ ನಮಗೆ ಬರುವ ಎಲ್ಲ ಮೀಸಲಾತಿಯನ್ನು ಒಂದೇ ವರ್ಗ ಕಬಳಿಸುತ್ತಿದೆ. ಇದರ ಜೊತೆಗೆ ಭ್ರಷ್ಟ ಅಧಿಕಾರಿಗಳು, ಸ್ವಾರ್ಥ ರಾಜಕಾರಣಿಗಳು.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ನಮಗೆ ಸ್ವಂತ ಭೂಮಿ ಇಲ್ಲ. ಕೂಲಿನಾಲಿ ಮಾಡಿಕೊಂಡು ಬದುಕುತ್ತಿದ್ದೇವೆ.

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

ನಮ್ಮ ಅಣ್ಣ ಎಸ್ಟೇಟ್‌ನಲ್ಲಿದ್ದಾನೆ. ನಾನು ಕೋಕಕೋಲ ಕಂಪನಿಗೆ ಕೆಲಸಕ್ಕೆ ಹೋಗುತ್ತಿದ್ದೇನೆ. ಒಂದು ನಿರ್ದಿಷ್ಟ ಸಂಪತ್ತು ಇಲ್ಲದೆ. ಭೂಮಿ ಇಲ್ಲದೆ ಅಲೆಯುವಂತಾಗಿದೆ.

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ( ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

ನಮ್ಮ ಪಾರಂಪರಿಕ ಕುಲಕಸುಬು ಛಕ್ರಿತನ. ಆದರೆ ಇಂದು ಅದಕ್ಕೆ ಬೆಳೆ ಇಲ್ಲ. ಆದ್ದರಿಂದ ನಮ್ಮ ಜೀವನ ನಿರ್ವಹಣೆ ಕಷ್ಟವಾಗಿದೆ.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು(✓) ಇಲ್ಲ( ) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

ಅಲ್ಲಿ ನಾವು ಬುದ್ಧಿವಂತರಲ್ಲ. ನಮ್ಮ ಜನ ತುಂಡು ಬಟ್ಟೆಗಳಿಂದ ಜೀವನ ನಡೆಸುವವರು. ಆಧುನಿಕತೆಯ ಮೋಸ, ವಂಚನೆಯನ್ನು ಅರಿತವರಲ್ಲ. ಆದ್ದರಿಂದ ಕುಲಕಸುಬು ಮಾಯವಾದ ಮೇಲೆ ನೇರವಾಗಿ ಜೀತಕ್ಕೆ ಸೇರಿಕೊಂಡಿದ್ದನ್ನು ಕಾಣಬಹುದು.

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

ಸರ್ಕಾರದ ಯೋಜನೆಗಳು ಕೇವಲ ಕಡತಗಳಲ್ಲಿವೆ ಎಂದೆನಿಸುತ್ತದೆ ಅಥವಾ ಅವುಗಳೆಲ್ಲ ಮಧ್ಯವರ್ತಿಗಳು ಮತ್ತು ಪ್ರಬಲ ಸಮುದಾಯದವರ ಜೇಬಿಗೆ ಸೇರಿಕೊಳ್ಳುತ್ತಿದೆ ಎನಿಸುತ್ತದೆ.

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

ಇಂದೆ ಅರಣ್ಯದಲ್ಲಿ ಸ್ವಲ್ಪ ಭಾಗ ಅಸನು ಮಾಡಿಕೊಂಡು ರಾಗಿ ಬೆಳೆಯುತ್ತಿರುವುದರ ಬಗ್ಗೆ ನಮ್ಮ ತಾತಾ ಹೇಳುತ್ತಿದ್ದರು. ಅರಣ್ಯ ಇಲಾಖೆಯವರು ಒಕ್ಕಲೆಬ್ಬಿದ್ದರು ಎನ್ನುತ್ತಿದ್ದರು.

6. **ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

ಇವತ್ತಿನ ಸಂದರ್ಭದಲ್ಲಿ ಭೂಮಿಯುಂದಿದ್ದರೆ ಚಿನ್ನ ತೆಗೆಯುತ್ತಿದ್ದೇವೂ. ಸರ್ಕಾರದ ಯೋಜನೆಗಳು ಪಾಣಿ ಇದ್ದವರಿಗೆ ಮಾತ್ರ ಸೀಮಿತವಾಗಿವೆ. ನಮಗೆ ಯಾವ ದಾಖಲೆಗಳು ಇಲ್ಲದೆ ಸರ್ಕಾರಿ ಸೌಲಭ್ಯವನ್ನು ಪಡೆದುಕೊಳ್ಳದಂತಾಗಿದೆ.

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ ( ), ಭೂಮಾಲಿಕರು(✓), ಮೇಲ್ಜಾತಿಯವರು(✓) ಅದಕ್ಕೆ ಅವರು ಕೊಟ್ಟ ಕಾರಣವೇನು?**

ಅರಣ್ಯದಿಂದ ಒತ್ತವರಿ ಮಾಡಿಕೊಂಡಿದ್ದೀರಿ ಎಂದು ಅರಣ್ಯ ಇಲಾಖೆಯವರು ಕಿತ್ತುಕೊಂಡರೆ, ಸಣ್ಣಪುಟ್ಟ ಸಾಲಕ್ಕೆ ಬಡ್ಡಿ, ಚಕ್ರಬಡ್ಡಿಯಾಕಿ ಇದ್ದ ಸ್ವಲ್ಪ ಭೂಮಿಯನ್ನು ಮಾಲೀಕರು ಕಿತ್ತುಕೊಂಡರು.

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

ಪರವಾಗಿಲ್ಲ ನಾನು ಎಂ.ಎ.ವರೆಗೂ ಕಲಿತ್ತಿದ್ದೇನೆ. ನಮ್ಮ ಜನರು ಇನ್ನು ಶಿಕ್ಷಣದ ಕಡೆ ಗಮನಹರಿಸುತ್ತಿಲ್ಲ.

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(1) ಗಂಡು(2)**
2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು( ) ಇಲ್ಲ(✓) ಯಾವ ನೌಕರಿ.**
3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ( ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

ನಮ್ಮ ತಂದೆ-ತಾಯಿಯಂದಿರೂ ಬಡತನದಲ್ಲಿ ಬದುಕಿ ಹೋದವರು. ಅವರಿಗೆ ಒಪ್ಪತ್ತಿನ ಚೀನ ತುಂಬಿಸುವುದು ಹೆಚ್ಚಾಗಿತ್ತು. ಇನ್ನು ಶಿಕ್ಷಣದ ಮಾತೆಲ್ಲಿ. ಆದ್ದರಿಂದ ನಮ್ಮ ಪೀಳಿಗೆ ಶಿಕ್ಷಣದ ಕಡೆಮುಖ ಮಾಡಬೇಕಾದ ಅನಿವಾರ್ಯತೆ ಇದೆ.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ( )**
5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ( ) ಕಳುಹಿಸದಿದ್ದರೆ ಕಾರಣವೇನು?**
6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

ಒಳ್ಳೆಯ ಕೆಲಸಕ್ಕೆ ಸೇರಿಕೊಳ್ಳಬೇಕು.

7. ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು( ) ಇಲ್ಲ ( ) ನಿಮ್ಮ ಮಕ್ಕಳು ಕಲಿತು ನಿಮ್ಮ ಪಾರಂಪರಿಕ ನಂಬಿಕೆ, ಜ್ಞಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆತಂಕವೇನಾದರೂ ಇದೆಯಾ? ಹೌದು(✓) ಇಲ್ಲ ( )

8. ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?

ಮೀಸಲಾತಿ ಎಂಬುದು ಇದು ಕೆಲವೇ ವರ್ಗದ ಸ್ವತ್ತಾಗಿದೆ. ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳು ಬರುತ್ತವೆ. ಸೌಲಭ್ಯವೆಲ್ಲವನ್ನು ಕೆಲವೊಂದು ಸಮುದಾಯುಗಳು ಪಡೆದುಕೊಳಳುತ್ತಿವೆ. ಭಾರತದಲ್ಲಿ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ನಮ್ಮಂತ ಸಮುದಾಯಗಳು ಒಂದು ಸರ್ಕಾರಿ ಸೌಲಭ್ಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಜೊತೆಗೆ ಇಂದು ದಿನದಿಂದ ದಿನಕ್ಕೆ ಜಾತಿಗಳು ಸೇರಿಕೊಂಡು ಹೋಗುತ್ತಿದ್ದು ಸಿಗಬೇಕಾದ ಸೌಲಭ್ಯವನ್ನು ವಂಚಿಸುತ್ತಿದ್ದಾರೆ.

V. ನಿಮ್ಮ ಆಚರಣೆಗಳ ವಿಶೇಷತೆಗಳೇನು?

1. ನಿಮ್ಮ ಮನೆ ದೇವರು ಯಾವುದು?

ಗಂಡು ದೇವರು: ಮಾದೇಶ್ವರ, ಹೆಣ್ಣು ದೇವರು: ಈರಮಾಸ್ತಿ ಕೆಂಪಮ್ಮ

2. ಆ ದೇವರ ಮೂಲ ಸ್ಥಳ ಯಾವುದು?

ಮಾದೇಶ್ವರ ಬೆಟ್ಟ/ಸೋಲಿಗೇರಿ

3. ನಿಮ್ಮ ಒಕ್ಕಲು ಯಾವುದು?

ಮಾದೇಶ್ವರ ಒಕ್ಕಲು

4. ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?

ನಾವು ಯುಗಾದಿ, ದೀಪಾವಳಿ, ಸಂಕ್ರಾಂತಿ, ಗಣೇಶಚತುರ್ಥಿ ಎಲ್ಲ ಹಬ್ಬವನ್ನು ಆಚರಿಸುತ್ತೇವೆ. ಜೊತೆಗೆ ನಮ್ಮೂರ ಮಾರಿಹಬ್ಬಳನ್ನು ಮಾಡುತ್ತೇವೆ.

5. ನಿಮ್ಮ ಕುಲದ ಹೆಸರು (ಬೆಳ್ಳಿ ಕುಲ)

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು(✓) ಇಲ್ಲ( )

1. ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?

2. ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?

3. ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು(   ) ಇಲ್ಲ(✓) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು(   ) ಇಲ್ಲ(✓)

4. ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ(   ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?

   ಗೊತ್ತಿದೆ. ಆದರೆ ಅದನ್ನು ಪಡೆದುಕೊಳ್ಳಲು ಸ್ಥಳೀಯ ನಾಯಕರು ಮತ್ತು ಗ್ರಾಮ ಪಂಚಾಯಿತಿಯ ಅಧಿಕಾರಿ ಮತ್ತು ಅಧ್ಯಕ್ಷರು ಬಳಸಿಕೊಳ್ಳುತ್ತಿದ್ದಾರೆ.

5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ(   ).

ಪರಾಮರ್ಶನ ಗ್ರಂಥಗಳು

ಆಕರಗಳು

ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನದ ಕೃತಿಗಳು

೧. ಅಲನ್ ನೆವಿಸ್, ೧೯೬೧, **ದಿ ಗೇಟ್ ವೆ ಟು ಹಿಸ್ಟರಿ,** ನ್ಯೂಯಾರ್ಕ್.

೨. ಎಡ್ವರ್ಡ್ ಸೈದ್, ೧೯೭೭, **ಓರಿಯಂಟಲಿಸಂ,** ಲಂಡನ್, ಪೆಂಗ್ವಿನ್.

೩. ಐಜಾಜ್ ಅಹ್ಮದ್(ಮೂಲ), ಪ್ರಕಾಶ್ ಕೆ.(ಕನ್ನಡಕ್ಕೆ), ೨೦೧೨, ಆಧುನಿಕೋತ್ತರ ವಾದ(ಪೋಸ್ಟ್ ಮಾರ್ಡನಿಸಂ),ಚಿಂತನ ಪುಸ್ತಕ, ಬೆಂಗಳೂರು.

೪. ಕಾರ್ ಇ.ಎಚ್., ೧೯೬೧(ಮರುಮುದ್ರಣ ೨೦೦೧), ವಾಟ್ ಈಸ್ ಹಿಸ್ಟರಿ, ಮ್ಯಾಕ್ ಮಿಲನ್, ಲಂಡನ್.

೫. ಕಾಲಿಂಗ್‌ವುಡ್ ಆರ್.ಜಿ., ೧೯೯೩, ದಿ ಐಡಿಯಾ ಆಫ್ ಹಿಸ್ಟರಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್.

೬. ಕಿರಿತ್ ಕೆ.ಶಾಹ ಮೆಹರ್ ಜ್ಯೋತಿ ಸಾಂಗಲೆ(ಸಂ), ಸಿ.ಆರ್.ದಾಸ್(ಲೇ), ೨೦೦೫, ಹಿಸ್ಟೋರಿಯೋಗ್ರಫಿ ಪಾಸ್ಟ್ ಅಂಡ್ ಪ್ರೆಸೆಂಟ್, ಪೋಸ್ಟ್ ಮಾರ್ಡನಿಸಂ ಆ್ಯಂಡ್ ಹಿಸ್ಟ್ರಿ, ರಾಮ್ ಪಬ್ಲಿಕೇಷನ್ಸ್, ಜೈಪುರ.

೭. ಕೀತ್ ಜೆಂಕಿನ್ಸ್, ೧೯೯೧(ಮರುಮುದ್ರಣ ೨೦೦೩), ರೀ-ಥಿಂಕಿಂಗ್ ಹಿಸ್ಟರಿ, ರೂಟ್ಲೆಡ್ಜ್,ಲಂಡನ್.

೮. ಕುಪ್ಪಮ್ ಜಿ., ಕುಮುದಾಮಿನಿ ಕೆ., ೨೦೦೨, ಮೆಥಡ್ಸ್ ಆಫ್ ಹಿಸ್ಟಾರಿಕಲ್ ರಿಸರ್ಚ್, ಸಂದೀಪ್ ಪ್ರಕಾಶನ, ನ್ಯೂಡೆಲ್ಲಿ.

೯. ಕೊಸಾಂಬಿ ಡಿ.ಡಿ., ೧೯೬೨,(ಮರುಮುದ್ರಣ ೨೦೦೮), ಮಿಥ್ ಆ್ಯಂಡ್ ರಿಯಾಲಿಟಿ, ಪಾಪ್ಯುಲರ್ ಪ್ರಕಾಶನ ಪ್ರೈ.ಲಿ. ಬಾಂಬೆ.

೧೦. ಕೊಸಾಂಬಿ ಡಿ.ಡಿ., ೧೯೭೫, ಆ್ಯನ್ ಇನ್‌ಟ್ರುಡಕ್ಷನ್ ಟು ದಿ ಸ್ಟಡೀ ಆಫ್ ಇಂಡಿಯನ್ ಹಿಸ್ಟರಿ, ಪಾಪ್ಯುಲರ್ ಪ್ರಕಾಶನ, ಬಾಂಬೆ.

೧೧. ಕೊಸಾಂಬಿ ಡಿ.ಡಿ.(ಮೂಲ), ವೇಣುಗೋಪಾಲ್ ಟಿ.ಎಸ್., ಶೈಲಜಾ, ೨೦೦೩(ಪರಿಷ್ಕೃತ ಮುದ್ರಣ ೨೦೧೩), ಪುರಾಣ ಮತ್ತು ವಾಸ್ತವ, ಚಿಂತನ ಪುಸ್ತಕ, ಬೆಂಗಳೂರು.

೧೨. ಗಾಟಲಾಬ್ ಮೈಕಲ್(ಸಂ), ೨೦೦೩, ಹಿಸ್ಟಾರಿಕಲ್ ಥಿಂಕಿಂಗ್ ಇನ್ ಸೌತ್ ಏಷಿಯಾ, ಆರ್ಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

೧೩. ಗೋಪಾಲ ಬಾ.ರಾ., ೧೯೯೫, ಇತಿಹಾಸಶಾಸ್ತ್ರ ಮತ್ತು ಸಿದ್ಧಾಂತ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೪. ಗೋಪಾಲ್ ಎಸ್. ಮತ್ತು ರೋಮಿಲಾ ಥಾಪರ್(ಸಂ), ೧೯೬೩, ಪ್ರಾಬ್ಲಮ್ಸ್ ಆಫ್ ಹಿಸ್ಟಾರಿಕಲ್ ರೈಟಿಂಗ್ ಇನ್ ಇಂಡಿಯಾ, ಇಂಡಿಯಾ ಇಂಟರ್ ನ್ಯಾಷನಲ್ ಸೆಂಟರ್, ನ್ಯೂಡೆಲ್ಲಿ.

೧೫. ಗೋವಿಂದರಾಜು ಸಿ.ಆರ್., ೨೦೦೯, ನವಚಾರಿತ್ರಿಕವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಜೊನಾಥನ್ ಕುಲ್ಲರ್, ೧೯೮೨, ಆನ್ ಡಿ-ಕನ್‌ಸ್ಟ್ರಕ್ಷನ್, ರೂಟ್ಲೆಡ್ಜ್, ಲಂಡನ್.

೧೭. ಡೇವಿಡ್ ವುಡ್, ೧೯೭೭, ಆನ್ ಇನ್‌ಟ್ರೊಡಕ್ಷನ್ ಟು ಡೆರಿಡಾ, ರೆಡಿಕಲ್ ಫಿಲಾಸಫಿ ನಂ.೨೧, ಲಂಡನ್.

೧೮. ದೀಪೇಶ್ ಚಕ್ರವರ್ತಿ, ೨೦೦೬, ಹೆಬಿಟೇಶನ್ಸ್ ಆಫ್ ಮಾಡರ್ನಿಟಿ-ಎಸ್ಸೇಸ್ ಇನ್ ದಿ ವೀಕ್ ಆಫ್ ಸಬಾಲ್ಟರ್ನ್ ಸ್ಟಡೀಸ್, ಪರ್ಮನೆಂಟ್ ಬ್ಲ್ಯಾಕ್, ದೆಹಲಿ.

೧೯. ದೇಸಾಯಿ ಎ.ಆರ್., ೧೯೭೭, ಪ್ರೆಸೆಂಟ್ ಸ್ಟ್ರಗಲ್ಸ್ ಇನ್ ಇಂಡಿಯಾ, ನ್ಯೂ ಡೆಲ್ಲಿ.

೨೦. ಪಾಮೆದತ್ ಆರ್., ೧೯೪೧, ಇಂಡಿಯಾ ಟುಡೆ, ಮನಿಶ ಗ್ರಂಥಾಲಯ ಪ್ರೈ ಲಿ. ಕಲ್ಕತ್ತಾ.

೨೧. ಫಣಿರಾಜ್ ಕೆ., ೨೦೦೩, ಅಂಟೋನಿಯೋ ಗ್ರಾಮ್ಷಿ, ಜಿ., ರಾಜಶೇಖರ್(ಪ್ರಧಾನ ಸಂಪಾದಕರು), ಬೆಂಗಳೂರು: ಶತಮಾನ ಚಿಂತನೆ.

೨೨. ಬರ್ಕ್ ಪೀಟರ್ಸ್, ೧೯೯೨(ಮರುಮುದ್ರಣ ೨೦೦೦), ಹಿಸ್ಟರಿ ಆ್ಯಂಡ್ ಸೋಶಿಯಲ್ ಥಿಯರಿ, ಪಾಲಿಟಿ ಪ್ರೆಸ್, ಕೇಂಬ್ರಿಡ್ಜ್, ಯು.ಕೆ.

೨೩. ಬಾರ್ಕೂರು ಉದಯ, ೨೦೧೦, ಸಾಮ್ರಾಜ್ಯಶಾಹಿ: ಚಿಂತನೆಗಳು ಮತ್ತು ಸಿದ್ಧಾಂತಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೨೪. ಬಾರ್ಕೂರು ಉದಯ, ೨೦೧೨ ವಾಸ್ತವದ ಒಡಕುಗಳು, ಇತಿಹಾಸ ತೊಡಕುಗಳು, ಚಿಂತನ ಪುಸ್ತಕ, ಬೆಂಗಳೂರು.

೨೫. ಬಾಲಗೋಪಾಲ್ ಕೆ.(ಮೂಲ), ಶ್ರೀಮತಿ ಎಚ್.ಎಸ್.(ಕನ್ನಡಕ್ಕೆ) ೧೯೯೮(ಎರಡನೇ ಮುದ್ರಣ ೨೦೧೨), ಪ್ರಾಚೀನ ಭಾರತದ ಚರಿತ್ರೆ ಡಿ.ಡಿ.ಕೊಸಾಂಬಿಯವರ ಚಿಂತನೆಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೨೬. ಬಿಪನ್ ಚಂದ್ರ, ೧೯೭೧, ಮಾಡರ್ನ್ ಇಂಡಿಯಾ: ಎ ಟೆಕ್ಸ್ಟ್ ಬುಕ್ ಆಫ್ ಹಿಸ್ಟರಿ ಪಾರ್ ಸೆಕಂಡರಿ ಸ್ಕೂಲ್ಸ್, ನ್ಯೂ ಡೆಲ್ಲಿ.

೨೭. ಬಿಪನ್ ಚಂದ್ರ, ೧೯೮೪, ಕಮ್ಯುನಲಿಸಂ ಇನ್ ಮಾಡರ್ನ್ ಇಂಡಿಯಾ, ವಿಕಾಸ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ.

೨೮. ಬಿಪನ್ ಚಂದ್ರ, ೧೯೮೮, ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್, ಪೆಂಗ್ವಿನ್, ನ್ಯೂಡೆಲ್ಲಿ.

೨೯. ಬಿಪನ್ ಚಂದ್ರ, ೧೯೯೯, ಇಂಡಿಯಾ ಆಫ್ಟರ್ ಇಂಡಿಪೆಂಡೆನ್ಸ್, ವೈಕಿಂಗ್ ಪಬ್ಲಿಷಿಂಗ್, ನ್ಯೂಡೆಲ್ಲಿ.

೩೦. ಬಿಪನ್ ಚಂದ್ರ (ಮೂಲ), ಗೋಪಾಲರಾವ್ ಎಚ್.ಎಸ್. (ಕನ್ನಡಕ್ಕೆ), ೨೦೧೨, ಆಧುನಿಕ ಭಾರತದ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೧. ಜೆಂಕಿನ್ಸ್ ರೇಥ್, ೧೯೯೫, ಆನ್ ವಾಟ್ ಈಸ್ ಹಿಸ್ಟರಿ? ಫ್ರಮ್ ಕಾರ್ ಆ್ಯಂಡ್ ಎಲ್ಟನ್ ಟು ರೋರ್ಟಿ ಆ್ಯಂಡ್ ವೈಟ್, ರೂಟ್‌ಲೆಡ್ಜ್, ಲಂಡನ್.

೩೨. ಜೆಂಕಿನ್ಸ್ ರೇಥ್, ೧೯೯೯, ವೈ ಹಿಸ್ಟರಿ? ಎಥಿಕ್ಸ್ ಆ್ಯಂಡ್ ಪೋಸ್ಟ್ ಮಾಡರ್ನ್‌ನಿಟಿ, ರೂಟ್‌ಲೆಡ್ಜ್, ಲಂಡನ್.

೩೩. ಮಜುಂದಾರ್ ಆರ್,ಸಿ. ೧೯೬೯, ದಿ ಹಿಸ್ಟರಿ ಎಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್; ಸ್ಟ್ರಗಲ್ ಪಾರ್ ಫ್ರೀಡಂ, ಬಾಂಬೆ.

೩೪. ಮಜುಂದಾರ್ ಆರ್.ಸಿ., ೧೯೭೦, ಹಿಸ್ಟೋರಿಯೋಗ್ರಫಿ ಇನ್ ಮಾಡರ್ನ್ ಇಂಡಿಯಾ, ಏಶಿಯಾ ಪಬ್ಲಿಷಿಂಗ್ ಹೌಸ್, ಬಾಂಬೆ.

೩೫. ಮಾಧವ ಪೆರಾಜೆ, ೨೦೦೩, ಡೆರಿಡಾ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩೬. ಮೂರ್ವಿಕ್ ಆರ್ಥರ್, ೧೯೭೧, ದಿ ನೇಚರ್ ಆಫ್ ಹಿಸ್ಟರಿ, ಮ್ಯಾಕ್‌ಮಿಲನ್, ಲಂಡನ್.

೩೭. ಮೊಗಳ್ಳಿ ಗಣೇಶ್, ೨೦೦೯, ಅವ್ಯಕ್ತ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ಮೋಹನ್‌ಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯. ಮೋಹನ್‌ಕೃಷ್ಣ ರೈ ಕೆ., ೨೦೦೯, ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಬಳ್ಳಾರಿ.

೪೦. ರಮಂಡ್ ವಿಲಿಯಮ್ಸ್, ೧೯೯೨, ಮಾಡರ್ನ್ ಟ್ರಾಗೆಡೆ, ದಿ ಹೊರಗತ್ ಪ್ರೆಸ್, ಲಂಡನ್.

೪೧. ರಣಜಿತ್ ಗುಹಾ(ಸಂ), ೧೯೮೧, ಸಬಾಲ್ಟರ್ನ್ ಸ್ಟಡೀಸ್ ಸಂಪುಟ-೧, ರೈಟಿಂಗ್ ಆನ್ ಸೌತ್ ಏಶಿಯನ್ ಹಿಸ್ಟರಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

೪೨. ರಣಜಿತ್ ಗುಹಾ, ೧೯೮೩, ಎಲಿಮೆಂಟರಿ ಆಸ್ಪೆಕ್ಟ್ಸ್ ಆಫ್ ಪ್ರೆಸೆಂಟ್ ಇನಸರ್‌ಜೆನ್ಸಿ ಇನ್ ಕಲೋನಿಯಲ್ ಇಂಡಿಯಾ, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

೪೩. ರಣಜಿತ್ ಗುಹಾ, ೧೯೮೮, ಆನ್ ಇಂಡಿಯನ್ ಹಿಸ್ಟೋರಿಯೋಗ್ರಫಿ ಆಫ್ ಇಂಡಿಯಾ: ಎ ನೈಂಟೀನ್ತ್-ಸೆಂಚುರಿ ಅಜೆಂಡಾ ಅಂಡ್ ಇಟ್ಸ್ ಇಂಪ್ಲಿಕೇಷನ್ಸ್, ಕೆ.ಪಿ.ಬಾಗ್‌ಚಿ ಆ್ಯಂಡ್ ಕಂಪನಿ, ನವದೆಹಲಿ.

೪೪. ರಾಜಾರಾಮ ಹೆಗಡೆ, ೨೦೦೪, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೫. ರಾಬರ್ಟ್ ಜೋನ್ಸ್ ಶೇಫರ್(ಸಂ), ೧೯೬೧, ಎ ಗೈಡ್ ಟು ಹಿಸ್ಟಾರಿಕಲ್ ಮೆಥೆಡ್, ದಿ ಡೋರ್‌ಸೆ ಪ್ರೆಸ್, ಇಲಿನಾಯ್ಸ್.

೪೬. ರಾಮಚಂದ್ರನ್ ಸಿ.ಎನ್., ೨೦೦೨, ವಸಾಹತೋತ್ತರ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೭. ರಾಮಚಂದ್ರನ್ ಸಿ.ಎನ್. ೨೦೦೩, ಎಡ್ವರ್ಡ್ ಸೈದ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೮. ರೋಮಿಲಾ ಥಾಪರ್, ಹರ್ಬನ್ಸ್ ಮುಖಿಯಾ, ಬಿಪನ್ ಚಂದ್ರ(ಸಂ), ಕಮ್ಯುನಲಿಸಂ ಆ್ಯಂಡ್ ದ ರೈಟಿಂಗ್ ಆಫ್ ಇಂಡಿಯನ್ ಹಿಸ್ಟರಿ, ನ್ಯೂಡೆಲ್ಲಿ.

೪೯. ರೋಮಿಲಾ ಥಾಪರ್, ಹರ್ಬನ್ಸ್ ಮುಖಿಯ ಮತ್ತು ಬಿಪನ್ ಚಂದ್ರ(ಮೂಲ), ಗೋಪಾಲ ಕೃಷ್ಣ ರಾವ್ ಕೆ.ಎಲ್.(ಕನ್ನಡಕ್ಕೆ), ೧೯೫೫ (ಮೂರನೇ ಮುದ್ರಣ ೨೦೧೦), ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೦. ರೋಮಿಲಾ ಥಾಪರ್, ೧೯೯೭, ಟೈಮ್ ಆ್ಯಸ್ ಎ ಮೆಟಾಫರ್ ಆಫ್ ಹಿಸ್ಟರಿ-ಅರ್ಲಿ ಇಂಡಿಯಾ, ಆಕ್ಸ್‌ಫರ್ಡ್ ಇಂಡಿಯಾ ಪ್ರೆಸ್, ದೆಹಲಿ.

೫೧. ವಸಂತರಾಜ ಎನ್.ಕೆ., ೨೦೧೦, ಡಿ.ಡಿ.ಕೊಸಾಂಬಿ ನಿಮಗೆ ತಿಳಿದಿರಲಿ, ಚಿಂತನ ಪುಸ್ತಕ, ಬೆಂಗಳೂರು. ೧೧.ವಸು ಎಂ.ವಿ., ೨೦೦೪, ಮೌಖಿಕ ಇತಿಹಾಸ, ಅಂಕಿತ ಪುಸ್ತಕ, ಬೆಂಗಳೂರು.

೫೨. ವಿಜಯ್ ಪೂಣಚ್ಚ ತಂಬಂಡ, ೨೦೦೪, ಪಳಮೆ: ಮೌಖಿಕ ಆಕರಗಳು ಕಟ್ಟಿಕೊಡುವ ಕನ್ನಡ-ಕೊಡಗು-ತುಳುನಾಡಿನ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೩. ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ.), ವಿಜಯ್ ಪೂಣಚ್ಚ ತಂಬಂಡ, ವಿರೂಪಾಕ್ಷಿ ಪೂಜಾರಹಳ್ಳಿ(ಸಂ.ಸಂ.), ೨೦೧೦, ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ಚರಿತ್ರೆ ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೪. ವೆಂಕಟರತ್ನಂ ಎ.ವಿ., ಪದ್ಮ ಎಂ.ಬಿ., ೧೯೮೫(ಮರುಮುದ್ರಣ ೨೦೦೩), ಇತಿಹಾಸ ಸಂಶೋಧನಾ ಮಾರ್ಗ, ಬೆಂಗಳೂರು ಪ್ರೆಸ್, ಬೆಂಗಳೂರು.

೫೫. ಶರ್ಮ ಆರ್.ಎಸ್.(ಮೂಲ), ಶ್ರೀನಿವಾಸಮೂರ್ತಿ ಜೆ., ಶೋಭ ಆರ್., ಗುರುದತ್ ಎಸ್., ರಾಮಕೃಷ್ಣ ಜಿ.(ಅನು), ೨೦೦೪, (ನಾಲ್ಕನೇ ಮುದ್ರಣ-೨೦೧೨), ಪ್ರಾಚೀನ ಭಾರತದಲ್ಲಿ ಶೂದ್ರರು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೬. ಶ್ರೀಧರನ್ ಈ., ೨೦೦೪, ಎ ಟೆಕ್ಸ್ಟ್ ಬುಕ್ ಆಫ್ ಹಿಸ್ಟೋರಿಯೋಗ್ರಫಿ, (ಕ್ರಿ.ಪೂ.೫೦೦ ರಿಂದ ಕ್ರಿ.ಶ.೨೦೦೦), ಓರಿಯಂಟ್ ಲಾಂಗ್‌ಮನ್, ನ್ಯೂಡೆಲ್ಲಿ.

೫೭. ಶ್ರೀನಿವಾಸಮೂರ್ತಿ ಎಚ್.ವಿ., ೨೦೦೦, ಇತಿಹಾಸ ಸಂಶೋಧನಾ ಸಮೀಕ್ಷೆ, ಪದ್ಮ ಪ್ರಕಾಶನ, ಬೆಂಗಳೂರು.

೫೮. ಶೆಲ್ಲಿ ವಾಲಿಯಾ, ೨೦೦೧, ಎಡ್ವರ್ಡ್ ಸೈದ್: ಆ್ಯಂಡ್ ದಿ ರೈಟಿಂಗ್ ಆಫ್ ಹಿಸ್ಟರಿ, ರೂಟ್ಲೆಡ್ಜ್, ಲಂಡನ್.

೫೯. ಶೆಲ್ಲಿ ವಾಲಿಯಾ(ಮೂಲ), ರಾಮಲಿಂಗಪ್ಪ ಟಿ.ಬೇಗೂರು(ಕನ್ನಡಕ್ಕೆ), ೨೦೦೯, ಎಡ್ವರ್ಡ್ ಡಬ್ಲ್ಯು ಸೈದ್-ಎಡ್ವರ್ಡ್ ಸೈದ್ ಮತ್ತು ಆತನ ಇತಿಹಾಸದ ಬರವಣಿಗೆ, ಚಂದ್ರಗಿರಿ ಪ್ರತಿಷ್ಠಾನ, ಬೆಂಗಳೂರು.

೬೦. ಷೇಕ್ ಅಲಿ ಬಿ., ೧೯೭೮(ಎರಡನೇ ಆವೃತ್ತಿ, ಮರುಮುದ್ರಣ ೨೦೦೧), ಹಿಸ್ಟರಿ: ಇಟ್ಸ್ ಥಿಯರಿ ಅಂಡ್ ಮೆಥೆಡ್, ಮ್ಯಾಕ್‌ಮಿಲನ್, ನವದೆಹಲಿ.

೬೧. ಸ್ಟೀಫನ್ ಗ್ರೀನ್ ಬ್ಲಾಟ್, ೧೯೯೦, ಲರ್ನಿಂಗ್ ಟು ಕರ್ಸ್: ಎಸ್ಸೇಸ್ ಇನ್ ಅರ್ಲಿ ಮಾಡರ್ನ್ ಕಲ್ಚರ್, ರೂಟ್ಲೆಡ್ಜ್, ಲಂಡನ್.

೬೨. ಸುಮಿತ್ ಸರ್ಕಾರ್, ೧೯೮೩, ಮಾಡರ್ನ್ ಇಂಡಿಯಾ ೧೮೮೫-೧೯೪೭, ನ್ಯೂ ಡೆಲ್ಲಿ.

೬೩. ಸುಮಿತ್ ಸರ್ಕಾರ್, ೧೯೯೮, ಮಾಡರ್ನ್ ಇಂಡಿಯಾ, ೧೮೮೫-೧೯೪೭, ಮ್ಯಾಕ್‌ಮಿಲನ್, ಲಂಡನ್.

೬೪. ಸುರೇಂದ್ರರಾವ್ ಬಿ.೨೦೦೫, ಸಮಾಜ ಮತ್ತು ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೫. ಸುರೇಂದ್ರರಾವ್ ಬಿ., ೨೦೧೦, ಹಿಸ್ಟರಿ ಆ್ಯಸ್ ಹಿಸ್ಟೋರಿಯೋಗ್ರಫಿ, ಐ.ಸಿ.ಎಚ್.ಆರ್. ಪ್ರಾದೇಶಿಕ ಕಚೇರಿ, ಬೆಂಗಳೂರು.

೬೬. ಸೂರ್ಯನಾಥ ಯು ಕಾಮತ್(ಸಂ), ೧೯೯೧, ಹಿಸ್ಟೋರಿಯೋಗ್ರಫಿ ಆಫ್ ಕರ್ನಾಟಕ, ಮಿಥಿಕ್ ಸೊಸೈಟಿ, ಬೆಂಗಳೂರು.

೬೭. ಹೈಡೆನ್ ವೈಟ್, ೧೯೭೩(ಮರುಮುದ್ರಣ ೧೯೮೭), ಮೆಟಾ ಹಿಸ್ಟರಿ: ದಿ ಹಿಸ್ಟಾರಿಕಲ್ ಇಮಾಜಿನೇಷನ್ ಇನ್ ನೈಂಟೀನ್ತ್ ಸೆಂಚುರಿ, ಯೂರೋಪ್, ಬ್ಲಾಟಿಮೋರ್.

೬೮. ಹೋಮರ್ ಸಿ. ಹಾಕೆಟ್, ೧೯೫೫, ದಿ ಕ್ರಿಟಿಕಲ್ ಮೆಥಡ್ ಇನ್ ಹಿಸ್ಟಾರಿಕಲ್ ರಿಸರ್ಚ್ ಆ್ಯಂಡ್ ರೈಟಿಂಗ್, ನ್ಯೂಯಾರ್ಕ್.

ಪ್ರಾಥಮಿಕ ಆಕರಗಳು

ಕಡತಗಳು

೧. ಅರಮನೆ ಕಂಟ್ರೋಲರ್ಸ್ ಆಫೀಸ್ ಮತ್ತು ಪ್ಯಾಲೇಸ್ ಆಫೀಸ್ ಕಡತಗಳು(೧೮೬೮–೧೯೬೦).

೨. ಆನರ್ಸ್ ಇಲಾಖೆ ಕಡತಗಳು (೧೮೫೦–೧೯೫೬).

೩. ಕರೋಹಟ್ಟಿ ಇಲಾಖೆ ಕಡತಗಳು (೧೯೦೬–೧೯೨೨).

೪. ಗೇಮ್ಸ್ ಅಂಡ್ ಟೈಗರ್ಸ್ ಪ್ರಿಸರ್ವ್ಸ್ ಇಲಾಖೆ ಕಡತಗಳು (೧೯೨೦–೧೯೫೪).

೫. ಚಾಮುಂಡಿ ತೊಟ್ಟಿ ಇಲಾಖೆ ಕಡತಗಳು (೧೮೬೪–೧೯೫೨).

೬ ಟೂರ್ಸ್ ಇಲಾಖೆ ಕಡತಗಳು.

೭ ಡೊನೇಷನ್ಸ್ ಇಲಾಖೆ ಕಡತಗಳು(೧೮೫೦–೧೯೫೬).

೮. ಪ್ಯಾಲೇಸ್ ಎಸ್ಟೇಟ್ಸ್ ಅಂಡ್ ಗಾರ್ಡನ್ ಇಲಾಖೆ ಕಡತಗಳು(೧೯೦೪–೧೯೫೬).

೯. ಪ್ಯಾಲೇಸ್ ಮರಮತ್ ಇಲಾಖೆ ಕಡತಗಳು(೧೮೭೬–೧೯೬೧).

೧೦. ಲೆಜಿಸ್ಲೇಟೀವ್ ಅಸೆಂಬ್ಲಿ ಕಡತಗಳು.

೧೧. ಸ್ಕೀಮ್ ಫಾರ್ ಎನ್‌ಕರೆಜಿಂಗ್ ಎಜುಕೇಷನ್ ಅಮಾಂಗ್ ದಿ ಡಿಪ್ರೆಸ್ಡ್ ಕ್ಲಾಸಸ್‌ಗೆ ಸಂಬಂಧಿಸಿದ ಕಡತಗಳು.

೧೨. ಹೋಬಳಿ ಆಡಳಿತ ಇಲಾಖೆ ಕಡತಗಳು(೧೮೭೯–೧೯೫೭).

೧೩. ಅಗ್ರಿಕಲ್ಚರ್ ಅಂಡ್ ಇಂಡಸ್ಟ್ರೀ–ಪೈಲ್ ಎನ್‌ಒಸ್.೫೬:ಎಸ್‌ಎಲ್.ನಂ.೧.೩.೭.೨೨.೨೯–೩೫–೧೯೧೫.

೧೪. ಅಗ್ರಿಕಲ್ಚರ್,ಅಡ್ಮಿನಿಷ್ಟ್ರೇಷನ್ ಆಫ್ ಲ್ಯಾಂಡ್ಸ್, ವಿಲೇಜ್ ಪಂಚಾಯಿತಿ, ಪಬ್ಲಿಕ್ ಇನ್‌ಸ್ಟ್ರಕ್ಷನ್ ಕಡತಗಳು.

೧೫. ಇಂಡಸ್ಟ್ರೀ ಅಂಡ್ ಕಾಮರ್ಸ್–ಫೈಲ್ ನಂ.೧೨೮ ಎಸ್‌ಎಲ್.ನಂ.೧೪.೧೬.೧೯.–೨೧–೧೯೧೮.

೧೬. ಎಜುಕೇಷನ್–ಫೈಲ್– ನಂ.೪೫೪–೧೩–ಎನ್‌ಒಸ್ ೧ ಟು ೭ ೧೯೧೩–೧೪.

೧೭. ಎಜುಕೇಷನ್–ಫೈಲ್–ನಂ.೧೦೬–ಎಸ್‌ಎಲ್.ಎನ್‌ಒಸ್ ೧ ಟು ೪:೯ ಟು ೧೦.೧೯೧೭.

೧೮. ಎಜುಕೇಷನ್–ಫೈಲ್–ನಂ.೨೯೪–೧೮.ಎಸ್‌ಎಲ್.ಎನ್‌ಒಸ್.೩೦.೩೩.೩೮.೮೬–೧೯೧೮.

೧೯. ದಿವಾನ್ ಅಫೀಸ್ ಫೈಲ್ ೧೯೧೭–ಎಸ್‌ಎಲ್.ಎನ್‌ಒಸ್ ೧೨೮.

೨೦. ಮುನ್ಸಿಪಾಲ್ ಫೈಲ್ ನಂ.೮೩–೧೬ ಎಸ್‌ಎಲ್.ಎನ್‌ಒಸ್. ೧ ಎನ್‌ಒಸ್. ೧ ಟು ೬.೧೯೧೬.

ದಾಖಲೆಗಳು(ವರದಿ)

೧. ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು ರಿಪೋರ್ಟ್ಸ್ ೧೮೬೨–೧೯೫೬.

೨. ಎ ಗೈಡ್ ಟು ದಿ ರೆಕಾರ್ಡ್ಸ್ ಇನ್ ದಿ ಡಿವಿಜನಲ್ ಅರ್ಕೈವ್ಸ್.

೩. ಗೆಜೆಟ್ಸ್‌ಗಳು.

೪. ಫೈನಾನ್ಸ್ ಆ್ಯಂಡ್ ರೆವಿನ್ಯೂ ಅಕೌಂಟ್ಸ್ ರಿಪೋರ್ಟ್ಸ್.

೫. ಪ್ರೊಸೀಡಿಂಗ್ಸ್ ಆಫ್ ದಿ ಮೈಸೂರ್.

೬. ಪ್ರೊಸೀಡಿಂಗ್ಸ್ ಆಫ್ ದಿ ಚೀಪ್‌ಕಮೀಷನರ್ ಆಫ್ ಮೈಸೂರ್ ರವಿನ್ಯೂ ಡಿಪಾರ್ಟ್‌ಮೆಂಟ್–ಎಜುಕೇಷನಲ್.

೭. ಬ್ಲೂ ಬುಕ್ಸ್ ಜರ್ನಲ್ಸ್.

೮. ಮೈಸೂರ್ ಸ್ಟೇಟ್ ಪೇಪರ್ಸ್, ವಾಲ್ಯೂಮ್ ಸೆಲೆಕ್ಷನ್ಸ್, ಜರ್ನಲ್ಸ್.

೯. ರಿಪೋರ್ಟ್ಸ್ ಇಂಡಿಯನ್ ಸೋಷಿಯಲ್ ಕಾನ್‌ಫ್ರೆನ್ಸ್ ೧೮೮೯–೧೮೯೪ ಮೈಕ್ರೋ ಪಿಲ್ಮಿ.

೧೦. ರೆಪ್ರೆಸೆಂಟೆಟೀವ್ ಅಸೆಂಬ್ಲಿ ರಿಪೋರ್ಟ್ಸ್.

೧೧. ಸ್ಕಾಲರ್ ಹಿ–ಹಿಂದೂ ಜರ್ನಲ್ಸ್.

೧೨. ಹ್ಯಾಂಡ್ ಬುಕ್ಸ್ ಮೈಸೂರ್ ಅಡ್ಮಿನಿಸ್ಟ್ರೇಷನ್.

೧೩. ಕಾಂತರಾಜ್ ಅರಸ್ ಅವರ ಪತ್ರ ವ್ಯವಹಾರಗಳು.

೧೪. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅನ್ಯರಾಜ್ಯ ಹಾಗೂ ರಾಜ್ಯದೊಳಗಿನ ಪತ್ರ ವ್ಯವಹಾರಗಳು.

೧೫. ಮಿರ್ಜಾ ಇಸ್ಮಾಯಿಲ್ ಅವರ ಪತ್ರ ವ್ಯವಹಾರಗಳು.

೧೬. ವಿಶ್ವೇಶ್ವರಯ್ಯ ಅವರ ಪತ್ರ ವ್ಯವಹಾರಗಳು.

ಸ್ಪೀಚಸ್(ಭಾಷಣಗಳು)

೧. ಸ್ಪೀಚಸ್ ಬೈ ಹಿಸ್ ಹೈನಿಸ್ ಮಹಾರಾಜ ಶ್ರೀ.ಕೃಷ್ಣರಾಜ ಒಡೆಯರ್ ಬಹುದ್ದೂರ್.

೨. ಸ್ಪೀಚಸ್ ಬೈ ಶ್ರೀ.ಮಿರ್ಜಾ ಎಂ. ಇಸ್ಮಾಯಿಲ್,ದಿವಾನ್ಸ್ ಆಫ್ ಮೈಸೂರು ೩ ವಾಲ್ಯೂಮ್.

೩. ಸ್ಪೀಚಸ್ ಬೈ ಹಿಸ್ ಹೈನಿಸ್ ಯುವರಾಜ ಶ್ರೀ. ಕಂಠೀರವ ನರಸಿಂಹರಾಜ ಒಡೆಯರ್ ಬಹುದ್ದೂರ್.

೪. ಸ್ಪೀಚಸ್ ಬೈ ಶ್ರೀ.ಸಿ.ರಂಗಾಚಾರ್ಲು, ದಿವಾನ್ಸ್ ಆಫ್ ಮೈಸೂರ್.

೫. ಸ್ಪೀಚಸ್ ಬೈ ಶ್ರೀ.ಎಂ.ವಿಶ್ವೇಶ್ವರಯ್ಯ, ದಿವಾನ್ಸ್ ಆಫ್ ಮೈಸೂರ್.

೬. ಸ್ಪೀಚಸ್ ಬೈ ಶ್ರೀ.ಎಂ.ಕಾಂತರಾಜ್ ಅರಸ್, ದಿವಾನ್ಸ್ ಆಫ್ ಮೈಸೂರ್.

೭. ಸ್ಪೀಚಸ್ ಬೈ ಹಿಸ್ ಹೈನಿಸ್ ಶ್ರೀ.ಜಯಚಾಮರಾಜ ಒಡೆಯರ್ ಬಹುದ್ದೂರ್, ಮಹಾರಾಜ ಆಫ್ ಮೈಸೂರ್.

ಪತ್ರಾಗಾರ ಇಲಾಖೆಯ ಪ್ರಕಟಿತ ಕೃತಿಗಳು

೧. ಚಿದಾನಂದ ಕವಿ(ಮೂಲ), ಶಾಂತಿನಾಥ ದಿಬ್ಬದ(ಸಂ), ೨೦೦೭, ಮುನಿವಂಶಾಭ್ಯುದಯ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

೨. ಗಾಯಿತ್ರಿ ಜಿ.ವಿ., ೧೯೯೩, ಸೆಲೆಕ್ಷನ್ಸ್ ಫ್ರಮ್ ದಿ ರೆಕಾರ್ಡ್ಸ್ ಆಫ್ ಮೈಸೂರ್ ಪ್ಯಾಲೇಸ್, ಆರ್ಕೈವ್ ಆಫೀಸ್, ಮೈಸೂರು.

೩. ಗೋಪಾಲ್ ಆರ್., ೨೦೧೦, ಟಿಪ್ಪು ಸುಲ್ತಾನ್ ದಿ ಟೈಗರ್ ಆಫ್ ಮೈಸೂರು, ಆರ್ಕಿಯಾಲಜಿ ಆ್ಯಂಡ್ ಮ್ಯೂಸಿಯಂ, ಮೈಸೂರು.

೪. ಗೋಪಾಲ್ ಎಂ.ಎಚ್., ೧೯೯೩, ಬ್ರಿಟಿಷ್ ಸೋರ್ಸ್ ಆಫ್ ದಿ ಎಕಾನಮಿಕ್, ಪೊಲಿಟಿಕಲ್ ಅಂಡ್ ಸೋಷಿಯಲ್ ಹಿಸ್ಟರಿ ಆಫ್ ದಿ ಮೈಸೂರು ಸ್ಟೇಟ್, ವಾಲ್ಯೂಮ್ I, ೧೭೯೯–೧೮೧೨, ಅಡ್ಮಿನಿಸ್ಟ್ರೇಷನ್, ಪಾಪ್ಯುಲರ್ ಪ್ರಕಾಶನ, ಬಾಂಬೆ.

೫. ಗೋಪಾಲ್ ಎಂ. ಹೆಚ್., ೧೯೯೩, ಬ್ರಿಟಿಷ್ ಸೋರ್ಸ್ ಆಫ್ ದಿ ಎಕಾನಮಿಕ್, ಪೊಲಿಟಿಕಲ್ ಆ್ಯಂಡ್ ಸೋಷಿಯಲ್ ಹಿಸ್ಟರಿ ಆಫ್ ದಿ ಮೈಸೂರು ಸ್ಟೇಟ್, ವಾಲ್ಯೂಮ್ II, ೧೮೧೩–೧೮೩೨, ರಾಜ್ ಅಡ್ಮಿನಿಸ್ಟ್ರೇಷನ್ ಪಾಪ್ಯುಲರ್ ಪ್ರಕಾಶನ, ಬಾಂಬೆ.

೬. ದಿ ಕರೆಸ್‌ಪಾಂಡೆನ್ಸ್ ಆಫ್ ದಿ ಫ್ರೆಂಚ್ ಡೂರಿಂಗ್ ದಿ ರೀಜನ್ ಆಫ್ ಹೈದರ್ ಅಲಿ ಆ್ಯಂಡ್ ಟಿಪ್ಪುಸುಲ್ತಾನ್, ೧೯೯೭, ಕರ್ನಾಟಕ ಸ್ಟೇಟ್ ಆರ್ಕೈವ್, ಬೆಂಗಳೂರು.

೭. ದಿವಾನ್ ಪಿ.ಎನ್.ಕೃಷ್ಣಮೂರ್ತಿ, ೧೯೯೪, ಕರ್ನಾಟಕ ಲೇಟರ್ಸ್, ವಾಲ್ಯೂಮ್ ಖಖ, ಕರ್ನಾಟಕ ಸ್ಟೇಟ್ ಆರ್ಕೈವ್ಸ್, ಬೆಂಗಳೂರು.

೮. ದಿವಾನ್ ಎಂ. ವಿಶ್ವೇಶ್ವರಯ್ಯ, ೧೯೯೪, ಮೈಸೂರು ಅಡ್ಮಿನಿಸ್ಟ್ರೇಟೀವ್ ಪೇಪರ್ಸ್, ವಾಲ್ಯೂಮ್ IV, ಕರ್ನಾಟಕ ಸ್ಟೇಟ್ ಅರ್ಕೈವ್ಸ್, ಬೆಂಗಳೂರು.

೯. ಬ್ಯಾರಿ ಲೂಯಿಸ್, ೨೦೦೧, ದಿ ಮೈಸೂರ್ ಕಿಂಗ್‌ಡಮ್ ಆಟ್ ೧೮೦೦ ಆರ್ಕಿಯಾಲಜಿಕಲ್ ಅಪ್ಲಿಕೇಷನ್ಸ್ ಆಫ್ ದಿ ಮೈಸೂರ್ ಸರ್ವೆ ಆಫ್ ಕಾಲಿನ್ ಮೆಕೆಂಝಿ, ಸೌತ್ ಏಷಿಯನ್, ಆರ್ಕಿಯಾಲಜಿ ವಾಲ್ಯೂಮ್-೨, ಪ್ಯಾರೀಸ್.

೧೦. ಮುನಿಸ್ವಾಮಿ ಆರ್., ೧೯೮೭, ಡಾಕ್ಯುಮೆಂಟ್ಸ್ ಆನ್ ದಿ ಮೈಸೂರು ರೆಪ್ರೆಸೆಂಟೆಟೀವ್ ಅಸೆಂಬ್ಲಿ ಪಾರ್ಟ್-II(೧೯೨೦-೧೯೪೭), ಕರ್ನಾಟಕ ಸ್ಟೇಟ್ ಆರ್ಕೈವ್ಸ್, ಬೆಂಗಳೂರು.

೧೧. ಮಂಜುನಾಥನ್ ಜಿ.ಜಿ.(ಸಂ.),೨೦೦೭,ಮೈಸೂರು ಒಡೆಯರ ಆಕರ ಸಾಹಿತ್ಯ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ,ಬೆಂಗಳೂರು.

೧೨. ಸೂರ್ಯನಾಥ ಯು.ಕಾಮತ್, ೧೯೮೨, ಡಕೂಮೆಂಟ್ಸ್ ಆನ್ ದಿ ಮೈಸೂರು ರೆಪ್ರೆಸೆಂಟಿಟೀವ್ ಆಸೆಂಬ್ಲಿ ಪಾರ್ಟ್-I(೧೮೮೧-೧೯೨೦), ಕರ್ನಾಟಕ ಸ್ಟೇಟ್ ಆರ್ಕೈವ್ಸ್, ಬೆಂಗಳೂರು.

ಗ್ಯಾಸೆಟಿಯರ್‌ಗಳು

೧. ಅನೀಸ್ ಸಿರಾಜ್ ಎಸ್.(ಪ್ರ.ಸಂ.), ಚಿಕ್ಕಮಾದು ಎನ್.ಎನ್.(ಲೇ.), ೨೦೧೦, ಮೈಸೂರು ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨. ಅನೀಸ್ ಸಿರಾಜ್ ಎಸ್.(ಪ್ರ.ಸಂ.), ರಾಜಶೇಖರ್ ಪಿ.ಕೆ.(ಲೇ.), ೨೦೧೦, ಪಿರಿಯಾಪಟ್ಟಣ ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೩. ಅನೀಸ್ ಸಿರಾಜ್ ಎಸ್.(ಪ್ರ.ಸಂ.), ರಾಜೇಂದ್ರಪ್ಪ.(ಲೇ.), ೨೦೧೦, ತಿರುಮಕೂಡಲು ನರಸೀಪುರ ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೪. ಅನೀಸ್ ಸಿರಾಜ್ ಎಸ್.(ಪ್ರ.ಸಂ.), ಗಿರೀಗೌಡ ನೀ.(ಲೇ.), ೨೦೧೦, ಹೆಗ್ಗಡದೇವನಕೋಟೆ ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೫. ಅನೀಸ್ ಸಿರಾಜ್ ಎಸ್.(ಪ್ರ.ಸಂ.) ಶ್ಯಾಮಸುಂದರ್.ಬಿ.(ಲೇ.), ೨೦೧೦, ಹುಣಸೂರು ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೬. ಅನೀಸ್ ಸಿರಾಜ್ ಎಸ್.(ಪ್ರ.ಸಂ.) ವಿಶ್ವೇಶ್ವರ ತೇ.ಸಿ.(ಲೇ.), ೨೦೧೦, ಕೃಷ್ಣರಾಜನಗರ ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೭. ಅನೀಸ್ ಸಿರಾಜ್ ಎಸ್.(ಪ್ರ.ಸಂ.) ಮಂಜುಳಾ ಹುಲ್ಲಹಳ್ಳಿ.(ಲೇ.), ೨೦೧೦, ನಂಜನಗೂಡು ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೮. ಅಭಿಶಂಕರ್ ಕೆ.(ಸಂ.) ೧೯೬೮ (ಮರುಮುದ್ರಣ ೨೦೦೩), ಕೋಲಾರ ಜಿಲ್ಲಾ ಗ್ಯಾಸೆಟಿಯರ್, (ಆಂಗ್ಲ) ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೯. ಅಭಿಶಂಕರ್ ಕೆ.(ಸಂ.), ೧೯೬೯, ತುಮಕೂರು ಜಿಲ್ಲಾ ಗ್ಯಾಸೆಟಿಯರ್(ಆಂಗ್ಲ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೧೦. ಅಭಿಶಂಕರ್ ಕೆ.(ಸಂ.), ೧೯೭೧, ಹಾಸನ ಜಿಲ್ಲಾ ಗ್ಯಾಸೆಟಿಯರ್(ಆಂಗ್ಲ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೧೧. ಅಭಿಶಂಕರ್ ಕೆ., ೧೯೭೬, ಶಿವಮೊಗ್ಗ ಜಿಲ್ಲಾ ಗ್ಯಾಸೆಟಿಯರ್(ಆಂಗ್ಲ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೧೨. ಅಭಿಶಂಕರ್ ಕೆ., ೧೯೮೧, ಮಂಗಳೂರು ಜಿಲ್ಲಾ ಗ್ಯಾಸೆಟಿಯರ್(ಆಂಗ್ಲ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೧೩. ಚಿತ್ತರಂಜನ್ ಹೆಚ್.(ಸಂ)., ೨೦೦೫, ಕೋಲಾರ ಜಿಲ್ಲಾ ಗ್ಯಾಸೆಟಿಯರ್(ಕನ್ನಡ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೧೪. ಮುಕುಂದಪ್ರಭು(ಪ್ರ.ಸಂ), ಸುರೇಂದ್ರರಾವ್ ಬಿ.(ಲೇ)., ೨೦೦೨, ಗ್ಯಾಸೆಟಿಯರ್ ಇನ್ ಕಲೋನಿಯಲ್ ಸಬ್ಜೆಕ್ಟಿಫಿಕೇಶನ್ ಸ್ಟರ್ರೋಕಸ್ ಮ್ಯಾನ್ಯುಯಲ್ ಆಫ್ ಸೌತ್ ಕೆನರಾ, ಪಾಲಿಕೆನರಾ ೬೦೦, ಪು.೧೬-೧೭.

೧೫. ರೈಸ್ ಬಿ.ಎಲ್., ೧೮೯೭(ಪರಿಷ್ಕೃತ), (ಮರುಮುದ್ರಣ-೨೦೦೧), ಮೈಸೂರು ಎ ಗ್ಯಾಸೆಟಿಯರ್ ಕಂಪೈಲ್ಡ್ ಫಾರ್ ಗೌರ್ನಮೆಂಟ್, ಎರಡು ಸಂಪುಟಗಳು, ಏಷ್ಯನ್ ಎಜುಕೇಷನಲ್ ಸರ್ವೀಸ್, ನ್ಯೂಡೆಲ್ಲಿ.

೧೬. ಸೂರ್ಯನಾಥ ಯು ಕಾಮತ್ (ಸಂ), ೧೯೮೨-೧೯೮೩, ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್ (ಆಂಗ್ಲ), ಭಾಗ-೧ ಮತ್ತು ೨, ಗೌರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು.

೧೭. ಸೂರ್ಯನಾಥ ಯು. ಕಾಮತ್ (ಸಂ), ೧೯೮೪-೮೬, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಕನ್ನಡ), ಭಾಗ-೧, ೨ ಮತ್ತು ೩, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೧೮. ಸೂರ್ಯನಾಥ ಯು. ಕಾಮತ್ (ಸಂ), ೧೯೮೮, ಮೈಸೂರು ಜಿಲ್ಲಾ ಗ್ಯಾಸೆಟಿಯರ್(ಆಂಗ್ಲ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೧೯. ಸೂರ್ಯನಾಥ ಯು. ಕಾಮತ್(ಸಂ), ೧೯೮೯, ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾಸೆಟಿಯರ್(ಆಂಗ್ಲ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨೦. ಸೂರ್ಯನಾಥ ಯು. ಕಾಮತ್(ಸಂ), ೧೯೯೦, ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್(ಆಂಗ್ಲ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨೧. ಶ್ರೀಸತ್ಯನ್ ಬಿ.ಎಸ್.(ಸಂ.), ೧೯೬೭, ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್(ಆಂಗ್ಲ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨೨. ಶ್ರೀಸತ್ಯನ್ ಬಿ.ಎಸ್.(ಸಂ.), ೧೯೬೮(ಪರಿಷ್ಕೃತ ಕನ್ನಡ ಆವೃತ್ತಿ-೨೦೦೩), ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨೩. ಹಯವದನರಾವ್ ಸಿ., ೧೯೨೭-೩೦(ಮರುಮುದ್ರಣ ೨೦೧೨), ಮೈಸೂರು ಗ್ಯಾಸೆಟಿಯರ್, ಐದು ಸಂಪುಟಗಳು, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು.

೨೪. ಹುಮ್ಯೂನ್ ಕಬೀರ್(ಸಂ), ೧೯೬೪, ದಿ ಗ್ಯಾಸೆಟಿಯರ್ ಆಫ್ ಇಂಡಿಯಾ, ಸಂಪುಟ-೧, ನ್ಯೂಡೆಲ್ಲಿ.

ಆನುಷಾಂಗಿಕ ಆಕರಗಳು

ಕನ್ನಡ ಭಾಷಾ ಆಕರಗಳು

೧. ಅನಿತಾ ಎಂ.ಎಸ್., ೨೦೧೨, ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್(ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಸಮಗ್ರ ಅಧ್ಯಯನ ೧೮೮೪-೧೯೪೦), ಪ್ರಿಯದರ್ಶಿನಿ ಪ್ರಕಾಶನ, ಮೈಸೂರು.

೨. ಅಶ್ವತ್ಥನಾರಾಯಣ, ೨೦೦೮, ಮೈಸೂರು ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳವಳಿಯ ಒಳನೋಟಗಳು, ೧೮೭೦-೧೯೪೦, ಮಾದರ ದೂಳಯ್ಯ ಪ್ರಕಾಶನ, ಮೈಸೂರು.

೩. ಅಶೋಕಕುಮಾರ ರಂಜೇರೆ, ೨೦೦೨, ಸಾಹಿತ್ಯ ಮತ್ತು ಇತಿಹಾಸದ ಸಂಬಂಧಗಳು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೪. ಅಶೋಕ ಶೆಟ್ಟರ್, ೨೦೦೪, ಚರಿತ್ರೆ-ಸಮಾಜ-ಸಾಹಿತ್ಯ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೫. ಇನಾಂದಾರ್ ವಿ.ಎಂ.(ಸಂ), ನರಸಿಂಹಮೂರ್ತಿ ಎನ್.ಕೆ., ೧೯೭೩, ದಿವಾನ್ ಪೂರ್ಣಯ್ಯ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೬. ಉಮಾನಾಥ ಶೆಣೈ ವೈ., ೨೦೦೪, ಇತಿಹಾಸದಲ್ಲಿ ಮರೆತು ಹೋದ ಕನ್ನಡದ ಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭. ಉಮಾಪತಿ ಕೆ.ಎಸ್., ೧೯೯೮, ಮೈಸೂರ್ ಚಲೋ(ಸತ್ಯಾಗ್ರಹ ಪತ್ರಗಳು), ಅಂಕಿತ ಪುಸ್ತಕ, ಬೆಂಗಳೂರು.

೮. ಕಲಬುರ್ಗಿ ಎಂ.ಎಂ.(ಸಂ), ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಕೃಷ್ಣಮೂರ್ತಿ ಎಂ.ಎ. ಮತ್ತು ನರಸಿಂಹಮೂರ್ತಿ ಎಂ.ಎಲ್., ೧೮೮೭, ಶ್ರೀಮನ್ ಮಹಾರಾಜ ಚಾಮರಾಜೇಂದ್ರ ಒಡೆಯರ್ ಅವರ ವಂಶ ರತ್ನಾಕರ, ಬೆಂಗಳೂರು ಪ್ರೆಸ್, ಬೆಂಗಳೂರು.

೧೦. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ ಎಂ., ೧೯೭೦, ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು. ಕೃಷ್ಣರಾವ್ ಎಂ.ವಿ., ೧೯೭೦, ಕರ್ನಾಟಕ ಚರಿತ್ರೆ, ರಾವ್ ಅಂಡ್ ಸನ್ಸ್, ಜಯನಗರ, ಬೆಂಗಳೂರು.

೧೧. ಗೋಪಾಲ್ ಆರ್ ಮತ್ತು ನರೇಂದ್ರ ಪ್ರಸಾದ್ ಎಸ್., ೨೦೦೪, ಮುಮ್ಮಡಿ ಕೃಷ್ಣರಾಜ ಒಡೆಯರು ಒಂದು ಚಾರಿತ್ರಿಕ ಅಧ್ಯಯನ (ಕ್ರಿ.ಶ.೧೭೯೯ ರಿಂದ ೧೮೬೮ ರವರೆಗೆ), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

೧೨. ಗೋಪಾಲ್ ಆರ್.(ಸಂ.), ೨೦೧೧, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೧೩. ಗೋಪಾಲರಾವ್ ಎಚ್.ಎಸ್., ೧೯೯೬(ಮರುಮುದ್ರಣ, ೨೦೦೫, ೨೦೦೮), ಕರ್ನಾಟಕ ಏಕೀಕರಣ ಇತಿಹಾಸ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

೧೪. ಗೌರಿ ಸುಂದರ್(ಸಂ), ೨೦೦೬, ಟಿಪ್ಪು ಸುಲ್ತಾನ್ ಕನ್ನಡ ದ್ರೋಹಿಯೇ? (ವಿಚಾರಾತ್ಮಕ ಲೇಖನಗಳ ಸಂಪುಟ), ಸುಂದರ ಪ್ರಕಾಶನ, ಬೆಂಗಳೂರು.

೧೫. ಗೌರಿ ಸುಂದರ್, ೨೦೧೦, ಮೈಸೂರು ದಸರಾ, ಸುಂದರ ಪ್ರಕಾಶನ, ಬೆಂಗಳೂರು.

೧೬. ಗುಂಡಪ್ಪ ಡಿ.ವಿ., ೧೯೭೧, ಮೈಸೂರಿನ ದಿವಾನರುಗಳು ಜ್ಞಾಪಕ ಚಿತ್ರಶಾಲೆ, ಸಂಪುಟ-೪, ಕಾವ್ಯಾಲಯ ಪ್ರಕಾಶನ, ಮೈಸೂರು.

೧೭. ಚನ್ನೇಗೌಡ ಡಿ.ಆರ್., ೧೯೯೪, ನಮ್ಮ ಮಹಾರಾಜರು, ಕಾವ್ಯಾಲಯ ಪ್ರಕಾಶನ, ಮೈಸೂರು

೧೮. ಚಂದ್ರಶೇಖರ್ ಎಸ್., ೧೯೮೫, ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಒಳನೋಟಗಳು ೧೮೮೧-೧೯೪೦, ಅಂಕಣ ಪ್ರಕಾಶನ, ಬೆಂಗಳೂರು.

೧೯. ಚಂದ್ರಶೇಖರ್ ಎಸ್., ೧೯೯೨, ಅಂಬೇಡ್ಕರ್ ಮತ್ತು ಗಾಂಧಿ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ).

೨೦. ಚಂದ್ರಶೇಖರ್ ಎಸ್, ೧೯೯೯, ಸಾಹಿತ್ಯ ಮತ್ತು ಚರಿತ್ರೆ, ನಮ್ಮ ಪ್ರಕಾಶನ, ತಿಪಟೂರು.

೨೧. ಚಂದ್ರಶೇಖರ್ ಎಸ್., ಕನ್ನಡಕ್ಕೆ: ಸಿ.ನಾಗಣ್ಣ, ೨೦೦೦, ದಕ್ಷಿಣ ಭಾರತ: ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಚಂದ್ರಶೇಖರ್ ಎಸ್., ೨೦೦೨, ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ, ಬಿಳಿಗೆರೆ, ತಿಪಟೂರು.

೨೩. ಚಂದ್ರಶೇಖರ್ ಎಸ್., ೨೦೦೬, ವಸಾಹತುಕಾಲೀನ ಕರ್ನಾಟಕ, ಕನ್ನಡ ಸಂಸ್ಕೃತಿ ಮತ್ತು ಇಲಾಖೆ, ಬೆಂಗಳೂರು.

೨೪. ಚಂದ್ರಶೇಖರ್ ಎಸ್., ಶಶಿಧರ್ ಎಂ. (ಸಂ), ೨೦೦೭, ಕರ್ನಾಟಕ ಚರಿತ್ರೆ: ಇಣುಕು ನೋಟಗಳು, ಪ್ರಸಾರಾಂಗ, ಬೆಂಗಳೂರು.

೨೫. ಚಿದಾನಂದಮೂರ್ತಿ ಎಂ., ೧೯೬೬(ಐದನೆಯ ಮುದ್ರಣ ೨೦೧೧), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.೪೫೦-೧೧೫೦), ಸಪ್ನ ಬುಕ್ ಹೌಸ್, ಬೆಂಗಳೂರು.

೨೬. ಚಿದಾನಂದಮೂರ್ತಿ ಎಂ., ೨೦೧೩, ಮೂಲ ದಾಖಲೆಗಳಲ್ಲಿ ಹುದುಗಿದ್ದ ಟಿಪ್ಪು, ಭಾರತ ವಿಕಾಸ ಪರಿಷತ್ತು, ಬೆಂಗಳೂರು.

೨೭. ಚಿನ್ನಸ್ವಾಮಿ ಸೋಸಲೆ ಎನ್., ೨೦೦೨, ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೨೮. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಚಿನ್ನಸ್ವಾಮಿ ಸೋಸಲೆ ಎನ್., ೨೦೦೫, ನಾಲ್ವಡಿ ಕೃಷ್ಣನ ಮೈಸೂರು(ಸಾಮಾಜಿಕ, ಶೈಕ್ಷಣಿಕ ಹಾಗೂ ಅಭಿವೃದ್ಧಿಯ ನೆಲೆಯ ಅಧ್ಯಯನ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಚಿನ್ನಸ್ವಾಮಿ ಸೋಸಲೆ ಎನ್., ೨೦೧೦, ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೨, ದಿವಾನ್ ಸರ್ ಮಿರ್ಜಾ ಎಂ., ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೨. ಚಿನ್ನಸ್ವಾಮಿ ಸೋಸಲೆ ಎನ್., ೨೦೧೩, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೩. ಚಿನ್ನಸ್ವಾಮಿ ಸೋಸಲೆ ಎನ್., ೨೦೧೫, ಜಯಚಾಮರಾಜೇಂದ್ರ ಒಡೆಯರ್ ಕಾಲದ ಮೈಸೂರು ಸಂಸ್ಥಾನ, ಸಂಸ್ಕೃತಿ ಪ್ರಕಾಶನ, ಮೈಸೂರು.

೩೪. ಜಯಪ್ಪಗೌಡ ಡಿ.ಎಸ್., ೧೯೯೪(ಮರುಮುದ್ರಣ-೨೦೦೭), ದಿವಾನ್ ಸರ್.ಎಂ. ವಿಶ್ವೇಶ್ವರಯ್ಯ ನವರ ಕಾರ್ಯ ಸಾಧನೆಗಳು, ಗೀತಾ ಬುಕ್ ಹೌಸ್,ಮೈಸೂರು.

೩೫. ಜಯಸಿಂಹರಾವ್ ಸಿ.ಕೆ., ೧೯೪೦, ನಾಲ್ವಡಿ ಕೃಷ್ಣನ ಮೈಸೂರು, ಎಲೆಕ್ಟ್ರಿಕ್ ಪ್ರೆಸ್, ತುಮಕೂರು.

೩೬. ಜಯಸಿಂಹರಾವ್ ಸಿ.ಕೆ., ೧೯೪೦, ಪ್ರಗತಿಪರ ಮೈಸೂರು, ಎಲೆಕ್ಟ್ರಿಕ್ ಪ್ರೆಸ್, ತುಮಕೂರು.

೩೭. ತಲಕಾಡು ಚಿಕ್ಕರಂಗೇಗೌಡ, ೨೦೧೩, ಟಿಪ್ಪು ಸುಲ್ತಾನ್ ಕಾಲದ ಪ್ರಸಂಗಗಳು, ಚಂದ್ರಗಿರಿ ಪ್ರಕಾಶನ, ಬೆಂಗಳೂರು.

೩೮. ತಿರುಮಲೆ ತಾತಾಚಾರ್ಯ ಶರ್ಮ, ೧೯೪೦, ಮೈಸೂರು ರಾಜಕೀಯ ಸುಧಾರಣೆಗಳ ತಿರುಳು, ವಿಶ್ವಕರ್ನಾಟಕ, ಬೆಂಗಳೂರು.

೩೯. ತಿರುಮಲೆ ತಾತಾಚಾರ್ಯ ಶರ್ಮ, ೧೯೫೬, ಮೈಸೂರು ಸಂಸ್ಥಾನದ ಸಂಗ್ರಾಮೇತಿಹಾಸ ಸಂಗ್ರಹ, ಮೈಸೂರು ಸರ್ಕಾರದ ಮುದ್ರಣಾಲಯ, ಬೆಂಗಳೂರು.

೪೦. ತಿರುಮಲೆ ತಾತಾಚಾರ್ಯ ಶರ್ಮ, ೧೯೬೦, ಭಾರತ ರತ್ನ ಎಂ.ವಿಶ್ವೇಶ್ವರಯ್ಯ, ಲೋಕ ಶಿಕ್ಷಣ ಟ್ರಸ್ಟ್ ಪ್ರಕಾಶನ, ಬೆಂಗಳೂರು.

೪೧. ತಿರುಮಲೆ ತಾತಾಚಾರ್ಯ ಶರ್ಮ, ೧೯೭೩, ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಸಾಹಿತ್ಯ ಸಂಘ, ಧಾರಾವಾಡ.

೪೨. ತಿರುಮಲೆ ತಾತಾಚಾರ್ಯ ಶರ್ಮ, ೨೦೦೬, ಇತಿಹಾಸದ ಹಳೆಯ ಪುಟಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೩. ತಿಮ್ಮನಹಳ್ಳಿ ವೇಣುಗೋಪಾಲ್, ೨೦೧೦, ರೈತರು: ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳವಳಿ ೧೮೮೧-೧೯೪೭, ಧಾತ್ರಿ ಪುಸ್ತಕ, ಬೆಂಗಳೂರು.

೪೪. ದೊರೆಸ್ವಾಮಿ ಎಚ್.ಎಸ್., ೨೦೦೬, ಹೋರಾಟದ ದಿಟ್ಟ ಹೆಜ್ಜೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪೫. ಪ್ರತಾಪ್ ಸಿಂಹ, ೨೦೧೩, ಟಿಪ್ಪು ಸುಲ್ತಾನ ಸ್ವಾತಂತ್ರ ವೀರನಾ?, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೪೬. ನರಸಿಂಹಮೂರ್ತಿ ಎ.ವಿ, ೨೦೦೮, ಭಾರತೀಯ ನಾಣ್ಯ ಪರಂಪರೆ (ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪೭. ನಂಜರಾಜ ಅರಸು ಪಿ.ವಿ. ಮತ್ತು ಚಂದ್ರರಾಜ ಅರಸು ಎಸ್.ಆರ್.(ಸಂ)., ೧೯೯೯, ನಾಲ್ವಡಿ ಕೃಷ್ಣರಾಜ ಒಡೆಯರ್ ಒಂದು ದರ್ಶನ, ಅಖಿಲ ಕರ್ನಾಟಕ ಅರಸು ಪರಿಷತ್(ರಿ), ಮೈಸೂರು.

೪೮. ನಂಜರಾಜ ಅರಸು ಪಿ.ವಿ.,೨೦೦೩, ಮರೆಯಲಾಗದ ಮಹಾಚೇತನ ನಾಲ್ವಡಿ ಕೃಷ್ಣರಾಜ ಒಡೆಯರ್, ಅಖಿಲ ಕರ್ನಾಟಕ ಅರಸು ಪರಿಷತ್(ರಿ), ಮೈಸೂರು.

೪೯. ನಂಜರಾಜ ಅರಸು ಪಿ.ವಿ., ೨೦೦೭, ಮೈಸೂರು: ನೂರಿನ್ನೂರು ವರ್ಷಗಳ ಹಿಂದೆ, ಅಭಿರುಚಿ ಪ್ರಕಾಶನ, ಮೈಸೂರು.

೫೦. ನಂಜುಂಡಸ್ವಾಮಿ ವಿ., ೨೦೧೦, ಶ್ರೀಜಯಚಾಮರಾಜೇಂದ್ರ ಒಡೆಯರ ಕೃತಿಗಳು, ತುನುಮನ ಪ್ರಕಾಶನ, ಮೈಸೂರು

೫೧. ನಾಗಲಿಂಗಸ್ವಾಮಿ ನ., ೧೯೮೩, ರಾಜಋಷಿ ಜಯಚಾಮರಾಜೇಂದ್ರ ಒಡೆಯರ್, ಕನ್ನಡ ಪತ್ರಿಕಾಲಯ, ಮೈಸೂರು.

೫೨. ನಾರಾಯಣ ರಾವ್ ವಿ.ಎಸ್., ೧೯೫೨(ಮರುಮುದ್ರಣ, ೧೯೭೮), ವಿಶ್ವೇಶ್ವರಯ್ಯ ಜೀವನ ಮತ್ತು ಸಾಧನೆ, ಗೀತಾ ಬುಕ್ ಹೌಸ್, ಮೈಸೂರು.

೫೩. ನಾರಾಯಣರಾವ್ ವಿ.ಎಸ್. ೧೯೭೫(ಮರುಮುದ್ರಣ ೨೦೦೯), ಮಿರ್ಜಾ ಇಸ್ಮಾಯಿಲ್ ಅವರ ಜೀವನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫೪. ನಾರಾಯಣರಾವ್ ವಿ.ಎಸ್., ೧೯೭೮, ದಿವಾನ್ ಸರ್ ಶೇಷಾದ್ರಿ ಅಯ್ಯರ್: ಜೀವನ-ಸಾಧನೆ, ಗೀತಾ ಬುಕ್ ಹೌಸ್, ಮೈಸೂರು.

೫೫. ಪುಟ್ಟಸ್ವಾಮಿ ಬಿ.ಎಸ್, ೨೦೦೭, ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ ಮುದ್ದು ಶ್ರೀ ಗ್ರಂಥಮಾಲೆ, ಬೆಂಗಳೂರು.

೫೬. ಪುಟ್ಟಸ್ವಾಮಿ ಬಿ.ಎಸ್., ೨೦೧೨, ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು, ಮನೋಜ್ ಪಬ್ಲಿಕೇಷನ್, ಬೆಂಗಳೂರು.

೫೭. ಪ್ರಮೀಳಾದೇವಿ ಬಿ.ಕೆ., ೨೦೧೦, ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಹಾಗೂ ರಾಜಕೀಯ ಜಾಗೃತಿ -ಒಂದು ಒಳನೋಟ ೧೮೮೧-೧೯೩೮, ರೂಪ ಪ್ರಕಾಶನ, ಮೈಸೂರು.

೫೮. ಪ್ರಸನ್ನಕುಮಾರ್ ಎಂ.(ಅನುವಾದಕರು ಆರ್.ಎಲ್., ಅನಂತರಾಮಯ್ಯ), ೨೦೦೧, ಮೈಸೂರಿನ ಇತಿಹಾಸದಲ್ಲಿ ದಾನ(ಕ್ರಿ.ಶ.೧೬೦೦-೧೮೮೧), ಸಮನ್ವಯ ಪ್ರಕಾಶನ, ಮಂಗಳೂರು.

೫೯. ಬಾರ್ಕೂರು ಉದಯ, ೨೦೦೩, ಹೈದರಾಲಿ-ಟಿಪ್ಪೂ: ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು.

೬೦. ಭಟ್ಟ ಜಿ.ಎಸ್, ಜೀನಹಳ್ಳಿ ಸಿದ್ಧಲಿಂಗಪ್ಪ (ಸಂ), ೨೦೧೦, ಮೈಸೂರು ದರ್ಶನ, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು.

೬೧. ಮಂಜಪ್ಪಶೆಟ್ಟಿ ಮಸಗಲಿ ಎಂ.ಪಿ, ೨೦೦೩, ಮೈಸೂರು ಅರಮನೆ, ಮಸಗಲಿ ಪ್ರಕಾಶನ, ಮೈಸೂರು.

೬೨. ಮಾನಪ್ಪ ನಾಯಕ ಎಚ್., ೧೯೭೦, ಮುಮ್ಮಡಿ ಕೃಷ್ಣರಾಜ ಒಡೆಯರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬೩. ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೬೦, ಸರ್.ವಿಶ್ವೇಶ್ವರಯ್ಯ ಜೀವನ, ಕಾರ್ಯಾಲಯ, ಬೆಂಗಳೂರು.

೬೪. ಮುದ್ದಾಚಾರಿ ಬಿ., ೧೯೮೩, ಯುವರಾಜ ಕಂಠೀರವ ನರಸಿಂಹರಾಜ ಒಡೆಯರು(೧೮೮೮-೧೯೪೦), ಉದಯ ಪ್ರಕಾಶನ, ಮೈಸೂರು.

೬೫. ಮುದ್ದಾಚಾರಿ ಬಿ., ೨೦೦೧, ಮರಾಠರ ಅತಿಕ್ರಮಣ ಮೈಸೂರಿನ ಪ್ರತಿಭಟನೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೬೬. ರಂಗಸ್ವಾಮಿ ಎ.(ಪ್ರ.ಸಂ), ಹರಿಶಂಕರ್ ಎಚ್.ಎಸ್.(ಲೇ), ೨೦೧೨, ಮೈಸೂರು ಒಡೆಯರ ಕಾಲದ ಸಾಹಿತ್ಯ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ, ಮೈಸೂರು

೬೭. ರವಿ ಎಂ.ಆರ್., ೨೦೧೪, ಆಧುನಿಕ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ ೧೮೮೧-೧೯೪೭, ಸಂವಹನ ಪ್ರಕಾಶನ ಮೈಸೂರು.

೬೮. ರಾಕೇಶ್ ಹೆಚ್.ಎಸ್., ೨೦೧೧, ಮೈಸೂರು ಚಲೋ ಚಳವಳಿ, ರೂಪ ಪ್ರಕಾಶನ, ಮೈಸೂರು.

೬೯. ರಾಕೇಶ್ ಹೆಚ್.ಎಸ್., ೨೦೧೨, ಮೈಸೂರು ಒಡೆಯರು ಮತ್ತು ಶೃಂಗೇರಿ ಮಠ, ಕಿಟಕಿ ಪ್ರಕಾಶನ, ಮೈಸೂರು.

೭೦. ರಾಜರತ್ನಂ ಎ., ೨೦೦೦, ಮೈಸೂರು ಒಡೆಯರು ಮತ್ತು ಕರ್ನಾಟಕ ಸಂಗೀತ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೭೧. ರಾಜಾರಾವ್ ವಿ.ಎಂ., ೧೯೪೬, ಆಧುನಿಕ ಮೈಸೂರು ನಿರ್ಮಾಪಕರು, ಮೋದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು.

೭೨. ರಾಜು ಎಲ್.ಪಿ., ೨೦೧೧, ವಸಾಹತುಷಾಹಿ ಮತ್ತು ರಾಷ್ಟ್ರೀಯತೆ ಸಂಘರ್ಷ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು.

೭೩. ರಾಮಕೃಷ್ಣರಾವ್ ಬಿ., ೧೯೧೬-೧೯೨೨, ಮೈಸೂರು ಸಂಸ್ಥಾನದ ಪ್ರಭುಗಳು ಶ್ರೀಮನ್ಮಹಾರಾಜ ರವರ ವಂಶಾವಳಿ, ಮೈಸೂರು ಸರ್ಕಾರ ಪ್ರೆಸ್, ಮೈಸೂರು.

೭೪. ರಾಮಣ್ಣ ಹೆಚ್.ಕೋಡಿಹಳ್ಳಿ, ೨೦೦೯, ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೫. ರಾಮರಾವ್ ಯು., ೧೯೯೯, ಮೈಸೂರಿನ ರಾಜ್ಯಲಕ್ಷ್ಮಿಯವರು, ಕಾವ್ಯಾಲಯ ಪ್ರಕಾಶನ, ಮೈಸೂರು.

೭೬. ಲಿಂಗಪ್ಪ ಎಂ.ಕೆ., ೧೯೮೦, ಮೈಸೂರು ಒಂದು ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೭೭. ಲಿಂಗಯ್ಯ ಓ.ಎಂ., ೧೯೪೧, ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರು, ದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು.

೭೮. ಲೀಲಾ ಬಿ. ಮುಂಬೈ, ೨೦೧೦, ಮೈಸೂರು ಸಾಂಸ್ಕೃತಿಕ ಸಂಕಥನ, ಕನ್ನಡ ಅಧ್ಯಯನ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

೭೯. ವಸಂತಲಕ್ಷ್ಮೀ ಕೋ., ೧೯೯೭, ತಿ.ತಾ.ಶರ್ಮ, ಪ್ರೇಮಸಾಯಿ ಪ್ರಕಾಶನ, ಬೆಂಗಳೂರು

೮೦. ವಸು ಎಂ.ವಿ.(ಸಂ.), ೨೦೦೯, ಕನ್ನಡದೊಳ್ ಭಾವಿಸಿದ ಜನಪದಂ, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು.

೮೧. ವಿಶ್ವೇಶ್ವರಯ್ಯ ಸರ್.ಎಂ.(ಮೂಲ), ಗಜಾನನ ಶರ್ಮ(ಕನ್ನಡಕ್ಕೆ), ೨೦೦೫, ನನ್ನ ವೃತ್ತಿಜೀವನದ ನೆನಪುಗಳು (ಮೆಮೋರಿಸ್ ಆಫ್ ಮೈ ವರ್ಕಿಂಗ್ ಲೈಫ್), ಅಂಕಿತ ಪುಸ್ತಕ, ಬೆಂಗಳೂರು.

೮೨. ವೀರತಪ್ಪ ಕೆ., ೧೯೭೭, ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ವಿಜಯರವಿ ಪ್ರಕಾಶನ, ಬೆಂಗಳೂರು.

೮೩. ವೆಂಕಟಪತಯ್ಯ ಬಿ.ಆರ್., ೧೯೯೬, ಮೈಸೂರು ನಗರದ ಸಂಗೀತ ನೃತ್ಯ ಕಲಾವಿದರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೮೪. ವೆಂಕಟಾಚಲಶಾಸ್ತ್ರೀ, ೧೯೯೫, ಎಂ.ಶ್ಯಾಮರಾಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೫. ವೆಂಕಟರಾಮಯ್ಯ ಸಿ.ಕೆ., ೧೯೪೧ (ಮರುಮುದ್ರಣ ೨೦೧೧) ಆಳಿದ ಮಹಾಸ್ವಾಮಿಯವರು (ದಿವಂಗತರಾದ ಶ್ರೀಮನ್ಮಹಾರಾಜ ಶ್ರೀಮನ್ನಾಲ್ವಡಿ ಶ್ರೀಕೃಷ್ಣ ರಾಜೇಂದ್ರ ಒಡೆಯರವರ ಜೀವನ ಚರಿತ್ರೆ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೮೬. ವೆಂಕಟೇಶ ಭೀಮರಾವ ಆಲೂರು, ೧೯೪೦, ಕರ್ನಾಟಕ ವೀರರತ್ನಗಳು, ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ.

೮೭. ಶಾಮರಾವ್ ಎಂ., ೧೮೯೩, ಮಹಿಸೂರು ಸಂಸ್ಥಾನದ ಚರಿತ್ರೆ, ಗೌರ್ನಮೆಂಟ್ ಪ್ರೆಸ್, ಬೆಂಗಳೂರು.

೮೮. ಶರ್ಮಾ ಎಚ್.ಡಿ.(ಇಂಗ್ಲೀಷ್ ಮೂಲ), ಪ್ರಧಾನ್ ಗುರುದತ್ತ (ಕನ್ನಡಕ್ಕೆ), ೨೦೦೩, ಟಿಪ್ಪು-ನಿಜಸ್ವರೂಪ, ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು.

೮೯. ಶ್ರೀಧರಮೂರ್ತಿ ಮ., ೧೯೭೨, ಒಡೆಯರು ಮತ್ತು ಮೈಸೂರು, ಕರ್ನಾಟಕ ಸಹಕಾರೀ ಪ್ರಕಾಶನ, ಬೆಂಗಳೂರು.

೯೦. ಶ್ರೀಧರ ಸಿ.ಎ.(ಸಂ), ೨೦೧೦, ಮೈಸೂರು ಒಡೆಯರು ಮತ್ತು ಕರ್ನಾಟಕ ಸಂಸ್ಕೃತಿ, ಸಂಸ್ಕೃತಿ ಬುಕ್ ಪ್ಯಾರಡೈಸ್, ಮೈಸೂರು.

೯೧. ಶ್ರೀನಾಥ, ೧೯೮೩, ನಾಲ್ವಡಿ ಕೃಷ್ಣರಾಜನ ಮೈಸೂರು, ಕಾವ್ಯಾಲಯ ಪ್ರಕಾಶನ, ಮೈಸೂರು.

೯೨. ಶ್ರೀನಿವಾಸ ಅಯ್ಯಂಗಾರ್ ಸಿ.ಆರ್., ೧೯೭೧, ಮೈಸೂರು ರಾಜ್ಯದ ಮಹಾಶಿಲ್ಪಿ ಶ್ರೀಕೃಷ್ಣರಾಜ ಒಡೆಯರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

೯೩. ಶ್ರೀನಿವಾಸ ಮೂರ್ತಿ ಎಸ್.ಎಲ್., ೨೦೧೧, ಪುರಾತತ್ತ್ವ ಪಿತಾಮಹ ಬಿ.ಎಲ್.ರೈಸ್ ಜೀವನ-ಸಾಧನೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೯೪. ಶ್ರೀನಿವಾಸ ಹಾವನೂರು, ೧೯೭೪, ಹೊಸಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪೂರ್ವಾರ್ಧ.

೯೫. ಶಿಂಗ್ರಯ್ಯ ಎಂ., ೧೯೦೫, ಮೈಸೂರು ಮಹಾರಾಜಾಧಿರಾಜ ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ, ಗ್ರಾಸಿಯಸ್ ಪ್ರೀಮಿಸನ್ ಆಫ್ ಹಿಸ್ ಹಿಗ್ಗಿಸ್ ಶ್ರೀ ಕೃಷ್ಣರಾಜ ಒಡೆಯರ್ ಬಹುದೂರ್, ಮೈಸೂರು.

೯೬. ಶಿಂಗ್ರಯ್ಯ ಎಂ., ೧೯೪೧, ಮೈಸೂರಿನ ಆಳಿದ ಮಹಾಸ್ವಾಮಿಯವರಾದ ನಾಲ್ವಡಿ ಕೃಷ್ಣರಾಜ ಒಡೆಯರವರು, ಗೌರ್ನಮೆಂಟ್ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು.

೯೭. ಶೇಷಗಿರಿ ರಾವ್ ಎಲ್.ಎಸ್., ೧೯೯೧(ಮರುಮದ್ರಣ, ೨೦೧೦), ಮೋಕ್ಷ ಗುಂಡಂ ವಿಶ್ವೇಶ್ವರಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೯೮. ಷೇಕ್ ಅಲಿ ಬಿ., ೧೯೭೪(ಮರುಮುದ್ರಣ ೨೦೧೦), ಟಿಪ್ಪು ಸುಲ್ತಾನ್, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನ್ಯೂಡೆಲ್ಲಿ.

೯೯. ಷೇಕ್ ಅಲಿ ಬಿ., (ಪ್ರ.ಸಂ),ಸೆಬಾಸ್ಟಿಯನ್ ಜೋಸೆಫ್, ೧೯೯೭, ಚರಿತ್ರೆ ಸಂಪುಟ-೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೦. ಷೇಕ್ ಅಲಿ ಬಿ.,(ಪ್ರ.ಸಂ) ಚಂದ್ರಶೇಖರ್ ಎಸ್., ೧೯೯೭, ಚರಿತ್ರೆ ಸಂಪುಟ-೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦೧. ಸಣ್ಣಯ್ಯ ಬಿ.ಎಸ್.(ಸಂ), ೧೯೯೬, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೦೨. ಸ್ವಾಮಿರಾವ್ ಎಲ್., ೨೦೦೯, ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦೩. ಸುಧಾಮಣಿ ಬಿ.ವಿ., ೨೦೦೯, ದಳವಾಯಿ ನಂಜರಾಜಯ್ಯನ ಕಾಲದ ಮೈಸೂರು, ಅನನ್ಯ ಪ್ರಕಾಶನ, ಮೈಸೂರು.

೧೦೪. ಸುಬ್ಬರಾವ್ ಎನ್., ೧೯೩೨, ಮೈಸೂರು ವಡೆಯರ ಎರಡು ಶತಮಾನಗಳ ಆಳಿಕೆ(೧೫೬೫-೧೭೬೧), ಶ್ರೀಮತ್ಕನ್ಯಕಾಪರಮೇಶ್ವರಿ ಪ್ರೆಸ್, ಮೈಸೂರು.

೧೦೫.ಸುಬ್ಬರಾವ್ ಎನ್.ಎಸ್., ೧೯೩೭, ಮೈಸೂರು ಕೈಪಿಡಿ, ಮೈಸೂರು ಪ್ರೆಸ್, ಮೈಸೂರು
೧೦೬.ಸುಂದರರಾವ್ ಬ.ನ. ಮತ್ತು ವೆಂಕಟೇಶ ಶಾಸ್ತ್ರಿ ಜಿ. ೧೯೮೨, ಸರ್.ಎಂ.ವಿಶ್ವೇಶ್ವರಯ್ಯ ಜೀವನ ಮತ್ತು ಸಾಧನೆ, ಗೌರ್‍ನಮೆಂಟ್ ಪ್ರೆಸ್,ಬೆಂಗಳೂರು.
೧೦೭.ಸುಂದರರಾವ್ ಬ.ನ., ೧೯೮೫(ಮರುಮುದ್ರಣ ೨೦೧೧), ಬೆಂಗಳೂರಿನ ಇತಿಹಾಸ, ಅಂಕಿತ ಪ್ರಕಾಶನ, ಬೆಂಗಳೂರು.
೧೦೮.ಸೂರ್ಯನಾಥ ಕಾಮತ್, ೧೯೮೮, ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು, ಬುರ್ಲಿ ಬಿಂದುಮಾಧವ ಸ್ಮಾರಕ ಪ್ರತಿಷ್ಠಾನ, ಹುಬ್ಬಳ್ಳಿ.
೧೦೯.ಸೂರ್ಯನಾಥ್ ಯು ಕಾಮತ್(ಸಂ), ೧೯೯೮(ದ್ವಿತೀಯ ಮುದ್ರಣ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಇಂಗ್ಲಿಷ್ ಭಾಷಾ ಆಕರಗಳು

೧. ಅನಿಲ್, ಸೆಕ್ಸೇನಾ, ೨೦೦೭, ಈಸ್ಟ್ ಇಂಡಿಯಾ ಕಂಪನಿ, ಅನ್ಮೋಲ್ ಪಬ್ಲಿಕೇಷನ್, ನ್ಯೂಡೆಲ್ಲಿ.
೨. ಅನಂತಕೃಷ್ಣ ಅಯ್ಯರ್ ಎಲ್.ಕೆ. ಅ್ಯಂಡ್ ನಂಜುಂಡಯ್ಯ, ೧೯೧೯ (ಮರುಮುದ್ರಣ ೧೯೩೬), ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್-೪ ಸಂಪುಟಗಳು, ಮೈಸೂರು.
೩. ಅಣ್ಣಾಸ್ವಾಮಿ, ೨೦೦೩, ಬೆಂಗಳೂರು ಟು ಬೆಂಗಲೂರ್, ವೆಂಗಡಮ್ ಪಬ್ಲಿಕೇಷನ್ಸ್, ಬೆಂಗಳೂರು.
೪. ಅಬ್ದುಲ್ ಅಜೀಜ್, ೧೯೭೨, ಇಂಡಸ್ಟ್ರೀಯಲ್ ವೇಜ್ ಸ್ಟ್ರಕ್ಚರ್ ಇನ್ ಮೈಸೂರ್ ಸ್ಟೇಟ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೫. ಅಬ್ಬೈ ಜೆ.ಎ.ದುಬೈ,೧೯೧೫, ಹಿಂದೂ ಮೆನರ್ಸ್ ಅ್ಯಂಡ್ ಕಸ್ಟಮ್ಸ್ , ಸೆರೆಮನಿಸ್, ನ್ಯೂಯಾರ್ಕ್.
೬ ಇರ್ಫಾನ್ ಹಬೀಬ್, ೧೯೯೯, ಕಲೋನಿಯಲಿಸಂ ರೆಸಿಸ್ಟನ್ಸ್ ಅ್ಯಂಡ್ ಮಾಡರ್ನೈಸೇಶನ್ ಅಂಡರ್ ಹೈದರಾಲಿ ಅ್ಯಂಡ್ ಟಿಪ್ಪು ಸುಲ್ತಾನ್, ತುಲಿಕ ಪಬ್ಲಿಷರ್, ನ್ಯೂ ಡೆಲ್ಲಿ.
೭ ಉಪಾಸನ ಸಿಂಗ್, ೧೯೯೩, ಬ್ರಿಟಿಷ್ ಅಡ್ಮಿನಿಷ್ಟ್ರೇಷನ್ ಇನ್ ಇಂಡಿಯಾ, ಅನ್‌ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ,
೮. ಕಬೀರ್ ಕೌಸರ್, ಸಿಕ್ರೇಟ್ ಕರೆಸ್ಪಾಂಡೆನ್ಸ್ ಆಫ್ ಟಿಪ್ಪುಸುಲ್ತಾನ್.
೯. ಕಿರ್ಮಾನಿ, ೧೮೭೮, ದಿ ಹಿಸ್ಟರಿ ಆಫ್ ಹೈದರ್ ನಾಯಕ್, ಓರಿಯಂಟಲ್ ಟ್ರಾನ್ಸ್‌ಲೇಷನ್ ಫೌಂಡ್, ಲಂಡನ್.

೧೦. ಕಿರ್ಮಾನಿ, ೧೮೨೪ (ಮರುಮುದ್ರಣ ೧೮೬೪, ೧೯೮೦), ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ಓರಿಯಂಟಲ್ ಟ್ರಾನ್ಸ್‌ಲೇಷಲ್ ಫೌಂಡ್, ಲಂಡನ್, ಮರುಮುದ್ರಣ ೧೯೯೭, ಏಷಿಯನ್ ಎಜುಕೇಷನಲ್ ಸರ್ವಿಸ್, ನವ ದೆಹಲಿ.

೧೧. ಕೃಷ್ಣಪ್ಪ ಎಂ.ಎ., ಮಹಾದೇವ ಸಿ., ೧೯೯೯, ಹಿಸ್ಟರಿ ಆ್ಯಂಡ್ ಮಾನುಮೆಂಟ್ಸ್ ಆಫ್ ದಿ ಚಾಮುಂಡಿ ಹಿಲ್, ಆರ್ಕಾಲಾಜಿ ಆ್ಯಂಡ್ ಮ್ಯೂಸಿಯಂ, ಗೌರ್ನಮೆಂಟ್ ಆಫ್ ಕರ್ನಾಟಕ, ಮೈಸೂರು.

೧೨. ಕೃಷ್ಣರಾವ್ ಪಿ., ೧೮೬೮, ಹಿಸ್ಟರಿ ಆಫ್ ಮೈಸೂರು ಫ್ರಮ್ ದಿ ಆರಿಜನ್ ಹೌಸ್ ಆಫ್ ಮೈಸೂರು ಪ್ರಿನ್ಸ್ ಅಪ್ ಟು ದಿ ಡೆತ್ ಆಫ್ ಟಿಪ್ಪು ಸುಲ್ತಾನ್ ಗೌರ್ನಮೆಂಟ್ ಪ್ರೆಸ್, ಬೆಂಗಳೂರು.

೧೩. ಗಾಯಿತ್ರಿ ಎಂ.ಬಿ., ೧೯೯೭, ಡೆವಲಪ್‌ಮೆಂಟ್ ಆಫ್ ಮೈಸೂರು ಸ್ಟೇಟ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೪. ಗೋಪಾಲ್ ಎಂ.ಹೆಚ್., ೧೯೯೩, ಬ್ರಿಟಿಷ್ ಸೋರ್ಸ್‌ಸ್ ಆಫ್ ದಿ ಎಕಾನಮಿಕ್ ಪೊಲಿಟಿಕಲ್ ಆ್ಯಂಡ್ ಸೋಷಿಯಲ್ ಹಿಸ್ಟರಿ ಆಫ್ ದಿ ಮೈಸೂರ್ ಸ್ಟೇಟ್, ಸಂಪುಟ ೧, ಪಾಪ್ಯುಲರ್ ಪಬ್ಲಿಕೇಷನ್ಸ್, ಬಾಂಬೆ.

೧೫. ಚಂದ್ರಶೇಖರ್ ಎಸ್., ೧೯೮೫, ಡೈಮೆಂನ್ಷನ್ ಆಫ್ ಸೋಶಿಯೋ ಪೊಲಿಟಿಕಲ್ ಚೇಂಜ್ ಇನ್ ಮೈಸೂರು ೧೯೧೮-೧೯೪೦, ಆಶೀಸ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ.

೧೬. ಜಾನಕಿ ನಾಯರ್, ೧೯೯೮, ಮೈನರ್ಸ್ ಅಂಡ್ ಮಿಲ್‌ಹಾಂಡ್ಸ್ ವರ್ಕ್, ಕಲ್ಚರ್ ಆ್ಯಂಡ್ ಪಾಲಿಟಿಕ್ಸ್ ಇನ್ ಪ್ರಿನ್ಸ್ಲಿ ಮೈಸೂರು, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ.

೧೭. ಜಾನಕಿ ನಾಯರ್, ೨೦೦೫, ದಿ ಪ್ರಾಮಿಸ್ ಆಫ್ ದಿ ಮೆಟ್ರೋಪಾಲಿಸ್ ಬೆಂಗಳೂರ್ ಟ್ವೆಂಟಿಯತ್ ಸೆಂಚುರಿ, ಆಕ್ಸ್‌ಫರ್ಡ್ ಯೂನಿರ್ವಸಿಟಿ ಪ್ರೆಸ್, ನ್ಯೂ ಡೆಲ್ಲಿ.

೧೮. ಜಾನಕಿ ನಾಯರ್, ೨೦೧೨, ಮೈಸೂರು ಮಾಡರ್ನ್ ರೀ-ಥಿಕಿಂಗ್ ದಿ ರೀಜನ್ ಆ್ಯಂಡ್ ಪ್ರಿನ್ಸ್ಲಿ ರೂಲ್, ಓರಿಯಂಟ್ ಬ್ಲಾಕ್‌ಸ್ವಾನ್, ನ್ಯೂಡೆಲ್ಲಿ.

೧೯. ಜೇಮ್ಸ್ ಮೇನರ್, ೧೯೭೮, ಪೊಲಿಟಿಕಲ್ ಚೇಂಜ್ ಇನ್ ಆನ್ ಇಂಡಿಯನ್ ಸ್ಟೇಟ್ ಮೈಸೂರು ೧೯೧೭-೧೯೫೫, ಸೌತ್ ಏಷಿಯಾ ಬುಕ್ಸ್, ನ್ಯೂಡೆಲ್ಲಿ.

೨೦. ಜೊಸನರ್ ಜಯಾರ್, ೧೯೫೧, ಹಿಸ್ಟರಿ ಆಫ್ ಮೈಸೂರ್ ಅಂಡ್ ದಿ ಯಾದವ ಡೈನಾಸ್ಟಿ, ಮೈಸೂರು ಸರ್ಕಾರದ ಮುದ್ರಣಾಲಯ, ಬೆಂಗಳೂರು.

೨೧. ಡೆನ್ನಿ ಫಾರೆಸ್ಟ್, ೧೯೭೦, ಟೈಗರ್ ಆಫ್ ಮೈಸೂರ್, ನ್ಯೂ ಡೆಲ್ಲಿ.

೨೨. ದಿವಾಕರ್ ಆರ್.ಆರ್., ೧೯೬೮, ಕರ್ನಾಟಕ ಥ್ರೂ ದಿ ಏಜಸ್, ದಿ ಗೌರ್ನಮೆಂಟ್ ಆಫ್ ಮೈಸೂರು, ಬೆಂಗಳೂರು.

೨೩. ದೇವೇಗೌಡ ಎ.ಸಿ. ಮತ್ತು ಪರಮೇಶ್ವರನ್ ಟಿ.ಆರ್., ೧೯೮೫, ಹಿಸ್ಟರಿ ಆಫ್ ಎಜುಕೇಶನ್ ಇನ್ ಮೈಸೂರು, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್ ಆ್ಯಂಡ್ ಯೂತ್ ಸರ್ವೀಸಸ್, ಗೌರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು.

೨೪. ದೇಸಾಯಿ ಪಿ.ಬಿ., ಎಚ್.ಎಸ್.ರಿತ್ತಿ ಮತ್ತು ಬಿ.ಆರ್.ಗೋಪಾಲ್, ೧೯೭೦, ಎ ಹಿಸ್ಟರಿ ಆಫ್ ಕರ್ನಾಟಕ, ಕನ್ನಡ ರೀಸರ್ಚ್ ಇನ್ಸ್ಟಿಟ್ಯೂಟ್, ಕರ್ನಾಟಕ ಯೂನಿವರ್ಸಿಟಿ ಧಾರವಾಡ.

೨೫. ನಾರಾಯಣ ಅಯ್ಯಂಗಾರ್ ಎಂ.ಎ. ಮತ್ತು ಶ್ರೀನಿವಾಸಚಾರ್ ಎಂ.ಎ., ೧೯೦೩ (ಮರುಮುದ್ರಣ ೧೯೮೧), ದಿ ಮೈಸೂರು ಪ್ರಧಾನ್ಸ್, ಗೌರ್ನಮೆಂಟ್ ಪ್ರೆಸ್, ಬೆಂಗಳೂರು.

೨೬. ಪ್ರಾಕ್ಸಿ ಫೆರ್ನಾಂಡಸ್, ೧೯೬೯(ಮರುಮುದ್ರಣ, ೧೯೯೧), ದಿ ಟೈಗರ್ಸ್ ಆಫ್ ಮೈಸೂರು-ಎ ಬಯಾಗ್ರಫಿ ಆಫ್ ಹೈದರ್ ಅಲಿ ಆ್ಯಂಡ್ ಟಿಪ್ಪು ಸುಲ್ತಾನ, ವಿಕಿಂಗ್ ಪಬ್ಲಿಕೇಷನ್, ನ್ಯೂ ದಿಲ್ಲಿ.

೨೭. ಫಜಲ್ ಹಸನ್ ಎಂ., ೧೯೭೦, ಬೆಂಗಳೂರು ಥ್ರೂ ದ ಸೆಂಚುರೀಸ್, ಹಿಸ್ಟಾರಿಕಲ್ ಪಬ್ಲಿಕೇಷನ್ಸ್, ಬೆಂಗಳೂರು.

೨೮. ಫ್ರಾನ್ಸಿಸ್ ಬುಕನನ್, ೧೮೦೭, ಎ ಜರ್ನಿ ಫ್ರಂ ಮದ್ರಾಸ್ ಥ್ರೊ ದ ಕಂಟ್ರೀಸ್ ಆಫ್ ಮೈಸೂರು, ಕೆನರಾ ಅಂಡ್ ಮಲಬಾರ್, ಮೂರು ಸಂಪುಟಗಳು, ಲಂಡನ್(ಮರುಮುದ್ರಣ ೨೦೧೦), ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್ ಡಿಪಾರ್ಟ್‌ಮೆಂಟ್, ಬೆಂಗಳೂರು.

೨೯. ಭಗವಾನ್ ಎಸ್.ಗಿದ್ವಾನಿ, ೧೯೯೦, ದಿ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್.

೩೦. ಮಾರ್ಕ್‌ವಿಲ್ಕ್ಸ್, ೧೮೧೦–೧೮೧೭(ಪರಿಷ್ಕೃತ ೧೯೩೦), ಹಿಸ್ಟರಿ ಆಫ್ ಮೈಸೂರು ಹಿಸ್ಟಾರಿಕಲ್ ಸ್ಕೆಚಸ್ ಆಫ್ ಸೌತ್ ಇಂಡಿಯಾ-ಮೂರು ಸಂಪುಟಗಳು, ನವದೆಹಲಿ.

೩೧. ಮಾದೇಗೌಡ, ೧೯೯೭, ಮಾಡರ್ನ್ ಮೈಸೂರ್ ಸ್ಟೇಟ್ ೧೮೮೧–೧೯೦೩, ಎ ಸ್ಟಡಿ ಆಫ್ ದಿ ಎಲೀಟ್, ಪಾಲಿಟಿ ಆ್ಯಂಡ್ ಸೊಸೈಟಿ, ಪ್ರಸಾರಾಂಗ, ಯೂನಿವರ್ಸಿಟಿ ಆಫ್ ಮೈಸೂರು. ಮೈಸೂರು.

೩೨. ಮುತ್ತಣ್ಣ ಐ.ಎಂ., ೧೯೮೦, ಟಿಪ್ಪು ಎಕ್ಸ್-ರೇಯ್ಡ್ ಮುತ್ತಣ್ಣ ಐ.ಎ., ೧೯೭೭, ಕರ್ನಾಟಕ (ಹಿಸ್ಟರಿ ಅಡ್ಮಿನಿಸ್ಟ್ರೇಷನ್ ಅಂಡ್ ಕಲ್ಚರ್), ಲೋಟಸ್ ಪ್ರಿಂಟ್, ಬೆಂಗಳೂರು.

೩೩. ಮೆಕೆಂರಿಖ, ೧೭೯೩, ಸ್ಕೆಚಸ್ ಆಫ್ ದಿ ವಾರ್ ವಿತ್ ಟಿಪ್ಪು ಸುಲ್ತಾನ್, ಕಲ್ಕತ

೩೪. ಮೆಕೆಂರಿಖ ಕಲೆಕ್ಷನ್ ಜನರಲ್, ಮೆಮೋರಿಯಸ್ ಇಲಸ್ಟ್ರೇಟಿವ್ ಆಫ್ ದಿ ಜಿಯಾಗ್ರಫಿ ಆಫ್ ಸೌತ್ ಇಂಡಿಯ.

೩೫. ಮೊಹಿಬುಲ್ ಹಸನ್ ಖಾನ್, ೧೯೫೧, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ಬಿಬ್ಲೋಪಿಲೆ ಲಿಮಿಟೆಡ್, ಕಲ್ಕತ್ತ.

೩೬. ರಾಜಾರಾಮ ಹೆಗಡೆ(ಸಂ), ೨೦೦೬, ಅರ್ಕೈವ್ ಸೋರ್ಸ್ ಆನ್ ಕರ್ನಾಟಕ ಹಿಸ್ಟರಿ, ಪ್ರಸಾರಾಂಗ, ಕುವೆಂಪು ಯೂನಿವರ್ಸಿಟಿ, ಶಿವಮೊಗ್ಗ.

೩೭. ರಾಮಕೃಷ್ಣನ್ ಆರ್., ೧೯೯೭, ಪ್ರೆಸ್ ಅಂಡ್ ಪಾಲಿಟಿಕ್ಸ್ ಇನ್ ಆನ್ ಇಂಡಿಯನ್ ಸ್ಟೇಟ್ ಮೈಸೂರು ೧೮೫೯-೧೯೪೭, ಸ್ವಾಭಿಮಾನ ಪ್ರಕಾಶನ, ಚನ್ನಪಟ್ಟಣ, ಹಾಸನ.

೩೮. ಲಿವಿನ್ ಬಿ. ಬೌರಿಂಗ್, ೧೮೯೩, ಹೈದರಾಲಿ ಅಂಡ್ ಟಿಪ್ಪು ಸುಲ್ತಾನ್, ಆರ್ಕ್ಸ್‌ಫರ್ಡ್ ಕ್ಲಾರಿಡನ್ ಪ್ರೆಸ್, ಲಂಡನ್.

೩೯. ವಿಕ್ರಮ್ ಸಂಪತ್, ೨೦೦೮, ಸ್ಪ್ಲೆಂಡರ್ಸ್ ಆಫ್ ರಾಯಲ್ ಮೈಸೂರ್ ದಿ ಆನ್‌ಟೋಲ್ಡ್ ಸ್ಟೋರಿ ಆಫ್ ದಿ ಒಡೆಯರ್ಸ್, ರೂಪ ಕೊ., ನ್ಯೂಡೆಲ್ಲಿ.

೪೦. ವಿಲಿಯಮ್ ಕಿರ್ಕ್‌ಪ್ಯಾಟ್ರಿಕ್, ೧೮೧೧, ಸೆಲೆಕ್ಟಡ್ ಲೇಟರ್ಸ್ ಆಫ್ ಟಿಪ್ಪುಸುಲ್ತಾನ್.

೪೧. ವೀರತಪ್ಪ ಕೆ., ೧೯೮೫, ರೀಡಿಂಗ್ ಇನ್ ಮಾಡರ್ನ್ ಹಿಸ್ಟರಿ ಆಫ್ ಮೈಸೂರ್, ವಿಜಯರವಿ ಪ್ರಕಾಶನ, ಬೆಂಗಳೂರು

೪೨. ವೀರತಪ್ಪ ಕೆ., ೧೯೮೬, ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ಮಹಾಲಕ್ಷ್ಮಿ ಎಂಟರ್ ಪ್ರೈಸಸ್, ಬೆಂಗಳೂರು.

೪೩. ವೆಂಕಟಸುಬ್ಬಾಶಾಸ್ತ್ರಿ ಕೆ.ಎನ್., ೧೯೩೨, ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು ಅಂಡರ್ ಸರ್ ಮಾರ್ಕ್ ಕಬ್ಬನ್ ೧೮೩೪-೧೮೬೧, ಲಂಡನ್.

೪೪. ಶಾಮರಾವ್ ಎಂ., ೧೮೯೧, ಟೆನ್ ಇಯರ್ಸ್ ಆಫ್ ನೇಟೀವ್ ರೂಲ್ ಇನ್ ಮೈಸೂರ್, ಗೌರ್ನಮೆಂಟ್ ಪ್ರೆಸ್, ಬೆಂಗಳೂರು.

೪೫. ಶಾಮರಾವ್ ಎಂ., ೧೯೩೬, ಮಾಡರ್ನ್ ಮೈಸೂರು-ಎರಡು ಸಂಪುಟಗಳು, ಹಿಗ್ಗಿನ್ ಬಾಥಮ್ಸ್, ಬೆಂಗಳೂರು.

೪೬. ಶಿವಣ್ಣ ಕೆ.ಎಸ್. ೧೯೮೩, ದಿ ಅಗ್ರೇರಿಯನ್ ಸಿಸ್ಟಮ್ ಆಫ್ ಕರ್ನಾಟಕ (೧೩೩೬-೧೭೬೧), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೭. ಷಡಕ್ಷರಯ್ಯ, ೨೦೦೩, ಮೈಸೂರು ಸ್ಟೇಟ್ ರೈಲ್ವೇಸ್ ಆ್ಯಂಡ್ ದಿ ಬ್ರಿಟಿಷ್ (೧೮೬೪-೧೯೪೭).

೪೮. ಷೇಕ್ ಅಲಿ ಬಿ., ೧೯೯೩, 'ಟಿಪ್ಪು ಸುಲ್ತಾನ್: ಎ ಗ್ರೇಟ್ ಮಾರ್ಟಿಯರ್' ಪ್ರಸಾರಾಂಗ, ಬೆಂಗಳೂರು ಯೂನಿವರ್ಸಿಟಿ, ಬೆಂಗಳೂರು.

೪೯. ಷೇಕ್ ಅಲಿ ಬಿ., ೨೦೦೬, ಟಿಪ್ಪು ಸುಲ್ತಾನ್ ಎ ಸ್ಟಡಿ ಇನ್ ಡಿಪ್ಲೋಮಸಿ ಆ್ಯಂಡ್ ಕಾನ್ಸ್‌ಪಾರ್‌ನೆಟೇಷನ್, ಕನ್ನಡ ಆ್ಯಂಡ್ ಕಲ್ಚರ್ ಡಿಪಾರ್ಟ್‌ಮೆಂಟ್, ಬೆಂಗಳೂರು.

೫೦. ಸತ್ಯನಾರಾಯಣ ಎ., ೧೯೯೬, ಹಿಸ್ಟರಿ ಆಫ್ ಮೈಸೂರು(೧೬೧೦–೧೭೪೮), ಕಾವ್ಯಾಲಯ ಪ್ರಕಾಶನ, ಮೈಸೂರು.

೫೧. ಸದಾಶಿವ ಕೆ.,೨೦೦೮, ಹಿಸ್ಟರಿ ಆಫ್ ಸೋಷಿಯಲ್ ಲೆಜಿಸ್ಲೇಷನ್ ಇನ್ ಮೈಸೂರ್ ಸ್ಟೇಟ್(೧೮೮೧–೧೯೪೮), ಪ್ರಿಯದರ್ಶಿನಿ ಪ್ರಕಾಶನ, ಮೈಸೂರು.

೫೨. ಸಾಕಿ, ೧೯೯೮, ಮೆಕಿಂಗ್ ಹಿಸ್ಟರಿ: ಕರ್ನಾಟಕ'ಸ್ ಪೀಪಲ್ ಆ್ಯಂಡ್ ದೇರ್ ಪಾಸ್ಟ್, ವಾಲ್ಯೂಮ್–೧, ವಿಮುಕ್ತಿ ಪ್ರಕಾಶನ, ಬೆಂಗಳೂರು.

೫೩. ಸಾಕಿ, ೨೦೦೪, ಸ್ಟೋನ್ ಏಜ್ ಟು ಮರ್ಕಟಲಿಸಂ, ಮೇಕಿಂಗ್ ಹಿಸ್ಟರಿ:ಕಲೋನಿಯಲ್ ಶಾಕ್, ಆರ್ಮ್ಡ್ ಸ್ಟ್ರಗಲ್(೧೮೦೦–೧೮೫೭), ಸಂಪುಟ–೨,ವಿಮುಕ್ತಿ ಪ್ರಕಾಶನ, ಬೆಂಗಳೂರು.

೫೪. ಸಿದ್ಧಲಿಂಗಸ್ವಾಮಿ, ೧೯೯೭, ಅಗ್ರೇರಿಯನ್ ರಿಲೇಶನ್ಸ್ ಇನ್ ಮೈಸೂರು ೧೭೯೯–೧೮೮೧, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೫. ಸೂರ್ಯನಾಥ ಯು ಕಾಮತ್, ೧೯೮೦, ಎ ಕನ್‌ಸೈಸ್ ಹಿಸ್ಟರಿ ಆಫ್ ಕರ್ನಾಟಕ, ಜುಪಿಟರ್ ಬುಕ್ಸ್, ಎಂ.ಸಿಸಿ ಪಬ್ಲಿಕೇಷನ್ಸ್, ಬೆಂಗಳೂರು.

೫೬. ಹಂಡ ಆರ್.ಎಲ್., ೧೯೬೮, ಹಿಸ್ಟರಿ ಆಫ್ ಫ್ರೀಡಮ್ ಸ್ಟ್ರಗಲ್ ಇನ್ ಪ್ರಿನ್ಸ್ಲಿ ಸ್ಟೇಟ್, ನವದೆಹಲಿ.

೫೭. ಹಯವದನರಾವ್ ಸಿ., ೧೯೪೩–೧೯೪೬, ಹಿಸ್ಟರಿ ಆಫ್ ಮೈಸೂರು–ಮೂರು ಸಂಪುಟಗಳು, ಮೈಸೂರು ಗೌರ್‍ನಮೆಂಟ್ ಪ್ರೆಸ್, ಬೆಂಗಳೂರು.

೫೮. ಹೆಟ್ನೆ ಬಿ, ೧೯೭೮, ದಿ ಪೊಲಿಟಿಕಲ್ ಎಕಾನಮಿ ಆಫ್ ಇಂಡೈರೆಕ್ಟ್ ರೂಲ್ ಇನ್ ಮೈಸೂರ್ ೧೮೮೧–೧೯೪೭, ಅಂಬಿಕಾ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

ಅಪ್ರಕಟಿತ ಆಕರಗಳು

ಎಂ.ಫಿಲ್. ನಿಬಂಧಗಳು

೧. ಅನಂತರಾಮಯ್ಯ ಓ, ೧೯೮೧, ಸ್ಟಡಿ ಆಫ್ ಎಜುಕೇಷನ್ ಅಂಡ್ ಸೋಷಿಯಲ್ ವೆಲ್‌ಫೇರ್ ಮೇಜರ್ಸ್ ಇನ್ ಪ್ರಿನ್‌ಸ್ಲೀ, ಮೈಸೂರು ೧೯೦೦–೧೯೩೮(ಎಂ.ಫಿಲ್ ನಿಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ದೀಪಕ್ ಎಂ.ಬಿ., ೨೦೦೯, ಕರ್ನಾಟಕದಲ್ಲಿ ಪುರಾತತ್ವ ಲೇಖನಶಾಸ್ತ್ರದ ಬೆಳವಣಿಗೆ (ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಪ್ರಶಾಂತ್ ಕೆ.ಸಿ., ೧೯೯೯, ಹಿಸ್ಟೋರೀಜಿಂಗ್ ಎ ರೀಜನ್: ಮೈಸೂರು ೧೫೬೫-೧೯೭೯ ಇನ್ ದಿ ರೈಟಿಂಗ್ಸ್ ಆಫ್ ಸಿ.ಹಯವದನ ರಾವ್ ಅಂಡ್ ಎಂ.ಶಾಮರಾವ್ (ಎಂ.ಫಿಲ್ ನಿಬಂಧ), ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೪. ಸವಿತ ಕೆ.ಎಸ್., ೨೦೦೯, ಮೈಸೂರು ರಾಜ್ಯದಲ್ಲಿ ಮಹಿಳಾ ಕಲ್ಯಾಣದ ಒಂದು ಅಧ್ಯಯನ ೧೮೮೧-೧೯೫೬(ಎಂ.ಫಿಲ್ ನಿಬಂಧ), ಕನ್ನಡ ವಿಶ್ವವಿದ್ಯಾಲಯ ಹಂಪಿ.

೫. ಸ್ವಾಮಿ ಕೆ.ಎಸ್., ೨೦೦೮, ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್: ಒಂದು ಅಧ್ಯಯನ(ಎಂ.ಫಿಲ್ ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ವಿಶ್ವನಾಥ ಕೆ.ಎಸ್., ೨೦೦೭, ಚರಿತ್ರೆ ಲೇಖನಶಾಸ್ತ್ರ: ತುಮಕೂರು ಪ್ರದೇಶದ ಅಧ್ಯಯನ (ಎಂ.ಫಿಲ್.ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ವೆಂಕಟೇಶ್ ಜಿ.ಎಂ., ೨೦೦೭, ಚರಿತ್ರೆ ಲೇಖನಶಾಸ್ತ್ರ: ಕೋಲಾರ ಪ್ರದೇಶದ ಅಧ್ಯಯನ(ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಿಎಚ್.ಡಿ ಮಹಾಪ್ರಬಂಧಗಳು

೧. ಅನಂತರಾಮಯ್ಯ ಓ, ೧೯೮೮, ಸೋಷಿಯೋ-ಎಕಾನಮಿಕ್ ಚೇಂಜ್ ಡಿಪ್ರೆಸ್ಡ್ ಕ್ಲಾಸಸ್ ಇನ್ ಮೈಸೂರು ಸ್ಟೇಟ್ ೧೯೦೨-೧೯೫೨(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಅಚ್ಯುತರಾವ್ ಡಿ.ಎಸ್., ೧೯೬೪, ಅಡ್ಮಿನಿಸ್ಟ್ರೇಟಿವ್ ಅಂಡ್ ಸೋಷಿಯಲ್ ಹಿಸ್ಟರಿ ಆಫ್ ಮೈಸೂರು(೧೬೦೦-೧೮೦೦), (ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ಅಶ್ವತ್ಥನಾರಾಯಣ, ೧೯೯೪, ಸೋಷಿಯಲ್ ರಿಫಾರ್ಮ ಮೂಮೆಂಟ್ಸ್ ಇನ್ ಪ್ರಿನ್ಸ್ಲಿ, ಮೈಸೂರ್ ೧೮೬೦-೧೯೪೦(ಪಿಎಚ್.ಡಿ.ಮಹಾಪ್ರಬಂಧ), ಬೆಂಗಳೂರು ಯೂನಿರ್ವಸಿಟಿ, ಬೆಂಗಳೂರು.

೪. ಆಂಜನಪ್ಪ ಎಂ., ೧೯೯೫, ಹಿಸ್ಟರಿ ಆಫ್ ಮೈಸೂರು ಎಜುಕೇಷನ್ ಇನ್ ಇಂಡಿಯನ್ ಸ್ಟೇಟ್ ಮೈಸೂರು ೧೮೫೪-೧೯೪೦(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫. ಉಷಾದೇವಿ ಎಂ.ವಿ., ೨೦೦೦, ದಿ ಹಿಸ್ಟರಿ ಆಫ್ ಫೆಮಿನಿಸ್ ಅಂಡ್ ಫೆಮೈನ್ ಫಾಲಿಸಿಸೀಸ್ ಇನ್ ಪ್ರಿನ್ಸ್ಲಿಮೈಸೂರು ೧೮೭೫-೧೯೧೮(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೬. ಕುಮಾರಸ್ವಾಮಿ ಎಂ., ೨೦೦೮, ಮೈಸೂರು ಸಂಸ್ಥಾನದ ರಾಷ್ಟ್ರೀಯ ಹೋರಾಟದಲ್ಲಿ ಸ್ಥಳೀಯ ಪತ್ರಿಕೆಗಳ ಪಾತ್ರ: ಒಂದು ಅಧ್ಯಯನ(೧೮೮೫-೧೯೭೪)(ಪಿಎಚ್.ಡಿ. ಮಹಾಪ್ರಬಂಧ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೭. ಕೃಷ್ಣೇಗೌಡ, ೧೯೮೬, ಕಂಠೀರವ ನರಸರಾಜ ಒಡೆಯರ್(೧೬೩೮-೧೬೫೯), (ಪಿಎಚ್.ಡಿ. ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೮. ಕೇಶವಮೂರ್ತಿ ಬಿ.ಆರ್., ಲೈಫ್ ಅಂಡ್ ಟೈಮ್ಸ್ ಆಫ್ ಕೃಷ್ಣರಾಜ ಒಡೆಯರ್ III (೧೭೯೪-೧೮೬೮) (ಪಿಎಚ್.ಡಿ ಮಹಾಪ್ರಬಂಧ) ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೯. ಕೋಮಲ ಕೆ.ಎಂ., ೨೦೦೨, ದಿವಾನ್ ಕಾಂತರಾಜ ಅರಸ್: ಒಂದು ಅಧ್ಯಯನ (ಪಿಎಚ್.ಡಿ.ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೦. ಗಸ್ಟೇವ್‌ಸನ್ ಡಿ.ಆರ್., ೧೯೬೮, ಮೈಸೂರು ೧೮೮೧-೧೯೦೨: ದ ಮೇಕಿಂಗ್ ಆಫ್ ಎ ಮಾಡೆಲ್ ಸ್ಟೇಟ್(ಪಿಎಚ್.ಡಿ ಮಹಾಪ್ರಬಂಧ) ವಿಸ್‌ಕಾನ್‌ಸಿನ್ ವಿಶ್ವವಿದ್ಯಾನಿಲಯ, ಅಮೆರಿಕ.

೧೧. ಗುರುಸ್ವಾಮಿ ಕೆ., ೨೦೧೧, ಕರ್ನಾಟಕದಲ್ಲಿ ದಲಿತ ಚಳವಳಿ-ಮೈಸೂರು ಜಿಲ್ಲೆ ಒಂದು ಐತಿಹಾಸಿಕ ಅಧ್ಯಯನ(೧೯೭೦-೨೦೦೦) (ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೨. ಗೋವಿಂದಪ್ಪ ಎಂ., ೨೦೦೨, ಹಿಸ್ಟರಿ ಆಫ್ ಮೈನಿಂಗ್ ಇನ್ ಪ್ರಿನ್ಸ್ಲಿ ಮೈಸೂರು: ವಿತ್ ಸ್ಪೇಷಲ್ ರಿಪ್ರೆನ್ಸ್ ಟು ಕೋಲಾರ್ ಗೋಲ್ಡ್ ಪಿಲ್ಡ್ಸ್ ೧೮೮೧ ಟು ೧೯೫೬ (ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೩. ಗೋವಿಂದ ಶೆಟ್ಟಿ, ೨೦೦೮, ಸೋಸಿಯಲ್ ಪ್ರೊಪೆಲ್ಸ್ ಆಫ್ ಮೈಸೂರ್ ಪ್ರೊಸ್ಪೆಟೀಸ್ ಫ್ರಾಮ್ ಲೆನರಂಡೋ ಸಿನ್ನಾಮಿ, ಅಬ್ಬೆ ದುಬ್ಬೆ ಆ್ಯಂಡ್ ಫ್ರಾನ್ಸಿಸ್ ಬುಕಾನನ್(೧೭, ೧೮ ಆ್ಯಂಡ್ ೧೯ ಸೆಂಚುರೀಸ್)(ಪಿಎಚ್.ಡಿ.ಮಹಾಪ್ರಬಂಧ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೧೪. ಗೌರಿ ನಾಯ್ಡು ಎಚ್., ೨೦೦೭, ಇಂಪಾಕ್ಟ್ ಆಫ್ ಅರ್ಬನೆಜೇಷನ್ ಆನ್ ಪಬ್ಲಿಕ್ ಹೆಲ್ತ್ ಇನ್ ಪ್ರಿನ್ಸ್ಲಿ ಮೈಸೂರು ೧೮೩೧-೧೯೪೭ (ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೫. ಚರಿತಾ, ಕರ್ನಾಟಕದ ಚಿತ್ರಕಲಾ ಪರಂಪರೆಯಲ್ಲಿ ಮೈಸೂರು ಸಾಂಪ್ರದಾಯಿಕ ಕಲಾವಿದರ ಪಾತ್ರ-ಒಂದು ಅಧ್ಯಯನ(ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೬. ಚಿನ್ನಸ್ವಾಮಿ ಸೋಸಲೆ ಎನ್., ೨೦೦೧, ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣಾಭಿವೃದ್ಧಿ: ಒಂದು ಸಮೀಕ್ಷೆ(೧೮೮೧ ರಿಂದ ೧೯೪೭) (ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೭. ಜಮುನ ಎಂ., ೧೯೯೦, ಸೋಷಿಯಲ್ ಚೇಂಜ್ ಇನ್ ಮೈಸೂರು ವಿತ್ ಸ್ಪೆಷಲ್ ರೆಫ್ರೆನ್ಸ್ ಟು ವುಮೆನ್ ೧೮೮೦–೧೯೪೭(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

೧೮. ತಾರಾ ಉಳ್ಳಾಲ್, ೨೦೦೭, ಮೈಸೂರು ಒಡೆಯರ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನಗಳು (ಕ್ರಿ.ಶ.೧೬೧೦–೧೭೬೧), (ಪಿಎಚ್.ಡಿ ಮಹಾಪ್ರಬಂಧ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

೧೯. ತಿಮ್ಮಯ್ಯ ನಾಯ್ಡು, ೧೯೮೪, ದಿ ಏಜ್ ಆಫ್ ಚಿಕ್ಕದೇವರಾಜ ಒಡೆಯರ್ ಆಫ್ ಚಿಕ್ಕದೇವರಾಜ ಒಡೆಯರ್ ಆಫ್ ಮೈಸೂರು(ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೦. ತ್ರಿವೇಣಿ ಅರಸ್, ೨೦೧೦, ವೆಲ್‌ಫೇರ್ ಮೇಜರ್ಸ್ ಆನ್ ಪಬ್ಲಿಕ್ ಹೆಲ್ತ್ ಇನ್ ಪ್ರಿನ್ಸ್ಲಿ ಮೈಸೂರ್ ೧೮೮೧–೧೯೪೭(ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೧. ದೇವರಾಜ್ ಜಯದೇವ್, ಕ್ರಿಶ್ಚಿಯನ್ ಮಿಷನರಿ ವರ್ಕ್ ಇನ್ ಮೈಸೂರು(೧೬೪೮–೧೯೪೭) (ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೨. ನೈಮೂರ್ ರಹಮಾನ್, ೨೦೧೦, ಮುಸ್ಲಿಂ ರೆಸ್ಪಾನ್ಸ್ ಟು ಸೋಷಿಯೋ–ಪೊಲಿಟಿಕಲ್ ಚೇಂಜ್ ಇನ್ ಪ್ರಿನ್ಸ್ಲಿ ಮೈಸೂರು ೧೮೮೧–೧೯೪೭(ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೩. ಪಂಡಿತ್ ಬಿ.ಆರ್.ವಿ., ೨೦೦೬, ಹಿಸ್ಟರಿ ಆಫ್ ಪಬ್ಲಿಕ್ ಹೆಲ್ತ್ ಅಂಡ್ ಸಾನಿಟೆಟನ್ ಇನ್ ಪ್ರಿನ್ಸ್ಲೀ ಮೈಸೂರು (೧೮೩೧–೧೯೪೭) (ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೪. ಪುಷ್ಪಕುಮಾರಿ ಬಿ.ಎಸ್., ಕಲೋನಿಸಂ ಅಂಡ್ ದಿ ಪಟ್ರಿಸಿಯನ್ಸ್ ಆಫ್ ಮೈಸೂರು ೧೮೮೧–೧೯೪೭ (ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೫. ಪ್ರಶಾಂತ್ ಕೆ.ಸಿ., ೨೦೦೭, ಕನ್ಸ್ಟ್ರಕ್ಷನ್ ಆಫ್ ಕರ್ನಾಟಕ: ದಿ ಯೂಸ್ ಆಫ್ ಹಿಸ್ಟರಿ (ಪಿಎಚ್.ಡಿ ಮಹಾಪ್ರಬಂಧ), ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೨೬. ಪ್ರಸನ್ನ ಎ., ೨೦೦೮, ಮೈಸೂರು ಕಿಂಗ್‌ಡಮ್ ಅಂಡರ್ ದಿ ರೋಲ್ ಆಫ್ ಕೃಷ್ಣರಾಜ ಒಡೆಯರ್ III –೧೭೩೪–೧೭೬೬ ಎ ಸ್ಟಡಿ(ಪಿಎಚ್.ಡಿ.ಮಹಾಪ್ರಬಂಧ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೨೭. ಬಸವೇಗೌಡ ಎಚ್.ಎನ್., ೨೦೦೭, ಎ ಸೋಷಿಯೋ-ಎಕಾನಾಮಿಕ್ ಅಂಡ್ ಪೊಲಿಟಿಕಲ್ ಹಿಸ್ಟರಿ ಆಫ್ ದಿ ಸ್ಟೇಟ್ ಆಫ್ ಮೈಸೂರ್ ಆಫ್ ವಿವೆಡ್ ಬೈ ಫ್ರಾನ್ಸಿಸ್ ಬುಕನನ್-ಎ ಕಪೆರೇಟಿವ್ ಅಂಡ್ ಕ್ರಿಟಿಕಲ್ ಅನಲೀಸಿಸ್(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೮. ಮಹದೇವಸ್ವಾಮಿ ಎನ್., ೨೦೦೯, ಮೈಸೂರು ಒಡೆಯರ ಕಾಲದ ಸಂಸ್ಕೃತಿ: ಒಂದು ಅಧ್ಯಯನ(ಕ್ರಿ.ಶ.೧೩೯೯-೧೮೬೮) (ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೯. ಮಾರಪ್ಪ ಕೆ.ಎನ್., ೨೦೦೯, ಮೈಸೂರು ಸಂಸ್ಥಾನದ ಆಡಳಿತಾತ್ಮಕ ಇತಿಹಾಸ(೧೮೩೧-೧೯೪೭: ಜನಪರ ಧೋರಣೆಗಳು: ಒಂದು ಅಧ್ಯಯನ(ಪಿಎಚ್.ಡಿ.ಮಹಾಪ್ರಬಂಧ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೩೦. ಮಾಲತಿ ಎಸ್. ೨೦೦೨, ಲೀಗಲ್ ಸ್ಟೇಟಸ್ ಆಫ್ ವುಮೆನ್ ಇನ್ ಪ್ರಿನ್ಸ್ಲಿ ಮೈಸೂರು ೧೮೮೧-೧೯೪೭(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೩೧. ಮೀರಾ ಸೆಬಾಸ್ಟಿಯನ್, ೧೯೮೨, ಬ್ರಿಟೀಷ್ ಕಲೋನಿಯಲ್ ಪಾಲಿಸೀಸ್ ಇನ್ ಪ್ರಿನ್ಸ್ಲಿ ಮೈಸೂರ್(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೨. ಮುಜೀದ್ ಖಾನ್ ಎಸ್., ೨೦೦೭, ಆನ್ ಅಡ್ಮಿನಿಸ್ಟ್ರೇಟಿವ್ ಹಿಸ್ಟರಿ ಆಫ್ ಮೈಸೂರು ಅಂಡರ್ ಹೈದರಾಲಿ ಅಂಡ್ ಟಿಪ್ಪುಸುಲ್ತಾನ್ ಫ್ರಮ್ ೧೭೬೧ ಟು ೧೭೯೯ ಎ.ಡಿ (ವಿತ್ ಸ್ಪೇಷಲ್ ಎಂಪಾಸಿಸ್ ಆನ್ ಮಿಲಿಟರಿ ಆಡ್ಮಿನಿಷ್ಟ್ರೇಷನ್) (ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೩. ರಂಗಪ್ಪ ಎಂ., ೨೦೦೬, ಮೈಸೂರು ಒಡೆಯರ ಕಾಲದ ಕೋಟೆಗಳು ಮತ್ತು ಅರಮನೆಗಳ ಒಂದು ಅಧ್ಯಯನ(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೪. ರಮೇಶ ವಿ.ಎಂ., ೨೦೦೭, ಟ್ರೇಡ್ ಅಂಡ್ ಅರ್ಬನೆಜೇಷನ್ ಇನ್ ಮೈಸೂರು (೧೬೭೩-೧೭೯೯ಎ.ಡಿ) (ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೫. ರವಿಕುಮಾರ್, ೨೦೦೮, ಆಧುನಿಕ ಮೈಸೂರು ಸಂಸ್ಥಾನದಲ್ಲಿ ಅಬಕಾರಿ ಆಡಳಿತದ ಬೆಳವಣಿಗೆ ಮತ್ತು ನೀತಿಗಳು: ಒಂದು ಅಧ್ಯಯನ(ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೬. ಲಿಂಗಯ್ಯ ಟಿ., ೧೯೯೧, ದೇವರಾಜ ಒಡೆಯರ್ ಆಫ್ ಮೈಸೂರು ಆ್ಯಂಡ್ ಹಿಸ್ ಟೈಮ್ಸ್(೧೬೫೯-೧೬೭೩), (ಪಿಎಚ್.ಡಿ.ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೭. ಲಲಿತಕುಮಾರ್, ೨೦೦೮, ದಿ ರೋಲ್ ಆಫ್ ಮೈಸೂರು ಪ್ಯಾಲೇಸ್ ಇನ್ ದಿ ಕಲ್ಚರಲ್ ಹಿಸ್ಟರಿ ಆಫ್ ಮಾಡರ್ನ್ ಮೈಸೂರು(೧೮೮೪-೧೯೪೭)(ಪಿಎಚ್.ಡಿ.ಮಹಾಪ್ರಬಂಧ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೩೮. ಲೀಲಾ ಡಶ್ಕಿನ್, ೧೯೭೪, ನಾನ್ ಬ್ರಾಹ್ಮೀನ್ ಮೂವ್‌ಮೆಂಟ್ ಇನ್ ಪ್ರಿನ್ಸ್ಲಿ ಮೈಸೂರ್ (ಪಿಎಚ್.ಡಿ ಮಹಾಪ್ರಬಂಧ), ಪೆನ್ಸಿಲ್‌ವೇನಿಯಾ ವಿಶ್ವವಿದ್ಯಾಲಯ.

೩೯. ವಿಜಯಪ್ಪ ಟಿ.ಎನ್., ೧೯೬೧, ಪೋಸ್ಟ್ ವಾರ್ ಎಕಾನಮಿಕ್ ಡೆವಲಪ್‌ಮೆಂಟ್ ಆಫ್ ಮೈಸೂರು(ಪಿಎಚ್.ಡಿ.ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪೦. ವಿಜಯಲಕ್ಷ್ಮಿ ಕೆ.ಎಸ್., ೧೯೯೦, ಇರಿಗೇಷನ್ ಪಾಲಿಸಿ ಇನ್ ಪ್ರಿನ್ಸ್ಲಿ ಮೈಸೂರು ೧೮೮೧-೧೯೪೭(ಪಿಎಚ್.ಡಿ ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪೧. ವೇದವಲ್ಲಿ, ೧೯೩೬, ಅಡ್ಮಿನಿಸ್ಟ್ರೇಟಿವ್ ಹಿಸ್ಟರಿ ಆಫ್ ಮೈಸೂರು(ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪೨. ಹನುಮಂತರಾಜು ಎಂ.ಜಿ., ೨೦೧೦, ಮೈಸೂರು ಸಂಸ್ಥಾನದಲ್ಲಿ ಗಾಂಧೀಜಿಯವರ ರಾಜಕೀಯ ಚಿಂತನೆಗಳ ಪ್ರಭಾವ(೧೯೨೦-೧೯೪೭) (ಪಿಎಚ್.ಡಿ ಮಹಾಪ್ರಬಂಧ), ಗಾಂಧೀ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪೩. ಹರಿಹರನ್, ೧೯೭೧, ಎಕಾನಮಿಕ್ ಪ್ಲಾನಿಂಗ್ ಇನ್ ಮೈಸೂರ್ ಸ್ಟೇಟ್: ಎ ಕ್ರಿಟಿಕಲ್ ಸ್ಟಡೀ (ಪಿಎಚ್.ಡಿ.ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪೪. ಹೊನ್ನಲಿಂಗಯ್ಯ ಎಸ್.ಆರ್., ೧೯೯೫, ಮೈಸೂರು ರಾಜ್ಯದಲ್ಲಿ ಬ್ರಿಟಿಷ್ ನ್ಯಾಯಾಡಳಿತ ಮತ್ತು ಪೊಲೀಸ್ ವ್ಯವಸ್ಥೆ ವಸಾಹತು ನೀತಿಯ ವಿಮರ್ಶಾತ್ಮಕ ಅಧ್ಯಯನ(೧೮೬೩-೧೮೮೧), (ಪಿಎಚ್.ಡಿ.ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪೫. ಬಂಜಗೆರೆ ಜಯಪ್ರಕಾಶ್, ೨೦೦೮, ಕನ್ನಡ ರಾಷ್ಟ್ರೀಯತೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬೇರುಗಳು(ಡಿ.ಲಿಟ್.ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಿಯತಕಾಲಿಕೆ ಮತ್ತು ಪತ್ರಿಕೆಗಳು

೧. ವೆಂಕಟರಗೌತಮ್, ಜುಲೈ-ಡಿಸೆಂಬರ್ ೨೦೦೯, ಇಂಟರ್ ನ್ಯಾಷನಲ್ ಜರ್ನಲ್ ಆಪ್ ಸೌತ್ ಏಷಿಯನ್ ಸ್ಟಡೀಸ್, ವಾಲ್ಯೂಮ್-೨, ನಂ.೨(ಸೋಲ್ಜರ್, ಡಿಪ್ಲೊಮ್ಯಾಟ್, ಹಿಸ್ಟೋರಿಯನ್: ಮಾರ್ಕ್ ವಿಲ್ಕ್ಸ್ ಅಂಡ್ ದಿ ರಿಪ್ರೆಸೆಟೇಷನ್ಸ್ ಆಫ್ ಎಂಪೈರ್ ಇನ್ ದಿ ಆರ್ಲಿ ನೈಂಟಿನ್ತ್ ಸೆಂಚುರಿ), ಪಾಂಡಿಚೆರಿ ಯೂನಿವರ್ಸಿಟಿ, ಪಾಂಡಿಚೆರಿ.

೨. ಶರತ್ ಪಿಳ್ಳೈ, ೨೦೧೩, ಮೂರ್ಚ್ ೨೩, ಪ್ರಿನ್ಸ್ಲಿ ಮಾಡರ್ನ್‌ನಿಟಿ ಎ ಮೈಸೋರಿಯನ್ ಪ್ರೊಸ್‌ಪೇಕ್ಟೀವ್, ಮೈಸೂರ್ ಮಾಡರ್ನ್: ರೀ ಥಿಕಿಂಗ್ ದ ರೀಜನ್ ಪ್ರಿನ್ಸ್ಲಿ ರೂಲ್- ಜಾನಕಿ ನಾಯರ್, ಇಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ.

೩. ವಿಜಯ್ ಪೂಣಚ್ಚ ತಂಬಂಡ(ಸಂ), ಮೇ ೨೦೦೪-ಅಕ್ಟೋಬರ್ ೨೦೦೪, ಜರ್‌ನಲ್ ಆಫ್ ಕರ್ನಾಟಕ ಸ್ಟಡೀಸ್ ೨, ಪ್ರಸಾರಾಂಗ, ಕನ್ನಡ ಯೂನಿರ್ವಸಿಟಿ, ಹಂಪಿ. ಬುಕ್ಸ್ ಅಟ್ ಎ ಗ್ಲಾನ್ಸ್ :ಮೋಹನ್ ಕೃಷ್ಣ ರೈ ಕೆ.(ಲೇ), ಮೇಕಿಂಗ್ ಹಿಸ್ಟರಿ: ಕರ್ನಾಟಕ'ಸ್ ಪೀಪಲ್ ಆ್ಯಂಡ್ ದೇರ್ ಪಾಸ್ಟ್, ಸಾಕಿ.

೪. ವಿಜಯ್ ಪೂಣಚ್ಚ ತಂಬಂಡ(ಸಂ), ನವೆಂಬರ್ ೨೦೦೪-ಏಪ್ರಿಲ್ ೨೦೦೫, ಜರ್ನಲ್ ಆಫ್ ಕರ್ನಾಟಕ ಸ್ಟಡೀಸ್ ೧, ಪ್ರಸಾರಾಂಗ, ಕನ್ನಡ ಯೂನಿವರ್ಸಿಟಿ, ಹಂಪಿ. ಬುಕ್ ರಿವ್ಯೂ: ಸುರೇಂದ್ರರಾವ್ ಬಿ.(ಲೇ), ಮೇಕಿಂಗ್ ಹಿಸ್ಟರಿ: ಕರ್ನಾಟಕ'ಸ್ ಪೀಪಲ್ ಆ್ಯಂಡ್ ದೇರ್ ಫಾಸ್ಟ್ ವಾಲ್ಯೂಮ್ II, ಸಾಕಿ.

೫. ವಿಜಯ್ ಪೂಣಚ್ಚ ತಂಬಂಡ(ಸಂ), ಮೇ ೨೦೦೫-ಏಪ್ರಿಲ್ ೨೦೦೬, ಜರ್‌ನಲ್ ಆಫ್ ಕರ್ನಾಟಕ ಸ್ಟಡೀಸ್ ೨-೧, ಪ್ರಸಾರಾಂಗ, ಕನ್ನಡ ಯೂನಿವರ್ಸಿಟಿ ಹಂಪಿ. ಬುಕ್ಸ್ ರಿವ್ಯೂ: ೧. ರಮೇಶ ಬೈರಿ ಟಿ.ಎಸ್.(ಲೇ) ದಿ ಪ್ರಾಮಿಸ್ ಅಫ್ ದಿ ಮೆಟ್ರೋಪಾಲಿಸ್: ಬೆಂಗಳೂರ್ ಟ್ವೆಂಟಿಯತ್ ಸೆಂಚುರಿ-ಜಾನಕಿ ನಾಯರ್

ಬುಕ್ಸ್ ಆಟ್ ಎ ಗ್ಲಾನ್ಸ್ ೧, ವಿಜಯಲಕ್ಷ್ಮಿ ಕೆ.ಎಸ್.(ಲೇ), ಮೈಸೂರು-ಎ ಗ್ಯಾಸೆಟಿಯರ್ ಕಂಪೈಲ್ಡ್ ಪಾರ್ ಗೌರ್ನಮೆಂಟ್ ವಾಲ್ಯೂಮ್ I, ಮೈಸೂರ್-ಜರ್‌ನಲ್ ಆ್ಯಂಡ್ ವಾಲ್ಯೂಮ್ II-ಮೈಸೂರ್ ಬೈ ಡಿಸ್ಟ್ರಿಟ್ ಬೈ ಲೂಯಿಸ್ ರೈಸ್.

೬. ಸುಬ್ರಹ್ಮಣ್ಯಂ ಸಂಜಯ್, ೧೯೯೧, ಎ ನೋಟ್ ಆನ್ ಸಮ್ ಆರ್ಲಿ ನೈಂಟಿಯತ್ ಸೆಂಚುರಿ, ರೆಕಾರ್ಡ್ಸ್ ಇನ್ ದಿ ಕರ್ನಾಟಕ ಸ್ಟೇಟ್ ಆರ್ಕೈವ್ಸ್, ಇಂಡಿಯನ್ ಎಕಾನಮಿಕ್ ಸೋಷಿಯಲ್ ಹಿಸ್ಟರಿ ರಿವ್ಯೂ ೨೮(೪)

೭. ಸುಬ್ರಮಣ್ಯಂ ಸಂಜಯ್, ೨೦೦೧, ವೆಲ್‌ಫೇರ್ ಆ್ಯಂಡ್ ಸ್ಟೇಟ್ ಫೈನಾನ್ಸ್ ಇನ್ ಒಡೆಯರ್ ಮೈಸೂರು, ಪೆನುಂಗಲ್ ವಿಸಿನ್ಸ್, ಯೂನಿರ್ವಸಿಟಿ ಆಫ್ ಮಿಚಿಗನ್ ಪ್ರೆಸ್.

೮. ಜೇಮ್ಸ್ ಮೇನರ್, ೨೦೦೪, ಗಾಂಧಿ ಪಾಲಿಟಿಕ್ಸ್ ಆ್ಯಂಡ್ ದಿ ಚಾಲೆಂಜ್ ಟು ಪ್ರಿನ್ಸಿಲೀ ಆಥರಿಟಿ ಇನ್ ಮೈಸೂರ್ ೧೯೩೬-೧೯೪೭

೯. ಮನು ಭಗವಾನ್, ೨೦೦೮, ಪ್ರಿನ್ಸಿಲೀ ಸ್ಟೇಟ್ಸ್ ಆ್ಯಂಡ್ ದಿ ಹಿಂದೂ ಇಮಾಜಿರಿಂಗ್-ಎಕ್ಸ್‌ಪ್ಲೋರಿಂಗ್ ದಿ ಕಾಟ್ರೊಗ್ರಾಫಿ ಆಫ್ ನ್ಯಾಷನಲಿಸಂ ಇನ್ ಕಲೋನಿಯಲ್ ಇಂಡಿಯಾ, ದಿ ಜರ್‌ನಲ್ ಆಫ್ ಏಷಿಯನ್ ಸ್ಟಡೀಸ್ ೬೭(೩).

೧೦. ಬರ್ಟನ್ ಸ್ಟೇನ್, ೧೯೮೫, ನೋಟ್ಸ್ ಆನ್ 'ಪ್ರೆಸೆಂಟ್ ಇನ್ಸ್‌ರಜೆನ್ಸಿ ಇನ್ ಕಲೋನಿಯಲ್ ಮೈಸೂರು: ಇವೆಂಟ್ ಆ್ಯಂಡ್ ಪ್ರೊಸೆಸ್' ಸೌತ್ ಏಷಿಯಾ ರಿಸರ್ಚ್ ೫(೧).

ಚರಿತ್ರೆ ಅಧ್ಯಯನ ಸಂಪುಟಗಳು

೧. ರಹಮತ್ ತರೀಕೆರೆ(ಸಂ), ಚಿನ್ನಸ್ವಾಮಿ ಸೋಸಲೆ ಎನ್.(ಲೇ), ೨೦೦೩, ಕನ್ನಡ ಅಧ್ಯಯನ, ಚಳಿ ಸಂಚಿಕೆ, ಮೈಸೂರು ಒಡೆಯರ ಮೇಲಿನ ಅಧ್ಯಯನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಲಕ್ಷ್ಮಣ್ ತೆಲಗಾವಿ(ಸಂ), ಸುರೇಂದ್ರರಾವ್ ಬಿ.(ಲೇ), ಕರ್ನಾಟಕ ಇತಿಹಾಸ ರಚನೆ: ಪ್ರಾದೇಶಿಕತೆ ಹಾಗೂ ಸೈದ್ಧಾಂತಿಕತೆ,ರಾಮರತನ್(ಲೇ), ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ಇನಾಮ್ ಭೂಸಂಬಂಧಗಳು, ಚಿನ್ನಸ್ವಾಮಿ ಸೋಸಲೆ ಎನ್.(ಲೇ), ಆಧುನಿಕ ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣಾ ಕ್ರಮಗಳು, ಮೋಹನ್ ಕೃಷ್ಣ ರೈ(ಲೇ), ಸ್ಮಾರಕಗಳ ಮತ್ತು ಸಾಮಾಜಿಕ ವಾಸ್ತವತೆ, ಗೋವಿಂದರಾಜು ಸಿ.ಆರ್.(ಲೇ), ವಿಚಾರ ವಿಮರ್ಶೆ–ಎಡ್ವರ್ಡ್ ಸಯೀದ್: ಚಿಂತನೆಗಳ ವಿಶ್ಲೇಷಣೆ, ಜುಲೈ–ಡಿಸೆಂಬರ್ ೨೦೦೫, ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ ೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಲಕ್ಷ್ಮಣ್ ತೆಲಗಾವಿ(ಸಂ), ಶಂಕರನಾರಾಯಣರಾವ್ ಎನ್.ಪಿ.(ಲೇ), ಮೈಸೂರು ೧೬೧೦ರಿಂದ ೧೯೫೬ರ ವರೆಗಿನ ಏಳುಬೀಳುಗಳ ಪಕ್ಷಿನೋಟ, ಗೋವಿಂದರಾಜು ಸಿ.ಆರ್.(ಲೇ), ಲಾವಣಿಗಳಲ್ಲಿ ಟಿಪ್ಪು, ಜನವರಿ–ಜೂನ್ ೨೦೦೬, ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಗೋವಿಂದರಾಜು ಸಿ.ಆರ್.(ಸಂ), ಜುಲೈ–ಡಿಸೆಂಬರ್ ೨೦೦೬, ಚರಿತ್ರೆ ಅಧ್ಯಯನ, ಸಂಪುಟ ೨, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಮೋಹನಕೃಷ್ಣ ರೈ(ಲೇ), ಆರ್.ಜಿ.ಕಾಲಿಂಗ್‌ವುಡ್ ಅವರ ಸಂಶೋಧನೆಯಲ್ಲಿ ಚರಿತ್ರೆ ಮತ್ತು ಚರಿತ್ರೆಕಾರ

೨. ಗೋವಿಂದರಾಜು ಸಿ.ಆರ್.(ಲೇ), ಕನ್ನಡಿಗ ಟಿಪ್ಪು

೫. ಗೋವಿಂದರಾಜು ಸಿ.ಆರ್.(ಸಂ), ಜನವರಿ–ಜೂನ್ ೨೦೦೭, ಚರಿತ್ರೆ ಅಧ್ಯಯನ, ಸಂಪುಟ ೨, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಸುರೇಂದ್ರರಾವ್ ಬಿ.(ಲೇ), ಇತಿಹಾಸ ಸಂಶೋಧನೆಯ ಸೈದ್ದಾಂತಿಕ ನೆಲೆಗಳು

೨. ಮೋಹನ್‌ಕೃಷ್ಣ ರೈ(ಲೇ), ಚರಿತ್ರೆ ಸಂಶೋಧನೆಯಲ್ಲಿ ಸಮಸ್ಯೀಕರಣ ಪ್ರಕ್ರಿಯೆ

೬. ಮೋಹನ್‌ಕೃಷ್ಣ ರೈ(ಸಂ), ಜುಲೈ–ಡಿಸೆಂಬರ್ ೨೦೦೭, ಚರಿತ್ರೆ ಅಧ್ಯಯನ, ಸಂಪುಟ ೩, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಲಕ್ಷ್ಮಣ್ ತೆಲಗಾವಿ(ಲೇ), ಕರ್ನಾಟಕ ಸಮಕಾಲೀನ ಇತಿಹಾಸ: ಕೆಲವು ಪ್ರಶ್ನೆಗಳು

೨. ಚಿನ್ನಸ್ವಾಮಿ ಸೋಸಲೆ ಎನ್.(ಲೇ), ಮೈಸೂರು ಸಂಸ್ಥಾನದಲ್ಲಿ ದಲಿತ ಶಿಕ್ಷಣ(ನಾಲ್ವಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸಂಬಂಧಿಸಿದಂತೆ)

೭. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ಜುಲೈ–ಡಿಸೆಂಬರ್ ೨೦೦೮, ಚರಿತ್ರೆ ಅಧ್ಯಯನ, ಸಂಪುಟ ೪, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಮೋಹನ್‌ಕೃಷ್ಣ ರೈ(ಲೇ), ಚರಿತ್ರೆ ನಿರ್ಮಾಣ ಹಾಗೂ ವರ್ತಮಾನದ ಅಜೆಂಡಾಗಳು

೮. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ಜುಲೈ–ಡಿಸೆಂಬರ್ ೨೦೦೯, ಚರಿತ್ರೆ ಅಧ್ಯಯನ, ಸಂಪುಟ ೫, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಮೋಹನ್‌ಕೃಷ್ಣ ರೈ(ಲೇ), ಪರ್ಯಾಯ ಚರಿತ್ರೆ: ರಚನೆಯ ಸಾಧ್ಯತೆಗಳು

೨. ಇ.ಎಚ್.ಕಾರ್(ಮೂಲ), ಸುಜ್ಞಾನಮೂರ್ತಿ ಬಿ.(ಅನು), ಚರಿತ್ರೆಯಲ್ಲಿ ಕಾರ್ಯಕಾರಣ ಸಂಬಂಧ

೯. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ಜನವರಿ–ಜೂನ್ ೨೦೧೦, ಚರಿತ್ರೆ ಅಧ್ಯಯನ ಸಂಪುಟ ೫, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಅನಿತ ಎಂ.ಎಸ್.(ಲೇ), ಮೌಖಿಕ ಆಕರಗಳಲ್ಲಿ ಪ್ರತಿಬಿಂಬಿತವಾದಂತೆ ನಾಲ್ವಡಿ ಅವರ ವ್ಯಕ್ತಿತ್ವ ಮತ್ತು ಆಡಳಿತ

೨. ಚಿನ್ನಸ್ವಾಮಿ ಸೋಸಲೆ(ಲೇ), ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಪಡೆದ ಪ್ರಥಮ ದಲಿತ ಮಹನೀಯರು

೩. ವಿಜಯಲಕ್ಷ್ಮಮ್ಮ ಜಿ.(ಲೇ), ಮೈಸೂರು ಒಡೆಯರ ಚರಿತ್ರೆಯ ಕೃತಿಗಳು: ಒಂದು ಅವಲೋಕನ(ದೇಶಿ–ವಿದೇಶಿ ಸಂಶೋಧನಾಕರರ ನೆಲೆಯಲ್ಲಿ)

೧೦. ಗೋವಿಂದರಾಜು ಸಿ.ಆರ್.(ಸಂ), ಜುಲೈ–ಡಿಸೆಂಬರ್–೨೦೧೦, ಜನವರಿ–ಜೂನ್ ೨೦೧೧, ಚರಿತ್ರೆ ಅಧ್ಯಯನ, ಸಂಪುಟ ೬, ಸಂಚಿಕೆ ೧, ಸಂಚಿಕೆ ೨(ಸಂಯುಕ್ತ ಸಂಚಿಕೆ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧. ಚಿನ್ನಸ್ವಾಮಿ ಸೋಸಲೆ ಎನ್.(ಲೇ), ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತ ಮಿಶನರಿಗಳ ಪ್ರವೇಶ ಮತ್ತು ದಲಿತರ ಮತಾಂತರ: ಒಂದು ಚರ್ಚೆ

೧೧. ಮೋಹನ್‌ಕೃಷ್ಣ ರೈ(ಸಂ), ಜುಲೈ–ಡಿಸೆಂಬರ್ ೨೦೧೧, ಚರಿತ್ರೆ ಅಧ್ಯಯನ, ಸಂಪುಟ ೭, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಮೋಹನ್‌ಕೃಷ್ಣ ರೈ(ಲೇ), ಚರಿತ್ರೆ ರಚನೆಯ ವಿವಿಧ ಆಯಾಮಗಳು: ರಚನೆಯೊಳಗಿನ ಹಂಚಿಕೆ ಹಾಗೂ ಮರು ಹಂಚಿಕೆಯ ಪ್ರಶ್ನೆಗಳು

೧೨. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ಜುಲೈ-ಡಿಸೆಂಬರ್ ೨೦೧೨, ಚರಿತ್ರೆ ಅಧ್ಯಯನ, ಸಂಪುಟ ೮, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧. ಮೋಹನ್‌ಕೃಷ್ಣ ರೈ(ಲೇ), ಚರಿತ್ರೆ ಬರವಣಿಗೆಯಲ್ಲಿ ಮಾನವ ಹಾಗೂ ಚರಿತ್ರೆಕಾರನ 'ಮನಸ್ಸು' ಕೇಂದ್ರಿತ ನಿರೂಪಣೆಗಳು

೨. ಚಿನ್ನಸ್ವಾಮಿ ಸೋಸಲೆ ಎನ್.(ಲೇ), ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರ ಚಳವಳಿ ಮತ್ತು ದಲಿತ ಪ್ರಜ್ಞೆಯ ಪ್ರಶ್ನೆಗಳು

೩. ವಿರೂಪಾಕ್ಷಿ ಪೂಜಾರಹಳ್ಳಿ(ಲೇ), ಸ್ವಾತಂತ್ರ್ಯ ಭಾರತದಲ್ಲಿ ಮೈಸೂರು ಸಂಸ್ಥಾನ ವಿಲೀನಗೊಂಡ ಸಂದರ್ಭ: ಒಂದು ಅವಲೋಕನ

ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ ಸಂಪುಟಗಳು

೧. ವಿಜಯಲಕ್ಷ್ಮಿ ಕೆ.ಎಸ್., ೨೦೦೬, ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಆ್ಯಂಡ್ ಕಲ್ಚರ್, ಪ್ರೊಸಿಡಿಂಗ್ಸ್ ವಾಲ್ಯೂಮ್ VI, ಕರ್ನಾಟಕ ಹಿಸ್ಟರಿ ಕಾಂಗ್ರೆಸ್, ವಿ.ಎನ್.ಪ್ರಿಂಟ್ ಗ್ರಾಫಿಕ್ಸ್, ಬೆಂಗಳೂರು.

೨. ಕರ್ನಾಟಕ ಹಿಸ್ಟರಿ ಕಾಂಗ್ರೆಸ್, ೨೦೧೧ ಸೋವಿನೀರ್, ಕರ್ನಾಟಕ ಸ್ಟೇಟ್ ಓಪನ್ ಯುನಿವರ್ಸಿಟಿ ಮೈಸೂರು.

ಇತಿಹಾಸ ದರ್ಶನ ಸಂಪುಟಗಳು

ಸಂಪುಟ ೮. ೧೯೮೩, ಸಂಪುಟ ೧೦.೧೯೯೫, ಸಂಪುಟ ೧೬/೨೦೦೧, ಸಂಪುಟ ೨೦/೨೦೦೫, ಸಂಪುಟ ೨೨/೨೦೦೭, ಸಂಪುಟ ೨೪/೨೦೦೯, ಸಂಪುಟ ೨೫/೨೦೧೦, ಸಂಪುಟ ೨೬/೨೦೧೧

ಕ್ವಟರ‍್ಲಿ ಜನರಲ್ ಆಫ್ ದಿ ಮಿಥಿಕ್ ಸೊಸೈಟಿ, ಬೆಂಗಳೂರು.

೧. ಜನವರಿ-ಏಪ್ರಿಲ್ ೧೯೪೧, ಕೃಷ್ಣರಾಜ ಒಡೆಯರ್ಸ್ ಸ್ಪೇಷಲ್ ನಂಬರ್.

೨. ವಾಲ್ಯೂಮ್ XXIVನಂ.೩, ಜನವರಿ ೧೯೩೪

೩. ವಾಲ್ಯೂಮ್ XXV ನಂ.೪, ಏಪ್ರಿಲ್, ೧೯೩೪

೪. ವಾಲ್ಯೂಮ್ LXX ನಂ೪, ಅಕ್ಟೋಬರ್-ಡಿಸೆಂಬರ್ ೧೯೭೯

೫. ವಾಲ್ಯೂಮ್ LXXVIನಂ.೧-೨, ಜನವರಿ-ಜೂನ್ ೧೯೮೫

೬ ವಾಲ್ಯೂಮ್ LXXVIನಂ.೩-೪, ಜುಲೈ-ಡಿಸೆಂಬರ್, ೧೯೮೫

೭ ವಾಲ್ಯೂಮ್ LXXIXನಂ.೧-೨, ಜನವರಿ-ಜೂನ್ ೧೯೮೮

೮. ವಾಲ್ಯೂಮ್ LXXXIIIನಂ.೪, ಅಕ್ಟೋಬರ್-ಡಿಸೆಂಬರ್ ೧೯೯೨

೯. ವಾಲ್ಯೂಮ್ LXXXVIIನಂ.೩, ಜುಲೈ–ಸೆಪ್ಟೆಂಬರ್ ೧೯೯೬

ವಾಲ್ಯೂಮ್ XCIII ನಂ.೧, ನವರಿ–ಮಾರ್ಚ್ ೨೦೦೨

ವಾಲ್ಯೂಮ್ XCIVನಂ.೩–೪, ಜುಲೈ–ಡಿಸೆಂಬರ್ ೨೦೦೩

ವಾಲ್ಯೂಮ್ XCVನಂ.೧, ಜನವರಿ–ಮಾರ್ಚ್ ೨೦೦೪

ವಾಲ್ಯೂಮ್ XCVನಂ.೨, ಏಪ್ರಿಲ್–ಜೂನ್, ೨೦೦೪

ವಾಲ್ಯೂಮ್ XCVIIIನಂ.೧–೨, ಜನವರಿ–ಜೂನ್ ೨೦೦೫

ವಾಲ್ಯೂಮ್ XCVI ನಂ.೨, ಏಪ್ರಿಲ್–ಜೂನ್ ೨೦೦೭

ವಾಲ್ಯೂಮ್ ನಂ.೩, ಜುಲೈ–ಸೆಪ್ಟೆಂಬರ್ ೨೦೧೩

೧. ರೇವಣಸಿದ್ದಪ್ಪ ಹೆಚ್., ಏಪ್ರಿಲ್–ಜೂನ್ ೧೯೭೫, ಸಾಧನೆ, ಸಂಪುಟ ೪, ಸಂಚಿಕೆ ೨–೪(ಮೈಸೂರು ಒಡೆಯರು ಮತ್ತು ಅಲಮೇಲಮ್ಮನ ಶಾಪ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಚಂದ್ರಶೇಖರ್ ಎಸ್.(ಮೂಲ), ಬಸವರಾಜ ಕಲ್ಗುಡಿ(ಅನು), ಮೈಸೂರು ಸಂಸ್ಥಾನದಲ್ಲಿ ಹಿಂದುಳಿದವರ ಏಳ್ಗೆ ೧೯೧೮–೧೯೨೬.

೩. ಶಿವರುದ್ರಪ್ಪ(ಸಂ), ಸಾಧನೆ, ಅಕ್ಟೋಬರ್–ಡಿಸೆಂಬರ್ ೧೯೮೧, ತ್ರೈಮಾಸಿಕ ಸಂಪುಟ ೧೦, ಸಂಖ್ಯೆ ೪, ಬೆಂಗಳೂರು.

೪. ಪ್ರಬುದ್ಧ ಕರ್ನಾಟಕ: ೧೯೧೯, ಸಂಪುಟ ೧, ಸಂಚಿಕೆ ೮, ೯, ೧೯೩೭–೩೮, ಸಂಪುಟ ೧೯, ಸಂಚಿಕೆ ೧, ೧೯೩೮, ಸಂಪುಟ ೧೯, ಸಂಚಿಕೆ ೧–೪, ೧೯೪೦, ಸಂಪುಟ ೨೨, ಸಂಚಿಕೆ ೨, ೧೯೫೫, ಸಂಪುಟ ೩೬, ಸಂಚಿಕೆ ೧೨೩೪, ೧೯೭೮, ಸಂಪುಟ ೬೦, ಸಂಚಿಕೆ ೭,೩,೪, ೧೯೮೫, ಸಂಪುಟ ೬೭ ಸಂಚಿಕೆ ೨, ೫. ತಿಪ್ಪೇರುದ್ರಸ್ವಾಮಿ ಎಚ್.(ಸಂ), ನಾಲ್ವಡಿ ಕೃಷ್ಣರಾಜ ಒಡೆಯರ ಕುರಿತ ವಿಶೇಷ ಸಂಚಿಕೆ, ಪ್ರಬುದ್ಧ ಕರ್ನಾಟಕ, ೧೯೮೭, ಸಂಪುಟ ೬೮, ಸಂಚಿಕೆ ೪, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೫. ಮಾನವಿಕ ಕರ್ನಾಟಕ: ೧೯೭೦ ಸಂಪುಟ ೧, ೧೯೭೧ ಸಂಪುಟ ೨, ೧೯೭೭ ಸಂಪುಟ ೨, ಸಂಪುಟ ೭ ಸಂಚಕೆ ೨(ನಾಲ್ವಡಿ ಕೃಷ್ಣರಾಜ ಒಡೆಯರವರ ವಿಶೇಷ ಸಂಚಿಕೆ) ಮೈಸೂರು ವಿಶ್ವವಿದ್ಯಾನಿಲಯದ ರಜತ ಮಹೋತ್ಸವದ ಸವಿ ನೆನಪಿನ ಸಂಚಿಕೆ, ಮೈಸೂರು.

ಪತ್ರಿಕೆಗಳು

೧. ಕರ್ನಾಟಕ ಪ್ರಕಾಶಿಕ: ೨೯.೦೭.೧೮೯೨, ೨೭.೦೭. ೧೮೯೬, ೨೦.೦೧.೧೮೯೬, ೩೦.೧೦.೧೮೯೮

೨. ಮೈಸೂರು ಸ್ಟಾರ್: ೧೫.೦೧.೧೯೧೪

೩. ವೃತ್ತಾಂತ ಚಿಂತಾಮಣಿ: ೯.೧೧.೧೮೯೪, ೧೫.೦೪.೧೯೦೩.

೪. ಮೈಸೂರು ವೃತ್ತಾಂತ ಬೋಧಿನಿ: ೩೦.೬.೧೮೯೪

೫. ಸಾಧ್ವಿ ಪತ್ರಿಕೆ: ೨೧.೧೧.೧೯೩೮, ೧೨.೧೨.೧೯೩೮, ೧೯.೧೨.೧೯೩೮, ೨೬.೧೨.೧೯೩೮, ೧೬.೦೧.೧೯೩೯, ೧೨.೦೧.೧೯೪೪, ೭.೧.೧೯೪೭, ೧೦.೧೦.೧೯೫೨, ೫.೧೦.೧೯೫೩

೬. ಹೊಸತು ಪತ್ರಿಕೆ: ೧.೩.೨೦೧೨, ೧.೦೪.೨೦೧೫

೭. ಪ್ರಜಾವಾಣಿ: ೧೦.೧೦.೨೦೧೦, ೧೫.೦೯.೨೦೧೧, ೧೮.೦೯.೨೦೧೧, ೨೯.೦೯.೨೦೧೧, ೨೧.೧೦.೨೦೧೨, ೨೮.೦೪.೨೦೧೩, ೦೬.೦೬.೨೦೧೫

ವಿಜಯಕರ್ನಾಟಕ:೧೮.೧೨.೨೦೧೩



ಚರಿತ್ರೆ ವಿಭಾಗ